TIGHT BINDING BOOK

TEXT FLY WITHIN
THE BOOK ONLY

UNIVERSAL LIBRARY
OU_200603
UNIVERSAL LIBRARY

# ಭರತೇಶವೈಭವ

ಮಂಗಳೂರು

ಕೆನರಾ ಛಾಪಖಾನೆಯಲ್ಲಿ ಮುದ್ರಿತವಾಯಿತು.

DEDICATED

By Gracious Permission

TO

HIS HIGHNESS

**Sri Krishna Raja Odeyar Bahadur**

**G. C. S. I., G. B. E.,**

Maharaja of Mysore.

ಈ ಗ್ರಂಥವು

**ಮೈಸೂರು ಸಂಸ್ಥಾನದ ಮಹಾಪ್ರಭುಗಳಾದ**

**ಶ್ರೀ ಕೃಷ್ಣರಾಜ ಒಡೆಯರ್ ಬಹಾದುರ್**

ಜಿ. ಸಿ. ಎಸ್. ಐ., ಜಿ. ಬಿ. ಇ.,

**ಮಹಾ ಸ್ವಾಮಿಯವರಿಗೆ**

ಅಪ್ಪಣೆಯನ್ನು ಪಡೆದು

ಅರ್ಪಿಸಲ್ಪಟ್ಟಿದೆ.

ರತ್ನಾಕರಕವಿಕೃತ

# ಭರತೇಶವೈಭವ

## ಪ್ರಥಮಭಾಗ

## ಭೋಗವಿಜಯ

**ಉಗ್ರಾಣ ಮಂಗೇಶರಾವ್,**

**ಅಧ್ಯಾಪಕ ಬೋರ್ಡ್ ಹೈಸ್ಕೂಲ್, ಪುತ್ತೂರು**

ಇವರಿಂದ ಪರಿಶೋಧಿಸಲ್ಪಟ್ಟು

**ಜೈನಯುವಕಸಂಘದವರಿಂದ ಪ್ರಕಟಿಸಲ್ಪಟ್ಟಿತು.**

೧೯೨೩.

ಇದರ ಎಲ್ಲಾ ಹಕ್ಕುಗಳು ಕಾಯಲ್ಪಟ್ಟವೆ

ರಸಮಂ ನಾಲಗೆ ಕವಿತಾ ।
ರಸಮಂ ಕವಿ ಕುಸುಮರಸಮನಳಿಮಾಳೆ ಸುಧಾ ॥
ರಸಮಂ ಸುರರಕ್ಷಯಸುಖ ।
ರಸಮಂ ಪರಮಾತ್ಮನರಿವನುಳಿದವರರಿಯರ್ ॥

—ಅಭಿನವಪಂಪ

# ಪ್ರಕಾಶಕರ ವಿಜ್ಞಾಪನೆ.

॥ ಶ್ರೀ ವೀತರಾಗಾಯ ನಮಃ ॥

ಈ ನಮ್ಮ ಕನ್ನಡನಾಡಿನಲ್ಲಿ ಅನೇಕ ಜೈನಕವಿಗಳು ಭಾಷಾಸೇವೆಯನ್ನು ಮಾಡಿ ತನ್ಮೂಲಕ ಸಾಹಿತ್ಯವನ್ನೂ ಸ್ವಧರ್ಮವನ್ನೂ ಉದ್ಧರಿಸಿ ಕೀರ್ತಿಶೇಷರಾಗಿರುವರು. ಪೂರ್ವ ದಲ್ಲಿ ಅವರ ಗ್ರಂಥಗಳು ಪರಮಪವಿತ್ರತೆಯನ್ನು ಪಡೆದು ಕನ್ನಡಿಗರಲ್ಲಿ ಹೆಚ್ಚಿನ ಆದರವನ್ನು ಹೊಂದಿದ್ದುವು. ಆದರೆ ಕಾಲಕ್ರಮೇಣ ಧರ್ಮಜಾಗ್ರತಿಯು ಖಿಲವಾಗುತ್ತ ಭಾಷಾಭಿ ಮಾನವೂ ಕುಂದಲು ಪುರಾತನಕಾವ್ಯಗಳಿಗೆ ಪ್ರೋತ್ಸಾಹವು ಕಡಮೆಯಾಗಿ ಅವು ಮೂಲೆ ಪಾಲಾದುವು. ಪ್ರಕೃತ ಜೈನಧರ್ಮದ ಹಾಗೂ ನಮ್ಮ ರಾಷ್ಟ್ರದ ಪುನರುದ್ಧಾರಕ್ಕೆ ಪ್ರಾಚೀನ ಗ್ರಂಥಪ್ರಚಾರವು ಒಂದು ಮುಖ್ಯ ಸಾಧನವಾದುದರಿಂದ ಜೈನಯುವಕಸಂಘದವರು ತಮ್ಮ ಹಲವು ಉದ್ದೇಶಗಳಲ್ಲಿ ಪುರಾತನಗ್ರಂಥಗಳನ್ನು ಪ್ರಕಟಿಸುವುದು ಒಂದೆಂಬುದಾಗಿ ಗ್ರಹಿಸಿ ಈ ಶ್ರೇಷ್ಠಕಾವ್ಯದ ಪ್ರಕಾಶನಕ್ಕೆ ಮೊದಲು ಕೈಹಚ್ಚಿರುವರು.

ಈ ಕಾವ್ಯವು ಎಂಟು ಪ್ರತಿಗಳ ಸಹಾಯದಿಂದ ಮುದ್ರಿಸಲಾಯಿತು: ಇವುಗಳಲ್ಲಿ ನಾಲ್ಕು ಓಲೆಯ ಪ್ರತಿಗಳು, ನಾಲ್ಕು ಕಾಗದದ ಪ್ರತಿಗಳು. ಓಲೆಯ ಪ್ರತಿಗಳಲ್ಲಿ ಎರಡು ಅಸಮಗ್ರಪ್ರತಿಗಳಾಗಿಯೂ ಒಂದು ಬಹಳ ಅಶುದ್ಧವಾಗಿಯೂ ಇದ್ದುದರಿಂದ, ಹಲವು ಓಲೆಯ ಪ್ರತಿಗಳ ಆಧಾರದಿಂದ ಬರೆಯಲ್ಪಟ್ಟ ಕಾಗದದ ಪ್ರತಿಯ ಪಾಠವನ್ನೂ ಮೈಸೂರಿಂದ ದೊರೆತ ಓಲೆಯ ಪ್ರತಿಯ ಪಾಠವನ್ನೂ ಪ್ರಮಾಣವಾಗಿಟ್ಟುಕೊಂಡು ಅಗತ್ಯವಾದ ಕಡೆಗಳಲ್ಲಿ ಪಾಠಾಂತರಗಳನ್ನು ಕೊಟ್ಟಿರುತ್ತೇವೆ. ಈ ಪ್ರತಿಗಳನ್ನು ನಮಗೆ ದಯಮಾಡಿ ಒದಗಿಸಿಕೊಟ್ಟ ಮಹಾನುಭಾವರ ಉಪಕಾರವು ಚಿರಸ್ಮರಣೀಯವಾಗಿದೆ.

ಕನ್ನಡ ಗ್ರಂಥಗಳ ಮುದ್ರಣವನ್ನು ಕುರಿತು ಇನ್ನೂ ಜನರಲ್ಲಿ ತುಂಬಾ ಅಸಮಾಧಾನ ವಿದೆ. ಇದನ್ನು ಹೋಗಲಾಡಿಸುವುದಕ್ಕೆ ನಾವು ಬಹಳ ಪ್ರಯತ್ನಪಟ್ಟಿರುವೆವು. ಮುಖ್ಯ ವಾಗಿ ಕಾವ್ಯವು ನಿರ್ದೋಷವಾಗಿರುವಂತೆ ಅನೇಕ ಮಂದಿ ಪಂಡಿತರ ಸಹಾಯ ಪಡೆದು ಅದನ್ನು ಅಚ್ಚುಗಟ್ಟಾಗಿ ಮುದ್ರಿಸಿರುವೆವು. ಆದರೂ ನರದೇಹಧರ್ಮದಿಂದ ಕೆಲವು ದೋಷ ಗಳು ನಮ್ಮ ಕಣ್ಮರೆಯಾಗಿ ಒಳಸೇರಿರುವುವು; ಅವನ್ನು ಶುದ್ಧಾಶುದ್ಧಪತ್ರಿಕೆಯಲ್ಲಿ ಕಾಣಿ ಸಿರುವೆವು. ನಮ್ಮ ದೃಷ್ಟಿಗೆ ಬೀಳದ ತಪ್ಪುಗಳು ಇನ್ನೂ ಇದ್ದರೆ ವಾಚಕಮಹಾಶಯರು ಅವನ್ನು ದಯವಿಟ್ಟು ತಿಳಿಸಿದ್ದಲ್ಲಿ ಮುಂದಣ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳುವೆವು.

ಈ ಗ್ರಂಥದ ಮುದ್ರಣಕಾರ್ಯದಲ್ಲಿ ನಮಗೆ ಸಹಾಯಮಾಡಿದ ಮಾನ್ಯಗೃಹಸ್ಥರನ್ನು ಅಭಿನಂದಿಸುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಬಿನ್ನಹವನ್ನು ಮನ್ನಿಸಿ ಭಾಷಾಭಿಮಾನ ದಿಂದ, ಪುತ್ತೂರು ಬೋರ್ಡು ಹೈಸ್ಕೂಲಿನ ಅಧ್ಯಾಪಕರಾದ ಶ್ರೀ। ಉಗ್ರಾಣ ಮಂಗೇಶ ರಾಯರು ಗ್ರಂಥವನ್ನು ಹಲವು ಪ್ರತಿಗಳ ಸಹಾಯದಿಂದ ಪರಿಶೋಧಿಸಿ ಬಹಳ ಉಪಕಾರ ಮಾಡಿರುವರು. ಗ್ರಂಥವು ಅಚ್ಚಿನಲ್ಲಿರುವಾಗ ಪುತ್ತೂರು ಬೋರ್ಡು ಹೈಸ್ಕೂಲ್ ಹೆಡ್

ಮಾಸ್ತರರಾದ ಶ್ರೀ ಎಮ್. ರಾಮನ್ ನಂಬಿಯರ್, ಬಿ. ಎ, ಎಲ್. ಟಿ. ಯವರೂ, ಅದೇ ಶಾಲೆಯ ಕರ್ಣಾಟಕಪಂಡಿತರಾದ ಶಿರೋಮಣಿಬಿರುದಾಂಕಿತ ಶ್ರೀ ಕಡಬ ಶಂಭು ಶರ್ಮರವರೂ, ಸಂಸ್ಕೃತಪಂಡಿತರಾದ ಮಹೋಪಾಧ್ಯಾಯಬಿರುದಾಂಕಿತ ಶ್ರೀ ಕನ್ನೆಪಾಡಿ ಪರಮೇಶ್ವರ ಶಾಸ್ತ್ರಿಗಳವರೂ, ಕನ್ನಡ ಸಹಕಾರಿಯ ಸಂಪಾದಕರಾದ ವಕೀಲ ಶ್ರೀ ಮಂಜೇಶ್ವರ ಅನಂತರಾವ್, ಬಿ. ಎ., ಬಿ. ಎಲ್. ರವರೂ ಶೋಧನಪತ್ರಗಳನ್ನು ಉತ್ಸಾಹದಿಂದ ತಿದ್ದಿ ಆಗಾಗ ತಕ್ಕ ಸೂಚನೆಗಳನ್ನು ಕೊಟ್ಟು ತುಂಬಾ ಸಹಾಯಮಾಡಿರುವರು. ನಮ್ಮ ಪ್ರಯತ್ನಗಳು ಸಫಲವಾಗುವಂತೆ ಛಾಪಖಾನೆಯವರು ತಕ್ಕ ಸೌಕರ್ಯಗಳನ್ನು ಒದಗಿಸಿಕೊಟ್ಟು ನಮ್ಮೊಂದಿಗೆ ವಿಶೇಷಶ್ರಮಪಟ್ಟಿರುವರು. ಈ ಎಲ್ಲಾ ಮಹನೀಯರುಗಳಿಗೆ ನಾವು ಸದಾ ಕೃತಜ್ಞರಾಗಿದ್ದೇವೆ.

ಭಾಷಾಭಿಮಾನಿಗಳಾದ ಕನ್ನಡಿಗರು ನಮಗೆ ತಕ್ಕ ಪ್ರೋತ್ಸಾಹವನ್ನಿತ್ತು ಈ ಗ್ರಂಥದ ಉಳಿದ ಭಾಗಗಳನ್ನೂ ಇತರ ಉತ್ಕೃಷ್ಟಪುರಾತನಗ್ರಂಥಗಳನ್ನೂ ಶೀಘ್ರದಲ್ಲೇ ಪ್ರಕಟಿಸುವಂತೆ ಅನುಕೂಲಿಸಿಕೊಡುವರೆಂದು ಪೂರ್ಣಭರವಸೆಯಿದೆ.

ಜೈನಯುವಕಸಂಘ,
ಪುತ್ತೂರು.
ಮಹಾವೀರ ಶಕ ೨೪೫೦,
ಮಾರ್ಗಶಿರ.

**ಹಳೆಯೂರು ಪದ್ಮರಾಜ ಆರಿಗ ಜೈನ,**
ಕಾರ್ಯದರ್ಶಿ.

# ವಿಷಯಾನುಕ್ರಮಣಿಕೆ.


| | |
|---|---|
| ಪೀಠಿಕೆ | i |
| ಆಸ್ಥಾನಸಂಧಿ | ೧ |
| ಕವಿವಾಕ್ಯಸಂಧಿ | ೧೧ |
| ಮುನಿಭುಕ್ತಿಸಂಧಿ | ೨೦ |
| ಆರೋಗಣೆಸಂಧಿ | ೩೧ |
| ಉಪ್ಪರಿಗೆಸಂಧಿ | ೪೧ |
| ರಾಜಲಾವಣ್ಯಸಂಧಿ | ೪೯ |
| ಅರಗಿಳಿಯಾಳಾಪಸಂಧಿ. | ೫೭ |
| ಮನ್ನಣೆಸಂಧಿ | ೬೩ |
| ಸರಸಸಂಧಿ | ೭೩ |
| ಸನ್ಮಾನಸಂಧಿ | ೮೪ |
| ವೀಣಾಸಂಧಿ | ೯೪ |
| ಪೂರ್ವನಾಟಕಸಂಧಿ | ೧೦೫ |
| ಉತ್ತರನಾಟಕಸಂಧಿ | ೧೧೬ |
| ತಾಂಡವವಿನಯಸಂಧಿ | ೧೨೯ |
| ಶಯ್ಯಾಗೃಹಸಂಧಿ | ೧೪೨ |
| ಪರ್ವಾಭಿಷೇಕಸಂಧಿ | ೧೫೩ |
| ತತ್ವೋಪದೇಶಸಂಧಿ | ೧೬೩ |
| ಪರ್ವಯೋಗಸಂಧಿ | ೧೬೪ |
| ಪಾರಣಾಸಂಧಿ | ೧೮೬ |

# ಪೀಠಿಕೆ

ಆದಿಯೊಳ್ ಜಗಕೆಲ್ಲ ತಾನಾರಾತನ ದಿವ್ಯ | ಪಾದಕೆರಗಿ ಭಕ್ತಿಯಿಂದ |
ಆದಿಚಕ್ರೇಶ ಶ್ರೀಭರತೇಶವೈಭವ | ದಾದಿಯುಲಿದನಿಷ್ಟು ಬರೆವೆ ||೧||

ರತ್ನಾಕರಾರ್ಯನ ಗುಣವ ಕಾಣಿಪೆನೆಂತು | ರತ್ನಾಕರನು ತಾನು ನಿಜದಿ ||
ರತ್ನಾಕರದೊಳೊಮ್ಮೆ ಮುಳುಗಿ ತೆಗೆದ ಕೆಲ | ರತ್ನಗಳನು ಸಮರ್ಪಿಸುವೆ ||೨||

ಕಿರುಮತಿಯೆನಗೀ ಕೃತಿಯ ಚಮತ್ಕೃತಿಯ ಬಿ | ತ್ತರಿಸುವೊಡರಿದದರಿಂದ ||
ವರಕಾಂಚನಾದ್ರಿಯು ಕನ್ನಡಿಯೊಳು ತೋರ್ಪ | ತೆರನಂತೆ ಬಲ್ಲನಿತೊರೆವೆ ||೩||

## ಗ್ರಂಥ

ಈ ಗ್ರಂಥಕ್ಕೆ ಹಲವು ಹೆಸರುಗಳುಂಟು. ವಾಡಿಕೆಯಲ್ಲಿ ಇದು ಭರತೇಶ್ವರ ಚರಿತೆಯೆಂದು ಹೆಸರ್ಗೊಂಡಿರುವುದರಿಂದ ಇದಕ್ಕೆ ಆ ಹೆಸರನ್ನೇ ಮೊದಲಿಟ್ಟೆವು. ಆದರೆ ಕವಿಯು ಇದಕ್ಕೆ ಭರತೇಶವೈಭವವೆಂದೇ ನಾಮಕರಣಮಾಡಿದ್ದನೆಂಬುದನ್ನು 'ಶ್ರೀಭರತೇಶವೈಭವವಿದು ಕೇಳಿರೊ', 'ಭರತೇಶವೈಭವವೆಂಬ ಕಾವ್ಯವನಿದನೊರ್ಕೆ ದೆನು ಸುಖಿಗಳಾಲಿಪುದು' ಎಂದು ಮುಂತಾದ ಮಾತುಗಳಿಂದ ತಿಳಿದು ಮೊದಲಿಟ್ಟ ಹೆಸರನ್ನು ಬಿಟ್ಟು ಭರತೇಶವೈಭವವೆಂಬ ನಾಮವನ್ನು ಹಾಕಿದೆವು. ಇದನ್ನು ಭರತೇಶಸಂಗತಿಯೆಂದೂ ಅಣ್ಣಾಳಚರಿತೆಯೆಂದೂ ಕೆಲರು ಕರೆಯುವುದುಂಟು. ಇದು ಹಾಡುಗಬ್ಬಕ್ಕೆ ಸೇರಿದ್ದು ಸಾಂಗತ್ಯವೆಂಬ ಮಟ್ಟಿನಿಂದ ರಚಿಸಲ್ಪಟ್ಟುದರಿಂದ ಭರತೇಶಸಂಗತಿಯೆಂಬ ಹೆಸರೂ (ಇದರಂತೆ ಮಂಗರಸನು ಸಾಂಗತ್ಯದಲ್ಲಿ ಬರೆದ ಹರಿವಂಶಕ್ಕೆ ನೇಮಿಜಿನೇಶ ಸಂಗತಿಯೆಂಬ ಹೆಸರುಂಟು) ಇದನ್ನು ಬರೆದ ಕವಿಯು ಅಣ್ಣಗಳು ಎಂಬ ಹೆಸರಿನಿಂದ ಅಣ್ಣಾಳ ಚರಿತೆಯೆಂಬ ಹೆಸರೂ ಇದಕ್ಕೆ ಬಂದ್ದು ವೆಂದು ನಿರ್ಧರಿಸಬಹುದು.

ಗ್ರಂಥವು ಭೋಗಯೋಗಗಳೆರಡನ್ನೂ ಒಳಕೊಂಡಿರುವುದರಿಂದ ಇದಕ್ಕೆ ಭೋಗಯೋಗಗಳೆಂಬ ಎರಡು ಭಾಗಗಳಿವೆಯೆಂದು ಕೆಲರು ತಪ್ಪೆಣಿಕೆಯಲ್ಲಿದ್ದರು. ಆದರೆ ಕವಿಯು ತನ್ನ ಗ್ರಂಥವನ್ನು ಭೋಗವಿಜಯ, ದಿಗ್ವಿಜಯ, ಯೋಗವಿಜಯ, ಮೋಕ್ಷವಿಜಯ, ಅರ್ಕಕೀರ್ತಿವಿಜಯಗಳೆಂಬ ಐದು ಕಲ್ಯಾಣಗಳಾಗಿ—ವಿಭಾಗಿ ಸಿದ್ದಾನೆ. ಈ ಐದು ಭಾಗಗಳು ಕೂಡಿ ಈ ಗ್ರಂಥದಲ್ಲಿ ೮೦ ಸಂಧಿಗಳೂ ೯,೯೬೯

ಪದ್ಯಗಳೂ ಇವೆ. ದೇವಚಂದ್ರನು ರಾಜಾವಳಿ* ಕಥೆಯಲ್ಲಿ ಈ ಗ್ರಂಥಕ್ಕೆ ೮೪ ಸಂಧಿಗಳಿವೆಯೆಂದು ತಿಳಿಸಿರುವನು. ಆದರೆ ಆ ಹೆಚ್ಚಿನ ನಾಲ್ಕು ಸಂಧಿಗಳು ಶೋಭನಸಂಧಿಗಳಾಗಿದ್ದುದರಿಂದ ಗ್ರಂಥದ ಅಂಗವೆಂದು ಪರಿಗಣಿಸಲ್ಪಡದೆ ಅವನ್ನು ಗ್ರಂಥದೊಂದಿಗೆ ಬರೆದಿಡುವ ಕ್ರಮವೇ ಇಲ್ಲದೆ ಅವು ನಷ್ಟವಾಗಿರುವುವು.

## ಕವಿ

ಈ ಗ್ರಂಥಕರ್ತನನ್ನು ರತ್ನಾಕರಸಿದ್ಧ ರತ್ನಾಕರವರ್ಣಿ ಇಲ್ಲವೆ ರತ್ನಾಕರ ಅಣ್ಣಗಳೆಂದು ಬಗೆಬಗೆಯಾಗಿ ಕರೆವರು. ಕವಿಯು ತನ್ನ ವಿಷಯವಾಗಿ 'ಕ್ಷತ್ರಿಯ ವಂಶಜನೆಂದು ಕರ್ಣಾಟಸುಕ್ಷೇತ್ರನೆಂದಣ್ಣಗಳೆಂದು ಧಾತ್ರಿ ನುಡಿವುದು—ಅದು ನನ್ನ ಸೊಮ್ಮಲ್ಲ ನನ್ನ ಗಾತ್ರದ ಸೊಮ್ಮು. ಅನುಯಜನನಮರಣವುಳ್ಳ ಜನಕರ ನಾಮವ ಪೇಳ್ವರುರ್ವಿಯೊಳು ಶ್ರೀ ಮಂದರಸ್ವಾಮಿ ಸನ್ನಯ್ಯನೆಂದಾನು ನೇಮಿಸಿ ಸುಖವಡೆದಿಹೆನು. ದೀಕ್ಷಾಗುರು ಚಾರುಕೀರ್ತಿಯೋಗೀಶ್ವರ ಮೋಕ್ಷಾಗ್ರಗುರು ಹಂಸನಾಥ'ನೆಂದು ತಾನು ದೀಕ್ಷೆವಡೆದ ಮೇಲಿನ ತನ್ನ ಸಂಗತಿಯನ್ನು ಮಾತ್ರ ತಿಳಿಸಿರುವನು. ಆದರೆ ದೇವಚಂದ್ರನ ರಾಜಾವಳಿ ಕಥೆಯಿಂದ ಈತನು ಮೂಡಬಿದಿರೆಯ ಸೂರ್ಯವಂಶದ ರಾಜಕುಲದ ದೇವರಾಜನ ಮಗನೆಂದೂ ಆತನ ಹೆತ್ತವರು ಆತನಿಗೆ ರತ್ನಾಕರನೆಂದು ನಾಮಕರಣ ಮಾಡಿದರೆಂದೂ ಗೊತ್ತಾಗುವುದು. ಅಣ್ಣಗಳು, ವರ್ಣಿ, ಸಿದ್ಧ ಎಂಬ ಪದಗಳು ಆತನು ದೀಕ್ಷೆವಡೆದು ಯೋಗಾಭ್ಯಾಸ ಮಾಡಿ ಸಿದ್ಧತ್ವವನ್ನು ಪಟ್ಟ ಹಾಗೆ ಆತನಿಗೆ ಒಂದೊಂದಾಗಿ ಬಂದಿರಬೇಕು.

ರತ್ನಾಕರನು ಬಾಲ್ಯದಲ್ಲೇ ಕಾವ್ಯಾಲಂಕಾರ ಲಕ್ಷಣಶಾಸ್ತ್ರದಲ್ಲಿ ಅತಿ ನಿಪುಣನಾಗಿ ಸಾರತ್ರಯಕ್ಕೆ ಕೇಶವಯ್ಯರು ರಚಿಸಿದ ವ್ಯಾಖ್ಯಾನವನ್ನೂ ಕುಂದಕುಂದಾಚಾರ್ಯರು ಬರೆದ ಅಧ್ಯಾತ್ಮಸಿದ್ಧಾಂತಕ್ಕೆ ಪ್ರಭೇಂದುಗಳು ಮಾಡಿದ ಟೀಕನ್ನೂ ಪೂಜ್ಯಪಾದರ ಸಮಾಧಿಶತಕವನ್ನೂ ಅಮೃತಚಂದ್ರಮುಸೂರಿಕೃತ ಸಮಯುಸಾರಾಂಕ ನಾಟಕ, ಯೋಗರತ್ನಾಕರ, ನಿಯಮಸಾರ, ಅಧ್ಯಾತ್ಮಸಾರ, ಪದ್ಮನಂದಿಕೃತ ಸ್ವರೂಪಸಂಬೋಧನೆ, ಇಷ್ಟೋಪದೇಶ, ಅಧ್ಯಾತ್ಮನಾಟಕ ಮುಂತಾದ ಗ್ರಂಥಗಳನ್ನೂ ಹೃದ್ಗತವಾಗಿ ತಿಳಿದು ಕವೀಶ್ವರನಾಗಿ ಆ ದೇಶದರಸು ಭೈರಸ ಒಡೆಯರ ಆಸ್ಥಾನದಲ್ಲಿ ಶೃಂಗಾರಕವಿಯೆಂದು ಹೆಸರ್ಗೊಂಡು ವಿದ್ವಾಂಸರಿಗಧಿಕನಾಗಿದ್ದನು. ಆತನಿಗೆ ನಿರಂಜನಸಿದ್ಧನೆಂಬ ಬಿರುದಿದ್ದಿತೆಂದು ಕವಿಚರಿತ್ರಕಾರರು ಅಭಿಪ್ರಾಯಪಟ್ಟಿರುವರಾದರೂ ನಿರಂಜನಸಿದ್ಧ ಮತ್ತು ಚಿದಂಬರಪುರುಷ ಎಂಬುದು ಆತನ ಮೆಚ್ಚಿನ ದೇವರ ಅಂಕಿತಗಳೆಂದು ಅನೇಕ ಕಡೆ 'ಗುರುವೆ ನಿರಂಜನಸಿದ್ಧ' 'ಗುರುವೆ ಚಿದಂಬರ

---

*ದೇವಚಂದ್ರನ ರಾಜಾವಳಿ ಕಥೆಯಲ್ಲಿ ಈ ಕಾವ್ಯವನ್ನು ಕುರಿತಿರುವ ಎಲ್ಲಾ ವಿಷಯಗಳಿಗೂ ನಾವು ಕನ್ನಡ ಕವಿಚರಿತ್ರಕಾರರಿಗೆ ಆಭಾರಿಯಾಗಿದ್ದೇವೆ.

ಪುರುಷ' ಎಂದು ಬರುವುದರಿಂದ ಸ್ಪಷ್ಟವಾಗುವುದು. ಕವಿಗೆ ಶೃಂಗಾರಕವಿ ಹಂಸರಾಜನೆಂಬ ಬಿರುದಿದ್ದಿತೆಂದೂ ಆ ಬಿರುದು ಈ ಕಾವ್ಯದಿಂದಲೇ ಆತನಿಗೆ ದೊರಕಿತೆಂದೂ ಕೆಲವರು ಅಭಿಪ್ರಾಯಪಡುವರು.

ರತ್ನಾಕರನು ತನ್ನ ತ್ರಿಲೋಕಶತಕವನ್ನು 'ಮಣಿಶೈಲಂ ಗತಿಯಿಂದುಶಾಲಿ ಶಕದಲ್ಲಿ ರಚಿಸಿದನೆಂದು ನುಡಿವುದರಿಂದ ಆತನ ಕಾಲವು ಶಾಲಿವಾಹನಶಕ ೧೪೭೯ (ಎಂದರೆ ಕ್ರಿ.ಶ. ೧೫೫೭) ಎಂದು ದೇವಚಂದ್ರನೇ ತಿಳಿಸಿರುವನು. ಭರತೇಶವೈಭವವು ಪೂರ್ತಿಯಾದ ಮೇಲೆ ಒಂದು ೫೦ ಪದ್ಯಗಳು ಹೆಚ್ಚಿಗೆ ಇವೆ. ಅವು ಅನ್ಯಕೃತವೆಂದು ಅವುಗಳ ಶೈಲಿಯಿಂದಲೇ ನಿರ್ಧರಿಸಬಹುದು. ಆದರೆ ಆ ಮೇಲೆ ಪ್ರತಿ ತೆಗೆದವರೆಲ್ಲರೂ ಅದೂ ಕಾವ್ಯದ ಒಂದು ಅಂಗವೆಂದು ಭ್ರಮಿಸಿ ಅದನ್ನು ಕೊನೆಗೆ ಸೇರಿಸಿರುವರು. ಅದರಲ್ಲಿಯ ಒಂದು ವಾಕ್ಯದಿಂದ ಈ ಗ್ರಂಥವು ಶಕ ೧೫೮೨(ಎಂದರೆ ಕ್ರಿ.ಶ. ೧೬೬೦) ರಲ್ಲಿ ರಚಿಸಲ್ಪಟ್ಟಿತೆಂದು ಕೆಲವರು ಭ್ರಮಿಸಿದಂತೆ ಕಾಣುತ್ತದೆ. ತ್ರಿಲೋಕಶತಕವನ್ನು ಕ್ರಿ. ಶ. ೧೫೫೭ರಲ್ಲಿ ಬರೆದ ಕವಿಯು ೧೬೬೦ರಲ್ಲಿರುವುದು ಅಸಂಭವವಾದುದರಿಂದ ಆ ಗ್ರಂಥದ ಪ್ರತಿಯನ್ನು ತೆಗೆದ ಕಾಲವು ೧೬೬೦ ಎಂಬುದು ವ್ಯಕ್ತವಾಗುವುದು.

ಕವಿಯು ಈ ಗ್ರಂಥವನ್ನು ಬರೆದ ಸಂದರ್ಭವನ್ನು ಕುರಿತು ದೇವಚಂದ್ರನು ಈ ಕೆಳಗಣ ಕಥೆಯನ್ನು ಹೇಳಿರುವನು. ರತ್ನಾಕರನು ಭೈರಸಒಡೆಯರ ಆಸ್ಥಾನಕವಿಯಾಗಿ ಮೆರೆಯುತ್ತಿದ್ದಾಗ ಆತನನ್ನು ಕಂಡು ರಾಜನ ಮಗಳು ಮೋಹಿಸಲು ಆಕೆಯಲ್ಲಿ ಅತ್ಯಾಸಕ್ತನಾಗಿ ಆಕೆಯನ್ನು ಕೂಡಲು, ವಾಯುಧಾರಣೆ ಮಾಡಿ ದಶವಾಯುಗಳನ್ನು ಸಾಧಿಸಿ ಯೋಗಾಭ್ಯಾಸದಲ್ಲಿ ಪ್ರೌಢನಾದುದರಿಂದ, ವಾಯುಧಾರಣೆಯಿಂದ ಸೌಧಾಗ್ರವನ್ನೇರಿ ಗವಾಕ್ಷದಿಂದೊಳಹೊಕ್ಕು ಆಕೆಯಲ್ಲಿ ಸ್ನೇಹವನ್ನು ಮಾಡುತ್ತಿದ್ದನು. ಇದನ್ನು ರಾಜನು ತಿಳಿದು ಆತನನ್ನು ಹಿಡಿಯಲು ಪ್ರಯತ್ನಿಸುವಾಗ ಆ ರಾತ್ರಿಯೇ ನಿಜಗುರುವಾದ ಮಹೇಂದ್ರಕೀರ್ತಿಗಳಿಂದ ಅಣು ವ್ರತದೀಕ್ಷೆಗೊಂಡು ಆಗಮಗಳಲ್ಲಿ ಅತಿ ನಿಪುಣನಾಗಿ ಅಧ್ಯಾತ್ಮದಲ್ಲನವರತವೂ ಕೂಡಿರುತ್ತಿದ್ದನು. ಅಲ್ಲಿ ವಿಜಯಕೀರ್ತಿಗಳೆಂಬ ಪಟ್ಟಾಚಾರ್ಯರ ಶಿಷ್ಯರಾದ ವಿಜಯಣ್ಣಗಳು ದ್ವಾದಶಾನುಪ್ರೇಕ್ಷೆಗಳನ್ನು ಕನ್ನಡದಲ್ಲಿ ಸಂಗೀತವಾಗಿ ವೃತ್ತವಚನ ದಿಂದ ರಚಿಸಿ ಆನೆಯ ಮೇಲೆ ಪ್ರಭಾವನೆಯನ್ನು ಮಾಡಲು ಈ ರತ್ನಾಕರಾರ್ಯನು ಭರತೇಶವೈಭವವನ್ನು ರಚಿಸಿ ಆನೆಯ ಮೇಲೆ ಮೆರೆಯಿಸಬೇಕೆಂದು ಬಿನ್ನವಿಸಲು ಪಟ್ಟಾಚಾರ್ಯರು ಅದರಲ್ಲಿ ಎರಡು ಮೂರು ವಾಕ್ಯಗಳು ಪುರಾಣಕ್ಕೆ ವಿರೋಧ ವಾಗಿರುವುದರಿಂದ ಆಗದೆಂದು ಹೇಳಿದುದರಿಂದ ಅದೇ ಸಂವಾದವಾಗಿ ಚರ್ಚಿಸಿ ದಾಗ ಪಟ್ಟಾಚಾರ್ಯರು ಕವಿಯನ್ನು ತಿರಸ್ಕರಿಸಿ ೭೦೦ ಶ್ರಾವಕರಲ್ಲಿ ಆತನಿಗೆ ಭಿಕ್ಷೆ ಕೊಡದಂತೆ ಕಟ್ಟಪ್ಪಣೆಯನ್ನು ಮಾಡಿದರು. ಆಗ ರತ್ನಾಕರಾರ್ಯನು ತನ್ನ ತಂಗಿಯ

ಮನೆಯಲ್ಲಿಯೇ ಊಟಕ್ಕಿದ್ದು ಜಿನಧರ್ಮದ ಮೇಲೆ ಕೋಪವುಂಟಾಗಿ ಆತ್ಮಜ್ಞಾನಿಗೆ ಜಾತಿಕುಲವಾವುದಾದರೂ ಸಮವೆಂದು ಲಿಂಗವನ್ನು ಕಟ್ಟಿಕೊಂಡು 'ವೀರಶೈವಶಾಸ್ತ್ರಗಳಂ ಬಸವಪುರಾಣಂ ಮೊದಲಾಗಿ ಮಾಡಿ' ಕೆಲವು ದಿನಗಳ ಮೇಲೆ ಉಪಶಮನವನ್ನು ತಾಳಿ ಸನ್ಮಾರ್ಗದಲ್ಲಿ ನಂಬಿ ನಡೆದನು.

ಕವಿಯನ್ನು ಕುರಿತು ಇನ್ನೊಂದು ಕಥೆ ಈ ಪ್ರದೇಶದಲ್ಲಿ ಪ್ರಚಾರದಲ್ಲಿದೆ. ರತ್ನಾಕರನು ಕೇವಲ ಚಿಕ್ಕ ವಯಸ್ಸಿನಲ್ಲಿಯೇ ವಿರಕ್ತನಾಗಿ ಚಾರುಕೀರ್ತಿಯೋಗಿಯಿಂದ ದೀಕ್ಷೆಯನ್ನು ಪಡೆದು ಯೋಗಾಭ್ಯಾಸದಲ್ಲಿರುತ್ತಿದ್ದನು. ಆತನು ಬೆಳಗ್ಗೆ ಎದ್ದೊಡನೆ ತನ್ನ ಶಿಷ್ಯವರ್ಗಕ್ಕೂ ಅನುಯಾಯಿಗಳಿಗೂ ಸಮಯೋಚಿತ ಉಪದೇಶವನ್ನು ಮಾಡುತ್ತಿದ್ದನು. ದಿನದಿನಕ್ಕೂ ಶಿಷ್ಯಮಂಡಲಿಯು ಹೆಚ್ಚುತ್ತಲೇ ಇದ್ದಿತು. ಕೆಲವು ಕುಹಕಿಗಳು ಆತನ ಪ್ರಸಿದ್ಧಿಗೆ ಮತ್ಸರಪಟ್ಟು ಆತನ ಹೆಸರಿಗೆ ಕಳಂಕವನ್ನು ಹಚ್ಚುವ ಒಂದು ದುರುಪಾಯವನ್ನು ಮಾಡಿದರು. ಬೆಳಗಾಗುವುದಕ್ಕೆ ಒಂದೆರಡು ಗಳಿಗೆಯಿರುವಾಗ ಆತನು ಮಲಗುವ ಮಂಚದ ಅಡಿಗೆ ಆತನಿಗೆ ಗೊತ್ತಾಗದಂತೆ ಒಬ್ಬ ವೇಶ್ಯೆಯನ್ನು ಗುಟ್ಟಾಗಿರಿಸಿ, ತಾವು ಏನನ್ನೂ ಅರಿಯದವರಂತೆ ಮಿಕ್ಕ ಮಂಡಲಿಯೊಡನೆ ಕೂಡಿ ದಿನಂಪ್ರತಿಯ ಉಪದೇಶಕ್ಕೆ ಕುಳಿತುಕೊಂಡರು. ಆಕೆ ಸಮಯವರಿತು ಕೈಯ ಬಳೆಗಳನ್ನಲುಗಾಡಿಸಲು ಇದೇನು ಸೋಜಿಗವೆಂದು ಆ ಧೂರ್ತರು ಶೋಧನೆಯ ಸೋಗು ಹಾಕಿ ಆಕೆಯನ್ನು ಹೊರಕ್ಕೆಳೆದು ರತ್ನಾಕರನನ್ನು ಅಪಮಾನಗೊಳಿಸಿದರು. ಆತನು ಥಟ್ಟನಲ್ಲಿಂದೆದ್ದು ನೆಟ್ಟಗೆ ನಡೆದುಕೊಂಡು ಹೋದನು. ಹಲಬರು ಆಶ್ಚರ್ಯಸಂತಾಪಗಳಿಂದ ಆತನ ಹಿಂದೆಯೇ ಹೋಗಿ ಆತನನ್ನು ಎಷ್ಟು ಬೇಡಿಕೊಂಡರೂ ಆತನು ಹಿಂದಕ್ಕೆ ಬಾರದಾದನು. ಒಂದು ಹೊಳೆಯನ್ನು ಆತನು ದಾಟುವಾಗ ಅವರು ಆಣೆ ಹಾಕಿ ತಡೆದರೂ, ತನಗೆ ಆ ಕುಹಕಿಗಳ ಸಂಗವೇ ಬೇಡ, ತಾನು ಆಗಲೆ ಜಿನಧರ್ಮಕ್ಕೆ ತಿಲಾಂಜಲಿಯನ್ನು ಕೊಟ್ಟೆನೆಂದು ನೀರಿನಲ್ಲಿ ಮುಳುಗಿದನು.

ಆತನು ಅಲ್ಲಿಂದೆದ್ದು ಘಟ್ಟದ ಮೇಲಕ್ಕೆ ಹೋದನು. ಅಲ್ಲಿ ಒಂದು ಆನೆಯ ಮೇಲೆ ಒಂದು ಶೈವಗ್ರಂಥವನ್ನು ಮೆರೆಯಿಸುತ್ತಿದ್ದುದನ್ನು ಕಂಡು ಆ ಗ್ರಂಥವನ್ನು ನೋಡಲೆಳಸಿ ಅದನ್ನು ಶೋಧಿಸಿದಾಗ ಅದರಲ್ಲಿ ತನಗೆ ರಸವೇ ಕಾಣದೆಂದು ಹೇಳಿಬಿಟ್ಟನು. ಅದು ಆ ಜನರಿಗೆ ಮೆಚ್ಚದೆ ಅವರು ತಮ್ಮ ರಾಜನೊಡನೆ ದೂರಿಟ್ಟರು. ರಾಜನು ಆತನನ್ನು ಕರೆಯಿಸಿ ಕೇಳಿದಾಗ ಆ ಕಾವ್ಯದಲ್ಲಿ ನಿಜವಾಗಿಯೂ ಸ್ವಲ್ಪವೂ ರಸವಿಲ್ಲವೆಂದು ಹೇಳಿದನು. ರಾಜನು 'ಆ ಕಾವ್ಯವು ಮಹಾಕಾವ್ಯವೆಂದು ಆನೆಯ ಮೇಲೆ ಮೆರೆಯಿಸುವಂತೆ ಅಪ್ಪಣೆಗೊಟ್ಟಿದ್ದೆನು. ನೀನು ಅದರೊಳಗೆ ರಸವೇ ಇಲ್ಲವೆಂದು ಹೇಳುವುದು ಆಶ್ಚರ್ಯವಾಗುತ್ತಿದೆ. ನಿನ್ನ ಆ ರಸವಾದರೂ ಏನು ?' ಎಂದು

ಕೇಳಿದನು. ಅದಕ್ಕೆ ರತ್ನಾಕರನು ತನಗೆ ೯ ತಿಂಗಳ ಅವಧಿಯನ್ನು ಕೊಟ್ಟರೆ ರಸವೇನೆಂಬುದನ್ನು ಕಾಣಿಸುವೆನೆಂದು ಭರತೇಶವೈಭವವೆಂಬೀ ಕಾವ್ಯವನ್ನು ರಚಿಸಿ, ಅದನ್ನು ಸಭೆಯಲ್ಲಿ ಓದಿಸಿ ಸಕಲ ವಿದ್ವಜ್ಜನರನ್ನೂ ಮೆಚ್ಚಿಸಿ ವಿಶೇಷಮರ್ಯಾದೆಯನ್ನು ಪಡೆದನು.

ಆ ರಾಜನು ಈ ಕವಿಯ ಪ್ರತಿಭೆಗೂ ಆತನ ಯೋಗಸಾಮರ್ಥ್ಯಕ್ಕೂ ಮೆಚ್ಚಿ ಆತನ ಜಿನಮತವನ್ನು ಬಿಟ್ಟು ತನ್ನ ವೀರಶೈವಮತವನ್ನವಲಂಬಿಸಬೇಕೆಂದು ಬೇಡಿಕೊಳ್ಳಲು, ಆತನ ಬಲುಮೆಗೊಳಗಾಗಿ ಕವಿಯು ಲಿಂಗವನ್ನು ಕಟ್ಟಿಕೊಂಡು ಶೈವನಾದನು. ಆದರೆ ಮರಣಕಾಲ ಒದಗಿದಾಗ ತನ್ನ ಉತ್ತರಕ್ರಿಯೆಯನ್ನು ಜೈನರೇ ಮಾಡಬೇಕೆಂದೂ, ತಾನು ಹೊರಗೆ ಶೈವನಾಗಿ ನಟಿಸಿದರೂ ಒಳಗೆ ತನ್ನ ಹೃದಯದಲ್ಲಿ ಜೈನನೇ ಆಗಿದ್ದೇನೆಂದೂ, ತಾನು ಕಟ್ಟಿಕೊಂಡುದು ಲಿಂಗವಲ್ಲ, ಒಂದು ಬಿಳಿಯ ಗೋಟಡಿಕೆಯೆಂದೂ ಅದನ್ನು ಎಲ್ಲರಿಗೂ ಕಾಣಿಸಿ ಜೈನನಾಗಿಯೇ ಸತ್ತನು.

ಈ ಎರಡೂ ಕಥೆಗಳನ್ನು ವಿಚಾರಿಸಿ ನೋಡಿದ್ದಲ್ಲಿ ಕವಿ ಜನ್ಮತಃ ಜೈನನಾಗಿದ್ದು ಒಂದು ಸಮಯ ಲಿಂಗಾಯತನಾಗಿದ್ದನೆಂದೂ, ಯಾವುದೋ ಒಂದು ಕಾವ್ಯಕ್ಕೆ ಅಧಿಕ ಮರ್ಯಾದೆ ಮಾಡುತ್ತಿರುವುದನ್ನು ಕಂಡು ಸ್ಪರ್ಧಿಸುವ ಬುದ್ಧಿಯಿಂದ ಈ ಕಾವ್ಯವನ್ನು ಬರೆದನೆಂದೂ ಸ್ಪಷ್ಟವಾಗುವುದು.

## ಕವಿಯ ಉದ್ದೇಶ ಮತ್ತು ಕಾವ್ಯಕ್ಕೆ ದೊರೆತ ಆದರ.

ಪೂರ್ವೋಕ್ತಕಥೆಗಳಿಂದ ಕವಿಯು ಭರತೇಶವೈಭವವನ್ನು ಮತ್ಸರಬುದ್ಧಿಯಿಂದಲೇ ಬರೆದನೆಂದು ಕಾಣುವುದಾದರೂ ಆತನು 'ನಾನೊಬ್ಬರೊಡನೆ ಮತ್ಸರಕೆ ಪೇಳ್ದವನಲ್ಲ' ಎಂದು ಒತ್ತಿಹೇಳಿರುವನು; ಮಾತ್ರವಲ್ಲ ತಾನು 'ಗುರುಹಂಸನಾಥನಾಜ್ಞೆಯೊಳು . . . ಆತ್ಮಲೀಲಾರ್ಥವಾಗಿ' ಬರೆದೆನೆಂದು ತಿಳಿಸಿರುವನು; ಪುಷ್ಪವು ಹೇಗೆ ತನ್ನ ಲೀಲಾರ್ಥವಾಗಿ ಅರಳಿ ತನ್ನ ಪರಿಮಳವನ್ನು ಗಾಳಿಯಲ್ಲಿ ಹರಡಿ, ನಮ್ಮಿಂದ ಬೇರೆ ಮುದ್ದಿಸಲ್ಪಡಬೇಕೆಂದು ಬಯಸುತ್ತಿಲ್ಲವೊ ಹಾಗೆಯೆ ತನ್ನ ಆತ್ಮಸಂತೋಷಕ್ಕಾಗಿ ಕಾವ್ಯವನ್ನು ರಚಿಸಿ 'ಬೇಕಾದರಾಲಿಸುವುದು ಬೇಡವಾಗೆ ಪರಾಕು ಮಾಡುವುದೆನಗಿಲ್ಲಿ ವ್ಯಾಕುಲವಿಲ್ಲ ಸಂತಸವಿಲ್ಲ ನಾನು ನಿರಾಕಾಂಕ್ಷಿ' ಎಂದು ಅದನ್ನು ಲೋಕಕ್ಕೆ ಸಮರ್ಪಿಸಿರುವನು. ಮನುಷ್ಯನು ಯಾವುದನ್ನು ಅಧಿಕವಾಗಿ ಕಾಂಕ್ಷಿಸುವನೋ ಅದೇ ಅವನಿಂದ ದೂರವಾಗುವುದೂ, ಯಾವುದನ್ನು ಅಲಕ್ಷಿಸುವನೋ ಅದೇ ಅವನಿಗೆ ಅಧಿಕವಾಗಿ ಲಭಿಸುವುದೂ ವಿಧಿವಿಲಾಸವಾಗಿರುವಂತೆ ಕಾಣಿಸುವುದು. ಕವಿಯ ಅನುಭವವೂ ಅದೇ ಆಯಿತು. 'ಕೀರ್ತಿಯ ಬಯಸಿ ನಾನುಸುರಿತಿಲ್ಲೆನಗೆ ಸತ್ಕೀರ್ತಿ ತಾನೇ ಬರುತಿಹುದು' ಎಂದು ಆತನೇ ನಮಗೆ ತಿಳಿಸಿರುವನು,

'ಈ ಕಥೆಯನ್ನು ನಾನು ಪೇಳ್ದಾಗ ಧರೆಯೊಳನೇಕರು ಪರುಷವೇರಿಧರು ಪೋಕರು ನಾಕೆಂಟು ಮಂದಿ ಚಿತ್ತದೊಳತಿ ವ್ಯಾಕುಲಬಟ್ಟರು' ಎಂದು ಕವಿಯೇ ಒಪ್ಪಿಕೊಂಡಿರುವಂತೆ ಈ ಕಾವ್ಯವು ಕೆಲವರಿಗೆ ಮೆಚ್ಚಲಿಲ್ಲ. 'ಧೂರ್ತರು ಕೆಲರು ಕೀರ್ತಿಗೆ ಆಶಿಸಿ ಕಾವ್ಯಕ್ಕೆ ತೊಡಗಿ ಅದು ಮುಂದು ಸಾಗದೆ ಕಿವಿಗೂ ಶೋಭಿಸದೆ ಬಿಡು ಹೊಸಕವಿತೆಯನೆಂದು ಪೂರ್ವದ ಶಾಸ್ತ್ರ ಗಡಬಡೆಯನ್ನು ಮಾಡಿ' ಹೊಸಕಾವ್ಯಗಳಲ್ಲಿ ಕೊರತೆಯನ್ನು ಕಂಡರು. ಆದರೆ ಕವಿ ಸುಮ್ಮನಿದ್ದನು; ಅವರನ್ನು ರಾಜರೂ ಬುಧರೂ ಹೊರನೂಂಕಿದರು, ಎಂದು ಕವಿ ತನ್ನ ಉದಾಸೀನಭಾವವನ್ನು ಪ್ರಕಟಿಸಿರುವನು. ಆದರೆ ಸತ್ಕಾವ್ಯಕ್ಕೆ ಎಲ್ಲಿಯೂ ಆದರವಿದೆ. 'ನಾಂ ಸೂಚಿಸದ ಮುನ್ನ ಮುನಿಗಳು ನೃಪರು ವಿದ್ವಾಂಸರು ಕೈಕೊಂಡರೊಲಿದು' ಎಂದು ಕವಿಯು ಸಹಜವಾದ ಅಭಿಮಾನದಿಂದ ತಿಳಿಸಿರುವನು.

## ಕವಿಯ ಇತರ ಗ್ರಂಥಗಳು.

ರತ್ನಾಕರಸಿದ್ಧನು ಭರತೇಶವೈಭವವಲ್ಲದೆ ಅಪರಾಜಿತೇಶ್ವರಶತಕ, ರತ್ನಾಕರಾಧೀಶ್ವರಶತಕ, ತ್ರಿಲೋಕಶತಕ ಎಂಬ ಮೂರು ಶತಕಗಳನ್ನೂ ೨೦೦೦ ಗ್ರಂಥದಷ್ಟು ಅಧ್ಯಾತ್ಮಗೀತಗಳನ್ನೂ ರಚಿಸಿರುವನು. ಇವುಗಳಲ್ಲಿ ಮೊದಲನೆಯದು ಉತ್ಪಲ ಚಂಪಕಮಾಲೆಗಳಿಂದಲೂ ಎರಡನೆಯದು ಶಾರ್ದೂಲಮತ್ತೇಭಗಳಿಂದಲೂ ಮೂರನೆಯದು ಕಂದಗಳಿಂದಲೂ ರಚಿಸಲ್ಪಟ್ಟಿವೆ. ಇವು ಶತಕಗಳೆಂದು ಕರೆಯಲ್ಪಟ್ಟರೂ ಸಪಾದಶತಕಗಳಾಗಿವೆ. ಮೊದಲನೆಯ ಎರಡು ಶತಕಗಳು ವೈರಾಗ್ಯಪರವಾಗಿಯೂ ಮೂರನೆಯ ಶತಕವು ತ್ರಿಲೋಕಗಳನ್ನು ಕುರಿತಾಗಿಯೂ ಇವೆ. ಇವುಗಳಲ್ಲಿ ರತ್ನಾಕರಶತಕವು ಶೃಂಗಾರಕವಿ ಹಂಸರಾಜನೆಂಬ ಬಿರುದುಳ್ಳ ಬೇರೊಬ್ಬ ಕವಿಯಿಂದ ರಚಿತವಾದುದೆಂದು ಕವಿಚರಿತ್ರಕಾರರು ಅಭಿಪ್ರಾಯಪಟ್ಟಿರುವರು. ರತ್ನಾಕರಕವಿಯ ಗ್ರಂಥಗಳಲ್ಲಿರುವ 'ನಿರಂಜನಸಿದ್ಧ, ಚಿದಂಬರಪುರುಷ, ಅಪರಾಜಿತೇಶ್ವರ ಎಂಬ ಅಂಕಿತಗಳು ರತ್ನಾಕರಾಧೀಶ್ವರಶತಕದಲ್ಲಿ ದೊರೆಯದಿರುವುದರಿಂದಲೂ, ಶೃಂಗಾರಕವಿಹಂಸರಾಜನ ಗುರು ದೇವೇಂದ್ರಕೀರ್ತಿಯಾಗಿಯೂ ರತ್ನಾಕರನ ಗುರು ಚಾರುಕೀರ್ತಿಯಾಗಿಯೂ ಇರುವುದರಿಂದಲೂ ಇವರಿಬ್ಬರು ಪ್ರತ್ಯೇಕಕವಿಗಳೆಂದೂ ರತ್ನಾಕರಾಧೀಶ್ವರಶತಕವನ್ನು ರಚಿಸಿದ ಕವಿ ರತ್ನಾಕರನಲ್ಲವೆಂದೂ ಅವರು ನಿರ್ಧರಿಸಿರುವರು. ಆದರೆ ಶೃಂಗಾರಕವಿಹಂಸರಾಜನೆಂಬುದು ರತ್ನಾಕರ ಕವಿಯ ಬಿರುದೇ ಅಲ್ಲದೆ ಬೇರೊಬ್ಬ ಕವಿಯ ಬಿರುದಲ್ಲವೆಂದು ಆಧಾರಪೂರ್ವಕವಾಗಿ ಹೇಳಬಹುದು. ಕವಿಯು ಭೈರಸ ಒಡೆಯರ ಆಸ್ಥಾನದಲ್ಲಿ 'ಶೃಂಗಾರಕವಿ'ಯಾಗಿದ್ದನು ಎಂದು ದೇವಚಂದ್ರನು ತಿಳಿಸಿರುವನು. ಮತ್ತು ಭರತೇಶವೈಭವವು ಶೃಂಗಾರರಸದ ಕಣಿಯೇ ಆಗಿರುವುದರಿಂದ, ಇಲ್ಲಿ ಪ್ರತೀತಿಯಿರುವಂತೆ

ಈ ಕಾವ್ಯದಿಂದಾಗಿ ಆತನಿಗೆ ಶೃಂಗಾರಕವಿಹಂಸರಾಜನೆಂಬ ಬಿರುದು ಬಂದಿತೆಂಬುದನ್ನು ಧಾರಾಳವಾಗಿ ಹೇಳಬಹುದು. ರತ್ನಾಕರನು 'ನಿಜಗುರುವಪ್ಪ ಮಹೇಂದ್ರಕೀರ್ತಿಗಳಿಂದ' ದೀಕ್ಷೆವಡೆದನೆಂದು ದೇವಚಂದ್ರನು ಹೇಳಿರುವನು. ಈ ಮಹೇಂದ್ರಕೀರ್ತಿಯೂ ರತ್ನಾಕರಾಧೀಶ್ವರಶತಕದಲ್ಲಿ ಹೇಳಲ್ಪಟ್ಟ ದೇವೇಂದ್ರಕೀರ್ತಿಯೂ ಒಬ್ಬನೇಯಾಗಿರಬೇಕು. ಯಾತಕ್ಕೆಂದರೆ ದೇವೇಂದ್ರಕೀರ್ತಿ ಮಹೇಂದ್ರಕೀರ್ತಿಗಳು ಒಬ್ಬನೇ ಗುರುವಿನ ಪರ್ಯಾಯ ನಾಮಗಳಿರಬಹುದೆಂದು ಊಹಿಸುವುದಕ್ಕೆ ಅವಕಾಶವಿದೆ. ಆದರೆ ರತ್ನಾಕರನು ಭರತೇಶವೈಭವದಲ್ಲಿ ತನ್ನ ಗುರು ಚಾರುಕೀರ್ತಿಯೋಗೀಶ್ವರನೆಂದು ಹೇಳಿರುವುದರಿಂದ ಒಬ್ಬ ಕವಿಗೆ ಇಬ್ಬರು ಗುರುಗಳಿದ್ದಿರಬಹುದೇ ಎಂದು ಸಂಶಯಪಡಬಹುದಾಗಿದೆ. ಚಾರುಕೀರ್ತಿಯೆಂಬುದು ಮೂಡಬಿದಿರೆಯ ಪೀಠದ ಹೆಸರಾಗಿದೆ; ಹಾಗೆಯೇ ದೇವೇಂದ್ರಕೀರ್ತಿಯೆಂಬುದು ಘಟ್ಟದ ಮೇಲಿನ ಹುಂಬಚ್ಚ ಪೀಠದ ಹೆಸರೆಂದು ಕೇಳುತ್ತೇವೆ. ಕವಿಯು ಒಮ್ಮೆ ಜೈನಮತವನ್ನು ಬಿಟ್ಟು ಪುನಃ ಆ ಮತಕ್ಕೇನೇ ಸೇರಿದಂತೆ ಕಥೆಗಳಿರುವುದರಿಂದಲೂ ಚಾರುಕೀರ್ತಿಯೊಡನೆ ಕವಿಗೆ ಕೆಲಕಾಲ ವೈಮನಸ್ಯವಿದ್ದುದರಿಂದಲೂ, ಮತ್ತೊಬ್ಬ ಗುರುವನ್ನು ಕವಿಯು ಮಾಡಿಕೊಂಡಿರಬಹುದೆಂದು ಊಹಿಸುವುದಕ್ಕೂ ಅವಕಾಶವಿದೆ. ಆತನ ಗುರು ಯಾರಾಗಿದ್ದರೂ ಸರಿಯೇ, ದೇವಚಂದ್ರನು ರತ್ನಾಕರಾಧೀಶ್ವರಶತಕವನ್ನೂ ಕವಿಯ ಕೃತಿಗಳಲ್ಲೊಂದಾಗಿ ಹೇಳಿರುವುದರಿಂದ ಅದನ್ನೂ ಇಲ್ಲಿ ಒಂದು ಆಧಾರವಾಗಿಟ್ಟುಕೊಳ್ಳಬಹುದು. ಅದಲ್ಲದೆ ಶೃಂಗಾರಕವಿಹಂಸರಾಜನು ಪ್ರತ್ಯೇಕ ಕವಿಯಾದರೆ ಅವನು ವೈರಾಗ್ಯಶತಕವಲ್ಲದೆ ಒಂದು ಶೃಂಗಾರಕಾವ್ಯವನ್ನು ರಚಿಸಿರಬೇಕಾಗಿ ಹೇಳುವುದು ಅಗತ್ಯವಾಗುವುದು. ಇಲ್ಲವಾದರೆ ಹಾಲಿಲ್ಲದ ಕ್ಷೀರಸಾಗರಭಟ್ಟನ ಹೆಸರಿನಂತಾದೀತು. ಇಂತಹ ಕಾವ್ಯವು ಎಲ್ಲಿಯೂ ಉಕ್ತವಾಗಲಿಲ್ಲವಾದುದರಿಂದ ಆ ಬಿರುದು ಭರತೇಶವೈಭವದ ಕವಿಗೇನೇ ಇದ್ದಿತೆಂದು ಗ್ರಹಿಸುವುದೂ ತಪ್ಪಾಗಲಾರದು. ಮಾತ್ರವಲ್ಲ, ರತ್ನಾಕರನು ತನ್ನ ಹೆಸರಿನ ಅನುಕೂಲತೆಯನ್ನು ಕಂಡು, ಸೋಮೇಶ್ವರಶತಕದಲ್ಲಿ ತನ್ನ ಹೆಸರೂ ದೇವರ ಹೆಸರೂ ಒಂದೇ ಪದದಲ್ಲಿ ಬರುವಂತೆ ಕವಿಯು 'ಶ್ರೀ ಚೆನ್ನಸೋಮೇಶ್ವರ' ಎಂಬ ಪಲ್ಲವಿಯನ್ನಿಟ್ಟಂತೆ, 'ರತ್ನಾಕರಾಧೀಶ್ವರಾ' ಎಂಬ ಪದದಲ್ಲಿ ತನ್ನ ಹೆಸರನ್ನೂ ರತ್ನಾಕರಾಧೀಶ್ವರನ ಅಂಕಿತವನ್ನೂ ಜತೆಗೊಳಿಸಿರುವನೆಂದು ಹೇಳುವುದೂ ಯುಕ್ತಿಯುಕ್ತವಾಗಿದೆ.

ಇನ್ನು ಆಂತರಾಳಿಕ ಪ್ರಮಾಣದಿಂದ ರತ್ನಾಕರಾಧೀಶ್ವರಶತಕವನ್ನು ರತ್ನಾಕರನೇ ಬರೆದನೆಂದು ನಿರ್ಧರಿಸುವುದಕ್ಕೆ ಈ ಕೆಳಗಣ ರತ್ನಾಕರಾಧೀಶ್ವರಶತಕದ ಮತ್ತು ಭರತೇಶವೈಭವದ ಮಾತುಗಳ ಸಮಾನತೆಯೆ ಸಾಕಾಗಿದೆ.

### ರತ್ನಾಕರಾಧೀಶ್ವರ ಶತಕ.

ಸಿಲೆಯೊಳ್ ಸುವರ್ಣಮುರಲೊಳ್ ಸೌರಭ್ಯ ಮಾಕ್ಷೀರದೊಳ್ ನರುನ್ನೈಕಾಷ್ಠದೊಳಗ್ನಿಯಿರ್ಪ ತೆರದಿಂದೀ ಮೈಯೊಳೊಂದಿರ್ಪನು.

ಬಿಸಿಲಿಂ ಕಂದದ ಬೆಂಕಿಯಿಂ ಸುಡದ ನೀರಿಂ ನಾಂದದುಗ್ರಾಸಿ ಭೇದಿಸಲುಂ ಬಾರದ ಚಿನ್ಮಯಂ ಮರೆದು ತನ್ನೊಳ್ಪಂ ಪರಧ್ಯಾನದಿಂ ಪಸಿವಿಂದೀ ಬಹುಬಾಧೆಯಿಂ ರುಜೆಗಳಿಂ ಕೇಡಾಗುವೀ ಮೈಗೆ ಸಂದಿಸಿದಂ.

ನಳಿನೀನಾಳಕೆ ಮೂಲದಿಂ ತುದಿವರಂ ಸಂಪೂರ್ಣದಿಂ ಸ್ವಚ್ಛದಿಂದೊಳಗೆಂತಿರ್ಪುದು ತಂತುವಂತೆ ನರರ್ಗಂ ಕೆಂಬಜ್ಜೆಯಿಂ ನೆತ್ತಿ ಮುಟ್ಟಳತಂ ತಪ್ಪದೆ ಮೂರ್ತಿ ತುಂಬಿ ಪಳುಕಿಂಗೆಯ್ಸಿರ್ದ ಸಿವ್ನೊಂದು ನಿರ್ಮಳಬಿಂಬೋಪಮುನಾತ್ಮನಿರ್ದಪಂ.

ಕವಿತಾಶಕ್ತಿಯೆ ಕಲ್ಪವಲ್ಲಿ.

### ಭರತೇಶ ವೈಭವ.

ಕನಕ ಕಲ್ಲೊಳಗೆ ಕಾಷ್ಠದೊಳಗ್ನಿ ಪಾಲೊಳ ಗನುವಿಡಿದಾಜ್ಯವಿಪ್ಪಂತೆ ತನುವಿನೊಳಿಹನಾತ್ಮಂ

ನೀರಿಂದ ನೆನೆಯ ಕಿಚ್ಚಿಂದ ಬೇಯನು ಹಿಡ್ಗ ಧಾರೆಗೆ ಸಂದಿಸನಾತ್ಮ ನೀರು ಕಿಚ್ಚಾಯುಧ ರುಜೆಗಳ ಬಾಧೆ ಶರೀರಕೆ

ಅಂಬುಜನಾಳಕೆ ಮೊದಲಿಂದ ತುದಿಮುಟ್ಟ ತುಂಬಿನೂಲಿರ್ಪ ರೀತಿಯೊಳು ಕೆಂಬಜ್ಜೆಯಿಂದ ಮಸ್ತಕಮುಟ್ಟ ಜೀವ ಮೈತುಂಬಿ ಠನು.

ಕವಿತೆಯೆಂಬುದು ಕಲ್ಪತರು.

ಆ ಎರಡು ಕಾವ್ಯಗಳ ಶೈಲಿಯನ್ನು ಹೋಲಿಸಿ ನೋಡಿದಾಗಲೂ ಒಬ್ಬ ಕವಿಯ ಕೈಯೇ ಕಾಣುವುದರಿಂದ ರತ್ನಾಕರಾಧೀಶ್ವರಶತಕವನ್ನು ರಚಿಸಿದವನು ರತ್ನಾಕರನೇ ಎಂದು ನಿರ್ವಿವಾದವಾಗಿ ನಿರ್ಧರಿಸಬಹುದು. ಇಲ್ಲಿಗೆ ಈ ಪೂರ್ವ ರಂಗವು ಮುಗಿಯಿತು. ಇನ್ನು ಕಥಾಪ್ರವೇಶವನ್ನು ಮಾಡುವೆವು.

## ಕ ಥಾ ಸಾ ರ

ಕೋಸಲದೇಶದ ಅಯೋಧ್ಯಾನಗರಿಯಲ್ಲಿ ವೃಷಭತೀರ್ಥಂಕರನ ಪ್ರಥಮ ಪುತ್ರನಾದ ಭರತೇಶನು ಷಟ್ಖಂಡಾಧಿಪತಿಯಾಗಿ ಸುಸಂಕಥಾವಿನೋದದಿಂದ ರಾಜ್ಯ ಪರಿಪಾಲನ ಮಾಡುತ್ತಿದ್ದನು. ಆತನು ತನ್ನ ಆಸ್ಥಾನದಲ್ಲಿ ಹಲವು ಕವಿಗಳೊಡನೆ ಕವಿತಾಗೋಷ್ಠಿಯಲ್ಲಿಯೂ ಗಾಯಕರೊಡನೆ ಸಂಗೀತಗೋಷ್ಠಿಯಲ್ಲಿಯೂ ಮುಂಬಗಲನ್ನು ಕಳೆದು ಮಧ್ಯಾಹ್ನದಲ್ಲಿ ಮುನಿಭುಕ್ತಿನಿಯಮವನ್ನು ಪಾಲಿಸಿ ತನ್ನ ತೊಂಭತ್ತಾರು ಸಾವಿರ ರಾಣಿಯರೊಡನೆ ಭೋಗಯೋಗಗಳೆರಡರಲ್ಲಿಯೂ ಮಿಕ್ಕ ದಿನವನ್ನು ಕಳೆದು ರಾಜಯೋಗಿಯಾಗಿ ಕೀರ್ತಿಪಡೆದಿದ್ದನು (ಭೋಗವಿಜಯ). ಆತನು ನವರಾತ್ರಿಯಲ್ಲಿ ಆಯುಧಪೂಜಾನಂತರ ದಿಗ್ವಿಜಯಕ್ಕೆ ಹೊರಟು ಮಾಗಧ ವರತನು ಪ್ರಭಾಸ ಮುಂತಾದವರಿಂದ ಕಪ್ಪಕಾಣಿಕೆಗಳನ್ನೂ ಸ್ತ್ರೀರತ್ನಗಳನ್ನೂ

ಪಡೆದು, ತನ್ನ ಕುಮಾರರಲ್ಲಿ ಹಲವರಿಗೆ ವಿವಾಹವನ್ನು ಬಹಳ ವಿಜೃಂಭಣೆಯಿಂದ ಮಾಡಿಸಿ, ಷಟ್ಖಂಡಗಳನ್ನು ಸಾಧಿಸಿ ಹಿಂದಕ್ಕೆ ಬರುತ್ತಿದ್ದಾಗ ಆತನ ತಮ್ಮನಾದ ಭುಜಬಲಿಯು ಆತನಿಗಿದಿರಾಗಿ ನಿಂತನು. ಭರತೇಶನು ತನ್ನ ತಮ್ಮನೊಡನೆ ಯುದ್ಧಮಾಡಲೊಲ್ಲದೆ ಆತನನ್ನು ಮಾತಿನಿಂದಲೇ ಜಯಿಸಿದನು. ಭುಜಬಲಿಯು ತನ್ನ ಅಪರಾಧಕ್ಕೆ ಪಶ್ಚಾತ್ತಾಪಪಟ್ಟು ವಿರಕ್ತನಾಗಿ ದೀಕ್ಷೆವಡೆದು ಯೋಗಿಯಾದನು. ಭರತೇಶನು ಮಹಾಸಂಭ್ರಮದೊಡನೆ ನಿಜನಗರವನ್ನು ಪ್ರವೇಶಿಸಿ ದಿಗ್ವಿಜಯದ ಪರಿಶ್ರಮವನ್ನು ಕಳೆದನು (ದಿಗ್ವಿಜಯ). ಭುಜಬಲಿಸ್ವಾಮಿಯು ಘೋರತಪಸ್ಸನ್ನು ಮಾಡುತ್ತಿದ್ದರೂ ಆತನಿಗೆ ಆತ್ಮಸಿದ್ಧಿಯಾಗದಿದ್ದುದನ್ನು ಕಂಡು ಭರತನು ರಜತಾದ್ರಿಗೆ ಹೋಗಿ, ತನ್ನ ಅಪ್ಪಾಜಿಯಾದ ಆದಿತೀರ್ಥಂಕರನೊಡನೆ ಅದರ ಕಾರಣವನ್ನು ತಿಳಿದು, ಭುಜಬಲಿಯ ಮನಃಕಷಾಯವನ್ನು ಹೋಗಲಾಡಿಸಿ ಆತನಿಗೆ ಆತ್ಮಸಿದ್ಧಿಯನ್ನು ದೊರಕಿಸಿದನು. ಭರತನ ತಾಯಿಯಾದ ಯಶಸ್ವತೀದೇವಿಯೂ ಅನಂತವೀರ್ಯಸ್ವಾಮಿಯಿಂದ ದೀಕ್ಷೆ ಪಡೆದು ಕಂತಿಯಾದಳು. ರಜತಾದ್ರಿಯಲ್ಲಿ ನಿರ್ಮಿಸಿದ ಜಿನನಿವಾಸದ ಮುಖವಸ್ತ್ರವನ್ನು ಭರತನು ಸಕಲಪರಿವಾರದೊಡಗೂಡಿ ಬಹಳ ವಿಜೃಂಭಣೆಯಿಂದ ತೆಗೆದು ಅಲ್ಲಿ ಮಹೋತ್ಸವವನ್ನು ಬೆಳೆಸಿದನು (ಯೋಗವಿಜಯ). ಭರತೇಶನ ನೂರು ಮಂದಿ ಚಿಕ್ಕ ಮಕ್ಕಳು ವಿದ್ಯಾಗೋಷ್ಠಿಯಲ್ಲಿರುವಾಗ ಮೇಘೇಶನು ದೀಕ್ಷೆ ಪಡೆದ ವರ್ತಮಾನವನ್ನು ಕೇಳಿ ಅವರೂ ವೈರಾಗ್ಯ ಹೊಂದಿ, ಸಮವಸರಣಕ್ಕೆ ಹೋಗಿ ಆದಿಜಿನೇಶನಿಂದ ತತ್ವೋಪದೇಶ ಪಡೆದು ಮೋಕ್ಷಮಾರ್ಗವನ್ನು ತಿಳಿದುಕೊಂಡು ದೀಕ್ಷೆಗೊಂಡರು. ಆ ವರ್ತಮಾನವು ಭರತೇಶನಿಗೆ ಮುಟ್ಟಲು ಆತನು ಸ್ವಲ್ಪ ಚಿಂತಿಸಿ ಸಮವಸರಣಕ್ಕೆ ಹೋಗಿ ಅವರನ್ನು ಕಂಡು ತೀರ್ಥೇಶಪೂಜೆಯನ್ನು ಮಾಡಿದನು. ಮಾರಣೆಯ ದಿನ ಆದಿಜಿನನು ಮುಕ್ತಿವಡೆದನು. ಭರತೇಶ್ವರನು ಮರಳಿ ಅಯೋಧ್ಯೆಗೆ ಒಂದು ರಾಜ್ಯಪರಿಪಾಲನ ಮಾಡುತ್ತಿದ್ದಾಗ ಒಂದು ದಿನ ಕನ್ನಡಿಯಲ್ಲಿ ಒಂದು ನರೆಗೂದಲನ್ನು ಕಂಡು ವೈರಾಗ್ಯ ಹೊಂದಿ, ಅರ್ಕಕೀರ್ತಿಗೆ ಪಟ್ಟಗಟ್ಟಿ ತನಗೆ ತಾನೇ ಗುರುವಾಗಿ ಧ್ಯಾನಸಾಮರ್ಥ್ಯದಿಂದ ತೈಜಸಕಾರ್ಮಣತನುಗಳನ್ನು ಸುಟ್ಟು ಕೈವಲ್ಯವನ್ನು ಪಡೆದನು (ಮೋಕ್ಷವಿಜಯ). ಅರ್ಕಕೀರ್ತಿಯು ತನ್ನ ತಂದೆ ಮುಕ್ತಿವಡೆದುದನ್ನು ಕೇಳಿದೊಡನೆ ತನ್ನ ತಮ್ಮನಾದ ಆದಿರಾಜನೊಡನೆ ದೀಕ್ಷೆಯನ್ನು ಕೊಂಡು ಕ್ರಮವಾಗಿ ಮೋಕ್ಷವನ್ನು ಪಡೆದನು (ಅರ್ಕಕೀರ್ತಿ ವಿಜಯ).

## ಮುಖ್ಯಪಾತ್ರವರ್ಗ

ಇಂತಿದು ಕಥಾಸಾರವು. ಈ ಕಥಾನಾಯಕನಾದ ಭರತನು ಜೈನೇತರರಾದ ಹಿಂದುಗಳಿಗೆ ಅಪರಿಚಿತನಲ್ಲ. ವೃಷಭಚಕ್ರವರ್ತಿಯ ಪುತ್ರನಾದ ಭರತನು ಕೆಲ

ಗಾಲ ರಾಜ್ಯವಾಳಿ ವೈರಾಗ್ಯಪಡೆದು ತನ್ನ ಮಗನಾದ ಸುಮತಿಗೆ ಪಟ್ಟಗಟ್ಟಿ ತಾನು ತಪಸ್ಸಿಗಾಗಿ ಹೋಗಿ, ಅಲ್ಲಿ ಕಾರಣಾಂತರದಿಂದ ಒಂದು ಜಿಂಕೆಯ ಮರಿಯನ್ನು ಪ್ರೀತಿಯಿಂದ ಸಾಕುತ್ತಿದ್ದು ಅಂತಿಮಕಾಲದಲ್ಲಿ ಅದರ ಚಿಂತೆಯಲ್ಲಿಯೇ ಇದ್ದುದರಿಂದ ಮರುಜನ್ಮದಲ್ಲಿ ಜಿಂಕೆಯಾಗಿ ಹುಟ್ಟಿ ಜಾತಿಸ್ಮರದಿಂದ ತನ್ನ ಅವಿವೇಕಕ್ಕೆ ಪಶ್ಚಾತ್ತಾಪಪಟ್ಟು ಆ ದೇಹವನ್ನು ಕಳೆದು ಆಂಗೀರಸನೆಂಬವನಲ್ಲಿ ಅವಧೂತನಾಗಿ ಹುಟ್ಟಿ ಮಹಾಯೋಗಿಯಾದನೆಂದು ಭಾಗವತದಲ್ಲಿ ಹೇಳಲ್ಪಟ್ಟಿದೆ. ಆ ವೃಷಭನೇ ಜೈನಪುರಾಣಗಳಲ್ಲಿ ವೃಷಭತೀರ್ಥಂಕರನೆಂದೂ ಆದಿಜಿನನೆಂದೂ ಹೇಳಲ್ಪಟ್ಟಿರುವನು. ಮತ್ತು ಆತನ ಮಗನಾದ ಭರತನೇ ಈ ಕಾವ್ಯದ ಕಥಾನಾಯಕನು. ಯೋಗ ಭೋಗಗಳೆರಡನ್ನೂ ಸಂಯೋಗಿಸಿ ಕಾವ್ಯವನ್ನು ರಚಿಸುವ ಉದ್ದೇಶವುಳ್ಳ ರತ್ನಾಕರನಿಗೆ ಈ ರಾಜಯೋಗಿಯೇ ಯೋಗ್ಯನಾದ ಕಥಾನಾಯಕನಾಗಿ ದೊರಕಿದನು.

ಕಥಾನಾಯಕನಾದ ಭರತನ ಗುಣಕಥನವನ್ನು ಕವಿಯು ಬಹಳ ಚೆನ್ನಾಗಿ ಮಾಡಿರುವನು. ಭಾಗವತದ ಕೃಷ್ಣನು ಹದಿನಾರುಸಾವಿರ ಸ್ತ್ರೀಯರೊಡನೆ ಕೂಡಿದ್ದೂ ನಿತ್ಯಬ್ರಹ್ಮಚಾರಿಯಾಗಿದ್ದಂತೆ ಭರತನು ತೊಂಭತ್ತಾರುಸಾವಿರ ಸ್ತ್ರೀಯರೊಡನೆ ವಿಷಯಲೋಲನಾಗಿದ್ದೂ ಮಹಾಯೋಗಿಯಾಗಿದ್ದನು. ದ್ವಾರಕೆಯಲ್ಲಿ ಶ್ರೀಕೃಷ್ಣನು ತನ್ನ ಪ್ರತಿಯೊಬ್ಬ ಕಾಂತೆಯ ಮನೆಯಲ್ಲಿದ್ದು ಹೇಗೆ ಅವರೆಲ್ಲರನ್ನು ಏಕಕಾಲದಲ್ಲಿ ಸಂತೋಷಪಡಿಸುತ್ತಿದ್ದನೋ ಹಾಗೆಯೇ ತನ್ನ ಅಖಿಲರಾಣಿಯರನ್ನೂ ಹಲವು ಭರತರಾಗಿ ಆತನು ಸಂತೈಸುತ್ತಿದ್ದನು. ಕೃಷ್ಣನು ಸ್ತ್ರೀಲೋಲನಾಗಿ ಲೋಕದವರಿಗೆ ಕಾಣುತ್ತಿದ್ದರೂ, ಅವನ ಒಳವಿಚಾರವೇ ಬೇರೆ ಇದ್ದಂತೆ ಭರತನು ಭೋಗಿಯಾಗಿ ಕಾಣುತ್ತಿದ್ದರೂ ಯೋಗಿಯಾಗಿದ್ದನು. ಭರತೇಶನ ಈ ಕೆಳಗಣ ವರ್ಣನೆಯನ್ನು ಓದುವಾಗ ಕೃಷ್ಣನ ಚರಿತವು ನೆನಪಿಗೆ ಬಾರದಿರದು.

ಸುಳಿದ ಪಾತ್ರದೊಳು ಮಾನಿನಿಯರ ಹೃದಯದ । ಸುಳುಹಗಾಣ್ಬನು ಭಾವಿತಾತ್ಮ ||<br>
ಸುಳಿಗುರುಳಿನ ಸೊಬಗೆಯರ ತನ್ನಯ ಸುತ್ತ । ಸುಳಿದಾಡಿಸುವನು ಸೋಲದೊಳು ||<br>
ನಸುನಗೆಯಿಂದ ಹೆಂಗಳ ನೋಡಿ ಜುಮ್ಮೆನ । ಲೊಸರಿಸುವನು ಕರಣಗಳಾ ||<br>
ಬೆಸುಗೆಯಾಪಂತಿದ್ದು ಬೇರುಪಟ್ಟಿಹನಾತ್ಮ । ರಸಿಕನೊಳಗ ಬಲ್ಲರಾರು ||<br>
ಸರಸವನಾಡನಾಡಿದನಾದರದರಲ್ಲಿ । ವಿರಸವ ಮೊಳೆದೋರಲೀನಾ ||<br>
ಪರವಶಗೊಳಿಸುವನಂಗನೆಯರ ತನ್ನ । ಪರಿಣತಿಯೆಚ್ಚರಾಗಿಪುದು ||<br>
ಒಬ್ಬಳ ಮೇಲೆ ತನಗೆ ಸೋಲವಿದ್ದರೂ । ದುಬ್ಬಗಾಣಿಸನದ ನುಡಿದು ||

ಒಬ್ಬ ಪುರುಷನೊಬ್ಬ ಸತಿಯೊಳಿಪ್ಪಂತಿಹ | ನುಬ್ಬಸವಿಲ್ಲದೆಲ್ಲರೊಳು ||
ಸಿಕ್ಕಿದಂತಿಹನು ಸಿಕ್ಕನು ರತಿಸುಖದಲ್ಲಿ | ಸೊಕ್ಕಿದಂತಿಹನಲ್ಲಿ ಸೊಕ್ಕ ||
ಠಕ್ಕರಂತಿಹನದು ಠಕ್ಕಲ್ಲ ನಿಜವ ಕ | ಣ್ಣಿಕ್ಕಿ ಕಂಡವನ ಲೀಲೆಯದು ||
ಮಾರ್ಗವಲ್ಲೆಂಬಂತೆ ತೋರ್ಪುದನ್ಯರಿಗೆ ಸ | ನ್ಮಾರ್ಗದೊಳವನಿರುತಿಹನು ||
ಆರ್ಗೆ ತಿಳಿಯಬಹುದಾತ್ಮವಿಜ್ಞಾನಿಯಂ | ತರ್ಗತವನು ಜಿನ ಬಲ್ಲಾ ||

ಈ ಭರತನಿಂದಲೇ ಈ ದೇಶಕ್ಕೆ ಭರತಖಂಡವೆಂಬ ಹೆಸರಾಯಿತು.

ಭುಜಬಲಿರಾಜನು ಭರತೇಶನ ತಮ್ಮನು. ಭರತೇಶನು ಚಕ್ರವರ್ತಿಯಾಗಿ ಅಯೋಧ್ಯೆಯಲ್ಲಿ ರಾಜ್ಯಪರಿಪಾಲನ ಮಾಡುತ್ತಿದ್ದಾಗ ಆತನು ಯುವರಾಜನಾಗಿ ಪೌದನಪುರದಲ್ಲಿ ಆಳುತ್ತಿದ್ದನು. ಭುಜಬಲಿಯು ತನ್ನ ಹೆಸರಿಗೆ ತಕ್ಕಂತೆ ಮಹಾ ಬಲಾಢ್ಯನು. ಅಣ್ಣತಮ್ಮಂದಿರೊಡನೆ ನಡೆದ ಯುದ್ಧದಲ್ಲಿ ತಮ್ಮನೇ ಜಯಿಸಿದನೆಂದೂ, ತನ್ನ ಪರಾಕ್ರಮವನ್ನು ಪ್ರಕಟ ಮಾಡಿದ ಮೇಲೆ ತಾನು ರಾಜ್ಯಕ್ಕಾಗಿ ಹೋರಾಡಿದ್ದಲ್ಲವೆಂದು ರಾಜ್ಯವನ್ನು ಭರತನಿಗೆ ಒಪ್ಪಿಸಿ ದೀಕ್ಷೆವಡೆದು ಯೋಗಿಯಾದನೆಂದೂ ಜೈನಪುರಾಣಗಳಲ್ಲಿ ಉಕ್ತವಾಗಿದೆ. ಆದರೆ ಕವಿಯು ಕಥಾನಾಯಕನನ್ನು ಧೀರೋದಾತ್ತನಾಗಿ ವರ್ಣಿಸುವುದೇ ಧರ್ಮವೆಂದು ಕಥಾಕ್ರಮವನ್ನು ಸ್ವಲ್ಪ ಮಾರ್ಪಡಿಸಿ ಅಣ್ಣತಮ್ಮಂದಿರೊಳಗೆ ನಿಜವಾಗಿ ಯುದ್ಧವು ಜರಗಲಿಲ್ಲವೆಂದೂ ಭರತನು ಭುಜಬಲಿಯನ್ನು ಮಾತಿನಿಂದಲೇ ಜಯಿಸಿದನೆಂದೂ ಚಮತ್ಕಾರಮಾಡಿ ವನು. ಆದರೂ ಭರತನು ಆಡಿದ ಕೆಲವು ಮಾತುಗಳಿಂದ ವಾಸ್ತವವಾಗಿ ತಾನೇ ಸೋತಿರಬೇಕೆಂದು ವಾಚಕರು ಅನುಮಾನಿಸಬಹುದಾಗಿದೆ.

ಮಾತಿಗೆ ತೊಡಗಿದ ಕದನಕಿಂದಿವನಿಗೆ | ಭೀತಿಯಾದುದೆಯೆನ್ನಬೇಡಾ ||
ಅದಕೇನು ನೀನಿಂತು ಕದನಕ್ಕೈದಿದೆಯೈಸೆ | ಕದನದೊಳ್ಗೆಲವೈಸೆ ಕಡೆಗೆ ||
ಬದೆಗರಂದದಿ ಹೋರಲೇತಕೆ ಗೆಲವು ನಿ | ನ್ನದು ಸೋಲವೆನಗೆ ಹೋಗೆಂದಾ ||
ನನ್ನ ತಮ್ಮನಿಗಾದ ಗೆಲವದು ನನ್ನದು | ಬನ್ನವಿಲ್ಲೆನಗಿಲ್ಲ ನೋವು.

ಕವಿಯು ಭುಜಬಲಿಯನ್ನು ಕೃತಯುಗದ ಮದನನನ್ನಾಗಿ ಹೇಳಿರುವನು. ಅವನಿಗೆ ಪ್ರದ್ಯುಮ್ನ, ಮನ್ಮಥ, ಪುಷ್ಪಬಾಣ ಇತ್ಯಾದಿ ಕಾಮನ ಎಲ್ಲಾ ಪರ್ಯಾಯ ನಾಮಗಳು ಹೇಳಲ್ಪಡುವುವು. ಅವನ ಪಟ್ಟದ ರಾಣಿ ಇಚ್ಛಾಮಹಾದೇವಿ; ಮಂತ್ರಿ ಪ್ರಣಯಚಂದ್ರಮನು, ದಳಪತಿ ವಸಂತಕನು; ಪಟ್ಟದ ಆನೆ ಮಾಕಂದವು. ಸಾವಿರವೇಕೆ? ಪ್ರತಿಯೊಂದು ವಿಷಯದಲ್ಲಿಯೂ ಅವನು ಪುರಾಣಪ್ರಸಿದ್ಧನಾದ ಮನ್ಮಥನು. ಶಿವನೊಡನೆ ಯುದ್ಧಕ್ಕೆ ಹೋದಾಗ ಮನ್ಮಥನು ತನಗೆ ಸಹಜವಾದ

ಸೇನೆಯನ್ನು ಕೊಂಡುಹೋದ ಹಾಗೆ ಈ ಮದನನು ತನ್ನ ಚತುರಂಗಸೇನೆಯ ಜತೆಗೆ ಸ್ತ್ರೀದಳವನ್ನು ಸೇರಿಸಿದ್ದನು. ಅವರು

ಕಾಲುಕುಪ್ಪಸ ಕಸೆ ವೊಲೆಗಟ್ಟು ಜಡೆರತ್ನ | ಕೀಲಣಿಗೆಲಸದೊಡ್ಯಾಣಾ
ಹೀಲಿಯ ಹರಿಗೆ ಹೂವಿನ ಕೋಲ್ಗಳಿರೆ ಬಂದ | ರೋಳ್ಸೈಸುತಾನೆಯ ಮೇಲೆ
ಪಾದರಿತಾವರೆಬೆಟ್ಟದಾವರೆಗಳಿಂ | ದಾದಜ್ಞಪರಿಗೆ ಕೆಲರಿಗೆ ||
ಕೇದಗೆಯೆಸಳಕಠಾರಿವಿಡಿದು ಬಂದ | ರಾದರ ಮಿಗೆ ತೇರನೇರಿ ||
ಮುತ್ತಿನ ಹರಿಗೆ ಕುಂದಾಣಹರಿಗೆ ಮಣಿ | ಗೆತ್ತಿದ ರನ್ನದ ಹರಿಗೆ ||
ಮುತ್ತಿನಕೋಲು ಪೊಂಗೋಲು ಪೂಗೋಲಾಂತು | ಮತ್ತಯೌವನೆಯರೈದಿದರು ||

ಮನ್ಮಥನು ಶಿವನ ಮುಂದೆ ಕದನಕೆಕ್ಕ್ಡಿನಿಂದು ಸೋತಂತೆ ಇಲ್ಲಿ ಈ ಮದನನು ರಾಜಯೋಗಿಯಾದ ಭರತನನ್ನು ಪ್ರತಿಭಟಿಸಿ ಪರಾಭವಪಟ್ಟನೆಂದು ಹೇಳುವುದೇ ಕವಿಯ ಆಶಯವಾಗಿದೆ. ಈ ಭುಜಬಲಿಸ್ವಾಮಿಯೇ ಈಗ ಗೋಮಟೇಶ್ವರನೆಂದು ಪೂಜಿಸಲ್ಪಡುವನು.

ಬುದ್ಧಿಸಾಗರನು ಭರತೇಶನ ಮಂತ್ರಿಯು. ಆತನು ಚಕ್ರವರ್ತಿಗೆ ಬಲಗೈಯಂತಿದ್ದು ರಾಜ್ಯದ ಸರ್ವವಿಚಾರವನ್ನು ಬಹಳ ಜಾಣ್ಮೆಯಿಂದ ಮಾಡುತ್ತಿದ್ದನು. ಆತನು ವಯೋವೃದ್ಧನು; ಉದ್ದವಾದ ಗಡ್ಡವುಳ್ಳವನು; ಆತನ ಮುಖದಲ್ಲಿಯೇ ಆತನ ಜ್ಞಾನಾತಿಶಯವು ಹೊಳೆಯುತ್ತಲಿದ್ದಿತು. ಚಕ್ರವರ್ತಿಯ ಆತ್ಮೀಯನಾದುದರಿಂದ ಆತನಿಗೆ ಅಂತಃಪುರದಲ್ಲಿಯೂ ಪ್ರವೇಶವಿದ್ದಿತು. ತನ್ನ ಒಡೆಯನ ಮನಸ್ಸಿನಲ್ಲಿದ್ದುದನ್ನು ಆತನು ಹೇಳುವುದಕ್ಕೆ ಮೊದಲಾಗಿಯೇ ತಿಳಿದುಕೊಂಡು ಆತನ ಮನಸ್ಸು ಮೆಚ್ಚುವಂತೆ ಎಲ್ಲವನ್ನು ನಡಿಸುತ್ತಿದ್ದನು. ಚಕ್ರವರ್ತಿಯು ಓಲಗದಲ್ಲಿದ್ದು ಮಾಗಧ, ವರತನು, ಪ್ರಭಾಸ ಮುಂತಾದವರನ್ನು ಮನ್ನಿಸುತ್ತಿದ್ದಾಗ ಆಯಾ ರಾಜರ ಯೋಗ್ಯತಾನುಸಾರವಾಗಿ ಬುದ್ಧಿಸಾಗರನು ಆಡುವ ಮಾತುಗಳು ಆತನ ಬುದ್ಧಿಕುಶಲತೆಗಳನ್ನು ಚೆನ್ನಾಗಿ ಕಾಣಿಸುವುವು. ಚಕ್ರವರ್ತಿಗೆ ವಿಶ್ವಾಸಪಾತ್ರನೂ ಸಕಲ ರಾಜ್ಯದ ಕಾರ್ಯನಿರ್ವಾಹಕನೂ ಆಗಿದ್ದರೂ, ಬುದ್ಧಿಸಾಗರನು ಆದರಿಂದ ತಲೆತಿರುಗದೆ ಎಲ್ಲರಲ್ಲಿಯೂ ಕ್ರಮವಾಗಿ ವರ್ತಿಸಿ ಸರ್ವರ ಪ್ರೀತಿಯನ್ನು ಸಂಪಾದಿಸಿದ್ದನು.

ಜಯರಾಜನು ಭರತೇಶ್ವರನಿಗೆ ಷಟ್ಖಂಡಗಳನ್ನು ಸಾಧಿಸಿ ಕೀರ್ತಿ ತಂದ ದಳಪತಿಯು. ಅವನಿಗೆ ಮೇಘೇಶನೆಂಬ ಬಿರುದನ್ನು ಚಕ್ರವರ್ತಿಯು ದಯಪಾಲಿಸಿದನು. ಈ ಜಯರಾಜನನ್ನು ಕಥಾನಾಯಕನನ್ನಾಗಿಟ್ಟುಕೊಂಡು ಮಂಗರಸನು ಜಯನೃಪಕಾವ್ಯವೆಂಬ ದೊಡ್ಡ ಗ್ರಂಥವನ್ನೇ ರಚಿಸಿರುವನು. ಆದರೆ ಇವೆರಡರ

ಕಥಾಕ್ರಮದಲ್ಲಿ ಸ್ವಲ್ಪ ವ್ಯತ್ಯಾಸವು ಕಾಣುವುದು. ಜಯನೃಪಕಾವ್ಯದಲ್ಲಿ ಕಥಾನಾಯಿಕೆಯಾದ ಸುಲೋಚನೆಯ ಸ್ವಯಂವರಕಾಲದಲ್ಲಿ ಭರತೇಶ್ವರನ ಹಿರಿಯ ಕುಮಾರನೂ ಆಗ ಯುವರಾಜನೂ ಆದ ಅರ್ಕಕೀರ್ತಿಯು ಸ್ವಯಂವರಮಂಟಪದಲ್ಲಿದ್ದರೂ ಆಕೆ ತನಗೆ ಮಾಲೆಹಾಕದ ಕಾರಣ ಅರ್ಕಕೀರ್ತಿಗೂ ಜಯನೃಪನಿಗೂ ಯುದ್ಧವಾಯಿತು ಎಂದು ಆ ಕಾವ್ಯದಲ್ಲಿ ಹೇಳಲ್ಪಟ್ಟಿರುವುದು. ಭರತೇಶ ವೈಭವದಲ್ಲಿ ಅರ್ಕಕೀರ್ತಿಯು ಆಮಂತ್ರಿಸಲ್ಪಟ್ಟರೂ ತನ್ನ ತಮ್ಮನಾದ ಆದಿರಾಜನೊಡನೆ ಪಟ್ಟಣದ ಹೊರಗಿದ್ದು, ತನ್ನ ತಮ್ಮಂದಿರಾದ ಅಷ್ಟಚಂದ್ರರನ್ನು ಮಾತ್ರ ಕಳುಹಿಸಿದಂತೆಯೂ ಸುಲೋಚನೆ ಜಯನೃಪನಿಗೆ ಮಾಲೆ ಹಾಕಿದಾಗ ಅವರು ಮತ್ಸರದಿಂದ ಅರ್ಕಕೀರ್ತಿಯ ಹೆಸರಿನಲ್ಲಿ ಯುದ್ಧದ ಪೀಕಲಾಟವನ್ನು ಎಬ್ಬಿಸಿದರೆಂದೂ ವರ್ಣಿತವಾಗಿದೆ. ಭುಜಬಲಿಭರತೇಶರೊಡನಾದ ಯುದ್ಧದಲ್ಲಿ ಕವಿಯು ಭರತನ ಪಕ್ಷವನ್ನು ವಹಿಸಿ ಕಥಾಕ್ರಮವನ್ನು ತಿರುಗಿಸಿದಂತೆ ಇಲ್ಲಿಯೂ ಪಕ್ಷಪಾತದಿಂದ ಈ ಮಾರ್ಪಾಟನ್ನು ಮಾಡಿರಬಹುದೆಂದು ಊಹಿಸಬಹುದಾಗಿದೆ.

ಮಾಗಧಾಮರನು ಭರತೇಶನ ವ್ಯಂತರಸೇನಾಧಿಪನು. ಪೂರ್ವಸಾಗರದ ಒಂದು ದ್ವೀಪವು ಅವನ ರಾಜ್ಯವಾಗಿದ್ದಿತು. ಭರತೇಶನು ದಿಗ್ವಿಜಯಕ್ಕೆ ಹೊರಟಾಗ ಮೊದಲು ಅವನನ್ನು ಸಾಧಿಸಿದನು. ಅವನು ಧೀರನೂ ಹಾಗೂ ಗರ್ವಿಷ್ಟನೂ ಆಗಿದ್ದನು. ಅವನು ಮುಂಗೋಪಿಯಾದರೂ ಹಿತವರ ಬೋಧನೆಗೆ ಕಿವಿಗೊಡುವವನು. ಭರತನ ರಾಯಸದೋಲೆಯನ್ನು ಕಂಡು ಕೋಪದಿಂದ ಕಿಡಿಕಿಡಿಯಾಗಿ ಯುದ್ಧಕ್ಕೆ ಸನ್ನದ್ಧನಾದರೂ ಚದುರನಾದ ಆತನ ಮಂತ್ರಿಯ ಉಪಾಯದ ನುಡಿಗಳಿಗೆ ಕಿವಿಗೊಟ್ಟು ಯುದ್ಧದ ಆಲೋಚನೆಯನ್ನು ಬಿಟ್ಟು ಭರತೇಶನಿಗೆ ಕಪ್ಪಕಾಣಿಕೆಗಳನ್ನೊಪ್ಪಿಸಿ ಆತನ ಆಶ್ರಿತವರ್ಗಕ್ಕೆ ಸೇರಿದನು. ಅಂದಿನಿಂದ ಭರತೇಶನ ಪರಮವಿಶ್ವಾಸಕ್ಕೆ ಪಾತ್ರನಾಗಿ ವರತನು ಪ್ರಭಾಸ ಮುಂತಾದ ಅನೇಕ ವ್ಯಂತರರನ್ನು ಬಗ್ಗಿಸುವುದಕ್ಕೆ ನೆರವಾಗಿ ವ್ಯಂತರಸೇನೆಗೆಲ್ಲ ಅಧಿಪನಾದನು.

ನಮಿರಾಜನು ಭರತನ ಸೋದರದ ಭಾವನು. ಆತನು ಬಲು ಛಲಗಾರನು. ಇತರರು ಭರತೇಶನಿದ್ದಲ್ಲಿಗೆ ಹೋಗಿ ಕಪ್ಪಕಾಣಿಕೆಗಳನ್ನೂ ಹೆಮ್ಮಕ್ಕಳನ್ನೂ ಒಪ್ಪಿಸಿದಾಗ ಆತನು ತಾನು ಸಿರಿಯಲ್ಲಿ ಕಡಮೆಯಾದರೂ ವಂಶದಲ್ಲಿ ಭರತನಿಗೆ ಸಮಾನನೆಂದೂ ಚಕ್ರವರ್ತಿಯು ತನ್ನಲ್ಲಿಗೆ ಬಂದರೆ ಮಾತ್ರ ತನ್ನ ತಂಗಿಯಾದ ಸುಭದ್ರಾದೇವಿಯನ್ನು ಆತನಿಗೆ ಧಾರೆಯೆರೆದು ಕೊಡುವೆನೆಂದೂ ಅಲ್ಲವಾದರೆ ಆಕೆಯನ್ನು ಬೇರೊಬ್ಬನಿಗೆ ಕೊಡುವುದೇ ನಿಶ್ಚಯವೆಂದೂ ಹಟಮಾಡಿದನು. ಕೊನೆಗೆ ಈ ಕಡೆ ಅವನ ತಾಯಿಯೂ ಆ ಕಡೆ ಬುದ್ಧಿಸಾಗರನೂ ಸಂಧಾನ ನಡೆಸಿ ಸುಭದ್ರೆಗೆ ತಾಳಿಬಂದಿಯನ್ನು ನಮಿರಾಜನ ಮನೆಯಲ್ಲಿ ವಿಧಿಪ್ರಕಾರ ವಿಜೃಂಭಣೆಯಿಂದ ಕಟ್ಟಿಸಿ,

ಆ ಮೇಲೆ ಆಕೆಯನ್ನು ಭರತರಾಜನಿದ್ದಲ್ಲಿಗೆ ಬರಮಾಡಿಸಿ ಮದುವೆಯನ್ನು ಸಂಭ್ರಮದಿಂದ ನಡೆಸಿದರು. ಭರತೇಶನು ಈತನೀಗ ನಿಜವಾದ ಕ್ಷತ್ರಿಯನೆಂದು ಆತನ ಗುಣಕ್ಕೆ ಮನಸ್ಸಿನಲ್ಲೆ ಮೆಚ್ಚಿ ಆತನನ್ನು ಎಲ್ಲರಿಂದಲೂ ಅಧಿಕವಾಗಿ ಮನ್ನಿಸಿದನು.

ಸ್ತ್ರೀಪಾತ್ರಗಳನ್ನೂ ಕವಿಯು ಚೆನ್ನಾಗಿ ಚಿತ್ರಿಸಿರುವನು. ಯಶಸ್ವತೀದೇವಿಯು ಭರತೇಶನ ಜನನಿಯು. ಊರಿಗೆ ಅರಸಾದರೂ ತಾಯಿಗೆ ಮಗನೆಂಬುದು ಈ ತಾಯಿಮಕ್ಕಳ ವರ್ತನೆಯಲ್ಲಿ ಚೆನ್ನಾಗಿ ಕಾಣುವುದು. ತಾಯಿಯು ತನ್ನ ಮಗನ ಕಲ್ಯಾಣಚಿಂತನೆಯಲ್ಲಿಯೂ ಆತ್ಮಧ್ಯಾನದಲ್ಲಿಯೂ ಸಮಯವನ್ನು ಕಳೆಯುತ್ತಿದ್ದು ಮಗನ ಮತ್ತು ತನ್ನ ತೊಂಭತ್ತಾರು ಸಾವಿರ ಸೊಸೆಯರ ಪ್ರೀತಿಭಕ್ತಿಗಳಿಗೆ ಪಾತ್ರಳಾಗಿದ್ದಳು. ಅತ್ತೆಸೊಸೆಯರು ಎಣ್ಣೆಸೀಗೆಯಾಗಿರುವುದು ಲೋಕರೂಢಿಯಾಗಿರುವಾಗ ಈ ಅತ್ತೆಸೊಸೆಯರ ಅನುಭವವು ಹಾಲುಸಕ್ಕರೆಯಾಗಿರುವುದು ಲೋಕಕ್ಕೆ ಒಂದು ಉದಾತ್ತನೀತಿಯಾಗಿದೆ. ಭರತೇಶನು ದಿಗ್ವಿಜಯಕ್ಕೆ ಹೊರಟಾಗ ಯಶಸ್ವತೀದೇವಿಯು ಮಗನಿಗೂ ಸೊಸೆಯರಿಗೂ ಹೇಳುವ ಸಮಯೋಚಿತವಾದ ನೀತಿಯಲ್ಲಿ ಆಕೆಯ ಗುಣಗಳು ಅಧಿಕವಾಗಿ ಕಾಣುವುವು. ಸೊಸೆಯರು ಅತ್ತೆಯಿಂದ ಹರಸಿಕೊಂಡು ಭರತೇಶನೊಡನೆ ಹೋಗುವಾಗ ಅತ್ತೆಯಮ್ಮನನ್ನು ಪುನಃ ಕಾಣುವವರೆಗೆ ಒಬ್ಬೊಬ್ಬರು ಒಂದೊಂದು ಪ್ರೀತಿಯ ವಸ್ತುವನ್ನು ಬಿಡುವೆವೆಂದು ಆ ವ್ರತವನ್ನು ಪಾಲಿಸಿದುದನ್ನು ಗ್ರಹಿಸುವಾಗ ಆ ಅತ್ತೆಸೊಸೆಯರೊಳಗೆ ಎಷ್ಟು ಪ್ರೀತಿಯಿದ್ದಿತೆಂಬುದು ವ್ಯಕ್ತವಾಗುವುದು.

ಕುಸುಮಾಜಿಯು ಭರತೇಶನ ತೊಂಭತ್ತಾರುಸಾವಿರ ಸ್ತ್ರೀಯರಲ್ಲಿ ಆತನ ವಿಶೇಷ ಪ್ರೀತಿಗೆ ಪಾತ್ರಳಾದವಳು. ಸೂರ್ಯನು ಎಲ್ಲರಲ್ಲಿಯೂ ಸಮಾನವಾಗಿ ಪ್ರಕಾಶಿಸುವಂತೆ ಭರತನು ಎಲ್ಲರ ಹೃದಯದಲ್ಲಿ ಒಂದೇ ಬಗೆಯಾಗಿ ಪ್ರೇಮವನ್ನು ಹರಡಿದ್ದರೂ ಆಕೆ ಆತನ ಗುಣಗಳಿಗೆ ವಿಶೇಷವಾಗಿ ಸೋತುದರಿಂದ ಭರತನಿಗೆ ಕುಸುಮಾಜಿಯಲ್ಲಿ ಹೆಚ್ಚಿನ ಆಸಕ್ತಿಯಿದ್ದಿತೆಂದು ಹೇಳಬಹುದು. ಆದರೂ ಭರತನು ಅದನ್ನು ನುಡಿದು ಹೊರಗಾಣಿಸುತ್ತಿರಲಿಲ್ಲ. ಆತನ ಸ್ತ್ರೀಯರೆಲ್ಲರೂ ಸರಸೆಯರು; ಕುಸುಮಾಜಿಯು ಎಲ್ಲರಿಗಿಂತಲೂ ಸರಸೆಯೆಂಬುದು ಆಕೆ ಗಿಳಿಯೊಡನೆ ಆಡಿದ ನುಡಿಗಳೂ, ಭರತೇಶನು ತನ್ನ ಮನೆಗೆ ಭೋಜನಕ್ಕೆ ಬಂದಾಗ ಆತನೊಡನೆ ಮಾಡಿದ ಸರಸಸಲ್ಲಾಪವೂ ಧಾರಾಳವಾಗಿ ತಿಳಿಸುವುವು.

ಸುಭದ್ರಾದೇವಿಯು ಭರತೇಶನ ಪಟ್ಟದರಸಿಯು. ಆಕೆ ಆತನ ಸೋದರದ ಮಾವನ ಮಗಳಾಗಿದ್ದಳು. ಚಿಕ್ಕಂದಿನಲ್ಲೆ ಅವರು ಗಂಡಹೆಂಡಿರೆಂದು ನಿಶ್ಚಯವಾಗಿದ್ದಿತು. ಆಕೆ ಗುಣದಲ್ಲಿಯೂ ಸೌಂದರ್ಯದಲ್ಲಿಯೂ ಭರತೇಶನಿಗೆ ಅನುಗುಣಳಾಗಿದ್ದಳು. ಪಟ್ಟದರಸಿಯಾಗಿದ್ದು ಅಂತಃಪುರವನ್ನು ಆಳುವ ಪದವಿಯಲ್ಲಿ

ದ್ದರೂ ಇತರ ರಾಣಿಯರೊಡನೆ ಸಮಭಾವದಿಂದ ಕಲೆತು ತನ್ನ ವಿಷಯವನ್ನು ಮೆರೆದಿದ್ದಳು. ಭರತನ ಎಲ್ಲಾ ರಾಣಿಯರಿಗೂ ಒಂದೊಂದು ಮಗುವಿದ್ದು ಆಕೆಯಲ್ಲಿ ಮಾತ್ರ ಸಂತಾನವಾಗದಿದ್ದರೂ ಸುಭದ್ರೆಯ ಹೃದಯದಲ್ಲಿ ಎಳ್ಳಷ್ಟೂ ಮತ್ಸರವಿಲ್ಲದೆ ಆ ಎಲ್ಲಾ ಮಕ್ಕಳನ್ನು ತನ್ನ ಮಕ್ಕಳಂತೆ ಬಹಳವಾಗಿ ಪ್ರೀತಿಸುತ್ತಿದ್ದಳು.

ಈ ಮುಖ್ಯ ಪಾತ್ರಗಳಲ್ಲದೆ ಕಥಾಸಂದರ್ಭಕ್ಕೆ ತಕ್ಕಂತೆ ಅಲ್ಲಲ್ಲಿ ಅನೇಕ ಸ್ತ್ರೀಪುರುಷರು ರಂಗದಲ್ಲಿ ಪ್ರವೇಶಮಾಡಿ ಅದೃಶ್ಯರಾಗುವರು. ಆದರೆ ಅವರು ಪ್ರಧಾನಪಾತ್ರಗಳಲ್ಲದಿರುವುದರಿಂದ ಅವರ ಪ್ರಸ್ತಾವವನ್ನು ಬಿಟ್ಟು ನಾವು ಕವಿತಾ ವಿಮರ್ಶನವನ್ನು ಪ್ರಾರಂಭಿಸುವೆವು.

ಈ ಕಾವ್ಯವು ಮೃದುಮಧುರವಾದ ಪದರಚನೆಯಿಂದಲೂ ಕಥಾಕೌತುಕದಿಂದಲೂ ವರ್ಣನಾಚಮತ್ಕಾರದಿಂದಲೂ ವಾಚಕರ ಚಿತ್ತವನ್ನಾಕರ್ಷಿಸಿ ಪ್ರಾರಂಭದಿಂದ ಅಂತ್ಯದ ವರೆಗೂ ಏಕರೀತಿಯಾಗಿ ಅವರನ್ನು ಆನಂದಗೊಳಿಸುತ್ತಲೂ, ಅವರಿಗೆ ಸುನೀತಿಯನ್ನು ಬೋಧಿಸುತ್ತಲೂ ಇಹಲೋಕಪರಲೋಕಸುಖಗಳ ಭಾವನೆಯಲ್ಲಿ ಅವರನ್ನು ಓಲಾಡಿಸುತ್ತಲೂ, ಮೋಕ್ಷಸಾಧನೆಗೆ ಅವರ ಮನಸ್ಸನ್ನು ಒಯ್ಯುತ್ತಲೂ ಅವರಲ್ಲಿ ಒಳ್ಳೆಯ ಪರಿಣಾಮವನ್ನುಂಟುಮಾಡುವುದು. ಇದರಲ್ಲಿ ಮಾಧುರ್ಯ, ಸೌಕುಮಾರ್ಯ, ಕಾಂತಿ ಮೊದಲಾದ ಗುಣಗಳನ್ನು ಮೆಚ್ಚುವವರಿಗೆ ಕಿವಿಗೆ ಸವಿಗರೆವ ಮಾತಿನ ಇಂಪೂ, ಪುರುಳಾದ ನುಡಿಗೆ ಕಿವಿಗೊಡುವವರಿಗೆ ನುಡಿಯ ಬೆಡಗೂ, ರಚನಾಕೌಶಲವನ್ನು ಬಯಸುವವರಿಗೆ ಚಿತ್ರವಿಚಿತ್ರವಾದ ಕಥಾಸರಣಿಯೂ, ವರ್ಣನಾಚಾತುರ್ಯಕ್ಕೆ ಮನಸೋಲುವವರಿಗೆ ಹೊಸ ಹೊಸ ತರದ ಬಣ್ಣನೆಯ ಬಿನ್ನಾಣವೂ, ಶೃಂಗಾರಾದಿರಸಗಳಲ್ಲಿ ಅಧಿಕಾಸಕ್ತಿಯುಳ್ಳವರಿಗೆ ಬಗೆ ತೀರುವಷ್ಟು ನವರಸಪುಷ್ಟಿಯೂ, ಆತ್ಮೋನ್ನತಿಯ ಕಡೆಗೆ ಮನವೆಳಸುವವರಿಗೆ ಹೃದ್ಯವಾದ ತತ್ತ್ವಜ್ಞಾನವೂ ಇರುವುದರಿಂದ ಇವೆಲ್ಲವನ್ನು ಮೆಚ್ಚುವ ವಿದ್ವಜ್ಜನರಿಗೆ ಇದು ಪರಮಪೂಜ್ಯವಾಗಿರುವುದು.

## ಶೈಲಿ

ಮೊದಲು ಕವಿಯ ಸರಳವಾದ ಶೈಲಿಗೆ ವಾಚಕರ ಮನಸ್ಸು ಸೋಲುವುದು. ಸಾಂಗತ್ಯವು ಛಂದೋನಿಯಮಗಳಿಗೊಳಗಾಗದ ಒಂದು ಹಾಡಿನ ಮಟ್ಟಾಗಿದ್ದು ಅದಕ್ಕೆ ತಾಳವೇ ಮುಖ್ಯವಾಗಿ ಮಾತ್ರೆಗಳ ತೊಡಕೇ ಇಲ್ಲವಾದುದರಿಂದ ನೀರು ಹರಿಯುವಂತೆಯೂ ತಂಗಾಳಿಯು ತೀಡುವಂತೆಯೂ ತಡೆಯಿಲ್ಲದೆ ಬರೆಯುವುದಕ್ಕೆ ಅನುಕೂಲವಾಗಿ ಕವಿಗೆ ಒಂದು ಹೆದ್ದಾರಿಯಾಗಿ ಪರಿಣಮಿಸಿತು. ಕವಿಯ ಮಾತುಗಳು ದೀರ್ಘಸಮಾಸಗಳಿಲ್ಲದೆ ಬಿಡುಮುತ್ತುಗಳಂತಹ ನುಣುಪಾದ ಪದಗಳಿಂದ

ಮುತ್ತಿನ ಹಾರದಂತೆ ಕಂಗೊಳಿಸುವುವು. ಕವಿಗೆ 'ಜಗದೊಳ್ ಸನ್ನಿದವಾದ ನಾಳ್ನುಡಿಗಳಂ ಛಂದಕ್ಕೆ ಬರ್ಪಂತೆ ನೆಟ್ಟಗೆ ಮಾತಾಡುವ ಬಲ್ಮೆ ಚಿತ್ತದೊಳೊರಲ್ದಿರ್ದರ್ಥಮಂ ಕೂಡೆ ನಾಲಗೆಯಿಂ ರಂಜಿಸುವೊಂದು ಬಿನ್ನಣವು' ಇದೆ. ತನ್ನ ಹೃದಯದ ಭಾವನೆಯನ್ನು ವಾಚಕರ ಹೃದಯಕ್ಕೆ ಮುಟ್ಟಿಸುವಾಗ ಎಷ್ಟು ದೊಡ್ಡ ಭಾವನೆಯನ್ನಾದರೂ ಕೆಲವೇ ಪದಗಳಲ್ಲಿ ಅಡಕವಾಗಿ ಹೇಳುವ ಸಾಮರ್ಥ್ಯವು ಆತನಿಗುಂಟು. ಆತನು ಧೈರ್ಯದಿಂದ—

ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು । ರಯ್ಯಾಮಂಚಿದಿಯೆನೆ ತೆಲುಗಾ ॥
ಅಯ್ಯಯ್ಯ ಯೆಂಚ ಪೊರ್ಲಾಂಡೆಂದು ತುಳುವರು । ವ್ಯೆಯುಬ್ಬಿ ಕೇಳಬೇಕಣ್ಣ ॥

ಎಂದು ಹೇಳಿರುವಂತೆ ಕನ್ನಡಭಾಷೆಯನ್ನು ಅಲ್ಪಸ್ವಲ್ಪವಾಗಿ ತಿಳಿದವರೂ ಕೂಡ ಈ ಕಾವ್ಯವನ್ನು ಓದಿ ತಿಳಿಯಬಹುದಾಗಿದೆ. ಇದರ ಗುಟ್ಟೇನು?

ಸಕಲ ಲಕ್ಷಣವು ವಸ್ತುಕಕೆ ವರ್ಣಕಕಿಷ್ಟು । ವಿಕಲವಾದರೂ ದೋಷವಿಲ್ಲ ॥
ಸಕಲ ಲಕ್ಷಣಕಾಗಿ ಬಿರಿಸುಮಾಡಿದರೆ ಪು । ಸ್ತಕದ ಬಡನೆಕಾಯಹುದು ॥

ಎಂದು ಆತನು ತಿಳಿದುಕೊಂಡಿದ್ದನು. ಮಾತ್ರವಲ್ಲ, ಕಬ್ಬವನ್ನು ಕಬ್ಬಿನಂತೆ ರಚಿಸಿದರೆ ಎಲ್ಲರಿಗೂ ರುಚಿಯಾಗುವುದೆಂದೂ ಬಿದಿರಂತೆ ಕಟ್ಟಿದರೆ ಯಾರಿಗೂ ಮೆಚ್ಚದೆಂದೂ ಆತನಿಗೆ ತಿಳಿದಿದ್ದಿತು. ಆದುದರಿಂದ ರಳಕುಳಶಿಥಿಲಸಮಾಸಗಳ ಕೋಟಲೆಗೆ ಹೋಗದೆ, ಶಬ್ದದೋಷಗಳು ಸಂಧಿಸಿದರೂ ಕಥೆಗೆ ತೊಡಕಿಲ್ಲವೆಂದು ಸ್ತ್ರೀಬಾಲರಿಗೂ ಅರ್ಥವಾಗುವಂತೆ ಸರಳವಾದ ಶೈಲಿಯಲ್ಲಿ ಕಾವ್ಯವನ್ನು ರಚಿಸಿದನು.

ಕವಿಯ ನುಡಿಗಳು ಅನೇಕ ಕಡೆ ಚಿಕ್ಕವಾಗಿಯೂ ಚೊಕ್ಕವಾಗಿಯೂ ಇದ್ದು ಗಾದೆಗಳಾಗಿ ಪ್ರಚಾರಕ್ಕೆ ಬರುವಷ್ಟು ಯೋಗ್ಯವಾಗಿವೆ. ಅವನ್ನು ಒಮ್ಮೆ ಕೇಳಿದರೂ ಮತ್ತೆ ಮರೆಯಲಾರೆವು. ಉದಾಹರಣೆಗಾಗಿ ಇಲ್ಲಿ ಕೆಲವನ್ನು ಕೊಡುವೆವು.

ಗಿಳಿ ಬಿಳಿದಾದರೆ ಚೋದ್ಯವೆಂಬರು ಹಂಸ । ಬಿಳಿದಾಗೆ ಚೋದ್ಯವೆ ಜಗಕೆ ॥
ಊರ ನೋಡುವೆನೆಂದು ಹೊರಗೇರಿಗೈತಂದು । ಊರೆಂತುಟಿಹುದೋಯೆಂಬಂತೆ ॥
ಗೂಳಿ ನಡೆವ ಹಜ್ಜೆ ತೋರುವುದಲ್ಲದೆ । ಗಾಳಿಯು ಹಜ್ಜೆ ತೋರುವುದೆ ॥
ಕೊಡುವ ಕೈ ಮೇಲು ಕೊಂಬುವ ಕೈಕೆಳಗೆ.
ಅರಸು ಪಿಡಿಯೆ ತೃಣ ಪರ್ವತವಹುದು.
ಪುಣ್ಯವಂತರು ಮುಟ್ಟೆ ಮಣ್ಣು ಹೊನ್ನಹುದು.
ಎಳೆಯೆಂಬ ರಾಯಗೆ ತುಳಿಯೆಂಬ ಮಂತ್ರಿ.
ಮುರಿದ ಚಿತ್ತವನಿನ್ನು ನೊನೆ ಮಾಡಲಹುದೆ?

ಹೆಣ್ಣಿಗೆ ಸಿಕ್ಕಿ ಬಾಳುವ ಬಾಳು ನೊಣ ಹಾರಿ | ಯೆಣ್ಣೆಯೊಳಗೆ ಬಿದ್ದ ರೀತಿ ||
ಪೊಳೆಯ ಮೇಲಿದ್ದೂ ಯೋಗಿಗಳುಂಟು ಬೆಟ್ಟದ | ಶಿಲೆಯ ಮೇಲಿಹ
ಮೋಹಿಯುಂಟು ||

## ರಚನಾ ಚಾತುರ್ಯ

ಕಾವ್ಯವನ್ನು ಮುಂದೆ ಓದುತ್ತ ಹೋದ ಹಾಗೆ ಕವಿಯ ರಚನಾ ಚಾತುರ್ಯವು ಅಲ್ಲಲ್ಲಿ ಕಾಣಿಸುವುದು. ಭೋಗವಿಜಯದಲ್ಲಿ ಕಥಾಭಾಗವು ನಿಜ ವಾಗಿ ಕಡಮೆಯಾದರೂ ಕವಿಯು ಚಿಕ್ಕ ಚಿಕ್ಕ ರಂಗಗಳನ್ನು ಒಡ್ಡಿ, ಬರೇ ಮೂರು ದಿನಗಳ ಸಂಗತಿಗಳನ್ನು ಚಮತ್ಕಾರವಾಗಿ ೧೯ ಸಂಧಿಗಳಲ್ಲಿ ಸಾಂಗತ್ಯಮಾಡಿರುವನು. ಕಥೆಯು ನಾಟಕದಂತೆ ಆಸ್ಥಾನರಂಗದಿಂದ ಪ್ರಾರಂಭವಾಗುತ್ತದೆ. ಆಸ್ಥಾನದಲ್ಲಿ ಓಲಗ ವಾದ ಭರತೇಶನ ಪರಿಚಯವನ್ನು ವಾಚಕರಿಗೆ ಮಾಡಿದ ಮೇಲೆ, ದಿವಿಜಕಲಾ ಧರನೆಂಬ ಆಸ್ಥಾನಕವಿಯ ಬಾಯಿಂದ ಆತನ ಸ್ತುತಿಯನ್ನು ಕವಿಯು ಮಾಡಿಸುವನು. 'ಭರತಭಾಸ್ಕರನ ಪೊಗಳದಿದ್ದಾಗ ರತ್ನಾಕರಸಿದ್ಧ ನಾಡುಗನಲ್ಲದೇನಾತ್ಮಸುಖಿಯೆ' ಎಂದು ಹೇಳಿರುವ ಕವಿಯು ತನ್ನ ಉತ್ಸಾಹವನ್ನು ತಡೆದು ಭರತೇಶನ ಸಮಕಾಲಿಕ ನಾದ ಆಸ್ಥಾನಕವಿಯಿಂದಲೇ ಆ ಕಾರ್ಯವನ್ನು ನೆರವೇರಿಸಿ ತನ್ನ ವಿವೇಕವನ್ನು ತೋರಿರುವನು. ಚಕ್ರವರ್ತಿಯ ನಿಯಮನಿಷ್ಠೆಗಳನ್ನು ವಾಚಕರಿಗೆ ತಿಳಿಸುವ ಉದ್ದೇಶದಿಂದ ಮುನಿಭುಕ್ತಿಸಂಧಿಯನ್ನು ಮೂರನೆಯದಾಗಿ ಕವಿಯು ಹೆಣೆದಿರುವನು. ಅಲ್ಲಿಂದ ಮುಂದೆ ಶಯ್ಯಾಗೃಹಸಂಧಿಯ ವರೆಗೂ ಭರತನು ತನ್ನ ರಾಣಿಯರೊಂದಿಗೆ ಒಂದು ದಿನವನ್ನು ಸರಸವಾಗಿ ಕಳೆದ ವಿಷಯವೇ ವರ್ಣಿತವಾದರೂ ಕವಿಯು ತನ್ನ ಅಸದೃಶವಾದ ಚಮತ್ಕಾರದಿಂದ ಸರಸವಾದ ರಂಗಗಳನ್ನು ಏರ್ಪಡಿಸಿ ವಾಚಕರ ಮನಸ್ಸನ್ನು ರಂಜಿಸಿರುವನು.

ಮೊದಲು ರಾಜನ ಪರಿಪೂರ್ಣ ವರ್ಣನೆಯನ್ನು ಮಾಡಬೇಕೆಂಬಾಶೆಯನ್ನು ಕವಿಯು ಜಾಣತನದಿಂದ ನೆರವೇರಿಸಿಕೊಂಡಿರುವನು. ಪುರಾಣಪುರುಷನಾದ ಭರತೇಶನ ಸಂಪೂರ್ಣ ಪರಿಚಯವು ಹದಿನಾರನೆಯ ಶತಮಾನದ ಒಬ್ಬ ಕವಿಗಿರು ವುದಕ್ಕಿಂತಲೂ ಆತನೊಡನೆ ಅಹೋರಾತ್ರಿ ವರ್ತಿಸುವ ಆತನ ವಿಶೇಷ ಪ್ರೇಮಕ್ಕೆ ಪಾತ್ರಳಾದ ರಾಣಿಗೆ ಅಧಿಕವಾಗಿರುವುದು ಸಹಜವಾಗಿದೆ. ಆದುದರಿಂದ ಕವಿಯು ತಾನು ಆ ಕೆಲಸಕ್ಕೆ ಕುಳಿತುಕೊಳ್ಳದೆ ಕುಸುಮಾಜಿಯಿಂದ ಅದನ್ನು ಮಾಡಿಸುವನು. ಅದರಲ್ಲಿಯೂ ಎಷ್ಟು ಚಮತ್ಕಾರ! ಗಂಭೀರೆಯಾದ ಆಕೆ ತನ್ನ ಹೃದಯದ ಗುಟ್ಟಿನ ಭಾವನೆಗಳನ್ನು ಇತರರಿಗೆ ತಿಳಿಸುವಳೆ? ಇಲ್ಲ. ತನ್ನ ಮಂದಿರದ ಒಳಹಜಾರದಲ್ಲಿ ಕುಳಿತು ತನ್ನ ಮುದ್ದಿನ ಅರಗಿಳಿಯೊಡನೆ ಪ್ರೇಮಪೂರ್ವಕವಾಗಿ ಪ್ರಾಣವಲ್ಲಭನನ್ನು

ವರ್ಣಿಸಿ ನುಡಿದಾಡುವಳು. ನೆರೆಮನೆಯ ಅಮರಾಜಿಸುಮನಾಜಿಯರು ಅದನ್ನು ಗುಟ್ಟಿನಲ್ಲಿ ಕೇಳಿ ಅದನ್ನೇ ಒಂದು ಕಾವ್ಯವಾಗಿ ಬರೆಯುವರು. ಆ ಕಾವ್ಯವನ್ನು ಆಲಿಸಬೇಕೆಂದು ಪಂಡಿತೆ ರಾಜನನ್ನು ಬೇಡುವಳು. ಭರತೇಶನು ಅದನ್ನು ಒಳ ವೋಲಗದಲ್ಲಿ ಕೇಳುವನು. ಕವಿಯು ತಾನು ಹಿಂದಿದ್ದು ಆತನ ರಾಣಿಯರಿಂದಲೇ ಚಕ್ರವರ್ತಿಯನ್ನು ವರ್ಣಿಸಿದುದು ಕೇವಲ ನೂತನಕ್ರಮವಾಗಿದೆ.

ದಾಂಪತ್ಯಾನುಕೂಲ್ಯವನ್ನು ಲೋಕಕ್ಕೆ ಅರಿಕೆ ಮಾಡಬೇಕೆಂಬ ಉದ್ದೇಶವು ಕವಿಗೆ ಇಲ್ಲಿ ಉಂಟಾಯಿತು. ಆ ಬಗ್ಗೆ ಆ ಕಾವ್ಯದೊಳಗಣ ಕಾವ್ಯಕ್ಕೆ ಇನ್ನೊಂದು ಅಂಗವನ್ನು ಬಿನ್ನಾಣದಿಂದ ಕೂಡಿಸಿರುವನು. ಕುಸುಮಾಜಿಯು ಗಿಳಿಯೊಡನಾಡುತ್ತಿದ್ದಾಗ ಅದು ಮೌನವಾಗಿದ್ದುದನ್ನು ಕಂಡು ಅದೇಕೆ ಸುಮ್ಮನಿರುವೆಯೆಂದು ಕೇಳಲು, ಗಿಳಿಯು ತನಗೆ ಮನಗಂಡ ಕೆಲವು ಸಂಗತಿಗಳನ್ನು ಹೇಳುವ ನೆವದಿಂದ ಸ್ತ್ರೀಪುರುಷರು ಅನ್ಯೋನ್ಯ ಸುಖಬಾಳುವ ಕ್ರಮವನ್ನು ಉಪದೇಶಿಸುವುದು. ಗಿಳಿಯು ಸ್ವತಂತ್ರವಾಗಿ ಮಾತಾಡುವುದು ಸೋಜಿಗವಾಗಿ ಕಾಣದಿರಲಾರದೆಂದು ಆ ಗಿಳಿಯ ದೇಹದೊಳಗೆ ಒಬ್ಬ ವ್ಯಂತರಕನ್ಯೆಯು ಕುಸುಮಾಜಿಯ ಮಾತಿಗೆ ಮರುಳಾಗಿ ಹೊಕ್ಕಿದ್ದಳೆಂದೂ ಆ ಉಪದೇಶವನ್ನು ಮಾಡಿದುದು ಆಕೆ ಎಂದೂ ಕೊನೆಗೆ ಕಾಣಿಸಿ ಕವಿಯು ವಾಚಕರನ್ನು ಕೌತುಕಗೊಳಿಸುವನು.

ಆ ಮೇಲೆ ಕಾವ್ಯದ ಕವಯಿತ್ರಿಯರಿಗೆ ತಕ್ಕ ಮನ್ನಣೆಮಾಡಿ ಪಂಡಿತೆಯ ಸೂಚನೆಯ ಮೇಲೆ ಚಕ್ರವರ್ತಿಯು ಕುಸುಮಾಜಿಯ ಮನೆಗೆ ಆ ದಿನ ಭೋಜನಕ್ಕೆ ಹೋಗುವನು. ಇಲ್ಲಿ ಕವಿಯು ಸರಸವಾದ ಇನ್ನೊಂದು ರಂಗವನ್ನು ಕಲ್ಪಿಸಿ ತನ್ನ ನುಡಿಯ ಬೆಡಗನ್ನು ತೋರಿರುವನು. ಅನಂತರ ಕುಸುಮಾಜಿಯು ತನ್ನ ಪತಿಗೆ ಸನ್ಮಾನಮಾಡಿ ವೀಣಾಗಾನದಿಂದ ಆತನನ್ನು ಮೆಚ್ಚಿಸುವ ರಂಗವನ್ನು ಕಲ್ಪಿಸಿರುವನು. ಆ ಮೇಲೆ ರಾತ್ರಿಯ ಸಮಯವನ್ನು ಆನಂದವಾಗಿ ಕಳೆಯುವುದಕ್ಕೆ ತಕ್ಕ ವಿಹಾರರಂಗಗಳನ್ನು ಒದಗಿಸಿರುವನು. ಪೂರ್ವನಾಟಕ ಉತ್ತರನಾಟಕಗಳೆಂಬ ಎರಡು ನಾಟಕರಂಗಗಳಲ್ಲಿ ನೇತ್ರಮೋಹಿನಿಚಿತ್ತಮೋಹಿನಿಯರೆಂಬ ನಾಟಕಸ್ತ್ರೀಯರೂ ರೂಪಾಣಿ ಪದ್ಮಿನಿ ಮೊದಲಾದ ಹದಿನಾರು ರಾಣಿಯರೂ ಚಿತ್ರವಿಚಿತ್ರವಾದ ನರ್ತನದಿಂದ ಚಕ್ರವರ್ತಿಯನ್ನೂ ಅಂತಃಪುರದವರನ್ನೂ ಸಂತೋಷಗೊಳಿಸುವರು. ಅನಂತರ ಪ್ರಣಯಕಲಹದ ಒಂದು ರಂಗವನ್ನು ಚಮತ್ಕಾರದಿಂದ ಏರ್ಪಡಿಸಿ ಚಕ್ರವರ್ತಿಯನ್ನು ಕವಿಯು ಶಯ್ಯಾಗೃಹಕ್ಕೆ ಕಳುಹಿಸುವನು. ಮಾರನೆಯದಿನವು ಪರ್ವದ ದಿನವಾಗಿದ್ದುದರಿಂದ ಆ ದಿನಕ್ರಮವನ್ನು ಹೇಳುವಾಗ ಅಭಿಷೇಕಪೂಜೆ, ತತ್ವೋಪದೇಶ, ಯೋಗಾಭ್ಯಾಸ ಪಾರಣೆಗಳನ್ನು ಕ್ರಮವಾಗಿ ಹೇಳಿ ಭೋಗವಿಚಾರದಲ್ಲಿ ತೋರಿದ ಕವಿತಾಪ್ರೌಢಿಯನ್ನು ಯೋಗವಿಚಾರದಲ್ಲಿಯೂ ತೋರಿರುವನು.

ದಿಗ್ವಿಜಯಕಲ್ಯಾಣದಲ್ಲಿ ಯುದ್ಧಗಳ ವಿಷಯವನ್ನೇ ಸಹಜವಾಗಿ ನಿರೀಕ್ಷಿಸಬಹುದು. ಆದರೆ 'ಸಮುದ್ರಾಂತಧರೆಯ ಲೀಲಾಮಾತ್ರದನುವಿಂದ ಜಯಿಸೆನ್ನ ಕಂದಾ' ಎಂದು ಯಶಸ್ವತೀದೇವಿಯು ಹರಸಿದಾಗ ಆತನು 'ನಯನಲೀಲಾರ್ಥ ರಾಜ್ಯದೊಳಾಡಿ ಬಂದು ನಿಮ್ಮಯ ಪಾದಗಳ ಕಾಣ್ಬೆನು' ಎಂದು ವಚನಕೊಟ್ಟಂತೆ, ಆತನ ಹೆಸರ ಮಾತ್ರದಿಂದಲೆ ಸಮಸ್ತಾವನಿಯನ್ನು ಸಾಧಿಸಿದಂತೆ ಕವಿಯು ಬಣ್ಣಿಸುವುದರಿಂದ ಇಲ್ಲಿ ಯುದ್ಧವರ್ಣನೆಗಳು ದೊರಕಲಾರವು. ಭರತನು ಮಾಗಧ, ವರತನು, ಪ್ರಭಾಸ, ನಮಿರಾಜ ಮುಂತಾದವರನ್ನು ಸಾಮೋಪಾಯದಿಂದ ಸಾಧಿಸಿದ ರಂಗಗಳನ್ನೂ ಭರತನಿಗೆ ಆದಿರಾಜ ಮುಂತಾದ ಪುತ್ರರತ್ನಗಳು ಜನಿಸಿದ ಉತ್ಸವರಂಗಗಳನ್ನೂ ಸಾಮಂತರಾಜರು ಭರತೇಶನಿಗೆ ಮಾಡಿದ ವಿವಾಹೋತ್ಸವಗಳನ್ನೂ ಸುಭದ್ರಾದೇವಿಯ ವಿವಾಹಸಂಭ್ರಮವನ್ನೂ ಸೊಗಸಾಗಿ ಸಾಂಗತ್ಯಮಾಡಿ ಚಕ್ರವರ್ತಿಯ ಭಾಗ್ಯೋದಯವನ್ನು ಚೆನ್ನಾಗಿ ಚಿತ್ರಿಸಿರುವನು. ಭುಜಬಲಿಯೊಡನೆ ಮಾಡಿದ ಸಂಧಾನವು ಭಂಗವಾಗಿ ಯುದ್ಧವೇ ನಿಶ್ಚಯವಾಯಿತೆಂಬಾಗ ಕವಿಯು ಕಟಕವಿನೋದ, ಮದನನ ಸನ್ನಾಹ, ರಾಜೇಂದ್ರಗುಣವಾಕ್ಯಗಳೆಂಬ ಮೂರು ರಂಗಗಳನ್ನು ಏರ್ಪಡಿಸಿ, ಯುದ್ಧದ ಸಂಭವವನ್ನು ಕೊನೆಯವರೆಗೂ ತೋರಿ, ಅಂತ್ಯದಲ್ಲಿ—ಅಹಿಂಸಾಧರ್ಮವು ನೆಲೆಗೊಳ್ಳುವಂತೆ—ಸಹೋದರರ ಯುದ್ಧವು ಸೊಗಸಲ್ಲವೆಂದು ಅದನ್ನು ಆಗಗೊಳಿಸದೆ ಲೋಕಕ್ಕೆ ಯೋಗ್ಯವಾದ ನೀತಿಯನ್ನು ತೋರಿರುವುದು ಕವಿಯ ಅಸಾಧಾರಣ ರಚನಾವೈಭವವನ್ನು ವಿಶದಪಡಿಸುವುದು. ಯೋಗಮೋಕ್ಷಾರ್ಕಕೀರ್ತಿವಿಜಯಗಳಲ್ಲಿ ಕವಿಯು ಚಂದವಾಗಿ ಏರ್ಪಡಿಸಿದ ರಂಗಗಳಿಂದ ಸಂಸಾರದ ಅಸ್ಥಿರತ್ವವನ್ನು ಚೆನ್ನಾಗಿ ಬೋಧಿಸಿ ಮೋಕ್ಷಮಾರ್ಗಕ್ಕೆ ವಾಚಕರ ಮನಸ್ಸನ್ನು ತಿರುಗಿಸುವನು.

## ವರ್ಣನಾಕ್ರಮ.

ಇನ್ನು ವರ್ಣನಾಕ್ರಮದಲ್ಲಿ 'ಪ್ರಚುರದಿ ಪದಿನೆಂಟು ರಚನೆಯ ಕಾವ್ಯಕೆ ರಚಿಸುವರಾನಂತು ಪೇಳೆ ಉಚಿತಕೆ ತಕ್ಕಷ್ಟು ಪೇಳ್ವೆನಧ್ಯಾತ್ಮವೆ ನಿಚಿತಪ್ರಯೋಜನವೆನಗೆ' ಎಂದು ಕವಿಯು ಮೊದಲೇ ವಾಚಕರನ್ನು ಎಚ್ಚರಿಸಿರುವನು. ಮಹಾಕಾವ್ಯವೆನ್ನಿಸಬೇಕಾದರೆ—ಉದಧಿಪುರಾಧಿಪಸುತಮಂ | ತ್ರಿದೂತಗಮನಾಜಿ ವಿರಹ ಪರಿಣಯ ಸುರತ | ರ್ತು ದಿನೇಶ ಚಂದ್ರ ಮಧುಕುಭೃದುದಕ ವನಸ್ಪತಿಯೆ ಕೃತಿಗೆ ಪದಿನೆಂಟಂಗಂ' ಎಂದು ಪೂರ್ವಲಾಕ್ಷಣಿಕರು ನಿಯಮಿಸಿರುವುದಲ್ಲದೆ ಪ್ರತಿಯಂಗದಲ್ಲಿಯೂ ವರ್ಣನೀಯಾಂಶಗಳು ಇಂತಹವೆಂದೂ ನಿರ್ಧರಿಸಿರುವಾಗ ಅದನ್ನು ಅಲಕ್ಷಿಸಿ ಕವಿಯು ತನ್ನ ಮಾರ್ಗವನ್ನೇ ಅನುಸರಿಸುವುದು ಆತನ ಸ್ವಾತಂತ್ರ್ಯವನ್ನು ಪ್ರಕಟಿಸುವುದು. ಭಾರತಖಂಡದಲ್ಲಿ ನಡೆದ ಒಂದು ಕಥೆಯನ್ನು ಪ್ರಾರಂಭಿಸುವಾಗ

ಉತ್ತರದಲ್ಲಿಯ ಹಿಮಾಚಲಪರ್ವತವನ್ನೂ ಇತರದಿಕ್ಕುಗಳಲ್ಲಿರುವ ಸಮುದ್ರವನ್ನೂ ಕ್ರಮವಾಗಿ ಬಣ್ಣಿಸಿ, ರಾಜನ ಪರಿಚಯ ಮಾಡಿಸುವುದಕ್ಕೆ ಮೊದಲು 'ಬನವನ್ನೂ ಕೈವೊಲಗಾವ ಪಾಮರಿಯರನ್ನೂ ಮಾರ್ಗಪ್ರಪಾಕಾಮಿನೀಜನವನ್ನೂ ಕೋಟೆ ಯನ್ನೂ ವರ್ತಕರಂಗಡಿಗಳನ್ನೂ ವಾರಾಂಗನಾವಾಟವನ್ನೂ ರಾಜೇಂದ್ರಾಲಯ ವನ್ನೂ' ಶಾಸ್ತ್ರೀಯವಾಗಿ ವರ್ಣಿಸಿ ಅನೇಕ ಕವಿಗಳು ತಮ್ಮ ಶಬ್ದಪಾಂಡಿತ್ಯವ ನ್ನಷ್ಟೂ ಮೆರೆಯುವರು. ಅವರ ಕಾವ್ಯಗಳನ್ನು ಓದುವಾಗ ಅನೇಕ ವೇಳೆ ಕಥೆಗಾಗಿ ವರ್ಣನೆಗಳಿರುವುದಕ್ಕಿಂತಲೂ ವರ್ಣನೆಗಳಿಗಾಗಿ ಕಥೆಯಿರುವುದೆಂದು ಭ್ರಮೆಯಾಗು ವುದು. ಅವರು ಕಾವ್ಯಗಳಲ್ಲಿ ಇಂತಿಂತಹ ವರ್ಣನೆಗಳಲ್ಲಿ ಇಂತಿಂತಹ ಅಲಂಕಾರ ಗಳನ್ನು ಉಪಯೋಗಿಸಬೇಕೆಂದು ಇಟ್ಟುಕೊಂಡಿರುವಂತೆಯೂ ಅನುಮಾನವಾಗು ವುದು. ಅವರು ಸರ್ವಸಾಮಾನ್ಯವಾಗಿ ಪರ್ವತಸಮುದ್ರವರ್ಣನೆಗಳಲ್ಲಿ ಉತ್ಪ್ರೇಕ್ಷಾ ಲಂಕಾರವನ್ನೂ ಪುರವರ್ಣನೆಯಲ್ಲಿ ಆವೃತ್ತಿಪರಿಸಂಖ್ಯಾಲಂಕಾರಗಳನ್ನೂ ರಾಜ ವರ್ಣನೆಯಲ್ಲಿ ವ್ಯತಿರೇಕ ವಿರೋಧಾಭಾಸಾಲಂಕಾರಗಳನ್ನೂ ಇನ್ನಿತರ ಕಡೆಗಳಲ್ಲಿ ಇನ್ನಿತರ ಅಲಂಕಾರಗಳನ್ನೂ ಪ್ರಯತ್ನಪೂರ್ವಕ ಹಾಕುವುದರಿಂದ ಕಾವ್ಯದ ಸಹಜತ್ವವು ಕೆಟ್ಟು ಅನೇಕ ವೇಳೆ ವಾಚಕರ ಕಿವಿಗೆ ಅದು 'ಹಾಡಿದ ಹಾಡಾಗಿ' ಬೇಸರವನ್ನುಂಟುಮಾಡುವುದು. ಈ ಪೂರ್ವಪದ್ಧತಿಯನ್ನು ಬಿಟ್ಟು ಹೊಸ ಮಾರ್ಗವನ್ನು ಕಲ್ಪಿಸಿಕೊಂಡು ರತ್ನಾಕರನು ತನ್ನ ಅತುಲವಾದ ಸಾಮರ್ಥ್ಯವನ್ನು ತೋರಿರುವನು.

ರತ್ನಾಕರನ ವರ್ಣನೆಗಳು ಸ್ವಾಭಾವಿಕವಾಗಿವೆ. ಆತನು ತಾನು ವರ್ಣಿಸುವ ವಸ್ತುವನ್ನು ತನ್ನ ಮನಸ್ಸಿನಲ್ಲಿ ಮೊದಲು ಚಿತ್ರಿಸಿ ಅದರ ಪ್ರತಿಬಿಂಬವು ವಾಚಕರಿಗೆ ಆಗುವಂತೆ ಅದನ್ನು ಸಹಜವಾದ ಮಾತುಗಳಿಂದ ಸರಿಯಾಗಿ ಬಣ್ಣಿಸುವನು. ಆದುದರಿಂದ ಆ ವರ್ಣನೆಗಳನ್ನು ಓದುವಾಗ ಅದೇ ಚಿತ್ರವು ನಮ್ಮ ಕಣ್ಮುಂದೆ ಜೀವ ಕಳೆಸಹಿತವಾಗಿ ನಿಂದಂತೆ ಭಾಸವಾಗುವುದು. ಚಿತ್ರಿಕನು ಒಂದು ಚಿತ್ರವನ್ನು ಬರೆದು ಅದಕ್ಕೆ ಬಣ್ಣವನ್ನು ಕೊಟ್ಟು, ಅದನ್ನು ದೂರದಿಂದ ಓರೆಗಣ್ಣಿಂದ ನೋಡಿ ಸರಿಯಾಗಿ ಬಾರದ ಭಾಗಗಳನ್ನು ಶೋಧಿಸಿ ಅದನ್ನು ತಿದ್ದುವಂತೆ ಈ ಕವಿಯೂ ಒಂದು ಕ್ರಮವಾಗಿ ಹೇಳುತ್ತ ಹೋಗುವಾಗ ಅದು ಆತನಿಗೆ ಮೆಚ್ಚದಿದ್ದರೆ, ಆ ಮಾತು ಹೋಗಲೆಂದು ಬೇರೊಂದು ವಿಧದಲ್ಲಿ ಅದನ್ನೇ ಬಣ್ಣಿಸಿ ತನ್ನ ಶಬ್ದಚಿತ್ರವನ್ನು ಸರಿಗೊಳಿಸುವನು. ಆದುದರಿಂದ ಅವು ಸುಂದರವಾಗಿಯೂ ದೋಷರಹಿತ ವಾಗಿಯೂ ಇದ್ದು ತಮ್ಮ ಸಹಜತ್ವದಿಂದಲೇ ವಾಚಕರ ಮನಸ್ಸನ್ನು ಮೋಹಿಸುವುವು.

ಆಸ್ಥಾನದಲ್ಲಿ ಸಿಂಹಾಸನವನ್ನು ಅಲಂಕರಿಸಿದ ಭರತೇಶನ ಚಿತ್ರವು ಹೊಸ ಕಾದಂಬರಿಗಳಲ್ಲಿಯ ಚಿತ್ರಕ್ರಮವನ್ನು ಹೋಲುವುದು. ಆತನು ತನ್ನ ಎಡಗಾಲನ್ನು

ಗದ್ದುಗೆಯ ಮೇಲೆ ಮಡಿದು ಕೆಳಗೆ ಹಾವುಗೆಯಲ್ಲಿ ಪೆಂಡೆಯದ ಬಲಗಾಲನ್ನೂರಿ ಕೂತ ರಾಜಶ್ರೀಯಿಯನ್ನೂ ಬಲಗೈಯಲ್ಲಿರುವ ಹೊನ್ನೊರೆಯ ಕಠಾರಿಯನ್ನು ಕೆಲ ಕೂರಿ ಕೂತ ವೀರಸಿರಿಯನ್ನೂ ರತ್ನಕಿರೀಟವನ್ನು ಧರಿಸದೆ ತುರುಬನ್ನು ಅದರ ತುದಿ ಗಾಣುವಂತೆ ತೆಕ್ಕೆಯಲ್ಲಿ ಕಟ್ಟಿಕೊಂಡ ವಿಳಾಸವನ್ನೂ ಉಬ್ಬಿ ಬೆಳೆದು ಬಾಗದೆ ರೇಖೆಗೆ ಬಂದ ಹುಬ್ಬಿನಂತೆಸೆವ ಮೀಸೆಯನ್ನೂ ಹರಿಸೆಯ ಬಿತ್ತಿನಂತೆ ಕಾಣಿಸುವ ಆತನ ಗಡ್ಡವನ್ನೂ ಆತನ ಕೊರಳಲ್ಲಿದ್ದ ತೋರ ಮುತ್ತಿನ ಹಾರವನ್ನೂ ಆತನ ಕಿವಿಯ ಚೌಕುಳಿಯನ್ನೂ ಕೈಯ ಕಡಗವನ್ನೂ ಆಭರಣಗಳ ನಡುವೆ ನಕ್ಷತ್ರ ಮಂಡಲದ ಮಧ್ಯದ ಚಂದ್ರನಂತಿರುವ ಆತನ ಮುಖವನ್ನೂ ಆ ಮುಖದ ಮೇಲಿನ ಮಂದಹಾಸವನ್ನೂ ಹೃದ್ಯವಾಗಿ ವರ್ಣಿಸಿದ ಮೇಲೆ ಆ ರೂಪಿನ ಮನೋಹರತೆಯು ಸ್ತ್ರೀಪುರುಷರ ಎದೆಗೆ ಮುಟ್ಟುವಂತೆ ಹೀಗೆ ಬಣ್ಣಿಸಿರುವನು.

ಹೆಂಗಳ ರೂಪು ಗಂಡರಿಗೆ ಗಂಡರ ರೂಪು । ಹೆಂಗಳ ಸೋಲಿಪುದೆಂಬ ॥
ಬಾಂಗಲ್ಪವವನ ಚೆಲ್ವಿಕೆ ಗಂಡು ಪೆಂಗಳ । ಕಂಗಳ ಸೆರೆವಿಡಿದಿಹುದು ॥

ನಿಟ್ಟಿಸಿದರೆ ಮುತ್ತಮುದುಕಿಗಾದರು ಜುಮ್ಮು । ದಟ್ಟಿಸುತಿಹುದು ರೂಪವನ ॥
ಬಟ್ಟಜವ್ವನೆಯರಂತಿಂತಾದರೆಂದು ಬಾ । ಯ್ಬಿಟ್ಟೆಸ್ನು ನುಡಿಯಲದೇಕೆ ॥

ನೋಡುವವರಿಗೆ ಕಣ್ಣಲಸಿಕೆಯಿಲ್ಲ ಕೊಂ । ಡಾಡುವವರಿಗಾಸರಿಲ್ಲ ॥
ನೋಡುವನಿತಕೆ ಕೊಂಡಾಡುವನಿತಕಿಚ್ಚೆ । ಮಾಡುವ ಸೊಬಗಿನೊಳೆಸೆದಾ.

ಆ ಮೇಲೆ ಕುಸುಮಾಜಿಯಿಂದ ಆತನನ್ನು ವರ್ಣನಾಶಾಸ್ತ್ರಕ್ಕನುಸಾರವಾಗಿ ಶಿಖದಿಂದ ನಖದ ವರೆಗೆ ಬಣ್ಣಿಸುವಾಗಲೂ ಚರ್ವಿತಚರ್ವಣಗಳಾಗಿರುವ ಮಾತುಗಳನ್ನು ದೂರವಿಟ್ಟು ಹೊಚ್ಚಹೊಸದಾದ ಭಾವನೆಗಳನ್ನುಪಯೋಗಿಸಿ ಮುದ್ದುಮುದಾಗಿ ಬಣ್ಣಿಸಿರುವನು. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡದೆ ಇರಲಾರೆವು.

ನಗೆಯ ಚೆಲ್ವಿಕೆಯ ಮೋಹನಕಾಂತಿರಸವನು । ಮೊಗವೆತ್ತಲಲೆದುದತ್ತತ್ತ ॥
ಮೊಗೆದು ಮೊಗೆದು ಚೆಲ್ಲುವಂತೆ ರಾಯನ ಮುದ್ದು । ಮೊಗವೊಪ್ಪುತಿಹುದರಗಿಳಿಯೆ ॥

ಚಿತ್ತದಿಚ್ಚೆಯ ಕರ್ಣದೊಳು ಪೆಂಗಳೊರೆವಾಗ । ಪತ್ತಿದ ಬೆಳುನಗೆಯಂತೆ ॥
ಚಿತ್ತಜರೂಪನ ಕಿವಿಗಳೊಳೆಸೆವುವು । ಮುತ್ತಿನ ಚೌಕುಳಿ ಗಿಳಿಯೆ ॥

ಬೆಡಗಿನ ಪೆಂಗಳು ಸರಸಕೇಕಾಂತದೊ । ಳೆಡಬಲದೊಳು ನಿಂದು ನೃಪನ ॥
ಮುಡುಹ ಪಿಡಿದು ಜಡಿದುಯ್ಯಲಾಡುವರಾಗಿ । ಮುಡುಹಿಪ್ಪ ಕಠಿಣವಾಗಿಹುದು ॥

ಅರಲಂಬಗರಸ ನಿಮ್ಮಡಿ ಚೆಲ್ವನವನ್ನೈದು । ಸರಲನಾಂತೊಡೆ ಹತ್ತು ಸರಲಾ ॥
ದೊರೆ ಪಿಡಿವುದು ಮೋಡಿಯೆನೆ ಕರಗಳ ಹತ್ತು । ಬೆರಳೆಸೆದುವು ಸರಳದೊಳು ॥

ಮರೆಯೇಕೆ ಕೇಳೊಮ್ಮೆ ನೃಪನ ತಿಳ್ವಸಿರಿನ | ಕಿರುರೋಮರಾಜಿಯ ಕಂಡು ||
ಇರುಹಿನ ಸಾಲೆಂದು ತೊಡೆದೆನದಕೆ ರಾಯ | ನುರೆ ನಕ್ಕ ನಾನೂ ನಾಣ್ಚಿದೆನು.

ಅವುಗಳಲ್ಲಿ ಮೊದಲನೆಯ, ಎರಡನೆಯ ಮತ್ತು ನಾಲ್ಕನೆಯ ಪದ್ಯಗಳಲ್ಲಿಯ ಉತ್ಪ್ರೇಕ್ಷೆಯ ಚಮತ್ಕಾರವೂ, ಮೂರನೆ ಪದ್ಯದ ಹೇತ್ವಲಂಕಾರದ ಸರಸತೆಯೂ ಕೊನೆಯ ಪದ್ಯದ ಭ್ರಮಾಲಂಕಾರದ ಬೆಡಗೂ ವಾಚಕರಿಗೆ ಆಹ್ಲಾದವನ್ನುಂಟು ಮಾಡದಿರವು.

ಭುಜಬಲಿಯಾದ ಮದನನ ಆಸ್ಥಾನವರ್ಣನೆಯನ್ನು ಓದುವಾಗ ವಾಚಕರಿಗೆ ಕಬ್ಬಿಗರ ಕಾವದ ನನೆವಿಲ್ಲನ ಓಲಗದ ನೆನಪಾದೀತು. ಆ ಎರಡು ವರ್ಣನೆಗಳಲ್ಲಿಯೂ ಕವಿಗಳ ಕಲ್ಪನಾಕೌಶಲವು ಬಹಳವಾಗಿ ಕಾಣುವುದು. ಇಬ್ಬರು ಕುಶಲರಾದ ಕವಿಗಳು ಬರೆದ ಒಂದೇ ಚಿತ್ರವನ್ನು ತುಲನೆಮಾಡಿ ಅವರವರ ಜಾಣ್ಮೆಯನ್ನು ತಿಳಿಯುವುದಕ್ಕೆ ವಿಚಾರಪರರಾದ ವಾಚಕರು ಇಷ್ಟಪಡದಿರರು. ಕಬ್ಬಿಗರ ಕಾವದ ಕಾವನೋಲಗದ ಬಣ್ಣನೆ ಈ ತೆರನಾಗಿದೆ.

ತೊಡೆಯೊಳ್ ಕಾದಲೆಯಿರೆ ಬಲ |
ಗಡೆಯಲ್ಲಿ ಬಸಂತನೊಲವಿನಿಂ ಕುಳ್ಳಿರೆ ತ |
ನ್ನೆಡದೆಸೆಯೊಳ್ ಸೊಬಗೆಯಿರಿರೆ |
ಕಡುಚೆಲ್ವಂ ಪಡೆವನಾವಗಂ ನನೆಗಣೆಯಂ ||

ಪರಿಪರಿಯ ರನ್ನದೊಡವಿನ |
ಬೆರಕೆಯ ಬೆಳಗಡರೆ ಮೆಯ್ಯನಗ್ಗದ ಪೆಂಡಿರ್ |
ನೆರೆದಲರ ಚವರಮಂ ಬಿ |
ತ್ತರದಿಂ ಬೀಸುತ್ತುಮಿರ್ದರೆರಡುಂ ಕೆಲದೊಳ್ ||

ನಡೆ ಕೆಲಕಂಚೆ ಬಿನ್ನವಿಸು ಬೇಗದೆ ಕೋಗಿಲೆ ಪಾಡಿನೋಜೆಯಂ |
ಗಡಣಿಸು ತುಂಬಿ ಸೋಗೆ ದನಿಯೆತ್ತದಿರೊಯ್ಯನೆ ಬಂದು ಕುಳ್ಳಿರೀ |
ಎಡೆಗೆ ಬಸಂತಯೆಂದು ಗಿಳಿಗಳ್ ಕಡುಪಿಂ ನಡೆತಂದು ಸುತ್ತಲುಂ |
ಪಡಿಯರರಾಗಿ ಚಪ್ಪರಿಪುವೋಲಗದೊಳ್ ಸಲೆ ಕರ್ವುವಿಲ್ಲನಾ ||

ತೊಲಗದೆ ಪಕ್ಕದೊಳ್ ನಲಿವ ಕನ್ನಡ ಪಕ್ಕಿಗಳೋಳಿ ಬಿಂಕದಿಂ |
ಬಲಗೆಲದೊಳ್ ನೆಗಳ್ತೆವಡೆದಿರ್ಪರಸಂಚೆಯ ಪಿಂಡು ಬೀಟವ |
ಗ್ಗಲಿಸಿದ ಜಕ್ಕವಕ್ಕಿಗಳವಂಗಡಮಿಂಬರಿದಿರ್ದ ಗಂಡುಗೋ |
ಗಿಲೆಗಳ ತಂಡವೊಪ್ಪೆ ಬಗೆಗೋಲಗವೊಪ್ಪಿದುದಂದು ಕಾವನಾ ||

ಈಗ ರತ್ನಾಕರನು ಬರೆದ ಈ ಚಿತ್ರವನ್ನು ನೋಡಿರಿ.

ಅರಲಸಿಂಹಾಸನದಗ್ರದೊಳಂಚೆಯ | ಕೊರಳತುಪ್ಪುಳುಗದ್ದುಗೆಯೊಳು ||
ನರಸುರನಾಗಲೋಕದ ಮೋಹನಾಂಗವೆ | ಪುರುಷರೂಪಾಂಕವೊಲೆಸೆದಾ ||

ಕಪ್ಪಿನ ರೇಖೆಯ ತೆಗೆದಂತೆ ತೋರುವ | ತುಪ್ಪುಳುಮೀಸೆ ನುಣ್ಬವರಿ ||
ಉಪ್ಪರಜವ್ವನೆಯರು ಕಂಡು ಸೋಲ್ತು ಬಂ | ದಪ್ಪುವೊಲೆಸೆದನಾ ಮದನಾ ||

ಪಚ್ಚೆಯ ಪ್ರತಿಮೆ ಪ್ರಾಣಂಬೆತ್ತು ನವರತ್ನ | ದಚ್ಚದೊಡಿಗೆ ತೊಟ್ಟು ತೋರ್ಪ ||
ಮೆಚ್ಚಿನೊಳಿರ್ದನಾ ಕಾಮದೇವನು ನೋಳ್ಪ | ರಚ್ಚರಿವಡುವ ಚೆಲ್ವಿನೊಳು ||

ಕರ ಸೊಬಗಾಗಿ ಸಿಂಗರಿಸಿದ ವಾರಸಾಂ | ದರಿಯರಿದ್ದರು ಸಭೆ ತುಂಬಿ ||
ಸರಸಗಾನವ ಹಾಡುತಿದ್ದರು ವೀಣೆ ಕಿ | ನ್ನರಿಮುಟ್ಟಿ ಕೋಮಲಾಂಗಿಯರು ||

ಗಾನ ಕೇಳುತ ತನ್ನ ಸಖರೆಂಟು ಮಂದಿ ಸಂ | ಧಾನಿಪರ್ಥಕೆ ಮೆಚ್ಚಿ ನಗುತ ||
ಮಿಾನಾಂಕನಿರ್ದನು ಮಲಗ ತಾನೊರಗಿ ಸು | ಮ್ಮಾನದೊಳ್ನೀಡಿ ಪಾದಗಳಾ ||

ಕೋಗಿಲಪಿಡಿದರಗಿಳಿಗಳ ಪಿಡಿದನು | ರಾಗದಿಂದಂಚೆಯ ಪಿಡಿದು ||
ಸೋಗೆಯ ನವಿಲನಾಂತಬಲೆಯರಿರ್ದರು | ಪೂಗೋಲನಾಸ್ಥಾನದಲ್ಲಿ ||

ಮಲಯಮಾರುತ ಚರಣವನೊತ್ತುತಿರೆ ಹಸ್ತ | ತಳವ ಮಂದಾನಿಲನೊತ್ತೆ ||
ಕೆಳೆಯರ ನುಡಿಗೇಳುತಿದಿರ ಮಂತ್ರಿಯ ನೋಡು | ತೊಲವಿನೊಳಿರ್ದನಾ ಮದನಾ ||

ಸುಳಿಯದಿರಬಲೆ ಸೋಂಕದಿರೆಲೆ ಪ್ರಬಲೆ ನಿ | ನ್ನೊಳು ಮಾತು ಸಾಕು ಕಂಕಣದ |
ಬಳೆಗಳ ದನಿದೋರದಿರಿ ಪೆಂಗಳೆಂದಲ್ಲಿ | ಕಳಕಂಠ ಸೊಬಗು ತೋರಿದನು ||

ಅಗ್ಗಳದೇವನು ಚಂದ್ರಪ್ರಭಾಪುರಾಣದಲ್ಲಿ ಶ್ರೀಕಾಂತಾದೇವಿಯಿಂದಾಡಿಸಿದ

ನಂದನನುತ್ಸಂಗದೊಳಿ |
ರ್ದೊಂದ್ಯೆದೆರಡೊಂಬತೆಂದು ತೊದಳಿಸೆವಿನವೋ ||

ರೊಂದನೆ ಕುಡುವೆರಲಿಂದಮು |
ದೆಂದೆಣಿಸುಗುಮೆನ್ನ ಕೊರಲ ಹಾರದ ಮುತ್ತಂ ||

ಎಂಬ ಬಾಲಲೀಲಾಭಾವನೆಯ ಸುಖವನ್ನು ರತ್ನಾಕರನು ಭರತೇಶನ ಈ ಕೆಳಗಣ ಒಂದು ಸಂಸಾರಚಿತ್ರದಿಂದ ವಾಚಕರ ಕಣ್ಮುಂದೆ ಕಾಣಿಸಿ ಅವರನ್ನಾನಂದಗೊಳಿಸು ವನು.

ತೊಡೆಯ ಮೇಲಿಟ್ಟು ಮಗನ ನೋಡಿ ಮಂಡೆಯ | ತಡಹುವ ಮುತ್ತುಕೊಡುವನು
ಒಡನೆತ್ತಿಕೊಂಡೆದೆ ತುಂಬಲಪ್ಪುವನು ಬೊ | ಟ್ಟಿಡುವನು ಫಣೆಯೊಳಾ ನೃಪತಿ ||

ಮಿಾಸೆಯ ತಿದ್ದುವ ಗಲ್ಲವ ತಡಹಿ ವಿ । ಳಾಸದಿ ನಗುವನಾ ತರಳಾ ॥
ಆ ಸುಕುಮಾರನ ಮೊಳೆವಲ್ಲ ಕಂಡಣ್ಣ । ಲೇಸು ಲೇಸೆಂಬನಾ ತಂದೆ ॥
ಆದಿತೀರ್ಥಂಕರ ಯೆನ್ನರ್ಕಕೀರ್ತಿಯೆಂ । ದೋದಿಸುವನು ತನ್ನ ಮಗಗೆ ॥
ಆದಿಂಕರನೆಂಬನಾ ಬಾಲನದಕೆ ವಿ । ನೋದದಿ ನಗುವನಾ ರಾಯಾ ॥
ಅಣ್ಣ ಚಿದಂಬರಪುರುಷಯೆನ್ನೆಂದಾಗ । ಬಣ್ಣಿಸಿ ಕಲಿಸಿಕೊಡುವನು ॥
ಚಿಣ್ಣ ಚಿಂಬರಪೂಸಯೆಂಬನದಕೆ ಹೊಟ್ಟೆ । ಹುಣ್ಣಾಗೆ ನಗುವನಾ ಚಕ್ರಿ ॥
ಗುರು ನಿರಂಜನಸಿದ್ಧಾಯೆನ್ನಪ್ಪಾಯೆಂದು ಭೂ । ವರ ತನ್ನ ಮಗನಿಗೋದಿಸುವಾ ॥
ತರಳನದಕೆ ನಿಂಜಸಿದ್ಧಯೆಂಬನು ರಾಯ । ಮುರಿದಪ್ಪಿ ನಗುತ ಚುಂಬಿಸುವಾ ॥

ಮಿಕ್ಕ ಕವಿಗಳ ಉತ್ಪ್ರೇಕ್ಷಾಮಯವಾದ ಸಮುದ್ರವರ್ಣನೆಯನ್ನೋದಿ ಬೇಸತ್ತ ವಾಚಕರು ಈ ಕವಿಯ ನೈಸರ್ಗಿಕಸೌಂದರ್ಯದಿಂದೊಪ್ಪುವ ಈ ಕೆಳಗಣ ಸಮುದ್ರವರ್ಣನೆಯನ್ನು ಓದಿ ಆನಂದಪಡಬಹುದು.

ಬಳಿಕ ಮೂರನೆಯ ಜಾವದೊಳವನೀಶನು । ನಳಿನಾಕ್ಷಿಯರು ಸಹವಾಗಿ ॥
ನೆಲಮಾಡವೇರಿ ಮೇಲ್ಮನೆಯೊಳು ಕುಳಿತು ಪೆಂ । ಗಳಿಗಂಬುಸಿಧಿಯ ತೋರಿದನು ॥
ಕಡಲ ಮುನ್ನರಿಯದ ಪೆಂಗಳಚ್ಚರಿವಟ್ಟು । ನಿಡುಬೆರಳಿಟ್ಟು ನಾಸಿಕಕೆ ॥
ಮುಡಿಯೊಲೆದೊಲೆದು ನೋಡಿದರದರೊಂದು ಬ । ಲ್ಗಡಣೆಗೆ ಬಗೆಯೊಳು ಮೆಚ್ಚಿ ॥
ದಿಟ್ಟಿಗೆ ಮಿಗೆ ಹಾಯ್ದು ತೋರ್ಪ ಸಮುದ್ರದ । ಕಟ್ಟಳಲಿಗೆ ಚೋದ್ಯವಟ್ಟು ॥
ಅಟ್ಟಹಾಸವ ಮಾಡುತೊಬ್ಬರೊಬ್ಬರ ಮೈಯ । ತಟ್ಟುತ ತೋರಿ ನುಡಿದರು ॥
ಅಟ್ಟುವ ತೆರೆಯು ಮುಂದೋಡುವ ತೆರೆಯು ಪೆ । ಬೆಟ್ಟದಂತೇಳ್ವ ತೆರೆಗಳಾ ॥
ತೊಟ್ಟನೆ ಬಯಲಹ ತೆರೆಗಳನವರು ಕ । ಣ್ಣಿಟ್ಟು ನೋಡಿದರರತಿವಡುತ ॥
ಎಡಗುತ್ತಿಗಳನಲ್ಲಿಗಲ್ಲಿ ನಿಂದದ್ರಿಯ । ನಿಡುಗಲ್ಲುಗಳನದರೊಳಗೆ ॥
ಎಡೆಯಾಡುತಿಹ ದೋಣಿ ದುಗ್ಗಿ ಕಪ್ಪಲು ದೊಡ್ಡ । ಹಡಗುಗಳಿರವ ನೋಡಿದರು ॥
ತುಂತುರು ತೆರೆ ನೊರೆ ಸುಳಿ ಘುಳುಘುಳುರವ । ತೂಂಕಿಟ್ಟು ಹೊಳೆವ ವಾರಿಧಿಯಾ ॥
ಕಾಂತೆಯರೆಲ್ಲ ರೀಕ್ಷಿಸಿದರು . . . . . . . . . . . . . ॥

ಶಯ್ಯಾಗೃಹದಲ್ಲಿ ಮಲಗಿದ ಭರತೇಶನನ್ನು ಎಚ್ಚರಗೊಳಿಸುವ ರತ್ನಾಕರನ ಉಪ್ಪವಡಹಾಡೂ ಇಂದುಮತಿಯ ಸ್ವಯಂವರಕ್ಕೆ ಹೋದ ಅಜನೃಪನನ್ನು ಮುಂಜಾನೆ ಜಾಗರಗೊಳಿಸುವ ಪ್ರಭಾತಗೀತವೂ ಕವಿತಾಚಾತುರ್ಯದಲ್ಲಿ ಸಮುತೂಕವಾಗಿದೆ. ಕಾಳಿದಾಸನ ವರ್ಣನೆಯ ಛಾಯೆಯನ್ನು ಕವಿಯು ಹೃದಯದೊಳಗಿಟ್ಟುಕೊಂಡು ಬರೆದರೂ ರತ್ನಾಕರನ ಹಾಡಿನಲ್ಲಿ ಭಾವನಾಸ್ವಾತಂತ್ರ್ಯವು

ಪ್ರತ್ಯೇಕವಾಗಿ ಕಾಣುವುದು. ಕಾಳಿದಾಸನ ಗೀತವು ಪ್ರಖ್ಯಾತವಾಗಿದ್ದುದರಿಂದ ರತ್ನಾಕರನ ಹಾಡನ್ನು ಮಾತ್ರ ಇಲ್ಲಿ ಕೊಡುವೆವು.

ಅರುಹನ ನೆನಹಿಂದ ಪಾಪ ತೊಲಗುವಂತೆ | ಧರೆಯೆಂಧಕಾರ ಜಾರುತಿದೆ ||
ಗುರುಭಕ್ತಿ ತೋರುವಂತರುಣೋದಯ ತೋರಿ | ತರಸಯೆಂದೆತ್ತಿ ಹಾಡಿದರು ||

ತಾರೆ ಮಸುಳುತಿವೆ ತಣ್ಣತಣ್ಣನೆ ಮಂದ | ಮಾರುತ ಬಂದು ತೀಡುತಿದೆ ||
ನಾರಿಯು ನಳಿತೋಳ ತಕ್ಕೆಯಿಂದೇಳೆಲೆ | ವೈರಿಭೂಭುಜತಮೋಭಾನು ||

ಅರುಣೋದಯವಾಗಿ ಕಿರಣೋದಯವಾಯ್ತು | ತರಣಿ ತೋರದ ಮುನ್ನ ನಿನ್ನ ||
ಸುರುಚಿರಾಂಗವ ತೋರಿ ಜಗವನುದ್ಧರಿಸೆಲೆ | ಪುರುನಾಥನಗ್ರಕುಮಾರಾ ||

ಚಿಂತೆಹೊದ್ದದ ದೀರ್ಘರಾಜ್ಯವನಾಳ್ವ ಸಿ | ಶ್ಚಿಂತವೈಭವನೆ ನೀನೇಳು |
ಚಿಂತಿಸಿದುದ ಸರ್ವಜನಕೀವ ನೃಪವೇಷ | ಚಿಂತಾಮಣಿಯೆ ಮೈದೋರು |

ಪಗೆಯಿಲ್ಲದಿಳೆಯನಾಳುತ ಬಹು ಸತಿಯರ | ಮಿಗೆ ಹುರುಡಳಿದಾಳ್ದ ನೀರಾ ||
ಹಗಲಿರುಳೆದೆಬೆಂದು ರಾಜ್ಯವನಾಳ್ವರ | ನಗುತೇಳು ರಾಜಮನೋಜಾ |

ಭೋಗಕೆ ಮರುಳಾಗಿ ಧರ್ಮವ ಮರೆದಧೋ | ಭೋಗಕೆ ಬೀಳ್ವರ ನಗುತ ||
ಭೋಗದೊಳಿದ್ದೂ ಯೋಗಿಗಳಂತೆ ಸುಖಿಯಹ | ಭೋಗಿಗಳರಸ ನೀನೇಳು ||

ರುದ್ರಭಟ್ಟನು ಜಗನ್ನಾಥವಿಜಯದಲ್ಲಿ, ಹವಿರ್ಭಾಗದಿಂದ ವಂಚಿಸಲ್ಪಟ್ಟ ದೇವೇಂದ್ರನು ಕೋಪದಿಂದ ಗೋಕುಲದ ಮೇಲೆ ಸುರಿಸುವ ಅಕಾಲವೃಷ್ಟಿಯನ್ನು ವರ್ಣಿಸಿದ ಕ್ರಮವನ್ನೂ ಭರತೇಶನು ತನ್ನ ರಾಜಧಾನಿಗೆ ಬಾರದಂತೆ ಚಿಲಾತರಾಜನು ಕಾಲಮುಖಮೇಘಮುಖಗಳೆಂಬ ತನ್ನ ಕುಲದೈವಗಳಿಂದ ಕರೆದ ಮಳೆಯನ್ನು ರತ್ನಾಕರನು ವರ್ಣಿಸಿದ ಪರಿಯನ್ನೂ, ಅವು ಸಮಾನಚಿತ್ರಗಳಾದುದರಿಂದ, ತುಲನಾತ್ಮಕದೃಷ್ಟಿಯಿಂದ ಪರಿಶೀಲಿಸಿ ರುದ್ರಭಟ್ಟನ ತ್ವರಿತದ ಚಿತ್ರವನ್ನೂ ರತ್ನಾಕರನ ನಿಧಾನದ ಚಿತ್ರವನ್ನೂ ವಾಚಕರು ಮೆಚ್ಚಬಹುದು.

ಮರನಿಂ ಮರನಂ ಮೋದುವ | ಗಿರಿಯಂ ಗಿರಿಯಿಂದವೊಡೆವ ಕಡಲಂ ಕಡಲೊಳ್
ಬೆರಸುವ ವಿಳಯಾನಿಲನೆನೆ | ಭರದಿಂ ಕಡುಗಾಳಿ ಬೀಸಿದುದು ಗೋಕುಲದೊಳ್ ||

ಗಾಳಿಯ ಪೊಯ್ಲಿಂದಂ ದ್ಯುತಿ | ಮಾಲೆ ಕೆರಳ್ದೊಡನೆ ನೆಗಳ್ದ ತಮದೊಡ್ಡೆನಲಾ |
ಭೀಳತೆವೆತ್ತುದು ನೀಳ ಘ | ನಾಳಿ ನಿರೀಕ್ಷಿಸೆ ವೃತಾಂಬರಂ ಘನಪದದೊಳ್ ||

ಸಿಡಿಲುಂ ಮಿಂಚುಂ ಮೊಳಗುಂ | ಗಡಣಿಸಿ ಶುಂಡಾಲಹಸ್ತನಿಭಧಾರೆಯೊಳಂ ||
ದೊಡಗೂಡಿ ಶಿಲಾವಳಿಗಳ್ | ಕೆಡೆಯೆ ಘನಾಘನಘಟಾಳಿ ಕರೆದುದು ಮಳೆಯಂ ||

[ಶ್ರೀ ಜಗನ್ನಾಥವಿಜಯ]

ಕಾಳರಾಕ್ಷಸರು ಕಾಳಗಕೆಂದು ಮೇಲೊಡ್ಡಿ । ಪಾಳೆಯ ಬಿಟ್ಟರೆಂಬಂತೆ ॥
ಕಾಲಮೇಘಗಳೊಡ್ಡು ಕವಿದು ತೋರಿತು ಕಡೆ । ಗಾಲದ ಭಯವ ಸೂಚಿಸುತ ॥
ನೀಲಗಿರಿಗಳು ನೆಗೆದು ಚರಿಸುವುವೊ ತ । ಮಾಲಲತೆಗಳು ಹಬ್ಬಿದುವೊ ॥
ಭೀಳಾಂಧಕಾರದ ಧಾಳಿಯೊಯೆನೆ ಮೇಘ । ಜಾಲ ಮೋಹರಿಸಿತಿಳೆಯೊಳು ॥
ಮೊಗಸಿತು ಚಂದ್ರಸೂರ್ಯರಿಗೆ ಮುಸುಕು ಕಾರ । ಮುಗಿಲು ಸುತ್ತಲು ಪಸರಿಸಿತು ॥
ಹಗಲು ಕತ್ತಲೆ ಕವಿದಂತಾಯ್ತು ದುಷ್ಟ ದೈ । ವಗಳ ವಿಗುರ್ವಣೆಯಿಂದ ॥
ಮುಂಚೆ ಕಾರ್ಮುಗಿಲೊಡ್ಡಿ ಬಹುದೆಂದು ದೈವಗ । ಳಂಚೆನೊಳ್ಳಿಂದು ಸೂಚನೆಗೆ ॥
ಕುಂಚವ ಬೀಸುತಿದ್ದರೊಯೆನೆ ಚೆಲ್ವಾಗಿ । ಮಿಂಚು ಮಿಂಚಿದುವಲ್ಲಿಗಲ್ಲಿ ॥
ಪಂಚವರ್ಣದ ಸುರಚಾಪಕೆ ಹೊಳೆವೆಳೆ । ಮಿಂಚಿನ ಹೆದೆಯ ಸಂಗೊಳಿಸಿ ॥
ಹೊಂಚಿ ದೈವಗಳು ಮಿಡಿದು ನೋಡಿದಂತೆ ಪ । ಳಂಚಿ ಮೊಳಗಿತಾಗ ಮೊಳಗು ॥
ನೂರಾರು ಪೆಟಲುಗುಂಡುಗಳ ಜೋಡಿಸಿ ಕಂಚು । ಗಾರರ ಪಸರಕಿಟ್ಟಂತೆ ॥
ಸೀರಿ ಸಿಡಿಲು ಬೀಳುತಿವೆಯೆಡಬಲದೊಳ । ಗೀ ರೂಢಿಯೇನೆಂದು ನೆನೆದಾ ॥
ಕೆರೆ ಬಾವಿ ಹಳ್ಳ ಕೊಳಗಳು ಬೆಂಚೆಗಳು ಹೆ । ದ್ದೊರೆ ಹೊಳೆ ತಗ್ಗುತಿಟ್ಟೆಲ್ಲ ॥
ಮರೆಸಿಯೇಕಾರ್ಣವವಾಯ್ತು ದೈವಗಳುಬ್ಬಿ । ಕರೆವುತಿದ್ದುವು ಮತ್ತು ಮಳೆಯಾ.

[ವೃಷ್ಟಿನಿವಾರಣ ಸಂಧಿ.]

ಕಣ್ಣಿಂದ ನೋಡಬಹುದಾದ ವಸ್ತುವನ್ನು ವರ್ಣಿಸಿ ಅದರ ಚಿತ್ರವನ್ನು ನಮ್ಮ ಕಣ್ಮುಂದೆ ನಿಲ್ಲಿಸುವುದೇ ಅಸಾಧಾರಣಶಕ್ತಿಯಾಗಿದ್ದಾಗ, ನಾವು ಕಿವಿಯಿಂದ ಕೇಳಿ ಆನಂದವಡೆವ ಸಂಗೀತವನ್ನು ಮಾತುಗಳಿಂದ ಬಣ್ಣಿಸಿ ಅದರ ಭಾವನೆಯನ್ನು ನಮಗಾಗಿಸಿ ಆ ಆನಂದವನ್ನೇ ಅನುಭವಿಸುವಂತೆ ಮಾಡುವುದು ಅಸದೃಶವಾದ ಶಕ್ತಿಯೆನ್ನಬೇಕು. ಈ ಕವಿಯು ಸಂಗೀತಶಾಸ್ತ್ರದಲ್ಲಿ ಸ್ವತಃ ಪ್ರವೀಣನಾದುದರಿಂದ ಅದನ್ನು ಬಣ್ಣಿಸುವಾಗ, ಗಾಯನಗಾರರು ವೀಣೆಯನ್ನು ಹಿಡಿದು ಅದನ್ನು ನುಡಿಸಿ ಆ ರಾಗದಲ್ಲೇ ಲೀನರಾಗಿ ಆನಂದಪರವಶರಾಗಿ ಹಾಡಿ ಸಭಿಕರನ್ನು ಆಹ್ಲಾದಗೊಳಿಸುವುದನ್ನು ಚೆನ್ನಾಗಿ ಭಾವಿಸಿಕೊಂಡು ಮೃದುಮಧುರವಾದ ನುಡಿಗಳಿಂದ ಆ ಸಂಗೀತವನ್ನು ವಾಚಕರ ಹೃದಯದಲ್ಲಿ ತುಂಬಿ ಅವರಿಗೆ ಸ್ವರ್ಗಸುಖವನ್ನೇ ಕಾಣಿಸುವನು. ಕಾವ್ಯದಲ್ಲಿ ಅಲ್ಲಲ್ಲಿ ಬರುವ ಸಂಗೀತವರ್ಣನೆಗಳಲ್ಲಿ ಕವಿಯ ಆಶ್ಚರ್ಯಕರವಾದ ವರ್ಣನಾಶಕ್ತಿಯನ್ನು ಕಾಣಬಹುದು. ಆ ಭಾವನೆಗಳು ಅಲಂಕಾರದ ತೊಡಿಗೆಯಿಲ್ಲದೆಯೂ ಸ್ವಭಾವಸೌಂದರ್ಯದಿಂದ ಎಷ್ಟು ಮೋಹನೀಯವಾಗಿವೆಯೆಂದು ವಾಚಕರೇ ನಿರ್ಧರಿಸಲಿ. ಅವರ ಅವಗಾಹನೆ ಬಗೆ ಇಲ್ಲಿ ಕೆಲವೇ ನುಡಿಗಳನ್ನು ಕೊಡುವೆವು.

ನೋಟ ರಾಯನ ಮೇಲೆ ನೆನಹು ರಾಗದ ಮೇಲೆ | ನೀಟ ತಂತಿಯ ಮೇಲೆ ಬೆರಳು ||
ಚಾಟುಗಾತಿಯರು ಛಾಂದಸಿಕೆಯ ಸೂಂಕಿ ಸ | ಫಾಟಿಕೆಯಿಂದ ಹಾಡಿದರು ||

ನಾಭಿಯಿಂದೇಳಿಸಿಯೆದೆಯೊಳೋಲಾಡಿಸಿ | ಶೋಭೆಯ ಮಾಡಿ ಕಂಠದೊಳು ||
ಆ ಭೂಪ ಮೆಚ್ಚೆ ರಾಗಿಸಿದರು ಶ್ರೀದೇವಿ | ಶೋಭನವನು ಹಾಡುವಂತೆ ||

ಒಳಗುಮ್ಮಿದಾನಂದರಸ ತನ್ನ ತನು ತುಂಬಿ | ತುಳುಕಿ ಹೊರಗೆ ಸೂಸುವಂತೆ ||
ತೆಳುವಸಿರಿಂದ ಬಾಯ್ದೆರೆಯೊಳು ಸುಸ್ವರ | ಹೊಳೆದು ಮೋಹಿಸುತಿದ್ದುದಾಗ ||

ಎಳಮಿಂಚಿನಂತುಂಚವೆತ್ತುವರುಳುಕಿನಂ | ತಿಳಿಯಿಸುವರು ಮತ್ತೆ ಕೊರಳಾ ||
ಬಳೆಯೊಳು ಬಳೆಯಂತೆ ತಿರುಗಿಸಿ ರಾಯನ | ತಲೆದೂಗಿಸಿದರು ಗಾಯಕರು ||

ಸರಲಸರಲವಾಗಿ ಸಪುರಸಪುರವಾಗಿ | ತರಲತರಲವಾಗಿ ತೋರಿ ||
ವಿರಲವಿರಲವಾಗಿ ಠಾಯೆಗಾಣಿಸಿದರು | ಕೊರಳ ಬೆರಳ ಸರಿತದೊಳು ||

ಅಳೆವಂತೆ ರಾಗವ ತುಳಿವಂತೆ ಜಾಡ್ಯವ | ಹಿಳಿವಂತೆ ಮೋಹನರಸವಾ ||
ತೊಳೆವಂತೆ ಮನವ ಸಂಜೀವನಾಮೃತವನು | ತಳಿವಂತೆ ರಾಗದೋರಿದರು ||

ಕವಿಯು ಪೂರ್ವನಾಟಕಉತ್ತರನಾಟಕಸಂಧಿಗಳಲ್ಲಿ ಪಾತ್ರನಾರಿಯರ ನರ್ತನವನ್ನು ವರ್ಣಿಸುವಾಗ ತನ್ನ ನಾಟ್ಯಕಲಾಕೌಶಲವನ್ನೂ ವರ್ಣನಾಸಾಮರ್ಥ್ಯವನ್ನೂ ಬಹಳವಾಗಿ ಪ್ರಕಟಿಸಿರುವನು. ಈಗಣ ನಾಟಕಮಂಡಲಿಗಳು ನಾಟಕಾರಂಭದಲ್ಲಿ ತೋರುವ 'ಫಾರ್ಸಿ' ನಾಟ್ಯವನ್ನು ಕಂಡು ಮೆಚ್ಚಿದ ವಾಚಕರು ಅದನ್ನು ಓದುವಾಗ ನರ್ತನಸ್ತ್ರೀಯರು ತಮ್ಮ ಕಣ್ಮುಂದೆಯೇ ನಾಟ್ಯವಾಡುವಂತೆ ಅವರಿಗೆ ಭಾಸವಾಗದಿರದು. ಅದರ ಒಂದು ಭಾಗವನ್ನು ಇಲ್ಲಿ ಕೊಡುವೆವು.

ಸಂಜೆಗೆಂಪೊಲೆವಂತೆ ತೆರೆ ತೊಲಗಿತು ಕಣ್ಗೆ | ಕಂಜಾಕ್ಷಿಯರು ಕಾಣಿಸಿದರು ||
ರಂಜಿಪ ನಳಿತೋಳ್ಗಳೆತ್ತಿ ಸುವರ್ಣಪು | ಷ್ಪಾಂಜಲಿ ಮಾಡಿದರೊಡನೆ ||

ನಡುವಿನೊಳಿಟ್ಟ ಹಸ್ತಗಳು ಪಸರಿಸಿದ | ತೊಡೆಸಾರ್ದ ಮುಡಗಳಿಂದಾಗ ||
ಮಿಡುಕದೆ ನಿಲುವಿನ ರೇಖೆದೋರಿದರು ಮು | ಪ್ಪೊಡವಿಯಂದವ ತೋರುವಂತೆ ||

ಪಚ್ಚೆಯ ಚಲ್ಲಣ ಪಚ್ಚೆವರ್ಣದ ಕಾಸೆ | ಬೆಚ್ಚ ಮುತ್ತಿನ ಮೊಲೆಗಟ್ಟು ||
ಅಚ್ಚಜವ್ವನೆಯರಿದ್ದರು ನೋಡುವರ ಮನ | ಹುಚ್ಚೆದ್ದು ಧರೆಗೆ ಬೀಳ್ವಂತೆ ||

ಹಜ್ಜೆ ಸರಿದು ಮೆಲ್ಲನೊಲೆದರು ಕಾಲ ಹೊಂ | ಗೆಜ್ಜೆ ಝುಲಿರುಝುಲಿರೆನಲು ||
ಸಜ್ಜುಕವೊಲೆಯ ಪೆಂಗಳು ಮುಂದೆ ನಡೆದರು | ಪಜ್ಜಳಿಸುತ ಮುಖಕಾಂತಿ ||

ನೋಟದೊಳಗೆ ಕೊಂದರೊಮ್ಮೆ ನೋಟಕರನು | ನಾಟಿಸಿ ನಸುನಗೆಯಿಂದ ||
ಲೂಟಿ ಮಾಡಿದರು ಪ್ರೈಯೊಳೆದಾಟದಿಂದೆದೆ | ಗೋಟೆಯ ಕೊಂಡರೇನೆಂಬೆ ||

ತೋಳ ನೀಡಿದಳು ಮನ್ಮಥನೊರೆಯಿಂದುರ್ಚಿ | ಬಾಳ ನೀಡಿದನೊಯೆಂಬಂತೆ ||
ಚಾಳಿಯದೊಳು ಪೊಳೆದಳು ರಾಜಸುತರೆದೆ | ಹಾಳಾಗುವಂತೆ ಹೊಮ್ಮಿರಿದು ||

ಎತ್ತ ನೀಡಿತು ಹಸ್ತವಕ್ತ್ರದೃಷ್ಟಿಗಳಲ್ಲಿ | ಚಿತ್ತವಲ್ಲಿಯೆ ಭಾವರಸವು ||
ತತ್ತತ ತಿತ್ತಿತಿಯಾರೆಯಾರೆಯೆನ | ಲತ್ತಿತ್ತಲೊಲೆದು ಹರಿದಳು ||

ಮೋರೆಯೊಲೆದು ನೋಡಿ ನೃಪಸುತರಿಗೆ ಹುಬ್ಬ | ಹಾರಿಸುವಳು ನಸುನಗುತ ||
ಹಾರುವುದೊಡನವರೆದೆ ತನ್ನ ತೋಳೆತ್ತಿ | ನೀರೆ ಕೊಲ್ಲಣಿಸಿ ಸುತ್ತುವಳು ||

ಈ ಕವಿಯ ವರ್ಣನಾಶಕ್ತಿಯು ಇನ್ನೂ ಅಧಿಕವಾಗಿದೆ. ಇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳನ್ನು ವರ್ಣಿಸುವ ಅಸದೃಶವಾದ ಶಕ್ತಿಯಿರುವಂತೆ ಆತನಿಗೆ ಇಂದ್ರಿಯಗಳಿಗಗೋಚರನಾದ ಪರಮಾತ್ಮನನ್ನು ಕೈಗನ್ನಡಿಯಂತೆ ವರ್ಣಿಸುವ ದಿವ್ಯ ಶಕ್ತಿಯಿದೆ. ಮೀನು ನೀರಿನಲ್ಲಿ ಈಜುವಂತೆಯೂ ಹಕ್ಕಿ ಗಾಳಿಯಲ್ಲಿ ಹಾರುವಂತೆಯೂ ಪರಮಾತ್ಮಭಾವನೆಯಲ್ಲಿ ಕವಿಯು ಓಲಾಡುವನು. ಈ ಶಕ್ತಿಯಲ್ಲಿ ಕವಿಯನ್ನು ಮಹಾಕವಿ ರವೀಂದ್ರನಾಥಠಾಕೂರರಿಗೆ ಹೋಲಿಸಬಹುದಾಗಿದೆ. ರತ್ನಾಕರನ ಹಲವು ಉದಾತ್ತಭಾವನೆಗಳು ಗೀತಾಂಜಲಿಯ ಭಾವನೆಗಳಷ್ಟೆ ದಿವ್ಯವಾಗಿವೆ. ಇಲ್ಲಿ ಉದಾಹರಣೆಗಾಗಿ ಕೆಲವನ್ನು ಕೊಡುವೆವು.

ಆರು ಬಲ್ಲರು ಹಂಸತತ್ವವ ತಮ್ಮ ಶ | ರೀರ ತುಂಬಿರುತಿಹುದದನು ||
ಹಾರದೆ ಸಾರದೆ ಹೊರಹೊರಗಾಡಿ ಸಂ | ಸಾರದುಃಖವನುಣುತಿಹರು ||

ಹೊಳೆವ ಕನ್ನಡಿ ಕೈಯೊಳಿರ್ದು ನೋಡದೆ ನೀರ | ನೆಳಲಲ್ಲಿ ಮೊಗವ ನೋಳ್ಪಂತೆ ||
ಒಳಗಿದ್ದ ಚಿದ್ರೂಪ ನೋಡದೆ ಜಗವೆಲ್ಲ | ಬಳಲುತಿಹುದು ಹೊರಗಾಡಿ ||

ಒರೆಯೊಳಿದ್ದಾಯುಧದಂತೆ ಕಾರ್ಮುಗಿಲಿನ | ಮರೆಯೊಳಗಿನ ಸೂರ್ಯನಂತೆ ||
ಹೊರಗೆ ಕಲ್ಮಷದ ಮೈಯಿಹುದೊಳಗಾತ್ಮನು | ಕರೆವುತಿಹನು ತಿಳಿವೆಳಗಾ ||

ಆಗಮಕಾವ್ಯನಾಟಕದೊಳೆಲ್ಲರ ತಲೆ | ದೂಗಿಸಿ ಮಲಗಿಸಬಹುದು ||
ಮೂಗರು ಕಂಡ ಕನಸಿನಂತೆ ಮೆರೆವಾತ್ಮ | ಯೋಗವನಾರಾಡಬಹುದು ||

## ರಸ.

ಈ ಕವಿಗೆ ಶೃಂಗಾರಕವಿಹಂಸರಾಜನೆಂಬ ಬಿರುದು ಚೆನ್ನಾಗಿ ಒಪ್ಪುವುದು. ಯಾತಕ್ಕೆಂದರೆ ಶೃಂಗಾರವರ್ಣನೆಯಲ್ಲಿ ಆತನು ಅಪ್ರತಿಮಶಕ್ತಿಯನ್ನು ತೋರಿರುವನು. ಶೃಂಗಾರವರ್ಣನೆಯಲ್ಲಿ ಎಲ್ಲವನ್ನೂ ಹೊರಗೆಡವಿ ಬಯಲಾಗಿ ವರ್ಣಿಸುವ ಮಲಯಾಳಸ್ತ್ರೀಯ ಉಡುಗೆಯ ಕ್ರಮವೆಂದೂ ಬಲು ಗೂಢವಾಗಿ ಹುಡುಕಿದರೂ ಕಾಣದಂತೆ ವರ್ಣಿಸುವ ತೆಲುಗುಸ್ತ್ರೀಯ ಸೀರೆಯ ಸುತ್ತಾಟದ ಕ್ರಮವೆಂತಲೂ

ಕಂಡೂ ಕಾಣಿಸದಂತೆ ಅತಿ ಮೋಹನೀಯವಾಗಿ ವರ್ಣಿಸುವ ಮರಾಠಸ್ತ್ರೀಯ ಉಡುಗೆಯ ಬೆಡಗಿನ ಕ್ರಮವೆಂದೂ ಮೂರು ತೆರನಿರುವುದೆಂದು ಒಬ್ಬ ರಸಿಕನು ಅಭಿಪ್ರಾಯಪಟ್ಟಿರುವನು. ರತ್ನಾಕರನ ಕ್ರಮವು ಇವುಗಳಲ್ಲಿಯ ಮೂರನೆಯ ದೆಂದು ಹೇಳಬಹುದು. 'ಸುಸಿಲಪ್ರಕಟವಾಗೆ ಸೊಬಗಲ್ಲವೆಂದು' ತುಂಬಾ ಅಳುಕನ್ನು ನಟಿಸಿ ಹೇಳ್ಳಿಯೂ ಹೇಳದಂತೆ ಚಮತ್ಕಾರವಾಗಿ ಹೇಳಿರುವನು. ಆದರೂ ಆ ಮಾರ್ಗವು ಕೆಲವರಿಗೆ ಅಮಾರ್ಗವಾಗಿ ಕಾಣಬಹುದು. ಆದರೆ 'ಸ್ತ್ರೀ ರೂಪಮೆ ರೂಪಂ ಶೃಂಗಾರಮೆ ರಸಂ" ಎಂಬ ಕವಿಕುಂಜರನ ಮತದಂತೆ ಕಾವ್ಯದಲ್ಲಿ ಶೃಂಗಾರ ವನ್ನು ಬಿಟ್ಟು ಮಿಕ್ಕ ರಸಗಳನ್ನೇ ಹೇಳಿದರೆ ಚಂದ್ರನನ್ನು ಬಿಟ್ಟು ಬೆಳದಿಂಗಳ ರಾತ್ರಿಯನ್ನು ಬಣ್ಣಿಸಿದಂತಾದೀತು. ಕುಸುಮಾಜಿಭರತೇಶರ ಸರಸಸಲ್ಲಾಪವನ್ನು ವಾಗ್ವೃತ್ತಿಶೃಂಗಾರಕ್ಕೆ ಉದಾಹರಣೆಯಾಗಿ ಇಲ್ಲಿ ಕೊಡುವೆವು.

ಕುಸುಮಿ ತಾನೇಕೆ ಬಂದಳು ಕುಸುಮಾಜಿಯೆಂ | ದುಸುರಿದನಾಕೆಯ ಕೂಡೆ ||
ನಸುನಗುತೇಕೆ ಬಂದಳೊ ದೇವರೇ ಬಲ್ಲಿ | ರಸಿಯಳಿಚ್ಚೆಯನೆಂದಳವಳು ||

ಮೊಗವ ನೋಳ್ಪಾಗ ನನ್ನೊಡನವಳಿಂದೊಂದು | ಜಗಳಕೆ ಬಂದಳೆಂಬಂತೆ ||
ಬಗೆದೋರುತಿದೆ ನೀನು ಕೇಳಿ ಹೇಳೆಂದಾಗ | ಏಗಡದ ಮಾತನಾಡಿದಳು ||

ಕೇಳ್ದಿನಾಕೆಯ ದೇವ ಜಗಳಕಲ್ಲೆಂದಳು | ನೀಳ್ದ ಗೂಢಾರ್ಥವೊಂದುಂಟು ||
ಆಳ್ದನ ಕೂಡೆ ಯೋಚಿಸಬಂದೆನೆಂದೊಲ್ದು | ಪೇಳ್ದಳೆಂದಳು ಪತಿಯೊಡನೆ ||

ಗೂಢಾರ್ಥವೇನು ಹೇಳಲಿ ಕೇಳು ಕೇಳ್ದೆನು | ಮೂಢರಿಗದ ಹೇಳಬೇಕು ||
ಪ್ರೌಢರು ಸಾದರ್ಗ ಬಲ್ಲರೆಂದಪಳೆಂದು | ಪ್ರೌಢಿಯ ಮಾತನಾಡಿದಳು ||

ಶೃಂಗಾರರಸದಂತೆ ಮಿಕ್ಕ ರಸಗಳೂ ಅಲ್ಲಲ್ಲಿ ತುಂಬಿ ತುಳುಕುತ್ತಿವೆ. ರೌದ್ರರಸವು ಈ ಕೆಳಗಣ ಮಾಗಧಾಮರನ ಪೌರುಷದ ನುಡಿಗಳಲ್ಲಿ ಉಕ್ಕಿ ಹರಿಯುತ್ತಿದೆ.

ಕೇಳುತ ಕಿಡಿಕಿಡಿಯಾಗಿ ಮಾಗಧನು ಮೈ | ತೂಳವೆದ್ದಾಡುಗಚ್ಚಿದನು ||
ಸೀಳು ಸೀಳೋಲೆಯ ಸುಡುಸುಡೆಂದನು ತನ್ನ | ಬಾಳ ಸೀಳ್ಸುಡುಸುಡೆಂಬಂತೆ ||

ಹಲ್ಲಗಡಿದು ಕಣ್ಣುಕೆಂಪೇರಿ ತುಂಬುರಿ | ಗೊಳ್ಳಿಯಂತುರಿ ಛಿಟಿಛಿಟಿಸಿ |
ಅಲ್ಲಾಡಿ ಮೀಸೆ ಸೆರೆತು ನೋಡಿ ನುಡಿದನು | ಕೊಲ್ಲುವಂತದನೋದಿದವನಾ ||

ಎಲ್ಲಿಯ ಭರತಗಿರತನಿವನೆಮ್ಮಬ್ಬಿ | ಯಲ್ಲಿಯು ಭರತಗಿಳಿತವೊ ||
ಚೆಲ್ಲಬಡಿವೆ ನನ್ನ ಸೇನೆಯ ಕರೆಯೊ ನ | ಮ್ಮೆಲ್ಲ ನ್ಯಂತರಿಗರನೆಂದಾ ||

ಕುಮಾರವಿಯೋಗದ ವಾರ್ತೆ ಕೇಳಿದೊಡನೆ ಭರತನೆದೆಯಲ್ಲಿ ಆದ ನೋವನ್ನು ಬಣ್ಣಿಸುವಾಗ ಕವಿಯು ಕರುಣಾರಸವನ್ನು ತುಂಬಿ ವಾಚಕರ ಹೃದಯವನ್ನು ತೊಯಿಸಿರುವನು. ಅದನ್ನು ಕೇಳುವಾಗ ಎಂತಹ ಕಲ್ಲೆದೆಯಾದರೂ ಕರಗೀತು.

ವೀಳೆಯದೆಲೆ ಹಸ್ತದಿಂ ಬಿದ್ದು ಧರೆಯಲ್ಲಿ | ಬಾಳ ಬೀಸಿದ ತೆರನಾಯ್ತು |
ನೋರೆ ಕಂದಿತು ಮಾತು ನಿಂದಿತು ಹವ್ವನೆ | ಹಾರಿತು ನೃಪನೆದೆ ಕೂಡೆ ||

ಮೂಗಿನ.ಮೇಲೆ ಬೆರಳನಿಟ್ಟು ಮುಕುಟವ | ತೂಗಿ ತಾನುಸ್ಸೆಂದು ಸುಯ್ದು |
ಆಗಲೆ ಕಣ್ಣನೀರ್ಗಳಗಳನೊಕ್ಕಲು | ಬೇಗೆ ಹುಟ್ಟಿತುವೊಡಲೊಳಗೆ ||

ತಾಯಿಕ್ಕಲುಂಡೂಟವಲ್ಲದಿವರು ತಮ್ಮ | ಸ್ತ್ರೀಯಿಕ್ಕಲುಂಡೂಟವಿಲ್ಲ ||
ಪ್ರಾಯವೇರಿತು ಮದುವೆಯ ಮಾಡಬೇಕೆಂದು | ದಾಯಗೊಂಡಿರ್ದೆನಿಂತಾಯ್ತು

ಹಾಸ್ಯರಸವನ್ನು ಕಾವ್ಯದಲ್ಲಿ ಅಲ್ಲಲ್ಲಿ ಕಾಣಬಹುದು. ಭರತನ ರಾಣಿಯರ ಸರಸಸಲ್ಲಾಪದಲ್ಲಿಯೂ ವಿದೂಷಕನ ವಿನೋದದ ನುಡಿಗಳಲ್ಲಿಯೂ ಇರುವ ಹಾಸ್ಯ ರಸವು ಬೇಸರದಿಂದಿರುವ ವಾಚಕರನ್ನು ಉಲ್ಲಾಸಗೊಳಿಸದಿರದು. ಭರತೇಶನು ತನ್ನ ಮೈದುನರು ತನಗೆ ತಿಳಿಸದೆ ತನ್ನ ಮಕ್ಕಳಿಗೆ ತಮ್ಮ ಹೆಮ್ಮಕ್ಕಳನ್ನು ಕೊಟ್ಟ ತಪ್ಪಿಗೆ ವಿದೂಷಕನು ಹೇಳಿದ ಪ್ರಾಯಶ್ಚಿತ್ತವು ಆತನ ಪ್ರವೀಣತೆಯನ್ನು ಪ್ರಕಟಿಸುವುದು.

ಪಿತನ ಕೇಳದೆ ಮುನ್ನ ಹೆಣ್ಣಿತ್ತ ತಪ್ಪಿಗಾ | ಕ್ಷಿತಿಪರೊಳಿನ್ನು ಮುಂದಾದ ||
ಸುತೆಯರೆಲ್ಲರು ನಿನ್ನ ಸುತರಿಗೆ ಸಲ್ಲರೀ | ಸ್ಥಿತಿಗೊಪ್ಪು ನೀನೊಮ್ಮೆಯೆಂದಾ ||

ಇನ್ನೊಂದನಾಲಿಸು ನೃಪರ ತಂಗಿಯರೊಳು | ಕನ್ನೆಯರಾಗೀಗ ನೆರೆವಾ |
ಚೆನ್ನೆಯರೆಲ್ಲರು ನಿನಗೆ ಸಲ್ಲರು ನನ್ನ | ಬಿನ್ನಹವವಧರಿಸೆಂದಾ ||

ನಿಮಗೆ ಕಾರ್ಯವ ತಿದ್ದಿಕೊಟ್ಟೆನು ಬರಿದೆ ಹೋ | ಗುವೆನೆ ಭೂಸುರರೊಪ್ಪರದಕೆ |
ಇವರೂರ ವಿಪ್ರರೊಳಿನ್ನಾದ | ಚೆಲ್ವಿನ ಯುವತಿಯರ್ನನಗೆನೆ ಸಕಾಖ್ಯ ||

ಕವಿಯು ಆತ್ಮಧ್ಯಾನವನ್ನು ಬಣ್ಣಿಸುವಾಗ ಶಾಂತರಸದಿಂದ ವಾಚಕರೆದೆಗೆ ತಂಪನ್ನು ತರುವನು.

ಉಲುಹುಗಲಭೆಯೆಂಬುದಿಲ್ಲಾಗ ಬೆಳಗೈದು | ಗಳಿಗೆಯೆಂದೆಂಬ ವೇಳೆಯದು |
ತಲೆಯಿಂದ ಕೆಂಬಜ್ಜೆ ಮುಟ್ಟ ಮೈಯೊಳಗಾತ್ಮ | ಕಳೆತುಂಬಿ ಹೊಳೆದುದಾ ನೃಪಗೆ ||

ಪ್ರಭೆಯೊಳು ಮುಳುಗಾಡಿ ಸುಖದೊಳೋಕುಳಿಯಾಡಿ | ಅಭಿಮಾನಗೆಡಿಸಿ
ಕರ್ಮಗಳಾ ||
ಪ್ರಭುಕರ್ತೃರ್ಭೋಕ್ತ್ರವೆಂದೆಂಬ ವಿಕಲ್ಪ ದು | ರ್ಲಭವಾಗಿ ಹಂಸನೊಳಿರ್ದಾ ||

ಭೂರಿಚಿಂತೆಯ ಬಿಟ್ಟು ತನ್ನ ತಾ ನೋಳ್ಪಾಗ | ಸೋರುತಿರ್ದುದು ಕರ್ಮರಜಸು ||
ಸೇರುತಿರ್ದುದು ಕೂಡೆ ಸುಜ್ಞಾನಸುಖಿಗಳಾ | ತ್ಮಾರಾಮನಿರ್ದನಾತ್ಮನೊಳು |

ಅಡಿಗಡಿಗಾನಂದವೆಂಬ ಸಾಗರವನೊ | ಕ್ಕುಡಿತೆಯು ಮಾಡಿ ಸೇವಿಪನು |
ಒಡನೊಡನೀಂಟಿದಷ್ಟಕೆ ಹೆಚ್ಚಿ ಕಡಲು ಬ | ಲ್ಗಡಲಾಗುತಿಹುದೇನನೆಂಬೆ ||
ತೆರೆಗಳಿಲ್ಲದ ಕಡಲಾನಂದವೆಂಬುದು | ನೊರೆ ನೀರು ಹೊರತಾದ ಕಡಲು |
ಧರೆಯು ಸಮುದ್ರದಂತಲ್ಲ ಶುದ್ಧಾತ್ಮನೊ | ಳಿರವಿಲದಿಹುದು ಚಿತ್ರವಿದು ||

## ಕವಿಯ ತತ್ತ್ವಜ್ಞಾನ.

ಈ ಕಾವ್ಯವನ್ನು 'ಭೋಗಿಯೋಗಿಗಳೆದೆ ಜುಮ್ಮುಜುಮ್ಮೆನೆ ನೇಮದಾಗಿ ಸೊಲ್ಲಿಸುವೆ'ನೆಂದು ವಚನಕೊಟ್ಟ ಮೇರೆ ಇದರೊಳಗೆ ದಿವ್ಯವಾದ ತತ್ವಜ್ಞಾನವನ್ನು ಭರತೇಶನ ಮುಖದಿಂದಲೂ ಆದಿ ಜಿನೇಶ್ವರನ ಮುಖದಿಂದಲೂ ಕವಿಯು ಉಪದೇಶಿಸಿರುವನು. ಅಧ್ಯಾತ್ಮವಿಚಾರದಲ್ಲಿ ಕೇವಲ ಕೂಪಮಂಡೂಕದಂತಿರದೆ ಮಾನಸ ಸರೋವರದ ಹಂಸನಂತೆ, ತತ್ವಜ್ಞಾನಸಾಗರದಲ್ಲಿ ವಿಹರಿಸಿ, ಮಾನವವರ್ಗಕ್ಕೆ ಅನ್ವಯಿಸುವಂತೆ ಉದಾರಬುದ್ಧಿಯಿಂದ ಉದಾತ್ತವಾದ ಭಾವನೆಗಳನ್ನು ಕವಿಯು ಆಡಿರುವುದರಿಂದ ಅವು ಅನ್ಯಮತಸ್ಥರಿಗೂ ಮಾನ್ಯವಾಗಿವೆ. ಮೇಲಿಂದ ಮೇಲೆ ನೋಡಿದಾಗ ಮತಗಳು ಭಿನ್ನವಾಗಿ ತೋರಿದರೂ ಅಡಿವರೆಗೂ ವಿಚಾರಿಸಿದಲ್ಲಿ ಸರ್ವ ಮತಗಳ ಸಾರವೂ ಒಂದೇಯಾಗಿದೆಯೆಂಬುದು ಬೋಧೆಯಾಗದಿರದು. ಆದರೂ ಅನ್ಯಮತದೂಷಣೆ ಮಾಡುವುದು ಮತದ ಕೇವಲ ಅನುಯಾಯಿಗಳಿಗೆ ಸುಲಭವಾಗಿದ್ದಾಗ ಸರ್ವಮತದವರಿಗೂ ಸಮ್ಮತವಾಗುವಂತೆ ಕವಿಯು ತತ್ವವಿಚಾರಗಳನ್ನು ಮಾಡುವುದು ಶ್ಲಾಘನೀಯವಾಗಿದೆ. ಈ ಕೆಳಗೆ ಹೇಳಿದ ಮೋಕ್ಷಮಾರ್ಗವು ಸರ್ವರಿಗೂ ಆದರಣೀಯವಾಗಿದೆ.

ಮುಕ್ತರಾದವರೆಲ್ಲ ಮುನ್ನ ಸಂಸಾರಸಂ | ಯುಕ್ತರಾಗಿರ್ದು ಕರ್ಮಗಳಾ ||
ಯುಕ್ತಿಯರಿದು ಶಕ್ತಿಗೆಡಿಸಿ ದೇಹವ ಬಿಟ್ಟು | ಮುಕ್ತಿಗೈದಿದರೆಲೆ ಭವ್ಯಾ ||

ಸುಖಕುಬ್ಬಿ ದುಃಖಕೆ ಮರುಗಿದರೊಡನೆ ಮುಂ | ದಖಿಳ ಕರ್ಮಗಳು ಕಟ್ಟುವುವು ||
ಸುಖದುಃಖಕತ್ತಿತ್ತಲಾಗದೆ ಧ್ಯಾನಾಭಿ | ಮುಖದೊಳಿದ್ದರೆ ಬಂಧವಿಲ್ಲ ||

ಕರ್ಮವ ಸುಡುವ ಸಾಮರ್ಥ್ಯವುಂಟಾತ್ಮಗೆ | ಕರ್ಮದೊಳಡಗಿರುತಿಹನು ||
ಕರ್ಮವರಿದು ತಾನು ತನ್ನ ನೋಡಿದರೆಂಟು | ಕರ್ಮವ ಸುಟ್ಟುರುಹುವನು ||

ಧ್ಯಾನದಿಂದಲ್ಲದೆ ಕರ್ಮನಿರ್ಜರಿಸದಾ | ಧ್ಯಾನ ತಾನೆಂತುಟೆಂದೆನಲು ||
ನಾನಾ ಚಿಂತೆಯಳಿದು ಮನವಾತ್ಮಸಂ | ಧಾನದೊಳಿರಲದೆ ಧ್ಯಾನ ||

ಈ ಕಾಲವಾಕಾಲವೆನಬೇಡ ನಿಶ್ಚಯ | ದೇಕಧರ್ಮವ ಮಾಡಿದವರು ||
ಲೌಕಾಂತಿಕ ದಕ್ಷಿಣೇಂದ್ರರೆನಿಸಿ ಪುನ | ರೇಕಜನ್ಮಕೆ ಮುಕ್ತರಹರು.

ಕವಿಯು ಪರಮಾತ್ಮನ ಗುಣಗಳನ್ನು ಹಾಡುವಾಗ ತನ್ನ ಹೃದಯದಲ್ಲಿಟ್ಟು ಕೊಂಡ ಆ ಪರಾತ್ಪರವಸ್ತುವಿನ ಭಾವನೆಯು ಸರ್ವಮತದವರಿಗೂ ಸಮಂಜಸ ವಾಗಿದೆ. ಆ ಸ್ತುತಿಪದ್ಯಗಳನ್ನು ಆಕಾಲವೀಕಾಲವೆನ್ನದೆ ಸರ್ವಕಾಲದಲ್ಲಿಯೂ ಸಮಸ್ತಜನರೂ ಹಾಡಿದರೆ ಅವರಿಗೆ ಅಕ್ಷಯವಾದ ಪರಮಾತ್ಮಸುಖವು ದೊರಕು ವುದರಲ್ಲಿ ಸಂದೇಹವಿಲ್ಲ.

ನೋಡಿ ನೋಡದ ನುಡಿದಾಡಿ ನುಡಿಯದೆಡೆ | ಯಾಡಿ ನಡೆಯದ ಮಹಾತ್ಮಾ ||
ಕೂಡೆಕೂಡೆನಗೆ ಚಿತ್ಕಳೆಯ ಬೆಳಕನುಂಟು | ಮಾಡು ನಿರಂಜನಸಿದ್ಧಾ ||

ನಿಂದಲ್ಲಿ ನಡೆದಲ್ಲಿ ಕುಳಿತಲ್ಲಿ ಸರ್ವತ್ರ | ಕುಂದದೆ ಕುಶಲಲೀಲೆಯೊಳು ||
ಸಂದಿಸುವಭವ ನನ್ನೆದೆಯೊಳಗಿರು ಚಿ | ದಾನಂದ ಚಿದಂಬರಪುರುಷಾ ||

ತಿಳಿವೆಳಗಿನ ತೀರ್ಥರೂಪವೆ ತಿಂಗಳ | ಬೆಳಗಿನೊಳಾದ ಪುತ್ತಳಿಯೆ ||
ತಳುವಾಡದೆನಗೆ ಸನ್ಮತಿದೋರು ಸುಜ್ಞಾನ | ನಿಳಯ ನಿರಂಜನಸಿದ್ಧಾ ||

ಹಿಂದುಮುಂದೆಡಬಲಹೊರಗೊಳಗಡಿಕಡೆ | ಯೆಂದೆನ್ನದವ್ಯಕ್ತಸ್ವರೂಪಾ ||
ಎಂದೆಂದುಯೆನ್ನ ಚಿತ್ತದೊಳಿರು ಸಚ್ಚಿದಾ | ನಂದ ಚಿದಂಬರಪುರುಷಾ ||

ಉಸುರೆಂಬ ಕರಗಸದಿಂದ ದೇಹಾತ್ಮರ | ಬೆಸುಗೆಯ ಬಿಡಿಸಿ ನೋಡಿದರೆ ||
ಮುಸುಳದೆ ತೋರ್ಪ ಮಹಾತ್ಮ ನೀನೆನಗೊಳ್ಳೆ | ನೆಸಗು ನಿರಂಜನಸಿದ್ಧಾ ||

ತೆರೆಯ ಮೇಲ್ತೆರೆಗಳ ತೋರುವಿಂಗಡಲಂತೆ | ಸಿರಿಯ ಮೇಲ್ಸಿರಿಯ ಸೂಚಿಸುವ ||
ಚರಿತಾರ್ಥ ನನ್ನಂತರಂಗದೊಳಿರು ಮನೋ | ಹರನೆ ಚಿದಂಬರಪುರುಷಾ ||

ಕಾಣದರ್ಥವ ಕಾಣಿಸುವ ಪರಂಜ್ಯೋತಿ ನೀ | ಮಾಣದೆ ನನ್ನೆದೆಯೆಂಬ ||
ಕೋಣೆಯೊಳಿರು ಹೋದೆಯಾದರ ನಿನಗೆ ನಿ | ನ್ನಾಣೆ ಚಿದಂಬರಪುರುಷಾ ||

ಉಗ್ರಾಣ ಮಂಗೇಶರಾಯ.

ಸದಾನಂದ ಸಹಕಾರಕ ಮುದ್ರಣ ಸಂಘ, ಲಿಮಿಟೆಡ್,—ಮಂಗಳೂರು.

# ಭರತೇಶ್ವರಚರಿತೆ.

## ಆಸ್ಥಾನಸಂಧಿ.

ಪರಮಪರಂಜ್ಯೋತಿ ಕೋಟಿಚಂದ್ರಾದಿತ್ಯ । ಕಿರಣ ಸುಜ್ಞಾನಪ್ರಕಾಶ ॥
ಸುರರ ಮಕುಟಮಣಿರಂಜಿತಚರಣಾಬ್ಜ । ಶರಣಾಗು ಪ್ರಥಮ ಜಿನೇಶ ॥ ೧ ॥

ಸಿದ್ಧರ ಸತತ ವಿಶುದ್ಧರ ಬೋಧಸ । ಮೃದ್ಧರ ನೆನೆದು ನಾನೀಗ ॥
ಸಿದ್ಧರಸದೊಳು ಲೋಹವನದ್ದಿದಂತಾತ್ಮ । ಸಿದ್ಧಿಯ ಪಡೆವೆನಿನ್ನೇನು ॥ ೨ ॥

ವ್ಯವಹಾರ ನಿಶ್ಚಯವರಿದು ತಮ್ಮಾತ್ಮತ । ತ್ವವ ನೆಮ್ಮಿ ನಿಜವ ಸಾಧಿಸುವಾ ॥
ನವಕೋಟಿ ಮುನಿಗಳು ಮೂವರಿಲ್ಲೆನಲುಂ । ಟವರಡಿಗಳಿಗೆರಗುವೆನು ॥ ೩ ॥

ಪರಬೊಮ್ಮ ತ್ರಿಭುವನಸಾರ ಚಿದಂಬರ । ಪುರುಷ ನಿರಂಜನಸಿದ್ಧಾ ॥
ದುರಿತಂಜಯ ಹಂಸನಾಥ ನಮೋ ನಮೋ । ಗುರುವೆ ಪ್ರತ್ಯಕ್ಷವಾಗೆನಗೆ ॥ ೪ ॥

ಚಿನ್ನಹ ಗುರುವೇ ಧ್ಯಾನಕೆ ಬೇಸರಾದಾಗ । ನಿನ್ನನಾದಿಯಮಾಡಿಕೊಂಡು ॥
ಕನ್ನಡದೊಳಗೊಂದು ಕಥೆಯ ಪೇಳುವೆನದು । ನಿನ್ನಾಜ್ಞೆಕಂಡಾ ನನ್ನೊಡೆಯಾ ॥ ೫ ॥

ಕಬ್ಬಿಗರೋದುಗಬ್ಬವ ಹಾಡುಗಬ್ಬವ । ಕಬ್ಬದೊಳೊರೆವರಿವೆರಡು ॥
ಕಬ್ಬಿನಂತಿರಬೇಕು ಬಿದಿರಂತೆ ರಚಿಸಲೇ । ಕಬ್ಬ ಹೇಳಿಲೆ ಸರಸ್ವತಿಯೆ ॥ ೬ ॥

ಅಯ್ಯಯ್ಯಾ ಚಿನ್ನಾದುದೆನೆ ಕನ್ನಡಿಗರು । ರಯ್ಯಾಮಂಚಿದಿಯೆನೆ ತೆಲುಗಾ ॥
ಅಯ್ಯಯ್ಯ ಎಂಚಪೊರ್ಲಾಂಡೆಂದು ತುಳುವರು । ಮೊಯ್ಯುಬ್ಬಿ ಕೇಳ†ಬೇಕಣ್ಣಾ ॥ ೭ ॥

ರಳಕುಳ ಶಿಥಿಲಸಮಾಸ ಮುಂತಾದವ । ರೊಳಗಿಲ್ಲಿ ಕೆಲವುಳ್ಳರುಂಟು ॥
ಕೆಲವಿಲ್ಲಾದರುವಿಲ್ಲವೇಕೆಂದರವರ ಕೋ । ಟಲೆಯೇಕೆ ಹಾಡುಗಬ್ಬಿದೊಳು ॥ ೮ ॥

ಸಕಲಲಕ್ಷಣವು ವಸ್ತುಕಕೆ ವರ್ಣಕಕಿಷ್ಟು । ವಿಕಳವಾದರು ದೋಷವಿಲ್ಲ ॥
ಸಕಲಲಕ್ಷಣಕಾಗಿ ಬಿರುಸುಮಾಡಿದರೆ ಪು । ಸ್ತಕದ ಬದನೆಕಾಯಹುದು ॥ ೯ ॥

---

† ಬೇಕೆಂದಾ.

ಚಂದಿರನೊಳಗೆ ಕಪ್ಪುಂಟು ಬೆಳ್ದಿಂಗಳು । ಕಂದಿ‡ಕುಂದಿಹುದೋ ನಿರ್ಮಲವೊ ॥
ಸಂಧಿಸಿ ಶಬ್ದದೋಷಗಳೊಮ್ಮೆ ಸುಕಥೆಗೆ । ಬಂದರೆ ಧರ್ಮ ಮಾಸುವುದೇ ॥ ೧೦ ॥

ಕೇಳಿರೊ ಭವ್ಯರು ನಿಮಗೊಂದು ಸುಕಥೆಯ । ಹೇಳುವೆನತಿ ಮೃದುವಾಗಿ ॥
ಕೇಳಿದಿರಾದರೆ ನಿಮಗಾತ್ಮಸುಖವಿಂದು । ನಾಳೆನಾಡಿದಿನೊಳಗಹುದು ॥ ೧೧ ॥

ಶ್ರೀಭರತೇಶವೈಭವವಿದು ಕೇಳಿರೊ । ಸೌಭಾಗ್ಯವಹುದಡಿಗಡಿಗೆ ॥
ಶೋಭನವಹುದಿಂದ್ರಪದವಿಯಹುದು ಮೋಕ್ಷ । ಲಾಭವಹುದು ಕಟ್ಟಕಡೆಗೆ ॥ ೧೨ ॥

ಗಣನೆಯಿಲ್ಲದ ರಾಜ್ಯಸುಖದೊಳೋಲಾಡಿ ಧಾ । ರಿಣಿ ಮೆಚ್ಚೆ ಜಿನಯೋಗಿಯಾಗಿ ॥
ಕ್ಷಣಕೆ ಕರ್ಮವಸುಟ್ಟು ಜಿನನಾದ ಭೂಭುಜಾ । ಗ್ರಣಿಯ ವೈಭವವ ಲಾಲಿಸಿರೊ ॥ ೧೩ ॥

ಆಗಮವಧ್ಯಾತ್ಮವಳವಟ್ಟು ಶೃಂಗಾರ । ತ್ಯಾಗಭೋಗದ ಮೋಡಿ ಮೆರೆಯೆ ।
ಭೋಗಿಯೋಗಿಗಳಿದೆ ಜುಮ್ಮುಜುಮ್ಮೆನೆ ನೇಮ । ದಾಗಿ ಸೊಲ್ಲಿಸುವೆನಾಲಿಸಿರೊ ॥ ೧೪ ॥

ಪ್ರಚುರದಿ ಪದಿನೆಂಟು ರಚನೆಯ ವಾಕ್ಯಕೆ । ರಚಿಸುವರಾನಂತು ಪೇಳೆ ॥
ಉಚಿತಕೆ ತಕ್ಕಷ್ಟು ಪೇಳ್ವೆನಧ್ಯಾತ್ಮವೆ । ನಿಚಿತಪ್ರಯೋಜನವೆನಗೆ ॥ ೧೫ ॥

ಕೃತಿಯ ಪೇಳ್ವಾತ ಸಾಮಾನ್ಯನಹುದು ಕಾವ್ಯ । ಪತಿ ಚಕ್ರಿ ಸಾಮಾನ್ಯನಲ್ಲ ॥
ಕೃತಿಗಾದಿನಾಥನ ಕೂರ್ತುಕೇಳ್ವುದು ಕಾವ್ಯ । ಕೃತನ ದೋಷವ ನೋಡಬೇಡ ॥ ೧೬ ॥

ಈ ಪುಣ್ಯಕಥೆ ಪುಣ್ಯಜೀವಿಗಳಿಗೆ ಮೆಚ್ಚು । ಕಾಪುರುಷರಿ*ಗೆ ಮೆಚ್ಚಲ್ಲ ॥
ಪಾಪವಕೆಡಿಸಿ ಪುಣ್ಯವಮಾಡಿ ಸ್ವರ್ಗಕೆ । ಪೋಪೆನೆಂಬವರೆಲ್ಲ ಕೇಳಿ ॥ ೧೭ ॥

ಓಂನಮಯೆನ್ನಿ ಜಿನಂನಮಯೆನ್ನಿ ಸಿ । ದ್ಧಂನಮೋ ಹಂಸಂನಮಾಮಿ ॥
ಎನ್ನಿ ಹಾಗೆಂದಮೇಲೀ ಕಥೆಗಿಚ್ಛಾಮಿ । ಯೆನ್ನಿ ಚೆನ್ನಾಗಿನ್ನು ಕೇಳಿ ॥ ೧೮ ॥

ಭರತಭೂತಳಕೆ ಸಿಂಗಾರವಾದಯೋಧ್ಯಾ । ಪುರದೊಳು ಮೂಲೋಕ ಪೊಗಳೆ ॥
ಭರತಚಕ್ರೇಶ್ವರ ಸುಖಬಾಳುತಿರ್ದನಾ । ಸಿರಿಯನಿನ್ನೇನ ಬಣ್ಣಿಪೆನು ॥ ೧೯ ॥

ಪುರುಪರಮೇಶನ ಹಿರಿಯಕುಮಾರನು । ನರಲೋಕಕೊಬ್ಬನೆ ರಾಯ ॥
ಮುರಿದು ಕಣ್ಣಿಟ್ಟರೆ ಕ್ಷಣಕೆ ಮುಕ್ತಿಯ ಕಾಂಬ । ಭರತ ಚಕ್ರಿಯ ಹೇಳಲಳವೇ ॥ ೨೦ ॥

ಹದಿನಾರನೆಯ ಮನು ಪ್ರಥಮ ಚಕ್ರೇಶ್ವರ । ಸುದತಿಜನಕೆ ರಾಜಮದನ ॥
ಚದುರರತಲೆವಣಿ ತದ್ಭವಮೋಕ್ಷಸಂ । ಪದನ ಬಣ್ಣಿಸಲೆನ್ನ ಹವಣೆ ॥ ೨೧ ॥

ಹೊಲ್ಲದನೃಪರಿಗಿಲ್ಲದ ಗುಣಗಳನಿಟ್ಟು । ಸೊಲ್ಲಿಪ ಕೃತಿಮಾರ್ಗವಲ್ಲ ॥
ಉಳ್ಳಸದ್ಗುಣಗಳ ಕಡೆಗಂಡು ಬಣ್ಣಿಸ । ಬಲ್ಲವನಾವನಾ ನೃಪನಾ ॥ ೨೨ ॥

‡ ಕೊಂಡಿಹುದೋ. * ಗಿಚ್ಚೆಯಲ್ಲ.

ಹಲವುಮಾತೇನೊಂದ ಪೇಳ್ವೆನಾ ಕ್ಷತ್ರಿಯ । ಕುಲರತ್ನಗಾಹಾರವುಂಟು ॥
ಮಲವಿಲ್ಲ ಮೂತ್ರವಿಲ್ಲೆಂದರೀ ಲೋಕದ । ಬಳಕೆಗಾರರ ಪೇಳ್ವ ತೆರನೆ ॥ ೨೩ ॥
ಧರೆಯೊಳಿಲ್ಲವ ಸುಟ್ಟರುಂಟಲ್ಲಿ ಭಸ್ಮ ಕ । ರ್ಪುರವ ಸುಟ್ಟರೆ ಭಸ್ಮವುಂಟೆ ॥
ನರತತಿಗಾಹಾರನಿಹಾರವುಂಟೆಮ್ಮ । ಭರತೇಶಗಿಲ್ಲ ನಿಹಾರಾ ॥ ೨೪ ॥
ಕೋಮಲಾಂಗನು ಹೇಮವರ್ಣನು ಜಗವೆಲ್ಲ । ಕಾಮಿಸತಕ್ಕ ಚೆನ್ನಿಗನು ॥
ಆಮೋದವುಕ್ಕುವ ಜವ್ವನಿಗನು ಸರ್ವ । ಭೂಮೀಶರೊಡೆಯನಾ ಚಕ್ರಿ ॥ ೨೫ ॥

ಆ ವಿಭುವೊಂದಿನದುದಯದೊಳೆದ್ದು । ದೇವತಾರ್ಚನೆಯನು ಮಾಡಿ ॥
ಚಾವಡಿಗೈದಿ ತಾನೋಲಗವಾದೊಂದು । ಶ್ರೀವಿಲಾಸವನೇನನೆಂಬೆ ॥ ೨೬ ॥
ನವರತ್ನಹೇಮನಿರ್ಮಿತವೆನಿಪಾಸ್ಥಾನ । ಭವನದೊಳಾ ರಾಜರತ್ನ ॥
ಭುವಿವಡೆದೆಸೆದನು ರತ್ನಪುಷ್ಪಕದೊಳು । ದಿವಿಜೇಂದ್ರನೊಪ್ಪುವಂದದೊಳು ॥ ೨೭ ॥
ಸಿಂಗರಿಸಿದ ಝಲ್ಲಿಪಟ್ಟೆಪೂಮಾಲೆ ಬೆ । ಡಂಗಾದ ಮಂಟಪದಲ್ಲಿ ॥
ಶೃಂಗಾರವನದೊಳು ಮೆರೆವ ವಸಂತರಾ । ಜಂಗೆಣೆಯಾದನಾ ಸೊಬಗಾ ॥ ೨೮ ॥
ತನುಕಾಂತಿ ತುಂಬಿದ ಸಭೆಯೆಂಬ ಕೊಳದಲ್ಲಿ । ಕನಕಸಿಂಹಾಸನವೆಂಬ ॥
ಕನಕಾಂಬುಜದ ಮೇಲಾ ರಾಜ(ಹಂಸ)ನಿ । ದ್ದನು ರಾಜಹಂಸನೆಂಬಂತೆ ॥ ೨೯ ॥
ಉದಯಗಿರಿಯಮೇಲೆ ಮೆರೆವ ಭಾನುವಿಗೆ ಮ । ತ್ತಿದಿರಾದ ಪ್ರತಿಸೂರ್ಯನಂತೆ ॥
ಪದುಳದುತ್ತುಂಗ ಸಿಂಹಾಸನವೇರಿ ದೇ । ಹದ ಕಾಂತಿ ಮೆರೆಯೆ ಮೆರೆದನು ॥ ೩೦ ॥
ಆವ ಬಿಂಕವೊ ಎಡಗಾಲ ಗದ್ದುಗೆಯ ಮೇ । ಲೋವಿ ಮಡಿದು ಮತ್ತೆ ಕೆಳಗೆ ॥
ಹಾವುಗೆಯೊಳು ಪೆಂಡೆಯದ ಬಲಗಾಲೂರಿ । ಠೀವಿಯೊಳೆಸೆದನಾ ರಾಯಾ ॥ ೩೧ ॥
ಬಲಗೈಯೊಳಾಂತ ಹೊನ್ನೊರೆಯ ಕಠಾರಿಯ । ಕೆಲಕೂರಿ ಮತ್ತೆಡಗೈಯಾ ॥
ಮಲಗಿನ ಮೇಲೂರಿ ಬೀರಸಿರಿಯನಾಳ್ದ । ಕಲಿಗಳದೇವನೊಪ್ಪಿದನು ॥ ೩೨ ॥
ನುರುಸುಯ್ಯ ಗಾಳಿಗೆ ತೇಲ್ವ ದುಕೂಲದ । ಸೆರಗುಸೇರುವೆ ದೊರೆಹೊದೆದು ॥
ತೆರಪಿನೆದೆಯ ಹೊನ್ನಜನ್ನಿವಾರದ ರೇಖೆ । ಮೆರೆಯೆ ರಾಜೇಂದ್ರ ಮೆರೆದನು ॥ ೩೩ ॥
ಮಿರುಪ ಕಿರೀಟವುಂಟದನಂದು ಧರಿಸಿತಿ । ಲ್ಲುರೆ ಮನದೊಂದು ಲೀಲೆಯೊಳು ॥
ತುರುಬು ಚುಂಗೆಸೆಯೆ ಚಿಮ್ಮುರಿಸುತ್ತಿ ಸೊಬಗನೆ । ಕರೆವುತ್ತಿದ್ದನು ನೋಡುವರಿಗೆ ॥ ೩೪ ॥
ಹೊಂಬಣ್ಣ ಮೈಗೆ ಮೋಹಿಸುವ ಕಾಗಿನಧಟ್ಟ । ತುಂಬಿದ ಕಸ್ತೂರಿತಿಲಕ ॥
ಮುಂಬಾಯ ಕರ್ಪೂರವೀಳೆಯದಿಂದ ಕ । ಣ್ಗೆಂಬಾದನಾ ಗಾಡಿಕಾರ ॥ ೩೫ ॥
ಸುಮ್ಮನಸುಗಂಧ ಕದಂಬದ ಕಂಪನು । ತಿಮಿರಿ ತೆಗೆಯಲಾಗಿ ಸಭೆಗೆ ॥
ಘಮಘಮಿಸುವ ದೇಹಪರಿಮಳದಿಂದೊಂದು । ಗಮಕದೊಳೆಸೆದನಾ ರಾಯಾ ॥ ೩೬ ॥

ನೋಡುವ ಠೀವಿ ಹತ್ತೆಂಟಕೊಮ್ಮೊಮ್ಮೆ ಮಾ । ತಾಡುವ ನುಡಿಯ ವಿಡಾಯಾ ॥
ಪಾಡರಿಂದೋಲಗಗೊಟ್ಟಾಚೆ ಶಿರವನ । ಲ್ಲಾಡಿಸುತಿಹನು ನೋಳ್ಪವರಾ ॥ ೩೭ ॥
ಜೋಕೆವಿಡಿದು ನೀಡುವೆಳೆಯ ಘಳಿಗೆಯ ಪ । ರಾಕಿನೊಳಗೆ ಕೈಕೊಳುತ ॥
ಏಕೆ ನುಡಿಯನೋ ಇನ್ನೊಮ್ಮೆಯೆಂಬಂತೊಂದು । ತೂಕದೊಳೆಸೆದನಾ ರಾಯಾ ॥ ೩೮ ॥
ಗಂಭೀರವೆಂಬುದು ಸರ್ವಗುಣಗಳೆಂಬ । ಅಂಭೋಧಿಯಾದಿಯಾಗಿಹುದು ॥
ಗಂಭೀರಬೇಕು ರಾಜಗು ರಾಜಯೋಗಿಗು । ಗಂಭೀರಕೆಟ್ಟರೇನುಂಟು ॥ ೩೯ ॥
ಉಬ್ಬಿಬೆಳೆದು ಬಾಗಿತ್ತಿಲ್ಲ ರೇಖೆಗೆ ಬಂದು । ಹುಬ್ಬಿನಂತೆಸೆವೆಳೆಮೀಸೆ ॥
ಹುಬ್ಬುಮೀಸೆಯ ನೋಡಿ ನಲಿವ ಬವರಿ ಕಣ್ಣ । ಹಬ್ಬವ ಮಾಳ್ಪನೆಲ್ಲರಿಗೆ ॥ ೪೦ ॥
ಕುಂಡಲಗಳ ಕಾಂತಿ ಕಂಗಳ ಪ್ರಭೆ ಗಂಡ । ಮಂಡಲದೊಳಗಾಡಲವನಾ ॥
ಮಂಡೆಯೊಲಿದರೆ ಹೆಂಗಳಿಗೆ ಮನ್ಮಥನದೊ । ಖಂಡೆಯವಲುಗಿದಂತಿಹುದು ॥ ೪೧ ॥
ಆರು ಬಣ್ಣಿಪರವನಂಗದ ನಿರ್ಮಲಾ । ಕಾರವ ಕೊರಳೊಳಿಕ್ಕಿದರ್ಘ ॥
ತೋರಮುತ್ತುಗಳೆಲ್ಲ ತಿಳಿಗೊಳದೊಳು ತೋರ್ಪ । *ತಾರಾಳಿಯಂತೆ ತೋರಿದುವು ॥ ೪೨ ॥
ಪದಕ ಕಡಗ ಕಂಠಮಾಲೆಯು ನವರತ್ನ । ದ್ಯುದಿತಾಂಶು ದೇಹಕಾಂತಿಯೊಳು ॥ ಕಾಗ್.
ಪುದಿದು ಪೊಳೆಯೆ ಕಣ್ಗೆ ತೋರಿದಸಿಂದ್ರಚಾ । ಪದೊಳು ಮಾಡಿದ ನೃಪನಂತೆ ॥ ೪೩ ॥
ಮಿಗೆ ತೋರಮುತ್ತಿನ ತೊಡಿಗೆಯೊಡನೆ ಧಗ । ಧಗಿಸುವ ಲಾವಣ್ಯದಿಂದ ॥
ಹಗಲು ನಕ್ಷತ್ರವೆರಸಿ ಪೂರ್ಣಚಂದ್ರಮ । ಸೊಗಸಿದಂತೆಸೆದನು ಚಿತ್ರಾ ॥ ೪೪ ॥
ಶಾಲ್ಲಿಯ ತೆರೆಯ ತಟ್ಟಿಚ್ಚಿ ದೀಪದಕಾಂತಿ । ಥಾಳಿಸುವಂತೆ ಲೋಕದೊಳು ॥
ಆ ಲಲಿತಾಂಗನ ತನುಕಾಂತಿ ಪೊದೆದ ದು । ಕೂಲದ ಹೊರಗೆ ರಂಜಿಸಿತು ॥ ೪೫ ॥
ಬಳಸಿನ ನುಡಿಗಳೇನೋಲಗದೆಳೆವೆಂಗ । ಳೊಲಿದುಟ್ಟ ಬಿಳಿಯ ಸೀರೆಗಳೊ ॥
ಚೆಲುವನ ತನುಕಾಂತಿ ಸೋಂಕಿದ ರಂಗು ಮಾ । ದಲವಣ್ಣವೆನಲೆಸೆದಿಹುದು ॥ ೪೬ ॥
ಕವಿತೆಯ ರಚನೆಯೆಂದೆನಲಾಗದೇಕೆಂದ । ರಮನಾದಿಜಿನನ ಕುಮಾರಾ ॥
ಭವಭಂಜನನಂತ್ಯದೇಹಿಯಲ್ಲವೆ ಪೇಳ । ಲವನಿಗೀ ಕಾಂತಿ ವಿಸ್ಮಯವೇ ॥ ೪೭ ॥
ಕೀಟಕದೇಹಿಗೀ ಕಾಂತಿವಿಸ್ಮಯವೈಸೆ । ಮೀಟೆನಿಸುವ ವಜ್ರದೇಹಿ ॥
ಕೋಟಿಸೂರ್ಯರ ಕಾಂತಿಯನು ನಾಳೆ ಕ್ಷಣಕೆ ಸಂ । ಘಾಟದಿ ಕೊಂಬವಗರಿದೆ ॥ ೪೮ ॥
ಚಿತ್ರಿಸಬಾರದವನರೂಪು ಕರುವಿಟ್ಟು । ಸೂತ್ರಿಸಿಯೆರೆಯಲಶಕ್ಯ ॥
ನೇತ್ರಕೆ ಮನಕೆ ಗೋಚರವಲ್ಲದದು ವಾಕು । ಮಾತ್ರಕೆ ಗೋಚರವೈಸೆ ॥ ೪೯ ॥

* ತಾರಗೆ.

ಹೆಂಗಳ ರೂಪು ಗಂಡರಿಗೆ ಗಂಡರ ರೂಪು । ಹೆಂಗಳ ಸೋಲಿಪುದೆಂಬ ॥
ಪಾಂಗಲ್ಲವವನ ಚೆಲ್ವಿಕೆ ಗಂಡು ಪೆಣ್ಗಳ । ಕಂಗಳ ಸೆರೆವಿಡಿದಿಹುದು ॥ ೪೦ ॥
ನಿಟ್ಟಿಸಿದರೆ ಮುತ್ತಮುದುಕಿಗಾದರು ಜುಮ್ಮು । ಥಟ್ಟಿಸುತಿಹುದು ರೂಪವನ ॥
ಬಟ್ಟಜವ್ವನೆಯರಂತಿಂತಾದರೆಂದು ಬಾ । ಯ್ಬಿಟ್ಟನ್ನು ನುಡಿಯಲದೇಕೆ ॥ ೪೧ ॥
ಅಂಗವಂಗಕೆ ತಕ್ಕ ಲಾವಣ್ಯ ಲಾವಣ್ಯ । ದಿಂಗಿತ ಪ್ರಾಯ ಪ್ರಾಯದೊಳು ॥
ಸಂಗಡಿಸಿದ ಸಿರಿಗಂಭೀರ ವಿಕ್ರಮ । ಶೃಂಗಾರಶೋಭೆಯೊಳೆಸೆದಾ ॥ ೪೨ ॥
ಆವ ನೋಂಪಿಯ ನೋಂತನೋ ಪೂರ್ವಭವದೊಳ । ದಾವ ಭಕ್ತಿಯೊಳಾದಿಜಿನನಾ ॥
ಭಾವಿಸಿದನೊ ಅಲ್ಲದಿದ್ದರಾ ನೃಪಗಂತು । ಲಾವಣ್ಯವಹುದೇ ಲೋಕದೊಳು ॥ ೪೩ ॥
ಹಲವೇನು ದೇಹ ಬೇರಾತ್ಮ ಬೇರೆಂದಾತ್ಮ । ಕಲೆಯ ಮುನ್ನೊಲ್ದು ಧ್ಯಾನಿಸಿದಾ ॥
ಫಲದಿಂದ ದೊರೆಕೊಂಡುದಾ ರಾಯಗಾ ರೂಪು । ಇಳೆಯೊಳೆಲ್ಲರಿಗೇಕೆ ಬಹುದು ॥ ೪೪ ॥
ನೋಡುವವರಿಗೆ ಕಣ್ಣಲಸಿಕೆಯಿಲ್ಲ ಕೊಂ । ಡಾಡುವವರಿಗಾಸರಿಲ್ಲ ॥
ನೋಡಿದನಿತಕೆ ಕೊಂಡಾಡಿದನಿತಕಿಚ್ಛೆ । ಮಾಡುವ ಸೊಬಗಿನೊಳೆಸೆದಾ ॥ ೪೫ ॥
ಈ ರೂಪು ರೇಖೆ ಮತ್ತೀ ಗಾಡಿ ಮೋಡಿ ಇಂ । ತೀ ರಾಯಗಲ್ಲದನ್ಯರಿಗೆ ॥
ಬಾರದು ಬಂದರೊಬ್ಬರಿಗೆ ಮೊರೆಯದೆಂದು । ತೋರುತಿಹರು ತಮತಮಗೆ ॥ ೪೬ ॥
ತರತರವಿಡಿದು ಥಾಳಿಸುತಿಹ ದೀರ್ಘ ಚಾ । ಮರಗಳ ಸಾಲೊಳೆಸೆದನು ॥
ಹರಿವ ಬೆಳ್ಮುಗಿಲೊಳು ತೋರಿ ಮರಸುವ ಚಂ । ದಿರನೋ ಭಾಸ್ಕರನೋಯೆಂಬಂತೆ ॥ ೪೭ ॥
ಬಲದೊಳು ಭೂಭುಜರೆಡದಲ್ಲಿ ಗಣಿಕೆಯ । ರೊಲುಮೆಯ ಕವಿಗಳು ಮುಂದೆ ॥
ನಿಲೆ ಹಿಂದೆ ಹಿತವರು ಬಳಸಿದೆಕ್ಕಡಿಗರ । ಬಲು ಬಜಾವಣೆಯೊಳೊಪ್ಪಿದನು ॥ ೪೮ ॥
ಕೆಳೆಯರು ಸಚಿವರು ಸಾರಲಿದ್ದರು ದೃಷ್ಟಿ । ಸಲುವಷ್ಟರೊಳು ಮುಂದಿಯಿಹುದು ॥
ಗಿಳಿಯರಸಂಚೆ ತಂಬೆಲರಿಂದು ಬಳಸಿ ಕಂ । ಗೊಳಿಸುವ ಮದನನಂತಿರ್ದಾ ॥ ೪೯ ॥
ಗಲಭೆ ಹೋ ನಿಲ್ಲು ಸಂಮುಖವಾಗು ಚಿತ್ತೈಸು । ತೊಲಗು ಲಾಲಿಸು ಕುಳ್ಳಿರೆಂದು ॥
ಸುಳಿವ ಕಟ್ಟಿಗೆಕಾರರಾಸ್ಥಾನದೊಳು ಕೋ । ಗಿಲೆಯಂತೆ ದನಿದೋರುತಿಹರು ॥ ೫೦ ॥
ಕಿಂಮೆನ ಬಾರದು ನಗಬಾರದತ್ತಿತ್ತ । ನೆಮ್ಮಬಾರದು ಸಭೆಯೊಳಗೆ ॥
ಸುಮ್ಮನಿರ್ದುದು ಜನ ಭರತಚಕ್ರೇಶನ । ಸೊಮ್ಮಲ್ಲವೇ ರಾಜಮೋಡಿ ॥ ೫೧ ॥
ಕಲೆಯನರಿದು ಕಾಲವರಿದು ರಾಯನ ಮನ । ದೊಲವನರಿದು ಮತ್ತೆ ಪರರ ॥
ಒಳಗು ಹೊರಗನರಿದೊಯ್ಯನೆ ಕೆಲಬರು । ಸಲುಗೆವುಳ್ಳವರು ನುಡಿವರು ॥ ೫೨ ॥
ಮಂಡಳಿಕರ ಮೊತ್ತ ರಾಜಕುಮಾರರ । ತಂಡ ಮಂತ್ರಿಗಳ ಕದಂಬ ॥
ಪಂಡಿತರೊಡ್ಡು ಗಾಯಕರ ಸಂತತಿ ಯೆಡೆ । ಗೊಂಡಿರ್ದೋಲಗದೊಳಗೆ ॥ ೫೩ ॥

ನಟ್ಟುವರಕ್ಕರಿಗರು ಭಯಕಾರರು । ಭಟ್ಟರು ವೈದ್ಯಜೋಯಿಸರು ॥
ಜಟ್ಟಿಗಳಂಕದಾಳುಗಳಿದ್ದರಲ್ಲಲ್ಲಿ । ಮಿಟ್ಟನೆ ಮಿಡುಕದೆ ನಿಂದು ॥ ೧೪ ॥

ಮ್ರಾವತಿಗಳು ಸಾಣಿಗಳು ಹೇರಿಗರು ಸೇನ । ಬ್ಬೋವರು ಮಂತ್ರಜೀವಿಗಳು ॥
ರಾವುತರೆಕ್ಕಡಿಗರು ನಾಯಕರು ಬಹು । ಸೇವಕರಿರ್ದರಲ್ಲಲ್ಲಿ ॥ ೧೫ ॥

ವಾರನಾರಿಯರು ತಾವಾರನಾರಿಯರೊ ಶೃಂ । ಗಾರಕೆ ಸೋತು ಭೂವರನಾ ॥
ಹಾರುತ್ತಿದ್ದರು ಸುರಪಶುವ ಗೋದಾನಕ್ಕೆ । ಹಾರುವ ಹಾರುವನಂತೆ ॥ ೧೬ ॥

ಅಂಬುಜವೆಲ್ಲವು ರವಿಯನೋಳ್ಪಂತೆ ನೀ । ಲಾಂಬುಜ ನೋಳ್ಪಂತೆ ಶಶಿಯಾ ॥
ತುಂಬಿದ ಸಭೆಯೆಲ್ಲ ನೃಪನ ನೋಡುತ ಮಿಕ್ಕ । ಹಂಬಲ ಮರೆದುದಲ್ಲಲ್ಲಿ ॥ ೧೭ ॥

ನೋಡುತಿರ್ದರು ತನ್ನನೆಲ್ಲರು ತಾನಾಗ । ನೋಡಿದನೊಲ್ದು ಗಾಯಕರ ॥
ನೋಡಿದ ಬಗೆಯರಿದಾ ಜಾಣರಾಗಳೆ । ಹಾಡತೊಡಗಿದರೋಜೆಯೊಳು ॥ ೧೮ ॥

ರೋಮಾಂಚನಸಿದ್ಧ ಜುಂಜುಂಮಾಲಪ ಗಾ । ನಾಮೋದ ಚುಂಚು*ಮಾಲಾದ್ಯ ॥
ಶ್ರೀಮಂತ್ರಗಾಂಧಾರ ರಾಗವರ್ತಕರೆಂಬ । ರಾ ಮಹೀಪತಿಯ ಗಾಯಕರು ॥ ೧೯ ॥

ಬಳ್ಳಬಾಯ್ದೆರೆಯದೆ ಭ್ರಾಂತುಗೊಂಡಂತೆ ಮೈ । ಯೆಲ್ಲ ತೂಗಾಡದೊಂದಿನಿಸು ॥
ಅಲ್ಲಾಟವುಂಟೋಜೆವಿಡಿದು ಬಾಯ್ದೆರೆಯುಂಟು । ಸಲ್ಲಲಿತದೊಳು ಹಾಡಿದರು ॥ ೨೦ ॥

ತಬ್ಬಿಬ್ಬಿಯಾಗದೆ ತಳ್ಳಂಕಗೊಳ್ಳದೆ । ಬೊಬ್ಬೆಯಿಕ್ಕದೆ ಜೋಕೆಯರಿದು ॥
ಒಬ್ಬರಿಬ್ಬರು ಮೂವರೊಂದೊಂದು ಕಲೆಯ ಮೈ । ಯುಬ್ಬುವೊಲು ಕೇಳಿಸಿದರು ॥ ೨೧ ॥

ಜೋಲಿಮಾಡದೆ ಜೋಕೆವಿಡಿದುರೆ ಪ್ರಾತಃ । ಕಾಲದರಾಗವನರಿದು ॥
ಆಳಾಪಿಸಿದರು ಕೇಳುವ ಜನರೆದೆಗೆ ತಂ । ಗಾಳಿ ಬೀಸಿದ ತೆರನಾಗೆ ॥ ೨೨ ॥

ಜೋಡುಜೋಡಾಗಿ ತಾವರೆಯಿದಿರೊಳು ಸ್ವರ । ಮಾಡುವ ತುಂಬಿಗಳಂತೆ ॥
ನೋಡುತ ಭರತರಾಜನ ಮುಖಪದ್ಮವ । ಮಾಡಿದರಾಳಾಪಗಳನು ॥ ೨೩ ॥

ಭರತರಾಜನ ಮುಖಚಂದ್ರನ ಕಂಡ ಜಾ । ಣರಿಗೆ ಮಹಾಳಾಪವುಕ್ಕೆ ॥
ಬರುತಿದ್ದುವಿಂದುವ ಕಂಡ ಸಮುದ್ರದ । ಭರತದಂತೇನ ಬಣ್ಣಿಪೆನು ॥ ೨೪ ॥

ಭರತಚಕ್ರಿಯ ನೆನೆದರೆ ಬಾರದವರಿಗೂ । ಭರತಶಾಸ್ತ್ರದ ಕಲೆಬಹುದು ॥
ಭರತರಾಜನ ಮುಂದೆ ಭರತ ಶಾಸ್ತ್ರದ ಸಿರಿ । ಭರತವಪ್ಪುದಾವ ಗಹನ ॥ ೨೫ ॥

ಪ್ರಾತಃಕಾಲದ ರಾಗದೊಳೊಡಗೂಡಿ । ವೀತರಾಗನ ಸ್ಮರಣೆಗಳಾ ॥
ರೀತಿಯರಿತು ಹಾಡಿದರು ಕೇಳ್ವರೆಲ್ಲರ । ಪಾತಕ ಪರಿದೋಡುವಂತೆ ॥ ೨೬ ॥

*ಮಾದಿಕ್ಕ.

ಭೂಪಾಳಿಯಿಂದ ಧನ್ಯಾಸಿಯಿಂದಾ ಸರ್ವ । ಭೂಪಾಳಿಗೊಡೆಯನ ಮುಂದೆ ॥
ಶ್ರೀಪುರುನಾಥನ ಪಾಡಿದರೆಲ್ಲರ । ಪಾಪಲೇಪವನ್ನೈದುವಂತೆ ॥ ೭೭ ॥
ಮಲಿನವಿಲ್ಲದ ಮನದಿಂದಾ ನಿಷ್ಕಲನ ನಿ । ರ್ಮಲ ನಿತ್ಯನನಾದಿಜಿನನ ॥
ಮಲಹರಿಯಿಂದ ಪಾಡಿದರು ಕೇಳ್ವರ ಕರ್ಮ । ಮಲಹರಿವಂತೆ ಗಾಯಕರು ॥ ೭೮ ॥
ದೇಶಾಕ್ಷಿಯಿಂದ ಜಿನೇಶನ ಗುಣಗಳ । ದೇಶಾಧಿಪತಿ ಮೆಚ್ಚಿ ಹಾಡಿ ॥
ಕೌಶಲಮಂಗಳಾಷ್ಟಕವನು ಮಂಗಳ । ಕೌಶಿಕೆಯಿಂದ ಹಾಡಿದರು ॥ ೭೯ ॥
ದಂಡಿಗೆಗಳ ಶ್ರುತಿದಂಡಿಗೆ ಹೋಗದೆ । ಕಂಡೊಡಗೂಡಿ ಕಂಠದೊಳು ॥
ಗುಂಡಾಕ್ರಿ ಭೈರವಿಯಿಂದ ಕುಸುಮಕೋ । ದಂಡದಲ್ಲಣನ ಪಾಡಿದರು ॥ ೮೦ ॥
ವೀಣೆಯ ದನಿಯಾವುದದರೊಳು ಪಾಡುವ । ಗಾನದ ಧ್ವನಿಯಾವುದೆಂದು ॥
ಕಾಣಿಸಿಕೊಳ್ಳದೆ ಜಿನಸಿದ್ಧ ಮಹಿಮೆಯ । ಕಾಣಿಸಿ ಪಾಡಿದರೊಲ್ದು ॥ ೮೧ ॥
ಚೀರದೆ ಬತ್ತದೆ ಜತಿ ಜಾತಿ ಕಟ್ಟಣೆ । ಜಾರದೆವೊಡಲ ದಂಡಿಸದೇ ॥
ಏರವಿಳಿಯಲಹುದಹದು ಲೇಸೆನೆ ಸವಿ । ದೋರಿ ಹಾಡಿದರು ಗಾಯಕರು ॥ ೮೨ ॥
ಕಿನ್ನರಿವಿಡಿದಾದಿ ದೇವನ ಮಹಿಮೆಯ । ಬಿನ್ನಾಣವರಿದು ಪಾಡಿದರು ॥
ಕಿನ್ನರರೇಕೆ ಕಿಂಪುರುಷರೇಕಿವರೆ ಸಾ । ಕಿನ್ನೇಕೆ ಹಲಬರೆಂದೆನಲು ॥ ೮೩ ॥
ರನ್ನ ಮೂರರ ಗುಣವನು ಮುಖವೀಣೆಯ । ಸನ್ನಾಹದಿಂದ ಹಾಡಿದರು ॥
ಚೆನ್ನಾಯ್ತು ಸೊಬಗಾಯ್ತು ಸೊಗಸಾಯ್ತು ಲೇಸು ಲೇ । ಸಿನ್ನೊಮ್ಮೆಯೆಂದು ಕೇಳ್ವಂತೆ ॥ ೮೪ ॥
ದನಿ ಲೇಸು ಮೇಳದ ಜೋಕೆ ಲೇಸಾಲಾಪ । ವನುಭವ ಲೇಸು ಮತ್ತಲ್ಲಿ ॥
ಜಿನನಾಮ ಕೂಡಿತು ಲೇಸು ಲೇಸೆಂದು ರಾ । ಯನಮುಂದೆ ನುಡಿದರಿಚ್ಛೆಗರು ॥ ೮೫ ॥
ತುಂಬಿಯ ಗಾನವಂತಿರಲಿ ಕೋಕಿಲನಾದ । ವೆಂಬರ ಮಾತದಂತಿರಲಿ ॥
ತುಂಬುರನಾರದರಿನ್ನೇಕೆ ಹೋಪುರೆ । ಯೆಂಬಂತೆ ಸೊಗಸಿ ಹಾಡಿದರು ॥ ೮೬ ॥
ಹಸುಳೆ ಕಲ್ಮರ ಪಾವು ಪಶುಮೃಗಗಳು ಗಾನ । ರಸಕೆ ಸೋಲುವವೆಂದರಿನ್ನು ॥
ರಸಿಕರು ಸೋಲರೆ ಸಭೆಯಲ್ಲ ಕೇಳ್ದು ಮೈ । ಮುಸುಕದಿರ್ದುದು ಬೆರಗಾಗಿ ॥ ೮೭ ॥
ಕೊಳಲಿಗೆ ಪಶು ಮಿಗ ಘಂಟೆಗೆ ಹಸುಳೆ ಜೋ । ಗುಳಿಗೆ ಸರ್ಪ ಸುನಾಗಸರಕೆ ॥
ಎಳೆವೆಣ್ಣದನಿಗೊಂದು ವೃಕ್ಷ ಗುಂಡಾಕ್ರಿಗೆ । ಶಿಲೆಪೊಸರುವುದಿದು ಘನವೆ ॥ ೮೮ ॥
ಗಾನವೆಲ್ಲಕೆ ಹಿತವಹುದದು ಧರ್ಮಕ । ಥಾನುಚರಿತವಾಗೆ ಪುಣ್ಯ ॥
ಹೀನಸತಿಯರಾಟ ಬೇಟ ಕಾಳಗ ಬಂದ । ರೇನೆನ್ನಬಹುದದು ಪಾಪ ॥ ೮೯ ॥
ಸಮವಸರಣದೊಳು ವಿಮಲಕಿರಣದೊಳ । ಗಮಲ ಮುನಿಗಳ ವೃಂದದೊಳು ॥
ಕಮಲಕರ್ಣಿಕೆಗೆ ಸೋಂಕದೆ ನಿಂದ ದೇವನ । ಗಮಕವನೊಲ್ದು ಪಾಡಿದರು ॥ ೯೦ ॥

ಚಿತ್ರವಲ್ಲವೆ ನಳಿನದ ಮೇಲೆ ಗಗನ ನಿ । ಕ್ಷೇತ್ರದೊಳರುಹನೊಪ್ಪಿಹುದು ॥
ಧಾತ್ರಿಯ ಹಂಗೆ ಹೂವಿನ ಹಂಗೆ ಚಿನ್ಮಯ । ಗಾತ್ರಗೆ ಹಂಗಳಿದವಗೆ ॥ ೯೧ ॥

ಸರಸಿಯೊಳಂಬುಜ ಕಾನನದಲ್ಲಿ ಕೇ । ಸರಿಯಿಹುದಿದು ಲೋಕರೂಢಿ ॥
ಸುರರ ನಡುವೆ ಸಿಂಹ ಸಿಂಹದ ಮೇಲೆ ತಾ । ವರೆ ಇದಚ್ಚರಿ ಜಿನಮಹಿಮೆ ॥ ೯೨ ॥

ಚಂದ್ರನೊಬ್ಬನ ಕಂಡು ಬಲ್ಲೆವು ಮೂವರು । ಚಂದ್ರರೊಂದಾಗಿ ರಾಜಿಪುದು ॥
ರುಂದ್ರ ವಿಸ್ಮಯವೆಂದು ಮುಕ್ಕೊಡೆಯೊಡೆಯ ಜಿ । ನೇಂದ್ರನನೊಲ್ದು ಪಾಡಿದರು ॥ ೯೩ ॥

ಗಗನದೊಳಮರರು ಜಯಜಯವೆನುತ ಸ್ವಾ । ಮಿಗೆ ಹೂಮಳೆಗರೆವಾಗ ॥
ಮುಗಮುಗಿಸುವ ಕಂಪಿಗೆರಗುವ ತುಂಬಿಯ । ಬಗೆಯ ಬಿನ್ನಣಿಸಿ ಪಾಡಿದರು ॥ ೯೪ ॥

ದಿಂದಿಮಿ ದಂದಣ ತೊದಿಗಿದಿ ಮಿಕುದಿಂ । ಮೆಂದು ನಾನಾ ವಿಧದಲ್ಲಿ ॥
ವೃಂದಾರಕವೃಂದ ಬಾಜಿಸುತಿಹ ಸುರ । ದುಂದುಭಿರವವ ಹಾಡಿದರು ॥ ೯೫ ॥

ಅಂಕುರಪತ್ರಪುಷ್ಪಗಳಿಂದ ನವರತ್ನ । ಸಂಕುಳ ರೂಪಿನಿಂದೆಸೆವ ॥
ಕಂಕೇಲಿವೃಕ್ಷ ಜಿನೇಂದ್ರನೊತ್ತಿನೊಳಿರ್ಪ । ಬಿಂಕವನೊಲ್ದು ಪಾಡಿದರು ॥ ೯೬ ॥

ದಿವ್ಯಸುಖವ ದಿವ್ಯದರ್ಶನ ಬೋಧವ । ದಿವ್ಯಶಕ್ತಿಯ ದಿವ್ಯಪದವಾ ॥
ದಿವ್ಯಸಿದ್ಧಿಯ ನೆಲೆಗಾಣಿಪ ದೇವನ । ದಿವ್ಯಧ್ವನಿಯ ಪಾಡಿದರು ॥ ೯೭ ॥

ಕಾಮನ ಬಿಲ್ಲು ಮೈಲ್ಬಳಸಿದ ಹೇಮಾದ್ರಿ । ಸ್ವಾಮಿಯ ರೂಪನಾಂತಂತೆ ॥
ಭಾಮಂಡಲ ಬಳಸಿರಲೆಸೆವರ್ಹನ । ಭೂಮಿಪಾಶ ಮೆಚ್ಚಿ ಹಾಡಿದರು ॥ ೯೮ ॥

ಮಂಜು ಸುತ್ತಲು ಸುಳಿದಾಡುವೆಡೆಯೊಳಪ । ರಂಜಿಯು ಗಿರಿ ಮೆರೆವಂತೆ ॥
ರಂಜಿಸುವರುವತ್ತನಾಲ್ಕು ಚಾಮರದ ಬೆ । ಡಂಗ ಬಿನ್ನಣಿಸಿ ಹಾಡಿದರು ॥ ೯೯ ॥

ಸಿಂಹಾಸನ ಮೊದಲಾದೆಂಟು ಪ್ರತಿಹಾರ । ಸಂಹತಿಯೊಳು ಕಾಂತಿಮಯುದಾ ॥
ಸಂಹನನದ ಗಾಡಿ ಮೆರೆಯಲೊಪ್ಪುವ ಕರ್ಮ । ಸಂಹಾರ ಜಿನನ ಪಾಡಿದರು ॥ ೧೦೦ ॥

ಜಿನನ ಪೊಗಳಿ ಕೂಡೆ ಸಿದ್ಧರ ಕೀರ್ತಿಸಿ । ಮುನಿಗಳ ವಂದಿಸಿ ಮತ್ತೆ ॥
ತನುವಿನೊಳಿದ್ದಾತ್ಮ ತತ್ವವಿಚಾರವ । ಜನಪತಿ ಮೆಚ್ಚಿ ಹಾಡಿದರು ॥ ೧೦೧ ॥

ಆರು ಬಲ್ಲರು ಹಂಸತತ್ವವ ತಮ್ಮ ಶ । ರೀರ ತುಂಬಿರುತಿಹುದದನು ॥
ಹಾರದೆ ಸಾರದೆ ಹೊರಹೊರಗಾಡಿ ಸಂ । ಸಾರದುಃಖವನುಣುತಿಹರು ॥ ೧೦೨ ॥

ಹೊಳೆವ ಕನ್ನಡಿ ಕೈಯೊಳಿರ್ದು ನೋಡದೆ ನೀರ । ನೆಳಲಲ್ಲಿ ಮೊಗವ ನೋಳ್ಪಂತೆ ॥
ಒಳಗಿದ್ದ ಚಿದ್ರೂಪ ನೋಡದೆ ಜಗವೆಲ್ಲ । ಬಳಲುತಿಹುದು ಹೊರಗಾಡಿ ॥ ೧೦೩ ॥

ಮನೆಯಲ್ಲಿ ಹೂಳಿದ್ದ ನಿಧಿಯಕಾಣದೆ ಹೋಗಿ । ಧನಿಕರ ಯಾಚಿಸುವಂತೆ ॥
ತನುವಿನೊಳಿದ್ದಾತ್ಮರೂಪನಿಟ್ಟಿಸದೆ ಮೋ । ದಿನಿಯ ತೊಳಲಿ ನೋಡುತಿಹರು ॥ ೧೦೪ ॥

ನರುಗಬ್ಬಿನೊಳಗಣ ರಸವಕಾಣದೆ ಪಶು । ಹೊರಗಣೆಲೆಯ ಸವಿವಂತೆ ॥
ಅರಿದೊಳಗಾತ್ಮ ಸುಖವನುಣಲರಿಯದೆ । ಹೊರಗೆಳಸುವರಂಗಸುಖಕೆ ॥ ೧೦೫ ॥

ಪಸುರೆಲೆಗಳಬಿಟ್ಟು ತನಿಗಬ್ಬಿನೊಳಗಣ । ರಸವಕೊಂಬಾನೆಗಳಂತೆ ॥
ಹಸಗೆಟ್ಟು ತನುಸುಖಕೊಲಿಯದೆ ಕೆಲರು ಭೇ । ದಿಸಿ ನಿಜಸುಖವ ಭೋಗಿಪರು ॥ ೧೦೬ ॥

ಪಿಡಿದಿರ್ದು ತನ್ನ ಹಸ್ತದೊಳು ವಸ್ತುವನೋಡ । ದಡವಿಯೊಳರಸುವನಂತೆ ॥
ಒಡಲೊಳಿದ್ದಾತ್ಮನ ನೋಡಲೊಲ್ಲದೆ ಮೂರು । ಪೊಡವಿಯ ಚಿಂತಿಸುತಿಹರು ॥ ೧೦೭ ॥

ಒರೆಯೊಳಿದ್ದಾಯುಧದಂತೆ ಕಾರ್ಮುಗಿಲಿನ । ಮರೆಯೊಳಗಿಹ ಸೂರ್ಯನಂತೆ ॥
ಹೊರಗೆ ಕಲ್ಮಷದ ಮೈಯುಹುದೊಳಗಾತ್ಮನು । ಕರೆವುತಿಹನು ತಿಳಿವೆಳಗಾ ॥ ೧೦೮ ॥

ತಿಳಿವೆ ಶರೀರ ತಿಳಿವೆ ರೂಪು ಬೆಳಗೆ ಮೈ । ಬೆಳಗೆ ತಾನಾಗಿರುತಿಹುದು ॥
ತಿಳಿವು ಬೆಳಗುಗಳೆ ಹಂಸನ ಕುರುಹೆಂದು । ತಿಳಿದು ನೋಳ್ಪವನೀಗ ಧನ್ಯಾ ॥ ೧೦೯ ॥

ಪುರುಷಾಕಾರನು ಮೈಯೊಳಿರ್ದುದ ಮೈಯ । ಬೆರಸದೆ ಶುದ್ಧಾತ್ಮನಿಹನು ॥
ಪುರುಷಾಕಾರವನಾಕಾಶದೊಳಗೊಂದ । ಬರೆದಥೋ ಎಂಬ ಭಾವದೊಳು ॥ ೧೧೦ ॥

ತಗಡಿನೊಳಗೆ ತೋರ್ಪ ಛಾಯಾಪ್ರತಿಮೆಯೊ । ಹಗಲಲ್ಲಿ ಬೆಳುದಿಂಗಳಲ್ಲಿ ॥
ಸೊಗಸುವ ಛಾಯಾಪುರುಷನೋಯೆಂಬಂತೆ । ಬಗೆಗೊಳಿಸುವುದಾತ್ಮರೂಪು ॥ ೧೧೧ ॥

ಛಾಯಾಪ್ರತಿಮೆಯ ಛಾಯಾಪುರುಷನ । ಛಾಯೆಗೆ ಸುಜ್ಞಾನವಿಲ್ಲ ॥
ಆಯೆರಡಕೆ ತಿಳಿವೊಡಗೂಡಲದು ತಾನೆ । ಕಾಯದೊಳಿದ್ದಾತ್ಮರೂಪು ॥ ೧೧೨ ॥

ನಾಲಗೆ ಕುಡುಹು ಶರೀರವೆ ವಾದ್ಯ ನಿ । ರಾಳಾತ್ಮನೇ ವಾದ್ಯಕಾರಾ ॥
ತಾಳಿ ನುಡಿಸುತಿರ್ದು ಬಿಟ್ಟು ಹೋದರೆ *ದೇಹ । ಡೋಳಿನಂದದೊಳು ಬಿದ್ದಿಹುದು ॥ ೧೧೩ ॥

ನುಡಿಸುವ ವಾದ್ಯಕಾರನು ಹೋದಮೇಲಲ್ಲಿ । ಕುಡುಹುವಾದ್ಯಗಳಿರುತಿಹುದು ॥
ಪಿಡಿದು ಮತ್ತೊಬ್ಬರು ನುಡಿಯಿಸಲರಿದವ । ಗಡದ ವಾದ್ಯವಿದಲ್ತೆ ದೇಹ ॥ ೧೧೪ ॥

ವಾದ್ಯಗಳಾರಾರು ಪಿಡಿದು ಬಾಜಿಸಿದರೆ । ವೇದ್ಯವೆನಿಸಿ ದನಿಯಹವು ॥
ಚೋದ್ಯವೀ ತನುವಾದ್ಯ ತಾಳ್ದೋರ್ವಗಲ್ಲದೆ । ಭೇದ್ಯವಾಗದು ಧ್ವನಿಗೊಡದು ॥ ೧೧೫ ॥

ನುಡಿಯಲರಿಯದ ದೇಹವ ನುಡಿಯಿಸುವನು । ನಡೆಯಲರಿಯದ ದೇಹವನು ॥
ನಡೆಯಿಸುವನು ದೇಹವೆರವೆಂದು ಬಗೆಯದೆ । ಕೆಡುತಿಹನಾತ್ಮನಯ್ಯಯ್ಯೊ ॥ ೧೧೬ ॥

ಲೋಹವ ಹೊಕ್ಕಗ್ನಿ ಹೊಯ್ಲ್ಗಿಡುವುದಾ । ಲೋಹವನಗಲೆ ಹೊಯ್ಲುಂಟೆ ॥
ದೇಹವ ಹೊಕ್ಕಿದ್ದರಾತ್ಮಗೆ ಬಾಧೆಯು । ದೇಹವಳಿಯೆ ಬಾಧೆಯುಂಟೆ ॥ ೧೧೭ ॥

---

*ಥಳೆ.

ಹೊತ್ತ ದೇಹವ ಬರುಮರಣದೊಳ್ಬಿಟ್ಟರೆ । ಮತ್ತೊಂದು ದೇಹ ಮುಂದಹುದು ॥
ಹೊತ್ತ ದೇಹವ ಬಿಟ್ಟು ಮತ್ತೊಂದು ದೇಹವ । ಪತ್ತದೆ ನಿಲ್ವುದು ಮುಕ್ತಿ ॥ ೧೧೮ ॥

ಹಿಡಿದ ದೇಹವ ಬಿಟ್ಟು ಮತ್ತೊಂದು ದೇಹವ । ಪಿಡಿಯದೆ ನಿಲ್ವುದೆಂತೆನಲು ॥
ಬಿಡದೆ ಸುಜ್ಞಾನಾಗ್ನಿಯಿಂದ ಕರ್ಮದ ಬೇರ । ಸುಡುವುದೊಂದೆಂದು ಪಾಡಿದರು ॥ ೧೧೯ ॥

ಬೇರು ಪರಿದ ವೃಕ್ಷ ತನ್ನ ತಾ ಕೆಡೆವಂತೆ । ಕ್ರೂರತೈಜಸ ಕಾರ್ಮಣಗಳಾ ॥
ಸಾರಾತ್ಮಶಿಖಿಯಿಂದ ಸುಡಲಾಗಿ ಬಾಹ್ಯಶ । ರೀರವಳಿವುದಾಗ ಮುಕ್ತಿ ॥ ೧೨೦ ॥

ಆದಿಜಿನನ ವಾಕ್ಯವಿದು ಹಂಸಯೋಗ ನಿ । ರ್ಭೇದದ ಭಕ್ತಿ ಸುಯುಕ್ತಿ ॥
ಭೇದವಿಜ್ಞಾನಿಗೆ ಗಮ್ಯವೆಂದಾತ್ಮವಿ । ನೋದಿಯು ಮುಂದೆ ಹಾಡಿದರು ॥ ೧೨೧ ॥

ರಾಜನಾಗಲಿ ಯೋಗಿಯಾಗಲಿ ಗೃಹಿಯಾಗ । ಲೀಜಿನತತ್ವವನರಿದು ॥
ಶ್ರೀಜಿನಭಕ್ತಿಯೊಳಿರೆ ಮುಕ್ತಿತಪ್ಪದೆಂ । ದಾ ಜಾಣರೊಲ್ದು ಪಾಡಿದರು ॥ ೧೨೨ ॥

ಹುಟ್ಟಿತಾಗಳೆ ನಸುನಗೆ ಮೊಗದೊಳು ಮನ । *ದಟ್ಟಿತಾ ನುಡಿಯದೆ ಚಕ್ರಿ ॥
ಇಟ್ಟನವರಮೇಲೆ ತನ್ನ ಕೋಮಲಹಸ್ತ । ಮುಟ್ಟಿ ದೇವಾಂಗವಸ್ತ್ರವನು ॥ ೧೨೩ ॥

ಗಾನ ನಿಂದುದು ಗಾಯಕರ ಮೆಚ್ಚುಮಿಗೆ ಬಂದು । ದಾನಂದ ಸಂದುದು ಸಭೆಗೆ ॥
ಭೂನಾಥನಾಸ್ಥಾನದೊಳಗಿದ್ದನಿಲ್ಲಿಗಾ । **ಸ್ಥಾನದಸಂಧಿ** ಸುಗಂಧಿ ॥ ೧೨೪ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೨೫ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇ । ಳ್ದಾಮೋದವೈದುವರವರೂ ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯು ಕಾಣ್ಬರರ್ತಿಯೊಳು ॥ ೧೨೬ ॥

ಅಭಿಮತಸಿದ್ಧಿದಾಯಕ ಯೋಗಿನಾಯಕ । ಉಭಯಲಾವಣ್ಯವರೇಣ್ಯ ॥
ಪ್ರಭೆತೋರುತೆನ್ನಂತರಂಗದೊಳಿರು ಬೋಧ । ವಿಭುವೆ ಚಿದಂಬರಪುರುಷಾ ॥ ೧೨೭ ॥

---

* ದಟ್ಟಿತಾತಗೆ ಚಕ್ರಧರಗೆ.

ಆಸ್ಥಾನಸಂಧಿ ಸಂಪೂರ್ಣಂ

# ಕವಿವಾಕ್ಯಸಂಧಿ.

ಪರಮಾರ್ಥಗುರುವೆ ಪರಂಜ್ಯೋತಿರೂಪನೆ । ಗರಳಹರನೆ ಭವಹರನೆ ॥
ಸರಸದೊಳೆನಗೆ ಸನ್ಮತಿದೋರು ಭವ್ಯಾಬ್ಜ । ತರಣಿ ನಿರಂಜನಸಿದ್ಧಾ ॥ ೧ ॥

ಸಂಗೀತಗೋಷ್ಠಿನಿಂದುದು ಸಾಹಿತ್ಯಸು । ಸಂಗತಿಗೆಳಸಿ ನೃಪೇಂದ್ರ ॥
ತುಂಗವಿದ್ವಾಂಸರ ನೆರವಿಗೊಯ್ಯನೆ ತನ್ನ । ಕಂಗಳ ಕಾಂತಿದೋರಿದನು ॥ ೨ ॥

ಕವಿಗಳು ಹಲಬರುಂಟವರ ಮಧ್ಯದೊಳೊಬ್ಬ । ದಿವಿಜಕಲಾಧರನೆಂಬ ॥
ಕವಿಯಿದ್ದನವನ ಮೊಗವ ನೋಡಲೊಡನಾ । ಕವಿ ನುಡಿದನು ಭಾವವರಿದು ॥ ೩ ॥

ಶ್ರೀಜಿನಚರಣಾಬ್ಜಸುರಭಿಮಧುವ್ರತ । ರಾಜಾಧಿರಾಜಾಗ್ರಗಣ್ಯ ॥
ರಾಜಿತಹಂಸಕಲಾನಂದ ನಿನಗೆ ಮ । ಹಾಜಯ ಸಿದ್ಧಿರಸ್ತೆಂದಾ ॥ ೪ ॥

ಜಯಸಿದ್ಧಿಯೆಂಬುದು ವೈರಿಭೂಪರನೊತ್ತಿ । ಜಯಿಸಿದರದು ಲೌಕಿಕಾರ್ಥ ॥
ಭಯಬಡಿಸುವ ಕಾಲಕರ್ಮವನೊತ್ತಿ । ಜಯಿಸಿದರದು ಪರಮಾರ್ಥ ॥ ೫ ॥

ಲೌಕಿಕಜಯವಂತರುಂಟು ಪಲಂಬರಾ । ಲೌಕಿಕಪರಮಾರ್ಥವೆರಡಾ ॥
ಭೂಕಾಂತರಲ್ಲಿ ಪಡೆವುದು ದುರ್ಲಭ ಸುವಿ । ವೇಕ ಬೇಕದಕೆ ಚಕ್ರೇಶ ॥ ೬ ॥

ಭೋಗವಿಚಾರವು ಬೇಕು ನೃಪತಿಗಾತ್ಮ । ಯೋಗವಿಚಾರವು ಬೇಕು ॥
ರಾಗರಸಿಕನಾಗಬೇಕು ಭಾವಿಸೆ ವೀತ । ರಾಗರಸಿಕನಾಗಬೇಕು ॥ ೭ ॥

ಶೃಂಗಾರ ಕೋವಿದನಾಗಬೇಕಾತ್ಮ ಸು । ಸಂಘ ಸಂಮುಖನಾಗಬೇಕು ॥
ಸಂಗರಸಂಮುಖನಾಗಬೇಕಾತ್ಮಯೋ । ಗಾಂಗ ಕೋವಿದನಾಗಬೇಕು ॥ ೮ ॥

ಇಹಲೋಕ ಸುಖವ ಭೋಗಿಸಬೇಕು ನೃಪತಿ ಯು । ತ್ಸಹನಾಗಬೇಕು ಧರ್ಮದೊಳು ॥
ಬಹು ಕಾಂಕ್ಷೆಯೊಳು ಸಿಕ್ಕಿದಂತಿರಬೇಕು ನಿಃ । ಸ್ಪೃಹನಾಗಬೇಕೆದೆಯೊಳಗೆ ॥ ೯ ॥

ಧರ್ಮದಿಂದಾದುದು ಸಿರಿಯೆಂದು ಸುಖಿಸುತ್ತ । ಧರ್ಮವ ಮರೆಯರುತ್ತಮರು ॥
ಧರ್ಮವೇತರದೆಂದು ಭೋಗಕ್ಕೆ ಮರುಳಾಗಿ । ಕರ್ಮಿಗಳಾಚರಿಸುವರು ॥ ೧೦ ॥

ಕೊಡಬೇಕು ಕೊಡುವಲ್ಲಿ ಪಾತ್ರವರಿಯಬೇಕು । ನುಡಿಬೇಕು ಮೌನವೂಬೇಕು ॥
ಬಡವರಂತಿರಬೇಕು ಪ್ರಭುವಿನಂತಿರಬೇಕು । ನಡೆಯಿದು ಜಾತಿಕ್ಷತ್ರಿಯರ ॥ ೧೧ ॥

ಪ್ರಜೆಪರಿವಾರಕ್ಕೆ ಹಿತನಂತೆ ವೈರಿಭೂ । ಭುಜರಿಗೆ ಭುಜಗೇಂದ್ರನಂತೆ ॥
ನಿಜಗುರುವಿಗೆ ಭೃತ್ಯನಂತೆ ಧಾರ್ಮಿಕರಿಗೆ । ನಿಜಬಂಧುವಾಗಿರಬೇಕು ॥ ೧೨ ॥

ಪರವೆಂಗಳಿಗೆ ಹೇಡಿ ಕದನಕ್ಕೆ ಕಡುಗಲಿ । ಪರಮತಕ್ಕೊಡಂಬಡೆ ಮೂರ್ಖ ॥
ಅರುಹನಾಗಮದೊಳರ್ತಿಗನಾತ್ಮಕಲೆಯೊಳು । ಸರಸನಾಗಿರಬೇಕು ನೃಪತಿ ॥ ೧೩ ॥

ಹವಣಿಸಿಕೊಳ್ಳಬೇಕಿಂದ್ರಿಯವರ್ಗವ । ನವಿಚ್ಛಳನಾಗಿರಬೇಕು ॥
ಭುವನಕಿಂದಿನರಾಯ ಸ್ವರ್ಗಕೆನಾಳಿನ । ದಿವಿಜೇಂದ್ರನೆನಿಸಿರಬೇಕು ॥ ೧೪ ॥

ಎರಳೆ ಮೀನಾನೆ ಪತಂಗ ತುಂಬಿಗಳು ಕಾ । ತರಿಸಿಯೊಂದೊಂದಿಂದ್ರಿಯದೊಳು ॥
ಪರಿಭವವಡೆದವಿನ್ನೈದಿಂದ್ರಿಯಕೆ ಸಿಕ್ಕಿ । ದರಸು ಕೆಡುವುದಾವ ಚೋದ್ಯ ॥ ೧೫ ॥

ಜ್ಞಾನಶೂನ್ಯನ ಪಂಚೇಂದ್ರಿಯ ಪಂಚಾಗ್ನಿ । ಜ್ಞಾನಿಯಿಂದ್ರಿಯ ಪಂಚರತ್ನ ।
ಜ್ಞಾನವಿಲ್ಲದೆ ಭೋಗಿಸುವ ಭೋಗಿ ಭವರೋಗಿ । ಜ್ಞಾನವಿಡಿದ ಭೋಗಿ ಯೋಗಿ ॥ ೧೬ ॥

ಜ್ಞಾನಿಯ ಮುಟ್ಟಲಮ್ಮದು ಕರ್ಮವೆನ್ನಲಾ । ಜ್ಞಾನ ತಾನಾವುದೆಂದೆನಲು ॥
ಜ್ಞಾನವೆ ನಾನು ಶರೀರ ನಾನಲ್ಲೆಂಬ । ಮಾನಸದನುಭವವಲ್ತೆ ॥ ೧೭ ॥

ಬಾಹ್ಯವಿಜ್ಞಾನವೆಂದುಂಟಂತರಂಗ ಸಂ । ಗ್ರಾಹ್ಯ ವಿಜ್ಞಾನವೆಂದುಂಟು ॥
ಬಾಹ್ಯದರಿಕೆ ಬಾಹ್ಯ ತನ್ನನರಿವುದು ನಿ । ರ್ಬಾಹ್ಯಾಂತರಂಗವಿಜ್ಞಾನ ॥ ೧೮ ॥

ರತ್ನಪರೀಕ್ಷೆ ಗಜಾಶ್ವಪರೀಕ್ಷೆ ಪ್ರ । ಯತ್ನಿಸೆ ಬಾಹ್ಯವಿಜ್ಞಾನ ॥
ರತ್ನತ್ರಯರೂಪನಾತ್ಮನೆಂದರಿವುದು । ನೂತ್ನಾಂತರಂಗವಿಜ್ಞಾನ ॥ ೧೯ ॥

ಮದನಾಗಮ ವೈದ್ಯ ಯಂತ್ರತಂತ್ರಗಳ ಸಂ । ಪದವೆಲ್ಲ ಬಾಹ್ಯವಿಜ್ಞಾನ ॥
ಸದಮಲರೂಪನೆಂದಾತ್ಮನ ನೆನೆವುದು । ವಿದಿತಾಂತರಂಗವಿಜ್ಞಾನ ॥ ೨೦ ॥

ಗಣಿತಭರತಶಾಸ್ತ್ರ ಪಂಚಾಂಗವಸ್ತುಲ । ಕ್ಷಣವೆಲ್ಲ ಬಾಹ್ಯವಿಜ್ಞಾನ ॥
ಗುಣಗುಣಿಯೊಡಗೂಡಿ ತನ್ನ ತಾನರಿವುದು । ಪ್ರಣುತಾಂತರಂಗವಿಜ್ಞಾನ ॥ ೨೧ ॥

ಛಂದೋಲಂಕಾರಕಾವ್ಯನಾಟಕಶಾಸ್ತ್ರ । ಸಂದೋಹ ಬಾಹ್ಯವಿಜ್ಞಾನ ॥
ದಂದುಗವಳಿದಾತ್ಮ ತತ್ವವನರಿವುದ । ದೊಂದಂತರಂಗವಿಜ್ಞಾನ ॥ ೨೨ ॥

ವೇದಪುರಾಣತರ್ಕಾಗಮದರಿಕೆ ಮುಂ । ತಾದುದು ಬಾಹ್ಯವಿಜ್ಞಾನ ॥
ಭೇದಿಸಿ ತನ್ನನಧ್ಯಾತ್ಮನೊಳರಿವುದು । ಭೇದಾಂತರಂಗವಿಜ್ಞಾನ ॥ ೨೩ ॥

ಹಿಂದೆ ಹಲವು ಜನ್ಮದೊಳು ಬಾಹ್ಯವಿಜ್ಞಾನ । ಬಂದುದು ಹೋದುದೆಲ್ಲರಿಗೆ ॥
ಬಂದಂತರಂಗವಿಜ್ಞಾನವಾರಿಗು ಮುನ್ನ । ಸಂದಿಸಿತಿಲ್ಲ ರಾಜೇಂದ್ರ ॥ ೨೪ ॥

ಸಾಮಾನ್ಯವಲ್ಲಂತರಂಗ ವಿಜ್ಞಾನ ಮ । ಹಾ ಮುಕ್ತಿಪದಕದು ಬೀಜಾ ॥
ಕಾಮಿತವೀವುದು ಸುರತರು ಸುರಭಿ ಚಿಂ । ತಾಮಣಿ ಸಾಟಿಯಿಲ್ಲದಕೆ ॥ ೨೫ ॥

ದೊರೆಗಂತರಂಗ ವಿಜ್ಞಾನ ನಿಶ್ಚಲವಾಗಿ । ದೊರೆಕೊಂಡರಾ ದೊರೆಗಿನ್ನು ॥
ದೊರೆಯುಂಟೆ ಧರೆಗಿಂದಿನರಸು ಸ್ವರ್ಗಕೆ ನಾಳೆ । ನರಸು ಮುಕ್ತಿಗೆ ಮುಂದಣರಸು ॥ ೨೬ ॥

ಸಿರಿಗುಬ್ಬನೆಡರಿಗೆ ತಗ್ಗನಾತ್ಮಜ್ಞಾನಿ । ಪರಿಹಾಸಗೋಷ್ಠಿಗೆಳಸನು ॥
ಹರವರಿಯಾಗಿ ನುಡಿಯನು (ಧೈರ್ಯದೊಳು) ಮುಂ । ದರದಂತಿಹನು ರಾಜೇಂದ್ರ ॥ ೨೭ ॥

ಇಂದ್ರಿಯಸುಖದೊಳಾಸಕ್ತನಾಗನು ದೇ । ವೇಂದ್ರನ ಸಿರಿಗೆ ಕಣ್ಣಿಡನು ॥
ಇಂದ್ರಿಯದನುಭವದೊಳಗಿಹನಹುದು ಯೋ । ಗೀಂದ್ರವೃತ್ತಿಗೆ ಮೆಚ್ಚುತಿಹನು ॥ ೨೮ ॥

†ಹಂಸನಿರೀಕ್ಷಣದಿಂದುಮ್ಮಿದಮೃತವ । ಹಂಸನಂತೀಂಟಿದಣಿವನು ॥
ಸಂಸಾರಸುಖವನುದಾಸೀನಭಾವಾವ । ತಂಸದೊಳನುಭವಿಸುವನು ॥ ೨೯ ॥

ಅಡಿಗಡಿಗಾತ್ಮತತ್ವದೊಳಿರ್ದು ಕರ್ಮವ । ಕೆಡಿಸುತಿಹನು ಕಿರಿದಾಗಿ ॥
ಕಡುಸಂಯಮಿಯಾಗಿ ಮುಕ್ತಿಗೈದುವೆನೆಂಬ । ದೃಢವಿರುತಿಹುದೆದೆಯೊಳಗೆ ॥ ೩೦ ॥

ಆಗಾಗ ದೇಹ ಬೇರಾತ್ಮ ಬೇರೆಂದು ವಿ । ಭಾಗಿಸಿ ತನ್ನ ತಾ ನೆಮ್ಮಿ ॥
ಭೋಗಿಸಿದರೆ ಕರ್ಮ ಬಂಧವಿಲ್ಲಾಗಿ ಯೂ । ಭೋಗಿ ತಾನೇಯೋಗಿಯಲ್ತೆ ॥ ೩೧ ॥

ಭೂಮಿಯೊಳಗೆ ಹೂಳ್ವ ಲೋಹ ಮಣ್ಬಿಡಿವುದು । ಹೇಮ ಮಣ್ಬಿಡಿವುದೇ ನೃಪತಿ ॥
ಕಾಮಿಸಿ ಭೋಗಿಸುವಗೆ ಕರ್ಮಬಂಧ ನಿ ॥ ಷ್ಕಾಮಭೋಗಿಗೆ ಬಂಧವುಂಟೆ ॥ ೩೨ ॥

ಹುರಿದು ಬಿತ್ತಿದ ಬೀಜ ಮೊಳೆವುದೆ‡ರಾಗಾಂ । ಕುರವ ಕೆಡಿಸಿದಾತ್ಮವೇದಿ ॥
ವರಭೋಗದೊಳಿದ್ದರೇನಲ್ಲಿ ಮುಂದೆ ನಿ । ಷ್ಕರಕರ್ಮದುತ್ಪತ್ತಿಯುಂಟೆ ॥ ೩೩ ॥

ನಾಗಲೋಕದೊಳಿದ್ದರೇನು ಗರುತ್ಮಗೆ । ನಾಗರ ಬಾಧೆಗಳುಂಟೆ ॥
ಭೋಗದೊಳಿದ್ದರೇನಾತ್ಮವಿಜ್ಞಾನಿಗೆ । ಭೋಗದಿಂದಿಹ ಕರ್ಮವುಂಟೆ ॥ ೩೪ ॥

ತುಡುಕಲೆಲ್ಲರ ಕೊಲ್ವ ವಿಷವದು ಸಿದ್ಧಗಾ । ರುಡಿಗನ ಕೊಲುವುದೆ ಚಕ್ರಿ ॥
ಪೊಡವಿಯೊಳೆಲ್ಲರ ಕೆಡಿಸುವಿಂದ್ರಿಯಸುಖ । ಕೆಡಿಸಬಲ್ಲುದೆ ತತ್ವರತನಾ ॥ ೩೫ ॥

ಅಚ್ಚನಾಭಿಯ ಮದ್ದು ನಿರ್ವಿಷಸಿದ್ಧತಾ । ನಚ್ಚುಗಗೊಳ್ಳದಿರ್ಪಂತೆ ॥
ನಿಚ್ಚ ಭೋಗದೊಳಿದ್ದರೇನಾತ್ಮವಿಜ್ಞಾನಿ । ಸಚ್ಚಿದಾನಂದನಾಗಿಹನು ॥ ೩೬ ॥

ನಿನ್ನ ವರ್ತನವಿದು ಪರಮರಹಸ್ಯವಿಂ । ದಿನ್ನೊಬ್ಬರೊಳು ಕಾಣ್ಬೊಡಿಲ್ಲ ॥
ನಿನ್ನನಡೆಯ ನಿನ್ನನುಡಿಯ ನಿನ್ನೊಳೆ ಕಂಡು । ನಿನ್ನ ಮುಂದೋದಿದೆನರಸಾ ॥ ೩೭ ॥

ಅರಸಿಗೆ ಮೆಚ್ಚಾದುದದನೆ ಲೇಸೆಂದೆಲ್ಲ । ರೊರೆಯಬೇಕೆಂಬಂದವಲ್ಲ ॥
ಭರತೇಶ ನಿನ್ನವರ್ತನವಿದು ತತ್ವದ । ತಿರುಳೆ ನಿಶ್ಚಯ ಮೋಕ್ಷಮಾರ್ಗ ॥ ೩೮ ॥

ಹೊರಗೆಲ್ಲವ ತೊರೆದೊಳಗೆ ನಿರ್ಮಲನಾಗಿ । ಮೆರೆವವರುಂಟು ಲೋಕದೊಳು ॥
ಹೊರಗೆಲ್ಲವಿದ್ದೊಳಗೇನುವಿಲ್ಲೆನೆ ಬಚ್ಚ । ಬರಿದಾದರಾರು ನಿನ್ನಂತೆ ॥ ೩೯ ॥

ಈ ಸಿರಿ ಈ ಸೊಬಗೀ ಪ್ರಾಯದೊಳು ಬುದ್ಧಿ । ಬೀಸರವಾಗದೆಚ್ಚತ್ತು ॥
ಆ ಸಿದ್ಧಪದವಿಗೆ ಕಣ್ಣಿಟ್ಟು ತತ್ವವಿ । ಲಾಸಿಯಾರರಸ ನಿನ್ನಂತೆ ॥ ೪೦ ॥

---

†ಹಂಸನಿರೀಕ್ಷಣಾಮೃತವನಿಗಳ ರಾಜ. ‡ವಿಷಯುವ । ನುರುಹಿ ಕೆಡಿಸಿಯಾತ್ಮಯೋಗಿ.

ಇವನನವನ ಗೆಲ್ವರಾವುದುಪಾಯವೆಂ । ದವನಿಯೊಳೆಣಿಸುವರುಂಟು ॥
ಜವನ ಜಯಿಸುವರುಪಾಯವೇನೆಂದೆಂಬ । ಭುವನೇಶರುಂಟೆ ನಿನ್ನಂತೆ ॥ ೪೧ ॥

ಗಾನವುದ್ವಳಿ ತಾಳಲಯಕೆ ನರ್ತಿಪ ಮಂದ । ಯಾನೆಗೆ ಶಿರದ ಕುಂಭದೊಳು ॥
ಧ್ಯಾನವಿಪ್ಪಂತೆ ರಾಜ್ಯದೊಳಿರ್ದು ಮುಕ್ತಿ ಸಂ । ಧಾನದೊಳಗೆ ನಿನ್ನ ನೆನಹು ॥ ೪೨ ॥

ಪಟಗಾರನುರೆ ಸೂತ್ರವಿಡಿದಿದ್ದರಾ ಗಾಳಿ । ಪಟ ಗಗನದೊಳಾಡುವಂತೆ ॥
ಕುಟಿಲವಲ್ಲಾತ್ಮ ನಿನ್ನಂಗದೊಳಿರ್ದು ಸಂ । ಘಟಿಸಿ ಮುಕ್ತಿಯೊಳದೆ ಬುದ್ಧಿ ॥ ೪೩ ॥

ಘಳಿಗೆವಟ್ಟಲನಿಕ್ಕಿದವನೊಂದು ಕಥೆಯ ಹುಂ । ಕೊಳಲನ್ಯರಿಗೆ ಹೇಳುತಿರ್ದು ॥
ಘಳಿಗೆವಟ್ಟಲ ನೋಟ ಕೆಡದಂತೆ ನಿನ್ನಾತ್ಮ । ನೊಳು ತಾಗುತಿದೆ ನಿನ್ನ ನೆನಹು ॥ ೪೪ ॥

ನಲ್ಲಳೊಲುಮೆಗಾಗಿ ಸಖಸಖಿದೂತಿಯ । ರೆಲ್ಲರ ಮನ್ನಿಪನಂತೆ ॥
ಸಲ್ಲಲಿತಾತ್ಮವಿಜ್ಞಾನಾರ್ಥಕಾಗಿ ನ । ಮ್ಮೆಲ್ಲರ ಮನ್ನಿಪೆಯಲ್ತೆ ॥ ೪೫ ॥

ಮೊಲೆ ಮುಡಿ ಮುಖ ನಖ ಕಟಿ ತುಟಿಯೆಂದರೆ । ಒಲಿದೀವರುಂಟು ಲೋಕದೊಳು ॥
ಒಳಹೊರಗಾತ್ಮ ಶರೀರವೆಂಬೀ ನುಡಿ । ಗೊಲಿದೀವರಾರು ನಿನ್ನಂತೆ ॥ ೪೬ ॥

ಹೆಣ್ಣ ಬಣ್ಣಿಸಿದರಂತಿಂತು ಲೇಸೆಂದೆದೆ । ಹಣ್ಣಾಗಿ ಕೇಳುವರುಂಟು ॥
ಬಣ್ಣಿಸಲಾತ್ಮತತ್ವಕೆ ಮೆಚ್ಚಿ ಕಿವಿಗೊಡು । ವಣ್ಣಂದಿರಾರು ನಿನ್ನಂತೆ ॥ ೪೭ ॥

ಕೊಬ್ಬಿದ ಪೊರವಾರು ಪಿಡಿನಡು ಕೊಂಕಿದ । ಹುಬ್ಬಿನ ಪೆಣ್ಣಂದರದಕೆ ॥
ಹೆಬ್ಬಿಬ್ಬಿಗೊಂಬವರುಂಟಾತ್ಮಕಲೆಗೆ ಮೈ । ಯುಬ್ಬುವರಾರು ನಿನ್ನಂತೆ ॥ ೪೮ ॥

ಆಕೆಯ ಮದವೆದ್ದ ಜವ್ವನ ಮನ್ಮಥ । ಗೇಕ ರಾಜವ ಮಾಳ್ಪದೆನಲು ॥
ಬಾಕುಳಿಗೊಂಡು ಕೇಳುವರುಂಟು ಚಿದ್ರೂಪಿ । ನೀ ಕಲೆಗೆಳಸುವರಾರು ॥ ೪೯ ॥

ನಡುಸಣ್ಣ ಮುಡಿತೋರ ತೊಡೆನುಣ್ಪು ಮೊಲೆಗಳಿ । ಟ್ಟೆಡೆಯೆಂದರರೆ ಬಾಯಬಿಟ್ಟು ॥
ಮಿಡುಕದೆ ಕೇಳ್ವರುಂಟಲ್ಲದಧ್ಯಾತ್ಮದ । ನುಡಿಗೇಳ್ವರುಂಟೆ ನಿನ್ನಂತೆ ॥ ೫೦ ॥

ನಳಿತೊಳ್ಗಳೆನೆ ತಕ್ಕೆಯಾದಂತೆ ಪೊಂಗೊಡ । ಮೊಲೆಯೆಂದರೆದೆ ಸೋಂಕಿದಂತೆ ॥
ತಳಿರ್ದುಟಿಯೆನಲು ಚುಂಬಿಸಿದಂತೆ ನಲಿವರುಂ । ಟೊಲಿವರಾರಧ್ಯಾತ್ಮರಸಕೆ ॥ ೫೧ ॥

ನುಣ್ದೊಡೆಯೆನೆ ರೋಮ ಜುಂಮೆಂದು ನೇರಿಲ । ಪಣ್ದುಟಿಯೆನೆ ಜಿಹ್ವೆಯೊಸರಿ ॥
ಕಣ್ದೊಳಲಾಗಿ ಕೇಳುವರುಂಟು ಮಚ್ಚರ । ಮಾಣ್ದು ಕೇಳುವರುಂಟೆ ನಿಜವಾ ॥ ೫೨ ॥

ರಣಕಥೆ ಜಾರಚೋರರಕಥೆ ಸ್ಮರಕಥೆ । ಗಣಿಕಾಕಥೆಗೆದೆಸೋತು ॥
ಗಣನೆಯಿಲ್ಲದ ಭವಕೊಳಗಹರಧ್ಯಾತ್ಮ । ಗುಣಕೆ ಮೆಚ್ಚುವರಾರು ನೃಪತಿ ॥ ೫೩ ॥

ಗದ್ದುಗೆಯೇರಿ ದುಷ್ಕಥೆಗೇಳಿ ಹಲಬರು । ಬಿದ್ದುಹೋಗುವರಧೋಗತಿಗೆ ॥
ಗದ್ದುಗೆಯೇರಿ ಸತ್ಕಥೆಗೇಳಿ ಮುಕ್ತಿಯ । ಹೊದ್ದುವರಾರು ನಿನ್ನಂತೆ ॥ ೫೪ ॥

ಒಳಗಿದ್ದ ದೇವನ ಕಾಣದೆ ಹೊರಗೆ ದೇ । ಗುಲವ ಪೂಜಿಸುವೆಗ್ಗನಂತೆ ॥
ಒಳಗಣಾತ್ಮನ ಬಿಟ್ಟು ವ್ಯೆಯನೇ ತಾನೆಂದು । ಸಲೆ ಹೊಗಳಿಸಿಕೊಳುತಿಹರು ॥ ೫೫ ॥

ಇಂದ್ರನಂತಿನನಂತೆ ಚಂದ್ರನಂತೆಂದು ನ । ರೇಂದ್ರರು ಹೊಗಳೆ ಮೆಚ್ಚುವರು ॥
ಇಂದ್ರಾದಿಗಳು ಲಯಕೊಳಗಾದರಾತ್ಮ ಜಿ । ನೇಂದ್ರನೆಂದೆನಲೊಲ್ವೆ ನೀನು ॥ ೫೬ ॥

ಉದ್ಧಾರಕೀರ್ತಿ ಕೋಮಲಮೂರ್ತಿಯೆನಲೆಲ್ಲ । ರುದ್ಧರಿಸುವರು ವಂದಿಗಳಾ ॥
ಶುದ್ಧ ನಿಶ್ಚಯದೊಳಾತ್ಮಗೆ ಮೂರ್ತಿಯಿಲ್ಲಾತ್ಮ । ಸಿದ್ಧನೆಂದನಲೊಲ್ವೆ ನೀನು ॥ ೫೭ ॥

ಸುರತರು ಸುರಭಿ ಚಿಂತಾಮಣಿ ನೀನೆಂದು । ವಿರಚಿಸಲೆಲ್ಲರ ಮೆಚ್ಚು ॥
ತರುಪಶುಪಾಷಾಣ ಸಾಟಿಯಿಲ್ಲಾತ್ಮ ಚಿ । ತ್ಪುರುಷನೆಂದರೆ ನಿನ್ನ ಮೆಚ್ಚು ॥ ೫೮ ॥

ನೃತ್ಯಕೇಳಿಯೊಳು ಸಂಗೀತಕೇಳಿಯೊಳು ಸಾ । ಹಿತ್ಯಕೇಳಿಯೊಳಾತ್ಮಕಲೆಯಾ ॥
ಅತ್ಯಂತ ಮಮತೆಯೊಳಾದರಿಸುವ ಕೃತ । ಕೃತ್ಯರಾರರಸ ನಿನ್ನಂತೆ ॥ ೫೯ ॥

ಭೋಗವಿಲ್ಲದೆ ಭೋಗಿಯಹುದು ನಿನ್ನೊಳಗಾತ್ಮ । ಯೋಗವಿಲ್ಲದೆ ಯೋಗಿಯಹುದು ॥
ಭೋಗದೊಳಿದ್ದು ಯೋಗವಮಾಡಿ ಭವ ಮುಕ್ತ । ರಾಗುವರಾರು ನಿನ್ನಂತೆ ॥ ೬೦ ॥

ವಿಷಯವಿಷವನುಂಡು ದಕ್ಕಿಸಬಲ್ಲ ನಿ । ರ್ವಿಷಸಿದ್ಧ ನೀನವನೀಶಾ ॥
ವಿಷಮಚಿತ್ತವನಾತ್ಮನೊಳು ನಿಲಿಸಿದ ರಾಜ । ಋಷಿಯಲ್ತೆ ರಾಜನೆ ನೀನು ॥ ೬೧ ॥

ಕಂಡವರಿಗೆ ಪುಣ್ಯನೃಪತಿ ನಿನ್ನಯ ಪೆಸ । ರ್ಗೊಂಡವರಿಗೆ ಪಾಪನಾಶಾ ॥
ಕಂಡುದ ನುಡಿದೆನು ಸ್ತುತಿಯೆನ್ನದಿರು ಲೇಸ । ಕಂಡು *ಬಾಯಾಲ್ವನು ಕವಿಯೇ ॥ ೬೨ ॥

ಕಾಲಕಾಲೋಚಿತ ಜಿನಸಿದ್ಧ ವಂದನೆ । ಲಾಲಿತಾತ್ಮನ ಕಾಣ್ಬಯೋಗ ॥
ಶೀಲಸಂಗತವಾದ ಭೋಗವೆಸೆವ ಭೂಮಿ । ಪಾಲನ ಹೊಗಳದರಾರು ॥ ೬೩ ॥

ಸತ್ಪಾತ್ರದಾನಿಗೆ ತತ್ವ ವಿಜ್ಞಾನಿಗೆ । ಚಿತ್ಪರಿಣಾಮಾನುಭವಿಗೆ ॥
ಸತ್ಪುರುಷರು ಸೋಲ್ವರರಸ ತುಂಬಿಗಳು ಮ । ಹೋತ್ಪಲರಸಕೆ ಸೋಲ್ವಂತೆ ॥ ೬೪ ॥

ಜೀರ್ಣೋದ್ಧಾರಣ ಜಿನಯಜ್ಞಸುಕಥಾ । ಕರ್ಣನ ಜಿನಸಂಘಪೂಜೆ ॥
ವರ್ಣವರ್ಣಿತದ ಪ್ರಜಾರಕ್ಷೆಯುಳ್ಳನ । ವರ್ಣಿಸದವರಾರು ರಾಯ ॥ ೬೫ ॥

ಜಿನಸಿದ್ಧ ಭಕ್ತಿ ಸದ್ಗುರು ಭಕ್ತಿ ಶಾಸ್ತ್ರಲಾ । ಲನೆಯುಳ್ಳ ಪ್ರಕೃತಿಯ ಕಂಡು ॥
ಜನಜಾಲವೆರಗುವುದಕ್ಕರುಮಿಗೆ ತನ್ನ । ಜನಕನ ಕಂಡ ರೀತಿಯೊಳು ॥ ೬೬ ॥

ಜಿನಸಿದ್ಧರೂಪ ಬೇರಿಟ್ಟು ಕಾಣದೆ ತನ್ನ । ಮನದೊಳಗಿಟ್ಟು ಕಾಣ್ಬವಗೆ ॥
ಜನನಾಥನೊಲಿವನು ಸ್ತ್ರೀವಶ್ಯನೃಪವಶ್ಯ । ಜನವಶ್ಯವದು ತಾನೇ ನೃಪತಿ ॥ ೬೭ ॥

---

* ಬಾಯಾಲ್ವ ಲೋಕವಿದೆ.

ಅಂತರಂಗದೊಳಾತ್ಮರೂಪನ್ನೊಳ್ಪಾಗರು । ಹಂತ ತಾನಲ್ಲಿರ್ಪನೆನಲು ॥
ವ್ಯಂತರವಶ್ಯ ವಿದ್ಯಾವಶ್ಯ ಕೈವಲ್ಯ । ಕಾಂತಾವಶ್ಯ ವೆಗ್ಗಳವೆ ॥ ೧೮ ॥

ತನು ಜಿನಗೃಹವೆಂದು ಮನ ಸಿಂಹಪೀಠವೆಂ । ದನುಪಮಾತ್ಮನೆ ಜಿನನೆಂದು ॥
ನೆನಹವೆಲ್ಲವ ಬಿಟ್ಟು ಕಣ್ಮುಚ್ಚಿ ನೋಳ್ಪಾಗ । ಜಿನನಾಥ ತೋರುವನೊಳಗೆ ॥ ೧೯ ॥

ಮರೆದೊಂದು ವಸ್ತುವ ಕೆಡಿಸಿ ಮತ್ತೆಚ್ಚೆತ್ತು । ಅರಸುವನಂತದ ನೆನೆದು ॥
ಅರಿವು ನೋಟವೆ ದೇಹ ನನಗೆಂದು ಮೈಯೊಳ । ಗಿರಲಲ್ಲಿಯೆ ತೋರ್ಪನಾತ್ಮ ॥ ೨೦ ॥

ಕಲಿತು ಮರೆದುದೊಂದು ಪದ್ಯವ ನೆನೆದುದ । ನೊಳಗೊಳಗಾಲೋಚಿಪಂತೆ ॥
ತಿಳಿವು ಬೆಳಗು ನನ್ನ ರೂಪೆಂದು ನೆನಹು ಮೈ । ಯೊಳಗಾಡಲಾತ್ಮ ತೋರುವನು ॥ ೨೧ ॥

ಸುರುಚಿರ ಛಾಯಾ ಪ್ರತಿಮೆಗೆ ಛಾಯಾ । ಪುರುಷಗೆ ಸದೃಶನನೆಂದು ॥
ಸ್ಮರಿಸುತ ಕಣ್ಮುಚ್ಚಿ ನೋಡಿದರವರಂತೆ । ಪರಮಾತ್ಮ ತೋರುವನೊಳಗೆ ॥ ೨೨ ॥

ಪ್ರಾಭೃತಶಾಸ್ತ್ರವನೋದಿ ವಾಯುಗಳ ಮ । ಹಾ ಭೃತ್ಯರೆನೆ ವಶಮಾಡಿ ॥
ಭೂಭೃನ್ನಾಥ ಚಿತ್ತೈಸೊಳಗೀಕ್ಷಿಸೆ । ಶ್ರೀಭೃತನಾತ್ಮ ತೋರುವನು ॥ ೨೩ ॥

ರವಿಶಶಿಗಳ ಕಟ್ಟಿ ಪ್ರಾಣಾಪಾನ ವಾ । ಯುವ ಬ್ರಹ್ಮರಂಧ್ರಕೇರಿಸಲು ॥
ಕವಿದ ಕತ್ತಲೆಗೆಟ್ಟು ಮೈಯೊಳಗಾತ್ಮ ತೋ । ರುವನು ಪ್ರಕಾಶರೂಪಾಗಿ ॥ ೨೪ ॥

ವಾಯುವ ಜಯಿಸಿ ಕೆಲರು ಕಾಣ್ಬರಾತ್ಮನ । ವಾಯುವ ಜಯಿಸದೆ ಕೆಲರು ॥
ಕಾಯದೊಳಾತ್ಮನ ಕಾಣ್ಬರು ಕಾಂತಿಯೆ । ಕಾಯಸುಖವೆ ಸುಳುಹಾಗಿ ॥ ೨೫ ॥

ಭೊಗ್ಗನೊಂದೇ ದಿನದೊಳು ತೋರನಾತ್ಮನು । ಬಗ್ಗಿದಾಗಳೆ ಬಾಗಿಲಹುದೇ ॥
ನುಗ್ಗೆಯು ಮರನಲ್ಲ ಕರ್ಮವೆಂಬುದು ಕರ್ಮ । ಜಗ್ಗಲೊಯ್ಯನೆ ತೋರುತಿಹನು ॥ ೨೬ ॥

ಎಳೆಮಿಂಚಿನಂದದ ಬೊಂಬೆಯೊ ತಿಂಗಳ । ತಿಳಿವೆಳಗಿನೊಳಾದ ರೂಪೋ ॥
ಪಳಕಿನ ಪುತ್ಥಳಿಯೋಯೆನೆ ಕ್ರಮದಿಂದ । ಹೊಳೆವುದೊಳಗೆ ತನ್ನರೂಪು ॥ ೨೭ ॥

ಜ್ಯೋತಿರ್ಲೋಕವ ಹೊಕ್ಕಂತೆ ತಂಪಿನ । ಜ್ಯೋತಿಯ ನಡುವೆ ನಿಂದಂತೆ ॥
ತಾ ತನ್ನ ನಿಜವನೋಳ್ಪಾಗಳೀವುದು ತನು । ವಾತದೊಳಿಹ ಸಿದ್ಧರಂತೆ ॥ ೨೮ ॥

ನುಡಿಯಿಲ್ಲ ನಡೆಯಿಲ್ಲ ತನುವಿಲ್ಲ ಮನವಿಲ್ಲ । ಕಡೆಗೆ ಪಂಚೇಂದ್ರಿಯವಿಲ್ಲ ॥
ಕಡುಸುಖ ಸುಜ್ಞಾನಕಾಂತಿಯೆ ರೂಪಾಗಿ । ಮೊಡಲು ತುಂಬಿಹುದಾತ್ಮರೂಪು ॥ ೨೯ ॥

ತನ್ನ ತಾ ನೋಳ್ಪಾಗ ನೋಡು ಚಿತ್ರವ ಕರ್ಮ । ತನ್ನ ತಾ ಜರಿದೋಡುತಿಹುದು ॥
ಮುನ್ನೆಂದು ಕಂಡು ಕೇಳಿದ ತೆರನಲ್ಲದೊಂ । ದುನ್ನತ ಸುಖ ಹುಟ್ಟುತಿಹುದು ॥ ೩೦ ॥

ಮುಕ್ತಿ ಸುಖಕೆ ಬೀಜವಾ ಬೀಜ ನಿರ್ಭೇದ । ಭಕ್ತಿ ಜಿನೇಂದ್ರನ ಮೆಚ್ಚು ॥
ಮುಕ್ತಿಗಾಮಿಗಳು ಬಲ್ಲರು ನೀನೆ ಬಲ್ಲೆ ವಿ । ರಕ್ತರರಸ ರಾಜಯೋಗಿ ॥ ೩೧ ॥

ನಾವೆಲ್ಲ ಬಲ್ಲೆವೆ ನುಡಿವೆವೆಂದರೆ ಹಂಸ । ಭಾವನೆಯಿಂದಾದ ಸುಖವಾ ॥
ಭಾವಿತಾತ್ಮರ ಶಿರೋಮಣಿಯೆ ನೀನೇ ಬಲ್ಲೆ । ನಾವೊಡಂಬಡಬಲ್ಲೆವದಕೆ ॥ ೮೨ ॥
ದೇವ ನೀನಧ್ಯಾತ್ಮಸೂರ್ಯ ನಿನ್ನಿದಿರಲ್ಲಿ । ನಾವೆಲ್ಲರಧ್ಯಾತ್ಮರಸವಾ ॥
ಈ ವಿಧವೆಂಬುದು ರವಿಗೆ ಪ್ರಕಾಶವ । ದೀವಿಗೆಗಳು ತೋರ್ಪರೀತಿ ॥ ೮೩ ॥
ಬಾವನ್ನವೃಕ್ಷದೊತ್ತಿನೊಳಿರ್ದ ಮರಗಳು । ತಾವೆಲ್ಲ ಕಮ್ಮನಪ್ಪಂತೆ ॥
ದೇವ ನಿನ್ನೊಡನಾಡಿ ನಾವೆಲ್ಲರರಿದೆವು । ಜೀವಶುದ್ಧಿಯ ತುದಿವೊದಲಾ ॥ ೮೪ ॥
ಇಂದು ಮುಂದುರೆ ನೀನೇ ಸುಖಿ ನಿನ್ನನೋಲೈಪ । ಮಂದಿಯೆಲ್ಲರು ಸುಖಿಯಾಯ್ತು ॥
ಇಂದು ಕಂಡೆವು ಸ್ವಾಮಿಯೆಂತಂತೆ ಪರಿವಾರ । ವೆಂದೆಂಬ ವಾಕ್ಯದರ್ಥವನು ॥ ೮೫ ॥

ದಿವಿಜಕಲಾಧರಕವಿಯಿಂತು ರಚಿಸಿದ । ನವಸುಪ್ರಸಂಗ ರಾಯನಿಗೆ ॥
ಕಿವಿಯೊಕ್ಕುದೆದೆದಟ್ಟತಧ್ಯಾತ್ಮವೆಂಬಾಗ । ಲವಲವಿಸುವನಾ ನೃಪತಿ ॥ ೮೬ ॥
ತನ್ನಂತರಂಗಾನುಭವವನೆಲ್ಲವನೀತ । ಮುನ್ನ ಕಂಡಂತೆ ಪೇಳ್ದಪನು ॥
ಬಿನ್ನಣಿಯಹುದೆಂದು ಬಾಯ್ಬಿರಿದುಸುರದೆ । ತನ್ನೆದೆಯೊಳು ಮೆಚ್ಚಿ ನೆನೆದಾ ॥ ೮೭ ॥
ಈತಗಾತ್ಮಧ್ಯಾನವುಂಟಲ್ಲದಿದ್ದರೀ । ಚಾತುರ್ಯವಚನವೆಂತಹದು ॥
ಮಾತು ತಾನೇ ಮನದೊಳಗ ಸೂಚಿಸುವುದೆಂ । ದಾತ ನೆನೆದನೆದೆಯೊಳಗೆ ॥ ೮೮ ॥
ಈ ಕಡೆಗಾ ಕಡೆಗೆಡೆಯಾಡಬಹುದಲ್ಲ । ರಾಕಾಶದೊಳಗಾಡಬಹುದೇ ॥
ಲೋಕವೆಲ್ಲವ ಹೇಳಬಹುದಧ್ಯಾತ್ಮವ । ದೇಕೆ ಬಹುದು ಬಾಹ್ಯಜನಕೆ ॥ ೮೯ ॥
ಶಬ್ದಸಮುದ್ರವ ಹೊಕ್ಕೊಂದು ಪದಕೆ ನೂ । ರಬ್ದ ಪ್ರಸಂಗಿಸಬಹುದು ॥
ಶಬ್ದವರ್ಜಿತ ಹಂಸಯೋಗವಿಂತೆನುತೊಂದು । ಶಬ್ದಮಾತ್ರವ ಹೇಳ*ಬಹುದು ॥ ೯೦ ॥
ತರ್ಕಶಾಸ್ತ್ರ†ದೊಳೊಡ್ಡಿ ತಗ್ಗರುತಗರಿನಂತೆ । ಮಾರ್ಕೊಂಡು ಹೊಡೆದಾಡಬಹುದು ॥
ಅರ್ಕನಂತೆಸೆವಾತ್ಮಯೋಗವಿಂತಿಹುದೆಂದು । ಬೇರ್ಕೈದು ವಚನಿಸಲರಿದು ॥ ೯೧ ॥
ಆಗಮಕಾವ್ಯನಾಟಕದೊಳೆಲ್ಲರ ತಲೆ । ದೂಗಿಸಿ ಮಲಗಿಸಬಹುದು ॥
ಮೂಗರು ಕಂಡ ಕನಸಿನಂತೆ ಮೆರೆವಾತ್ಮ । ಯೋಗವನಾರಾಡಬಹುದು ॥ ೯೨ ॥
ಮುಡಿಮೊಗವೊಲಿಯ ವರ್ಣಿಸಿ ಕೇಳ್ವರೆಲ್ಲರು । ಟ್ಟುಡುಗೆಯ ಸುಲಿಕೊಳ್ಳಬಹುದು ।
ನುಡಿಯಬಾರದ ಪರಂಜ್ಯೋತಿಯನಿಂತೆಂದು । ನುಡಿದು ಮೆಚ್ಚಿಸಲೊಬ್ಬರಳವೆ ॥ ೯೩ ॥
ಕದನದೊಳಂತಿಂತು ತರಿದರಿರಿದರೆಂದು । ಯೆದೆತೂಳವೇಳಿಸಬಹುದು ॥
ಇದನಾರು ನುಡಿಯಬಹುದು ಪರಬೊಮ್ಮನ । ಸದರವೆಯೆಂದು ನೆನೆದನು ॥ ೯೪ ॥

---

* ಬಹುದೆ?   † ವನೋದಿ.

ಅತ್ಯಾಸನ್ನ ಭವ್ಯರಿಗಲ್ಲದಾತ್ಮಸಂ । ಗತ್ಯವೆಲ್ಲರಿಗೇಕೆ ಬಪ್ಪುದು ॥
ಸ್ತುತ್ಯ†ಸುಧ್ಯಾನಿಗಳ್ಪೇಳ್ವರಧ್ಯಾತ್ಮಸಾ । ಹಿತ್ಯ ಸದರವೆಂದು ನೆನೆದಾ ॥ ೯೫ ॥
ಉಂಡವ ತೇಗುವಂತಾತ್ಮನ ಭಾವಿಸಿ । ಕಂಡವನದ ಪೇಳಬೇಕು ॥
ಕಂಡು ಪೇಳಿದರು ನಿರ್ಭವ್ಯರೊಪ್ಪರು ಭವ್ಯ । ಪುಂಡರೀಕರು ಮೆಚ್ಚಬೇಕು ॥ ೯೬ ॥
ಈ ಕವಿಯಾಸನ್ನಭವ್ಯನಹುದು ಸಿದ್ಧ । ಲೋಕಪಥಿಕನಹುದೆಂದು ॥
ವಾಕುದೋರದೆ ಮನ್ನ ನೆನೆದು ಮತ್ತೊಯ್ಯನೆ । ವಾಕು ತೋರಿದನಾ ಚಕ್ರಿ ॥ ೯೭ ॥
ಬಾರೈ ದಿವಿಜಕಲಾಧರ ಸುಕವಿಯೆಂ । ದಾ ರಾಯನೊತ್ತಿಗೆ ಕರೆದು ॥
ತೋರಹಸ್ತದೊಳುಡುಗೊರೆಯನಿತ್ತನು ಕಲ್ಪ । ಭೂರುಹ ಕೈನೀಡಿದಂತೆ ॥ ೯೮ ॥
ಕಡಗ ಕಂಠಮಾಲೆ ಪದಕ ಕುಂಡಲವಿತ್ತ । ನೊಡನೆ ಕುಲ್ಲಾಯಿ ಕಬಾಯಿ ॥
ನಿಡುಬೊಂಬೆ ಪಟ್ಟೆ ಪಚ್ಚಡವಿತ್ತು ವೀಳೆಯ । ಗೊಡುತ ಜಾಳಿಗೆ ನೂರಗೊಟ್ಟಾ ॥ ೯೯ ॥
ಭದ್ರಹಸ್ತಿಯೊಳು ಹತ್ತೆಂಟು ಕೀಲಾರಸ । ಮುದ್ರದಿ ನೂರಾರಗೊಟ್ಟ ॥
ಮುದ್ರಿಸಿ ನೂರೆಂಟು ಗ್ರಾಮವ ದಾರಿದ್ರ್ಯ । ವಿದ್ರಾವಣ ಧಾರೆಯೆರೆದಾ ॥ ೧೦೦ ॥
ಬಳಿಕಿಷ್ಟು ನಗೆಗೂಡಿ ಚೆನ್ನಾಯ್ತು ನಿನ್ನಾತ್ಮ । ನೊಳಗಕಂಡ್ಯೆ ಲೇಸ ನುಡಿದ್ಯೆ ॥
ಬಳಲಿದೆ ಕುಳ್ಳಿರೆಂದಿಂತಯ್ತು ನುಡಿಯಿಂದ । ಕಳುಹಿದನವನನು ರಾಯ ॥ ೧೦೧ ॥
ಜೈನಾಗಮವಿದು ಸದರವೆ ನುಡಿವೊಡೆ । ನಾನೆಷ್ಟರವನು ರಾಜೇಂದ್ರ ॥
ಈ ನಿನ್ನ ಸಭೆಯ ವಿದ್ವಾಂಸರೆ ಬಲ್ಲರೆಂ । ದಾನಂದಿಸುತ ತೊಲಗಿದನು ॥ ೧೦೨ ॥
ಈ ದೊರೆಯಂತರಂಗವ ಕಂಡ ಮನುಜರಿ । ಲ್ಲೀ ಧೀರಕಂಡು ನಡೆದನು ॥
ಬೋಧಾಗ್ರಣಿಯೆಂದು ಸಭೆಯೆಲ್ಲ ದಿವಿಜಕ । ಲಾಧರಕವಿಯ ಕೀರ್ತಿಸಿತು ॥ ೧೦೩ ॥
ಕವಿಯ ಜ್ಞಾನಕೆ ರಾಯ ರಾಯನುದಾರ ಗೌ । ರವಕೆಲ್ಲರರ್ತಿಸುವಾಗ ॥
ಧವಲಶಂಖಧ್ವನಿ ಘಳಿಯಾರದಲ್ಲಿ ಭುಂ । ಭುವ ಭುಂಮೆನೆ ಕೇಳಲಾಯ್ತು ॥ ೧೦೪ ॥
ಆರೋಗಣೆವೇಳೆಗೆ ಸನ್ನೆಯಾಯ್ತೆಂದು । ಆ ರಾಜಸಭೆ ಭೋಂಕನೆದ್ದು ॥
ಆ ರಾಯಗೆರಗಿ ಬೀಳ್ಕೊಂಡುದು ಕಡಲ ಮ । ಹಾರವಮೆನೆ ಧ್ವನಿ ಮಸಗೆ ॥ ೧೦೫ ॥
ಪರಿವಾರ ಪ್ರಜೆಗಳ ಚಿತ್ತೈಸು ಸ್ವಾಮಿ ಗಾ । ನರ ಪಾಠಕರನು ಚಿತ್ತೈಸು ॥
ದೊರೆಗಳ ಚಿತ್ತೈಸೆಂದು ಕಟ್ಟೆಗೆಗಾರ । ರೊರೆದು ಬೀಳ್ಕೊಡಿಸಿದರಾಗ ॥ ೧೦೬ ॥
ಕಳುಹಿಸಿಕೊಳ್ಳೆ ವಾರಾಂಗನೆಯರು ಕವಿ । ಗಳು ಸಚಿವರು ಕರಣಿಕರು ॥
ಅಳಿಯಂದಿರರ ಸುಕುಮಾರರೆಂದೆಲ್ಲರ । ಕಳುಹಿಸಿದರು ವೇತ್ರಧರರು ॥ ೧೦೭ ॥
ಓಲಗ ಹರಿದುದೊಯ್ಯನೆ‡ಯೆದ್ದು ಆ ನರ । ಪಾಲಕ ಜಿನಶರಣೆಂದು ॥
ಕಾಲತೊಡವು ಝಣ ಝಣರೆನಲೆದ್ದನೊ । ಡ್ಡೋಲಗದಿಂದ ಜೀಯೆನಲು ॥ ೧೦೮ ॥

†ಹಂಸಜ್ಞಾನಿಗಳು ಪೇಳ್ವರಾತ್ಮ. ‡ಯೋಜೆಯೊಳು.

ನಿತ್ಯದಾನವನೀಯದಾರೋಗಿಸೆನೆಂಬ । ಸತ್ಯಾಂಗಮುಂಟಾ ನೃಪಗೆ ॥
ನಿತ್ಯದಾನಕೆ ಮುನಿಗಳ ತರಬೇಕೆಂಬ । ಕೃತ್ಯಕೆ ಸನ್ನದ್ಧನಾದಾ ॥ ೧೦೯ ॥

ಕವಿ ತನ್ನ ಹೃದಯವನರಿದುದ ಮೆಚ್ಚುತ । ಭುವನೇಶನೆದ್ದು ಯೋಗಿಗಳ ॥
ಭವನಕೆ ತರಲನುವಾದನೆಂಬಲ್ಲಿಗೆ । **ಕವಿವಾಕ್ಯಸಂಧಿ** ಸುಗಂಧಿ ॥ ॥ ೧೧೦ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೧೧ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಶಾಣ್ಬರ್ತಿಯೊಳು ॥ ೧೧೨ ॥

ಜ್ಞಾನವಾವುದು ಸುಖವಾವುದು ಪ್ರಭೆಯಾವು । ದಾನಾವನೆಂಬ ವಿಕಲ್ಪಾ ॥
ಏನುವಿಲ್ಲೆನಲೆನ್ನ ನೆನಹಿನೊಳಿರು ದಿವ್ಯ । ಭಾನು ಚಿದಂಬರಪುರುಷಾ ॥ ೧೧೩ ॥

ಕವಿವಾಕ್ಯಸಂಧಿ ಸಂಪೂರ್ಣಂ

# ಮುನಿಭುಕ್ತಿಸಂಧಿ.

ಸಂಜೀವನಸಿದ್ಧ ಸಹಜಾತ್ಮಸಿದ್ಧ ಮೋ । ಹಂಜಯಸಿದ್ಧ ಪ್ರಸಿದ್ಧಾ ॥
ಮಂಜುಳಮತಿದೋರು ಜಯಜಯ ಗುರುವೆ ನಿ । ರಂಜನಸಿದ್ಧ ವಿಶುದ್ಧಾ ॥ ೧ ॥

ಜಿನನೊಬ್ಬ ಬಲ್ಲನಾ ಭರತಚಕ್ರೇಶನ । ಮನದನುಭವವದಿನ್ನೆಂತೊ ॥
ಮುನಿಗಳ ಚರಿಗೆಯ ಕಾಲವನರಿದರ । ಮನೆಯ ಬಾಗಿಲಿಗೆ ನಡೆದನು ॥ ೨ ॥

ಸಾರಿದೊಡ್ಡೋಲಗ ಹರಿಯಲೊಡನೆ ತನ್ನ । ಭೂರಿವಿಡಾಯವ ಬಿಟ್ಟು ॥
ದ್ವಾರಾವಲೋಕನಕಡಿಯಿಟ್ಟನಂಗಶ್ರೃಂ । ಗಾರವೆರಸಿ ಭಕ್ತಿಯಿಂದ ॥ ೩ ॥

ಛತ್ರ ಚಾಮರ ಖಡ್ಗ ಹಾವುಗೆ ಮುಂತಾದ । ಧಾತ್ರೀಶಚಿಹ್ನವ*ನಿರಿಸಿ ॥
ಪಾತ್ರದಾನದಪೇಕ್ಷೆಯಿಂದೊಬ್ಬ ಶ್ರಾವಕ । ಮಾತ್ರನೆಂದೆನೆ ನಡೆತಂದಾ ॥ ೪ ॥

ಒಡನಿದ್ದ ಸೇವಕರೆಲ್ಲರ ತೊಲಗಿಸಿ । ಮಡಿಮುಟ್ಟ ಮೋತ್ರವನುಟ್ಟು ॥
ಬೆಡಗು ಬಿನ್ನಣ ಬೀರೆ ಹೊದೆದ ದುಕೂಲವ । ಉಡಿಸುತ್ತಿ ನಡೆದನಾ†ರಾಯಾ ॥ ೫ ॥

ಎಡಗೈಯೊಳಾಂತ ಹೊಂಬಟ್ಟೆ ಅಕ್ಷತೆ ಪುಷ್ಪ । ನಿಡುಗಿಂಡಿ ಬಲದ ಹಸ್ತದೊಳು ॥
ತೊಡಿಗೆಯ ಪ್ರಭೆ ದಿಕ್ಕುದಿಕ್ಕಿಗೆ ಪಸರಿಸಿ । ನಡೆಯೆ ನಡೆದನಾ‡ರಾಯಾ ॥ ೬ ॥

ಬಲಿಪುಷ್ಪದಿಂದ ಪೂಜಿಸಿ ನಿಧಿಯನು ತರ । ಲೊಲಿದು ದ್ರವ್ಯಾರ್ಥಿ ಪೋಪಂತೆ ॥
ಚೆಲುವರರಸನರ್ಚನಾದ್ರವ್ಯವೆರಸಿ ನಿ । ರ್ಮಲಯೋಗಿಪಥಕೈದಿದನು ॥ ೭ ॥

ತೊಟ್ಟ ಮೋಹನನಾಟ್ಯದೊಳು ಮನ್ಮಥ ಬಾಳು । ಬಟ್ಟಲನಾಂತು ಬಹಂತೆ ॥
ಬಟ್ಟಲುಗಿಂಡಿವಿಡಿದು ಗರುವಿಕೆಯೊಡ । ಬಟ್ಟು ಬಹರಸನೊಪ್ಪಿದನು ॥ ೮ ॥

ಮಂಡಲಿಕರ ಕೈಯ ಹಡಪ ಹಾವುಗೆ ಕುಂಚ । ಗಿಂಡಿಯ ಪಿಡಿಸಿಕೊಂಬವನು ॥
ಗಂಡಗರ್ವವ ಬಿಟ್ಟು ನಡೆದನು ಗುರುವಿಗೆ । ಗಿಂಡಿಯಾಳಿಗದವನಾಗಿ ॥ ೯ ॥

ಅಯ್ಯ ಜೀಯೆನಲಿಲ್ಲ ತನ್ನನೊಬ್ಬರು ಕಂಡು । ಕೈಯ ಮುಗಿಯಬಾರದಾಗ ॥
ಮೈಯ ಬೆಂಬಳಿಯೊಳೊಬ್ಬರು ಬರಬಾರದು । ಮೈಯುಳ್ಳ ಮದನನೈದಿದನು ॥ ೧೦ ॥

ರಾಜನ ಮುಂದೆ ಭೃತ್ಯಗೆ ಗುರುವಿನ ಮುಂದೆ । ರಾಜಗೆ ಹಮ್ಮು ಸಲ್ಲೆಂಬ ॥
ರಾಜನೀತಿಯನರಿದಾ ರಾಜ ನಡೆದನು । ರಾಜವಿಡಾಯವ ಬಿಟ್ಟು ॥ ೧೧ ॥

ದಾನಪೂಜೆಯ ತನ್ನ ತನುಮನ ಮುಟ್ಟಿ ಸ್ವಾ । ಧೀನದಿ ಮಾಡಬೇಕದಕೆ ॥
ತಾನು ಲೋಗರ ತೋರಲಾಗದೆಂದರಿದು ಮ । ಹಾನಂದವೆರಸಿ ನಡೆದನು ॥ ೧೨ ॥

---

* ಬಿಟ್ಟು. † ಸೊಬಗಾ. ‡ ನೀರಾ.

ಕೂಡಿದ್ದರೆಲ್ಲರ ನಿಲಿಸಿಯೇಕಾಕಿತ್ವ । ಗೂಡಿ ನಡೆದನಹುದಾಗ ॥
ಬೇಡವೆಂದರು ಬಿಟ್ಟದಿಲ್ಲ ವೈಗಂಪಿಗೆ । ಪಾಡುತೈದಿದುವು ತುಂಬಿಗಳು ॥ ೧೩ ॥

ಊಳಿಗದವರೆಲ್ಲ ಕಿವಿಯುಳ್ಳರದರಿಂದ । ಕೇಳಿದರರಸನಾಜ್ಞೆಯನು ॥
ಕೇಳುವ ಕಿವಿಗೆಟ್ಟ ತುಂಬಿಯು ನಿಸ್ಲೆಂದು । ಹೇಳಬಹುದೆಯೆಂದು ನಡೆದಾ ॥ ೧೪ ॥

ಬೇಡವೆಂದರು ಬೇಡ ಕಳುವದ ಬಿಡುವನೆ । ಬೇಡವಣ್ಣದ ತುಂಬಿವಿಂಡು ॥
ಬೇಡವೆಂದರು ಬರುತಿರ್ದುದು ತ್ಯಾಗಿಯು । ಬೇಡುವ ಯಾಚಕರಂತೆ ॥ ೧೫ ॥

ಹಾವುಗೆ ಮೆಟ್ಟದೆ ಕನ್ನಡಿನೆಲದಲ್ಲಿ । ಭೂವರನಡಿಯಿಡುವಾಗ ॥
ಮಾವಿನ ಕೆಂದಳಿರ್ಗೆದರಿದಂತೆಸೆದುದು । ಹಾವುಗೆಹಜ್ಜೆಯ ಕೆಂಪು ॥ ೧೬ ॥

ಕೆಂಬಜ್ಜೆಗಳ ಸೋಂಕಿನಿಂದ ಭೂಮಿಯೊಳರು । ಣಾಂಬುಜಗಳ ಪಸರಿಸುತ ॥
ತುಂಬಿಯ ಗಾನವ ಕೇಳುತ ನಡೆದನಾ । ಡಂಬರತಪ್ಪದಾ ಭೋಗಿ ॥ ೧೭ ॥

ಎಡಬಲನತ್ತಿತ್ತ ನೋಡದೆ ಮುಂಬಜ್ಜೆ । ವಿಡಿದು ನಿಟ್ಟಿಸುತೊಯ್ಯನೈದಿ ॥
ಕಡೆಯ ಚಾವಡಿಯ ಮುಂಗಡೆಯ ಬಾಗಿಲ್ವಾಡ । ದೆಡೆಯ ಕುಸುಕದಲ್ಲಿ ನಿಂದಾ ॥ ೧೮ ॥

ಬಳಿಕ ಹಸ್ತದ ಗಿಂವಿ ಬಟ್ಟಲನಲ್ಲಿ ಹೊಂ । ಬಲಿಗೆಯ ಮೇಲೊಯ್ಯನಿರಿಸಿ ॥
ಹೊಳೆವ ಸುವರ್ಣದ ಕಂಭವ ನೆಮ್ಮಿ ದಿ । ಗ್ವಲಯವ ನೋಡುತ ನಿಂದಾ ॥ ೧೯ ॥

ನಿಲಿಸಿ ನಾಸಾಗ್ರದೊಳೆಡಗೈಯ ಬೆರಳೊಂದ । ಬಲಗೈಯ ಜಾನುವಿಗಿಟ್ಟು ॥
ಚೆಲುವನೆಸೆದನು ಕಂಭವ ನೆಮ್ಮಿ ತಾನಿಂದ । ನಿಲುಗಡೆ ಜಗವ ಸೋಲಿಸುತ ॥ ೨೦ ॥

ಈ ಸಂಸಾರಸಮುದ್ರವನೆಂದಿಗೆ । ಯೊಸಿ ಮುಕ್ತಿಗೆ ಹೋಹೆನೆಂಬ ॥
ಭಾಸುರಚಿಂತೆಯೊ ಯೆಂಬಂತೆ ಮೆರೆದನು । ನಾಸಿಕಾಗ್ರದ ಬೆರಳಿಂದ ॥ ೨೧ ॥

ಕಡಲು ಸಾಸಿವೆಯೊಳಗಡಗಿದಂತೀ ಮೂರು । ಪೊಡವಿಯುಷ್ಮಗಲದ ಹಂಸ ॥
ಬಡಮೈಯೊಳಿರ್ದುದ ನೆನೆದು ಬೆಕ್ಕಸಬಟ್ಟ । ಬೆಡಗೋಯೆಂದೆನೆ ನೃಪನೆಸೆದಾ ॥ ೨೨ ॥

ಸುರಪತಿ ಬಂದು ಕಂಡಾ ಪುರದಿರವಿಗ । ಚ್ಚರಿವಟ್ಟು ಮೂಗಿನ ಮೇಲೆ ॥
ಬೆರಳಿಟ್ಟು ಬೆರಗಾಗಿ ನಿಂದನೋ ಎಂಬಂತೆ । ಭರತರಾಜೇಂದ್ರನೊಪ್ಪಿದನು ॥ ೨೩ ॥

ಕುಸುಕದ ಕೆಳಗಣ ನೆಳಲ ವೈವೆಳಗಿಂದ । ದೆಸೆಗರೆಯುಟ್ಟ ರಾಜೇಂದ್ರ ॥
ಎಸೆದನಚ್ಚರಿ ನಡುವಗಲಿವನೊಬ್ಬ ತ । ಣ್ಬಿಸಿಲಭಾಸ್ಕರನೋಯೆಂದೆನಿಸಿ ॥ ೨೪ ॥

ಆ ರಾಜಗೃಹಕೆಡಬಲಕಿದಿರೆಂಬ ಮೂ । ದಾರಿಗೆ ದಿಟ್ಟಿ ಹರಿವುತ ॥
ಆ ರಾಜನಿದ್ದನು ಮುನಿಗಳ ಬರವನು । ಪಾರುತ ಶಾಂತಭಾವದೊಳು ॥ ೨೫ ॥

ಇನನ ಬರವನಾಶಿವಮಾಡುವ ರಾತ್ರಿಯ । ವನಜದಂತಾ ಚಕ್ರವರ್ತಿ ॥
ಮುನಿಗಳ ಬರವನಿಚ್ಛೈಸುತ ತಾನೊಬ್ಬ । ಮುನಿಯಂತೆ ಜಾನಿಸುತಿದ್ದಾ ॥ ೨೬ ॥

ಮುನಿಗಳು ಬಪ್ಪ ಬಟ್ಟೆಯ ಚರ್ಮದೃಷ್ಟಿಯೊ । ಳನುಮಿಸಿ ನೋಡುವನೊಮ್ಮೆ ॥
ತನುವಿನೊಳಿದ್ದಾತ್ಮರೂಪ ಸುಜ್ಞಾನಲೋ । ಚನದಿಂದ ನೋಡುವನೊಮ್ಮೆ ॥ ೨೭ ॥
ಹೊರಗೊಮ್ಮೆ ಮುನಿಗಳ ಬರವ ನೋಡುವನೊಳ । ಗೆರಗಿ ತನ್ನನೆ ನೋಳ್ಪನೊಮ್ಮೆ ॥
ಹೊರಗೊಳಗೊಂದಿನಿಸಾದರು ತನ್ನಲ್ಲಿ । ಮರಹಿಲ್ಲದಿದ್ದನೇನೆಂಬೆ ॥ ೨೮ ॥
ಪೊಳಲೊಳಿದ್ದವರಾಗ ಸಾವಿರಮೂರಿನ । ಪ್ಟಳತೆಯೊಳರಮನೆಯತ್ತ ॥
ಸುಳಿಯದೆ ದನಿದೋರದಿದ್ದರೊಡೆಯನ ಮಂ । ಗಲದಾನಸಮಯವನರಿದು ॥ ೨೯ ॥
ಕೆಲಬಲದೊಳಗತಿಸನ್ನಿಧಿಯಲ್ಲದೆ । ಕೆಲಬರೊಳಿಗದವರಾಗ ॥
ಗಲಭೆ ಮಾಡದೆ ತಲೆಮರಸಿಕೊಂಡೊಡೆಯನ । ಬಳಸಿನೊಳಿದ್ದರೀಕ್ಷಿಸುತ ॥ ೩೦ ॥
ಲೋಕವೆಲ್ಲೆನ್ನನೋಲೈಸುತಿರ್ದರು ನಾನು । ಲೋಕವ ಬೆರಸೆನೆಂಬುದನು ॥
ಲೋಕವರಿಕೆಮಾಡಲೆಂದು ನಿಂದಂತೆ ತಾ । ನೇಕಾಕಿಯಾಗಿರ್ದನಾಗ ॥ ೩೧ ॥
ಕರಣವಾಗಿಂದ್ರಿಯಕರ್ಮಕಾಯವ ಪೊರ್ದಿ । ಪೊರೆಯದಿರ್ಪಮಲಾತ್ಮನಂತೆ ॥
ಧರೆಯನಾಳುತ ಪುರದೆಡೆಯೊಳಿರ್ದೊಂದನು । ಬೆರಸದಿರ್ದನು ರಾಜಯೋಗಿ ॥ ೩೨ ॥
ಸಾರದಾನವನೀವೆನೆಂದು ಯೋಗೀಂದ್ರರ । ಹಾರುವುದೊಂದಲ್ಲದಾಗ ॥
ಆರೋಗಿಪೆನೆಂಬ ನೆನಹಿಲ್ಲದಾ ದಾನ । ಶೂರನಿದ್ದನು ಸುಚಿತ್ತದೊಳು ॥ ೩೩ ॥
ಭಾವರಿಗೊಟ್ಟ ಯೋಗೀಂದ್ರರನಲ್ಲಲ್ಲಿ । ಶ್ರಾವಕರೆಲ್ಲ ನಿಲ್ಲಿಸಲು ॥
ಭೂವರಾಗ್ರಣಿಯರಮನೆಯತ್ತ ಹೊಳದ,ದಿ । ಲ್ಲಾ ವೇಳೆಯೊಳು ಯೋಗಿರೂಪು ॥ ೩೪ ॥
ಬಲದ ಬೀದಿಯ ನೋಳ್ಪನೆಡದ ಬೀದಿಯ ನೋಳ್ಪ । ನೊಲಿದಿದಿರ್ವೀದಿಯ ನೋಳ್ಪಾ ॥
ಬಲಗೈಯ ಪೆಗಲಿಕ್ಕಿ ಬಪ್ಪ ಯೋಗೀಂದ್ರರ । ಸುಳುಹುಗಾಣದೆ ಚಿಂತೆ ಮಾಳ್ಪಾ ॥ ೩೫ ॥
ದೂರಕೆ ದಿಟ್ಟಿಯ ಪಸರಿಸಿ ಕೊರಲೆತ್ತಿ । ದಾರಿದಾರಿಯ ತೂಗಿ ನೋಳ್ಪಾ ॥
ಕೇರಿಗಳೊಳಗೊಬ್ಬರಾದರು ಮುನಿಗಳು । ಬಾರದಿದ್ದುದ ಕಂಡು ನೋವಾ ॥ ೩೬ ॥
ಇಂದೇನು ಪರ್ವೋಪವಾಸವೊ ಮುನಿಗಳಿ । ಗೆಂದಾಗ ತಿಥಿಯನಾರೈವಾ ॥
ಇಂದಿದು ಪರ್ವವಲ್ಲೇಕೆ ಚಿತ್ತೈಸಿತಿ । ಲ್ಲೆಂದೆದೆಯೊಳು ಮರುಗುವನು ॥ ೩೭ ॥
ಆನೆ ಕುದುರೆ ಬಟ್ಟೆಗಿಟ್ಟಣಿಸಿದವೊ ಕು । ಮಾನವರುರೆ ನಿಂದಿಸಿದರೊ ॥
ಏನು ಕಾರಣವೆನ್ನ ಮನೆಗಿಂದು ಯೋಗಿಸಂ । ತಾನವೆಯ್ತಂದುದಿಲ್ಲೆಂಬಾ ॥ ೩೮ ॥
ಮುಗಿದುದಲ್ಲಾ ಮುನಿಗಳನೊಬ್ಬ ಜರೆವಾಗ । ಜಗದೊಡೆತನ ನನಗುಂಟೆ ॥
ಬಗೆಯಲಾ ಪಾಟ್ಟಿಯ ಜನಗಳಿಲ್ಲೇಕೆ ಯೋ । ಗಿಗಳಿತ್ತ ಸುಳಿದುದಿಲ್ಲೆಂಬಾ ॥ ೩೯ ॥
ದಿನಬಂಜೆಯಾಗದೆ ಪರಮಾತ್ಮರತರಾದ । ಮುನಿಗಳಿಗನ್ನದಾನವನು ॥
ಮನಮುಟ್ಟಿ ಮಾಡುವ ಭಾಗ್ಯವೆಂಬುದನಾವ । ಮನುಜ ಪಡೆಯಬಹುದೆಂಬಾ ॥ ೪೦ ॥

ಹಡಗು ದ್ವೀಪಕೆ ಹೋಗುತಿರಲಲ್ಲಿ ವಸ್ತುವ । ಗಡಣಿಸಿ ಕಳುಹುವನಂತೆ ॥
ಬಿಡದೆ ಮುಕ್ತಿಗೆ ಹೋಹ ಮುನಿಯು ಕೈಗನ್ನವ । ನಿಡಬೇಡವೆ ಎಂದು ನೆನೆವಾ ॥ ೪೧ ॥

ದೊಕ್ಕೆ ಬೇರಾತ್ಮ ಬೇರೆಂದೆಡೆವಿಡದೆ ಕ । ಣ್ಣಿಕ್ಕಿ ಜಾನಿಸುವ ತಾಪಸಗೆ ॥
ಅಕ್ಕರು ಮಿಗೆ ತನ್ನ ಕೈಮುಟ್ಟಿ ಭುಕ್ತಿಯ । ನಿಕ್ಕ ಬೇಡವೆ ಎಂದು ನೆನೆವಾ ॥ ೪೨ ॥

ರನ್ನಮೂರೆಂದರೆನ್ನಾತ್ಮನೆಂದರಿದೊಲ್ದು । ತನ್ನ ನಿಜವ ಜಾನಿಸುವಗೆ ॥
ಅನ್ನವನೀಯಬೇಡವೆ ಭಕ್ತಿಯಿಂದೆಂದು । ತನ್ನೊಳು ತಾನರ್ತಿ*ವಡೆವಾ ॥ ೪೩ ॥

ಆತ್ಮಸಾಧೆಯನಾತ್ಮಗರ್ಪಿಸುತಖಿಲ ಭ । ವ್ಯಾತ್ಮರಿತ್ತನ್ನವ ಮೆಯ್ಗೆ ॥
ಆತ್ಮಸಾಕ್ಷಿಯೊಳರ್ಪಿಸುವ ಯೋಗಿಗನ್ನವಿ । ತ್ತಾತ್ಮನೆ ಧನ್ಯಾತ್ಮನಲ್ತೆ ॥ ೪೪ ॥

ಚಿದ್ಗುಣದನ್ನವ ತಾನುಂಡು ತನುವಿಗೆ । ಪುದ್ಗಲದನ್ನವನೀವಾ ।
ಸದ್ಗುರುವಿಗೆ ಭಕ್ತಿ ಮಿಗೆ ಭುಕ್ತಿಯಿತ್ತರೆ । ಸದ್ಗತಿವಡೆವುದೇನರಿದೆ ॥ ೪೫ ॥

ತನ್ನಾತ್ಮಗುರ್ರೆ ಬ್ರಹ್ಮವೆಸರುಂಟಾ ಬ್ರಹ್ಮದು । ತ್ಪನ್ನದನ್ನವೆ ಬ್ರಾಹ್ಮಣಾನ್ನ ॥
ಭಿನ್ನಾರ್ಥದೊಳಗಾದ ಸುಖವೆ ಶೂದ್ರಾನ್ನವೆಂ । ಬುನ್ನತನೆಂದು ಸಿಕ್ಕುವನೊ ॥ ೪೬ ॥

ಸುಕ್ಷೇತ್ರದೊಳು ಬಿತ್ತಿದ ಬೀಜ ಹುಸಿವುದೆ । ಮೋಕ್ಷಗಾಮಿಯ ಹಸ್ತದಲ್ಲಿ ॥
ಭಿಕ್ಷವನಿತ್ತರೆ ಹುಸಿವುದೆ ನಾಳೆ ಪ್ರ । ತ್ಯಕ್ಷಫಲವನೀವುದಲ್ತೆ ॥ ೪೭ ॥

ಚಿಪ್ಪಿನೊಳಗೆ ಬಿದ್ದ ಸ್ವಾತಿಯ ಸೀರ್ಪನಿ । ಸುಪ್ಪಾಣಿಮುತ್ತಾಗುವಂತೆ ॥
ಒಪ್ಪಿನ ಭವ್ಯನಾತ್ಮಾರಾಮುಗುಣಲಿತ್ತ । ರಪ್ಪುದಚ್ಚರಿಯೆ ಕೈವಲ್ಯಾ ॥ ೪೮ ॥

ಉಣಲರಿಯದ ಜಿನಪ್ರತಿಮೆಯ ಪೂಜೆಯಿಂ । ದುಣಿಸುವುದುಪಚಾರಭಕ್ತಿ ॥
ಉಣಬಲ್ಲ ಮುನಿಯೆಂಬ ಜಿನಗನ್ನವೀವ ಸಂ । ದಣಿ ಮುಖ್ಯಭಕ್ತಿಯೆಂದೆಂಬಾ ॥ ೪೯ ॥

ಏಕೆಂದು ಮುನಿಗಳೀ ದೆಸೆಗೈದುತಿಲ್ಲೆಂದು । ಭೂಕಾಂತ ಚಿಂತಿಸುವಾಗ ॥
ಆಕಾಶದೊಳಗೊಂದು ವಿಸ್ಮಯವಾದ ಮ । ಹಾಕಾಂತಿಯೊಡ್ಡು ಕಾಣಿಸಿತು ॥ ೫೦ ॥

ಅತ್ತಿತ್ತ ನೋಳ್ಪುದ ಮಾಣ್ದೊಡನಾಕಾಶ । ದತ್ತ ಕಣ್ಣಿಟ್ಟು ನೋಡಿದನು ॥
ಹತ್ತಿರವಲ್ಲ ದೂರದೊಳಾ ಪ್ರಭೆಯೊಡ್ಡು । ಇತ್ತುದಾ ನೃಪಗೆ [illegible] ॥ [illegible] ॥

ಏನೆನ್ನ ಬಹುದೀ ಪ್ರಭೆ ನೋಡೆ ಬೇರೊಂದು । ಭಾನುವಿನ [illegible]
ಶ್ರೀನಿರಂಜನಸಿದ್ಧ ಎನುತ ನೋಳ್ಪಾಗದು । ತಾನೆರಡಾಗ [illegible] ॥ ೫೨ ॥

ಜಿನಜಿನವೊಂದಾದುದೊಡನೆರಡಾದುದು । ಇನನಂತೆ ಚಂದ್ರನಂತೆಂದು ॥
ಜನಪ ನೋಳ್ಪಾಗಳಾ ಪ್ರಭೆಗಳು ಮುಟ್ಟುಮು । ಟ್ಟನೆ ಬರುತಿರ್ದುವು ತನಗೆ ॥ ೫೩ ॥

---

ಸುವನು

ಆಹಾ ಪ್ರಭೆಯಿದು ಚಾರಣಮುನಿಗಳ । ರೂಹಾಗಬೇಕಹುದೆಂದು ॥
ಊಹಿಸುತಿದ್ದವ ನೋಡುತಿದ್ದಾ ಮುನಿ । ರೂಹವ ಕಂಡ ಬಾನದೊಳು ॥ ೫೪ ॥

ರವಿಯೊಳಗಣ ಪ್ರತಿಮೆಯ ಕಾಣ್ಬನಾ ಚಕ್ರಿ । ಇವರ ಶಂಕಿಸಿ ನೋಡಲೇಕೆ ॥
ಕವಿದುದಾ ದಿನ ಮುಗಿಲದರಿಂದ ಯೋಚಿಸಿ । ಅವಧರಿಸಿದನದು ಸಾಕು ॥ ೫೫ ॥

ಹರಿದುದು ಚಿಂತೆ ಸಂತಸವಾಯ್ತು ರೋಮಾಂಚ । ನೆರೆದುದಾಗಳೆ ದೇಹತುಂಬಿ ॥
ಭರತನ ಪುಣ್ಯವೆ ಭಾಪೆಂದು ಕೆಲದೊಳ । ಗಿರಿಸಿದರ್ಚನೆಯ ಕೈಗಾಂತಾ ॥ ೫೬ ॥

ಗಿಂಡಿಬಟ್ಟಲನೆತ್ತಿಕೊಳುವನಿತರೊಳಿಂದು । ಮಂಡಲರವಿಮಂಡಲಗಳು ॥
ಮಂಡಿತಮುನಿಗಳಾದಂತಿರ್ವರಾಗ ಭೂ । ಮಂಡಲಕಿಳಿತಂದರೊಡನೆ ॥ ೫೭ ॥

ಒಡವ ನಿಧಾನವ ಕಂಡಂತೆ ನಲಿವುತ । ನಡೆದನಾ ನೃಪನಿದಿರಾಗಿ ॥
ಒಡನೆ ನಿಲಿಸಿದನು ಮುನಿಗಳಿರ್ವರನು ವೈ । ಗೊಡೆ ತಿಷ್ಠ ತಿಷ್ಠಯೆಂದಾಗ ॥ ೫೮ ॥

ಭರದಿ ಗಂಧಾಕ್ಷತಪುಷ್ಪಗಳಿಂದ । ದರುಶನಾಂಜಲಿಮಾಡಿ ಕೂಡೆ ॥
ಹಿರಿಯ ಗಿಂಡಿಯನೆತ್ತಿ ಜಲಶುದ್ಧಿಯಿತ್ತನಾ । ದರ ಮಿಗೆ ಭಾವಶುದ್ಧಿಯೊಳು ॥ ೫೯ ॥

ಬಲಗೊಂಡನುರೆ ಮೂರು ಬಾರಿ ತನ್ನೊಳು ತಾನು । ಗೆಲವೇರಿ ಮುನಿಗಳಿರ್ವರಿಗೆ ॥
ನಲಿದೆರಗಿದನು ನಿಧಾನದೆಡೆಗೆ ದೀಪ । ಕಳಿಕೆ ತಾನೆರಗುವಂದದೊಳು ॥ ೬೦ ॥

ಬಂದರು ಕೆಲಬಲದೂಳಿಗದವರುಬ್ಬಿ । ನಿಂದಾಗ ಜಯಜಯವೆನುತ ॥
ತಂದು ಕೊಟ್ಟರು ಬೆಳುವಟ್ಟೆಯ ಸುರಳಿಯ ನಂದು ರಾಯನ ಹಸ್ತದಲ್ಲಿ ॥ ೬೧ ॥

ಮುನಿಗಳಿಗೊಲ್ದು ನಿವಾಳಿಯನಿಟ್ಟೆನ್ನ । ಮನೆಗೆ ಚಿತ್ತೈಸಬೇಕೆಂದು ॥
ಮನುಜೇಶ ವೈಯಿಕ್ಕಿ ನಡೆದನು ಮುಂದೆ ಬೆ । ನ್ನನೆ ಗಮಿಸಿದರು ಯೋಗಿಗಳು ॥ ೬೨ ॥

ನಡುವಗಲೊಂದೆರಳ್ಗಳಿಗೆ ಭೂಪತಿ ನಿಂದು । ಕಡುಯೋಗಗೈಯಲಾ ಚಕ್ರಿ ॥
ನಡೆತಂದರಿರ್ವರು ದಿವ್ಯಮುನಿಗಳೆಂದು । ನುಡಿವರುಬ್ಬಿನೊಳು *ಸೇವಕರು ॥ ೬೩ ॥

ನಿಧಿಯನರಸುತಿದ್ದು ಕಂಡವನೊಯ್ಯನಾ । ನಿಧಿಯನೊಯ್ವಂತಾತ್ಮಗೃಹಕೆ ॥
ನಿಧಿಗಧಿನಾಥನು ಕೊಂಡೊಯ್ದನಾ ಗುಣ । ನಿಧಿಗಳ ತನ್ನರಮನೆಗೆ ॥ ೬೪ ॥

ಕಾಮ ಸೋತೆರಗಿ ಕರೆದರೆ ಯೋಗಿಗಳಾ । ಕಾಮನ ಮನೆಗೈದುವಂತೆ ॥
ಆ ಮುನಿಗಳು ನಡೆತಂದರು ಸರಲೋಕ । ಕಾಮದೇವನ ಬೆಂಬಳಿಯೊಳು ॥ ೬೫ ॥

ಹೊನ್ನ ಬಾಗಿಲುಗಳ ರನ್ನದೋರಣಗಳ । ಪನ್ನೀರುಸಾದಿನಿಂದೆಸೆವಾ ॥
ಕನ್ನಡಿನೆಲದರಮನೆಯೊಳು ಹೊಕ್ಕು ನಿ । ರ್ಭಿನ್ನಾಂತರಂಗರೈದಿದರು ॥ ೬೬ ॥

---

* ಸಜ್ಜನರು.

ಕಿರಿವೆಡೆಗೈದಿ ಸೇವಕರು ನಿಂದರು ಮತ್ತೆ । ಕಿರಿದೆಡೆಗಿದಿರಾಗಿ ಬಂದು ॥
ಕಿರುನಡುವೆಸೆಯೆ ಊಳಿಗವೆಂಗಳೂಳಿಗ । ವರಿದೆಸಗಲು ರಾಯ ನಡೆದಾ ॥ ೬೭ ॥

ತಗ್ಗುಸೋಪಾನದೊಳಿಳಿವಾಗ ಮುನಿಗಳ್ಗೆ । ಬೊಗ್ಗನೆ ಕೈಲಾಗುಗೊಡುವಾ ॥
ಉಗ್ಗಡದೇರುಸೋಪಾನದೊಳವರ ಕೈ । ಯೊಗ್ಗಿ ಹಿಡಿದು ಮೇಲೆ ನೆಗೆವಾ ॥ ೬೮ ॥

ಸ್ವಾಮಿ ಶ್ರೀಪಾದವೆಚ್ಚರಿಕೆಯೆಂಬನು ಕೂಡೆ । ಆ ಮಾತನುಪಚಾರವೆಂಬಾ ॥
ವ್ಯೋಮದೊಳೆಯ್ದುವ ನಿಮಗೆ ಪೈಸರವುಂಟೆ । ಶ್ರೀಮುನಿತಿಲಕರಿಗೆಂಬಾ ಆಲಸ್ಯ ॥ ೬೯ ॥

ಆದಕಲ್ಲ ಸ್ವಾಮಿಗಳಿರ ನೋಡಿ ನಾವಿಪ್ಪ । ಸದನವೆಲ್ಲವು ಡೊಂಕು ನಮ್ಮ ॥ ಮನೆ.ನಿವಾಸ
ಹೃದಯವಿನ್ನೆಷ್ಟು ಡೊಂಕೋ ನೀವು ಬಲ್ಲಿರೆಂ । ದೆದೆಗಿಂಪುದೋರೆ ನುಡಿದನು ॥ ೭೦ ॥

ಮನೆ ಡೊಂಕು ಮನಸು ಡೊಂಕಾದರು ನಿಮ್ಮ ಶಿ । ಷ್ಯನ ಮೇಲಣತಿಪ್ರೀತಿಯಿಂದ ॥
ಜಿನಕಲ್ಪರಿರ ಬಿಜಯಂಗೈದಿರಿನ್ನೆನ್ನ । ಮನೆಮನಗಳು ನೇರವೆಂದಾ ॥ ೭೧ ॥

ಆಡುವ ನೃಪನ ಮಾತಿಗೆ ನಸುನಗುತಿಪ್ಪ । ನೋಡುವರಾ ಮುನಿವರರು ॥
ಕೂಡೊಂದು ಮಾತ ನುಡಿಯರಿಬ್ಬರುಪಶಾಂತಿ ॥ ಗೂಡಿ ನಡೆದರು ಮೌನದೊಳು ॥ ೭೨ ॥

ನುಡಿಯಬೇಕೆಂಬಿಚ್ಛೆಯುಂಟು ಭಿಕ್ಷೆಗೆ ಮುನ್ನ । ನುಡಿಯೆವೆಂಬುದೆ ವ್ರತ ತಮಗೆ ॥
ಒಡಲೊಳಾತನ ಭಕ್ತಿರಸಕೆ ಮೆಚ್ಚುತ ಮುಂದೆ । ನಡೆದರು ನಡೆ ಜಿನರುಗಳು ॥ ೭೩ ॥

ಭಯಭಕ್ತಿವಿನಯದಿಂದಾ ರಾಯ ರಾಜಾ । ಲಯಕೆ ಯೋಗಿಗಳನೊಯ್ವಾಗ ॥
ಜಯಮಹಾಲಕ್ಷ್ಮಿಯರಿದಿರುಗೊಂಬಂತೆ ರಾ । ಣಿಯರು ಬಂದರು ಚಕ್ರಧರನ ॥ ೭೪ ॥

ನವರತ್ನದಾಭರಣದ ಕಾಂತಿ ದೇಹ । ಚ್ಛವಿಯೊಳು ಬೆರಸಿ ಬಿಂಬಿಸಲು ॥
ಭವನದ ನೆಳಲನೊತ್ತರಿಸುತ ಬಂದರು । ಡಿವಿಜಲತಾಂಗಿಯರಂತೆ ॥ ೭೫ ॥

ಕಲಸಕನ್ನಡಿಯ ಕನ್ನಿಕೆಯರು ಮುಂದೆಡ । ಬಲದಿ ಮಂಗಲಗಾಯಕರು ॥
ಪೊಳೆವಾರತಿ ತಮ್ಮ ಹಸ್ತದೊಳೆಸೆಯಲು । ಕುಲಸತಿಯರು ಬಂದರಾಗ ॥ ೭೬ ॥

ಆರತಿಯೆತ್ತಿ ನಿವಾಳಿಯನಿಟ್ಟು ಗಂ । ಭೀರಗಮಕದೋಜೆಯಿಂದ ॥
ಚಾರಣಯೋಗೀಂದ್ರರಡಿಗಳಿಗಾ ನೃಪ । ನಾರಿಯರೊಲ್ದೆರಗಿದರು ॥ ೭೭ ॥

ಯತಿಗಳೊಳಗೆ ಕಾದಿ ಸೋತು ಮನ್ಮಥ ಮನೆ । ಗತಿಭಕ್ತಿ ಮಿಗೆ ತಂದು ತನ್ನ ।
ಸತಿಯರನವರ ಕಾಲ್ಗೆರಗಿಸುವಂತೆ ಭೂ । ಪತಿಯ ವೈಭವವೊಪ್ಪಿತಾಗ । ೭೮ ॥

ಒಬ್ಬರಿಬ್ಬರಿಗಲ್ಲ ತವಗೆಲ್ಲ ಹೊಸತೊಂದು । ಹಬ್ಬ ಬಂದಂತೆ ನಲಿದರು ॥
ಹಬ್ಬವೇನಧಿಕವಂತಿರಲೊಂದು ಮದುವೆಯ । ದಿಬ್ಬಣವೆನೆ ರಾಗಿಸಿದರು ॥ ೭೯ ॥

ಕಿನ್ನರಿವೇಣುವೀಣಾರವದೊಡಗೂಡಿ । ಕಿನ್ನರನಾರಿಯರಂತೆ ॥
ಚೆನ್ನೆಯರೆಡಬಲವಿಡಿದು ಪಾಡುತ ಬಂದ । ರನ್ನದಾನದ ಮಹಿಮೆಯನು ॥ ೮೦ ॥

ನಡೆಮುಡಿ ನಾಲ್ಕೆಂಟು ಮಾರ್ಬೈದಲಲ್ಲಲ್ಲಿ । ಗೊಡನೆತ್ತುವಾರತಿ ಸೇಸೆ ॥
ಇಡುವ ನಿವಾಳಿ ಢಾಳಿಸುವ ಚಾಮರಗಳಿಂ । ದಡಿಯಿಡಿಸಿದರು ಯೋಗಿಗಳಾ ॥ ೮೧ ॥

ಭೃತ್ಯನ ಮನೆಗೊಡೆಯನೆ ಬಂದರೊಡೆಯಗಾ । ಭೃತ್ಯ ಮಾಡುವ ಸೇವೆಯಂತೆ ॥
ಸತ್ಯನಾರಿಯರೊಡಗೂಡಿ ತಾಪಸರಿಗಾ । ನಿತ್ಯಾರ್ಥಿ ಭಕ್ತಿಮಾಡಿದನು ॥ ೮೨ ॥

ಜನಪನೆರಗಿದ ಹವ್ಮಿಲ್ಲ ಪೆಣ್ಗಳ ಕಂಡು । ತನು ನಸು ಜುಂಮೆನಲಿಲ್ಲ ॥
ಮನವನಾತ್ಮನೊಳಿಟ್ಟು ತನುವೆಂಬ ಜಂತ್ರನ । ಮುನಿಗಳೊಯ್ಯನೆ ನಡಿಸಿದರು ॥ ೮೩ ॥

ಅರಸಕಂಡರಮನೆಗಂಡರಸಿಯರ ಕಂ । ಡರಸಿನ ಗೀತಕಾಂತೆಯರ ॥
ಸ್ವರಗೇಳ್ದು ಚಿತ್ತವತ್ತಿತ್ತಾಗದಾ ಯೋಗಿ । ವರರಡಿಯಿಟ್ಟರೋಜೆಯೊಳು ॥ ೮೪ ॥

ಪಾಟಿಗೆಟ್ಟಂಗ ಬೇರಾತ್ಮ ಬೇರೆಂದೆಂಬ । ನೋಟವುಳ್ಳಾತ್ಮಸಿದ್ಧರಿಗೆ ॥
ಕೋಟಿರಂಜನೆಗಳ ಹೊರಗೆ ಕಾಣಿಸಲಿದೆ । ನಾಟದು ವಸ್ತುಶಕ್ತಿಯದು ॥ ೮೫ ॥

ಕ್ರಮದಿಂದ ಬಿಜಯಂಗೈಸಿದಂತಾ ಯೋಗಿ । ಕ್ರಮುಕಮಲಂಗಳ ತೊಳೆದು ॥
ದ್ಯುಮಣಿ ಹುಟ್ಟಿದ ಮನೆಯೋ ಎನೆ ಬೆಳಗು । ಳ್ಳಮೃತಗೃಹವನೈದಿಸಿದನು ॥ ೮೬ ॥

ಉನ್ನತಾಸನವಿತ್ತು ಪಾದಪೂಜೆಯ ಮಾಡಿ । ಹೊನ್ನುಪಕರಣವ ಹರಹಿ ॥
ತನ್ನಬಲೆಯರು ತಾನೆಚ್ಚತ್ತು ಮುನಿಗಳಿ । ಗನ್ನದಾನವನಿತ್ತರೊಸೆದು ॥ ೮೭ ॥

ದಾತೃಗಳೊಳಗವನೀಶನುತ್ತಮನು ಸು । ಪಾತ್ರದೊಳುತ್ತಮರವರು ॥
ದಾತೃವಿತ್ತನು ಪಾತ್ರವಾಂತುದು ಸಿದ್ಧಾಂತ । ಸೂತ್ರದೊಳೆಂತು ಪೇಳ್ದಂತೆ ॥ ೮೮ ॥

ಭೋರೆಂದು ಹೊರಗುರೆ ಮೊಳಗಿತು ಜಯಘಂ । ಟಾರವವಾ ಸಮಯದೊಳು ॥
ಆರು ಬಣ್ಣಿಸಬಲ್ಲರಾ ವಿಭು ಮಾಳ್ಪಾ । ಹಾರದಾನದ ಸಂಭ್ರಮವನು ॥ ೮೯ ॥

ಈ ನೆಲದೊಳಗುಳ್ಳ ಸಾರವಸ್ತುಗಳೊಳ । ಗೇನಿಲ್ಲವವನ ಗೃಹದೊಳು ॥
ಜ್ಞಾನಶೀಲರಿಗಮೃತಾನ್ನವಿತ್ತನು ಕಾಮ । ಧೇನುವೆ ಹಯನಾದಂತೆ ॥ ೯೦ ॥

ಭಕ್ಷಪಾಯಸಶಾಕಪಾಕ ಮುಂತಾದ ಸು । ಭಕ್ಷ ಸುಪಕ್ವಫಲಗಳ ॥
ಮೋಕ್ಷಗುಳಿಗೆ ಹದವರಿದಿಕ್ಕಿದನು ಕಲ್ಪ । ವೃಕ್ಷ ಪಣ್ಗಳ ನೀಡುವಂತೆ ॥ ೯೧ ॥

ಹೇಮಭಾಜನರೂಪ್ಯಭಾಜನದಿಂದ ದಿ । ವ್ಯಾಮೃತಗಳ ತೆಗೆತೆಗೆದು ॥
ಭೂಮೀಶನಿತ್ತನು ಪುರುಷರೂಪಾಗಿ ಚಿಂ । ತಾಮಣಿ ನೀಡುವಂದದೊಳು ॥ ೯೨ ॥

ಬಡಿಸುವ ಸ್ತ್ರೀಯರ ಯುಕ್ತಿ ಹಸ್ತಕೆ ತುತ್ತ । ಗೊಡುವ ರಾಯನದೊಂದು ಯುಕ್ತಿ ॥
ಬಡವಿಲ್ಲದೆಸೆವ ಸ್ತ್ರೀಪುರುಷರ ಭಕ್ತಿ ಹೋ । ತಡೆಯದಿನ್ನವರಿಗೆ ಮುಕ್ತಿ ? ॥ ೯೩ ॥

ಭಿನ್ನರುಚಿಗೆ ಹಿಗ್ಗದೊಂದು ವಸ್ತುವ ಬೇಡಿ । ಸನ್ನೆದೋರದೆ ಮುನಿವರರು ॥
ತನ್ನ ಕೈಮುಟ್ಟಿ ಚಕ್ರೇಶ್ವರನಿತ್ತ ದಿ । ವ್ಯಾನ್ನವ ಕೊಂಡುದಣಿದರು ॥ ೯೪ ॥

ನಿರಸಾನ್ನವವರ ಹಸ್ತಕೆ ಬಂದರಾಕ್ಷಣ । ಸುರಸಾನ್ನವಹುದದು ಸಹಜಾ ॥
ಭರತೇಶನಿತ್ತನ್ನವಿಂತಂತು ಸೊಗಸಿತೆಂ । ದೊರೆಯುಬಹುದೆ ಜಿನ ಬಲ್ಲ ॥ ೯೫ ॥

ಅನಿಮಿಷರುಂಬ ಸ್ವರ್ಗಾಹಾರಕೆಣೆಯೆನೆ । ತನಗೆಂದು ಮಾಡಿದನ್ನವನು ॥
ಜನನಾಥ ತನ್ನ ಕೈಮುಟ್ಟಿತ್ತನೆಂದರೇ । ನೆನಬಹುದದರ ಸೌಖ್ಯವನು ॥ ೯೬ ॥

ಭುಕ್ತಿಯಿಂದಾ ಮುನಿಗಳ ತಣಿಸಿದನು ಸು । ಭಕ್ತಿಯಿಂ ನೆರೆ ತಣಿಪಿದನು ॥
ಭುಕ್ತಿಭಕ್ತಿಗಳಿಂದ ಮುಕ್ತಿಪಥಕೆ ಪುಣ್ಯ । ಭುಕ್ತಿಸನ್ನಹವ ಮಾಡಿದನು ॥ ೯೭ ॥

ಸಪ್ತವಿಧಗಳಿಂದ ನವವಿಧಪುಣ್ಯಸಂ । ಪ್ರಾಪ್ತಿಯಿಂದುತ್ತಮಾನ್ನವನು ॥
ತಪ್ತಕಾಂಚನವರ್ಣ ಕೊಡಲಾಗಿ ಕೊಂಡು ಸಂ । ತೃಪ್ತಿಯಾದುದು ಮುನಿಗಳಿಗೆ ॥ ೯೮ ॥

ಹಂಸಗಾನಂದವೆ ಭುಕ್ತಿ ಭೋಜನಭುಕ್ತಿ । ಗಾಂ ಸಲೆ ಸಾಕ್ಷಿಯೆಂದೆನುತ ॥
ಸಂಸೇವ್ಯಭುಕ್ತಿಯ ಕೈಕೊಂಡುದಣಿದರು । ಹಂಸ ಹಾಲುಂಡ ಮಾಳ್ಕೆಯೊಳು ॥ ೯೯ ॥

ಬದ್ಧಪಲ್ಯಂಕಾಸನದೊಳೊಡನೆ ಮುಖ । ಶುದ್ಧಿಯ ಕೊಂಡು ಕೈದೊಳೆದು ॥
ಸಿದ್ಧರ ಜಪಿಸಿ ಕಣ್ಮುಚ್ಚಿ ನಿರಂಜನ । ಸಿದ್ಧನ ನೋಡಿದರೊಳಗೆ ॥ ೧೦೦ ॥

ನಿಂದಿತು ಘಂಟಾರವ ಕೂಡೆ ಸುತ್ತಲು । ನಿಂದರಾ ನೃಪನ ರಾಣಿಯರು ॥
ಮುಂದೆ ಮುನಿಗಳ ಯೋಗವ ನೋಡುತರಸನಾ । ನಂದಿಸುತಿರ್ದನೆದೆಯೊಳು ॥ ೧೦೧ ॥

ಲೆಪ್ಪದ ಪುತ್ತಲಿವೊಲು ಕುಳಿತತ್ತಿತ್ತ । ಲೊಪ್ಪುಚ್ಚಿ ದೇಹ ಕಂಪಿಸದೆ ॥
ನೆಪ್ಪರಿದಾತ್ಮನ ನೋಡಿ ಸಿದ್ಧಾಂತದೊ । ಳಿಪ್ಪ ಮಂತ್ರವ ಜಪಿಸಿದರು ॥ ೧೦೨ ॥

ಕೂಡೆ ಕಣ್ದೆರೆದಿದಿರೊಳಗಿರ್ದ ರಾಯನ । ನೋಡಿದರಾನಂದದಿಂದ ॥
ಆಡಲರಿಯೆನವನುತ್ಸಾಹವನು ಭಕ್ತಿ । ಗೂಡಿ ನಮೋಸ್ತುಮಾಡಿದನು ॥ ೧೦೩ ॥

ಸಲೆ ಚಂದ್ರಗತಿಯೆಂಬ ಮುನಿ ಅಕ್ಷಯಂ ದಾನ । ಫಲಮಸ್ತು ತೇ ಎಂದನೊಡನೆ ॥
ನಲವಿನೊಳಾದಿತ್ಯಗತಿಯೆಂಬ ಯೋಗಿ ನಿ । ರ್ಮಲಿನಾತ್ಮಸಿದ್ಧಿರಸ್ತೆಂದಾ ॥ ೧೦೪ ॥

ಹಂಸನಾಥನೆ ಬಲ್ಲ ಭರತೇಶನಾ ಮುನಿ । ಹಂಸರಾಶೀರ್ವಾದಗೇಳ್ದು ॥
ಸಂಸಿದ್ಧಿವಡೆದಂತೆ ನಲಿದನು ಸತ್ಪಾತ್ರ । ತಾಂ ಸಿಕ್ಕಿ ನಲಿಯದರಾರು ॥ ೧೦೫ ॥

ರಾಣಿಯರೆಲ್ಲರೊಲ್ದೆರಗಿದರಾಗ ನೇ । ರಾಣಿಯ ಬೊಂಬೆಗಳಂತೆ ॥
ಕಾಣುತೆಲ್ಲರ ಹರಸಿದರು ಯೋಗಿಗಳು ಗೀ । ರ್ವಾಣಭಾಷೆಯೊಳವರರಿಯೆ ॥ ೧೦೬ ॥

ಜಿನಜಿನ ಚಿತ್ರವೇನೆಂಬೆನಾ ಕ್ಷಣವೆ ಹೂ । ವಿನ ತೋಟದೊಳಗೆ ಹೊಕ್ಕಂತೆ ॥
ಮನೆಯೊಳಹೊರಗೆ ಕಂಪಿಡಿದರೆ ಕಂಮುಕಂ । ಮನೆ ತೀಡಿತೊಂದು ತಂಗಾಳಿ ॥ ೧೦೭ ॥

ಬಳಿಕೊಂದು ಚೋದ್ಯವನೇನೆಂಬೆನದರ ಬೆಂ । ಬಳಿಯೊಳೆ ನೃಪನರಮನೆಗೆ ॥
ಬಳಬಳನಾಗಳೆ ಸ್ವರ್ಗಲೋಕದ ಹೂ । ಮಳೆಗರೆದುದು ಚೆಲ್ಲಿದಂತೆ ॥ ೧೦೮ ॥

ಉಸುರಲಳವೆ ಮಝು ಮತ್ತೊಂದು ಸೋಜಿಗ । ಮಿಸುಪ ರಾಜಾಂಗಣದಲ್ಲಿ ॥
ಹೊಸ ಹೊನ್ನಮಳೆ ಚುಂಮುಚುಂಮನೆ ಕರೆದು ರಂ । ಜಿಸುತದೆ ರಾಶಿರಾಶಿಯೊಳು ॥ ೧೦೯ ॥

ನಟಿಸಿ ರಾಜನ ರಾಜಗೃಹದ ಮೇಲಾಕಾಶ । ಘಟನೆಯೊಳದ್ಭುತವಾಗಿ ॥
ಝುಟಿ ದಾಂಧಣ ದಿಂದಿಮಿಕು ದಿಂಮೆನೆ ಸುರ । ಪಟಹನಿನಾದ ಕೇಳುತದೆ ॥ ೧೧೦ ॥

ಅರರೆ ವಿಸ್ಮಯ ಮತ್ತೆ ದೊರೆಯ ಮನೆಯ ಮೇಲೆ । ಸುರರು ನಿಂದಾಕಾಶದಲ್ಲಿ ॥
ಪುರೆ ಮಝು ದಾನವೆ ದಾತೃವೆ ಪಾತ್ರವೆ । ಸರಿಯುಂಟೆ ನಿನಗೆನುತಿಹರೆ ॥ ೧೧೧ ॥

ದಾನವುತ್ತಮ ದಾತೃವುತ್ತಮನೀ ಪಾತ್ರ । ತಾನುತ್ತಮೋತ್ತಮವೆಂದು ॥
ಬಾನದೊಳಗೆ ನಿಂದು ದೇವರ್ಕಳೆಲ್ಲ ಮ । ಹಾನಂದ ಮಿಗೆ ಪೊಗಳಿದರು ॥ ೧೧೨ ॥

ಸುರಲೋಕದೊಳು ಪುಟ್ಟಿ ಸ್ವರ್ಗಸುಖವನುಣು । ತಿರುತಿರ್ದರೇನಾಯ್ತು ನಮಗೆ ॥
ಭರತೇಶ ನಿನ್ನಂತೆ ಪಾತ್ರದಾನವ ಮಾಳ್ಪ । ಸಿರಿ ದೊರಕಿತೆಯೆಂದರವರು ॥ ೧೧೩ ॥

ವ್ರತದಿಂದ ತಪದಿಂದ ದಾನದಿಂದೀ ಸ್ವರ್ಗ । ಗತಿಯ ಪಡೆದೆವಹುದಿಲ್ಲಿ ॥
ವ್ರತವಿಲ್ಲ ತಪಸಿಲ್ಲ ದಾನವಿಲ್ಲೆಲೆ ಭೂಮಿ । ಪತಿ ನಿನ್ನ ಸಿರಿಗೆಣೆಯುಂಟೆ ॥ ೧೧೪ ॥

ಅನ್ನವನೀವರೆಮಗೆ ಶಕ್ತಿಯುಂಟಹು । ದನ್ನ ವನಿತ್ತಪೆವೆನಲು ॥
ಸನ್ನುತವ್ರತಿಕರಿಲ್ಲದರಿಂದಾ ಮುನಿ । ರನ್ನರೊಲ್ಲರು ಭವ್ಯರತ್ನಾ ॥ ೧೧೫ ॥

ಪೂಜೆಯ ಮಾಳ್ಪೆವು ಜಿನಗುಪಚಾರದಿಂ । ದಾ ಜಿನಗುದರಾಗ್ನಿಯಿಲ್ಲ ॥
ಈ ಜಿನಮುನಿಗಳುದರಶಾಂತಿ ಮಾಡಿದೆ । ರಾಜ ನೀನೇ ಧನ್ಯ ಜಗಕೆ ॥ ೧೧೬ ॥

ಭುಕ್ತಿಯನೀವರುಂಟಲ್ಲಲ್ಲಿ ಭೂಪರು । ಯುಕ್ತಿಯಿಲ್ಲುರೆ ಭಕ್ತಿಯಿಲ್ಲ ॥
ಯುಕ್ತಿಭಕ್ತಿಯೊಳೊಡಗೂಡಿ ಭುಕ್ತಿಯನೀವ । ಮುಕ್ತಿಸಾಧಕ ನೀನೆ ಚಕ್ರಿ ॥ ೧೧೭ ॥

ನರರ ಸೊಕ್ಕಿಸುವ ಸೌಭಾಗ್ಯ ಸೊಕ್ಕಿಸಿತಿಲ್ಲ । ಹರಿಯ ಸೊಕ್ಕಿಸಿತಿಲ್ಲ ನಿನ್ನ ॥
ವರಭೋಗ ಮೂರ್ಛೆಯ ಮಾಡಿತಿಲ್ಲಾತ್ಮನ । ಸಿರಿಯ ನೀನೇ ಕಂಡೆ ನೃಪತಿ ॥ ೧೧೮ ॥

ಧರ್ಮಗುಣಕೆ ಸೋತು ಹೊಗಳಬೇಕದು ತಾನೇ । ಧರ್ಮಶೀಲರ ಜಾತಿಚಿಹ್ನ ॥
ಧರ್ಮಸಾಮ್ರಾಜ್ಯವನಾಳೆಂದು ಸುರರಾಡಿ । ದರ್ಮತ್ತೆ ಬಯಲಾದರೊಡನೆ ? ॥ ೧೧೯ ॥

ಸುರವಾಕ್ಯ ಸುರಭೇರಿ ಹೂಮಳೆ ಪೊಂಮಳೆ । ಸುರಭೀರವವೆಂದಿಂತು ॥
ಸುರಕೃತಪಂಚವೈಭವಗಳಾದುವು ಮಝು । ಭರತೇಶದಾನವೈಭವವೆ ॥ ೧೨೦ ॥

ಮುನಿಗಳೆದ್ದರು ಜಿನಶರಣೆಂದು ನೃಪನರ । ಮನೆಯಿಂದ ಶಾಂತಭಾವದೊಳು ॥
ನೆನಗೆ ನೀವೇ ಶರಣೆನುತಿದ್ದನಾ ರಾಯ । ಮುನಿಗಳ ಪಿಂದೆ ರಾಗದೊಳು ॥ ೧೨೧ ॥

ನಿಲ್ಲೆಲೆ ಭವ್ಯಯೆಂಬರು ಯೋಗಿಗಳು ದೇವ । ರೊಲ್ಲಗೆ ಚಿತ್ತೈಸಿಯೆನುತ ॥
ಮೆಲ್ಲಗೆರಡು ರೂಪ ಕೈಕೊಂಡು ಕೈಲಾಗಿ । ನಲ್ಲಿ ನಡಸಿದ*ನಿರ್ವರನು ॥ ೧೨೨ ॥

ನಾಕೆಂಟು ಮಾರು ನಡೆದು ಮುನಿಗಳು ಕೂಡೆ । ಸಾಕು ನಿಲ್ಲೆಂಬರು ನೃಪನಾ ॥
ಸಾಕಾಗದಿದೆ ನಿಮ್ಮ ಸೇವೆಯಿನ್ನೊಪ್ಪಚ್ಚಿ । ಬೇಕು ಚಿತ್ತೈಸಿಯೆಂದೆಂಬಾ ॥ ೧೨೩ ॥

ಮತ್ತೆ ಕಿಂದು ದೂರ ನಡೆವರು ಮುನಿಗಳಿ । ನ್ನಿತ್ತ ಬಾರದಿರೆಂಬರೊಡನೆ ॥
ಇತ್ತ ಬಾರೆಂದೆನ್ನನುದ್ಧರಿಸದೆ ದೇವ । ರೊತ್ತರಿಪರೆ ಎಂದು †ನುಡಿವಾ ॥ ೧೨೪ ॥

ಮನದಲ್ಲಿ ಹಿಗ್ಗುತಿಹರು ಯೋಗಿನಾಥರು । ಮನುವಿನ ವಿನಯವ ಕಂಡು ॥
ಜಿನನ ಕುಮಾರನಲ್ಲವೆ ಎಂದು ನುಡಿಯುದೆ । ನೆನೆವುತ ನಡೆದರೋಜೆಯೊಳು ॥ ೧೨೫ ॥

ಪೊತ್ತಾದುದರಸೆ ಪೋಗೂಟಕೆಂದಾ ಮುನಿ । ಪೋತ್ತಮರೊಡನೆ ನಿಲ್ಲುವರು ॥
ಚಿತ್ತೈಸಿಯಿನ್ನಿಷ್ಟು ದೂರವೆನುತ ಭಕ್ತಿ । ವೆತ್ತು ಮುಂದೊಯ್ವನಾ ರಾಯಾ ॥ ೧೨೬ ॥

ಕಡೆಯ ಬಾಗಿಲು ಮುಟ್ಟಿ ಬಿಡದೆ ಬಂದನು ಮತ್ತು । ಬಿಡುವಿಚ್ಛೆಯಾದುದಿಲ್ಲವರಾ ॥
ಬಿಡದೆ ಹಂಸನ ಕಾಣ್ಬ ಯೋಗಿರತ್ನರ ಕಂಡು । ಬಿಡುವರೆ ಮೋಕ್ಷಗಾಮಿಗಳು ॥ ೧೨೭ ॥

ಆದೀಶನಾಣೆ ನೀನಿನ್ನು ನಿಲ್ಲೆಂದವ । ರಾದರ ಮಿಗೆ ನಿಲಿಸಿದರು ॥
ಪಾದಕೆರಗಿದನಿರ್ವರಿಗೊಡನೊಂದೇ ರೂ । ಪಾದನಾ ವಿಸ್ಮಯರೂಪ ॥ ೧೨೮ ॥

ನಡೆ ನೋಡಿ ನಲವಿಂದ ಹರಸಿದರವರು ಮ । ತ್ತೊಡನೆ ಲಂಘಿಸಿದರಂಬರಕೆ ॥
ಕುಡಿಮಿಂಚಿನಂತೆ ಹೊಳೆದು ಪೋಹ ಯತಿಗಳ । ಬೆಡಗ ಕಣ್ಣಿಟ್ಟು ನೋಡಿದನು ॥ ೧೨೯ ॥

ತಂದ್ರವಿಲ್ಲದೆ ಗಗನದೊಳು ತಮ್ಮಾತ್ಮನ । ರುಂದ್ರಗುಣಗಳ ಭಾವಿಸುತ ॥
ಚಂದ್ರಗತ್ಯಾದಿತ್ಯಗತಿಗಳೈದಿದರತ್ತ । ಚಂದ್ರನಂತಾದಿತ್ಯನಂತೆ ॥ ೧೩೦ ॥

ದಿಟ್ಟಿಗೆ ತೋರುವನಿತು ಹೊತ್ತು ಮುನಿಗಳ । ನಿಟ್ಟಿಸಿ ಮಿಗೆ ಹಾಯ್ದು ಮೇಲೆ ॥
ತೊಟ್ಟನೆ ತನ್ನರಮನೆಯತ್ತಲೊಲೆದನು । ಪಟ್ಟವರ್ಧನ ಸಾರ್ವಭೌಮಾ ॥ ೧೩೧ ॥

ಕನಕರತ್ನದ ಹಾವುಗೆಯ ಮೆಟ್ಟಿ ಬೀಸುವ । ಕನಕಚಾಮರಗಳೊಗ್ಗಿನೊಳು ॥
ಮನುಜೇಶನರಮನೆಗಡಿಯಿಟ್ಟನಿಲ್ಲಿಗೆ । **ಮುನಿಭುಕ್ತಿಸಂಧಿ** ಸುಗಂಧಿ ॥ ೧೩೨ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೩೩ ॥

* ನಾರಾಯ. † ನಡೆವಾ.

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾವೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೩೪ ॥

ಸುಖದುಃಖವೆಂಬ ವಿಕಲ್ಪವಳಿದು ದಿವ್ಯ । ಸುಖವೆ *ರೂಪಾದ ಮಹಾತ್ಮಾ ॥
ಸುಖದೋರುತೆನ್ನಂತರಂಗದೊಳಿರು ಸುಖ । ಮುಖನೆ ಚಿದಂಬರಪುರುಷಾ ॥ ೧೩೫ ॥

* ಸ್ವರೂಪಾದ ಮಹಿಮಾ.

ಮುನಿಭುಕ್ತಿಸಂಧಿ ಸಂಪೂರ್ಣಂ

# ಆರೋಗಣೆಸಂಧಿ.

ಪಾವನಮೂರ್ತಿ ಪಾವನಕೀರ್ತಿ ಲೋಕೈಕ । ಪಾವನಾಕಾರ ಗಂಭೀರ ॥
ಪಾವನಮತಿದೋರು ಪಾಲಿಸೆನ್ನನು ನನ್ನ । ದೇವ ನಿರಂಜನಸಿದ್ಧ ॥ ೧ ॥

ರಾಜರದೇವ ರಾಜಾದಿತ್ಯ ರಾಜಾಧಿ । ರಾಜರ ರಾಜನಾ ಚಕ್ರಿ ॥
ರಾಜಮಂದಿರಕೋಜೆಯಿಂದಡಿಯಿಟ್ಟನು । ರಾಜವಿಡಾಯ ಬಿಮ್ಮನಲು ॥ ೨ ॥

ಸೆರಗು ಸೇರುವೆಗಿಳಿದೆಡದ ಕಂಕುಳೊಳೊಲಿ । ದಿರುಕಿದ ಪಚ್ಚಡದಚ್ಚು ॥
ನಿರಿಸಿ ಬೀಸುವ ಬಲದೋಳಿಂದ ಗಮಕದಿ । ಮರಿಯಾನೆ ನಡೆವಂತೆ ನಡೆದಾ ॥ ೩ ॥

ಕಟಿಗಣ್ಮ್ರಝುಟಿಲೆಂದು ಪಾವುಗೆಗಳ ದನಿ । ನಟಿಸಿ ಮೆಲ್ಲನೆ ಪಜ್ಜೆಯಿಡುವ ॥
ಪಟುಭಾವ ಪಸರಿಸೆ ವೀರಲಕ್ಷ್ಮಿಯುರಾಯ । ವಿಟ ನಡೆದನು ನಟನೆಯೊಳು ॥ ೪ ॥

ಉತ್ಕೃಷ್ಟಪಾತ್ರದಾನಾರ್ಚನೆಯಾಯ್ತೆಂದು । ಹೃತ್ಕಮಲದೊಳರ್ತಿಯಿಂದ ॥
ಸತ್ಕಾರದಿಂದ ಸೇವಕರ ಕಳುಹುತ ಚ । ಮತ್ಕಾರದಿಂದೊಳಹೊಕ್ಕ ॥ ೫ ॥

ಕರ್ದೊಬ್ಬ ಹಿತವನನ್ನೀ ಪೊನ್ನ ರಾಶಿಯ । ಪುರದೊಳಿಹ ಬಡವರಿಗೆ ॥
ತಿರಿಕರಿಗೆರೆವರ್ಗೆ ವೆಚ್ಚಿಸು ಪೋಗೆಂದು । ದೊರೆ ಹೊಕ್ಕನೊಡನರಮನೆಯಾ ॥ ೬ ॥

ಯತಿಗಳ ಗುಣವ ಬಣ್ಣಿಸುತ ದಾನದೊಳಾದ । ಅತಿಶಯಕಾನಂದಬಡುತ ॥
ಪತಿ ಬಹ ದಾರಿಯ ನೋಡುತಲಾ ಪತಿ । ವ್ರತೆಯರಿದ್ದರು ಗೆಲವಿನೊಳು ॥ ೭ ॥

ಕಂಡರು ಮುಖಕಾಂತಿ ತಳತಳಿಸುತ ಬಹ । ಗಂಡನ ತಮ್ಮಿದಿರಿನೊಳು ॥
ತಂಡತಂಡದೊಳೆಲ್ಲರಿದಿರಾಗಿ ಬಂದು ಮುಂ । ಕೊಂಡು ನುಡಿದರೊಳಗರಿದು ॥ ೮ ॥

ದೇವರ ಪರಿಯೆಂದಿನಂದವಲ್ಲಿಂದೊಂದು । ಭಾವವಾಗೆಮಗೆ ತೋರುತಿದೆ ।
ಭಾವಿಸುವಾಗೊಂದು ಪರಮಲಾಭವ ಪೆತ್ತ । ಠೀವಿಯೊಳಿದೆಯೆಂದರೊಸೆದು ॥ ೯ ॥

ಅಕ್ಕಾಜಿ ನೀನೋಡು ತಾನೋಡು ತಂಗಿ ನೋ । ಡಕ್ಕರಿಂದರಸನ ಮೊಗವಾ ॥
ಠಕ್ಕೊ ಸತ್ಯವೊ ನಮ್ಮ ಮಾತೆಂದು ಕೇಳ್ವರು । ನಕ್ಕಾಡಿ ತಾವು ತಮ್ಮೊಳಗೆ ॥ ೧೦ ॥

ಠಕ್ಕಲ್ಲ ಸತ್ಯ ನಿಮ್ಮಯ ಮಾತು ನಮ್ಮ ನೋ । ಟಕ್ಕೆ ಹಾಗಿದ್ದೀತು ನಾವು ॥
ಮಿಕ್ಕು ಸೊಲ್ಲಿಸಿತಿಲ್ಲವೆಂದು ತಮ್ಮೊಳು ತಾವು । ಚೊಕ್ಕವಾಯ್ತೆಂದು ಮೆಚ್ಚುವರು ॥ ೧೧ ॥

ನಮ್ಮೊಳು ನಾವು ಕೆಲರು ಕೆಲಬರ ಕೇಳಿ । ನಮ್ಮ ನಾವಹುದಹುದೆಂದು ॥
ಸುಮ್ಮಾನವಡೆದರೇಕಹುದೆಂದು ಸ್ವಾಮಿಯ । ನೊಮ್ಮೆ ಕೇಳುವೆವೆಂದರೊಡನೆ ॥ ೧೨ ॥

ಅಹುದೊ ಅಲ್ಲವೊ ನಾವು ಕಂಡ ಕಾಣ್ಕೆಯು ದೇವ । ಸಹಜದಿಂದುಸುರಬೇಕೆಂದು ॥
ಮಹಿಳೆಯರೆಲ್ಲರು ನಗುತ ಕೇಳಲು ರಾಯ । ನಹುದಹುದಹುದೆಂದನಾಗ ॥ ೧೩ ॥

ಚೆನ್ನಾಗಿ ಕಂಡಿರಿ ನಿಮ್ಮಂತೆ ಕಾಣ್ಬವ । ರಿನ್ನುಂಟೆ ನನ್ನೆದೆಯೊಳಗಾ ॥
ಬನ್ನಿ ನಾವೆಲ್ಲವಿನ್ನಾರೋಗಿಸುವುದೆಂದು । ಮನ್ನಿಸಿ ಕರೆವುತ ನಡೆದ ॥ ೧೪ ॥
ಪಾದವ ತೊಳೆದಂಗದಟ್ಟವನಿಕ್ಕಿದ । ರಾದರದಿಂದೊಳಹೊಕ್ಕು ॥
ಮೇದಿನೀಪತಿ ಕಂಡು ತನಗೊಬ್ಬಗೆಂದು ಸಂ । ಬೋಧಿಸಿದಂದು ಕುಳ್ಳಿರನು ॥ ೧೫ ॥
ಮುಂದಕೆ ನಡೆಯದೆ ಸಿಂದನಲ್ಲಿಯೆ ಪೆಂಡಿ । ರೆಂದೆಂದು ತನಗಾದ ಮೇಲೆ ॥
ಸಂದಣಿಗೊಂಡ್ಳುಂಬರಾ ಪರಿಗೆಂದು ತಾ । ವಿಂದ, ಯೋಚಿಸಿದರೆಂದರಿದಾ ॥ ೧೬ ॥
ಅತಿವೇಳೆಯಾಯ್ತೆಂದು ನಮ್ಮ ಪಂತಿಯೊಳಿಲ್ಲ । ಸತಿಯರಿಗುಣಿಸಾಗಲೆಂದು ॥
ಕ್ಷಿತಿಪನೆಲ್ಲರಿಗೆ ಕುಳ್ಳಿರಲಿಡಿಸಿದನು ಲಾ । ಲಿತವಾಕ್ಯದಿಂದ ಕರೆದನು ॥ ೧೭ ॥

ಕನ್ನಾಜಿ ಕಮಲಾಜಿ ವಿಮಲಾಜಿ ಸುಮನಾಜಿ । ಹೊನ್ನಾಜಿ ಹೊಸ ಮಧುರಾಜಿ ॥
ರನ್ನಾಜಿ ಚೆನ್ನಾಜಿ ಚಿನ್ನಾಜಿ ನೀವೆಲ್ಲ । ಬನ್ನಿರೆಂದನು ಬಗೆಯರಿದು ॥ ೧೮ ॥
ಕಾಂತಾಜಿ ಮುಕುರಾಜಿ ಕುಸುಮಗಂಧಾಜಿ ವ । ಸಂತಾಜಿ ಮಧುಮಾಧವಾಜಿ ॥
ಅಂತರಂಗಾಜಿ ಸುಖಾಜಿ ಸುಖಾವತಿ । ಶಾಂತಾಜಿ ಬಾ ಬನ್ನಿರೆಂಬಾ ॥ ೧೯ ॥
ಭೃಂಗಲೋಚನೆ ನೀಲಲೋಚನೆ ಬಾರಾ ಕು । ರಂಗಲೋಚನೆ ಪುಷ್ಪಮಾಲೆ ॥
ಶೃಂಗಾರವತಿ ಗುಣವತಿ ಚಂದ್ರಮತಿ ಸಾ । ರಂಗಲೋಚನೆ ಬನ್ನಿರೆಂಬಾ ॥ ೨೦ ॥
ವೀಣಾದೇವಿ ವಿದ್ಯಾದೇವಿ ಸುರದೇವಿ । ವಾಣೀದೇವಿ ಶ್ರೀದೇವಿ ॥
ಬಾಣಾದೇವಿ ಭದ್ರಾದೇವಿ ಬಾರಾ ಕ । ಲ್ಯಾಣೀದೇವಿ ಬಾರೆಂಬಾ ॥ ೨೧ ॥
ಎಲ್ಲಿದ್ದಳಂಜನಾದೇವಿ ಕುಂಕುಮದೇವಿ । ಮಲ್ಲಿಕಾದೇವಿ ಸುದೇವಿ ॥
ಎಲ್ಲಿದ್ದಳುತ್ಸಹಾದೇವಿ ಎಂದೆಡಬಲ । ದಲ್ಲಿ ತಾನರಸಿ ನೋಡಿದನು ॥ ೨೨ ॥
ಚಿತ್ರವತಿ ಚಿತ್ರಲೇಖೆ ಪದ್ಮಾವತಿ ॥ ನೇತ್ರಾವತಿ ಚಂದ್ರಲೇಖೆ ॥
ಮಿತ್ರಾವತಿ ಪದ್ಮಲತೆ ಲಲಿತಾಂಗಿ ವಿ । ಚಿತ್ರಾಂಗಿ ಎಲ್ಲಿದ್ದಳೆಂಬಾ ॥ ೨೩ ॥
ಕನಕಲತೆಯ ಕರೆ ಕುಂದಲತೆಯ ಕರೆ । ಕನಕಮಾಲೆಯ ಬರಹೇಳು ॥
ಮುನಿಗಳ ಶೇಷಾನ್ನವನುಂಡು ಸುಖಿಯಹ । ವೆನುತೆಲ್ಲರನು ಕರೆಸಿದನು ॥ ೨೪ ॥
ಕರೆ ಜಿನಮತಿಯನು ಸುಖವೆಂಬ ಕಡಲಿನ । ಕರೆಯಲ್ತೆ ನಮ್ಮಯ ಪಂತಿ ॥
ಕರೆ ಸಿದ್ಧಮತಿಯನು ಮುನಿಪಾನೀಯಾನ್ನ ಶ । ರ್ಕರೆಯಲ್ತೆ ಸವಿ ನೋಡಲೆಂಬಾ ॥ ೨೫ ॥
ಕರೆಕರೆ ರತ್ನಮಾಲೆಯ ಮಣಿಮಾಲೆಯ । ಕರಕರೆ ಕಾಂತಿಮಾಲೆಯನು ॥
ಕರೆದ ಮೇಲವರಿತ್ತ ಬಾರಪರೆಮಗೆ । ಕರಕರೆಯೆನೆ ನಕ್ಕರೆಲ್ಲ ॥ ೨೬ ॥

ಸ್ವಾಮಿಗಾರೋಗಣೆಯಾದ ಬಳಿಕಲುಂಬ । ನೇಮವುಂಟೆಮಗದರಿಂದ ॥
ಸ್ವಾಮಿ ಭೋಜನಕೆ ಚಿತ್ತೈಸಬೇಕೆಂದೆಲ್ಲ । ಕೈಮುಗಿದರು ಭಕ್ತಿಯಿಂದ ॥ ೨೭ ॥

ಎಂದಿನ ಕ್ರಮವಿಂದು ಬೇಡಿ ನೀವೆಲ್ಲ ಸಾ । ವಂದುದ ಕೇಳಿ ನೀವೆಂದು ॥
ಒಂದಾಗಿ ಪಂತಿಯೊಳುಣಬೇಕು ಬನ್ನಿರೌ । ಎಂದು ಕರೆದನಬಲೆಯರ ॥ ೨೮ ॥
ಒಬ್ಬರ ಮೊಗವನೊಬ್ಬರು ನೋಡಿ ತಮ್ಮೊಳು । ಸಿಬ್ಬಿದಿಗೊಂಡು ಚಿಂತಿಪರು ॥
ಒಬ್ಬರ ಪರಿಣತಿಯೊಬ್ಬರಿಗಿಲ್ಲದೊ । ಬ್ಬೊಬ್ಬರಿಂತಾಡಿದರಾಗ ॥ ೨೯ ॥

ಅಕ್ಕಾಜಿ ಸ್ವಾಮಿಯ ನುಡಿಯ ನಾವಿಂದೊಮ್ಮೆ । ಮಿಕ್ಕರು ದೋಷವಿಲ್ಲಿನ್ನ ॥
ಚಿಕ್ಕಳ ನುಡಿಗೇಳು ಮತ್ತುಂಬವೆಂದಳು । ತಕ್ಕಳೊರ್ವಳಿಗೊರ್ವಳಲ್ಲಿ ॥ ೩೦ ॥
ಸ್ವಾಮಿ ಪಾಲಿಸುವುದಿಲ್ಲವೆ ಮುನಿಭುಕ್ತಿಯ । ನೇಮವನಕ್ಕಾ ನಾವೆಮ್ಮ ॥
ನೇಮವ ಬಿಡುವುದು ಮತವಲ್ಲವೆಂದೊಬ್ಬ । ಕೋಮಲೆ ನುಡಿದಳೊರ್ವಳಿಗೆ ॥ ೩೧ ॥
ಪುರುಷಗನ್ನವನಿತ್ತು ಶೇಷಾನ್ನವನುಂಬ । ತರುಣಿಯುವಳಿ ಸ್ವರ್ಗಸರಣಿ ॥
ಸರಿಪಙ್ತಿಯೊಳಗುಂಬ ಬಾಲೆ ತರುಣಿ ಕಾಡ । ಬೆರಣಿಯೆಂದೊರ್ವಳಾಡಿದಳು ॥ ೩೨ ॥
ತಾನು ಬೆರೆತುಕೊಂಡು ಪತಿಯು ಪಂತಿಯೊಳುಂಬ । ಳಾ ನಾರಿ ದುರುಳೆ ತನ್ನರಸ ॥
ತಾನೆ ಕರೆದರುಂಡರೇನೆಂದು ಮತ್ತೊರ್ವ । ಮಾನಿನಿ ಕಿವಿಯೊಳಾಡಿದಳು ॥ ೩೩ ॥
ತಂಗಿ ಸ್ವಾಮಿಗೆ ವೇಳೆ ಮೀರಿತಂತಾಗಿಯೆ । ಹೆಂಗಳ ಮೇಲರ್ತಿ ತನಗೆ ॥
ಹೆಂಗಳು ಕೇಳ್ವುದಿಲ್ಲೆಂತುಟೆಂದಿರ್ವರು । ಹೆಂಗಳೇಕಾಂತವಾಡಿದರು ॥ ೩೪ ॥
ಎಂದಿನಂತೋಲಗಗೊಟ್ಟು ನುಡಿದು ಹೊತ್ತು । ಸಂದರು ಸಲುವುದೆಮ್ಮರಸ ॥
ನಿಂದೆಷ್ಟು ಹೊತ್ತು ಬೋಧಿಸುವನಿವರನೆಂದು । ನೊಂದಳೊರ್ವಳು ಮನಸಿನೊಳು ॥ ೩೫ ॥
ಪತಿಗುತ್ತರವ ಕೊಡಬಾರದು ಕೈಕೊಂಡ । ವ್ರತವ ಕೆಡಿಸಬಾರದಿದಕೆ ॥
ಗತಿಯಾವುದತಿವೇಳೆಯಾಯ್ತೆಂದು ಕೆಲಬರು । ಮತಿವಂತೆಯರು ಚಿಂತಿಸಿದರು ॥ ೩೬ ॥
ಏಕಾಂತ ಕೆಲರೊಳು ಯೋಚನೆ ಕೆಲರೊಳು । ಮೂಕತೆ ಕೆಲರೊಳೊಂದೆರಡು ॥
ವಾಕು ಕೆಲರೊಳಿರೆ ಮನದೊಳಗರಿದಾ । ಭೂಕಾಂತ ನುಡಿದನಿಂತೆಂದು ॥ ೩೭ ॥

ಬನ್ನಿರೌ ನಿಮಗೆ ವ್ರತವ ಕೊಟ್ಟ ಗುರುವಾರು । ನನ್ನ ಕೇಳದೆ ವ್ರತವುಂಟೆ ॥
ನನ್ನ ಕೇಳದೆ ಕೊಂಡರುರೆ ಕೇಳಿರದಕೇನು । ನನ್ನಾಣೆ ಸತ್ಯವೊ ಸಟೆಯೊ ॥ ೩೮ ॥
ಗುರುಸಾಕ್ಷಿ ದೇವಸಾಕ್ಷಿಕವಾಗಿ ನೇಮವ । ಧರಿಸಿತಿಲ್ಲರಸ ನಿನ್ನಾಣೆ ॥
ಸರಸಕೊಂದೇಳೆಂಟು ದಿನ ನಡಿಸಿದೆವದು । ಬರುತಿರ್ದುದೆಮಗರ್ತಿಯಾಗಿ ॥ ೩೯ ॥
ಆಗಲಿ ಗುರು ಕೊಡದರೆ ಮಾಣಲದಕೇನು । ಶ್ರೀಗುರುವಿನ್ನೊಬ್ಬನುಂಟು ॥
ತೂಗಿ ನಿಮ್ಮಾತ್ಮಸಾಕ್ಷಿಯೊಳೇನು ವ್ರತವೆಂದು । ಯೋಗಿಸಿದರೆ ಸತಿಯರಿರಾ ॥ ೪೦ ॥
ಸತಿಯರು ನಾವೇನು ಬಲ್ಲೆವು ಹಂಸ ಪ । ದ್ಧತಿಯ ದೇವರೆ ಬಲ್ಲಿರದನು ॥
ಪತಿಯ ಶೇಷಾನ್ನ ಲೇಸೆಂದು ನಡಿಸಿದೆವು । ವ್ರತವ ಪಾಲಿಸುವರಂದದೊಳು ॥ ೪೧ ॥

ಗುರುಕೊಟ್ಟುದಿಲ್ಲ ನೀವಾದರು ವ್ರತವೆಂದು । ಸ್ಮರಿಸಿತಿಲ್ಲರ್ತಿಯೊಳಾದ ॥
ಪರಿಣತಿಗೇತಕೆ ವ್ರತವ್ರತವೆಂದು ಜೋ । ಕರಿಸಿಕೊಂಬಿರಿ ಬನ್ನಿರೆಂದಾ ॥ ೪೨ ॥

ನನ್ನರ್ತಿಗಾಗಿ ನಿಮ್ಮಯ ವ್ರತಶೀಲವ । ಭಿನ್ನವ ಮಾಡುವನಲ್ಲ ॥
ನನ್ನಯ್ಯನಡಿದಳಿರುಗಳಾಣೆ ದೋಷವಿ । ಲ್ಲಿನ್ನೆಲ್ಲ ಬನ್ನಿ ನೀವೆಂದಾ ॥ ೪೩ ॥

ತರುಣಿಗಳಿರ ಬನ್ನಿ ತಪಸಿಗಳಗ್ರಗ । ಣ್ಯರ ಪಾನಿಯಾಮೃತಮುಂಬಾ ॥
ಬರಲೊಲ್ಲದೆಮ್ಮನೇತಕೆ ನೋಯಿಸುವಿರಿ ನಿ । ಷ್ಕರುಣಿಯರಿರ ಬನ್ನಿರೆಂದಾ ॥ ೪೪ ॥

ಗಂಡನ ನುಡಿಗೇಳ್ದರಹುದೆಂದರೊಡಬಟ್ಟು । ಗಂಡ ಪೇಳ್ದಂತೆ ಕೇಳಿದರು ॥
ಪೆಂಡಿರು ಕೇಳ್ವುದೇನವನ ವಾಕ್ಯವನು ಷ । ಟ್ಖಂಡದೊಳಾರು ಮೀರುವರು ॥ ೪೫ ॥

ಹೊಂಗಿಂಡಿಯುದಕವ ತನ್ನ ಕೈವಿಡಿದೆತ್ತಿ । ಹೆಂಗಳ ಕರೆದು ಕೈವಿಡಿದು ॥
ಅಂಗಾಲ ತೊಳೆದೊಳಗೈತನ್ನಿರೆಂದೀವ । ನಂಗಜರೂಪನರ್ತಿಯೊಳು ॥ ೪೬ ॥

ಮಡದಿಯೊರ್ವಳಿಗೆ ಗಿಂಡಿಯ ತನ್ನ ಕೈಮುಟ್ಟಿ । ಕೊಡುವಾಗ ಜಗುಳಿತಾ ಗಿಂಡಿ ॥
ಒಡನೊರ್ವಳಾಗಳೆ ಜಿನ ಸಿದ್ಧ ಸಿದ್ಧ ಯೆಂ । ದೆಡೆಯೊಳಾಂತಳು ರಾಯ ಮೆಚ್ಚಿ ॥ ೪೭ ॥

ಬಾಡಿತವಳ ಮೊಗ ಬಳಲಿತವಳ ನೋಟ । ನೋಡವಳಧರವಾರಿದುದು ॥
ಬೇಡವೆಂದರೆ ಕೇಳಿರಕಟ ನೀವೇ ಜೋಲಿ । ಮಾಡಿದಿರೆನ್ನಲ್ಲಿ ತಪ್ಪೆ ॥ ೪೮ ॥

ಈಕೆ ಕಂಭವ ನೆಮ್ಮಿ ನಿಂದಳಯ್ಯಯ್ಯೊ ನೋ । ಡಾಕೆ ಗೋಡೆಯನೊರಗಿದಳು ॥
ಹಾ ಕಷ್ಟ ಭರತನ ಭಾಗ್ಯವೇತರದೆಂಬ । ನಾ ಕಾಂತೆಯರ ಚಿತ್ತ ಕರಗೆ ॥ ೪೯ ॥

ನಲವೇರಿ ನಗುತ ದೇವರ ವಾಕ್ಯವೆಲ್ಲವು । ಸಲೆ ಸತ್ಯವಿವು ಸತ್ಯವಲ್ಲ ॥
ನಿಲುವಾಗಳೊಮ್ಮೆ ನೆಮ್ಮಿದರೇನು ನಮ್ಮಾಸ್ಯ । ಕಲೆಗುಂದಿತೇಯೆಂಬರೊಡನೆ ॥ ೫೦ ॥

ಹುಸಿದವರಿಗೆ ಶಿಕ್ಷೆಮಾಡುವರಸುಗಳೆ । ಹುಸಿದರೇನೆನಬಹುದೆಂದು ॥
ಹುಸಿನಗೆ ನಗುತ ಗಂಡನ ಕೂಡೆ ನುಡಿದರಾ । ಹುಸಿನಡುವಿನ ಸೊಬಗೆಯರು ॥ ೫೧ ॥

ತಲೆಯ ತಡಹುವನು ಗಲ್ಲವ ಪಿಡಿದೊಯ್ಯ ॥ ನಲುಗುತ ನಗುತ ನೋಡುವನು ॥
ಬಳಲಿದಿರೆಲ್ಲರು ಹೊತ್ತಾಯ್ತು ಬನ್ನಿರೆಂ । ದೊಳಗೃಹಕೊಡನೆ ನಡೆದನು ॥ ೫೨ ॥

ಮಂಗಳಮೃದುತರಾಸನದಲ್ಲಿ ಚೌಕ ಸು । ಧಾಂಗವಾಗಿರೆ ನೃಪ ಕುಳಿತಾ ॥
ಜಂಗಮಲತೆಗಳಂದದಿ ಬಂದು ಕುಳಿತರಾ । ಹೆಂಗಳೆಲ್ಲರು ಪಂತಿಯಾಗಿ ॥ ೫೩ ॥

ಕಾಂತೆಯರೆಲ್ಲ ಸಾಲಾಗಿ ಕುಳ್ಳಿರಲು ಭೂ । ಕಾಂತನವರ ನಟ್ಟನಡುವೆ ॥
ಎಂತೆಸೆದನೊ ಲತೆಗಳ ಪಂತಿಯೊಳಗೆ ವ । ಸಂತರಾಜೇಂದ್ರನಿಪ್ಪಂತೆ ॥ ೫೪ ॥

ಸ್ತ್ರೀಯರು ತನ್ನೆಡಬಲದಲ್ಲಿ ಸಾಲಾಗಿ । ವೊಯ್ಯಾರದಿಂದ ಕುಳ್ಳಿರಲು ॥
ರಾಯನಿದ್ದನು ರತ್ನಹಾರದ ನಡುವಣ । ನಾಯಕರತ್ನದಂದದೊಳು ॥ ೫೫ ॥

ಹಲಬರು ರಾಯನ ಪಂತಿಯೊಳೂಟಕೆ । ಕುಳಿತರು ಮತ್ತವರಲ್ಲಿ ॥
ಕೆಲಬರಾರೋಗಣೆಗೆಡೆಮಾಡಲನುವಾಗಿ । ಸುಳಿದಾಡುತಿರ್ದರರ್ತಿಯೊಳು ॥ ೫೬ ॥

ಕಾಂಚನದಿಂಪ ರತ್ನಗಳಿಂದ ಬೆಳ್ಳಿಯಿಂ । ಸಂಚಿಸಿದುಪಕರಣಗಳಾ ॥
ಚಂಚಲಾಕ್ಷಿಯರಾಂತು ಸುಳಿದರಾಗತ್ತಿತ್ತ । ಮಿಂಚಿನ ಲತೆಗಳೆಂಬಂತೆ ॥ ೫೭ ॥

ತಳಿಗೆ ತಂಬುಗೆ ಗಿಂಡಿ ಹರಿವಾಣ ಪಡಿಗ ಬ । ಟ್ಟಲು ಮೊದಲಾಗಿ ಭೋಜನಕೆ ॥
ಸಲುವುಪಕರಣವನಲ್ಲಲ್ಲಿಗೆಲ್ಲಕೆ । ಚಳಚಳನನುಗೊಳಿಸಿದರು ॥ ೫೮ ॥

ದೊಡ್ಡಗುಣವನೊಂದನೇನೆಂಬೆ ಪತಿಯು ಮೈ । ಯೊಡ್ಡಿನೊಳುಣಕುಳಿತಾಗ ॥
ಅಡ್ಡಣಿಗೆಯನೊಲ್ಲರವರೇನು ಲೋಕದ । ಹೆಡ್ಡಹೆಂಗಳೆ ಪೇಳುವಾಗ ॥ ೫೯ ॥

ಬೆಳಗಿದಡ್ಡಣಿಗೆಬಟ್ಟಲುಗಿಂಡಿಹರಿವಾಣ । ಗಳ ರನ್ನಚಿನ್ನಮಾಟಗಳಾ ॥
ಒಳಗಣಿಂ ತಂದುತಂದಿಡುತಿರ್ದರರಸಗೆ । ಬೆಳಗ ಹೊತ್ತಡುಕುವಂದದೊಳು ॥ ೬೦ ॥

ಎಡದ ಭಾಗದಿ ಗಿಂಡಿ ಬಲದ ಭಾಗದಿ ಹೊನ್ನ । ಪಡಿಗ ಮುಂದಡ್ಡಣಿಗೆಯೊಳು ॥
ಎಡೆಗೊಂಡ ಹರಿವಾಣವೆಸೆಯೆ ಕುಳಿತುದೊಂದು । ಕಡೆಕಟ್ಟನ್ನೇನೆಂಬೆನವನ ॥ ೬೧ ॥

ಲಾವಣ್ಯ ಧಗಧಗಿಸುವ ನರಪತಿಯು ಮುಂ । ದೋವಿಟ್ಟ ಹೊಂಬರಿವಾಣ ॥
ಭಾವಿಸಲೊಪ್ಪಿತು ರವಿಯ ಸನ್ನಿಧಿಯ ಹೊಂ । ದಾವರೆಯಂತೆ ಚೆಲ್ವಿನೊಳು ॥ ೬೨ ॥

ಬಟ್ಟಹೊಂಬರಿವಾಣದಂಚಿನೊಳಗೆ ಸಾಲು । ಬಟ್ಟಲು ಕೆಲವು ಬಟ್ಟಲೊಳು ॥
ಇಟ್ಟ ಮಾಣಿಕದ ಸೋಟಗೆಗಳೆಸೆಯೆ ತಿಟ್ಟ । ವಟ್ಟ ತಿಂತಿಣಿಯೊಳೊಪ್ಪಿದನು ॥ ೬೩ ॥

ಒಲಿದುಂಬ ಬಟ್ಟಲು ಹರಿವಾಣದೊಳಗೆ ಕೈ । ಯ್ಯಲುಬುವ ಬಟ್ಟಲು ಹೊರಗೆ ॥
ಕೆಲದಲ್ಲಿ ಕರತಳದಂಟಕೀಳುವ ದಾರೆ । ಸಲೆಸಂದ ಗಿಣ್ಣಿಲೊಪ್ಪಿದುದು ॥ ೬೪ ॥

ತನ್ನೆಡಬಲದೊಳಗಿದಿರ ಸಾಲಿನೊಳಿಪ್ಪ । ಚೆನ್ನೆಯರೆಲ್ಲ ತನ್ನಂತೆ ॥
ಬಿನ್ನಾಣಬೆಡಗುಚಮತ್ಕಾರವೆಸೆಯಲು । ಸನ್ನದ್ಧವಡೆದಿದ್ದರಾಗ ॥ ೬೫ ॥

ಆರೋಗಣೆಗೆ ಕುಳಿತಾ ರಾಯನೊತ್ತಿನ । ನಾರಿಯರೆಸೆದರೆಂತೆನಲು ॥
ಸಾರಾಮೃತವನುಂಬ ಚಂದ್ರನ ಪಂತಿಯ । ತಾರಾಂಗನೆಯರೆಂಬಂತೆ ॥ ೬೬ ॥

ದೇವಾನ್ನವನುಣಕುಳಿತ ರಾಜೇಂದ್ರನ । ದೇವಿಯರೆಸೆದರೆಂತೆನಲು ॥
ದೇವಾಮೃತವನುಂಬಮರೇಂದ್ರನೊತ್ತಿನ । ದೇವಾಂಗನೆಯರೆಂಬಂತೆ ॥ ೬೭ ॥

ಮೋಹನಕಾರನ ಪಂತಿಯೂಟಕೆ ಕುಳಿ । ತಾ ಹೆಂಗಳೆಸೆದರೆಂತೆನಲು ॥
ಊಹಿಸಿ ಕಾಮದೇವನ ಪಂತಿಯೂಟದ । ಮೋಹನದೇವಿಯರಂತೆ ॥ ೬೮ ॥

ತಂದೆಡೆಮಾಡುತಿದ್ದರು ವನಿತೆಯರೊಲ । ವಿಂದ ದಿವ್ಯಾನ್ನಪಾನಗಳಾ ॥
ಅಂದುಗೆಗಳ ಗೆಜ್ಜೆಗಳ ದನಿ ಝುಲಿಝುಲಿ । ರೆಂದೆನೆ ಪಂತಿಪಂತಿಯೊಳು ॥ ೬೯ ॥

ಮೊಲೆಗಟ್ಟು ಬೆನ್ನ ಮೇಲಲೆವ ಕೇಶದ ಗಂಟು । ಸೆಳೆನಡುಸುತ್ತಿದ ಸೆರಗು ॥
ಬಲಗೆಯ್ಯ ಹೊನ್ನಸಟ್ಟುಗ ವಾಮಕರದ ಮಂ । ಗಲಭಾಂಡವೆಸೆಯೆ ಸುಳಿದರು ॥ ೭೦ ॥

ತೊಟ್ಟ ರವಕೆ ಜಡೆ ಕಾಸೆಯಂದದೊಳಿಳಿ । ವಿಟ್ಟು ಸಿಕ್ಕಿದ ಮೇಲುಸೆರಗು ॥
ಬಟ್ಟವೆಂಗಳು ಕೆಲಬರು ಸುಳಿದರು ಹೊನ್ನ । ಚಟ್ಟಿ ಸಟ್ಟುಗಗಳನಾಂತು ॥ ೭೧ ॥

ಸುರಲೋಕದಮೃತವ ತಂದೆಡೆಮಾಡುವ । ಸುರಸುದತಿಯರೋಯೆಂಬಂತೆ ॥
ಚರಣದಂದುಗೆ ಝುಣಝುಣರೆನೆ ನಡೆತಂದು । ಭರತೇಶಗುಣಬಡಿಸಿದರು ॥ ೭೨ ॥

ಅಮೃತಾನ್ನ ಭೋಜ್ಯಾನ್ನ ದೇವಾನ್ನ ದಿವ್ಯಾನ್ನ । ಅಮೃತರಸಾಯನವೆಂಬ ॥
ಕ್ರಮದ ಪಂಚಾನ್ನವ ಪಂಚಾಮೃತಗಳ । ಕ್ರಮವರಿದುಣಬಡಿಸಿದರು ॥ ೭೩ ॥

ಶಾಕ ಶೀಕರಣೆಯು ಗಾಡ ಪೋಡನೆಯು ಸು । ಪಾಕವೊಗ್ಗರಣೆಪಾಯಸವಾ ॥
ಈಕೆಗಾಕೆಗೆ ಸ್ವಾಮಿಗವಳಿಗಿವಳಿಗೆಂದು । ಜೋಕೆವಿಡಿದು ಬಡಿಸಿದರು ॥ ೭೪ ॥

ಹೊಂಗೆಲಸದ ಭಾಜನದೊಳಿದ್ದಮೃತಸಾ । ರಂಗಳ ಸಕಲಭಕ್ಷ್ಯಗಳಾ ॥
ತಂಗಿಗಕ್ಕಗೆ ಸ್ವಾಮಿಗಕ್ಕಾಜಿಗೆಂದು ಬೆ । ಡಂಗಿಯರುಣಬಡಿಸಿದರು ॥ ೭೫ ॥

ಕಾಮಧೇನುವಿನ ಪಾಲೊಳು ಪಾಕವಾದಭಿ । ರಾಮದೊಳೊಪ್ಪುವನ್ನವನು ॥
ಸ್ವಾಮಿಗೆ ಸ್ವಾಮಿಯೂಳಿಗದ ಪೆಂಗಳಿಗೆಂದು । ಆಮೋದ ಮಿಗೆ ಬಡಿಸಿದರು ॥ ೭೬ ॥

ಸಡಗರಗೊಂಡು ಸಂತಸಗೊಂಡು ಸ್ವೈರಣೆ । ಯೆಡೆಗೊಂಡು ತಾವು ತಮ್ಮೊಳಗೆ ॥
ಎಡೆಮಾಡುತಿದ್ದರು ಬಡವನೊಂದ್ಯೆಸಿರಿ । ವಡೆದು ಹಬ್ಬವ ಮಾಡುವಂತೆ ॥ ೭೭ ॥

ಇವಳು ಗಂಡನ ಪಂತಿಯೊಳು ಕುಳಿತುಂಬುವ । ಳಿವಳಿಗಾನಿಕ್ಕುವಳೆಂಬಾ ॥
ಸವತಿಮತ್ಸರವಿಲ್ಲ ತಾವೆಂದರವರೆಂಬ । ಸುವಿನಯ ಮಿಗೆ ಬಡಿಸಿದರು ॥ ೭೮ ॥

ತೊತ್ತಿರಂದದೊಳಾನು ಬಡಿಸುವಳಿವಳಾಣ್ಮ । ನೊತ್ತಿನೊಳೊಡತಿಯಂದದೊಳು ॥
ತುತ್ತನಿಡುವಳೆಂಬ ಹುರುಡಿಲ್ಲದಿಕ್ಕಿದ । ರುತ್ತಮಸತಿಯರರ್ತಿಯೊಳು ॥ ೭೯ ॥

ಸವಿವ ವಸ್ತುವನುಂಬ ವಸ್ತುವ ಕುಡಿವ ನಂ । ಜುವ ಸುರಿವಮಳವಸ್ತುಗಳ ॥
ಅವನೀಶಗರಸಿಯರಿಗೆ ಬಡಿಸಿದರು ಗಾ । ರವವಾಯ್ತು ಪರಿಪೂರ್ಣವಾಯ್ತು ॥ ೮೦ ॥

ಸಾರವಸ್ತುಗಳ ತಂದಗಲ್ಲಿಲ್ಲ ತುಂಬುವಂ । ತಾರಯ್ದು ಬಡಿಸಿದ ಮೇಲೆ ॥
ಆ ರತಿಪ್ರತಿಯಲ್ಲವೆಂಬ ಪೆಂಗಳು ಪತಿ । ಗಾರತಿಯೆತ್ತಿದರೊಸೆದು ॥ ೮೧ ॥

ಕುಸುಮಾಂಜಲಿಮಾಡಿ ಕೈಮುಗಿದೊಡನೊಂದು । ದೆಸೆಗೆ ಸಾರಿದರಬಲೆಯರು ॥
ನಸುನಕ್ಕನಾ ರಾಯನಾ ಸತಿಯರದೊಂದು । ಹೊಸಬಗೆ ಭಕ್ತಿಯ ಕಂಡು ॥ ೮೨ ॥

ಕಡುಕುಚ್ಚಿಮುತ್ತಿನ ಬೊಟ್ಟು ಯಜ್ಞೋಪವೀತ ಪೊ । ನ್ನುಡಿದಾರ ದೋತ್ರವೆಂಬಿಷ್ಟು ॥
ಗಡಣಿಸಿ ಮೆಯ್ಯಮೇಲಿದ್ದುವು ಮತ್ತೊಂದು । ತೊಡಕಿಲ್ಲದೊಡನೊಪ್ಪವಡೆದಾ ॥ ೮೩ ॥

ಹಸ್ತಪ್ರಕ್ಷಾಲನ ಕೈಗಟ್ಟು ಮೊದಲಾದ । ಪ್ರಸ್ತುತ ಕ್ರಿಯೆಗಳ ಮಾಡಿ ॥
ವಿಸ್ತೀರ್ಣತಲ್ಪದ ಮೇಲೆ ಬಲಿದನು ಪ್ರ । ಶಸ್ತ ಪಲ್ಯಂಕಾಸನವ ॥ ೮೪ ॥

ಎಡದ ಗುಲ್ಫದ ಮೇಲೆ ಬಲದ ಗುಲ್ಫವನಿಟ್ಟು । ತೊಡೆ ಬೆಡಗೆಸೆಯೆ ಕುಳ್ಳಿರ್ದು ॥
ಎಡದ ಹಸ್ತದ ಮೇಲೆ ಬಲದ ಹಸ್ತವನು ಸಂ । ಘಡಿಸಿಟ್ಟನಂಘ್ರಿಯ ಮೇಲೆ ॥ ೮೫ ॥

ಶಾಂತಭಾವದೊಳು ಕಣ್ಮುಚ್ಚಿ ನೆನಹು ಲೋ । ಕಾಂತಕೆ ನಡಿಸಿ ಸಿದ್ಧರನು ॥
ಅಂತರಂಗಕೆ ತಂದು ಪೂಜಿಸಿ ಬೀಳ್ಕೊಟ್ಟು । ಕಂತುಸನ್ನಿಭನು ಕಣ್ದೆರೆದಾ ॥ ೮೬ ॥

ಕಂಗಳಿಂದನ್ನವ ನೋಡಿ ಜ್ಞಾನದೊಳಂತ । ರಂಗದೊಳಾತ್ಮನ ನೋಡಿ ॥
ತುಂಗಭಾವದೊಳನ್ನಪಾನವ ಹಂಸನಾ । ಥಂಗೆ ಸಮರ್ಪಣೆಗೈದಾ ॥ ೮೭ ॥

ಕನಕಭೃಂಗಾರದ ಜಲವನಂಗೈಯೊಳಾಂ । ತನಘಮಂತ್ರವನೊಲ್ದು ಜಪಿಸಿ ॥
ಜನಪನೀಂಟಿದನೆಲ್ಲ ಜಯಜಯವೆನಲು ಘೊಂ । ಕೆನೆ ಬಾಗಿಲೊಳು ಜಯಘಂಟೆ ॥ ೮೮ ॥

ಬಟ್ಟನಮೇಲೆಡಗೈಯೂರಿ ಬಲಗೈಯ್ಯ । ನಿಟ್ಟನು ಹರಿವಾಣದಲ್ಲಿ ॥
ಕೊಟ್ಟನು ತನುವಿಗೆ ಹಂಸನಾಥಗೆ ಮುನ್ನ । ಕೊಟ್ಟ ದಿವ್ಯಾನ್ನಪಾನಗಳಾ ॥ ೮೯ ॥

ಜ್ಞಾನಾನ್ನವನಾತ್ಮಗರ್ಪಿಸುತಿಹನನ್ನ । ಪಾನವ ಮೈಗೀವುತಿಹನು ॥
ಜ್ಞಾನಿಗಳಲ್ಲದೆ ಭರತೇಶನೆದೆಯ ಸಂ । ಧಾನವ ಬಲ್ಲವರಾರು ॥ ೯೦ ॥

ಭಕ್ಷ್ಯಸುಖವ ಮೈಗೆ ತೋರುವನಾತ್ಮಗೆ । ಮೋಕ್ಷಸುಖವ ತೋರುತಿಹನು ॥
ಮೋಕ್ಷಗಾಮಿಗಳಲ್ಲದವನಂತರಂಗಪ । ರೀಕ್ಷೆಯ ಬಲ್ಲವರಾರು ॥ ೯೧ ॥

ಆ ಸವಿಯನ್ನವ ಮೈಗಿತ್ತು ತನಗೆ ಪ । ದಾಸೇವೆಮಾಡೆನುತಿಹನು ॥
ಆಸನ್ನಭವ್ಯರಲ್ಲದೆ ನೃಪನಾತ್ಮವಿ । ಲಾಸವ ಬಲ್ಲವರಾರು ॥ ೯೨ ॥

ಒಗರುಪ್ಪುಸಿಹಿಕಹಿಹುಳಿಕಾರಗಳ ತೆಗೆ । ತೆಗೆದೀವುತಿಹನು ನಾಲಗೆಗೆ ॥
ದೃಗವಬೋಧನಶಕ್ತಿಸುಖವನಾತ್ಮಗೆ ಬಗೆ । ಬಗೆದೀವುತಿಹನು ಭಾಪದೊಳು ॥ ೯೩ ॥

ತಂಡುಲಾನ್ನವ ಕಣಿಕಾನ್ನವ ತನವಿಗೆ । ಪಿಂಡಪಿಂಡದೊಳೀವುತಿಹನು ॥
ಕಂಡೊಳಗೀವುತಿಹನು ಹಂಸನಾಥಗ । ಖಂಡಿತಬೋಧಪಿಂಡವನು ॥ ೯೪ ॥

ಹರಿವಾಣಬಟ್ಟಲುಗಳಿಗೆ ಬಾಯ್ದೆರೆದಾಗ । ಕರತಲಸಂಧಾನವಿಹುದು ॥
ಗುರುಹಂಸನಾಥಗೆ ಸಿದ್ಧಲೋಕಕೆ ಪೋಗಿ । ಬರುತಿಹುದೆವೆಯ ಸಂಧಾನಾ ॥ ೯೫ ॥

ಹಸಿವಿಲ್ಲದವನೊಬ್ಬ ಬಂಧುಗಳೊತ್ತಿ ಪ್ರಾ । ರ್ಥಿಸಲು ದಾಕ್ಷಿಣ್ಯಕುಂಬಂತೆ ॥
ಅಸಮಪುಣ್ಯೋದಯಸುಖವನುದಾಸೀನ । ರಸದೊಳುಂಡನು ಮೋಕ್ಷರಸಿಕಾ ॥ ೯೬ ॥

ದುಷ್ಟರಾಜನ ಮಾತನವನ ರಾಜ್ಯದೊಳಿರು । ವಷ್ಟು ದಿವಸ ಕೇಳ್ವರಂತೆ ॥
ಅಷ್ಟಕರ್ಮದೊಳು ತಾನಿರ್ದುದನರಿದಾತ್ಮ । ದೃಷ್ಟಿಯುಂಡನು ಕಾಲವರಿದು ॥ ೯೭ ॥

ಗಡಿಯ ದಾಂಟುವನೊಬ್ಬನನುಪಿನಾಳುಗಳ ತಾ । ನೊಡನೆ ಮನ್ನಿಸಿ ಪೋಗುವಂತೆ ॥
ಕಡೆಗಾತ್ಮಸಿದ್ಧಿಯ ಪಡೆವವನನ್ನವ । ಕೊಡುತಿದ್ದನಿಂದ್ರಿಯಗಳಿಗೆ ॥ ೯೮ ॥

ಕಲಸುವಬೆಡಗು ಕೈವಿಡಿವಕುಶಲ ಜಿಹ್ವೆ । ಗೊಲಿದು ತುತ್ತಿಡುವೊಂದು ಕೋಕೆ ॥
ಅಲುಗಿ ಸವಿವದೊಂದು ಗಂಭೀರವವನುಂಬ । ಚೆಲುವಿಕೆ ಕೋರೈಸುತಿಹುದು ॥ ೯೯ ॥

ಬೋನವನುಂಬಂಗವಡಿಗಡಿಗೊವ್ಮೊವ್ಮೆ । ಪಾನವಕೊಂಬುದೊಂದಂಗಾ ॥
ಆನಂದವಿಡಿದಿಷ್ಟು ವಿಶ್ರಮಿಸುವ ರೀವಿ । ತಾನೊಂದು ಗಮಕವಾಗಿಹುದು ॥ ೧೦೦ ॥

ತುಟಿಬಟ್ಟಲೊಂದಿ ರಸಾಯನಗಳ ಗುಟು । ಗುಟನೆ ತಾನೀಂಟುವ ಗಾಡಿ ॥
ಗಿಟಿ ಗಿರ್ರನೊಡನೆ ತೇಗುವ ಭಾವ ತುತ್ತ ಪ । ಲ್ಲಟಿಸಿಕೊಂಬಂದ ರಂಜಿಸಿತು ॥ ೧೦೧ ॥

ಅರಸನಾರೋಗಿಸುತಿದ್ದು ಕಿಕ್ಕಣ್ಣಿಂದ । ಅರಸಿಯರುಗಳ ನೋಡಿದನು ॥
ಕರವ ಹಿಡಿದುಕೊಂಡು ಸುಮ್ಮನೆ ಕುಳಿತಿದ್ದ । ಪರಿಗಂಡು ವಿಸ್ಮಯನಾದಾ ॥ ೧೦೨ ॥

ಏಕೆ ತುತ್ತಿಡರೆಂದು ಕೈಸನ್ನೆಯಿಂದವ । ಲೋಕಿಸಿದನು ನರನಾಥಾ ॥
ಆ ಕುಶಲೆಯರೆಡೆಮಾಡುವವರ ಕರೆ । ದೇಕಾಂತದೊಳು ಪೇಳ್ದರೊಂದಾ ॥ ೧೦೩ ॥

ಎಡೆಮಾಡುವಬಲೆಯರೆಯ್ತಂದು ರಾಯ ತು । ತ್ತಿಡುವನ್ನದೊಳಗೊಂದುತುತ್ತಾ ॥
ತುಡುಕಿ ತೆಗೆದುಕೊಂಡು ಪೋಗಿ ಪೆಂಗಳಿಗೆಲ್ಲ । ಯೆಡೆಮಾಡಿದರು ಹವಣರಿದು ॥ ೧೦೪ ॥

ಎಲ್ಲರು ತುತ್ತಿಟ್ಟರದಕೆ ರಾಯನು ತಲೆ । ಯಲ್ಲಾಡಿ ತಣಿದನೆದೆಯೊಳು ॥
ಅಲ್ಲವೆ ಮತ್ತೇನು ಪತಿಭಕ್ತಿ ಮನೆಮನೆ । ಗೆಲ್ಲಕೆ ಬಹುದೇ ಲೋಕದೊಳು ॥ ೧೦೫ ॥

ಪುರುಷನಿಧಾನನ ಶೇಷಾನ್ನ ತಾವುಂಬ । ಹರಿವಾಣಕೆಯ್ತರಲೊಡನೆ ॥
ಪುರುನಾಥನೇ ಬಲ್ಲನವರ ಮನಸಿನೊಂದು । ಹರುಷವನುಂಡರರ್ತಿಯೊಳು ॥ ೧೦೬ ॥

ಓರಡೆ ಮಾರಡೆಯರಿದೆಡೆಮಾಡುವ । ನಾರಿಯರೆಡೆಮಾಡುತಿರಲು ॥
ಭೂರಮಣನು ರಮಣಿಯರೆಲ್ಲರುಂಡರು । ಓರಂತೆ ತೃಪ್ತಿವಡೆದರು ॥ ೧೦೭ ॥

ಜೀವಬಲವ ದೇಹಬಲವ ಹೆಚ್ಚಿಸುವ ಸಂ । ಜೀವನರಸಪಿಂಡವೆನಿಪ ॥
ಮೂವತ್ತೆರಡು ತುತ್ತುಗಳಿಂದ ತಣಿದನು । ಭೂವರನಾ ಸಮಯದೊಳು ॥ ೧೦೮ ॥

ಅತಿರುಚಿನಿರ್ಮಲಮೃದುದಿವ್ಯಗಂಧಸಂ । ಯುತವೆನ್ನಿಪನ್ನಪಾನಗಳಾ ॥
ಹಿತವನರಿದು ಮಿತವಿಡಿದು ಸ್ವಲ್ಪವನುಂಡು । ಸತಿಯರು ತಣಿವನ್ನೈದಿದರು ॥ ೧೦೯ ॥

ಸಂತೋಷದಿಂದ ಸದಾತೃಪ್ತರವರಿಗ । ತ್ಯಂತಕ್ಷುಧಾಗ್ನಿಗಳಿಲ್ಲ ॥
ಕಾಂತನು ಕಾಂತೆಯರುರೆದಣಿದರು ದೀಪ । ಸಾಂತರವರಿದುಣಿಸಿನೊಳು ॥ ೧೧೦ ॥

ರಾಜ ಕೈದೊಳೆದನು ಸತಿಯರು ಕೈದೊಳೆ । ದೋಜೆಯಿಂದಿದಿರೊಳು ನಿಲಲು ॥
ಆ ಜನಪತಿಯೆಡೆಮಾಡಿದ ಸತಿಯರು । ಭೋಜಿಸಲೆಂದು ಸೂಚಿಸಿದಾ ॥ ೧೧೧ ॥

ನವಗಿನ್ನು ಭೋಜನಾಂತದ ಕ್ರಿಯೆ ಕಿರಿದುಂಟು ॥ ಅವರಿಗೆ ಬಡಿಸಿ ನೀವೆಂದು ॥
ಯುವತಿಯರಿಗೆ ಸನ್ನೆಮಾಡಿ ಕಣ್ಮುಚ್ಚಿ ಮಾ । ನವಪತಿ ಯೋಗದೊಳಿದ್ದಾ ॥ ೧೧೨ ॥

ಕುಳ್ಳಿರಿರಕ್ಕ ನೀವೆಲ್ಲ ಬಳಲ್ದಿರೆಂ । ದೊಳ್ಳಿತ ನುಡಿದು ಭಾವೆಯರು ॥
ಎಲ್ಲರಿಗುಣಬಡಿಸಿದರವರವರಂದ । ದಲ್ಲಿಯೆ ಸವಿದರನ್ನವನು ॥ ೧೧೩ ॥

ತಣಿದು ಕೈದೊಳೆದರು ಮೌನದೊಳೆಲ್ಲ ತಿಂ । ತಿಣಿಯಾಗಿ ನಿಂದರು ಮುಂದೆ ॥
ಢಣರೆಂಬ ಘಂಟೆಯ ದನಿ ನಿಂದುದರಸನಾ । ಕ್ಷಣ ತನ್ನ ಮನದೊಳರಿದನು ॥ ೧೧೪ ॥

ಸ್ಮರಿಸಿ ಸಿದ್ಧಾಂತಮಂತ್ರವನು ಚಿದಂಬರ । ಪುರುಷನ ನೋಡಿ ಬೀಳ್ಕೊಂಡು ॥
ಭರತೇಶ ಕಣ್ದೆರೆದೆದ್ದನು ಜಿನಸಿದ್ಧ । ಶರಣೆಂದು ಪರಮಲೀಲೆಯೊಳು ॥ ೧೧೫ ॥

ಹಚ್ಚಡವನು ಹೊದೆವುತ ಹಾವುಗೆಯ ಮೆಟ್ಟಿ । ಸಚ್ಚಿದಾನಂದ ರೂಪವನು ॥
ಮೆಚ್ಚಿ ಭಾವಿಸುತ ಬಂದನು ಚಂದ್ರಶಾಲೆಗೆ । ಹೆಚ್ಚುಕುಂದಿಲ್ಲದ ಚಂದ್ರಾ ॥ ೧೧೬ ॥

ತೂಗುಮಂಚದ ಮೇಲೆ ಪೊರಗುಮೂಡೆಗೆ ವಾಮ । ಭಾಗವನಿಟ್ಟು ಕುಳಿತನು ॥
ಆಗಳೆ ಬಂದರು ಥುಳಥುಳನಬಲೆಯ । ರಾ ಗಾಡಿಕಾರನಿದ್ದೆಡೆಗೆ ॥ ೧೧೭ ॥

ಪರಿಮಳದೊಡೆವುತ ಪನ್ನೀರಚಿಮ್ಮುತ । ತಿರುಹುತ ಬೀಸಣಿಗೆಗಳ ॥
ಚರಣವನೊತ್ತುತ ವೀಳೆಯಗೊಡುತ ಸೌಂ । ದರಿಯರಿದ್ದರು ಬಳಸಿನೊಳು ॥ ೧೧೮ ॥

ನಿಂದೋಲಗ ಸಾಕು ಕುಳ್ಳಿರಿಯೆಂದೊಲ । ವಿಂದವನೀಶ ನುಡಿದನು ॥
ಮಂದಗಮನೆಯರು ಮೃದುತಲ್ಪದೊಳಗೋಜೆ । ಯಿಂದೆಲ್ಲರೊಲ್ದು ಕುಳಿತರು ॥ ೧೧೯ ॥

ವಾರಿಜಾಕ್ಷಿಯರೊಳು ಸರಸಸಲ್ಲಾಪ ಗಂ । ಭೀರಪ್ರಸಂಗಕೇಳಿಯೊಳು ॥
ಆ ರಾಜಯೋಗೀಂದ್ರನಿರುತಿದ್ದನಿಲ್ಲಿಗೆ । **ಆರೋಗಣೆಯ ಸುಸಂಧಿ** ॥ ೧೨೦ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೨೧ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೨೨ ॥

ಬರೆಯಬಾರದ ತಿದ್ದಬಾರದ ಕಡೆದರೆ । ದೊರೆಯಬಾರದ ರೂಪಿನಭವಾ ॥
ಬರೆದು *ಬಚ್ಚಣಿಸಿದಂತೆನ್ನೆದೆಯೊಳಗಿರು । ಗುರುವೆ ಚಿದಂಬರಪುರುಷಾ ॥ ೧೨೩ ॥

---

*ಬಚ್ಚಿಟ್ಟಂತೆ ನನ್ನೆದೆ

---

ಆರೋಗಣೆಸಂಧಿ ಸಂಪೂರ್ಣಂ

# ಉಪ್ಪರಿಗೆಸಂಧಿ.

ಕಡೆಯಿಲ್ಲದಮೃತ ಸಂಪದವ ನಿನ್ನೊಳಗಿಟ್ಟು । ಬಡವನಂತಿಳಿಗೆ ಕಾಣಿಸುವ ॥
ಬೆಡಗಿನ ಸಿದ್ಧ ಸನ್ಮತಿದೋರು ಭವ್ಯಾತ್ಮ । ರೊಡೆಯ ನಿರಂಜನಸಿದ್ಧಾ ॥ ೧ ॥
ವುತ್ತೊಂದು ದಿನದುದಯದೊಳೆದ್ದು ಜಿನಸಿದ್ಧ । ರುತ್ತಮಾರಾಧನೆಗೈದು ॥
ಚಿತ್ತಜರೂಪನುಪ್ಪರಿಗೆಯೊಳೋಲಗ । ವಿತ್ತನದೇನ ಬಣ್ಣಿಪೆನು ॥ ॥ ೨ ॥
ಕುಂದಣದುಪ್ಪರಿಗೆಯ ಮೇಲೆ ನವರತ್ನ । ದಿಂದಾದ ಮಂಟಪದಲ್ಲಿ ॥
ಪೊಂದಾವರೆಯಂತೆ ಹೊಳೆವ ಗದ್ದುಗೆಯಲ್ಲಿ । ಬಂದು ಕುಳಿತನು ರಾಜೇಂದ್ರ ॥ ೩ ॥
ಬೆಂಗಡೆಗಿಟ್ಟ ಮಲಗ ನೆಮ್ಮಿ ಹೊದೆದ ದೇ । ವಾಂಗ ಯೋಗವಟ್ಟೆವೊಲು ॥
ಬೆಂಗೆ ತೊಡಿಗೆ ಯೋಗಬಂಧವ ಬಲಿದು ಬೆ । ಡಂಗಿನೊಳೋಲಗವಾದಾ ॥ ೪ ॥
ತನುಕಾಂತಿ ಭೂಷಣಕಾಂತಿಯಾಮಂಟಪ । ದನುಪಮಕಾಂತಿ ಮೇಳೈಸೆ ॥
ಜನಪತಿ ತಾನೊಬ್ಬ ದಿನಪತಿಯಂತಿರ್ದ । ದಿನಪತಿಯುದಯಕಾಲದೊಳು ॥ ೫ ॥
ಕಾಳಂಜಿ ಹಡಪ ಚಾಮರ ಗಿಂಡಿ ಮೊದಲಾದ । ಊಳಿಗದಂಬುಜಾಕ್ಷಿಯರು ॥
ಸಾಲಭಂಜಿಕೆಗಳಂತೆಡಬಲದಲ್ಲಿ ನಿಂ । ದೋಲೈಸುತಿದ್ದರೋಜೆಯೊಳು ॥ ೬ ॥
ವೀಣೆ ದಂಡಿಗೆ ಸ್ವರಮಂಡಲ ಕಿನ್ನರಿ । ವೇಣು ಸಂಪುಟವ ಹೊತ್ತಗೆಯಾ ॥
ಪಾಣಿಯೊಳಾಂತು ಬಂದರಸಗೆರಗಿದರು । ಗಾಣಕಾರ್ತಿಯರು ಗಾಡಿಯೊಳು ॥ ೭ ॥
ಸಾರು ತೊಲಗು ಬರಹೇಳಿವರವರನೆಂ । ದಾ ರಾಯ ಕೇಳೆ ನುಡಿವುತ ॥
ಮೇರುಸೌಧವನೇರಿ ಕೈಮುಗಿದರು ವೇತ್ರ । ಧಾರಿಣಿಯರು ಧರಣಿಪಗೆ ॥ ೮ ॥
ಮಂಡಿತಾಲಂಕಾರ ಕಾವ್ಯವ ರಾಯನ । ಪೆಂಡಿರಿಗೋದಿಸಿದವಳು ॥
ಪಂಡಿತೆಯೆಂದೆಂಬ ದಾದಿ ಬಂದರಸನ । ಕಂಡು ಕೈಮುಗಿದಳರ್ತಿಯೊಳು ॥ ೯ ॥
ರಾಣಿಯರೆಲ್ಲ ಸಿಂಗರಿಸಿ ಲೀಲೆಯೊಳು ಕೈ । ಗಾಣಿಕೆಗಳ ಕೈವಿಡಿದು ॥
ಪ್ರಾಣನಾಥನ ಕಾಣಲುಪ್ಪರಿಗೆಯನು ಬಿ । ನ್ನಾಣದಿಂದಡರಿದರಾಗ ॥ ೧೦ ॥
ಮದನನರ್ತಿಗೆ ಮೇರುಗಿರಿಯನೇರಲು ತನ್ನ । ಸುದತಿಯರರಸಿ ಬಹಂತೆ ॥
ಚದುರೆಯರೇರುತಿದ್ದರು ಮೇರುಸೌಧನಾ । ಮದ ಹಿರಿದುಪ್ಪರಿಗೆಯನು ॥ ೧೧ ॥
ನೋಡಿ ಬಾ ತಂಗಿಯೆಚ್ಚರಿಕೆಯಕ್ಕಾಜಿ ಕೈ । ನೀಡಕ್ಕಕೋ ಹಿಡಿ ತಾಯಿ ॥
ಓಡದಿರಕ್ಕಾ ಬಾ ಬಾ ತಂಗಿಯೆಂದು ಮಾ । ತಾಡುತೇರಿದರೊಲವಿನೊಳು ॥ ೧೨ ॥
ಹರಿವುತಿದ್ದಪಳಿಗೆ ಹರಿಹರಿ ಮುಂದೆ ನಿ । ನ್ನರಸನೀವನು ದೊಡ್ಡಮೆಚ್ಚಾ ॥
ಬರಲಾರದವರೇನನಾಡರೆನುತ ತಾವು । ಸರಸವಾಡುತ ಪತ್ತುತಿಹರು ॥ ೧೩ ॥

ತವಕಿಸಿ ನಡೆನಡೆಯೆನುತಿಪ್ಪಳಿವಳೆಷ್ಟು । ದಿವಸದಿಂ ಕಾಣಳೊ ಪತಿಯಾ ॥
ನಿವಗೆ ಹಿತವ ಪೇಳ್ವುದೆನ್ನದು ತಪ್ಪು ಮಾ ! ನವ ಮಾಳ್ಪೆನೆನುತೇರುತಿಹಳು ॥ ೧೪ ॥

ಜವ್ವನ ಸೊಕ್ಕಿವರಿಗೆ ನೋಡು ಮಾಡವ । ಕವ್ವರೆಗೊಂಡೇರುತಹರೆ ॥
ಅವ್ವ ನೀವೇನನಾಡಿರಿ ಚಕ್ರವರ್ತಿಯು । ಸುವ್ವಲಾಲಿಯನಾಡಿಸುವರು ॥ ೧೫ ॥

ಬರಲಾರಳವಳಿಗೆ ಕೈಗೊಡಿರಿದೆಯಲ್ಲಿ । ಹಿರಿಯ ಹೊರೆಯ ಹೊತ್ತಳವಳು ॥
ಭರತಚಕ್ರೇಶಗೆ ಕೃಪೆಯಿಲ್ಲ ಮಾಡಕೆ । ಬರಹೇಳಬಹುದೆ ನೋಡಿವಳಾ ॥ ೧೬ ॥

ಸಾಕು ನಿಮ್ಮುಪಚಾರ ತಾವೇನು ಬರಲಾರ । ರಾಕೆಯಿಂ ಮುಂದೆ ನಡೆದರೆ ॥
ಈಕೆ ಗಂಡನ ಕಾಣಹರಿವಳೆಂದಪರೆಂಬ । ವಾಕಿಗಳು ಹಿಂದೆ ಬಹೆನು ॥ ೧೭ ॥

ಹೆಡತಲೆಹೊರೆಯೊಂದು ನಡುವಿನ ಕೆಳಗೆರ । ಡೊಡನೆದೆಯೊಳು ಹೊರೆಯೆರಡು ॥
ಪಿಡಿವೈದು ಹೊರೆಯಾಂತು ನಡೆವಿರಿ ಲೋಗರ । ನುಡಿವಿರಿ ಹೊರೆಗಿರಿಯೆಂದು ॥ ೧೮ ॥

ಮಾನವೀಕೆಗೆ ತನ್ನ ಗಂಡನಂತಾತ್ಮನ । ಜಾನಿಸುತ್ತೈದುವ ಪರಿಯೊ ॥
ಏನೆಂದು ತಿಳಿಯಬಾರದು ಹೇಳು ನಿನಗೆ ಸು । ಧ್ಯಾನವ ಕಲಿಸಿದನಾರೆ ॥ ೧೯ ॥

ಧ್ಯಾನಗೀನವ ನೀವು ನಿಮ್ಮರಸನು ಬಲ್ಲಿ । ರಾನೇನ ಬಲ್ಲೆನಾ ಗುಸುಟಾ ॥
ಈ ನಿಮ್ಮ ಸರಸಸಲ್ಲಾಪಕೆ ಮನದಲ್ಲಿ । ಆನಂದಿಸುತ ಬಂದೆನಕ್ಕಾ ॥ ೨೦ ॥

ಹಿಂದುಳಿದರೆ ಮುಂದೆ ನಡೆದರೆ ಸುಮ್ಮನೆ । ಬಂದರೆ ಮಾತನಾಡಿದರೆ ।
ಒಂದೊಂದ ಕಲ್ಪಿಸುವಿರಿ ನಿಮ್ಮನುರೆಗೆಲು । ವಂದವನಾ ಚಕ್ರಿ ಬಲ್ಲ ॥ ೨೧ ॥

ಬಿನದ ಸಾಕಿನ್ನು ಸುಮ್ಮನೆ ಬನ್ನಿ ಮಂಟಪ । ಸನಿಹವಾದುದು ಹೆಣ್ಣುಗಳಿರಾ ॥
ತನುವನೋಸರಿಸಿ ಕೊಂಡೋಜೆಯೊಳೈತನ್ನಿ । ರೆನುತೇರುತಿಹರಲ್ಲಿ ಕೆಲರು ॥ ೨೨ ॥

ನಡೆವಾಗ *ಸವತಿಯ ಕಾಲ ಮೇಲೊಂದು ಕ । ಪ್ಪಿಡಿದರೆ ಕಂಡೊರ್ವಳದನು ॥
ತೊಡೆದಳು ಕೈಮುಟ್ಟಿ ತಂಗಿ ಹಾಹಾಯೆಂದು । ಒಡನಾಕೆ ಝಂಕಿಸಿ †ಹೋಗೆ ॥ ೨೩ ॥

ಕಾಲಮೇಲದೆ ಕಪ್ಪು ತೊಡೆದುಕೊಳ್ಳೆಂದೊಲ್ದು । ಹೇಳದೆ ತೊಡೆವರೆ ತಂಗಿ ॥
ಓಲಗಮುಟ್ಟಲಾದುದು ಸುಮ್ಮನೈದಕ್ಕ । ಕೇಳಬಹುದು ನಮ್ಮ ಮಾತು ॥ ೨೪ ॥

ಇಂತು ವಿನೋದವಿನಯದಿಂದ ಭೂಪನ । ಕಾಂತೆಯರೆಲ್ಲರೋಜೆಯೊಳು ॥
ಅಂತರಿಸದೆ ನಡೆದರು ಮುಟ್ಟಮುಟ್ಟಲಿಂ । ಬಂತಾಗಲೋಲಗಸಾಲೆ ॥ ೨೫ ॥

ಅರಸಿಯರಾನಂದದಿಂದ ಮಾಡವನೇರಿ । ಬರುತಿಪ್ಪರೆಂಬ ವಾರ್ತೆಯನು ॥
ಚರಣದಂದುಗೆ ಕಟಿಸೂತ್ರದ ದನಿ ಮುಂದೆ । ಹರಿದು ಹೇಳಿದುವರಸನಿಗೆ ॥ ೨೬ ॥

*ಸತಿಯರ. † ನೋಡೆ.

ಮೆಲ್ಲನಗ್ರವನೇರಿ ಸೌಧಶಾಲೆಯ ಹೊಕ್ಕು । ನಲ್ಲನ ಕಂಡಿದಿರಿನೊಳು ॥
ಎಲ್ಲರು ನಿಂದು ಮುಂದೊಬ್ಬೊಬ್ಬರೊತ್ತ ಸಾ । ರ್ದಲ್ಲಿ ಕಂಡರು ಕಾಣ್ಕೆಯಿಕ್ಕಿ ॥ ೨೭ ॥

ಅಳುಕುತೋಸರಿಸಿಕೊಳ್ಳುತ ಮೆಲ್ಲನರಸನ । ಬಳಿಗೆ ನಡೆದು ಮುಂದೆ ನಿಂದು ॥
ನಳಿತೋಳ ನೀಡಿ ಕಾಣಿಗೆಗೊಟ್ಟು ಕೈಮುಗಿ । ದೊಳಸಾರಿ ನಿಂದರೋಜೆಯೊಳು ॥ ೨೮ ॥

ಹೊಂಬಣ್ಣವ್ಯೆಯಳೊರ್ವಳು ಕಾಣಿಕೆಗೆ ಹೊಸ । ನಿಂಬೆಯ ಹಣ್ಣ ತಂದಿತ್ತು ॥
ಕೆಂಬಲ್ಲು ಮಿನುಗೆ ಕೈಮುಗಿದು ನಿಂದಳು ಹೊನ್ನ । ಬೊಂಬೆಯಂತರಸನೊತ್ತಿನೊಳು ॥ ೨೯ ॥

ನೀಲಾಂಗಿಯೊರ್ವಳು ಬಂದು ಕಾಣಿಕೆಗೊಂದು । ನೀಲಾಂಬುಜವ ತಂದಿತ್ತು ॥
ಮೇಲೆ ಕೈಮುಗಿದು ನಿಂದಳು ಕೆಲದೊಳಗಿಂದ್ರ । ನೀಲದ ಪುತ್ತಳಿಯಂತೆ ॥ ೩೦ ॥

ರಾಣಿಯೊರ್ವಳು ಬಂದು ಹೊಂದಾವರೆಯ ಕೈ । ಗಾಣಿಕೆಯಿತ್ತು ಕೈಮುಗಿದು ॥
ಕ್ಷೋಣೀಶನೆಡದ ಭಾಗವ ಸಾರಿ ನಿಂದಳು । ಮಾಣಿಕಬೊಂಬೆಯೆಂಬಂತೆ ॥ ೩೧ ॥

ಕೆಂಪಿಯೊರ್ವಳು ಬಂದು ರಾಯನ ಹಸ್ತಕೆ । ಸಂಪಗೆ ಹೂಗಳ ನೀಡಿ ॥
ಸೊಂಪಿಂದ ಕೈಮುಗಿದಬಲೆಯರೆಲ್ಲರ । ಗುಂಪಿನೊಳಗೆ ನಿಂದಳೊಡನೆ ॥ ೩೨ ॥

ಕರಿಯಳೊಬ್ಬಳು ಬಂದು ಚಕ್ರವರ್ತಿಗೆ ತನ್ನ । ಕರಕುಶಲದೊಳು ರಚಿಸಿದ ।
ಸುರಗಿಯ ಮಾಲೆಯನಿತ್ತಳು ರತಿದೇವಿ । ಸುರಗಿಯ ಮದನಗೀವಂತೆ ॥ ೩೩ ॥

ಅಂಗಜವೀರಗೆ ಪೂವಿನ ಖಡ್ಗವ । ಸಂಗಡಿಸುವ ರತಿಯಂತೆ ॥
ಹೊಂಗೇದಗೆಯ ಕಠಾರಿಯನೊರ್ವ ಲ । ತಾಂಗಿ ತಂದಿತ್ತಳು ನೃಪಗೆ ॥ ೩೪ ॥

ಬಟ್ಟಜವ್ವನೆಯೊರ್ವಳಡಿಯಿಟ್ಟು ಕಾಣ್ಕೆಗೆ । ಬೆಟ್ಟದಾವರೆಯ ತಂದಿತ್ತು ॥
ನಿಟ್ಟಿಸಿ ಕೈಮುಗಿದರಸನ ಗದ್ದುಗೆ । ಮುಟ್ಟಿ ನಿಂದಳು ವಿಭವದೊಳು ॥ ೩೫ ॥

ಮೈಯೊಡ್ಡಿ ಸಂಮುಖದೊಳು ನಿಲ್ಲದೆಲ್ಲರ । ಮೈಯ ಮರೆಗೆ ಸಾರುವವಳಾ ॥
ಕೈಯ ಹಿಡಿದು ಕರೆತಂದೊರ್ವಳರಸಗೆ । ಕೈಯ ಕಾಣ್ಕೆಯ ಕೊಡಿಸಿದಳು ॥ ೩೬ ॥

ಅಂಜುತಂಜುತ ಬಾಲೆ ಬಂದೊರ್ವಳರಸಗೆ । ಕೆಂಜಾಜಿ ಸರಗೊಡುವಾಗ ॥
ಕೆಂಜಾಜಿ ಜಗುಳಿತು ಕಾಣಿಕೆಯಲ್ಲ ಪು । ಷ್ಪಾಂಜಲಿಯೆಂದರಾಳಿಯರು ॥ ೩೭ ॥

ಎಲ್ಲರ ಮುಂದೊರ್ವ ಮುಗ್ಧೆ ನಾಚುತ ಬಂದು । ಮಲ್ಲಿಗೆ ಸರಗೊಡುವಾಗ ॥
ಮಲ್ಲಿಗೆ ಜಾರಿತು ಜಾರಿದರೇನದೆ । ಮ್ಮಲ್ಲಿಗೆಯೆಂದನು ನೃಪತಿ ॥ ೩೮ ॥

ಪಾದರಿಯಲರನೊರ್ವಳು ಕೊಡುತಿರೆ ಜಾರಿ । ಪಾದದೆಡೆಗೆ ಬಿದ್ದುದವನ ॥
ಪಾದದಿಂದೊದೆದನು ಸೋತು ಕಾಲ್ಗೆರಗಿದ । ಪಾದರಿಯನು ನೂಕುವಂತೆ ॥ ೩೯ ॥

ಪರದಾರಸೋದರನೊತ್ತಿಗೆ ಪಾದರಿ । ಬರಬಹುದೇ ಭರತೇಶಾ ॥
ಚರಣದಿಂದೊದೆದುದದಾಯ್ತೆಂದು ಪಂಡಿತೆ । ಅರಸನ ನಸುನಗಿಸಿದಳು ॥ ೪೦ ॥

ಕಡುಶೀಲವತಿಯರು ನಿನ್ನ ಪೆಂಡಿರು ತಮ್ಮ । ಕಡೆಗೊಬ್ಬ ಸಾದರಿ ಬರಲು ॥
ಪಿಡಿತಂದು ನಿನಗೊಪ್ಪಿಸಿದರು ನೀನೊದೆದುದು । ಬೆಡಗಾಯ್ತು ಶೀಲನಿಧಾನಾ ॥ ೪೧ ॥
ಕಡೆಗಣ್ಣ ಪ್ರಭೆಯಿತ್ತಲತ್ತಲೊಲೆದು ನೋಡೆ । ಕುಡಿಮಿಂಚಿನಂತಾಡುತಿರಲು ॥
ನಡೆತಂದು ರಮಣಿಯೊರ್ವಳು ರಾಯಗಿತ್ತಳು । ಮುಡಿವಾಳದೊಂದು ಝಲ್ಲಿಯನು ॥ ೪೨ ॥
ಭಾವೆ ಭಾವಗೆ ಕಾಣ್ಕೆಯಿಕ್ಕೆಂದು ಕಿವಿಯಲ್ಲಿ । ಭಾವಕಿಯರು ಪೇಳೆ ನಗುತ ॥
ಮಾವಿನ ತಳಿರ ತಂದಿತ್ತಳೊರ್ವಳು ತನ್ನ । ಮಾವನ ಮಗನ ಹಸ್ತದೊಳು ॥ ೪೩ ॥
ಸುತ್ತಿ ಸುಳಿದು ತುಂಬಿಗಳು ಮೇಲೆ ಹೀಲಿಯ । ಸತ್ತಿಗೆಯಂತೆ ರಾಜಿಸಲು ॥
ಮತ್ತಕಾಶಿನಿ ಬಂದು ಚಂಗಣಿಗಿಲ ಕಾಣ್ಕೆ । ಯಿತ್ತು ಕೈಮುಗಿದಳೋಜೆಯೊಳು ॥ ೪೪ ॥
ಓಲಗದೊಳಗೆಲ್ಲರಚ್ಚರಿವಡೆ ಮಲ್ಲಿ । ಕಾಲತೆ ನಡೆದು ಬಹಂತೆ ॥
ಸಾಲುಮುತ್ತಿನ ತೊಡಿಗೆಯ ತೊಟ್ಟು ಬಂದೊರ್ವ । ಲೋಲಾಕ್ಷಿ ಕಂಡಳಾ ನೃಪನಾ ॥ ೪೫ ॥
ಜ್ಯೋತಿಯಂದದ ರತ್ನಭೂಷಣ ಮೈತುಂಬಿ । ಜೋತೊಲೆದಾಡಲೊರ್ವಬಲೆ ॥
ಜ್ಯೋತಿರ್ಲೋಕದ ಪೆಣ್ಣೊಯೆಂದೆನೆ ಬಂದು । ಭೂತಳಪತಿಯ ಸಾರಿದಳು ॥ ೪೬ ॥
ಸೇರಿಸಿ ಮುತ್ತು ಮಾಣಿಕದೊಟ್ಟು ಕರಿಯಳು । ಸಾರಿ ಕಂಡಳು ರವಿಗಳುಕಿ ॥
ತಾರಗೆವಿಡಂಬುಳು ಸಹವಾಗಿ ಮರೆಹೊಕ್ಕ । ಕಾರಿರುಳಂಗನೆಯಂತೆ ॥ ೪೭ ॥
ಗಂಡಪೆಂಡಿರು ತಾವು ನಿರ್ದೋಷರೆಂದೆಡೆ । ಗೊಂಡು ದಿಬ್ಬೆಗೆ ಕೈಯನಿಕ್ಕಿ ॥
ಕೆಂಡವ ಪಿಡಿದು ತಂದೀವಂತೆ ಕೊಟ್ಟಳು । ಗಂಡಗೊರ್ವಳು ಮಾಣಿಕವನು ॥ ೪೮ ॥
ಮುತ್ತಿನ ಮಣಿಯನೊರ್ವಳು ತಂದು ನೃಪನ ಕೈ । ಗಿತ್ತು ಕೈಮುಗಿದಳಂತದನು ॥
ಒತ್ತಿನೊಳಿದ್ದ ಪಂಡಿತೆ ಕಂಡು ನುಡಿದಳು । ಮುತ್ತೊಂದು ಬಿನದದ ಮಾತಾ ॥ ೪೯ ॥
ವದನ ವದನ ಸೋಂಕಿ ಮುತ್ತ ಕೊಡುವುದು ಲೋ । ಕದೊಳುಂಟು ಭರತಚಕ್ರೇಶ ॥
ಇದು ಚಿತ್ರ ಕರಯುಗಸೋಂಕಿ ಮುತ್ತೀವುದೆಂ ।ದೆದೆಯೊಳಿನಿಸು ನಗಿಸಿದಳು ॥ ೫೦ ॥
ಚಿನ್ನದ ಪುಷ್ಪ ಬೆಳ್ಳಿಯ ಪುಷ್ಪ ಕಸ್ತೂರಿ । ಕನ್ನಡಿಗಳ ಕಾಣ್ಕೆಗೊಟ್ಟು ॥
ಚೆನ್ನೆಯರೆಲ್ಲರು ಕಂಡರಂದಾ ರಾಯ । ರನ್ನನ ಪರಮಲೀಲೆಯೊಳು ॥ ೫೧ ॥
ಕಾವರಾಯಗೆ ಕಾಣ್ಕೆಯಿಕ್ಕಿ ನಿಂದುರೆ ವನ । ದೇವಿಯರೋಲೈಸುವಂತೆ ॥
ಆ ವನಿತೆಯರು ನಿಂದಿದ್ದರು ಲಲನಾ । ಜೀವಮೋಹನನ ಪಕ್ಕದೊಳು ॥ ೫೨ ॥
ಎಲ್ಲರನೀಕ್ಷಿಸಿ ಕಿರಿದುಹೊತ್ತಿನ ಮೇಲೆ । ಮೆಲ್ಲನೆ ಕೈಸನ್ನೆಯಿಂದ ॥
ಕುಳ್ಳಿರವೇಳ್ದನು ಭೂಪಾಲನಾ ಹೆಂಗ । ಳೆಲ್ಲರು ಕುಳಿತರೊಪ್ಪದೊಳು ॥ ೫೩ ॥
ಮೃದುತಲ್ಪದೊಳಗರಸಿಯರೆಲ್ಲ ಕುಳಿತ ಮೇ । ಲೊದವಿ ಸನ್ನೆಯೊಳು ಪಂಡಿತೆಯಾ ॥
ಚದುರರದೇವ ಕುಳ್ಳಿರಿಸೆ ಗಾಯಕಿಯರೊ । ಪ್ಪದಿ ಕುಳಿತರು ಸನ್ನೆಯರಿದು ॥ ೫೪ ॥

ಸ್ಮರನ ಮುಂದಿತ್ತತ್ತಲುರಿ ಹಾರಿ ನಲಿದಾಡು । ವರಸಂಚಿಗಳ ಸಾಲಿನಂತೆ ॥
ತರುಣಿಯರಿಕ್ಕುವ ಚಾಮರಗಳದೊಂದು । ಸಿರಿಯೊಪ್ಪಿತಾ ಸಮಯದೊಳು ॥ ೫೫ ॥

ರಾಯ ನೋಡಿದನು ಗಾಯಕಿಯರ ಮೊಗವನಾ । ಗಾಯಕಿಯರು ನೋಟವರಿದು ॥
ತಾಯಿ ಬಜಾವಣೆ ಗಮಕವೆಸೆಯೆ ಪಾಡ । ಲಾಯತವಾದರು ಕೂಡೆ ॥ ೫೬ ॥

ಅರೆದೆರೆವಬ್ಜದೊಳಿರುತಿದ್ದ ಮರಿದುಂಬಿ । ಸ್ವರಮಾಡಿ ಪೊರಮಡುವಂತೆ ॥
ಗರಗರಿಕೆಯೊಳು ಕೆಂಬಾಯ್ದೆರೆದಾಳಾಪ । ವಿರಚನೆ ಮಾಡಿದರೊಸೆದು ॥ ೫೭ ॥

ನೋಟ ರಾಯನ ಮೇಲೆ ನೆನಹು ರಾಗದ ಮೇಲೆ । ಸೀಟತಂತಿಯ ಮೇಲೆ ಬೆರಳು ॥
ಚಾಟುಕಾತಿಯರು ಚಾಂದಸಿಕೆಯ ನೂಂಕಿ ಸ । ಘಾಟಿಕೆಯಿಂದ ಪಾಡಿದರು ॥ ೫೮ ॥

ಜಕ್ಕವಕ್ಕಿಗಳು ಸೂರ್ಯನ ಮುಂದೆ ದುಗುಡವ । ನಿಕ್ಕಿ ನುಣ್ದನಿಮಾಡುವಂತೆ ॥
ಚೊಕ್ಕರಾಯನ ಮುಂದೆ ಮನದ ಜಾಡ್ಯವನೊಕ್ಕ । ಲಿಕ್ಕಿ ಹಾಡಿದರು ಗಾಡಿಯೊಳು ॥ ೫೯ ॥

ರಾಗಿಸಿದರು ಮೊದಲುದಯರಾಗವನನು । ರಾಗಿಸುವಂತೆ ಚಕ್ರೇಶಾ ॥
ಆಗ ಮೇಲಮರೇಂದ್ರ ಸುಳಿದನಾದರೆ ಮುಂದೆ । ಹೋಗದಲ್ಲಿಯೆ ನಿಲುವಂತೆ ॥ ೬೦ ॥

ನಲಿದು ಸಂಗೀತಸಮುದ್ರವ ಹೊಕ್ಕು ಮು । ಕ್ಕುಳಿಸಿ ಮುತ್ತುಗುಳುವಂದದೊಳು ॥
ತಗ್ರಳತುಂಬಿ ಗಾನವ ತೆಗೆದು ಬಾಯ್ದೆರೆಯೊಳು । ಸುಳುಹು ಗಾಣಿಸಿದರೋಜೆಯೊಳು ॥ ೬೧ ॥

ಉಕ್ಕಂಪವಾಗಿ ತುಂಬಿದ ಗಾನರಸವನು । ದಿಕ್ಕುದಿಕ್ಕಿಗೆ ಚಿಮ್ಮುವಂತೆ ॥
ಚೊಕ್ಕಚೊಕ್ಕನೆ ತಾನಗಳ ತಂದು ಕೊರಳಲ್ಲಿ । ಜಕ್ಕುಲಿಸಿದರು ಜಾಣೆಯರು ॥ ೬೨ ॥

ಸಿಕ್ಕಿದ ನಲ್ಲಳು ಮುನಿದ ನಲ್ಲನ ಮುಂದೆ । ಬಿಕ್ಕುಳಿಸುತ ನುಡಿವಂತೆ ॥
ಲೆಕ್ಕಟವಣೆಯಾಗಿ ಕೊರಳು ಕುಣಿದು ದನಿ । ಯಿಕ್ಕುವ ರಾಗ ರಂಜಿಸಿತು ॥ ೬೩ ॥

ನಾಭಿಯಿಂದೇಳಿಸಿಯೆದೆಯೊಳೋಲಾಡಿಸಿ । ಶೋಭೆಯ ಮಾಡಿ ಕಂಠದೊಳು ॥
ಆ ಭೂಪ ಮೆಚ್ಚೆ ರಾಗಿಸಿದರು ಶ್ರೀ ದೇವಿ । ಶೋಭನವನು ಪಾಡುವಂತೆ ॥ ೬೪ ॥

ಉದಯಭಾಸ್ಕರವೀಟಕಾಧರಬಿಂಬೆಯ । ರುದಯಭಾಸ್ಕರನ ಕಾಲದೊಳು ॥
ಉದಯರಾಗದೊಳರುಹನ ಪಾಡಿದರು ಜ್ಞಾನ । ಉದಯವಹಂತೆ ಕೇಳ್ವರಿಗೆ ॥ ೬೫ ॥

ದೇವಗಾಂಧಾರಿ ಭೂಪಾಳಿ ಧನ್ಯಾಸಿ ವೇ । ಳಾವಳಿ ಸೌರಾಷ್ಟ್ರವೆಂಬ ॥
ಪಾವನರಾಗದೊಳರುಹನನೊಲ್ದು ಸಂ । ಜೀವನವೆನಿಸಿ ಹಾಡಿದರು ॥ ೬೬ ॥

ನೆರವಾಗು ಗಾನಕೇಳೀಳೆಂದು ಮಲಗಿದ್ದ । ಸರಸತಿಯನು ಜಾಣೆ ತನ್ನ ॥
ಬೆರಳಿಂದ ಮಿಡಿವಂತೆ ಭಾರಿದಂಡಿಗೆಗೊರ್ವ । ತರಳಾಕ್ಷಿ ಮಿಡಿದಳಂಗುಲಿಯಾ ॥ ೬೭ ॥

ನೆರೆದು ನಿದ್ರೆಯೊಳಿದ್ದ ನಲ್ಲನ ಮುದ್ದಿಸಿ । ಕರೆವುತಂಗುಲಿಯಿಂದ ಮಿಡಿದು ॥
ಸರಸಕೆ ನಲ್ಲಳೇಳಿಸುವಂತೆ ಪಾಡುತ । ತರುಣಿ ಮಿಡಿದಳು ದಂಡಿಗೆಯಾ ॥ ೬೮ ॥

ನಿರಸವೀಸಂಸಾರವೆಂದು ನೆನೆದು ಹೇಸಿ । ಬೆರಳ ಮಿಡಿವಳೋಯೆಂಬಂತೆ ॥
ನರನಾಥನೆದೆಗೆ ಕಾಣಿಸಿತಾಕೆ ತಂತಿಯು । ಬೆರಳಿಂದ ಮಿಡಿದ ಬಿನ್ನಾಣ ॥ ೬೯ ॥
ಪರಮಂಡಲವ ಗೆಲ್ದವ ಮೆಚ್ಚೆ ಕರ್ಮವೆಂ । ಬರಿಮಂಡಲವ ಗೆಲ್ದವನಾ ॥
ಸ್ವರಮಂಡಲದಿಂದ ಪಾಡಿದರಾಲಿಸಿ । ಸುರಮಂಡಲ ಸೋಲ್ದುದೆನಿಸಿ ॥ ೭೦ ॥
ವಾಣಿ ನುಡಿಸುವ ವೀಣೆಯು ತಂತಿಯುದು ದೊಡ್ಡ । ನೇಣೆಂದು ನಗುವ ಚೆಲ್ವಿಕೆಯು ॥
ವೀಣೆಯು ನುಡಿಸುತ ಪಾಡಿದರರುಹನ । ವೀಣಾಲಾಪೆಯರೊಲ್ದು ॥ ೭೧ ॥
ತುಂಬಿದ ಸಂಗೀತರಸದ ಬಲ್ದೆರೆಯೊಂದು । ತುಂಬನುಚ್ಚಿದರೋ ಎಂಬಂತೆ ॥
ತಂಬುರು ವೀಣೆಯೊಳೊಲ್ದು ಪಾಡಿದರಂದು । ತುಂಬು ಜವ್ವನೆಯರು ಜಿನನಾ ॥ ೭೨ ॥
ಕಿನ್ನರಿ ಕಿನ್ನರಿ ವಿದ್ಯಾಧರಿ ದರಿ । ಯಿನ್ನವರ್ಗಾರೆಣೆ ಯೆನಲು ॥
ಭಿನ್ನಾಭಿನ್ನಭಕ್ತಿಗಳ ಕಿನ್ನರಿಯಿಂದ । ಬಿನ್ನಾಣವರಿದು ಪಾಡಿದರು ॥ ೭೩ ॥
ಹೊಂಗೊರಳದರೊಳು ಭರತರಾಜನ ಶಿಕ್ಷೆ । ಹೆಂಗಳವರು ಚೆಲುವೆಯರು ॥
ಸಂಗೀತ ಮೋಹಿಸುತಿದ್ದಿತು ಕೇಳ್ವರಿ । ಗಿಂಗಡಲೊಳಗೆ ಹೊಕ್ಕಂತೆ ॥ ೭೪ ॥
¹ ಅರುಹಂತದೇವನ ಸಿದ್ಧರ ಮುನಿಗಳ ; ಸ್ಮರಿಸಿ ಚಕ್ರೇಶನ ಮನದ ॥
ಪರಿಯನರಿದು ಭೋಗಯೋಗಗಳೆರಡನು । ಬೆರಸಿ ಹಾಡಿದರು ನೀರೆಯರು ॥ ೭೫ ॥
ಸದರವೆ ಸುಖವ ತಾನನುಭವಿಸುವೆನೆಂಬು । ದದಕೆಹಪರಚಿಂತೆ ಬೇಕು ॥
ಇದಿರನರಿಯಬೇಕು ತನ್ನನರಿಯಬೇಕು । ಚದುರುಬೇಕೆಂದು ಪಾಡಿದರು ॥ ೭೬ ॥
ಎರಡುಗಣ್ಣಿಂದ ಲೋಕವ ನೋಡಬೇಕು ತ । ನ್ನಿರವ ಸುಜ್ಞಾನದೃಷ್ಟಿಯೊಳು ॥
ತಿರುಗಿ ನಿಟ್ಟಿಸಬೇಕು ಮುಕ್ಕಣ್ಣಗಲ್ಲದೆ । ಲ್ಲರಿಗೆ ಬಹುದೆ ಸುಖಸಿದ್ಧಿ ॥ ೭೭ ॥
ಬಾಲೆಯರೊಡನಿರಬೇಕಾತ್ಮರತಿಯೆಂಬ । ಪಾಲುಗಡಲೊಳಿರಬೇಕು ॥
ಲಾಲಿತಸುಖಸಿದ್ಧಿ ಪುರುಷೋತ್ತಮಗಲ್ಲ । ದಾಲಸ್ಯಪುರುಷಗೇಕಹುದು ॥ ೭೮ ॥
ವರಸತಿಯರ ಕೂಡೆ ನುಡಿದಾಡಬೇಕೊಮ್ಮೆ । ಸರಸತಿಯೊಳು ನುಡಿ ಬೇಕು ॥
ಪರಸತಿಯೊಳು ಮೌನ ಮುಕ್ತಿಸತಿಧ್ಯಾನ । ವಿರಬೇಕು ನಾಲ್ಕೊಗ ಬೇಕು ॥ ೭೯ ॥
ಸರಸಿಜಾಕ್ಷಿಯರ ಚಿತ್ತದ ತನ್ನ ಚಿತ್ತದ । ಬೆರಗನರಿದು ಗೆಲಬಲ್ಲ ॥
ಅರುಹಗಲ್ಲದೆ ಬಡವರಿಗೇಕೆ ಸುಖಸಿದ್ಧಿ । ದೊರೆಕೊಂಬುದೆಂದು ಪಾಡಿದರು ॥ ೮೦ ॥
ವೈಯುಸುಖಕೆ ಮರುಳಾಗಿ ತಮ್ಮಾತ್ಮನ । ಸಯ್ಯನರಿಯದೆ ಭೋಗಿಪುದು ॥
ಉಯ್ಯ ಕೈವಿಡಿದು ತಂಡುಲವ ಬಿಸುಟ ಮರು । ಳಯ್ಯರ ಮಾರ್ಗವೇನಲ್ತೆ ॥ ೮೧ ॥
ಈಗುಣವಾಗುಣ ಬೇಕೆನಲೇಕಾತ್ಮ । ಯೋಗವಿಡಿದ ಭೋಗಿಗಳಿಗೆ ॥
ಹೋಗೆಂದರೆ ಹೋಗದೆಯ್ತುರುತಿಹವು ಮ । ಹಾ ಗುಣಗಳು ತಮ್ಮ ತಾವೆ ॥ ೮೨ ॥

ಪರುಷದ ಮಣಿಯೊಂದು ಕೈಯೊಳುಳ್ಳವಗೆಲ್ಲ । ಸಿರಿಗಳು ತಾವೇ ಬಂದಿರವೇ ॥
ಪರಬೊಮ್ಮದನುಭವವೊಂದುಳ್ಳರವನಿಗೆ । ದೊರಕದ ದೊಡ್ಡಿತೊಂದುಂಟೆ ॥ ೮೩ ॥

ಭವಭವ ತಪ್ಪದೆ ಭೋಗವಹುದು ಮೂರು । ಭವ ನಾಲ್ಕುಭವ ಹತ್ತುಭವಕೆ ॥
ಭವಕೆಟ್ಟು ಕೈವಲ್ಯಸುಖವಹುದಾತ್ಮನು । ಭವಕೆಣೆಯಹ ಭಾಗ್ಯವುಂಟೆ ॥ ೮೪ ॥

ಅಮರಲೋಕದೊಳು ಹುಟ್ಟಿದನಾದರಮರರ । ಭ್ರಮೆಗೊಳಿಸುವ ಚೆಲ್ವಿನಹನು ॥
ಗಮಿಸಿ ಭೂಲೋಕದೊಳಗೆ ಹುಟ್ಟಿದರೆ ರತಿ । ರಮಣನಾಗುವನಾತ್ಮರಸಿಕ ॥ ೮೫ ॥

ತಾನೊಂದು ಬಯಸನು ತನ್ನ ಬಯಸಿ ತನ್ನ । ತಾನೇ ಬರುವುದು ಸೌಭಾಗ್ಯ ॥
ಏನೊಂದ ನೆನೆಯನು ತನ್ನ ನೆನೆದು ಲೋಕ । ಜಾನಿಸುತಿಹುದಾತ್ಮರತನಾ ॥ ೮೬ ॥

ಸುಳಿದ ಮಾತ್ರದೊಳು ಮಾನಿನಿಯರ ಹೃದಯದ । ಸುಳುಹ ಕಾಣ್ಬನು ಭಾವಿತಾತ್ಮ ॥
ಸುಳಿಗುರುಳಿನ ಸೊಬಗೆಯರ ತನ್ನಯ ಸುತ್ತ । ಸುಳಿದಾಡಿಸುವನು ಸೋಲದೊಳು ॥ ೮೭ ॥

ನಸುನಗೆಯಿಂದ ಹೆಂಗಳ ನೋಡಿ ಜುಮ್ಮೆನ । ಲೊಸರಿಸುವನು ಕರಣಗಳಾ ॥
ಬೆಸುಗೆಯಾದಂತಿದ್ದು ಬೇರುಪಟ್ಟಿಹನಾತ್ಮ । ರಸಿಕನೊಳಗ ಬಲ್ಲರಾರು ॥ ೮೮ ॥

ಮುಗ್ಧೆಗೆ ಮೋಹನಕಲೆಗಳ ಕಲಿಸಿ ವಿ ।ದಗ್ಧೆಯೆನಿಸುವನೊಮ್ಮೊಮ್ಮೆ ॥
ಮುಗ್ಧೆಯೆನಿಸಿ ಮೌನಗೊಳಿಸುವನೊಮ್ಮೆ ವಿ । ದಗ್ಧೆಯ ನುಡಿಜಾಣ್ಮೆಯಿಂದ ॥ ೮೯ ॥

ಸರಸವನಾಡನಾಡಿದನಾದರದರಲ್ಲಿ । ವಿರಸವ ಮೊಳೆದೋರಲೀಸಾ ॥
ಪರವಶಗೊಳಿಸುವನಂಗನೆಯರ ತನ್ನ । ಪರಿಣತಿಯೆಚ್ಚರಾಗಿಹುದು ॥ ೯೦ ॥

ಮುನಿಯನು ಮುನಿಯಲೀಸನು ಸಟೆಗೊಂದಿಷ್ಟು । ಮುನಿದನಾದರೆ ಕೂಡೆ ತಿಳಿವಾ ॥
ತನಿವಾಲ ಕಾಸಿದಂತಿಹುದಾತ್ಮರಸಿಕನ । ಅನುಭವ ಕುಲಸತಿಯರೊಳು ॥ ೯೧ ॥

ನೋಡೆ ಪಟ್ಟೆಡೆಯೊಳು ನಖದಂತಹತಿಗಳ । ಮಾಡನು ಕಲೆಯಾಗುವಂತೆ ॥
ಮಾಡಿದರೊಂದಿನಿಸುಂಟೋ ಇಲ್ಲವೊಯೆಂಬ । ಗಾಡಿಯೊಳಂಕಿಸಿ ಬಿಡುವಾ ॥ ೯೨ ॥

ಆಸ್ಯಕಂಠಗಳಲ್ಲಿ ಕಲೆಯನಂಕಿಸನದು । ಹಾಸ್ಯವೆಂದಾತ್ಮವಿಜ್ಞಾನಿ ॥
ಲಾಸ್ಯವನಾಡಿದಂದದೊಳೊಂದು ಮಿಕ್ಕ ರ । ಹಸ್ಯದೆಡೆಯೊಳೂರಿಬಿಡುವಾ ॥ ೯೩ ॥

ಪ್ರಣಯಕಲಹವ ಮಾಡನು ಹೆಂಗಳೊಡನೆ ಸಂ । ದಣಿಸಿ ತಾನೊಮ್ಮೆ ಮಾಡಿದರೆ ॥
ಕ್ಷಣದೊಳು ನಿಲಿಸಿ ಗಂಭೀರದೊಳಿಹನು ಲ । ಕ್ಷಣವಿದು ನಿರಘಭೋಗಿಗಳ ॥ ೯೪ ॥

ಮಾನತಪ್ಪದೆ ನಿಚ್ಚ ಗಂಭೀರತಪ್ಪದೆ । ತಾನು ನಡೆವನು ತನ್ನಂತೆ ॥
ಮಾನಿನಿಯರು ನಡೆವರು ಕರಿಣಿಗಳೊಳ । ಗಾನೆಯಿದ್ದಂತಿಹುದಾಟ ॥ ೯೫ ॥

ಒಬ್ಬಳ ಮೇಲೆ ತನಗೆ ಸೋಲವಿದ್ದರು । ದುಬ್ಬಗಾಣಿಸನದ ನುಡಿದು ॥
ಒಬ್ಬಪುರುಷನೊಬ್ಬಸತಿಯೊಳಿಪ್ಪಂತಿಹ । ನುಬ್ಬಸವಿಲ್ಲದೆಲ್ಲರೊಳು ॥ ೯೬ ॥

ಒಲಿಸುವನೊಲಿವನಂಗನೆಯರಿಚ್ಛೆಯ ನಿಚ್ಚ । ಸಲಿಸುವನಾನಂದಿಸುವನು ॥
ಕಲಿಸುವನೋಜೆಯ ತನ್ನ ವೈವಳಿಯೊಳು । ನಿಲಿಸುವನನುಭವಸಿದ್ಧಾ ॥ ೯೭ ॥
ಸಿಕ್ಕಿದಂತಿಹನು ಸಿಕ್ಕನು ರತಿಸುಖದಲ್ಲಿ । ಸೊಕ್ಕಿದಂತಿಹನಲ್ಲಿ ಸೊಕ್ಕಾ ।
ಠಕ್ಕರಂತಿಹನದು ಠಕ್ಕಲ್ಲ ನಿಜವ ಕ । ಣ್ಣಿಕ್ಕಿ ಕಂಡವನ ಲೀಲೆಯದು ॥ ೯೮ ॥
ದುರ್ಗದಂತೊಮ್ಮೆ ಗ್ರಾಮಗಳಂತೆ ಹೂವಿನ । ಕೂರ್ಗಣೆಯಂತಿಹನೊಮ್ಮೆ ॥
ಸ್ವರ್ಗವೆ ಪುರುಷನಾದಂತೆ ಹೆಂಗಳಿಗೆ ಸಂ । ಸರ್ಗಸುಖವ ತೋರುತಿಹನು ॥ ೯೯ ॥
ಬಾಲಕರೊಡನೊಬ್ಬ ಜಮ್ಮನಿಗನು ಸರ । ಸಾಳಾಪವ ಮಾಡುವಂತೆ ।
ಲೋಲಾಕ್ಷಿಯರೊಡನಾಡುತಿಹನು ತನ್ನ । ಲೀಲೆಯಿಹುದು ಬೇರೆ ಬೇರೆ ॥ ೧೦೦ ॥
ಪಟ್ಟಣವಾಸಿಗರೂರುಗರೊಡನೊಂದು । ಬಟ್ಟೆಯೊಳಗೆ ಹೋಗುವಾಗ ॥
ಸಟ್ಟಾಟವಾಡುತ ಹೋಹಂತೆ ಮೋಹದ । ತಿಟ್ಟವಿಹುದು ಮೋಕ್ಷರತನ ॥ ೧೦೧ ॥
ಮಾರ್ಗವಲ್ಲೆಂಬಂತೆ ತೋರ್ಪುದನ್ಯರಿಗೆ ಸ । ನ್ಮಾರ್ಗದೊಳವನಿರುತಿಹನು ॥
ಆರ್ಗೆ ತಿಳಿಯಬಹುದಾತ್ಮವಿಜ್ಞಾನಿಯಂ । ತರ್ಗತವನು ಜಿನ ಬಲ್ಲ ॥ ೧೦೨ ॥
ಗೂಳಿ ನಡೆವ ಹಜ್ಜೆ ತೋರುವುದಲ್ಲದೆ । ಗಾಳಿಯ ಹಜ್ಜೆ ತೋರುವುದೆ ॥
ಜಾಳುಗಳೊಳಗುಗಾಣಿಸುವುದಲ್ಲದೆ ತತ್ವ । ಶೀಲನೊಳಗ ಕಾಣ್ಬರಾರು ॥ ೧೦೩ ॥
ಇದು ನಮ್ಮ ಭರತಚಕ್ರೇಶನ ನಡೆಯಲ್ಲ । ದಿದರೊಳಿನ್ನರಸಿದರಿಲ್ಲ ॥
ಅದು ತಾನು ಪೂರ್ವದೊಳಾತ್ಮ ಭಾವನೆಯ ಮಾ । ಡಿದ ಫಲವೆಂದು ಹಾಡಿದರು ॥ ೧೦೪ ॥

ಕೊಟ್ಟನವರ ಕರೆದುಡುಗೊರೆಗಳ ನೆರೆ । ದಟ್ಟಿ ಹಾಡಿದಿರಿ ಲೇಸೆಂದಾ ॥
ಪಟ್ಟವರ್ಧನನ ಕಾಲ್ಗೆರಗಿ ಬೀಳ್ಕೊಂಡವ । ರೊಟ್ಟೋಜೆಯಾಗಿ ಕುಳಿತರು ॥ ೧೦೫ ॥
ಸರಸಿಜಗಳು ಬಳಸಿರೆ ನಟ್ಟನಡುವೆ ತೋ । ರ್ಪರಸಂಚೆಯಂತೆ ರಾಜೇಂದ್ರ ॥
ಅರಸಿಯರೋಲಗದೊಳಗಿದ್ದನಿಲ್ಲಿಗು । ಪ್ಪರಿಗೆಯ ಸಂಧಿ ಸುಗಂಧಿ ॥ ೧೦೬ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೦೭ ॥
ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ ಸ್ವಾಮಿಯ ಕಾಣ್ಬರರ್ತಿಯೊಳು ॥ ೧೦೮ ॥
ಶರಣಾಗತವಜ್ರಪಂಜರ ಸಹಜಾ । ಭರಣಾ ಸುಖೋಜ್ವಲಕಿರಣಾ ॥
ಶರಣಾಗು ನನ್ನಂತರಂಗದೊಳಿರು ಭವ । ಹರಣಾ ಚಿದಂಬರಪುರುಷಾ ॥ ೧೦೯ ॥

ಉಪ್ಪರಿಗೆಸಂಧಿ ಸಂಪೂರ್ಣಂ

# ರಾಜಲಾವಣ್ಯಸಂಧಿ.

ನೋಡಿ ನೋಡದ ನುಡಿದಾಡಿ ನುಡಿಯದೆಡೆ । ಯಾಡಿ ನಡೆಯದ ಮಹಾತ್ಮ ॥
ಕೂಡೆ ಕೂಡೆನಗೆ ಚಿತ್ಕಳೆಯ ಬೆಳಗನುಂಟು । ಮಾಡು ನಿರಂಜನಸಿದ್ಧಾ ॥ ೧ ॥

ಪೆಂಡಿರೋಲಗದೊಳಗಭಿನವಕುಸುಮಕೋ । ದಂಡನಾ ನೃಪನೊಪ್ಪುವಾಗ ॥
ಪಂಡಿತೆಯೊಡನೊರ್ವ ಗಾಯಕಿ ಕಿವಿಗಚ್ಚಿ । ಕೊಂಡು ನುಡಿದಳೊಂದು ಮಾತಾ ॥ ೨ ॥

ಗರಗರನೆದ್ದಳು ಪಂಡಿತೆ ಕೈಮುಗಿ । ದರಸ ಬಿನ್ನಹವೆಂದು ನಗುತ ॥
ಸರಸಲೀಲೆಯದೊಂದು ಹೊಸಕಾವ್ಯವುಂಟವ । ಧರಿಸಬೇಕೆಂದಳುಬ್ಬಿನೊಳು ॥ ೩ ॥

ಆರು ಪೇಳಿದರದನಾರ ವರ್ಣನೆಯದು । ಆರು ಮತ್ತಾ ಹೊಸಕೃತಿಯಾ ॥
ಆರಯ್ದು ತಿದ್ದಿದರೆಂದು ಕೇಳಿದನು ವಿ । ಚಾರಸಂಮುಖಕಾರ್ಯಕುಶಲಾ ॥ ೪ ॥

ಪರರುಸುರಿದುದಲ್ಲ ಪರರ ವರ್ಣನೆಯಲ್ಲ । ಪರರು ತಿದ್ದುವ ದಕ್ಷರಿಲ್ಲ ॥
ಅರಸ ನಿನ್ನರಮನೆಯೊಳಗಾದ ಕೃತಿ ನಿನ್ನ । ಚರಿತ ನೀನೇ ತಿದ್ದಬೇಕು ॥ ೫ ॥

ಅರಮನೆಯೊಳಗಾದುದೆಂದರಾರೆಂದು ನಿ । ರ್ಧರಿಸಬಹುದು ಹೊಸಕೃತಿಯಾ ॥
ವಿರಚಿಸಿದಾಕೆಯ ಹೆಸರ ಹೇಳೆಂದನು । ದರಹಾಸದಿಂದ ಭೂವರನು ॥ ೬ ॥

ಅರಗಿಳಿಯೊಡನೊಲ್ದು ಕುಸುಮಾಜಿಯರು ನಿನ್ನೆ । ಸರಸದಿ ನುಡಿದಾಡಲದನು ॥
ನೆರೆಮನೆಯೊಳಗಿದ್ದ ಸುಮನಾಜಿಯರು ಕೇಳ್ದು । ಚರಿತೆಮಾಡಿದರವನೀಶಾ ॥ ೭ ॥

ಸುಮನಾಜಿಯರ ನಿಳಯಕೆ ನಿನ್ನೆ ಬಿನದಕೆಂ । ದಮರಾಜಿಯರು ನಡೆತಂದು ॥
ಅಮೃತವಾಚಕನೆಂಬ ಗಿಳಿಯೊಡನಾಕೆ ಸಂ । ಕ್ರಮಿಸಿ ನುಡಿವುದ ಕೇಳಿದರು ॥ ೮ ॥

ಕುಸುಮಾಜಿ ನುಡಿದಂದ ಚೆನ್ನಾಯ್ತು ಸುಮನಾಜಿ । ಪೊಸಕೃತಿಮಾಡು ನೀನದನು ॥
ಒಸೆದಾನು ಬರೆವೆನೆಂದಮರಾಜಿ ಬರೆದು ಪೇ । ಳಿಸಿದ ಕಾವ್ಯವ ಕೇಳು ರಾಯ ॥ ೯ ॥

ಆದರಾಗಲಿ ನೀನು ಕುಳ್ಳಿರು ಕಾವ್ಯವ । ನೋದಿಸೆಂದನು ನರನಾಥ ॥
ಓದಲುಜ್ಜುಗಿಸಿ ಪುಸ್ತಕವನಾಂತೊರ್ವ ತ । ಳೋದರಿ ಕುಳಿತಳಿದಿರೊಳು ॥ ೧೦ ॥

ಧಿಗಿಲನೆದ್ದಳು ಕುಸುಮಾಜಿ ಕೈಮುಗಿದಿಂದು । ಹಗಲೊಂದು ನೋಂಪಿಯುಂಟೆನಗೆ ॥
ಸುಗತನಿವಾಸಕೆ ಪೋಪೆನೆಂದಳು ರಾಯ । ನಗುತ ನುಡಿದನಾಕೆಗಿಂತು ॥ ೧೧ ॥

ಲೇಸಾಯ್ತು ಹೋಗು ಕಂಕಣ ಬೇಡವೆ ನೋಂಪಿ । ಗೀ ಸುವರ್ಣದ ಕಂಕಣವನು ॥
ಕೋ ಸುಮ್ಮನೇಕೆ ಹೋದಪೆ ಪಿಡಿಯೆಂದು ವಿ । ಲಾಸದಿ ಕೈಯ ನೀಡಿದನು ॥ ೧೨ ॥

ನಿಜವೆಂದು ರಾಯನ ಕರದ ಕಂಕಣಕೆ ವಾ । ರಿಜಮುಖಿ ಕೈಯ ನೀಡಿದಳು ॥
ಗಜ ತನ್ನ ಕರಿಣಿಯ ಕರ ಪಿಡಿವಂತೆ ಭೂ । ಭುಜ ಪಿಡಿದನು ಕೈಯನವಳ ॥ ೧೩ ॥

ಆರ ಚಾಳೈಸುವೌ ನಿನಗೆ ನಾನರಿಯದಂ । ತಾರಿತ್ತರಿಂದು ನೋಂಪಿಯನು ॥
ಸಾರೆ ಕುಳ್ಳಿರು ಸಾಕು ನನ್ನಾಣೆಯೆಂದೊತ್ತಿ । ಗಾರಾಯನೊಯ್ದನಾಕೆಯನು ॥ ೧೪ ॥

ನೀನರ್ತಿಗೆಂದರಗಿಳಿಯನೋದಿಸಲದು । ಮಾನಿನಿಯರಿಗರ್ತಿಯಾಯ್ತು ॥
ನಾನದ ಕೇಳ್ದರ್ತಿಮಾಡಬೇಡವೆ ಸುಖ । ಗಾನದೊಳೇಳ್ವರೆ ಮುಗ್ಧೆ ॥ ೧೫ ॥

ಬಲ್ಲೆನು ನೀನೆದ್ದ ಬಗೆಯ ನೀನೇಕಾಂತ । ದಲ್ಲಿ ಗಿಳಿಯೊಳಾಡಿದುದನು ॥
ಎಲ್ಲರ ಮುಂದೆ ರಚ್ಚೆಗೆ ತಂದರೆಂದೆದ್ದೆ । ಯಲ್ಲವೆ ಕಮಲದಳಾಕ್ಷಿ ॥ ೧೬ ॥

ಅನ್ಯರಿಗೊಳಗುದೋರದೆ ನಡೆವುದು ಕುಲ । ಕನ್ಯಾಂಗಲಕ್ಷಣವಹುದು ॥
ಅನ್ಯರಾರಿವರೆಲ್ಲರೆನ್ನವರಲ್ಲವೆ । ಶೂನ್ಯಮಧ್ಯೆಯೆ ಕುಳ್ಳಿರೆಂದಾ ॥ ೧೭ ॥

ಕಂಡೆಯ ಪಂಡಿತೆ ಕುಸುಮಾಜಿ ಕುಸುಮದ । ಚೆಂಡಿನಂತೆದ್ದ ಲಂಘನವಾ ॥
ಕಂಡೆನಹುದು ಸ್ವಾಮಿ ಕಾಂತೆಯರೊಳಗನು । ಕಂಡವರಾರು ನಿನ್ನಂತೆ ॥ ೧೮ ॥

ಲಜ್ಜೆಯಾದುದು ದೇವ ತನ್ನೆದೆಯಾಟದ । ಹಜ್ಜೆ ತೋರಿತು ಪರರ್ಗೆಂದು ॥
ಸಜ್ಜನಸತಿಯರ ಗುಣವದು ನೀನಾಕೆ । ಗುಜ್ಜುಗಿಸಿದ ಬೋಧೆಯಾಯ್ತು ॥ ೧೯ ॥

ಅದಕಲ್ಲ ನೋಡೊಂದು ನೋಂಪಿಯೆಂದೆನ್ನನೊ । ಪ್ಪದಿ ಚಾಳಿಸುವುದೊಂದು ಬಗೆಯಾ ॥
ಅದು ನಿನ್ನ ಗೆಲತಕ್ಕ ತಂತ್ರವೆ ಮುಗ್ಧೆಯ । ಚದುರಂತುಟಹುದು ರಾಜೇಂದ್ರ ॥ ೨೦ ॥

ಏಕಾಂತದೊಳು ಬೆಸಗೊಂಬಾಗ ಮುಗ್ಧೆ ಗ । ನೇಕಕುಶಲಕಲೆಯಿಹುವು ॥
ಲೋಕಾಂತದೊಳು ಕೇಳಲೊಂದುವಿಲ್ಲೆನಲಿಹ । ಳಾಕೆಗಾ ಗುಣ ನಿಜವಲ್ತೆ ॥ ೨೧ ॥

ಬಾಲೆ ಮಾತರಿಯಳು ಮುಗ್ಧೆ ಮುಂದರಿಯಳು । ಆಲಸ್ಯವಿಲ್ಲ ಮಧ್ಯಮೆಗೆ ॥
ಲೋಲೆ ನಿಸ್ಸಾರೆ ವಿದಗ್ಧೆ ತಂತ್ರಿಣಿಯೆಂಬ । ಕೀಲ ನೀನೇ ಬಲ್ಲೆ ನೃಪತಿ ॥ ೨೨ ॥

ಬೆಡಗಾಯ್ತು ದೇವರು ಕುಸುಮಾಜಿಯರ ಹಸ್ತ । ವಿಡಿದು ನಿಲ್ಲಿಸಿದುದಿನ್ನಾಕೆ ॥
ಒಡೆಯ ನಿನ್ನೊತ್ತಿನೊಳಿರಲು ನಾಣ್ಕುವಳು ತ । ನ್ನೊಡಹುಟ್ಟಿದವರೊತ್ತಿಲಿರಲಿ ॥ ೨೩ ॥

ಅಹುದೆಯಾದರೆ ಹೋಗು ಕುಸುಮಾಜಿ ನೀನೆಲ್ಲ । ಮಹಿಳೆಯರೊಡನೆಂದಿನಂತೆ ॥
ಸಹಜದಿ ಕುಳ್ಳಿರೆಂದರಸ ಬೀಳ್ಕೊಡಲಾಕೆ । ವಹಿಲದಿಂದೆಯ್ದಿ ಕುಳಿತಳು ॥ ೨೪ ॥

ಇನ್ನೊಂದು ಕಾವ್ಯವನೆಂದನಾ ಪಾಡುವ । ಕನ್ನೆಯಾ ಹೊತ್ತಗೆವಿಡಿದು ॥
ಕನ್ನೆಗೋಗಿಲೆ ತಾನೆ ಬಾಯ್ದೆರೆದುದೊಯೆಂಬ । ಬಿನ್ನಣವೆಸೆಯಲೋದಿದಳು ॥ ೨೫ ॥

ಪಡಲಿಗೆಗಿಟ್ಟು ಹೊತ್ತಗೆಯ ದಾರವನೊತ್ತಿ । ಸಡಲಿಸಿ ಕಿರಿದೋಲೆಗಳನು ॥
ಎಡಗೈಯೊಳಾಂತೋದಿದಳು ಬಲಗೈಯಿಂದ । ಮಿಡುವುತ ಭಾರಿದಂಡಿಗೆಯಾ ॥ ೨೬ ॥

ಕುಂಜರಮಥನನ ಮುಂಡೆಯ ಮೇಲಪ । ರಂಜಿದಾವರೆಯ ಚೆಂಡಿಕೆಯಾ ॥
ರಂಜನೆ ಸೋಂಕದೆ ನಿಂದಾದಿಜಿನಪಾದ । ಕಂಜಗಳಿಗೆ ನಮಿಸುವೆನು ॥ ೨೭ ॥

ತನುಭಾರ ತವಗಿಲ್ಲ ಸುಜ್ಞಾನ ತನುವಾಗಿ । ತನುವಾತವೆಂಬ ಗಾಳಿಯೊಳು ॥
ಅನುಕಾಲ ಸುಖದೊಳೊಪ್ಪುವ ಸಿದ್ಧರಡಿಗಳ । ನೆನೆವೆನೆನ್ನಂತರಂಗದೊಳು ॥ ೨೮ ॥

ಮೂವರಿಲ್ಲೆನಿಸುವ ನವಕೋಟಿ ಮುನಿಗಳ । ಭಾವಶುದ್ಧದೊಳೆರಗುವೆನು ॥
ಶ್ರೀವಾಣಿಗೆರಗುವೆನುಭಯರತ್ನತ್ರಯ । ಭಾವನೆಗೈವೆನರ್ತಿಯೊಳು ॥ ೨೯ ॥

ವಿಭುಭರತೇಶನ ಮನದೊಳು ಸುಜ್ಞಾನ । ಪ್ರಭೆಯೆ ರೂಪಾಗಿ ಕಾಣಿಸುವಾ ॥
ತ್ರಿಭುವನಸಾರಚಿದಂಬರಪುರುಷಗೆ । ಶುಭಚಿತ್ತದಿಂದೆರಗುವೆನು ॥ ೩೦ ॥

ಹೂವ ಸೋಂಕದೆ ಗಗನದೊಳೊಪ್ಪುವೆಮ್ಮಯ । ಮೂವಾಜಿಯಡಿಗಳ ನೆನೆದು ॥
ಭಾವಾಜಿಗೆಮ್ಮಕ್ಕನಮರಾಜಿಯಾಜ್ಞೆಯಿಂ । ದೋವಿ ಪೇಳುವೆನೊಂದುಕೃತಿಯಾ ॥ ೩೧ ॥

ಶೃಂಗಾರಹಾರನ ಸೊಬಗನ ನುಡಿಯುಬೆ । ಡಂಗನ ಗಿಳಿಯೊಡನೆನ್ನ ॥
ತಂಗಿಯೊಲಿದು ಕುಸುಮಾಜಿ ಬಣ್ಣಿಸಿದುದ । ಸಂಗತಿಮಾಡಿ ಪೇಳುವೆನು ॥ ೩೨ ॥

ಕುಸುಮಾಜಿ ಸರಸಕೊಂದಮೃತವಾಚಕನೆಂಬ । ಹೆಸರ ಗಿಳಿಯು ಕರೆಕರೆದು ॥
ಉಸುರುತಿದ್ದಳು ತನ್ನ ಪತಿಯು ಗುಣವನದ । ರೆಸಕವನೇನ ಬಣ್ಣಿಪೆನು ॥ ೩೩ ॥

ಅಮೃತವಾಚಕ ಕೇಳು ಭರತಚಕ್ರೇಶ್ವರ । ರಮಣಿಯರೆಲ್ಲರ ಮನವಾ ॥
ಭ್ರಮೆಗೊಳಿಸುವ ರೂಪನಾವ ನೋಂಪಿಯ ಮುನ್ನ । ಕ್ರಮದಲ್ಲಿ ನೋಂತು ಪಡೆದನೊ ॥ ೩೪ ॥

ರೂಪ ಪಡೆಯಲಿ ರೂಪಿಗೆ ತಕ್ಕ ಶೃಂಗಾರ । ಚಾಪಲವಿನಯವಿಡಾಯ ।
ಭೂಪತಿಗೇತರಿಂದಾದವಿಂತಿವರ ಸ್ವ । ರೂಪ ಹೇಳೆನಗರಗಿಳಿಯೆ ॥ ೩೫ ॥

ಕೀರ ಕೇಳೀ ಪ್ರಾಯವೀ ಚೆಲುವೀ ಸಿರಿ । ಈ ರಮಣಿಯರೊಡನಿರ್ದು ॥
ಆರಿಗೊಳಗುಗಾಣಿಸದೆ ನಡೆವೊಂದು ಗಂ । ಭೀರ ತಾನೇತರಿಂದಾಯ್ತು ॥ ೩೬ ॥

ಅಂಬರದೊಳಗಿದ್ದ ಸೂರ್ಯನೊಬ್ಬನು ಜಲ । ತುಂಬಿದ ಹಲವು ಕುಂಭದೊಳು ॥
ಬಿಂಬಿಸುವಂತೆಲ್ಲ ಪೆಂಗಳೆದೆಯೊಳೀತ । ನಿಂಬುಗೊಂಡಿಹ ಪರಿಯೇನು ॥ ೩೭ ॥

ಸಾರತಾಪಸನಿದ್ದ ವನದಲ್ಲಿ ಹುಲಿಹುಲ್ಲೆ । ವೈರವಿಲ್ಲದೆ ಸುಳಿವಂತೆ ॥
ನಾರಿಯರೆಲ್ಲರು ಸವತಿಮತ್ಸರವಿಲ್ಲ । ದೀ ರಾಯಗೊಲಿದಂದವೇನು ॥ ೩೮ ॥

ತವರೂರ ಮರೆಯಿಸಿ ನಿದ್ರೆಯ ತೊರೆಯಿಸಿ । ಸವಿಗಳನರಿಯಿಸಿ ನಮ್ಮ ॥
ದಿವರಾತ್ರಿಯೆನ್ನದೆ ಸುಖದೊಳೋಲಾಡಿಸು । ವವ ಗಡ ಯಾತರಿಂದಾಯ್ತು ॥ ೩೯ ॥

ಧರೆಯೊಳೊಬ್ಬರನೊಮ್ಮೆ ಕಂಡು ಮತ್ತೊಮ್ಮೆ ಕಂ । ಡರೆ ಮೊದಲನಿತೊಪ್ಪವಿಲ್ಲ ॥
ಭರತೇಶ ದಿನದಿನಕೆಮ್ಮ ನೋಟಕೆ ಹೊಸ । ಪುರುಷನಾಗಿಹ ಪರಿಯೇನು ॥ ೪೦ ॥

ಮಕುಟವರ್ಧನರನಾಳಿದ ನಮ್ಮ ಪ್ರಾಣನಾ । ಯಕನ ಸರ್ವಾಂಗಶೋಭೆಯನು ॥
ಮಕುಟದಿಂದುಂಗುಟ ಮುಟ್ಟ ಬಣ್ಣಿಸುವೆನು । ಶುಕರಾಜ ಕೇಳು ಚೆನ್ನಾಗಿ ॥ ೪೧ ॥

ಪುರುಷಪ್ರಮಾಣದ ಕೇಶವನಡಗಿಸಿ । ಸಿರಿದುರುಬಿಕ್ಕಿ ಚುಂಗೆಸೆಯೆ ॥
ಗರಗರಿಕೆಯೊಳು ಚಿಂಮುರಿಸುತ್ತಿದೊಂದು ಸಿಂ । ಗರವೆ ಸಾಲದೆ ನಮ್ಮ ನೃಪನ ॥ ೪೨ ॥

ನಗೆಯು ಚೆಲ್ವಿಕೆಯು ಮೋಹನಕಾಂತಿರಸವನು । ಮೊಗವೆತ್ತಲಲೆದುದತ್ತತ್ತ ॥
ಮೊಗೆದು ಮೊಗೆದು ಚೆಲ್ಲುವಂತೆ ರಾಯನ ಮುದ್ದು । ಮೊಗವೊಪ್ಪುತಿಹುದರಗಿಳಿಯೆ ॥ ೪೩ ॥

ಪೆರೆನೊಸಲಹುದಾದರಾ ಪೆರೆಯೊಳಗಣ । ಕರೆಯುಸ್ತ್ರವ್ಯಸ್ತವೆಂದದನು ॥
ಜರೆವಂತೆ ಕಸ್ತೂರಿತಿಲಕವೊಪ್ಪದೊಳೆಸೆ । ವರೆಯನ ಪಣೆ ಗೆಲ್ಲದೆನ್ನಾ ॥ ೪೪ ॥

ಕಬ್ಬುವಿಲ್ಲಗೆ ಕಣೆದೊಟ್ಟು ಹೆಂಗಳನೆಸು । ವುಬ್ಬಸವೇಕೆಂದು ಕರೆದು ॥
ಕಬ್ಬುವಿಲ್ಲಗೆ ಹೇಳು ಭರತರಾಜನ ನಿಡು । ಹುಬ್ಬನೋಲೈಸೆಂದು ಗಿಳಿಯೆ ॥ ೪೫ ॥

ತಿಂಗಳ ಬೆಳಗು ಸೋಂಕಲು ಕೂಡೆ ಶಶಿಕಾಂತ । ರಂಗಿಸುವಂತೆಮ್ಮ ನೃಪನ ॥
ಕಂಗಳ ಪ್ರಭೆತಾಗಲೊಡನೆ ಕಾಂತೆಯುರಂತ । ರಂಗವೊಸರುವುದು ಪಕ್ಕಿ ॥ ೪೬ ॥

ಕಂಪಿನುಸುರಿಗೆ ಕವಿದ ತುಂಬಿಗಳ ಸುಖ । ದಿಂಪಾದ ನೃಪನ ನಾಸಿಕಕೆ ॥
ಕಂಪಿಗೆ ಸೋತೆರಗಿದ ಭೃಂಗಗಳ ಕೊಲ್ವ । ಸಂಪಗೆ ಪಾಟಿಯೆ ಕೀರಾ ॥ ೪೭ ॥

ಮಿರುಗುವ ಕನ್ನಡಿಯೊಳು ಹರಹಿದ ಸಣ್ಣ । ಹರುವೆಯು ಬಿತ್ತುಗಳಂತೆ ॥
ತುರುಗಿದ ಬವರಿಯಿಂದೆಸೆವ ಗಲ್ಲಗಳೊಂದು । ಮೆರಹು ಸಾಲದೆ ಚಕ್ರಧರನ ॥ ೪೮ ॥

ಚಿತ್ತದಿಚ್ಚೆಯು ಕರ್ಣದೊಳು ಪೆಂಗಳೊರೆವಾಗ । ಪತ್ತಿದ ಬೆಳುನಗೆಯಂತೆ ॥
ಚಿತ್ತಜರೂಪನ ಕಿವಿಗಳೊಳೆಸೆವುವು । ಮುತ್ತಿನ ಚೌಕುಳಿ ಗಿಳಿಯೆ ॥ ೪೯ ॥

ಕಡೆಗಣ್ಣಕಾಂತಿ ಕರ್ಣಾಭರಣದ ಕಾಂತಿ । ಯೆಡೆಯಾಡಲವನ ಪನ್ನಿಯೊಳು ॥
ಗಡಣಿಸಿ ಕಾರಮುಗಿಲೊಳೆಡೆಯಾಡುವ । ಕುಡುಮಿಂಚಿನಂತಿಹುದಲ್ತೆ ॥ ೫೦ ॥

ಕೊಬ್ಬಿದ ಕೋರಿಜವ್ವನದ ಸೋಂಕಿನ ಮದ । ವುಬ್ಬಿಯೊಸರಿ ಹರಿವಂತೆ ॥
ಹಬ್ಬಿದ ಚೆಲ್ವಮೀಸೆಗಳ ಸಾಲುಗಳದೊಂ । ದೊಬ್ಬುಳಿ ಸಾಲದೆ ಪತಿಯು ॥ ೫೧ ॥

ಮಕರಂದ ತುಂಬಿದ ತಾವರೆ ರವಿಯುದ । ಯಕೆ ಮೆಲ್ಲನರೆದೆರೆವಂತೆ ॥
ಶುಕರಾಜ ಸೊಗಯಿಪುದಲ್ತೆ ಕರ್ಪೂರವೀ । ಟಕೆಯು ಕೆಂಬಾಯ್ದೆರೆ ದೊಳೆಯ ॥ ೫೨ ॥

ಮುತ್ತಿನ ಮಣಿಗಲತೆಗೆಯೂಡಿ ಕುಂಬಳ । ಬಿತ್ತಿನಂದದಿ ಕೊರೆಕೊರೆದು ॥
ಕೆತ್ತಿಸಿದಂತೆಸೆವವನ ಕೆಂಬಲ್ಗಳ । ಬಿತ್ತರವಾರ ಸೋಲಿಸದು ॥ ೫೩ ॥

ಮರಿಗಿಳಿ ಕೇಳೆಮ್ಮ ನೃಪನೊಮ್ಮೆ ನುಡಿಗೆ ಬಾ । ಯ್ದೆರೆಯೆ ಚೆಂದುಟಜಿಹ್ವೆಯಾಟಾ ॥
ನೆರೆ ಕಲ್ಪವೃಕ್ಷದ ತಳಿರು ನೇರಿಲಹಣ್ಣ । ಮರೆಯೊಳಿಹಂತದೆ ಚಿತ್ರಾ ॥ ೫೪ ॥

ಬಿಂಗದ ಕುಪ್ಪಿಗೆಗಿಳಿವ ಕುಂಕುಮದ ನಿ । ರಂಗದಿ ತಾಂಬೂಲರಸವಾ ॥
ನುಂಗುವಾಗಿದಿರಿಗೆ ತೋರುವುದರಸನ । ನುಂಗೊರಳೇನ ಬಣ್ಣಿಪೆನು ॥ ೫೫ ॥

ಬೆಡಗಿನ ಪೆಂಗಳು ಸರಸಕೇಕಾಂತದೊ । ಳೆಡಬಲದೊಳು ನಿಂದು ನೃಪನ ॥
ಮುಡುಹ ಪಿಡಿದು ಜಡಿದುಯ್ಯಲಾಡುವರಾಗಿ । ಮುಡುಹಿಷ್ಟು ಕಠಿಣವಾಗಿಹುದು ॥ ೫೬ ॥

ಮೋಹಿನಿಯರ ಮೋಹಪಾಶ ಹೊಂಬಣ್ಣದ । ರಾಹುಗಳೆನೆ ವೈರಿಶಶಿಗೆ ॥
ರೂಹಿಸಿ ಶೃಂಗಾರವೀರದೊಳಾಜಾನು । ಬಾಹುಗಳೆಸೆದುವಾ ನೃಪನ ॥ ೫೭ ॥

ಅರಲಂಬಗರಸನಿಮ್ಮಡಿ ಚೆಲ್ವನವನೈದು । ಸರಲನಾಂತೊಡೆ ಹತ್ತುಸರಲಾ ॥
ದೊರೆ ಪಿಡಿವುದು ಮೋಡಿಯೆನೆ ಕರಗಳ ಹತ್ತು । ಬೆರಳೆಸೆದುವು ಸರಲದೊಳು ॥ ೫೮ ॥

ಕರತಲಗಳ ಕೆಂಪು ನಖಗಳ ಧಾಳವುಂ । ಗುರಗಳ ರಶ್ಮಿ ಬಿಂಬಿಸಲು ॥
ಬೆರಕೆವರ್ಣದ ತಾವರೆಯ ನಾಳಗಳಂತೆ । ದೊರೆಯ ಭುಜಗಳೊಪ್ಪುತಿಹುವು ॥ ೫೯ ॥

ಭೂವರನಿಕ್ಕಿದ ಹಾರಪದಕದ ರ । ತ್ನಾವಳಿ ನೆರೆದ ಪೇರುರವು ॥
ಲಾವಣ್ಯಜಲಧಿಯ ನಡುವಿದ್ದ ರತ್ನದ । ದೀವಿಯೊಯೆನಲೊಪ್ಪುತಿಹುದು ॥ ೬೦ ॥

ಕುಕ್ಷಿಯುಕ್ಕಳಿಸೆ ಬೆಂಗಡರ್ವುದು ಸಹಜದೊ । ಳೀಕ್ಷಿಸೆ ಪುಟ್ಟಡೊಳ್ಳಿಹುದು ॥
ಪಕ್ಷಿ ಭೂವರನ ತೆಳ್ಪಸಿರೆಸೆವುದು ಜೀವ । ರಕ್ಷೆಯ ತಳಿರೋಯೆಂಬಂತೆ ॥ ೬೧ ॥

ಲಲನೆಯುರಕ್ಷಿಗಳೆಂದೆಂಬ ಮೀಂಗಳು । ಸುಳಿವೊಂದು ಶೃಂಗಾರಜಲದ ॥
ಕೊಳನೋಯೆಂಬಂತೆ ರಾಯನ ನಾಭಿಯಿಹುದರ । ಗಿಳಿಯೆ ಹೇಳದಿರಾರಿಗಿದನು ॥ ೬೨ ॥

ಮರೆಯೇಕೆ ಕೇಳೊಮ್ಮೆ ನೃಪನ ತೆಳ್ಪಸಿರಿನ । ಕಿರುರೋಮರಾಜಿಯ ಕಂಡು ॥
ಇರುಹಿನ ಸಾಲೆಂದು ತೊಡೆದೆನದಕೆ ರಾಯ । ನುರೆನಕ್ಕ ನಾನು ನಾಣ್ಚಿದೆನು ॥ ೬೩ ॥

ವರವಿಜಯೂರ್ಧದಿಕ್ಕೆಲದಾರುಖಂಡವ । ಧರಿಸುವ ಸೂಚನೆಯಂತೆ ॥
ಕೊರಳಲ್ಲಿ ಮೂರು ತೆಳ್ಪಸಿರಲ್ಲಿ ಮೂರು ನ । ಮ್ಮುರಸಗೊಪ್ಪಿಹುವಾರು ರೇಖೆ ॥ ೬೪ ॥

ಬೆಂಗೊಡನಹತ್ತರ್ಗೆ ಬೆಂಗಡೆಯೊಳು ಬಿರ್ದ । ಕಂಗಳ ಕೊಡನು ಹೆಂಗಳಿಗೆ ॥
ಸಂಗರಮಲ್ಲನ ಬೆನ್ನೆಸೆದುದು ವೀರ । ಶೃಂಗಾರವೆರಡೊಡಗೂಡಿ ॥ ೬೫ ॥

ಪೆರರಿಗುಸುರದಿರು ಗಜದ ಕುಂಭದ ಮೇಲೆ । ಮರಿಸಿಂಹನಿಂದ ರೀತಿಯೊಳು ॥
ಪೊರವಾರಗಳು ಕಿರುನಡುವೆಮ್ಮ ಭೂಪಗೆ । ಮೆರೆವುವು ಕೇಳೆಲೆ ಕೀರಾ ॥ ೬೬ ॥

ತೊಡೆಗಳು ಸೋಂಕಿದ ಪೆಂಗಳಾಸ್ಸರಿಕೆಯ । ತೊಡೆವುವು ಕದಳಿಗಳವಕೆ ॥
ಪಡಿಯೆಂಬ ಪದನುಳ್ಳರದ ತೊಡೆ ರಾಯನ । ಕಡುಚೆಲ್ವನರಿದಿರು ವಿಹಗಾ ॥ ೬೭ ॥

ಭೂನುತಕಾಂತಿಗಂಗೆಯ ಕೂರ್ಮಗಳ ಮೇಲೆ । ಮೀನುಗಳೆರಡು ನಿಂದಂತೆ ॥
ಮಾನವಪತಿಯ ಮೇಗಾಲ್ಗಳೆಸೆದು ಮೇಲೆ । ಜಾನುಗಳೆರಡೊಪ್ಪುತಿಹುವು ॥ ೬೮ ॥

ಅಡಗಿದ ಪರಡು ನುಣ್ಮಡ ಸಣ್ಣಬೆರಳೊಪ್ಪ । ವಡೆದ ಪಾವುಗೆವಜ್ಜೆ ನೃಪಗೆ ॥
ಕಡುಪಿನುಗುರ್ಗಳು ಪದತಳಗಳೊಳು ತೊ । ಟ್ಟಿಡುವಂತೆ ಕೆಂಪು ರಂಜಿಸಿತು ॥ ೧೯ ॥

ಹಲ ಕುಲಿಶಾಂಕುಶ ಚಕ್ರ ಚಾಮರ ಶಂಖ । ಕಲಶ ದರ್ಪಣ ಚಾಪ ಗೋಧೆ ॥
ಜಲಜ ಮುಂತಾದ ರೇಖೆಗಳು ರಾಯನ ಕರ । ತಳಪಾದತಳದೊಳೊಪ್ಪಿಹುವು ॥ ೨೦ ॥

ಬೆಳುಮುತ್ತು ಕಾರೆಳ್ಳು ಸುಪ್ರದಕ್ಷಿಣವಾದ । ಸುಳಿ ಕಡೆಗಂಗಳ ಕೆಂಪು ॥
ಕುಳಿಯೊಳೊಂದೊಂದೆ ತೋರುವ ಮೈಯ ರೋಮಸಂ । ಕುಳವೆಸೆದುವು ಚಕ್ರಧರಗೆ ॥ ೨೧ ॥

ಆರಂಗುಲದ ನಡು ನಾಲ್ಕಂಗುಲದ ಕೊರ । ಳೂರಿ ಜಂಘೆಗೆ ಸಲ್ವ ತೋಳು ॥
ಕೀರ ತನ್ನುದ್ದದ ಕೇಶದಿಂದಾ ಗಾಡಿ । ಕಾರನಾಕಾರ ಮೋಹಿಸಿತು ॥ ೨೨ ॥

ತೆರಪಿನ ನೊಸಲು ತೆರಪಿನೆದೆ ಬಲುಬಟ್ಟ । ಪೊರವಾರು ಕಂಬದೊಡೆಗಳು ॥
ಮೆರೆದುವು ಭದ್ರಲಕ್ಷಣಗಳು ಷಟ್ಖಂಡ । ದೆರೆಯನ ಕೋಮಲಾಂಗದೊಳು ॥ ೨೩ ॥

ಗಿಂಡಿಯುಂದದ ನಡು ರತ್ನಮಾಣಿಕ್ಯದ । ಚೆಂಡಿನಂತೆಸೆವ ಮುಡಗಳು ॥ ಹಂಚಡ
ಪಿಂಡಾಯುತ ತುಂಬಿದಮಲಾಂಗದಿಂದ ಭೂ । ಮಂಡಲಾಧೀಶನೊಪ್ಪಿದನು ॥ ೨೪ ॥

ನಗೆಮೊಗ ದೊಡ್ಡ ನಾಸಿಕ ದೊಡ್ಡ ಕಣ್ಣು ಶಾ । ಡಿಗೆ ಮಿಾಸೆ ಬಣ್ಣದುಟಿಗಳು ॥
ಬಗೆಗೊಂಡವೆಮ್ಮರಸನ ತನುವಿನೊಳೆಲೆ । ಖಗರಾಜ ಕಣ್ಗೆ ಮೋಹಿಸುತ ॥ ೨೫ ॥

ಕಾಯದ ಹಿಂಭಾವ ಮುಂಭಾವದಲ್ಲಿ ಮೇ । ಲಾಯ ಕೀಳಾಯವೆಂಬಲ್ಲಿ ॥
ಆಯತವಾಯ್ತು ಚೆಲ್ವಾಯ್ತೆಂಬುದಲ್ಲದೆ । ರಾಯಗೊಂದಿನಿಸುಂಟೆ ಕೊರತೆ ॥ ೨೬ ॥

ತೊಳೆದೊಪ್ಪವಿಟ್ಟಪರಂಜಿಯ ಚೆಲ್ವ ಪು । ತ್ಥಳಿ ಜೀವವಡೆದುದೋಯೆನಿಸಿ ॥
ತೊಳಗಿ ಬೆಳಗಿ ಕಣ್ಗೆ ಪೆಣ್ಗೆ ಕಾಣಿಸಿ ರಾಯ । ತೊಳೆವನೆಮ್ಮಂತರಂಗವನು ॥ ೨೭ ॥

ಕಂಪಿನ ಪುರುಷನೋ ಕಾಂತಿಯ ಪುರುಷನೋ । ಸಂಪಗೆಯೆಸಳ ಪುರುಷನೋ ॥
ತಂಪುಗಾಳಿಯ ಪುರುಷನೊಯೆನೆ ಪೆಣ್ಣದೆ । ಗಿಂಪುದೋರುವನೇನನೆಂಬೆ ॥ ೨೮ ॥

ಉಡಿಗೆ ತೊಡಿಗೆಯಿಂದ ನೀತಿರೀತಿಗಳಿಂದ । ನುಡಿನೋಟಸರಸಗಳಿಂದ ॥
ಅಡಿಗಡಿಗಬಲೆಯರಂತರಂಗದ ತಡೆ । ಯೊಡಯಿಸುತಿಹನೇನನೆಂಬೆ ॥ ೨೯ ॥

ನೋಟಬೇಟದ ನಗೆನುಡಿಯ ಸಿಂಗರದ ಸ । ಘಾಟಕೆಯೊಳಗೆಮ್ಮ ನೃಪಗೆ ॥
ಸಾಟಿಯೆ ಅಮೃತವಾಚಕ ಹೇಳು ಹೇಳೆನ್ನ್ಮ । ಮೋಟುಗಬ್ಬಿನಬಿಲ್ಲಿನವನು ॥ ೩೦ ॥

ಆಯತಾಕ್ಷಿಯರ ಚೆಲ್ವಿಂದ ಸೋಲಿಸುವೆಮ್ಮ । ರಾಯನ ಮುಂದೆಲೆ ಗಿಳಿಯೆ ॥
ಸ್ತ್ರೀಯರನೆಚ್ಚು ಜಯಿಸಿದೊಂದು ಮೂಳವಿ । ಡಾಯವೇತಕೆ ಪಂಚಶರಗೆ ಕಾಯ ॥ ೩೧ ॥

ಗಾಡಿಕಾತಿಯರ ತನ್ನಂಗಶೃಂಗಾರದ । ಗಾಡಿಮೋಡಿಯೊಳು ಗೆಲ್ವೆಮ್ಮ ॥
ಗಾಡಿಕಾರನ ಮುಂದೆ ನುಡಿವರೆ ಡೊಂಕು ಸಿಂ । ಗಾಡಿಯಿಂದೆಚ್ಚು ಗೆಲ್ವನಾ ॥ ೩೨ ॥

ಅಂಗಜನಲಗುದೋರುವನೆಮ್ಮ ರಾಯ ತ । ನ್ನಂಗಕಾಂತಿಯ ತೋರಿ ಗೆಲುವಾ ॥
ಇಂಗಿತಕುಶಲನಾರವನೋ ನಮ್ಮರಸೋ ವಿ । ಹಂಗ ಹೇಳೆನಗಿದ ನೀನು ॥ ೮೩ ॥

ಅಂಗಸೌಂದರದಿಂದ ಹೆಂಗಳ ಗೆಲಬೇಕು । ಸಂಗರದೊಳು ಖಡ್ಗಬೇಕು ॥
ಹೆಂಗಳ ಸಮರಕೆ ಖಡ್ಗವೆ ಹೂವಿನ । ಭಂಗಾರಕಗ್ಣಿಯು ಕಾಹೇ ॥ ೮೪ ॥

ಬಿಂಕದ ಗಿಳಿಯೆ ಕೇಳೆಮ್ಮ ನಾಯಕ ತನ್ನ । ಸೋಂಕಿದಾ ಕ್ಷಣವೆ ನೀರೆಯರ ॥
ಮಂಕುಮಾಡುವ ಮತಿದೋರುವ ಸುಖದಲ್ಲಿ । ತೇಂಕಾಡಿಸುವನೇನನೆಂಬೆ ॥ ೮೫ ॥

ನುಡಿಯಬಾರದು ನುಡಿವೆನು ಕೇಳು ಕೀರ ನ । ವ್ನೊಡೆಯನಂಗನೆಯರ ಸೋಂಕಿ ॥
ನುಡಿಗೆಡಿಸುವ ಕೂಡೆ ನುಡಿಸುವ ನುಡಿಗಳ । ತಡಬಡಗೊಳಿಸಿ ನಗುವನು ॥ ೮೬ ॥

ನೋಡೆಮ್ಮ ರಮಣನಾಟವ ಮುಗುದೆಯನೊಡ । ಗೂಡುವಾಗವಳ ಮುನ್ನೊಮ್ಮೆ ॥
ನೋಡಿಸಿ ನೋಟಗೆಡಿಸಿ ಮತ್ತೆ ನೋಡಿಸಿ । ವೋಡಿಸುವನು ಲಜ್ಜೆಯಿಂದ ॥ ೮೭ ॥

ಹಗಲಿರುಳನು ತನ್ನ ಹೊರೆಯೊಳಿದ್ದಾಗೆವೆ । ದೆಗೆವಷ್ಟು ವೇಳೆಗಾಣಿಸುವಾ ॥
ಅಗಲಿದ ವೇಳೆಯೊಳರೆಘಳಿಗೆಯನೊಂದು । ಯುಗ ಮಾಳ್ಪನಾ ಮಾಯಕಾರಾ ॥ ೮೮ ॥

ಮೈಯೊಳು ಚುಂಬನಕಧರವೆ ಸಿಹಿಯೆಂಬ । ಹುಯ್ಯಲಂತಿರಲಿ ಕೇಳವನ ॥
ಮೈಯೆಲ್ಲ ಸಿಹಿಯೆಂದರೇನ ಹೇಳಲಿ ನನ್ನ । ಬಯ್ಯದಿರೆಲೆ ಪಚ್ಚೆವರ್ಣಾ ॥ ೮೯ ॥

ನಾಸಿಕದುಸುರು ಕಂಪೆಂಬರು ಗಂಧವ । ಪೂಸಿ ಕಂಪೆಂಬರೆಲ್ಲರೊಳು ॥
ಆ ಸೊಬಗನ ತನುವೆಲ್ಲ ಸಹಜ ದಿವ್ಯ । ವಾಸನೆ ಯೇನ ಬಣ್ಣಿಪೆನು ॥ ೯೦ ॥

ಒಲಿದವಳೋಪನ ಹಲವು ಚಂದದಿ ಪೊಗ । ಳ್ದಲಿದಳೆಂದೆನದಿರು ಗಿಳಿಯೆ ॥
ಮಲಮೂತ್ರವಿಲ್ಲದ ದಿವ್ಯದೇಹಿಯ ಗುಣ । ಗಳ ಪೇಳಲಾನೆಷ್ಟರವಳು ॥ ೯೧ ॥

ಪೃಥಿವೀಪತಿಯು ಕಂಡು ಹೆಚ್ಚಿಬ್ಬಗೊಂಡಿಂತು । ಕಥಿಸಿದಳೆನದಿರು ಖಗವೆ ॥
ಪ್ರಥಮತೀರ್ಥೇಶನ ಹಿರಿಯಕುಮಾರನ । ಕಥನವ ಪೇಳ್ವಳು ನಾನೇ ॥ ೯೨ ॥

ನಲ್ಲರ ದೇವ ನೀರರ ದೇವ ಕಲೆಗಳ । ಬಲ್ಲರ ದೇವನೆಂದೆಂಬ ॥
ಸೊಲ್ಲಿಗೆ ತಕ್ಕವನಿಳೆಗೊಬ್ಬ ಭರತೇಶ । ನಲ್ಲವೆ ಹೇಳರಗಿಳಿಯೆ ॥ ೯೩ ॥

ಗಂಡರಗಂಡ ಚೆಲ್ವರ ಗಂಡ ಮಲೆವರ । ಹಿಂಡಿನ ಗಂಡನೆಂದೆಂಬ ॥
ಕೊಂಡಾಟಕೊಪ್ಪುವನೊಬ್ಬನೀ ಧರೆಗೆಮ್ಮ । ಗಂಡನಲ್ಲದೆ ಪೆರರುಂಟೆ ॥ ೯೪ ॥

ಕಬ್ಬುವಿಲ್ಲಿಲ್ಲದ ಕಂದರ್ಪ ಕರೆ ಮೈಗೆ । ಹಬ್ಬಿದೋರದ ಪೂರ್ಣಚಂದ್ರ ॥
ಗಬ್ಬುಜವ್ವನೆಯರ ಕಣ್ಣನೋಟದ ಹೊಸ । ಹಬ್ಬವಲ್ಲವೆ ನಮ್ಮ ರಾಯ ॥ ೯೫ ॥

ಅವನ ಗುಣವನವನೊಪ್ಪುವ ಕಡೆಗಂಡು । ವಿವರಿಸಲೆನ್ನಳವಲ್ಲ ॥
ಇವು ಸೂಚನಾರ್ಥವರ್ಣನೆಗಳೆಂದರಿದು ನೀ । ನವಧರಿಸಮೃತವಾಚಾಂಕಾ ॥ ೯೬ ॥

ನಿನ್ನೊಳಗಿರಲಿ ನಾ ನುಡಿದ ನುಡಿಗಳಿವ । ನನ್ನಿಗರಿಂಗೆ ಹೇಳಬೇಡ ॥
ನನ್ನವನೆಂದು ನಿನ್ನೊಡನೆ ಹೇಳಿದೆನಲ್ಲ । ದಿನ್ನೊಬ್ಬರಿಂಗೆ ಹೇಳ್ವಳಲ್ಲ ॥ ೯೭ ॥

ಅಹುದಲ್ಲವೆನ್ನದೆ ಸುಮ್ಮನಿರ್ದಪೆಯೆಲೆ । ವಿಹಗ ಪೇಳ್ನಿನ್ನಯ ಮನಕೆ ॥
ಬಹವೊ ಬಾರವೊ ನನ್ನ ನುಡಿಗಳೆಂದಸಿಯಳಾ । ಗ್ರಹಿಸಿ ಕೇಳಿದಳದರೊಡನೆ ॥ ೯೮ ॥

ಅಕ್ಕ ನಿನ್ನೀ ನುಡಿ ನನ್ನ ಚಿತ್ತಕೆ ಬಾರ । ದಕ್ಕಟ ಬಂದರುಸುರೆನೆ ॥
ಪಕ್ಕಿಗೇತಕೆ ಬಹುದೀ ಜಾಣ್ಮೆಯೆಂದುದು । ಚೊಕ್ಕಮಾತಿನ ರಾಜಕೀರಾ ॥ ೯೯ ॥

ಧರೆಯೊಳೆಲ್ಲರ ನಡೆನುಡಿಗಳ ಕಲಿವೆನೆಂ । ದರೆ ಬಹವಕ್ಕ ಕೇಳ್ನಿಮ್ಮ ॥
ಪುರುಷನ ನಡೆನುಡಿ ನಿಮ್ಮಯ ನಡೆನುಡಿ । ಪರರಿಗೆ ಬಾರವಕ್ಕ ॥ ೧೦೦ ॥

ಅದರಿಂದ ಸುಮ್ಮನಾಲಿಸುತಿದ್ದೆನಕ್ಕ ನೀ । ನೊದವಿ ಪೇಳೆಂದ ಮೇಲೆನ್ನ ॥
ಎದೆಯುರಿದನಿತ ಸೊಲ್ಲಿಪೆನು ಕೇಳೆಂದುದಿಂ । ತಿದು **ರಾಜಲಾವಣ್ಯಸಂಧಿ** ॥ ೧೦೧ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೦೨ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾನೋದವ್ವೆದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೦೩ ॥

ಘೋರಸಂಸಾರಕಾಂತಾರದಾವಾನಲ । ಚಾರುಕೈವಲ್ಯ ಮಾಂಗಲ್ಯ ॥
ಕೋರೈಸುತೆನ್ನಂತರಂಗದೊಳಿರು ಮೇರು । ಧೈರ್ಯ ಚಿದಂಬರಪುರುಷಾ ॥ ೧೦೪ ॥

ರಾಜಲಾವಣ್ಯಸಂಧಿ ಸಂಪೂರ್ಣಂ

# ಅರಗಿಳಿಯಾಳಾಪಸಂಧಿ.

ಭವ್ಯರ ಮೆಚ್ಚೆ ನಿರ್ಭವ್ಯರಿಗೆದೆಗಿಚ್ಚೆ । ಅವ್ಯಯಸಿದ್ಧಿಯ ನೊದಲೆ ॥
ಸುವ್ಯಕ್ತಮತಿದೋರು ಸುಖದೋರು ಸನ್ಮುನಿ । ಸೇವ್ಯ ನಿರಂಜನಸಿದ್ಧಾ ॥ ೧ ॥

ಕೇಳಕ್ಕ ಕುಸುಮಾಜಿ ನಿನ್ನ ಮುಂದಿಂತೆಂದು । ಹೇಳುವ ದಕ್ಷ ನಾನಲ್ಲ ॥
ಹೇಳೆಂದು ನೀನೆಂದ ಮೇಲೆ ನಿನ್ನಾಜ್ಞೆಯ । ತಾಳಿ ನುಡಿವೆನು ಬಲ್ಲನಿತಾ ॥ ೨ ॥

ಅಕ್ಕ ನೀನಾಡಿದ ನುಡಿಯೆಲ್ಲ ನೃಪತಿಗೆ । ತಕ್ಕವಲ್ಲದೆ ಟೊಳ್ಳಿಯುಂಟೆ ॥ಹಾರಕೆ
ಮುಕ್ಕೊಡೆಯೊಡೆಯನ ಹಿರಿಯ ಪುತ್ರಗೆ ದಶ । ದಿಕ್ಕಿನೊಳೆಣೆಯಹರಾರು ॥ ೩ ॥

ಅವನಿಗೆ ರಾಜನಾದವನಿಗೆ ಸಾಟಿಯಿ । ಲ್ಲವನಿಗೆ ರಾಣಿಯರಾದ ॥
ನಿವಗೆಣೆಯಿಲ್ಲ ನಿಮ್ಮೊಡನಾಡಿಪಾಡಿದ । ನವಗಾರು ಸರಿಯೆಂದುದೊಡನೆ ॥ ೪ ॥

ಭೂವಳಯಾಂಬಿಕೆಯಲ್ತೆಯಶಸ್ವತಿ । ದೇವಿ ಪಡೆದಳಾ ನೃಪನಾ ॥
ನೀವೆಲ್ಲರಾವ ನೋಂಪಿಯ ಫಲದಿಂದ ಮಾ । ದೇವಿಯರಾದಿರೆಂದರಿಯೆ ॥ ೫ ॥

ಉತ್ತಮಪುರುಷನುತ್ತಮಸತಿಯರು ಕೂಡ । ಲುತ್ತಮವದು ನೋಡುವಾಗ ॥
ಉತ್ತಮಕನಕದೊಳುತ್ತಮಮಣಿಗಳ । ತೆತ್ತಿಸಿದಂತಹುದಕ್ಕಾ ॥ ೬ ॥

ಎಳೆವರೆಯದ ಪುರುಷನನೆಳೆವೆಂಗಳು । ನಲಿದೊಪ್ಪಿದೊಂದು ವಿಲಾಸ ॥
ಎಳೆಮಾವನಪ್ಪಿದ ದುಂಡಮಲ್ಲಿಗೆಗಳಂ । ತಿಳಿಗೊಪ್ಪುತಿಹುದಂಬುಜಾಕ್ಷಿ ॥ ೭ ॥

ರಾಜಪುರುಷನೊಳು ರಾಜೀವವದನದ । ರಾಜಾಂಗನೆಯರೊಪ್ಪಿರಲು ॥
ಜಾಜಿಯಲತೆಗಳು ವನದೊಳಶೋಕೆಯ । ಭೂಜವನಪ್ಪಿದಂತಿಹುದು ॥ ೮ ॥

ಅಲ್ಪಮಧ್ಯೆಯರು ನೀವಾ ಭರತೇಶನ । ತೋಳ್ಪಸರದೊಳೆಸೆವಾಗ ॥
ಕಲ್ಪವೃಕ್ಷವ ಕಲ್ಪಲತೆಗಳಡರಿದ ಸಂ । ಕಲ್ಪದೊಳೆಮಗೆ ತೋರುತದೆ ॥ ೯ ॥

ಮಲಯಜಗಂಧನ ಕರ್ಪೂರಗಂಧಿಯ । ರೆಳಸಿ ನೀವಪ್ಪಿದ ಭಾವ ॥
ಮಲಯಜವೃಕ್ಷವನೇಳೆಲೆವಾಳೆಗ । ಳೊಲಿದಡರ್ದಂತೆ ತೋರುತದೆ ॥ ೧೦ ॥

ಪುರುಷರೊಳವ ರತ್ನ ಸ್ತ್ರೀಯರೊಳಗೆ ನೀವು । ಸುರುಚಿರರತ್ನಗಳಕ್ಕಾ ॥
ಬೆರಸಿದ ಬಗೆಯಿದು ರತ್ನರತ್ನವ ಕೂಡಿ । ಸರಮಾಡಿದಂತೆ ತೋರುತಿದೆ ॥ ೧೧ ॥

ಪತಿ ಹೊಲ್ಲ ಸತಿ ಲೇಸು ಸತಿ ಹೊಲ್ಲ ಪತಿ ಲೇಸೆಂ । ಬತಿವಿಕೃತಿಗಳುಂಟು ಪರರ್ಗೆ ॥
ಪತಿ ಲೇಸು ಸತಿಯರು ಲೇಸು ಲೇಸೆಂಬಂತೆ । ನುತಿವೆತ್ತರಾರು ನಿಮ್ಮಂತೆ ॥ ೧೨ ॥

ಕಲೆಯನರಿವ ಪುರುಷನ ಪಡೆವುದು ಪೂರ್ವ । ದೊಳು ನಾರಿ ಮಾಡಿದ ಪುಣ್ಯ ॥
ಕಲೆಗನುಕೂಲೆಯ ಪಡೆವುದಾ ಪುರುಷನ । ಬಲು ಪುಣ್ಯವಕ್ಕ ನಿನ್ನಾಣೆ ॥ ೧೩ ॥

ಜಾಣೆ ಜಾಣನು ಕೂಡಲದು ತಂತಿಗೂಡಿದ । ವೀಣೆಯು ನುಡಿಸಿದಂತಿಹುದು ॥
ಜಾಣೆ ಹೆಡ್ಡನು ಕೂಡಲಿಹುದದು ವೀಣೆಗೆ । ನೇಣ ಬಿಗಿದು ಮಿಡಿದಂತೆ ॥ ೧೪ ॥
ನೀರೆ ನೀರ್ರನ ಕೂಟ ನೃಪನ ಸಾಂಬ್ರಾಣಿಯು । ಯೇರಾಟದಂತಿಹುದಕ್ಕಾ ॥
ನೀರನು ಜಡಸತಿಯೊಳು ಕೂಡೆ ನೃಪನೆತ್ತಿ । ನೇರಾಟದಂತಿಹುದಲ್ತೆ ॥ ೧೫ ॥
ನೇಮದಾಣವ ಬಲ್ಲ ನೀರೆ ನೀರನ ಕೂಟ । ಕಾಮನ ರತಿಯಾಟದಂತೆ ॥
ಕಾಮಾತುರವಮಾತ್ರದವರಾಟ ಸೊಗಸಲ್ಲ । ಪಾಮರಜನದಾಟದಂತೆ ॥ ೧೬ ॥
ಸರಸಕಲೆಯು ಬಲ್ಲ ಸತಿಪುರುಷರ ಕೂಟ । ಗರುಡಿಕಾರರ ಕೂಟದಂತೆ ॥
ತ್ವರಿತಸುಖಾತುರಿಗರ ಕೂಟ ಡಾಣೆಯು । ಪರಿವಾರಗಳ ಕೂಟದಂತೆ ॥ ೧೭ ॥

ಹೊತ್ತನರಿಯಬೇಕು ಹೊಲಬನರಿಯಬೇಕು । ಚಿತ್ತದ ನೆಲೆಗಾಣಬೇಕು ॥
ಹೊತ್ತುಹೊತ್ತಿಗೆ ಹೊಸಪರಿಯ ಸಿಂಗರಬೇಕು । ಉತ್ತಮಸುಖಿಗಳಂಗವಿದು ॥ ೧೮ ॥
ರಮಣನ ಸಿಂಗರ ರಮಣಿಯ ಕಣ್ಣಾರ್ತಿ । ರಮಣಿಯ ಸಿಂಗರ ತನ್ನ ॥
ರಮಣನ ಕಣ್ಣಾರ್ತಿಯೆಂದಂಗಶೃಂಗಾರ । ಗಮಕದ ಗಾಡಿ ಬೇಕಕ್ಕ ॥ ೧೯ ॥
ಯೋಚನೆ ಬೇಕು ಗಂಭೀರ ಬೇಕುಗ್ರತ್ವ । ಮೋಚನೆ ಬೇಕೋಜೆ ಬೇಕು ॥
ಆಚಾರಶೀಲ ಬೇಕುತ್ತಮಭೋಗದೊ । ಳಾಚರಿಸುವರ ಮಾರ್ಗವಿದು ॥ ೨೦ ॥
ದೀಪನಾಗ್ನಿಯ ಹವಣರಿದುಂಬನಂತೆ ಸಂ । ತಾಪವರಿದು ಕಾಮಸುಖವಾ ॥
ವ್ಯಾಪಿಸಬೇಕಲ್ಲದತಿರತಿ ಸಲ್ಲದು । ಪಾಪಭೀರುಗಳ ಭೋಗವಿದು ॥ ೨೧ ॥
ಮದವೆದ್ದ ಜವ್ವನವೆತ್ತಿದಷ್ಟನೆ ಸುರ । ತದೊಳು ಭೋಗಿಸಿ ಬಿಡಬೇಕು ॥
ಮದನಕಾಮೇಶ್ವರಿ ಮೊದಲಾದ ತಂತ್ರದಿಂ । ದದನತಿ ಹೆಚ್ಚಿಸ ಸಲ್ಲ ॥ ೨೨ ॥
ಸೇವಿಸಿದನ್ನಪಾನದ ಶಕ್ತಿಯಿಂದ ಸ್ವ । ಭಾವದೊಳಹ ಸುಖ ಸೊಗಸು ॥
ದ್ರಾವಣಸ್ತಂಭನ ಮೊದಲಾದ ತಂತ್ರಸಂ । ಭಾವಿತಸುಖ ತಾನೆ ದುಃಖ ॥ ೨೩ ॥
ನವಯವ್ವನಶಕ್ತಿಯಿಂದಾದ ರತಿಸುಖ । ದಿವಿಜಗಂಗೆಯ ಜಲದಂತೆ ॥
ಕವಳಮದ್ದುಗಳ ಶಕ್ತಿಯೊಳಾದ ಸುಖವದು । ಲವಣವಾರ್ಧಿಯ ಜಲದಂತೆ ॥ ೨೪ ॥
ತೊಡೆಸೋಂಕಿ ಸಹಜದಿಂದೊಲಿಸದೆ ಲೇಪನ । ದೊಡೆದೊಂದಿ ಕೆಲರೊಲಿಸುವರು ॥
ಕಡೆಮುಟ್ಟ ನಿಲದೆಡೆಯೊಳು ಬಯಲಹುದದು । ತೊಡಹದ ಮೋಹ ನಿಂದಪುದೇ ॥ ೨೫ ॥
ಇದ್ದ ಸಹಜಶಕ್ತಿಯಿಂದನುಭವಿಸದೆ । ಮದ್ದಿನ ಬಲದಿಂದ ರಮಿಸೆ ॥
ಖಿದ್ದಿಸೆ ನಷ್ಟೇಂದ್ರಿಯ ಮೊದಲಾದುವು । ಹೊದ್ದಿ ನೋಯಿಸುವುವು ಕೂಡೆ ॥ ೨೬ ॥
ಹುಣ್ಣಲ್ಲದನ್ನವನುಂಡರಜೀರ್ಣಸಂ । ಭವಿಸಿ ನೋಯಿಸುವಂತೆ ಮದದ ॥
ಹವಣರಿಯದತಿರತಿಯಾಗೆ ರೋಗ ಹು । ಟ್ಟುವುದಾಯುಶ್ಶಕ್ತಿ ಕೆಡುವುದು ॥ ೨೭ ॥

ಒಗೆದ ಕ್ಷಾತ್ರರ ತಗ್ಗುವನಿತ ಭೋಗಿಸಲದು । ಸೊಗಸು ವೆಗ್ಗಳಿಸಿ ಭೋಗಿಸಲು ॥
ಧಗೆಯುಹುದಾಸರಹುದು ಮತಿಗೆಡುವುದು । ಪಗೆಯುಹುದಾ ಸುಖ ತನಗೆ ॥ ೨೮ ॥

ನೋಟಸರಸನುಡಿಯೊಳು ಹೊತ್ತು ಸಲಬೇಕು । ಕೂಟವೆಂಬುದು ಸ್ವಲ್ಪಕಾಲ ॥
ನಾಟಿದರದುಸುಖ ವೆಗ್ಗಳಿಸಿದರೆದೆ । ಗೋಟಲೆಯಲ್ಲದೆ ಸುಖವೆ ॥ ೨೯ ॥

ಒಳಗರಿದೊಲವರಿದಂತರಂಗದ ಶಕ್ತಿ । ಯಲಗಿ ಕೂಡುವ ಕುಶಲರಿಗೆ ।
ಗೆಲವಹುದಾನಂದವಹುದರಿವಹುದು ಪ್ರ । ಜ್ವಳಿಸುತಿಹುದು ಮುಖಕಾಂತಿ ॥ ೩೦ ॥

ಕರಣೇಂದ್ರಿಯಂಗಳ ಕಂಗೆಡಿಸದೆ ತರ । ಹರಕೆ ತಂದನುಭವಿಸಿದರೆ ॥
ಸರಸಕವಿತ್ವವಹುದು ಗಾನವಹುದು ಸಿಂ । ಗರದ ವಿಡಾಯ ಮೆರೆವುದು ॥ ೩೧ ॥

ದಣಿದು ರತಿಕ್ರೀಡೆಯಿಂದಾದ ಸುಕವಿತ್ವ । ಗಣಿಕೆಯ ಶೃಂಗಾರದಂತೆ ॥
ಗಣಶಬ್ದರಚನೆಯ ಛಾಂದಸಕವಿತೆ ಬ್ರಾ । ಹ್ಮಣಿತಿಯ ಶೃಂಗಾರದಂತೆ ॥ ೩೨ ॥

ಚಿತ್ತಸೋಲದೊಳೊರ್ವರೊರ್ವರೊಲಿದು ಕೂಡ । ಲುತ್ತಮಸುಖವದು ಸೊಗಸು ॥
ಒತ್ತಂಬದಿಂದ ಬೇಸರಿಪುದು ಕೊರಳಿಗೆ । ಕತ್ತಿಯಾನಿಸಿ ಕೂಡುವಂತೆ ॥ ೩೩ ॥

ಪೆಣ್ಗಂಡುಗಳು ಮನಕರಗಿ ಕೂಡಿದೊಡಚ್ಚ । ವಣ್ಗಳ ಸವಿನೋಡಿದಂತೆ ॥
ನಾಣ್ಗೆಟ್ಟು ಶಕ್ತಿಯಿಂದೊತ್ತಿ ಕೂಡಿದರೊತ್ತು । ವಣ್ಗಳ ಸವಿದಂದವಲ್ತೆ ॥ ೩೪ ॥

ಗುಣಕೆ ಸೋತೊರ್ವರೊರ್ವರು ಕೂಡೆ ನೀರೊಳ । ಗಣ ಗುಂಡನೆತ್ತುವಂತಿಹುದು ॥
ಹಣಹೊನ್ನ ಶಕ್ತಿಯು ರತಿಯಾಟ ನೆಲದ ಮೇ । ಗಣ ಗುಂಡನೆತ್ತುವಂತಲ್ತೆ ॥ ೩೫ ॥

ಸಮರೂಪ ಸಮಪ್ರಾಯ ಸಮಗುಣಗಣ ನಿಮ್ಮ । ರಮಣಗು ನಿಮಗು ಚೆನ್ನಾಗಿ ॥
ಸಮನಿಸಿತದರಿಂದ ನಿಮಗನ್ಯೋನ್ಯ ಸಂ । ಭ್ರಮ ಮೋಹ ದೊರೆಕೊಂಡುದಕ್ಕಾ ॥ ೩೬ ॥

ರೂಪಿಂದ ಸೋಲಿಸಿದನು ಮತ್ತೆ ಸರಸಕ । ಲಾಪದಿಂದೆದೆಗೊಳಿಸಿದನು ॥
ಭೂಪರೂಪಿನ ಮನಸಿಜ ನಿಮ್ಮ ಮನವ ಸ । ರ್ವಾಪಹರಣವ ಮಾಡಿದನು ॥ ೩೭ ॥

ಎಲ್ಲರೊಳಗೆ ನೋಡುವಾಗ ನೀನೇ ನಿನ್ನ । ನಲ್ಲಗೆ ನೆರೆಸೋತಳಹುದು ॥
ಅಲ್ಲಾದರರಸನನಿಂತು ಬಣ್ಣಿಪ ಮುದ್ದು । ಸೊಲ್ಲೇಕೆ ಬಹವಕ್ಕ ನಿನಗೆ ॥ ೩೮ ॥

ಮನಮೆಚ್ಚಿದೆಡೆಯಲ್ಲಿ ತನುಮೆಚ್ಚುವುದು ನುಡಿ । ಯನುಕೂಲವಹುದದರಿಂದ ॥
ಮನದಿಚ್ಚೆಯರಸನ ಪೊಗಳಿದೆ ಲೇಸು ಸ । ಜ್ಜನಸತಿಯುರತಲೆವಣಿಯೆ ॥ ೩೯ ॥

ನೀನೇನ ನುಡಿವೆ ನಿನ್ನಿನೆಯನ ಲಾಲನೆ । ತಾನೇ ನುಡಿಸಿತಕ್ಕ ನಿನ್ನ ॥
ಆನಂದರಸವ ತನ್ನೆದೆಗಿತ್ತ ಪುರುಷನ । ಮಾನಿನಿ ಬಣ್ಣಿಸದಿಹಳೆ ॥ ೪೦ ॥

ಕಷ್ಟಪುರುಷನ ಕಷ್ಟಾಂಗನೆಯರು ಕೇಳ್ದು । ದೆಷ್ಟಾದರುಂಟು ಲೋಕದೊಳು ॥
ಶಿಷ್ಟಪುರುಷನ ಶಿಷ್ಟಾಂಗನೆಯರು ಪೇಳ್ದು । ದಿಷ್ಟೆ ದುರ್ಲಭ ಕಾಣ್ಬರೆಮಗೆ ॥ ೪೧ ॥

ಸೂರೆಹೋದುದು ನಿನ್ನ ಮನವೆಲ್ಲವಾ ಗಾಡಿ । ಕಾರಗೆ ಭರತೇಶಗಕ್ಕಾ ।
ಬೇರಿನ್ನು ಕೇಳಲೇತಕೆ ನಿನ್ನ ನುಡಿಗಳೆ । ಸಾರುತಿದ್ದಪುವು ನಿನ್ನೊಳಗಾ ॥ ೪೨ ॥

ನಿಜಪುರುಷನ ನಿಜಸತಿ ಮೆಚ್ಚಲಾಕೆಯ । ತ್ರಿಜಗದೊಳಾರು ಬಣ್ಣಿಪರು ॥
ಸುಜನರ ಚರಿತಕೆ ಸೋಲ್ವುದೆನ್ನದೆ ಸರ । ಸಿಜಮುಖಿ ಕೇಳು ನಿನ್ನಾಣೆ ॥ ೪೩ ॥

ಕೇಳುತಿದ್ದಳು ಕುಸುಮಾಜಿಯಾ ಗಿಳಿಯ ವಾ । ಗ್ಜಾಲದ ಮರ್ಮಕಲೆಗಳಾ ॥
ಈ ಲೇಸು ಹೊಸತಿದು ಗಿಳಿಯಲ್ಲವೆಂದಾಗ । ಳಾಲೋಚನೆಯ ಮಾಡಿದಳು ॥ ೪೪ ॥

ಕಲಿಸಿದಷ್ಟನೆ ನುಡಿವುದು ಪಕ್ಕಿಗುಳ್ಳುದೀ । ಗಿಳಿ ಹೊಸಕಲೆಯ ತಾನೆನಗೆ ॥
ಕಲಿಸುತಿದ್ದಪುದಿದು ಗಿಳಿಯಲ್ಲವೆಂದು ತ । ನ್ನೊಳಗೆ ತಾ ನೆನೆದಳಾ ಜಾಣೆ ॥ ೪೫ ॥

ವ್ಯಂತರನಾಗಲಿ ಸುರನಾಗಲಿದರ ದೇ । ಹಾಂತರಾಳದೊಳೆಡೆಗೊಂಡು ॥
ಇಂತು ನುಡಿವನಾಗಬೇಕೆಂದು ನೆನೆದಳಾ । ಕಾಂತೆ ತಾನೇನು ಕೋವಿದೆಯೊ ॥ ೪೬ ।

ಆವರೊಳು ಪುರುಷರ ನುಡಿಯಲ್ಲವೀ ನುಡಿ । ಯುವತಿಯ ನುಡಿಯುದರಿಂದ ॥
ಇವಳಾವಳೆಂಬುದನರಿವೆ ನಾನೆಂದಾಕೆ । ಸವಿನುಡಿಯಿಂದ ಕೇಳಿದಳು ॥ ೪೭ ॥

ಪಕ್ಕಿ ನಿನ್ನೀ ನುಡಿ ಸತ್ಯ ನಿನ್ನಯ ವೇಷ । ಠಕ್ಕಾಗಿ ನನಗೆ ತೋರುತಿದೆ ॥
ಚಿಕ್ಕ ವೇಷವ ಬಿಟ್ಟು ದೊಡ್ಡ ವೇಷವ ತೋರಿ । ಚಕ್ಕನೆನ್ನೊಡನೆ ಮಾತಾಡು ॥ ೪೮ ॥

ಚಿಕ್ಕ ವೇಷವದು ಚಿಕ್ಕಂದೆ ಹೋದುದು ನನ । ಗಕ್ಕ ಕೇಳಿದೆ ದೊಡ್ಡವೇಷ ॥
ಠಕ್ಕಿನ ವೇಷವಲ್ಲಿದು ಸತ್ಯವೇಷವೆಂ । ದುಕ್ಕಿ ನಗುತ ಪೇಳ್ದುದೊಡನೆ ॥ ೪೯ ॥

ಚದುರರ ಕೂಡತಿಚಾತುರ್ಯ ಸಲ್ಲದು । ಸುದತಿಯಲ್ಲವೆ ನೀನು ನಿನ್ನ ॥
ಸದಮಲಾಕಾರವ ತೋರೆಂದು ನುಡಿದಳಾ । ಚದುರರ ದೇವನರ್ಧಾಂಗಿ ॥ ೫೦ ॥

ಛೋಂಕನೆ ಗಿಳಿಯ ಕೆಲದೊಳನುಪಮರತ್ನ । ಸಂಕುಲಭೂಷಣವೆಸೆಯೆ ॥
ಕುಂಕುಮವರ್ಣದ ಕೋರಿಜವ್ವನದೊರ್ವ । ಪಂಕಜಾನನೆ ನಿಂದಳಾಗ ॥ ೫೧ ॥

ಮರಸಿಕೊಂಡಿರ್ದ ತನ್ನಾಕಾರವ ದೇವಿ । ಯರಿದ ಜಾಣ್ಮೆಗೆ ಮೆಚ್ಚಿ ನಗುತ ॥
ನೆರೆ ಶೀಲವತಿಯನೀಕ್ಷಿಸುತ ನಿಂದಳು ಕಾಂತಿ । ಗರೆವುತ ತನ್ನ ದೇಹದೊಳು ॥ ೫೨ ॥

ಅಬಲೆ ನೀನಾರಿಲ್ಲಿಗೇತಕೆ ಬಂದೆ ಯೆಂ । ದಬುಜಾಕ್ಷಿ ಬೆಸಗೊಂಡಳವಳಾ ॥
ಸೊಬಗೆ ಕೇಳಾನು ವ್ಯಂತರಕನ್ನೆ ಗಿರಿವನ । ಶಿಬಿರದೊಳಿಹೆನೆಂದಳಾಕೆ ॥ ೫೩ ॥

ಲೀಲಾರ್ಥ ಗಗನದೊಳಗೆ ಹೋಗುತಿರ್ದೆನು । ಬಾಲೆ ನೀನೀ ಗಿಳಿಯೊಡನೆ ॥
ಸೂಳುನುಡಿವುತಿರೆ ಬಂದೆನಾ ನುಡಿಗಳ । ಕೇಳಲೆನಗೆ ಪ್ರೀತಿಯಾಗಿ ॥ ೫೪ ॥

ಕನ್ನಡಹಕ್ಕಿಯಂಗವ ಹೊಕ್ಕು ನಿಜರೂಪ । ನನ್ನಲ್ಲಿ ಕುಸುಮಾಜಿ ಮಾಜಿ ॥
ನಿನ್ನೊಡನುಸುರುತಿದ್ದೆನು ನೀನು ತಿಳಿದುದು । ಚೆನ್ನಾಯ್ತು ಜಾಣನರ್ಧಾಂಗಿ ॥ ೫೫ ॥

ರೂಪು ಯೌವನ ಜಾಣ್ಮೆ ಸಿರಿಯು ಪಡೆಯುಬಹು । ದೀ ಪತಿಭಕ್ತಿಸಂಪದವಾ ॥
ಆ ಪುರುಷೋತ್ತಮನರ್ಧಾಂಗಿಯರಿರ ನೀ । ವೇ ಪಡೆದಿರಿ ಪರಗುಂಟಿ ॥ ೫೬ ॥

ಜಿನನ ಕುಮಾರನವನು ನೀವಾತನ । ವನಿತೆಯರದರಿಂದ ನಿಮ್ಮ ॥
ಅನುಪಮಚರಿತವೆಂಬುದು ನಿಮಗಲ್ಲದೆ । ಮನುಜರೆಲ್ಲರಿಗೇಕೆ ಬಹುದು ॥ ೫೭ ॥

ಆ ರಾಯ ನವಗೆರವಲ್ಲವೆಂತೆನೆ ಪರ । ನಾರಿಸಹೋದರನೆಂಬ ॥
ವಾರತೆಯುಂಟದರಿಂದೆಮಗಣ್ಣನು । ನಾರಿ ಕೇಳೆಂದಳಾ ದಿವಿಜೆ ॥ ೫೮ ॥

ಅಕ್ಕ ಕೇಳಿಂದಿಷ್ಟು ಹೊತ್ತು ಗಿಳಿಯ ವ್ಯೆಯು । ಹೊಕ್ಕು ಪೇಳ್ದುದು ಗಿಳಿಗಿರಲಿ ॥
ಚೊಕ್ಕ ನೀನತ್ತಿಗೆ ನಾದುನಿಯೆಂದೆಂಬ । ಲೆಕ್ಕವಿರಲಿ ನಿನಗೆನಗೆ ॥ ೫೯ ॥

ಅತ್ತಿಗೆ ಕೇಳು ನನ್ನಣ್ಣಾಜಿಯೊಳು ನೀನು । ಚಿತ್ತವಿತ್ತುದ ಕಂಡು ನನ್ನ ॥
ಚಿತ್ತ ಮೆಚ್ಚಿತು ಮೆಚ್ಚಿ ನಿನಗೆ ನಾನೀವುದೇ । ನುತ್ತಮಗುಣಭೂಷಣಾಂಗಿ ॥ ೬೦ ॥

ನವನಿಧಿಗೊಡೆಯನೆನ್ನಣ್ಣಾಜಿ ನಿನಗಭಿ । ನವಭೂಷಣವ ಮುನ್ನಿತ್ತಾ ॥
ಸುವಿನಯದಿಂದೊಂದ ನಾನೀವೆನೆಂದರು । ಯುವತಿ ನೀನೊಲ್ಲೆ ನಾ ಬಲ್ಲೆ ॥ ೬೧ ॥

ಉಡಿಗೆತೊಡಿಗೆಯೊಂದ ಕೊಡುವೆ ನೀಡುವೆನೆಂಬ । ನುಡಿ ಸಾಕು ನಿನಗೊಂದು ಚಿಂತೆ ॥
ಎಡೆಗೊಂಡ ವೇಳೆಯೊಳೆನ್ನ ನೆನೆವುದೆಂದು । ನುಡಿದಳು ಬಯಲಾದಳೊಡನೆ ॥ ೬೨ ॥

ಚಿಕ್ಕಸಬಟ್ಟಿಳು ಕುಸುಮಾಜಿ ಕೆಲಬಲ । ದಿಕ್ಕ ನೋಡಿದಳು ಮತ್ತಿನಿಸು ॥
ನಕ್ಕಳು ಜಿನಸಿದ್ಧಯೆಂದಳಪ್ಸರೊಳು ಹೆ । ಮ್ಮಕ್ಕಳಾಟಕೆ ಬಂದರೊಸೆದು ॥ ೬೩ ॥

ಬಂದಕ್ಕತಂಗಿಯರಿಗೆ ವಿನಯವ ಮಾಡಿ । ಹಿಂದಾದ ಚೋದ್ಯವಾರ್ತೆಯನು ॥
ಒಂದನು ನುಡಿಯದೆ ಕುಸುಮಾಜಿ ಮಾಜಿಕೊಂ । ಡೆಂದಿನಂತಿದ್ದಳಾಟದೊಳು ॥ ೬೪ ॥

ಅಮರಾಜಿ ಬರೆದಳು ಕುಸುಮಾಜಿ ನುಡಿದಳು । ಸುಮನಾಜಿ ಕೃತಿಗೈದಳೆಂಬ ।
ಗಮಕದ ನುಡಿಯಲ್ತೆ ಚಕ್ರಿಯ ಪುಣ್ಯ ಸಂ । ಭ್ರಮವಿಂತು ಮಾಡಿದುದಲ್ತೆ । ೬೫ ॥

ತಪ್ಪುಳ್ಳರೀ ಕೃತಿಯೊಳು ತಪ್ಪ ತಿದ್ದುವು । ದೊಪ್ಪವಾದರೆ ಕೇಳ್ಪುದೆಮಗೆ ॥
ತಪ್ಪಿಲ್ಲ ತಾಗಿಲ್ಲ ಜಿನಶರಣೀ ಕಾವ್ಯ । ವೊಪ್ಪುತಿರಲಿ ಸರ್ವಕಾಲ ॥ ೬೬ ॥

ಎಂದು ನಾಂದಿಯನೋದಿ ಮುಗಿದು ಗಾಯಕಿ ನಲ । ವಿಂದ ಹೊತ್ತಗೆಯ ಕಟ್ಟಿದಳು ॥
ಮಂದಸ್ಮಿತಮುಖನಾಗಿ ರಾಜೇಂದ್ರನಾ । ನಂದಿಸುತಿದ್ದನೇನೆಂಬೆ ॥ ೬೭ ॥

ಅವಳರಗಿಳಿಯೊಳು ನುಡಿದಾಡಲಾ ಮಾತ । ಪವಣಿಗೆಮಾಡಿಕೊಂಡೊಂದು ॥
ಕವಿತೆಮಾಡಿದರಿಂವರತಿನಿಪುಣೆಯರೆಂದು । ಭುವನೇಶ ನುಡಿಯದೆ ನೆನೆದಾ ॥ ೬೮ ॥

ಆ ತಳೋದರಿಯೊಂದು ಗಿಳಿಯೊಳು ನುಡಿದಾಡ । ಲೀ ತರುಣಿಯರು ತಮ್ಮೊಳಗೆ ॥
ಮಾತಾಡಿ ಸದರದಿ ಕೃತಿಗೈದರಿವರ ವಿ । ದ್ಯಾತಂತ್ರ ಲೇಸೆಂದು ನೆನೆದಾ ॥ ೬೯ ॥

ಗಿಳಿಯೊಡನಾಕೆ ಮಾತಾಡಲೀ ಗಿಳಿಯು ಮೈ । ಯೊಳಗಿದ್ದ ವ್ಯಂತರಾಂಗನೆಯಾ ॥
ತಿಳಿದುದಚ್ಚರಿ ಸ್ವರಮಾತ್ರದಿಂದೆಂದು ತ । ನ್ನೊಳಗೆ ತಾ ನೆನೆದನಾ ನೃಪತಿ ॥ ೭೦ ॥

ಅರಗಿಳಿಯೊಳಗೆ ಪೆಣ್ಣಿದ್ದಳೆಂದರಿದು ನಿ । ರ್ಧರಿಸಿ ಕಾಣಿಸಿಕೊಂಡಳೈಸೆ ॥
ಪುರುಷನಾದರೆ ಬೆಸಗೊಳ್ಳಲಾಗಳೆ ಬೆಚ್ಚಿ । ನೆರೆಮನೆಗೇಳ್ವಳೆಂದರಿದಾ ॥ ೭೧ ॥

ಸುರಸತಿ ತನ್ನ ಕೊಂಡಾಡಲಂತದನು ಮಂ । ದಿರಕೆ ಬಂದಬಲೆಯರೊಡನೆ ॥
ಒರೆಯದೆ ಮಾಜಿದ ಗಂಭೀರಗುಣಕೆ ಭೂ । ವರ ಮೆಚ್ಚಿದನು ಮನಸಿನೊಳು ॥ ೭೨ ॥

ಸರಸಿಜಾಕ್ಷಿಯರ ಲೀಲಾರ್ಥ ಲೇಸೀ ಕಾವ್ಯ । ದಿರವನಿನ್ನರೆ ತೂಗಿ ತೋರಿ ॥
ಹಿರಿದು ಮನ್ನಣೆಯೀವೆನೆಂದೆಣಿಸಿದನಿಲ್ಲಿ । **ಅರಗಿಳಿಯಾಳಪಸಂಧಿ** ॥ ೭೩ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೭೪ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೭೫ ॥

ನುಡಿಜಾಣ ನಡೆಜಾಣ ನೆರೆಜಾಣ ಮರೆಜಾಣ । ಕಡುಜಾಣ ಜಗಕೆ ಸುಜಾಣಾ ॥
ಎಡೆಬಿಡದೆನ್ನಂತರಂಗದೊಳಿರು ಜಾಣ । ರೊಡೆಯ ಚಿದಂಬರಪುರುಷಾ ॥ ೭೬ ॥

---

ಅರಗಿಳಿಯಾಳಾಪಸಂಧಿ ಸಂಪೂರ್ಣ.

# ಮುನ್ನಣೆಸಂಧಿ.

ಕಾಲನಗಂಡ ಕರ್ಮದಮಿಂಡ ದುರ್ಮೋಹ । ಜಾಲಾಂಧಕಾರಮಾರ್ತಾಂಡಾ ॥
ಲೀಲಾಂಗ ಮತಿದೋರು*ನಿಜದೋರು ಸುಜ್ಞಾನ । ಲೋಲ ನಿರಂಜನಸಿದ್ಧಾ ॥ ೧ ॥

ತನ್ನೆದೆಯೊಳಗೆ ತಾನಾ ಕಾವ್ಯರಚನೆಯ । ಮುನ್ನ ಭಾವಿಸಿ ನೋಡಿ ಮೆಚ್ಚಿ ॥
ಚೆನ್ನಾದುದೀ ಕೃತಿಯಿದಕೆ ವಿಚಾರವುಂ । ಟನ್ನೆಂದು ನುಡಿದನಾ ರಾಯ ॥ ೨ ॥

ಇದು ಸುಮನಾಜಿಯ ಕವಿತೆಯಲ್ಲಮರಾಜಿ । ಪದೆದು ಪೇಳಿದ ಕೃತಿಯೆಂದಾ ॥
ಅದ ಕೇಳುತಿರ್ದರು ನಕ್ಕರೊಬ್ಬೊಬ್ಬರ । ವದನವ ನೋಡಿ ತಮ್ಮೊಳಗೆ ॥ ೩ ॥

ಆಗಳೆ ಪೇಳ್ದೆ ನಾನಕ್ಕ ನೀನೆನ್ನ ಮೇ । ಲೀ ಗುಟ್ಟು ಹೊರಿಸದಿರೆಂದು ॥
ಈಗಳಾದುದೆಯೆಂದು ಸುಮನಾಜಿ ನಗುತೊಡ । ನಾಗಹುದಹುದೆಂದಳುಬ್ಬಿ ॥ ೪ ॥

ತಂಗಿ ನೀನಿದ ಕೃತಿಮಾಡೆಂದಳಾ ಕಾವ್ಯ । ದಂಗ ನನಗೆ ಬರಿಸೆಂದೆ ॥
ಸಂಗತಿಮಾಡಿದಳಮರಾಜಿ ನಾನದ । ನಂಗೀಕರಿಸಿ ಬರೆದೆನು ॥ ೫ ॥

ನಾನುಸುರಿದೆನೆಂಬುದೇನಕ್ಕ ನಿನ್ನಭಿ । ಧಾನವೆಯಿರಲಲ್ಲಿಯೆಂದೆ ॥
ತಾನದ ಕೇಳದೆ ಮರಸಿ ಹೇಳಿದಳದ । ಕೇನಾಯ್ತು ಹೇಳು ಹೇಳೆಂದೆ ॥ ೬ ॥

ಆರು ಮರಸಬಹುದರಸನೆಲ್ಲರ ಚಿತ್ತ । ದೋರೆಕೋರೆಯ ಬಲ್ಲನೆಂಬ ॥
ಧೀರತ್ವವಿಡಿದು ಬರೆದೆನಕ್ಕಗುಸುರದೆ । ಹೋರದೆ ಲೇಸು ಲೇಸೆಂದು ॥ ೭ ॥

ಜಾಣರನಾರು ಚಾಳಿಸಬಹುದದು ತಾನೆ । ಕಾಣಿಸಿತಿಲ್ಲಿ ಕಣ್ಣಾರೆ ॥
ಹೂಣಿದ ಹೊರೆ ಜಾರಿದಂತಾದುದೆನಗೆಂದು । ಜಾಣೆ ನುಡಿದಳರ್ತಿಯಿಂದ ॥ ೮ ॥

ಮೊದಲರ್ಧವವಳ ಕವಿತ್ವವಾ ಕಡೆಯರ್ಧ । ವದು ನಿನ್ನ ಸುಕವಿತ್ವವೆಂದಾ ॥
ಅದು ತಪ್ಪದಹುದಹುದೆಂದಳಂದಮರಾಜಿ । ಮುದದಿಂದ ನಗುತ ರಾಯನೊಳು ॥ ೯ ॥

ತಾಯಿ ನೀನುಸುರೆಂದರೊಲ್ಲದಾದಳು ಮತ್ತು । ಪಾಯವ ನೆನೆದಾನು ಕಿರಿದಾ ॥
ಒಯ್ಯಾರದಿಂದ ಪೇಳ್ದಂತು ಪೇಳೆನೆ ಬಳಿ । ಕಾಯತನೇತ್ರೆ ಪೇಳಿದಳು ॥ ೧೦ ॥

ಆದಿಮಂಗಲ ನನ್ನದಹುದಂತ್ಯಮಧ್ಯದೊ । ಳಾದ ಮಂಗಲಗಳಾಕೆಯವು ॥
ಭೇದಿಸಿ ದೇವರರಿದುದಿದು ಚಿತ್ರವೇ । ನಾದೀಶನೊಳಗರುಹಿದನೊ ॥ ೧೧ ॥

ಎಂತು ಜಯಿಸಬಹುದಕ್ಕ ನೋಡರಸನೆ । ಮ್ಮಂತರಂಗದ ಸುಕ್ಕುಸುಳುಹಾ ॥
ಅಂತರಿಸದೆ ಹೇಳುತಿದ್ದಪನೆಂದೆಲ್ಲ । ಕಾಂತೆಯರೊಳಗೆ ನಲಿದರು ॥ ೧೨ ॥

---

* ಸುಜ್ಞಾನಲೋಚನ

ಲೇಸಾದುದೀ ಕೃತಿ ನಿಮ್ಮ ಕವಿತ್ವದ । ಭ್ಯಾಸವೊಳ್ಳಿತು ಸತಿಯರಿರಾ ॥
ಈ ಸುಕಥೆಗೆ ಮೆಚ್ಚಿದೆನು ಬೇಡಿ ನೀವೆಂದು । ದೀ ಸಮಯದೊಳೀಯಬೇಕು ॥ ೧೩ ॥

ಮೆಚ್ಚಿಸಿ ನಾವೊಂದು ವಸ್ತುವ ಪಡೆವೆವೆಂ । ದುಚ್ಚರಿಸಿದ ಕೃತಿಯಲ್ಲ ॥
ಹೆಚ್ಚಾದ ಬಯಕೆ ಮನದೊಳಿಂದಿಗಿಲ್ಲವಾ । ಮೆಚ್ಚು ಭಂಡಾರದೊಳಿರಲಿ ॥ ೧೪ ॥

ಆಗಲಿ ಮುಂದೆ ನೀವಾ ಮೆಚ್ಚನುರೆ ಬೇಡಿ । ದಾಗ ಕೊಡುವೆನದಂತಿರಲಿ ॥
ಈಗ ನಾನಿಕ್ಕಿದಾಭರಣವನೀವೆನೆಂ । ದಾ ಗುಣರತ್ನ ನುಡಿದನು ॥ ೧೫ ॥

ಭೂಷಣಾವಳಿಯೀಗ ಕಡಮೆಯಿಲ್ಲಮಗೆ ವಿ । ಶೇಷವಾಗಿದ್ದವಿನ್ನವರ ॥
ಘೋಷಣೆಯಂತಿರಲೆಂದಾತ್ಮಪತಿಗೆ ಸಂ । ತೋಷವ ತೋರಿ ನುಡಿದರು ॥ ೧೬ ॥

ಮುನ್ನುಳ್ಳ ಭೂಷಣವಿರಲದಕೇನೀಗ । ನನ್ನ ಭೂಷಣವನಿತ್ತಪೆನು ॥
ಬನ್ನಿಯೆಂದವರ ಕರೆವುತ ಭೂಷಣಕಾಗ । ತನ್ನ ಕೈಯಿಕ್ಕಿದನರಸಾ ॥ ೧೭ ॥

ಬೇಡವೆಂದರು ರಾಯ ಕೊಡುತಿದ್ದನಿದಕೆ ನಾ । ವಾಡುವೆವೆನುತಿಬ್ಬ*ರೆದ್ದು ॥
ಕೂಡಣ ಸತಿಯರ್ಗೆ ಸೂಚಿಸಿ ಸಾಷ್ಟಾಂಗ । ಗೂಡಿ ತಾವೆಲ್ಲೆರಗಿದರು ॥ ೧೮ ॥

ಬಲುಘಾಳಿ ಬೀಸಲು ಮರದಿಂದ ನೆಲಕೆ ಬಿ । ದ್ದೆಳಲತೆಗಳೊಯೆಂಬ ತೆರದಿ ॥
ಲಲಿತಾಂಗ ನಿಮಿರ್ದು ಸಾಷ್ಟಾಂಗವೆರಗಿದ ಕೋ । ಮಲೆಯರ ಭಾವ ರಂಜಿಸಿತು ॥ ೧೯ ॥

ಕಂಡನರಸನಿವರೆಲ್ಲರೇತಕೆ ಸಾಲು । ಗೊಂಡೆರಗಿದರೆಂದು ನಗುತ ॥
ಪಂಡಿತೆಯಾಸ್ಯವ ನೋಡಿದನವಳಿದೆ । ಗೊಂಡು ನುಡಿದ‡ಳಿದೆಯರಿದು ॥ ೨೦ ॥

ಕ್ಷಿತಿಪ ನೀನಾಭರಣವನೀವೆನೆನಲದು । ಸತಿಯರ್ಗೆ ರುಚಿಯಾದುದಿಲ್ಲ ॥
ಪತಿಯಲಂಕಾರವ ಪಾಳ್ಮಾಡಿ ನೋಡರು । ಪತಿಭಕ್ತೆಯರ ಚರಿತವದು ॥ ೨೧ ॥

ನಿನ್ನ ಸಿಂಗರ ತಮ್ಮ ಕಣ್ಣಿರ್ಗೆ ನೀಸಿಟ್ಟ । ರನ್ನದೊಡಿಗೆಗಳ ತೆಗಿಸಿ ॥
ಭಿನ್ನಾಗೆ ಮಾಡಿ ನೋಡುವರೆ ತಾವದರಿಂದ । ನಿನ್ನ ಮುಂದೆರಗಿದರರಸಾ ॥ ೨೨ ॥

ಒಲ್ಲೆವೆಂದರು ಬೇಡವೆಂದರವರು ನೀನು । ಬಲ್ಲಿತು ಮಿಗೆ ಕರೆವಾಗ ॥
ವಲ್ಲಭಗಿದಿರುತ್ತರವ ಕೊಡಲಾಗದೆಂ । ದೆಲ್ಲರೆರಗಿದರು ನೃಪತಿ ॥ ೨೩ ॥

ಇರ್ವರಿಗೀವೆನೆಂದಾನು ಕರೆದರೇಕೆ । ಸರ್ವರೆರಗಿದರಂತಿವರು ॥
ಒರ್ವರೊರ್ವರಿಗೆರವಿಲ್ಲ ತಮ್ಮೊಳು ಸ್ನೇಹ । ಪರ್ವಿಯೊಂದಾಗಿಹರರಸಾ ॥ ೨೪ ॥

ಅರಿಯೆಯಾ ನೀನಿದ ನಗೆಕಾರ ಬಗೆಕಾರ । ಮರೆಕಾರ ಬಲು ಟೌಳಿಕಾರ ॥
ಅರಿಯದಂದದೊಳೆನ್ನ ಕೇಳ್ವೆಯೆಂದವಳೊಳ । ಗರಿದೊತ್ತಿ ನುಡಿದಳು ನೃಪನಾ ॥ ೨೫ ॥

---

*ರ್ವಿದಿ. ‡ಕೊಳಗರಿದು.

ಸಾಕೆಮ್ಮ ದೇವಿಯರಿರೆಗಿ ಹೊತ್ತಾಯ್ತು ಪ । ರಾಕು ಬೇಡೇಳಿರೆಂದಿನ್ನು ॥
ವಾಕುದೋರೆಂದು ಝುಂಕಿಸಿದಳಾ ಪಂಡಿತೆ । ಭೂಕಾಂತ ನಸುನಕ್ಕನದಕೆ ॥ ೨೬ ॥

ಏಳಿರೌ ಬಳಲಿದಿರೆಂದು ನುಡಿದನು ಭೂ । ಪಾಲನದಕೆ ನಸುನಗುತ ॥
ಬಾಲೆಯರೆದ್ದು ನಿಂದರು ಹೇಳಲಳವೆ ತ । ತ್ಕಾಲದೊಂದಧಿಕಲೀಲೆಯನು ॥ ೨೭ ॥

ನಾನಿಟ್ಟ ತೊಡಿಗೆ ಮಾಣಲಿ ಬೇರೆ ನಿವಗೆ ನ । ವೀನಭೂಷಣವೀವೆನೆಂದಾ ॥
ಏನೊಂದನಿಂದಿಗೊಲ್ಲೆವು ವ್ರತವೆಂದು ಸಂ । ಧಾನಿಸಿ ಕಟ್ಟಿ ನುಡಿದರು ॥ ೨೮ ॥

ಮುಟ್ಟಿತಿವರ ಮೇಲೆ ನನಗರ್ತಿ ನಾನೊಂದ । ಕೊಟ್ಟಪೆನೆನಲೊಲ್ಲರಿವರು ॥
ಕೊಟ್ಟಿಲ್ಲದೆನ್ನುಬ್ಬು ನಿಲ್ಲದಿನ್ನಿದಕೇನು । ತಿಟ್ಟವೆಂದೆದೆಯೊಳು ನೆನೆದಾ ॥ ೨೯ ॥

ಭಂಗಾರವನೊಲ್ಲದರೆ ಮಾಣಲಿವರನಾ । ಲಿಂಗಿಸಿಯಾದರು ಬಿಡುವಾ ॥
ಪಾಂಗಾವುದೊತ್ತಿಗೆ ಬಾರರೆಂದೆಣಿಸಿ ತಂ । ತ್ರಾಂಗವನೊಡನೊಂದ ಕಂಡಾ ॥ ೩೦ ॥

ಅಮರೆ ಬಾ ಸುಮನೆ ಬಾ ಕುಸುಮಾಜಿ ಚಿತ್ತವಿ । ಭ್ರಮದೊಳಿದ್ದಪಳದಕೊಂದು ॥
ಕ್ರಮವನೇಕಾಂತದೊಳಗೆ ಪೇಳ್ವೆನೆಂದು ಭೂ । ರಮಣ ತನ್ನೊತ್ತಿಗೆ ಕರೆದಾ ॥ ೩೧ ॥

ನಡೆದು ಸಮೀಪಕೆ ಬಂದ ಪೆಂಗಳನೆಡ । ಗಡೆ ಬಲಗಡೆಯೊಳು ನಿಲಿಸಿ ॥
ನುಡಿವಂತೆ ಕಿವಿಗೆ ಮೋರೆಯ ತೋರುತಿಬ್ಬರ । ನೊಡನಪ್ಪಿಕೊಂಡನಾ ನೃಪತಿ ॥ ೩೨ ॥

ಕಲ್ಪಲತೆಗಳೆಡಬಲದಲ್ಲಿ ಹಬ್ಬಿದ । ಕಲ್ಪವೃಕ್ಷವೊಯೆಂಬ ಸೊಬಗಾ ॥
ಕಲ್ಪಿಸುತ್ತಿದ್ದನಾ ರಾಯನಾ ಪೆಣ್ಗಳ । ಬಲ್ಪಿನೊಳಮರ್ದಪ್ಪಿದಾಗ ॥ ೩೩ ॥

ಲೀಲಾನಾಟಕದೊಳು ಕಾಮನೆರಡು ಪಾಂ । ಚಾಳಿಕೆಗಳನಪ್ಪಿದಂತೆ ॥ ?
ಆ ಲಲಿತಾಂಗನೊಪ್ಪಿದನಾ ಸತಿಯರ । ನಾಲಿಂಗಿಸಿದ ವೇಳೆಯೊಳು ॥ ೩೪ ॥

ಬೆದರಿದಂತಾದರು ಪೆಂಗಳತ್ತಿತ್ತ ಮೈ । ಯೊದರಿಕೊಂಬರು ಲಲ್ಲೆಯಿಂದ ॥
ಆದಿರದಂತಾ ರಾಯನಮರ್ದಪ್ಪಿಕೊಂಡು ಮು । ಚ್ಚಿದೆನೆಂದು ಬಿಟ್ಟನಾ ಕ್ಷಣವೆ ॥ ೩೫ ॥

ಘೊಳ್ಳನೆ ಸತಿಯರೆಲ್ಲರು ನಕ್ಕರದಕೆ ಭೂ । ವಲ್ಲಭ ತಾ ನಸುನಕ್ಕಾ ॥
ಒಳ್ಳಿತಂತಾಯ್ತಾಗಬೇಕೆಂದು ಕುಸುಮಾಜಿ । ಗೆಲ್ಲವಡೆದು ನಕ್ಕಳೊಡನೆ ॥ ೩೬ ॥

ಕೋಣೆಯೊಳಾನೊಂದ ನುಡಿದಾಡಲದ ತಂದು । ಕ್ಷೋಣೀಶಗರಿಕೆ ಮಾಡಿದಿರಿ ॥
ಕಾಣದೆ ದೈವವಿಲ್ಲವೆ ನಿವಗಾ ಫಲ । ಕಾಣಿಸಿತಿಂತು ಕಣ್ಣಾರೆ ॥ ೩೭ ॥

ಒಬ್ಬರ ಗೂಢಚರಿತ್ರವ ಬಾಹ್ಯಕೆ । ಹಬ್ಬಿಸಿ ನಗುವಾ ಎಂಬವರಾ ॥
ತಬ್ಬಿದೈವವೆ ನಗಿಸುವುದೆಂಬ ನುಡಿಗೆ ನೀ । ವಿಬ್ಬರೆ ಗುರಿಯಾದಿರಕ್ಕಾ ॥ ೩೮ ॥

ಸೆರಗ ಮೊಗಕೆ ಸಾರ್ಚಿ ನಗುವಳು ಕಂಭದ । ಮರೆಗೆ ಹೋಹಳು ಕೂಡೆ ಬಹಳು ॥
ಎರೆಯನಿದಿರೊಳಿಪ್ಪ ನಾಣ್ಚುತ ನಗುತ ಹೊಂ । ಮಿರಿದಾಡುತಿರ್ದಳಾ ತರುಣಿ ॥ ೩೯ ॥

9

ಅರಸ ಕಿಕ್ಕಣ್ಣಿಂದ ನೋಡುವನಾಕೆಯ । ಸರಸಲೀಲೆಗೆ ಹಿಗ್ಗಿ ನಗುವಾ ॥
ಶಿರಬಾಗಿಕೊಂಡಿದ್ದಳೀಗಳುಬ್ಬಿದಳೆಂದು । ಹರುಷವೈದಿದನೆದೆಯೊಳಗೆ ॥ ೪೦ ॥

ಅಮರಾಜಿಸುಮನಾಜಿಯರು ಮುಂದೆ ನಿಂದಿಷ್ಟು । ನಮಿತಮುಖಾಬ್ಜೆಯರಾಗಿ ॥
ವಿಮಲಕಟಾಕ್ಷದಿ ನೋಡಿ ಲಜ್ಜೆಯೊಳಾತ್ಮ । ರಮಣನೊಳಿಂತು ನುಡಿದರು ॥ ೪೧ ॥
ಜನದ ಗೋಷ್ಠಿಯೊಳಿದ ನೆನೆಯಬಹುದೆ ದೇವ । ರೆನುತ ತಾವಿರ್ವರು ತಮ್ಮ ॥
ಮನದೊಳು ಸಂತಸ ಮಾತಿನೊಳಿನಿಸು ರಂ । ಜನೆಯನಾಡಿದರು ಗಾಡಿಯೊಳು ॥ ೪೨ ॥
ಆರಿವರೊಳಗನ್ಯರಿವರೆನ್ನ ಸೇವೆಯ । ನಾರಿಯರೆನ್ನ ರಾಣಿಯರು ॥
ನಾರಿಯರೆಲ್ಲರು ನಾನೊಬ್ಬ ಪುರುಷ ನೀ । ಮೋರಂತೆ ನಾಣ್ಚಲೇಕೆಂದಾ ॥ ೪೩ ॥
ಒಪ್ಪವಾದೊಂದು ಕಾವ್ಯಕೆ ಮೆಚ್ಚಿ ಕರೆದುಕೊಂ । ಡಪ್ಪಿದೆನದಕೇನು ‡ದೋಷ ॥
ಅಪ್ಪಲಾಗದೆ ನನ್ನ ಪೆಂಡಿರ ನಾನಿಲ್ಲಿ । ತಪ್ಪಿದ ಕಾರ್ಯವೇನೆಂದಾ ॥ ೪೪ ॥
ಕುಸುಮಾಜಿಗೊಂದು ತಂತ್ರವ ಪೇಳ್ವೆನೆಂದೆಮ್ಮ । ಹುಸಿಗಿಂತು ಕರೆಯಲದೇಕೆ ॥
ಕುಸುಮಾಜಿ ನಕ್ಕಳಲ್ಲವೆ ತಂತ್ರವದು ತಾನೆ । ಹುಸಿಯಾವುದೆನ್ನೊಳಗೆಂದಾ ॥ ೪೫ ॥
ಗೆಲಲರಿದಕ್ಕಾ ನಾವರಸನನೆಂದು ತ । ಮ್ಮೊಳಗೆ ತಾವಿರ್ವರು ನುಡಿದು ॥
ಒಳಸರಿದೊಯ್ಯನೆ ಗದ್ದುಗೆಯೊತ್ತಿಂದ । ತೊಲಗಿ ಪೆಣ್ಗಳು ಸಾರ್ದರತ್ತ ॥ ೪೬ ॥

ನೋಡಿದರಾ ಕುಸುಮಾಜಿಯ ತಂಗಿ ನೀ । ನಾಡಿದ ನುಡಿ ಹಸನಾಯ್ತು ॥
ನೋಡು ನಿನ್ನನು ನಾವು ಸ್ತುತಿಮಾಡಲಾ ಫಲ । ಕೂಡೆ ಕಾಣಿಸಿತೆಂದರವರು ॥ ೪೭ ॥
ಅಹುದು ನಾನಾವ ಗುಣಜ್ಞೆ ನೀವೆನ್ನನು । ತ್ಸಹದಿಂದ ಕೀರ್ತಿಸಲೇಕೆ ॥
ಬಹುಗುಣಿಗಳು ಸ್ವಲ್ಪಗುಣಿಗಳ ಕೊಂಡಾಡ । ಬಹುದೇಯೆಂದಳು ಶಶಿವದನೆ ॥ ೪೮ ॥
ನಾನೊಮ್ಮೆ ಕಿರಿಯಳು ನಿಮ್ಮ ಕೀರ್ತಿಸಬಹು । ದೀ ನುತಕೃತಿ ನನಗೇಕೆ ॥
ಹೀನಾಧಿಕವೆಂಬ ಹೆಚ್ಚುಕುಂದಿಲ್ಲವೆ । ಯೇನಕ್ಕ ನೀವರಿಯದುದೆ ॥ ೪೯ ॥
ಬಿನದಕೆಂದೆವು ತಂಗಿ ನೋಯದಿರೆಂದರೆ । ವನಿತೆಯರಾರು ನಿಮ್ಮಂತೆ ॥
ಬಿನದಕಾಡಿದೆನಕ್ಕಯೆಂದಳದಕೆ ರಾಯ । ಮನವುಬ್ಬಿ ನಗುತಿದ್ದನೊಳಗೆ ॥ ೫೦ ॥

ಸಾಕಿದರೊಳು ಬಂದ ಕೊರತೆಯಾವುದು ಪೆಂಗ । ಳೀಕೆ ವಾಚಾಳಿಪುದೆಂದು ॥
ಆ ಕೆಲಬಲದೊಳಿರ್ದರಸಿಯರಾಡಲು । ಮೂಕತೆವಡೆದಿರ್ದರೊಡನೆ ॥ ೫೧ ॥
ಸೌಜನ್ಯಪುರುಷನೆಂದಂತೆ ಕೈವಿಡಿದ ಸ । ರೋಜಾಕ್ಷಿಯರು ಕೇಳಬೇಕು ॥
ಸೂಜಿಯ ಬಳಿಯ ನೂಲಂತೆ ಪತಿಯೊಳಿಹು । ದೋಜೆಯಲ್ಲವೆ ಸತಿಯರಿಗೆ ॥ ೫೨ ॥

‡ ಕೊರತೆ.

ಸ್ವಾಮಿಯ ಮನಕೇನು ಮೆಚ್ಚಾದುದದೆ ನಮ್ಮ । ಕಾಮಿನಿಯರಿಗೆ ಮೆಚ್ಚಲ್ತೆ ॥
ಈ ಮಹಾವಿಭವವನೆಲ್ಲಿ ಕಂಡಪೆವೆಂದು । ಪ್ರೇಮವಟ್ಟೆಲ್ಲರಾಡಿದರು ॥ ೫೩ ॥
ಎಂದೆಂದು ಸ್ವಾಮಿ ಸಭೆಯೊಳಿಂತು ಬಾಯ್ದೆರೆ । ದೊಂದಿ ಪ್ರಸಂಗಿಸಿತಿಲ್ಲ ॥
ಇಂದು ಮಹಾಸುಪ್ರಸನ್ನವಾದುದು ಹೊಸ । ತೆಂದೆಲ್ಲರರ್ತಿವಮಾಡಿದರು ॥ ೫೪ ॥
ಲೀಲಾಗೋಷ್ಠಿಯಾದುದು ಹೊಸಕಾವ್ಯವ । ಕೇಳಿದೆವರಸನ ಮೇಲೆ ॥
ಏಳಿ ನಾವಿನ್ನು ನಿವಾಳಿಯನಿಡುವೆವೆಂ । ದಾಲೋಚಿಸಿ ನಾರ್ದರೆಲ್ಲ ॥ ೫೫ ॥
ಒರ್ವರೊಂದೊಂದೆ ಭೂಷಣವ ತೆಗೆದು ರಾಯ । ಗುರ್ವಿ ನಿವಾಳಿಸಿ ಮುಂದೆ ॥
ಉರ್ವಿಯೊಳಿಂಬಿಡಲಾಭರಣಗಳೊಂದು । ಪರ್ವತವಾದುದೇನೆಂಬೆ ॥ ೫೬ ॥
ಚಿತ್ತವಲ್ಲಭಗೆ ನಿವಾಳಿಯರ್ಚನೆಗೈದು । ಮತ್ತಕಾಶಿನಿಯರು ನಿಲಲು ॥
ಉತ್ತುಂಗಭೂಷಣರಾಶಿಯು ಹೊರೆಗಟ್ಟೆ । ಹೊತ್ತರೂಳಿಗದ ನಾರಿಯರು ॥ ೫೭ ॥
ಮಮತೆಯೊಳಬಲೆಯರೆಲ್ಲರು ಕೂಡಿ ಸಂ । ಭ್ರಮದಿ ನಿವಾಳಿಸುವಾಗ ॥
ಅಮರೆಸುಮನೆಕುಸುಮೆಯರ ಜಗಳವೆತ್ತ । ಗಮಿಸಿತೆಂದನು ನರನಾಥ ॥ ೫೮ ॥
ಶತ್ರುಭಾವದೊಳೀಗ ಹೋರಿದರಾಗಳೆ । ಮಿತ್ರಭಾವದೊಳೊಡಗೂಡಿ ॥
ಸೂತ್ರಿಸಿದಂತಿವರಿಹುದೇನು ಪಂಡಿತೆ । ಚಿತ್ರವಿಂತಿದನುಸುರೆಂದಾ ॥ ೫೯ ॥
ರಾಜ ಬಿನ್ನಹ ಸುಮನಾಜಿಯೊಳಗೆ ಕುಸು । ಮಾಜಿಯೊಳಗೆ ನೋವು ಬಹುದೆ ॥
ಆಜಿಯೆಂದರೆ ಕದನಕೆ ಹೆಸರೆಂದರಿ । ದಾ ಜಾಣ್ಮೆಗರಸ ಮೆಚ್ಚಿದನು ॥ ೬೦ ॥
ಅಹುದೆ ಚೆನ್ನಾಯ್ತುದು ಖಡ್ಗದಾಜಿಯೊಳು ನೋ । ವಹುದೈಸೆ ಹೂವಿನಾಜಿಯೊಳು ॥
ಮಹಿಯೊಳಗಾರು ನೊಂದವರುಂಟೆನುತ ರಾಯ । ಗಹಗಹಿಸುತ ಮೆಚ್ಚಿ ನುಡಿದಾ ॥ ೬೧ ॥
ಅಸುರಾಜಿಗುಂಟು ಕರ್ಕಶವಮರಾಜಿಯೊ । ಳೆಸೆವುದೆ ಕರ್ಕಶವರಸಾ ॥
ಹೊಸತಾಯ್ತು ಸುರರಿಗೆ ಕದನವಿಲ್ಲೊ ಮ್ಮೆ ಸಂ । ಧಿಸಿದರು ಮೃದುವೆಂದೆಯಲ್ತೆ ॥ ೬೨ ॥
ನಾಲಗೆ ಮಿಸುಕದ ಮುನ್ನ ಮುಂಗಟ್ಟೆ ನೀ । ನಾಲೋಚಿಸದುಸುರಿದುದು ॥
ಭೂಲೋಕವಮದನ ವಿಸ್ಮಯವೆಂದು ಪಂಡಿತೆ । ಕಾಲಿಗೆರಗಿದಳಾ ನೃಪನ ॥ ೬೩ ॥
ಜಿನನಾಣೆ ಚೆನ್ನಾಯ್ತು ನಿನ್ನ ಜಾಣ್ನುಡಿಯೆಂದು । ಜನಪತಿ ಪಂಡಿತೆಗೊಲ್ದು ॥
ಕನಕಭೂಷಣವನಿತ್ತನು ಕೂಡೆ ಮೂವರು । ವನಿತೆಯರಿತ್ತರುಚಿತವಾ ॥ ೬೪ ॥
ಈ ಗುಣನಿಧಿಗಳೆನಿಪ ಪೆಂಡಿರೊಡನೆಲೆ । ನಾಗರಿಕೋತ್ತಮ ನೀನು ॥
ಭೋಗಸಾಮ್ರಾಜ್ಯವನಾಳೆಂದು ಪಂಡಿತೆ । ಸಾಗಿ ನಿಂದಳು ಮುನ್ನಿನಂತೆ ॥ ೬೫ ॥
ತಳತಳಿಸುವ ಮೊಗದಿಂದ ಲೀಲೆಯೊಳಿದ್ದ । ಲಲನೆಯರೆಲ್ಲರ ನೋಡಿ ॥
ಬಳಿಕೊಂದು ಮಾತನಾಡಿದನು ಸುಜಾಣರ । ತಿಲಕನಾ ಪಂಡಿತೆಯೊಡನೆ ॥ ೬೬ ॥

ಪಂಡಿತೆ ನಾವೆಮ್ಮ ಮನೆಯೊಳಿದ್ದನ್ನವ । ಕೊಂಡರೊಳ್ಳಿತೊ ಭುಕ್ತಿಗೆಮ್ಮ ॥
ಪೆಂಡಿರೊಳೊರ್ವಳ ಮನೆಗೆ ಹೋಹುದು ಲೇಸೊ । ಕಂಡುದನುಸುರು ನೀನೆಂದಾ ॥ ೬೭ ॥

ಅರಿದಳಾಗಳೆ ಚಿತ್ತ ಕುಸುಮಾಜಿಯೊಳು ತನ । ಗೆರಕವಾಯ್ತಾಕೆಯ ಮನೆಗೆ ॥
ಒರಗಲೆಯ್ದುವೆನೆಂಬ ಗ್ರೂನೆಹವಿದೆಂದದ । ಮರಸಿಕೊಂಡಿಂತು ನುಡಿದಳು ॥ ೬೮ ॥

ಇಂದಿಗಾರೋಗಣೆ ದೇವರ ಗೃಹದಲ್ಲಿ । ಚಂದವಲ್ಲೊರ್ವಳ ಮನೆಗೆ ॥
ಸಂದರುತ್ತಮವೆಂದಳರಸಿಗೆ ಮನಸಿನ ॥ ಗಂದೆಯ ತುರಿಸಿದಂತಾಯ್ತು ॥ ೬೯ ॥

ಹೇಳದರಾವಳ ಮನೆಗೆಯ್ದಬಹುದೆಂದು । ಕೇಳಿದನೊಡನೆ ಪಂಡಿತೆಯಾ ॥
ಆಲೋಚಿಸಿಕೊಂಡು ಬಿನ್ನವಿಸುವೆನೆಂದು । ಕೌಳಿಕಮಾನವಡೆದಳು ॥ ೭೦ ॥

ಮೂಗಿನ ಮೇಲೆ ಬೆರಳನಿಟ್ಟು ಕಣ್ಮುಚ್ಚಿ । ತೂಗಾಡಿ ತಲೆಯನೊಂದಿನಿಸು ॥
ಯೋಗಿಗಳಂತಿಷ್ಟು ಜಾನಿಸಿ ಕಣ್ದೆರೆ । ದಾಗಳೆ ನುಡಿದಳಾ ಕುಟಿಲೆ ॥ ೭೧ ॥

ಒಡೆಯ ಬಿನ್ನಹವಿಂದು ಕುಸುಮಾಜಿಯರ ಮನೆ । ಗಡಿಯಿಟ್ಟರುತ್ತಮವೆಂದು ॥
ನುಡಿದಳೆಂತುತ್ತಮವಾಯ್ತೆಂದು ಹೇಳೆಂದು । ನುಡಿಸಿದನವಳ* ಬಾಯಿಂದ ॥ ೭೨ ॥

ಹೊಸಕಾವ್ಯ ಮೂವರಿಂದಾದುದಿಬ್ಬರನೆ ಮ । ನ್ನಿಸಿದೆಯಿನ್ನೊಬ್ಬಳಿಗಿಲ್ಲ ॥
ಅಸಿಯಳ ಮನೆಗೆಯ್ದಿ ಮನ್ನಿಪುದುಚಿತವೆಂ । ದುಸುರಿದೆನೆಂದಳಾ ಜಾಣೆ ॥ ೭೩ ॥

ಅದು ಲೇಸು ಲೇಸಂತುಟಾಗಬೇಕೆಂದು ತ । ಪ್ಪದೆ ಪೆಣ್ಗಳೆಲ್ಲರಾಡಿದರು ॥
ಎದೆಯೊಳಾನಂದ ಮುಖದೊಳಿಷ್ಟು ಮಾಂದ್ಯಭಾ । ವದೊಳೊಡಬಟ್ಟನಾ ಕುಶಲಾ ॥ ೭೪ ॥

ಅಮ್ಮ ರಾಯನಿಗಿಂದು ನಿನ್ನರಮನೆಯಲ್ಲಿ । ಸಮ್ಮಾನ ಮುಂದೆ ನೀನೆಯ್ದಿ ॥
ಜುಮ್ಮನೆ ಜೋಕೆ ಮಾಡೆಂದಳು ಪಂಡಿತೆ । ಹೆಮ್ಮಕ್ಕಳೆಲ್ಲರ ಮುಂದೆ ॥ ೭೫ ॥

ಸವತಿಯರೆಡೆಯೊಳು ಸತಿ ನಾಣ್ಚುತಿದ್ದಳಾ । ಸವತಿಯರೇನು ಜಾಣೆಯರೊ ॥
ಅವರಾ ತಂತ್ರವ ಬಲ್ಲರಹುದದ ಹಿಕ್ಕದೆ । ಸುವಿನಯ ಮಿಗೆ ಕಳುಹಿದರು ॥ ೭೬ ॥

ತಂಗಿ ಹೋಗಕ್ಕ ಹೋಗಾಣ್ಮನಾರೋಗಣೆ । ಗಂಗನೆಗೆಡೆಮಾಳ್ಪ ಭಾಗ್ಯ ॥
ಸಂಗಡಿಸಿತು ನಿನಗದು ನಮ್ಮ ಭಾಗ್ಯವೆಂ । ದಿಂಗಿತ ಮಿಗೆ ಕಳುಹಿದರು ॥ ೭೭ ॥

ದಾರಿದೆಗೆದು ಕುಸುಮಾಜಿ ನಿಂದಳು ವೇತ್ರ । ಧಾರಿಣಿಯುರು ವೇಳೆಯರಿದು ॥
ಮಾರನೊಡೆಯ ರತಿದೇವಿಯೊಡತಿಯ ಕ । ಣ್ಣಾರೆ ಚಿತ್ತವಿಸೆಂದರೊಡನೆ ॥ ೭೮ ॥

ನುಡಿಯ ಚೆಲ್ವಿಕೆಯಿಂದ ಗಗನದೊಳಗೆ ಹೋಹ । ಮಡದಿಯ ತಿರುಗಿಸಿ ತನ್ನ ॥
ನುಡಿವಕ್ಕಿಯೊಳಗಡಗಿಸಿ ನುಡಿಸಿದ ಸವಿ । ನುಡಿಯ ಲತಾಂಗಿಯ ನೋಡು ॥ ೭೯ ॥

* ಕೈಯಿಂದ

ಸ್ವರಮಾತ್ರದಿಂದ ಗಿಳಿಯು ಮೈಯೊಳಡಗಿರ್ದ । ಸುರಸುದತಿಯ ನೆಲೆಯರಿದು ।
ದರಹಾಸದಿಂದ ಕಾಣಿಸಿಕೊಂಡ ಜಾಣೆಮೆಂ । ಡಿರತಲೆವಣಿಯು ಚಿತ್ರೈಸು ॥ ೮೦ ॥

ವ್ಯಂತರಕಾಮಿನಿಯಿಂದ ಕೀರ್ತಿಸಿಕೊಂಡ । ಹೊಂತಕಾತಿಯು ನಿಟ್ಟಿಸರಸಾ ॥
ಅಂತಾದ ಮಹಿಮೆಯನುಬ್ಬಿನೊಳಾಡದ । ತ್ಯಂತಗಂಭೀರೆಯ ನೋಡು ॥ ೮೧ ॥

ಗರುವಿಕೆ ಗಾಡಿ ಬಿನ್ನಣದ ಬೆಡಗು ಮೈ । ಸಿರಿಯಾದ ದೇವಿಯ ನೋಡು ॥
ಭರತಚಕ್ರೇಶನ ಮನವನಲ್ಲಾಡಿಸಿ । ದರಸಿಯು ಕಳುಹೆಂದರೊಡನೆ ॥ ೮೨ ॥

ಪೆಣ್ಣ ಕಳುಹು ಶೃಂಗಾರವೃಕ್ಷದ ತನಿ । ವಣ್ಣ ಕಳುಹು ಮುಂದೆ ಮನೆಗೆ ॥
ಹಣ್ಣಿನೆಡೆಗೆ ಹಕ್ಕಿ ಹೋಹಂತೆ ಹೋಗಿ ನೀ । ನುಣ್ಣಾಕೆಯರರಮನೆಯಲ್ಲಿ ॥ ೮೩ ॥

ಎಂದು ಕೀರ್ತಿಸೆ ವೇತ್ರಧಾರಿಣಿಯರ ನುಡಿ । ಗಂದೆದೆಯೊಳು ಗಹಗಹಿಸಿ ॥
ಹೊಂದೊಡಿಗೆಯನಿತ್ತನಾಗಳೆ ಕರೆದು ಜೀ । ಯೆಂದೆನಲುಚಿತವಿನೋದಾ ॥ ೮೪ ॥

ನಲವಿಂದ ಕುಸುಮರಾಜಿ ಕೈಮುಗಿದಳು ರಾಯ । ನೊಳುನೋಟದಿಂದ ಬೀಳ್ಕೊಟ್ಟಾ ॥
ಗೆಲು ಹೆಂಗಳರಸಿಯೆಂದೊಡನೆ ಕಟ್ಟೆಗೆವೆಂಗ । ಳುಲಿವುತಿದ್ದರು ಹೋದಳಾಕೆ ॥ ೮೫ ॥

ಬಲ್ಲಳು ಪತಿಯು ಪಂಡಿತೆಯು ಹೃದಯತಂತ್ರ । ವೆಲ್ಲವ ಕುಸುಮರಾಜಿ ಮಾಜಿ ॥
ಸೊಲ್ಲಿಸದೆದೆಯೊಳು ನಲಿವುತ ಹೋದಳ । ದಲ್ಲವೆ ಕುಲಸತಿಯಂಗಾ ॥ ೮೬ ॥

ಚವರಹಾವುಗೆಗಿಂಡಿಹಡಪದ ಹೆಂಗಳಾ । ಗವೆ ಬಾಗಿಲೊಳಗೆ ಸಂಧಿಸಲು ॥
ದಿವಿಜಲೋಕದ ನಾರಿ ನರಲೋಕಕಿಳಿವಂತೆ । ಯುವತಿ ಸಾಗಿದಳತ್ತಲಿತ್ತ ॥ ೮೭ ॥

ರಾಯನ ಮುಂದೆ ಹೊತ್ತಗೆಯನಿರಿಸಿದಳಾ । ಗಾಯಕಿ ಕೂಡೆ ಗಾಯಕಿಗೆ ॥
ನಾಯಕರತ್ನಭೂಷಣವಿತ್ತು ಪಠಿಸೆಂದು । ಗೇಯಾರ್ಥ ಕೊಟ್ಟನಾ ಕೃತಿಯಾ ॥ ೮೮ ॥

ಮಡದಿಯರೆಲ್ಲರ ಕಳುಹ ಚಿತ್ತೈಸೆಂದ । ಳೊಡನೆ ಪಂಡಿತೆ ರಾಯನದಕೆ ॥
ನುಡಿಯದೆ ನೋಡುತಿದ್ದನು ಹೋಗುತಿದ್ದರು । ಕಡು ಸೊಬಗೆಯರು ಕೈಮುಗಿದು ॥ ೮೯ ॥

ಈ ರಾಣಿಯಾ ರಾಣಿಯಾದೇವಿಯಾ ದೇವಿ । ಭೂರಮಾ ಚಿತ್ತವಿಸೆಂದು ॥
ಕೋರಿ ನಾಮವ ತೋರಿ ಕಳುಹಿಸಿದರು ವೇತ್ರ । ಧಾರಿಣಿಯರು ರಾಯನಿಂದ ॥ ೯೦ ॥

ನಾರಿಯರೆಲ್ಲರ ಕಳುಹು ಕಾಮನ ಬಿಲ್ಲ । ನಾರಿಯು ನಗುವ ನೇರಿದರಾ ॥
ಸಾರಿ ಮೆಲ್ಲಗೆ ದೇವಿಯರು ನಿಮಗಿನ್ನನು । ಸಾರಿ ಯಾರೆಂಬರುಬ್ಬಿನೊಳು ॥ ೯೧ ॥

ಕುಲಸತಿಯರ ಕಳುಹರಸ ಸೌಜನ್ಯಾಂಗ । ವಿಲಸಿತೆಯರ ನೋಡು ರಾಯ ॥
ತೊಲಗಿ ಮೆಲ್ಲಗೆ ರಾಣಿಯರು ಮುಂದೆ ಮಾಡವ । ನಿಳಿವಾಗ ಜತನವಾರೈಕೆ ॥ ೯೨ ॥

ಇವಳ ನೋಡವಳ ನೋಡಿಂದಿನ ಕಾವ್ಯದ । ಕವಿಗಳಿಬ್ಬರನು ನೋಡೆನಲು ॥
ಅವನೀಶ ನಸುನಕ್ಕ ನವುರಾಜಿಸುಮನಾಜಿ । ಯವರು ನಗುತ ತೆರಳಿದರು ॥ ೯೩ ॥

ನಗೆಯಲ್ಲವೆ ನಿಮಗಿಂದು ರಾಯನ ತೋಳ । ದುಗುಲದ ಮನ್ನಣೆಗೊಂಡು ॥
ನಗುತ ಹೋಗುವಿರೆಂದು ನಗಿಸಿದರೊಡನೆ ಕೈ । ಮುಗಿದು ಕಟ್ಟಿಗೆವೆಂಗಳವರಾ ॥ ೯೪ ॥
ಬನ್ನಿ ದೇವಿಯರೆಲ್ಲ ಕಳುಹಿಸಿಕೊಳ್ಳಿರಾ । ಕನ್ನೆಯರುಗಳ ಚಿತ್ತೈಸು ॥
ಸನ್ನಿ ತೆರಪುಗೊಡಿ ಸಾಗಿ ಮೆಲ್ಲಗೆಯೆಂದು । ಚೆನ್ನಚೆನ್ನನೆ ಸೊಲ್ಲಿಸಿದರು ॥ ೯೫ ॥
ಸಂಮುಖದೊಳು ನಿಂದು ಕೈಮುಗಿದರಸಗೆ । ತಮ್ಮ ವ್ಯೈಸಾಗಿಸಿಕೊಳುತ ॥
ಸುಮ್ಮಾನದಿಂದ ಹೋದರು ಹೆಂಗಳೆಲ್ಲರು । ಹೊಂಮರಿಯಂದದಿ ಹೊಳೆದು ॥ ೯೬ ॥
ಪಂಡಿತೆ ಕಳುಹಿಸಿಕೊಂಡಳಾಕೆಯ ಬಳಿ । ಗೊಂಡು ಗಾಯಕಿಯರೆಯ್ದಿದರು ॥
ದಂಡಧಾರಿಣಿಯರು ತಾವೊಂದು ಮರೆಯೊಳ । ಗಂಡುಗೊಂಡರು ವೇಳೆಯರಿದು ॥ ೯೭ ॥
ಊಳಿಗವೆಂಗಳು ಕಡೆಸಾರ್ದರರಸನಾ । ಜೋಲಿಯೆಲ್ಲವು ನಿಂದ ಮೇಲೆ ॥
ಕಾಲೋಚಿತದಾತ್ಮಯೋಗವನೆಸಗಿದ । ನಾ ಲೇಸನೇನ ಬಣ್ಣಿಪೆನು ॥ ೯೮ ॥
ಪಲ್ಯಂಕಾಸನದೊಳಗೆ ಗದ್ದುಗೆಯೊಳು । ಶಲ್ಯವರ್ಜಿತನು ಕುಳ್ಳಿರ್ದು ॥
ಕಲ್ಯಾಣಮೂರ್ತಿ ಕಣ್ಮುಚ್ಚಿ ತನ್ನೊಳಗೆ ಧಾ । ವಲ್ಯಯೋಗವ ಕಂಡನೊಡನೆ ॥ ೯೯ ॥
ಎತ್ತಹೋದುದೊ ಹೆಂಗಳೊಡನುಬ್ಬಿನಿಂದಿಪ್ಪ । ಹೊತ್ತು ತಾನಾಡಿದ ಲೀಲೆ ॥
ಹತ್ತುಸಾವಿರ ಕಾಲ ತಪಸುಮಾಡಿದ ಮುನಿ । ಪೋತ್ತಮನಂತಿರ್ದನಾಗ ॥ ೧೦೦ ॥
ದೊರೆಯಿದ್ದು ಹೋಗೆನ್ನೆ ಹೋಗಿ ಬಾರೆಂದರೆ । ಬರುತಿಹ ಸೇವಕರಂತೆ ॥
ಕರಣನಾಲ್ಕಿಂದ್ರಿಯವೈದವನುಸುರಿದಂ । ತಿರುತಿಹವೇನ ಬಣ್ಣಿಪೆನು ॥ ೧೦೧ ॥
ಬೇಕಾದರಾಡಿಸಿ ಗಾಳಿಪಟವನರ್ತಿ । ಸಾಕಾಗೆ ಸುರುಳುವನಂತೆ ॥
ನೂಕಿ ಚಿತ್ತವ ಹೊರಗಾಡಿಸುವನು ತನ್ನೊ । ಳೇಕವಾಗಿರಿಸುವನೊಮ್ಮೆ ॥ ೧೦೨ ॥
ಹೊಳೆದೊಮ್ಮೆ ಹೊರಗೆ ಕಣ್ಣಿಕ್ಕಿ ಸೇವಕರಿಂದ । ಕೆಲಸವ ಕೊಂಬನು ಮೈಗೆ ॥
ಒಳಗೆ ಕಣ್ಣಿಕ್ಕಿ ಹಂಸಗೆ ಕರಣೇಂದ್ರಿಯ । ಗಳ ಕೈಯ ಸೇವೆಯ ಕೊಂಬಾ ॥ ೧೦೩ ॥
ಇಂದ್ರಿಯಭೋಗವ ಹೊರಗೆ ಭೋಗಿಸುವನ । ತೀಂದ್ರಿಯಸುಖವ ತನ್ನೊಳಗೆ ॥
ಚಂದ್ರಿಕಾಸುಖವ ಚಕೋರಂಬೊಲುಂಡು ಜಿ । ತೇಂದ್ರಿಯನಂತಿರುತಿಹನು ॥ ೧೦೪ ॥
ಮುಂಡೆಪರಂದು ಮೈಯನೊಣಗಿಸಿ ಬಾಹ್ಯವ । ಕಂಡು ಮಾಡುವ ಬಾಹ್ಯತಪಸಿ ॥
ದಂಡಿಸಿ ಮನವ ಕರ್ಮವನೊಣಗಿಸಿ ತನ್ನ । ಕಂಡು ಮಾಡುವ ತಪಸವಗೆ ॥ ೧೦೫ ॥
ಶಾಸ್ತ್ರದ ಗಡಬಡೆಯೊಳಗಾಡಿ ದೇಹದ । ವಸ್ತ್ರಮಾತ್ರವ ಬಿಟ್ಟ ಮುನಿಯೆ ॥
ವಸ್ತ್ರದಂದದ ಮೂರು ತನುವ ಬೇರ್ಪಡಿಸಿದಂ । ತಸ್ತ್ರೃಪ್ತನಾ ರಾಜಯೋಗಿ ॥ ೧೦೬ ॥
ಪೊಡವಿವೆಂಗಳ ಬಿಟ್ಟು ಸಗ್ಗವೆಂಗಳಿಗೊಲ್ದ । ಜಡಬ್ರಹ್ಮಚಾರಿಯೆ ಅವನು ॥
ಪಿಡಿದಾತ್ಮರತಿಯೊಂದನುಳಿದವೆಲ್ಲವ ಬಿಟ್ಟ । ಕಡುಬ್ರಹ್ಮಚಾರಿಯಾ ನೃಪತಿ ॥ ೧೦೭ ॥

ಬಗೆಯಲಾತ್ಮಗೆ ಬ್ರಹ್ಮವೆಸರುಂಟು ತನ್ನಾಪ್ತ । ಗಗನದೊಳಗೆ ತನ್ನ ಮನವಾ ॥
ಮಿಗೆ ಚರಿಯಿಸಲದು ಬಲು ಬ್ರಹ್ಮಚರಿಯ ಮು । ಕ್ತಿಗೆ ಬೀಜವದು ನೃಪಗುಂಟು ॥ ೧೦೮ ॥

ಹೆಂಗಳ ತೊರೆವುದು ವ್ಯವಹಾರಬ್ರಹ್ಮಚ । ರ್ಯಾಂಗ ಚಿತ್ತವನಾತ್ಮನೊಳಗೆ ॥
ಹಿಂಗದಂತಿರಿಸಲು ನಿಶ್ಚಯಬ್ರಹ್ಮಚ । ರ್ಯಾಂಗವೆಂದವನರಿದಿಹನು ॥ ೧೦೯ ॥

ಕೊಂಡಾಡೆ ಹೊರಗೆ ಬಿಟ್ಟೊಳಗೆಲ್ಲವನು ತುಂಬಿ । ಕೊಂಡಿಹ ಡಂಬಕಮುನಿಯೆ ॥
ಕಂಡರೆ ಹೊರಗೆಲ್ಲವಿಹುದೊಳಗೆಲ್ಲವ । ಖಂಡಿಸಿದಾಚಾರ್ಯನವನು ॥ ೧೧೦ ॥

ಉಂಡುಪವಾಸಿ ಬಳಸಿ ಬಹ್ಮಚಾರಿ ಭೂ । ಮಂಡಲವಿದ್ದು ನಿಸ್ಸಂಗ ॥
ಮಂಡೆಬೆಳೆದು ಮನಬೋಳಾದ ತಪಸಿಯು । ಕೊಂಡಾಡಲಳವೆ ಚಕ್ರಿಯನು ॥ ೧೧೧ ॥

ಜಿನ ಜಿನ ಕಣ್ಮುಚ್ಚಿ ತನ್ನ ಮೈಯೊಳಗೆ ತ । ನ್ನನೆ ತಾನೆ ಕಂಡನಾ ಕ್ಷಣವೆ ॥
ಜಿನ ಜಿನ ಕಂಡನು ಸಿದ್ಧನನಲ್ಲಿಯೆ । ಅನುಭವಿಸಿದನಾತ್ಮಸುಖವಾ ॥ ೧೧೨ ॥

ಸರ್ವಾಂಗದೊಳು ತಳತಳಿಸುತ ತನ್ನಾತ್ಮ । ತೋರ್ವನಾತ್ಮಗೆ ತೋರಲೊಡನೆ ॥
ಜಾರ್ವುದು ಕರ್ಮವೇರ್ವುದು ಸುಪ್ರಕಾಶವ । ಪೂರ್ವದ ಸುಖಹುಟ್ಟುತಿಹುದು ॥ ೧೧೩ ॥

ಪುರುಷಾಕಾರದೊಳಗೆ ತೋರ್ಪುದೊಡನೊಮ್ಮೆ । ಹರಿದೊಮ್ಮೆ ಪ್ರಭೆಯ ರೂಪಾಗಿ ॥
ಇರುತಿಹುದೊಡನಳಿವುದು ಕೂಡೆ ತೋರ್ಪುದು । ಭರತೇಶಗಂತರಂಗದೊಳು ॥ ೧೧೪ ॥

ಕತ್ತಲೆಯಹುದೊಮ್ಮೆ ಬೆಳಗಹುದದು ಮಾಸಿ । ಮತ್ತೊಂದು ತಂಪಿನ ಸೊಡರಾ ॥
ಹೊತ್ತಿಸಿದಂತಿಹುದಾ ಭರತೇಶನ । ಚಿತ್ತದೊಳಾತ್ಮಯೋಗವದು ॥ ೧೧೫ ॥

ಜುಮ್ಮೆನುತಿಹುದು ಸರ್ವಾಂಗದೊಳೆಲ್ಲಿಯು । ಉಮ್ಮುತಿಹುದು ಸುಖವೊಳಗೆ ॥
ಮಂಮಾಯಿದೊಂದು ವಿಸ್ಮಯವೆಂದೆನುತ ಪರ । ಬೊಮ್ಮದೊಳೋಲಾಡುತಿಹನು ॥ ೧೧೬ ॥

ಒಳಗೆ ತನ್ನಾತ್ಮನ ತಾ ನೋಡೆ ಹೊಸತೊಂದು । ಬೆಳಗು ತೋರ್ಪುದು ತೋರಲೊಡನೆ ॥
ಮಳಲಂತೆ ಜರಿವುತಿಹುದು ಕರ್ಮ ನಿಜಸುಖ । ಹೊಳೆಯಂತೆ ಹೊಳೆದೇಳುತಿಹುದು ॥ ೧೧೭ ॥

ತನಗಲ್ಲದನ್ಯರಿಗರಿಯಬಾರದು ಭವ್ಯ । ಜನಕಲ್ಲದದು ಸಾಧ್ಯವಲ್ಲ ॥
ಜಿನಶಾಸ್ತ್ರಸಿದ್ಧವೀ ವಾಕ್ಯ ನಿರ್ಭವ್ಯರ । ಮನಕೆಲ್ಲ ಪರಮವಿರುದ್ಧ ॥ ೧೧೮ ॥

ಆ ಭರತೇಶ್ವರನಾತ್ಮಯೋಗಾಮೃತ । ಶೋಭೆಯೊಳೋಲಾಡಿ ಮನದ ॥
ಲೋಭ ಮುಂತಾದ ದೋಷವ ತೊಳೆವುತ ಸುಖ । ಲಾಭದೊಳಿದ್ದನಂತಿರಲಿ ॥ ೧೧೯ ॥

ಗುಣಕೆ ಮತ್ಸರಿಸದೆ ಕಾಂತೆಯರೊಂದು ಲ । ಕ್ಷಣಕಾವ್ಯವನು ಪೇಳಲವರಾ ॥
ಪ್ರಣಯವಿನೋದದಿ ಮನ್ನಿಸಲಾಯ್ತು ಮ । **ನ್ನಣೆಯೊಂದು ಸಂಧಿ** ಸುಗಂಧಿ ॥ ೧೨೦ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೨೧ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೨೨ ॥

ಮೈಯೆಲ್ಲ ಕಣ್ಣು ಮೈಯೆಲ್ಲ ಮನಸು ನಿನ್ನ । ಮೈಯೆಲ್ಲ ಬಲುಸುಖಶಕ್ತಿ ॥
ಮೈಯೆಲ್ಲ ಪ್ರಭೆಯಾದ ಮಹಿಮ ನನ್ನೆದೆಯೊಳಿ । ರಯ್ಯ ಚಿದಂಬರಪುರುಷಾ ॥ ೧೨೩ ॥

ಮುನ್ನಣೆಸಂಧಿ ಸಂಪೂರ್ಣಂ

# ಸರಸಸಂಧಿ.

ದುರ್ವಾರಸಂಸಾರದುಃಖನಿವಾರಣ । ಸರ್ವಕಲಾಧರ ಶಾಂತಾ ॥
ನಿರ್ವಾಣಮತಿದೋರು ನಿಜದೋರು ಲೋಕೈಕಾ । ಪೂರ್ವ ನಿರಂಜನಸಿದ್ಧಾ ॥ ೧ ॥

ನಾನಾತ್ಮನಿದು ದೇಹ ನಾನೇ ಸುಜ್ಞಾನಿಯು । ಜ್ಞಾನಿಯೀ ದೇಹವೆಂದರಿದು ॥
ಜ್ಞಾನಾಕ್ಷಿಯಿಂದ ಹಂಸನ ನೋಡುತಿದ್ದನಾ । ಭೂನಾಥ ತನ್ನ ದೇಹದೊಳು ॥ ೨ ॥
ಮೊದಲೊಮ್ಮೆ ದೇಹ ಬೇರಾತ್ಮ ಬೇರೆಂದು ತ । ನ್ನೆದೆಯೊಳು ಸ್ಮರಿಸಿದನಹುದು ॥
ಅದು ಮತ್ತೆ ಹೋಯ್ತು ತನ್ನಾತ್ಮನ ತಾ ಕಂಡು । ಪದುಳದೊಳಿದ್ದನಾ ರಾಯಾ ॥ ೩ ॥
ಸಂಕಲ್ಪವಿಲ್ಲ ವಿಕಲ್ಪವಿಲ್ಲೊಂದರ । ಸೋಂಕಿಲ್ಲ ತನ್ನನೆ ತಾನು ॥
ಸೋಂಕಿ ತನ್ನೊಳು ಹುಟ್ಟಿದಾನಂದರಸದೊಳು । ತೇಂಕಾಡುತಿದ್ದನಾ ಭೋಗಿ ॥ ೪ ॥
ಹೋಗುತಿರ್ದುದು ಕರ್ಮರಜವಿಳಿದಿಳಿದೊಡ । ಸಾಗುತಿರ್ದುದು ಹೊಸಬೆಳಕು ॥
ಲಾಗಿಸುತಿರ್ದುವು ಸುಜ್ಞಾನಸುಖಗಳು । ಯೋಗದ ಸಿರಿಯನೇನೆಂಬೆ ॥ ೫ ॥
ರಾಜ್ಯವ ಮರೆದನು ಸತಿಯರ ತೊರೆದನು । ತ್ಯಾಜ್ಯವಾದುದು ಮೈಯ ನೆನಹು ॥
ರಾಜ್ಯಾಧಿಪತಿಯಿದ್ದನಮಲಾತ್ಮಯೋಗಸಾ । ಮ್ರಾಜ್ಯದೊಳಗೆ ಸಿದ್ಧರಂತೆ ॥ ೬ ॥
ಮಿಸುಕನಲ್ಲಾಡನು ಗದ್ದುಗೆಯೊಳಗೊಂದು । ಹೊಸಹೊನ್ನ ಚೆಲ್ವಪುತ್ತಳಿಯಾ ॥
ಒಸೆದು ಸಿಂಗರಿಸಿ ಕೀಲಿಸಿದರೊಯೆಂದೆನ । ಲೆಸೆವುತಿದ್ದನು ರಾಜಯೋಗಿ ॥ ೭ ॥
ಮನೆಯೊಳಿದ್ದನು ರಾಯ ಗದ್ದುಗೆಯೊಳಗಿದ್ದ । ತನುವಿನೊಳಿಹನೆಂಬರೆಲ್ಲ ॥
ಮನೆಯೊಳಿಲ್ಲಿಲ್ಲ ಗದ್ದುಗೆಯೊಳು ಮೈಯೊಳಿ । ಲ್ಲನುಪಮಾತ್ಮನೊಳಿದ್ದನಾಗ ॥ ೮ ॥
ಅಂಬರ ತಾನೆ ಪುರುಷರೂಪ ಕೈಕೊಂಡು । ತುಂಬಿ ಸುಜ್ಞಾನಕಾಂತಿಗಳಾ ॥
ಇಂಬುಗೊಂಡುದೊ ಮೈಯೊಳೆನೆ ತೋರುತಿಹನು ಚಿ । ದಂಬರಪುರುಷನಾ ನೃಪಗೆ ॥ ೯ ॥
ಧ್ಯಾನತತ್ಪರನಾಗಿ ಹೊರಗ ಮರೆದು ತನ್ನ । ತಾನೆ ತನ್ನೊಳು ಲೀನನಾಗಿ ॥
ಆ ನರಪತಿಯಿರೆ ಘಳಿಯಾರದೊಳು ಶಂಖ । ಧ್ವಾನ ಘೂರ್ಣಿಸಿತು ಹೊತ್ತರಿದು ॥ ೧೦ ॥
ನರನಾಥ ಕೇಳ್ದನಾ ಶಂಖನಿನಾದವ । ಗುರುಹಂಸನಾಥಗಾ ಕ್ಷಣವೆ ॥
ಪರಮಭಾವದೊಳಷ್ಟವಿಧದರ್ಚನೆಯ ಮಾಡಿ । ಸ್ಮರಿಸಿ ಬೀಳ್ಕೊಟ್ಟು ಕಣ್ದೆರೆದಾ ॥ ೧೧ ॥

ರಾಜಯೋಗೀಂದ್ರ ರಾಜಿತಹಂಸತತ್ವನೀ । ರೇಜಭಾಸ್ಕರ ಭವಮಥನಾ ॥
ನೈಜನಿಶ್ಚಿತ ಜಯವೆಂದು ಕಟ್ಟಿಗೆಹೆಂಗ । ಳೋಜೆಯಿಂದುಗ್ಗಡಿಸಿದರು ॥ ೧೨ ॥
ಮುನಿಭುಕ್ತಿವೇಳೆಯಾದುದು ಸ್ವಾಮಿಯೆಂದು ಮೆ । ಲ್ಲನೆ ಸೇವಕಿಯರು ಬಿನ್ನವಿಸೆ ॥
ಜಿನಸಿದ್ಧ ಶರಣು ನಿರಂಜನಸಿದ್ಧಯೆಂ । ದೆನುತೆದ್ದನಾ ಸಾರ್ವಭೌಮಾ ॥ ೧೩ ॥

ಹೊನ್ನಬೆಟ್ಟವನೇರಿ ತಪಸುಮಾಡುವ ಮುನಿ । ರನ್ನ ಭೂತಳಕಿಳಿವಂತೆ ॥
ಹೊನ್ನುಪ್ಪರಿಗೆಯಿಂದಿಳಿತರುತಿರ್ದನು । ತ್ಪನ್ನಾತ್ಮರಸಿಕನಾಯಕನು ॥ ೧೪ ॥

ಪಾದಾವಧಾನವೆಚ್ಚರಿಕೆಯಾರೈಕೆಯಿಂ । ದೋದೆ ಕಟ್ಟೆಗೆಯಕಾಂತೆಯರು ॥
ಮೇದಿನೀಪತಿಯಿಳಿದನು ಸ್ವರ್ಗದಿಂದಿಂದ್ರ । ಮೇದಿನಿಗಿಳಿದು ಬಹಂತೆ ॥ ೧೫ ॥

ಉಪ್ಪರಿಗೆಯಿನಿಳಿದೆಂದಿನಂದದ ಕ್ರಮ । ತಪ್ಪದೆ ನಡೆದು ಯೋಗಿಗಳು ॥
ಬಪ್ಪಬಟ್ಟೆಯ ಕಾದು ಕಂಡನಾಗಳೆ ಮುಝು । ವೊಪ್ಪವಧ್ಯಾತ್ಮಯೋಗಿಗಳಾ ॥ ೧೬ ॥

ಮುನಿಗಳ ನಿಲಿಸಿ ತನ್ನರಮನೆಗೆಯ್ದಿಸಿ । ತನಗೆ ಮಾಡಿದ ಪರಿಕರದ ॥
ಅನುಪಮಾನ್ನವನಿತ್ತು ತಣಿಪಿ ಬೀಳ್ಕೊಟ್ಟರ । ಮನೆಯೊಳಿದ್ದನು ರಾಯನಿರಲು ॥ ೧೭ ॥

ಬಂದಳು ಕುಸುಮಾಜಿಯೊಡವುಟ್ಟಿದಳು ಮಕ । ರಂದಾಜಿಯೆಂಬೊರ್ವ ನೀರೆ ॥
ಒಂದರೆವರುಷಕೆ ಪ್ರಾಯಕೆಯಿಹಳಿವ । ಳೆಂದೆಂಬ ಪಾಟಿಯ ಕನ್ನೆ ॥ ೧೮ ॥

ಚೆಲುವೆಯಹುದು ಜಾಣೆಯಹುದು ಶೃಂಗಾರವುಂ । ಗಲೆಯಾಗಿ ಸಖಿಯರುಗೂಡಿ ॥
ಲಲಿತಾಂಗಿ ಬಂದು ಕಂಡಳು ತೂಗುಮಂಚದೊ । ಳೊಲೆದಾಡುತಿರ್ದ ಭಾವನನು ॥ ೧೯ ॥

ಕೆಳದಿಯ ಕೈಯ ಹೊಂದಟ್ಟೆಯ ತಾನೊಯ್ದು । ಮಲಯಜವೀಟಿಕಾಕ್ಷತೆಯಾ ।
ನಳಿತೋಳ ನೀಡಿ ಭಾವಗೆ ಕೊಟ್ಟಳರಸನಾ । ಗಳೆ ಕೈಕೊಂಡನರ್ತಿಯೊಳು ॥ ೨೦ ॥

ಅನುಕೂಲವಾದುದಾರೋಗಣೆಗಿನ್ನೆಮ್ಮ । ಮನೆಗೇಳು ಭಾವಾಜಿಯೆಂದು ।
ತನುಮಧ್ಯೆ ನುಡಿದಳದಕೆ ರಾಯ ನಗುತ ನಾ । ದುನಿಯೊಳು ನುಡಿದನಿಂತೆಂದು ॥ ೨೧ ।

ಇಂದಾನು ನಿನ್ನ ಮನೆಗೆ ಬಹುದುಚಿತವೆ । ಒಂದರೆವರುಷದ ಮೇಲೆ ॥
ಬಂದು ನೀನೆನ್ನ ಕರೆದರಾನು ಬಹೆನು ಹೋ । ಗೆಂದನು ನೃಪತಿ ನಾದುನಿಯಾ ॥ ೨೨ ॥

ಅಕ್ಕಾಜಿಯರಮನೆಗೇಳೆಂದೆ ನೀನಿಂತು । ಠಕ್ಕಿನ ಮಾತನಾಡಿದೆಯ ॥
ಠಕ್ಕುಕಾತಿಯೆ ನಿನ್ನ ಮನೆಗೆಂದೆಯ್ಸೆ ನಿ । ನ್ನಕ್ಕನ ಹೆಸರ ಹೇಳಿದೆಯ ॥ ೨೩ ॥

ಅಕ್ಕನ ಪೆಸರ ಹೇಳುವರಾಕೆ ಪಡೆದರೆ । ಮಕ್ಕಳು ಪೇಳ್ವವು ಮುಂದೆ ।
ದಿಕ್ಕಿನೊಳೆನಗೇನು ಸಂಬಂಧ ಸಾಕೇಳು ॥ ಸಿಕ್ಕಿನ ಮಾತನಾಡದಿರು ॥ ೨೪ ॥

ಸಾಕೇಳು ಸಲಹೇಳು ನೀನೆಂದು ತಾನೆನ್ನ । ನಾಕರುಷಣಮಾಡುತಹಳೆ ॥
ಈಕೆ ತಾನೇನು ಕಾತರೆಯೊಯೆಂದನು ರಾಯ । ನಾ ಕಾಂತೆ ತಲೆವಾಗಿ ನಗಲು ॥ ೨೫ ॥

ಕಾತರಗೀತರವನು ನೀವು ನಿಮ್ಮಂಬು । ಜಾತಾಕ್ಷಿಯರು ಬಲ್ಲಿರೈಸೆ ॥
ಆತಳ್ಳಿಬಳ್ಳಿಯ ನಾವೇನ ಬಲ್ಲೆವು । ಮಾತು ಸಾಕಿನ್ನೇಳು ಭಾವಾ ॥ ೨೬ ॥

ಎನಲತಿಸರಸಗಳಾಗದೆಂಬುದ ನೆನೆ । ದನಿತರೊಳಿದ್ದನಾ *ರಾಯಾ ॥
ಮಿನುಗುವ ಹಾವುಗೆಗಳ ಮೆಟ್ಟಿ ನಡೆದನಂ । ಗನೆಯ ಮನೆಗೆ ನಲ್ಮೆಯಿಂದ ॥ ೨೭ ॥
ಕುಸುಮವಿದ್ದೆಡೆಗೆ ಮಧುವ್ರತ ಹೋಹಂತೆ । ಕುಸುಮಾಜಿಯರಮನೆಗಾಗಿ ॥
ಕುಸುಮಾಯುಧಜಿತಲಾವಣ್ಯ ನಡೆದನು । ಲ್ಲಸದಿಂದ ನಾದುನಿಯೊಡನೆ ॥ ೨೮ ॥

ದೇವನೆಯ್ತರುತಿಪ್ಪನೆಂದು ಹರಿದು ಹೋಗಿ । ಸೇವಕಿಯರು ಹೇಳಲೊಡನೆ ॥
ಭಾವೆ ಬಂದಳು ಕುಸುಮಾಜಿ ತಾನಿದಿರಾಗಿ । ಭಾವಕಿಯರ ಬಳಸಿನೊಳು ॥ ೨೯ ॥

ತನುಗಂಧಕೆರಗಿ ತುಂಬಿಗಳು ಝೇಂಕರಿಸಲೊ । ಯ್ಯನೆ ಹಂಸೆಗಳು ಹಜ್ಜೆವಿಡಿದು ॥
ಅನುಗತಿವಡೆಯಲು ಬಂದಳು ಜಗದ ಮೋ । ಹನಶಕ್ತಿ ನಡೆದು ಬಹಂತೆ ॥ ೩೦ ॥

ಅಳವಟ್ಟ ನೂತನಶೃಂಗಾರ ಕರತಲ । ದೊಳು ರತ್ನದಾರತಿ ಸಹಿತ ॥
ಲಲನೆ ಬಂದರಸಗಾರತಿಯೆತ್ತಿದಳು ತಳ । ತಳಿಸುವ ಮುಖಕಾಂತಿಯೆಸೆಯೆ ॥ ೩೧ ॥

ದುಗುಲನಿವಾಳಿಯನಿಟ್ಟಂಘ್ರಿಗೆರಗಲಿಂ । ದೊಗುಮಿಗೆ ತಲೆವಾಗುವಾಗ ॥
ನಗುತ ಹಾಹಾಯೆಂದು ನಡುವ ಮಂಡೆಯನೆತ್ತಿ । ತೆಗೆದು ಕೈವಿಡಿದನಾ ರಾಯಾ ॥ ೩೨ ॥

ಮುಟ್ಟ ಮುಂದೇಳೆಂಟು ಮಾರೈದಿ ತನ್ನ ಕೈ । ಮುಟ್ಟ ತೊಳೆದಳು ಪಾದಗಳ ॥
ಉಟ್ಟ ದುಕೂಲದ ಸೆರಗಿಂದ ಪತಿಗಂಗ । ದಟ್ಟವಿಕ್ಕಿದಳು ಭಕ್ತಿಯೊಳು ॥ ೩೩ ॥

ಆವಾಸದೊಳಹೊಕ್ಕನಾ ರಾಯನಕ್ಕಕ್ಕ । ಭಾವ ಬಂದನು ನಮ್ಮ ಮನೆಗೆ ॥
ದೇವಿ ಗದ್ದುಗೆಯಿಕ್ಕು ಮನ್ನಿಸೆಂದೊರೆದುದಂ । ದಾವೇಳೆಯೊಳು ರಾಜಕೀರಾ ॥ ೩೪ ॥

ಇವನೆ ಅಮೃತವಾಚಕನು ಕುಸುಮಾಜಿಯೆಂ । ದವನೀಶ ನುಡಿವುತಾಕೆಯೊಳು ॥
ಭವನದೊಳಿಟ್ಟ ಗದ್ದುಗೆಯಲ್ಲಿ ಕುಳಿತನು । ರವಿ ಪೂರ್ವಗಿರಿಯೇರುವಂತೆ ॥ ೩೫ ॥

ಬಂದೆಯ ಭಾವ ಬಂದೆಯ ಸುಪ್ರಭಾವ ಅ । ಯ್ತಂದೆಯ ಸುಗುಣಸ್ವಭಾವಾ ॥
ಬಂದುದು ಲೇಸು ಮಹಾನುಭಾವಾಯೆಂದು । ದಂದು ಮುದ್ದಿನ ರಾಜಕೀರಾ ॥ ೩೬ ॥

ಕ್ಷೇಮವೆ ಭಾವಾಜಿ ಮತ್ತು ನಿಮಗೆ ಪರಿ । ಣಾಮವೆ ಹೇಳು ಭಾವಾಜಿ ॥
ಈ ಮನೆಯತ್ತಲೇಕಡಿಗಡಿಗೆಯ್ತರೆ । ಭೂಮೀಶಯೆಂದುದಾ ಪಕ್ಕಿ ॥ ೩೭ ॥

ಧರೆಯನಾಳಿದನೆಂಬ ಗರ್ವವೊ ನಮ್ಮಕ್ಕ । ನರಮನೆಗಡಿಗಡಿಗೇಕೆ ॥
ಬರಲೊಲ್ಲೆ ಬಂದಿನ್ನು ಪೋಪೆಯ ನಿನ್ನ ಕಾ । ಲ್ಗುರುಲನಿಕ್ಕುವೆನೆಂದುದಾಗ ॥ ೩೮ ॥

ನಕ್ಕನದಕೆ ರಾಯ ನಗೆಯಲ್ತೆ ನಿನಗೆ ನ । ಮ್ಮಕ್ಕನಸುವ ಸೂರೆಗೊಂಡು ॥
ಪಕ್ಕೆಗೆಯ್ದದೆ ದೂರದೊಳಗಿದ್ದೆ ನೀನಿಂದು । ಸಿಕ್ಕಿದ್ದೈ ಲೇಸಾದುದೆಮಗೆ ॥ ೩೯ ॥

---

* ನೃಪತಿ.

ಸುಳಿಗುರುಳೆಂಬುರುಲುಂಟು ನಮ್ಮಕ್ಕನ । ನಳಿತೋಳಪಾಶಗಳುಂಟು ॥
ಹೊಳೆದಿನ್ನು ಹೋಹ ಭಾವನ ಕಾಣ್ಬೆನೆಂದರ । ಗಿಳಿ ನುಡಿದುದು ಸರಸದೊಳು ॥ ೪೦ ॥
ಸೋಂಕಿ ನಮ್ಮಕ್ಕನೊತ್ತಿನೊಳಿದ್ದರಿರು ವಿಾರಿ । ಭೋಂಕನೆ ಪೋಪೆನೆಂಬಾಗ ॥
ಪಂಕಜಾಕ್ಷಿಯು ಕಡೆಗಣ್ಣಕಾಂತಿಯು ಬೆಳ್ಳಿ । ಸಂಕಲೆಗಳನಿಕ್ಕಿಸುವೆನು ॥ ೪೧ ॥
ಪಂಜರದೊಳಗಿದ್ದು ನಿನಗಿಷ್ಟೆಯೆನದಿರು । ಮಾಂಜಿ ನೀನಗಲ್ವಾಗ ನಿನ್ನ ॥
ಹೊಂಜೆಳೆಮೈಯುಳ ದಂತಕಾಂತಿಯು ಹೊನ್ನ । ಪಂಜರದೊಳು ಕೂಡಿಸುವೆನು ॥ ೪೨ ॥
ಇಷ್ಟೇಕೆ ಕೋಪ ನಿಮ್ಮಕ್ಕಗಾನೆಸಗಿದ । ಕಷ್ಟವೇನಮೃತವಾಚಾಂಕಾ ॥
ಶಿಷ್ಟರೆಂದೆಯ್ತಂದೆವಕಟ ನೀವಿಬ್ಬರು । ದುಷ್ಟರಲ್ಲವೆಯೆಂದನೊಡನೆ ॥ ೪೩ ॥
ನೋವಾಯ್ತೆ ಭಾವಾಜಿ ನಮ್ಮಕ್ಕನಧರಸಂ । ಜೀವನಾಮೃತವ ನೀನುಂಡು ॥
ಜೀವಸಿದ್ಧಿಯ ಪಡೆದಿರು ನಮ್ಮ ಮನೆಯೊಳಿ । ನ್ನೀ ವಾಕ್ಯಲೇಸಲೆ ನಿನಗೆ ॥ ೪೪ ॥
ನನಗೆ ನೇರಿಲಹಣ್ಣು ವನದೊಳುಂಟಕ್ಕನಾ । ನನದೊಳು ನೇರಿಲಹಣ್ಣು ॥
ನಿನಗುಂಟು ಸುಖಿಸಿಕೊಂಡಿರು ನಾನು ನೀನಿಂತು । ಬಿನದದೊಳಿರುತಿಹೆವಿಲ್ಲಿ ॥ ೪೫ ॥
ನಡು ತಾನೆ ಸಿಂಗಳದೇಶ ಕುಂತಳದೇಶ । ಮುಡಿ ಕರ್ಣ ಕರ್ಣಾಟದೇಶ ॥
ಕಡುಗಂಪು ಕಾಶ್ಮೀರದೇಶವಕ್ಕನ ಮೈಯು । ಪೊಡವಿಯನಾಳೆತ್ತ ಪೋಪೆ ॥ ೪೬ ॥
ಅಸಿಯುಳ ಯೌವನವನವುಂಟು ಲಾವಣ್ಯ । ರಸದ ತಣ್ಬೊಳೆಯುಂಟು ಭಾವಾ ॥
ಒಸೆದು ವನಕ್ರೀಡೆ ವಾರಿಕ್ರೀಡೆಯನಾಡಿ । ಬಿಸಿಲನಾರಿಸಿಕೊ ಕಾತರದ ॥ ೪೭ ॥
ಈ ನುಡಿಗಳು ನಿನಗುಚಿತಗಳಹುದಿನ್ನು । ಮಾನಿನಿಯಾಸ್ಯದೊಳೊಂದು ॥
ಜೇನೆಯ್ಯ ಕೊಡನುಂಟು ನಿನಗದೆಂತಹುದದು । ಜೈನನಲ್ಲವೆ ಭಾವಾ ನೀನು ॥ ೪೮ ॥
ಎನೆ ನಕ್ಕನರಸನೀ ನುಡಿಗಳು ಗಿಳಿಯ ಯೋ । ಚನೆಯಲ್ಲ ಸತಿಯೊರ್ವಳಿದಕೆ ॥
ಬಿನದಕೆ ಕಲಿಸಿದಳಾವಳೆಂದೆಣಿಸಿ ನಾ । ದುನಿ ಕಲಿಸಿದಳೆಂದೆ ತಿಳಿದಾ ॥ ೪೯ ॥
ಈ ಜೂಟುನುಡಿ ಸರಸಗಳಿವು ಮಕರಂ । ದಾಜಿಯ ತಂತ್ರವೆಂದರಿದು ॥
ಆ ಜಾಣ್ಮೆಗರಸ ಮೆಚ್ಚಿದನದನುಸುರದೆ । ಮಾಜಿ ತನ್ನೊಳಗಿಂತು ನೆನೆದಾ ॥ ೫೦ ॥
ನಾದುನಿಯುನು ತಾನು ತಕ್ಕಿಸಿಕೊಂಬರ್ತಿ । ಯಾದುದು ತನ್ನೊತ್ತಿಗವಳು ॥
ವೇದಿಸಿ ಬಾರಳದಕೆ ಕಂಡನೊಂದು ತಂ । ತ್ರೋದಯವನು ಮನದೊಳಗೆ ॥ ೫೧ ॥
ಚಂದದಿ ನುಡಿವುತಿದ್ದುದು ಗಿಳಿಯನು ಮಕ । ರಂದಾಜಿ ಕೊಂಡುಬಾರೆಂದಾ ॥
ತಂದು ಗಿಳಿಯ ಕೊಡುವಾಗ ನಾದುನಿಯನಾ । ನಂದದೊಳಮರ್ದಪ್ಪಿಕೊಂಡಾ ॥ ೫೨ ॥
ಅತ್ತಿತ್ತ ಮೈಯನೊಲೆದಳಾಕೆ ಮಿಸುಕದಂ । ತೆತ್ತಿ ತಾನಮರ್ದಪ್ಪಿಕೊಂಡಾ ॥
ಮುತ್ತು ಕೊಟ್ಟನು ಕೊರಳಿಗೆ ಕಂಠಮಾಲೆಯ । ಸುತ್ತಿ ಮೆಚ್ಚಿದೆನೆಂದು ಬಿಟ್ಟಾ ॥ ೫೩ ॥

ದೇವರವಳಿಗೇನ ಕಂಡು ಮೆಚ್ಚಿದಿರೆಂದು । ಭಾವಕಿ ಕುಸುಮಾಜಿ ನಗುತ
ಭಾವಿಸಿ ಕೇಳಲು ನಿಮ್ಮ ತಂತ್ರವನಿಷ್ಟು । ನಾವು ಬಲ್ಲೆವು ಕಾಣೆಯೆಂದ ॥ ೫೪ ॥
ಹೊಸನುಡಿಯಲ್ಲವೆ ಗಿಳಿಗೀಕೆಯೆಂದು ತಾ । ನೊಸೆದೋದಿಸಿದಳಲ್ತೆಯಿವನು ॥
ಹಸನಾಯ್ತು ಜಾಣ್ಮೆಯದಕೆ ಮನಮೆಚ್ಚಿ ತ । ಕ್ಕೈಸಿಕೊಂಡು ಬಿಟ್ಟೆ ನಾನೆಂದ ॥ ೫೫ ॥
ಆದುದೆ ತಂಗಿ ನಾನಾಗಳೆ ಬೇಡವೆಂ । ದೋದಿದೆ ನೀನೊಪ್ಪದಾದೆ ॥
ಹೋದ ಗಾಳಿಯು ಹಜ್ಜೆಗಾಣ್ಬವರೊಡನೆಂತು । ವಾದಮಾಡುವೆಯೆಂದಳಾಗ ॥ ೫೬ ॥
ನಾನಾಗ ಮಾಡದಿಂದಿಲ್ಲಿಗೈತರಲಾಗಿ । ಯಾ ನವ್ಮ ವಾರ್ತೆಯ ಕೇಳ್ದು ॥
ತಾನು ಗಿಳಿಗೆ ಹೊಸನುಡಿವೇಳುತಿದ್ದಳಿ । ದೇನ ಹೇಳುವೆ ತಂಗಿಯೆಂದೆ ॥ ೫೭ ॥
ಅಕ್ಕ ಭಾವಾಜಿಯಿಂದೆವ್ಮ ಮನೆಗೆ ಬಂದು । ಹೊಕ್ಕಾಗ ಗಿಳಿಯಿಂದ ನಾನು ॥
ಮಿಕ್ಕ ಸರಸವಾಡಿಸುವೆನೀಗ ಜಾಣ್ನುಡಿ । ಲೆಕ್ಕದೋರುವೆನೆಂದಳದಕೆ ॥ ೫೮ ॥
ಜಯಿಸಲರಿದು ತಂಗಿ ನಿನ್ನ ಭಾವನು ಬಟ್ಟೆ । ಬಯಲೊಳು ರೂಪಬರೆವನು ।
ಬಯಲಿಗೆ ಪ್ರಯಾಸಗೊಳಬೇಡವೆಂದೆನೆ । ನ್ನಯ ಮಾತ ಮೀರಿದಳಾಗ ॥ ೫೯ ॥
ಬೇಡವೆಂದೆನು ಕೇಳಳರಗಿಳಿಯನು ನಾನು । ಬೇಡಿದೆ ಕೊಂಡೆದ್ದಳದನು ॥
ಕೂಡೆ ಸಖಿಯರ ಬಿಟ್ಟುರೆ ಹಿಡಿಯೆಂದೆನು । ವ್ರೋಡಿದಳೆವ್ಮ ಹಿತ್ತಿಲಿಗೆ ॥ ೬೦ ॥
ಇವಳೊಡನಾಟದ ವೇಳೆಯಲ್ಲೆಂದೆನ್ನ । ಭವನಕೃತ್ಯದೊಳಿದ್ದೆ ನಾನು ॥
ಅವಳರಗಿಳಿಯನೋದಿಸಿಕೊಂಡು ಬಂದಳು । ತ್ಸವದಿಂದ ಮತ್ತೆ ಮಂದಿರಕೆ ॥ ೬೧ ॥
ಮುನ್ನ ನಾನೀ ನುಡಿಗಳ ಕೇಳ್ದೆನಾದರು । ನಿನ್ನ ಮೇಲಾಣೆ ಕೇಳರಸಾ ॥
ಕನ್ನೆಯೆಯಿವಳು ಕೌಟಿಲಕಾತಿಯೆಂದಳು । ಚೆನ್ನೆ ರಾಯನೊಳು ತಂಗಿಯನು ॥ ೬೨ ॥

ಏನ ಮಾಡಿದೆನಕ್ಕ ನಿನಗು ನಿನ್ನರಸಗು । ನಾನಿಲ್ಲಿ ಕುಟಿಲತಂತ್ರವನು ॥
ಮಾನಿನಿ ಗಿಳಿಯ ತಾರೆಂದು ಚೇಷ್ಟೆಯ ಮಾಡು । ವೀ ನಿನ್ನ ಪತಿಯೊಗ ಕುಟಿಲ ॥ ೬೩ ॥
ಮುಚ್ಚು ಮುಚ್ಚತಿಧೂರ್ತೆ ನಿನ್ನ ಬಾಯನು ಸ್ವಾಮಿ । ಮೆಚ್ಚನಿತ್ತರೆ ಚೇಷ್ಟೆಯೆಂಬೆ ॥
ಮೆಚ್ಚದು ನಿನಗಿರಲಾನೀತನರಸಿಯೆ । ಬೆಚ್ಚಂತೆ ಬಿಗಿದಪ್ಪುವಾಗ ॥ ೬೪ ॥
ಅಕ್ಕನ ನೋಡುವೆನೆಂದು ನಿನ್ನಯ ಬೀಡ । ಹೊಕ್ಕರೆ ಫಲತೋರಿತೆನಗೆ ॥
ಚೆಕ್ಕನೆಮ್ಮೂರಿಗೆಯ್ದುವೆನಿನ್ನು ನಿಮ್ಮೂರ । ದಿಕ್ಕ ನೋಡಿದರಾನು ಹೆಣ್ಣೆ ॥ ೬೫ ॥
ಮಾನಿಯ ಮುಂದಕೆ ತಂದಂತೆ ನೋಡೆವ್ಮ । ಮಾನಭಂಗವ ಮಾಳ್ಪನೀತ ॥
ಆನೆಯಂತೊಯ್ಯದಮರ್ದಪ್ಪುತಿದ್ದನು ದೊಡ್ಡ । ಭೂನಾಥನೆಂಬ ಹೆವ್ಮೆಯೊಳು ॥ ೬೬ ॥

ಅಳುವಂತೆ ಮೊಗವ ಕಿರಿದು ಮಾಡಿಕೊಂಡಾಗ । ತಲೆವಾಗಿ ಕಣ್ಣನೊಸೆವಳು ॥
ಒಳಗೆ ಸಂತಸವುಂಟು ಕಣ್ಣನೀರಿಲ್ಲ ಬಿ । ಕ್ಕುಳಿಸುತ ನುಡಿವಳು ಸಟೆಗೆ ॥ ೬೭ ॥

ನೋಡುವಳೊಡನೋರೆಗಣ್ಣಿಂದ ಭಾವನ । ಕೂಡಡ್ಡ ಮೋರೆದೆಗೆವಳು ॥
ನೋಡುವಾಗಿಷ್ಟು ಚಿಂತೆಯ ತೋರಿ ಮೊಗವಡ್ಡ । ಮಾಡಿಕೊಂಡುರೆ ನಗುತಿಹಳು ॥ ೧೮ ॥
ಶಿರದೂಗುವನು ಮುಗುಳ್ನಗುವನು ಕುಸುಮಾಜಿ । ಗರಸ ಕಣ್ಸನ್ನೆದೋರುವನು ॥
ತರಳೆಯು ಠಕ್ಕಿನಳ್ಕೆಯೆಯೆಂದು ನೆನೆವ ತ । ನ್ನರಸಿಯು ಬೆರಗಾಗುತಿಹಳು ॥ ೧೯ ॥

ಏಕಿಷ್ಟು ವ್ಯಾಕುಲ ಮಕರಂದೆ ನಿನಗೆಂದ । ಳಾಕೆ ಹೋಗಕ್ಕ ನಿನ್ನಿಂದ ॥
ಕಾಕಾದೆ ನಾನೆಂದಳಕ್ಕಟಕ್ಕಟ ತಂಗಿ । ಗೀ ಕೊರತೆಯೆಯೆಂದಳಾಕೆ ॥ ೨೦ ॥
ಜಾತಿಕ್ಷತ್ರಿಯಪುತ್ರಿಯಿಂತಾಡುವಳೆ ವೈಶ್ಯ । ಜಾತಿಯೊ ನೀನು ಶೂದ್ರಿಕೆಯೊ ॥
ಓತನ್ನರಪ್ಪಲು ಸಾವಲ್ತೆ ಕೊರತೆಯ । ಮಾತಾವುದೆಂದಳಾ ತಂಗಿ ॥ ೨೧ ॥
ಕೋವಿದನಿದಿರೊಳು ಕೃತಕ ಸಲ್ಲದು ನಿನ್ನ । ಭಾವಾಜಿ ಭಾವಜ್ಞನರಿಯ ॥
ಈವಿದ ನಿನ್ನ ಕಂಗಳ ನೀರ ಕಂಡೆದೆ । ನೋವುತಿದ್ದನು ಸಾಕು ತಂಗಿ ॥ ೨೨ ॥
ಎನಲೊಡನರಿದಾಗಳೆ ಕಣ್ಣ ತಿಕ್ಕುತೊ । ಯ್ಯನೆಯೆವೆವೊಂದೆರಳ್ಮರಿಯೆ ॥
ಅನಿತರೊಳಗೆ ಕಣ್ಣನೀರೊಕ್ಕುವುದ ಕಂಡು । ಜನನಾಥ ಭಾಪೆಂದ ನಗುತ ॥ ೨೩ ॥
ನಮ್ಮರಸನ ಮುಂದೆ ದುಃಖದ ಕಣ್ಣೀರು । ಹೆಮ್ಮಕ್ಕಳಿಗೆ ಬಾರವಲಗೆ ॥
ಸುಮ್ಮಾನದಿಂದ ಕಣ್ಬನಿಯುಂಟು ನಿನಗೀಗ । ಳುಮ್ಮಿದಶ್ರುಗಳು ಲೇಸಲ್ತೆ ॥ ೨೪ ॥
ಗಂಡನ ನೀನು ಬಣ್ಣಿಪೆ ನನಗಾತನ । ಕಂಡರೆ ಸೇರುವುದಿಲ್ಲ ॥
ಕಂಡುದಿಲ್ಲವೆ ನಿನ್ನ ಗಂಡನಾಟವ ನಮ್ಮ । ಭಂಡುಮಾಡುವ ಬವಣೆಯನು ॥ ೨೫ ॥
ಸಾಕು ನಿನ್ನಯ ಚೇಷ್ಟೆ ಮರಸಿದ ಗಿಳಿಯೋದ । ಲೋಕವರಿಕೆಗೆಯ್ದನರಿಯಾ ॥
ಈ ಕೊಂಕು ನೃಪನೊಳು ಸಲುವುದೆ ತಂಗಿಯೆಂ । ದಾಕೆ ಸಾಣ್ಕೆಸಿ *ನಗುತಿಹಳು ॥ ೨೬ ॥
ಮರಸಿದ ಗಿಳಿಯೋದ ಕಂಡಂತೆ ಪೇಳ್ದನೆಂ । ದರಿಪಿದ ನುಡಿ ತಾಗಿತವಳ ॥
ಬರಿಯುಳ್ಕಿಯೂಟವ ತೊರೆದಳು ತಲೆವಾಗಿ । ಕಿರುನಗೆ ನಗುತಿದ್ದಳೊಡನೆ ॥ ೨೭ ॥

ಎಂಜಲು ಕೊಟ್ಟನು ಥೂ ಥೂ ಎಂದುಗುಳ್ವಳು । ಕಂಜಾಕ್ಷಿ ತುಟಿಯ ತೊಡೆವಳು ॥
ಎಂಜಲೆಂಬರೆ ಧೂರ್ತೆ ಸಂಜೀವನದ ರಸ । ಪುಂಜವನಿತ್ತ ನಮ್ಮರಸಾ ॥ ೨೮ ॥
ನಿನಗೆ ಸಂಜೀವನವೆನಗಲ್ಲವೆಂದಾಗ । ಕನಕಭೃಂಗಾರದ ಜಲವಾ ॥
ಜನಪ ಕಾಣ್ಬಂತೆ ಮುಕ್ಕಳಿಸಿಯುಗುಳ್ವಳು । ಜಿನಯೆಂದು ಜಪಿಸಿ ಕಳೆವಳು ॥ ೨೯ ॥
ಕಣ್ಣುಮುಚ್ಚುವಳಿಷ್ಟು ಜಾನಿಸುವಳು ತುಟಿ । ಬಣ್ಣ ಮಿಡುಕಿ ಜಪಿಸುವಳು ॥
ಕಣ್ಣುದೆರೆದು ಭಾವನ ನೋಡುವಳು ಸಾಣ್ಕೆ । ಹೆಣ್ಣು ಬಾಗುವಳಾಗ ತಲೆಯಾ ॥ ೩೦ ॥

---

* ಕಿರುಹಿದಳು.

ಎಲಗೆ ಜೋಗರವಿಷ್ಟು ಸಲ್ಲದೆಮ್ಮರಸನೆಂ । ಜಲು ಸೋಂಕಿದಾಗಳೆ ನಿನ್ನ ॥
ಕುಲಕೋಟಿ ಪಾವನವೆಂದಳು ಕುಸುಮಾಜಿ । ಕುಲಸತಿಯರ ಕುಲತಿಲಕೆ ॥ ೮೧ ॥

ಏನು ನುಡಿವೆಯಕ್ಕ ನೀನೀತಗುರೆ ಸೋತು । ಹೀನದೋರುವೆ ತವರೂರಾ ॥
ಈ ನೃಪನಾಳ್ವಷ್ಟು ನೆಲನಿಲ್ಲ ನಮ್ಮವ । ಗೇನು ಕಡಮೆ ವಂಶದಲ್ಲಿ ॥ ೮೨ ॥

ನಲ್ಲಗೊಲಿದು ತಾನು ಸುಖಿಯಾದೆನೆನಬೇಕು । ಯೆಲ್ಲರ ಕ್ಷೀಣಗಾಣಿಪುದು ॥
ಬಲ್ಲವಿಕೆಯೆಯೆಂದು ಕ್ಷತ್ರಿಯಾತ್ಮಜೆಯೆಂಬ । ಬಲ್ಲಿತ ತೋರಿ ನುಡಿದಳು ॥ ೮೩ ॥

ಮೆಚ್ಚಿರುತಿಹಳು ಭಾವನ ರೂಪು ಕುಲಶೀಲ । ಹೆಚ್ಚೆಂದು ತನ್ನೆದೆಯೊಳಗೆ ॥
ಒಚ್ಚೆಯಗೊಡದಾಗ ತವರೂರ ಮೇಲಣ । ಹೆಚ್ಚುಗಾರಿಕೆಗಾಡುತಿಹಳು ॥ ೮೪ ॥

ಕ್ಷೀಣಭಾಗ್ಯದ ರಾಜಸುತೆ ದೊಡ್ಡ ರಾಯಗೆ । ರಾಣಿಯಾದರೆ ತಾನು ತನ್ನ ॥
ಜಾಣತನದಿ ತವರೂರನಾತಗೆ ಸರಿ । ಗಾಣಿಸದಿಹಳೆ ಹೇಳಕ್ಕ ॥ ೮೫ ॥

ಬಡದೊರೆಯಾತ್ಮಜೆ ಬಲುದೊರೆಯನು ಕೈ । ವಿಡಿದಾಗ ಪುರುಷನನೊಲಿಸಿ ॥
ಎಡೆವಿಡದೀಮನೆಗಾಮನೆ ಸರಿಯಾಗಿ । ನಡೆಯಿಸದಿರೆ ರಾಜಸುತೆಯೆ ॥ ೮೬ ॥

ಕಟ್ಟಾಣಿವೆಣ್ಣೆನಿಸುವ ಕ್ಷತ್ರಿಯಾತ್ಮಜೆ । ಪಟ್ಟವರ್ಧನನ ಕೈವಿಡಿದು ॥
ಹುಟ್ಟಿದ ಮನೆ ಹೊಕ್ಕ ಮನೆಗಳೆರಡ ಸರಿ । ಗಟ್ಟಿ ನಡಿಸುವುದೊಂದರಿದೆ ॥ ೮೭ ॥

ತವರುಮನೆಯ ತನ್ನ ಪತಿಯ ಮನೆಯ ತನ್ನ । ಧವನ ಮನವ ತನ್ನ ಮನವಾ ।
ಯುವತಿ ಬೆಳಗ ಬೇಕು ಬೆಳಗದಿದ್ದವಳು ಮಾ । ನವಪತಿಪುತ್ರಿಯೆ ಹೇಳು ॥ ೮೮ ॥

ರಾಜಪುತ್ರಿಯರ ಲಕ್ಷಣವಿವು ನೀನಿವ । ರೋಜೆಯೆಲ್ಲವ ಬಿಟ್ಟು ನಿನ್ನ ॥
ರಾಜನೆ ಘನನೆಂದು ಹೊಗಳುತಿದ್ದಪೆ ಕುಸು । ಮಾಜಿ ಹೇಳಿದು ಬಲ್ಲತನವೆ ॥ ೮೯ ॥

ನಿನಗಹುದಾ ಗುಣ ಜಾಣೆ ನೀನೊಬ್ಬ ಭೂ । ಪನ ಕೈಯವಿಡಿದಾಗ ನಿನ್ನಾ ॥
ಜನನಿಜನಕರ ಬಲ್ಮೆಯನಲ್ಲಿ ತೋರಿಸು । ನನಗೆ ಬಾರದು ಬರಿಹೆಮ್ಮೆ ॥ ೯೦ ॥

ನಾಡಾಡಿಗಳಿಗೆ ನಾಡಾಡಿಗಳನು ಸರಿ । ಮಾಡಬಹುದು ಕೂಡಬಹುದು ॥
ನಾಡನೆಲ್ಲವನೊಂದೆ ಕೊಡೆಯೊಳಾಳ್ವಗೆ ಸರಿ । ಮಾಡುವುದೆಂತು ಮಿಕ್ಕವರಾ ॥ ೯೧ ॥

ಪ್ರಥಮತೀರ್ಥೇಶನ ಹಿರಿಯ ಕುಮಾರಗೆ । ಪ್ರಥಮಚಕ್ರಿಗೆ ಕಟ್ಟಕಡೆಯ ।
ಪೃಥುಳಮನುವಿಗಾರ ಸರಿಯಿಡಬಹುದೆಲೆ । ಶಿಥಿಲವೇಣಿ ಸೊಲ್ಲಿಸೆನಗೆ ॥ ೯೨ ॥

ದುರ್ಗಂಧವೊಡಲ ಮೂಳರಿಗೆ ಮೂಳರ ತಂದು । ವರ್ಗಿಸಿ ಸರಿಮಾಡಬಹುದು ॥
ನೇರ್ಗರಿಯಳೆ ಮಲಮೂತ್ರವಳಿದ ದೇಹ । ವರ್ಗಗಾಣೆರೆಯೆನಬಹುದು ॥ ೯೩ ॥

ಹೊರಗ ಮೆಚ್ಚಿದ ಕುರುಬರಿಗೆ ಕುರುಬರ ತಂ । ದುರೆ ಸರಿಹೋಲಿಸಬಹುದು ॥
ಅರಿದೊಳಗಾತ್ಮತತ್ವವ ಮೆಚ್ಚಿ ಸುಖಿಸುವೆ । ಮ್ಮರೆಯಗಾರೆಣೆಯೆನಬಹುದು ॥ ೯೪ ॥

ಕಂಡುದ ಪೇಳ್ವೆನು ಕೇಳೆಮ್ಮ ನೃಪನೊಲ್ದು । ಕಂಡರೆ ಧರೆಯರಸುಗಳು ॥
ಮಂಡಳಿಕರು ಮತ್ತೆ ಮುನಿದು ನೋಡಿದರೆಲ್ಲ । ತೊಂಡರು ಸಾಕು ವಿಡಾಯು ॥ ೯೫ ॥

ನಿಗರಣೆ ಬೇಡೆಲೆ ಮಕರಂದೆ ನೃಪನೊಳು । ಪಗರಣೆ ಸಲ್ಲದು ತಂಗಿ ॥
ನಿಗರಣೆಪಗರಣೆನಟನೆಗಳನ್ಯರೊ । ಳಗೆ ಸಲ್ವುವಿಲ್ಲಿ ಮರೆಯುವು ॥ ೯೬ ॥

ಬಿಡು ನಿನ್ನ ಕೇಡು ನಿನ್ನಯ ತವರೂರ ಕೇ । ಡೊಡನಾಡಿತನದ ಸೊಕ್ಕಿಂದ ॥
ನುಡಿವುತಿದ್ದಪೆ ನಮ್ಮ ಸ್ವಾಮಿಯೊಳೆಂದಳಾ । ಕಡುಶೀಲವತಿ ರಾಯ ಮೆಚ್ಚೆ ॥ ೯೭ ॥

ಏನೊಲಿಸಿದನಕ್ಕ ನಿನ್ನನೀ ರಾಜಾಭಿ । ಧಾನವೇಷದ ಮಾಯಕಾರ ॥
ತಾನಲ್ಲದನ್ಯರು ನಿನ್ನೆದೆಯೊಳಗಿಲ್ಲ । ಹಾನಿಯಾದುದು ನಮ್ಮ ಬಲ್ಪು ॥ ೯೮ ॥

ಮನವನೀತಗೆ ಮಾರಲಿತ್ತೆ ಇಂದ್ರಿಯವೈದ । ನನುರಾಗ ಮಿಗೆ ಸೂರೆಯಿತ್ತೆ ॥
ತನುವ ದಂಡವ ತೆತ್ತೆ ತವರೂರ ಬಿಡುವುದು । ನಿನಗೆ ಗಣ್ಯವೆ ಸುಖಮುಗ್ಧೆ ॥ ೯೯ ॥

ವೀಳೆಯದೊಳಗೆ ಮದ್ದುಂಟೊ ನಿನ್ನರಸನಾ । ತೋಳೊಳುಂಟೊ ವಶ್ಯಯಂತ್ರ ॥
ಬೇಳುವೆಯುಂಟೊ ತಿಲಕದೊಳಲ್ಲದರಿಂತು । ಬೇಳಾಗಿ ನೀನು ಸಿಕ್ಕುವೆಯ ॥ ೧೦೦ ॥

ಹುಸಿಯಲ್ಲ ನನ್ನನಾಗನಿಸಪ್ಪುವಾಗ ಡಿ । ಳ್ಳಿಸಿತೆದೆ ಜುಂಮನೊಸರಿಸಿ ॥
ನಸುಮುತ್ತ ಕೊಡುವಾಗ ಮೂರ್ಛೆ ಸಂಧಿಸಿತು ಸಾ । ಹಸದಿ ಬೀಳದೆ ನಿಂದೆ ನಾನು ॥ ೧೦೧ ॥

ಮಾನಹಾನಿಯ ನೆನೆದತ್ತರು ಕಣ್ಣೀರು । ತಾನು ಬಾರದು ನನಗಾಗ ॥
ಏನ ಹೇಳುವೆ ನಿನ್ನ ಗಂಡನ ಮಾಯವ । ನೀನೊಲಿವುದು ಚೋದ್ಯವಲ್ಲ ॥ ೧೦೨ ॥

ಕೇಳುತಿದ್ದನು ರಾಯ ಕುಸುಮಾಜಿಯೊಡನಾಕೆ । ಹೇಳುವ ಗಮಕದ ನುಡಿಯ ॥
ಸೋಲವಾದುದು ತನ್ನ ಚಿತ್ತವಾ ತರುಣಿಯ । ಮೇಲೆ ತಾನಿಂತೆಣಿಸಿದನು ॥ ೧೦೩ ॥

ಮುರುಕ ಮುನಿಸು ಲಲ್ಲೆ ಗಂಭೀರ ಜಾಣ್ನುಡಿ । ಕರೆ ಮರೆ ಭಯಭಕ್ತಿ ಗರ್ವ ॥
ಅರಿಕೆ ವಿಡಾಯವನೆಲ್ಲಿ ಕಲಿತಳೆಂದು । ಬೆರಗಾಗಿ ತಲೆದೂಗುತಿದ್ದಾ ॥ ೧೦೪ ॥

ನೆರೆಜವ್ವನವೈಸೆ ನಿಂದಜವ್ವನವಲ್ಲ । ಕುರುಹರಿಯಳು ರತಿಸುಖದ ॥
ಹೊರಗೆಗಾಣಿಸಿ ನೇಮವಲುಗುತಿದ್ದಳು ಮಝು । ತರಿಮಿಂಡಿಯಾದರಿನ್ನೆಂತೊ ॥ ೧೦೫ ॥

ಏಳುವ ಮೊಳೆಯೊಳೆ ಕೊಂದುಕೂಗುವಳಿವ । ಳೇಳಲೆವೋದ ಮೇಲೆಮ್ಮ ।
ಬಾಳಲೀವಳೆಯೆಂದು ನೆನೆದನಂದಾ ನರ । ಪಾಲಕ ತನ್ನ ಚಿತ್ತದೊಳು ॥ ೧೦೬ ॥

ನೊಂದಳಹುದು ದಿಟ ಕುಸುಮಾಜಿ ಕರೆ ಮಕ । ರಂದಾಜಿಯನು ಮನ್ನಿಸುವೆನು ॥
ಎಂದನದಕೆ ತಂಗಿ ಬಾರೆಂದಳರಸಿ ಹೋ । ಗೆಂದು ಕೋಪಿಸಿದಳಾ ತರುಣಿ ॥ ೧೦೭ ॥

ಮುನ್ನೊಮ್ಮೆ ನಿನ್ನ ವಲ್ಲಭನೊತ್ತಿಗಾನೆಯ್ದಿ । ಮನ್ನಣೆವಡೆದೆನು ಸಾಕು ॥
ಇನ್ನರಿಯೆನೆ ಹೋಗು ಹೋಗೆಂದು ಝುಂಕಿಸಿ । ಕನ್ನೆ ನುಡಿದಳರಸಿಯನು ॥ ೧೦೮ ॥

ಮೊದಲ ಮನ್ನಣೆ ನಿನ್ನ ನೋಯಿಸಿತದನು ಮಿ । ರಿದ ಮನ್ನಣೆಯನೀವೆನೆಂದಾ ॥
ಕೆದರಿಸದಿರು ನನ್ನ ಚಿತ್ತವನೆಂದು ಕೋ । ಪದೊಳಾಡಿದಳು ಭಾವನೊಡನೆ ॥ ೧೦೯ ॥

ಏನು ತಂತ್ರವ ಕಂಡೆಯಯ್ಯಯ್ಯೊ ನೀನೊಬ್ಬ । ಮಾನವಪತಿ ಬಂದೆ ಧರೆಗೆ ॥
ಮಾನಿನಿಯರ ಕಂಡರಪ್ಪಿಕೊಂಬುದೆ ತನ್ನ । ಧ್ಯಾನವೆಂದೊಲಿದು ನುಡಿದಳು ॥ ೧೧೦ ॥

ಒಬ್ಬರಿಬ್ಬರೆ ನಿನಗೇನು ಕಡಮೆಯಾಯ್ತು । ಸಬ್ಬಲಗ್ಗೆಯೊಳಿದೆ ಹೆಣ್ಣು ॥
ಹಬ್ಬುವ ಬಳ್ಳಿಯಂತಿದಿರ ಹೆಂಗಳ ಕಂಡು । ತಬ್ಬಿಕೊಂಬುದೆ ಹೊತ್ತು ತನಗೆ ॥ ೧೧೧ ॥

ಒಲಿದೊಡಬಟ್ಟೆಳನಪ್ಪುವುದುಳ್ಳುದು । ತಲೆ ಬಾಚಿ ಹೆಂಗಳ ಪಿಡಿವಾ ॥
ಕಲಿವಂತ ನೀನಲ್ಲದಿನ್ನುಂಟೆಯೆಂದು ಮೂ । ದಲಿಸಿ ನುಡಿದಳು ಭಾವನನು ॥ ೧೧೨ ॥

ಜಗುಳ್ವ ಹೆಂಗಳನೆತ್ತಿ ತಕ್ಕೈಸಿ ಮೊಗವಡ್ಡ । ದೆಗೆಯೆ ಚುಂಬಿಸುತಿಹ ನಿನ್ನ ॥
ಬಗೆಯ ಕಂಡರೆ ಹುಚ್ಚುನಗೆ ಬರುತಿದೆಯೆಂದು । ನಗುವಳೊಡನೆ ಕಿಲಕಿಲನೆ ॥ ೧೧೩ ॥

ಅಡ್ಡವೋರೆಯನಿಕ್ಕಿ ನಗುವಳು ನೋಡುವ । ಕೊಡ್ಡೊಡ್ಡಿ ನುಡಿದೇಡಿಸುವಳು ॥
ದೊಡ್ಡತನವೆ ಭಾವ ನಿನಗಿದೆಂಬಳು ರಾಯ । ಸಡ್ಡೆಮಾಡದೆ ಕೇಳುತಿಹನು ॥ ೧೧೪ ॥

ಕುಸುಮಾಜಿಯರಿಂದಳು ನೃಪಗೆ ಸಾದುನಿಯೊಳು । ಬೆಸುಗೆಯಾದುದು ಚಿತ್ತವೆಂದು ॥
ಹುಸಿಜಗಳವ ನೋಡುತಿದ್ದಳು ತಾನದ । ನುಸುರದೆ ಪುರುಷಭಕ್ತಿಯೊಳು ॥ ೧೧೫ ॥

ಎಲೆ ಧೂರ್ತೆ ನಿನಗೆ ಮನ್ನಣೆಯೀವೆನೆಂದರೆ । ಹಳಿವುದೇಕೆಮ್ಮ ನೀನೆಂದಾ ॥
ಬಲುಧೂರ್ತ ಹೋಗು ಮನ್ನಣೆ ನಿನಗಿರಲಿ ಯೆಂ । ದುಳಿದಳದಕೆ ರಾಯ ನಕ್ಕಾ ॥ ೧೧೬ ॥

ಅಹುದೆ ಅಹುದೆ ನಾನು ಧೂರ್ತ ನೀನೇ ಧೂರ್ತೆ । ಯಹುದಾದರರ್ಥವೇನಾಯ್ತು ॥
ಬಹುದೊ ನೋಡಿದರದು ಕಡೆಗೆಂದನುರೆ ಗಹ । ಗಹಿಸಿದಳವಳೋರೆಮೊಗದಿ ॥ ೧೧೭ ॥

ಎಲ್ಲಿಂಸಿದೆ ನಿನ್ನ ಗಂಭೀರಗರ್ವ ರಾ । ಜೋಲ್ಲಾಸಗಮುಕವ ಭಾವಾ ॥
ಜೆಲ್ಲಾಟಕರ್ತೆಯಾದುದೆ ಯೆಂದು ಜರೆದಳ । ದೆಲ್ಲವು ಸವಿ ರಾಯಗಾಗ ॥ ೧೧೮ ॥

ಸಭೆಯೊಳು ಕುಳಿತಾಗ ನಾಲ್ಕೆಂಟುವಚನ ದು । ರ್ಲಭವಾಗಿಹವು ಭಾವ ನಿನಗೆ ॥
ಅಭಿಮುಖವಡೆದೀಗ ವಚನಸುಲಭನಾಗಿ । ಪ್ರಭವಿಸಿದಂದವಿದೇನು ॥ ೧೧೯ ॥

ನೊಂದಳೆಂಬುದಕೆ ಮನ್ನಣೆಯೀವೆನೆಂದೆನಿ । ನ್ನೊಂದಾಗಿ ನುಡಿವೆನಲ್ಲೆಂದಾ ॥
ನಿಂದು ತಾನದಕೆ ನಗುತ ನೋಡು ಮತ್ತು ತ । ನ್ನಂದವ ಬಿಡೆನೆಂದಳವಳು ॥ ೧೨೦ ॥

ಹಿಂದೆ ನೀನಿತ್ತುದು ಭಾರವಾಗಿದೆ ನನ । ಗೆಂದು ಕಾಮಿನಿ ಕಂಠಸರವಾ ॥
ಮುಂಧರಿಸುವೆನೆಂದು ತೆಗೆದಳಂತದು ಕೊರ । ಳಿಂದ ಬಾರದು ಚಿತ್ರವಾಗ ॥ ೧೨೧ ॥

ತಿಳಿದಳು ಸ್ತಂಭನೆಗೆಯ್ದನು ಭಾವನೆಂ । ದೊಳಗುಬ್ಬಿ ನಕ್ಕಳಂತದಕೆ ॥
ಬಳಿಕ ಭಾವನ ಮೊಗನೋಡುತ ವಿಸ್ಮಯ । ಗೊಳುತಿದ್ದಳರಿಯದಂದದೊಳು ॥ ೧೨೨ ॥

ಏಕೆ ಬಾರದು ಭಾವ ನಿನ್ನ ಕೊರಳ ಹಾರ । ಬಾಕುಳಿ ತಾನು ನಿನ್ನಂತೆ ॥
ಸಾಕು ಬಿಡೆಂದರು ಬಿಡದಿದೆ ನೋಡೆನು । ತಾಕೆ ನುಡಿದಳು ಚಲ್ಲದೊಳು ॥ ೧೨೩ ॥
ಕೊಡುವಾಗ ಕೊರಳಿಗೊಂದೆದೆಗೊಂದು ಬಾಯ್ಗೊಂದು । ತೊಡಿಗೆಯ ನಾನಿತ್ತೆ ನೀನು ॥
ಮಡಗಿಕೊಂಡೆರಡನೊಂದನೆಯೊವೆನೆನಲದು । ಬಿಡದಿದೆಯೆಂದನಾ ರಾಯ ॥ ೧೨೪ ॥
ಕೊಟ್ಟೊಡವೆಯ ನಾವು ತೆಗೆದುಕೊಂಬವರಲ್ಲ । ಮುಟ್ಟದಿರಾ ನಿನಗಿರಲಿ ॥
ವೆಟ್ಟಿತಟ್ಟಿಯೊಳೆಮ್ಮ ನೀನೆಂದುದಕೆ ತಕ್ಕ । ತಿಟ್ಟವ ಮಾಳ್ಪೆ ನಾನೆಂದ ॥ ೧೨೫ ॥
ಅರುದಿಂಗಳಿನ್ನು ಸೈರಿಸು ಮಕರಂದೆ ನಿ । ನ್ನರುಬಿನಾಟವ ನಿಲಿಸುವೆನು ॥
ಬಿರುಬೆದರಾರಿಗೆ ಭಾವ ನೀನುರೆ ಕಂಡ । ತೆರನೇನು ಹೇಳು ಹೇಳೆನಗೆ ॥ ೧೨೬ ॥
ಹಿಕ್ಕಿ ಹೇಳಲೆ ಬೇಕೆ ಬೇಕು ಕೇಳ್ನಿನ್ನ ನಿ । ಮ್ಮಕ್ಕಗೆ ಸವತಿಮಾಡುವೆನು ॥
ನಕ್ಕಳೋಡಿದಳು ಕಂಭವ ಮರೆಗೊಂಡಳು । ಜಕ್ಕುಲಿ ಸಂತೋಷಗೊಳುತ ॥ ೧೨೭ ॥

ಹರುಷವೇರಿದಳಾಗ ಕುಸುಮಾಜಿ ತಂಗಿ ಕೇ । ಳರಸನ ವಾಕ್ಯ ಹುಸಿಯದು ॥
ಕರೆಸುವೆ ನಾಳೆ ನಮ್ಮಪ್ಪಾಜಿಯನು ಹೊಸ । ಸಿರಿ ಮಾಳ್ಪೆ ನಿನಗೆಂದಳೊಸೆದು ॥ ೧೨೮ ॥
ಧಾರಿಣೀಶನ ಪಾಣಿಯೊಳು ನಿನ್ನ ಪಾಣಿಯ । ಸೇರಿಸಿ ಪಿತನ ಕೈಯಿಂದ ॥
ಧಾರೆಯೆರಸುವೆನು ನಿಮಗಿಬ್ಬರಿಗೆ ಬಂದ । ಹೋರಾಟ ಹೋಳೆದುಹೋಹಂತೆ ॥ ೧೨೯ ॥
ಮಂಗಳೋತ್ಸವವಾದುದೆಂದು ನಗುತ ತನ್ನ । ತಂಗಿಯೊತ್ತಿಗೆ ತಾನೇ ಹೋಗಿ ॥
ಅಂಗನೆ ಪುರುಷಗುತ್ತರವಿತ್ತ ದೋಷವ । ಹಿಂಗಿಸೆಂದೊರೆದಳೋಜೆಯೊಳು ॥ ೧೩೦ ॥
ನನಗಿಷ್ಟು ಹೊತ್ತು ನೀನುಸುರಿದೆ ಬುದ್ಧಿಯ । ನಿನಗೇ ನೀನರಿಯೆಯ ಜಾಣೆ ॥
ಇನೆಯಗೆರಗು ದೋಷವಳಿವುದು ಬಾರೆಂದು ! ವನಿತೆ ಕೈವಿಡಿದು ಕರೆದಳು ॥ ೧೩೧ ॥
ಒಲ್ಲದಂತತ್ತಿತ್ತಲೊಲೆವಳು ನಾಣ್ಚುವ । ಳಲ್ಲಲ್ಲಿ ನಿಲ್ವಳಾ ಕನ್ನೆ ॥
ಬಲ್ಲಿತಾಗಿರಲಕ್ಕ ತೆಗೆದರೆ ಬಂದಂತೆ । ಮೆಲ್ಲನೆ ಬಂದಳಿದಿರಿಗೆ ॥ ೧೩೨ ॥
ಎಲ್ಲಿ ಹೋದುದೊ ಮೊದಲಾಡಿದ ನುಡಿ ನೋಟ । ಚಲ್ಲಾಟ ನಗೆಯ ಸೊಕ್ಕಿವಳಾ ॥
ನಲ್ಲನ ನೋಡಲಂಜುತ ಲಜ್ಜೆಗೊಳುತೆಳೆ । ಹುಲ್ಲೆಯಂತಿದ್ದಳೇನೆಂಬೆ ॥ ೧೩೩ ॥
ಪಾದಕೆರಗು ನಡೆಯೆಂಬಳೊತ್ತಿಗೆ ಹೋಗ । ಳಾದರಿಲ್ಲೆರಗೆಂಬಳದಕೆ ॥
ಆದರಿಸುತ ನಿಲ್ವಳೊತ್ತಿ ಬಗ್ಗಿಸಿದಂತೆ । ವೇದಿಸಲೊಡನೆರಗಿದಳು ॥ ೧೩೪ ॥
ತಪ್ಪ ಪಾಲಿಪುದೆನ್ನು ತಂಗಿಯೆಂದಳು ಹೋಗು । ತಪ್ಪೆನಗಿಲ್ಲ ನಿನ್ನಿನೆಯಾ ॥
ತಪ್ಪದೆ ಗಿಳಿಯ ತಂತ್ರವ ಪೇಳ್ದರೆರಗಿದೆ । ನೊಪ್ಪುಗೊಳ್ಳೆನುತೆದ್ದಳೊಡನೆ ॥ ೧೩೫ ॥
ಮನದೊಳುಲ್ಲಾಸ ಮೈಯೊಳಗೆ ಪುಳಕಿಂದ । ತನಗೆರಗಿದ ಪೆಣ್ಣ ನೋಡಿ ॥
ಮೊನೆಗಾತಿ ಬಲುಮೋಡಿಗಾತಿ ಮುರುಕಗಾತಿ । ಗೊನೆಹಕಾತಿ ಮಂಮಾಯೆಂದಾ ॥ ೧೩೬. ॥

ಸಾಲದೆ ಇವಳೊಡನಾಟ ಭೋಜನಕಿನ್ನು । ವೇಳೆ ವೆಗ್ಗಳಿಸಿದೆ ದೇವ ।
ಮೇಲಣ ನೆಲೆಯು ಮಾಳಿಗೆಗೆ ಚಿತ್ತೈಸೆಂದು । ಲೋಲಾಕ್ಷಿ ಬಿನ್ನವಿಸಿದಳು ॥ ೧೩೭ ॥

ಪೊರೆಯೊಳಿದ್ದಮೃತವಾಚಕನ ವೈದಡವಿದ । ಸುರಸನ್ವೈ ನೀನೆಂದು ನುಡಿದಾ ॥
ತರಿಸಿ ಕೊಟ್ಟನು ನವರತ್ನಪಂಜರವನ । ಲ್ಲಿರಿಸೆಂದು ಕೊಟ್ಟನಾ ಗಿಳಿಯಾ ॥ ೧೩೮ ॥

ಸರಸಕಾಂತೆಯ ಹಸ್ತವಿಡಿದನು ಜಿನಸಿದ್ಧ । ಶರಣೆನುತೆದ್ದನಾ ಕ್ಷಣಕೆ ॥
ಭರತೇಶ ಮೇಲ್ನೆಲೆಗಡಿಯಿಟ್ಟನಿಲ್ಲಿಗೆ । **ಸರಸದ ಸಂಧಿ** ಸುಗಂಧಿ ॥ ೧೩೯ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೪೦ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೪೧ ॥

ಹಗಲಿರುಳಿನ ಸೂರ್ಯ ಹಾರಿ ಹಾರದ ಹಂಸ । ಹಗೆಗೆಳೆಯುಳಿದ ಹಮ್ಮಾರ ।
ಅಗಲದೆ ನನ್ನಂತರಂಗದೊಳಿರು ಬಲು । ವಿಗಡ ಚಿದಂಬರಪುರುಷಾ ॥ ॥ ೧೪೨ ॥

ಸರಸಸಂಧಿ ಸಂಪೂರ್ಣಂ

# ಸನ್ಮಾನಸಂಧಿ.

ಸಾರಾಸಾರವಿಚಾರಪರಾಯಣ । ಕಾರಣಿಕಾತ್ಮ ಮಹಾತ್ಮಾ ॥
ಸಾರಮತಿಯದೋರು ಸದ್ಗುಣಶೃಂಗಾರ । ಹಾರ ನಿರಂಜನಸಿದ್ಧಾ ॥ ೧ ॥

ಸತಿಯ ಕೈವಿಡಿದು ಮೇಲಣ ನೆಲೆಗೆಯ್ದಿ ಭೂ । ಪತಿ ಕಂಡ ಮನೆಯ ಸಿಂಗರವಾ ॥
ರತಿದೇವಿಯೊಡನೆ ಮನ್ಮಥ ನುಡಿವಂತೆ ಲಾ । ಲಿತವಾಕ್ಯದಿಂದಿಂತು ನುಡಿದಾ ॥ ೨ ॥
ಭಾಪು ಕುಸುಮೆ ನಿನ್ನ ಪೆಸರಂತೆ ಮನೆ ಕುಸು । ಮೋಪಹಾರದೊಳು ತೋರುತಿದೆ ॥
ಆ ಪೂರ್ಣಕುಸುಮಮಾಲೆಗಳ ಮೇಲ್ಕಟ್ಟಿಂದ । ವ್ಯಾಪಿಸಿದಂದ ಲೇಸೆಂದಾ ॥ ೩ ॥
ಎಲ್ಲಿಂದ ತರಿಸಿದೆ ಸಿಂಗರಕೀ ನಡು । ಝಲ್ಲಿಯ ಪಟ್ಟೆಪರ್ವತವಾ ।
ನಲ್ಲಳೆ ಹೇಳೆಮ್ಮ ಮಾವಾಜಿಯರ ಮನೆ । ಯಲ್ಲಿಂದ ಬಂದುವೊಯೆಂದಾ ॥ ೪ ॥
ಮುತ್ತುಮಾಣಿಕದ ಲಂಬಣ ಸೊಗಸಾದವಿ । ವೆತ್ತಣಿಂದೆಯ್ತಂದುವೆಮ್ಮ ॥
ಅತ್ತೆಯರೇನು ಕಳುಹಿದರೊ ಅಳಿಯನ । ಚಿತ್ತಕುತ್ಸವವಾಗಲೆಂದು ॥ ೫ ॥
ಬಣ್ಣಬಿಳಿದಿನ ಮೆಲ್ಕಟ್ಟವು ಹೊಸತೆಲೆ । ಹೆಣ್ಣೆ ಹೇಳೆವನೊಲ್ದು ನಿನ್ನ ॥
ಅಣ್ಣಂದಿರೇನು ಕಳುಹಿದರೊ ತಂಗಿಯ । ಕಣ್ಣಾರ್ತಿ ಸಲಲೆಂದು ನಿನಗೆ ॥ ೬ ॥
ಪೊಮ್ಮಡಿ ಬೆಳ್ಳಿಯ ಪೂಮಾಲೆ ಮಿಸುನಿಯ । ಹೊಮ್ಮುಗುಳ್ಮಾಲೆಯ ನಿನ್ನ ॥
ತಮ್ಮಂದಿರೇನು ಕಳುಹಿದರೊ ಅಕ್ಕನ । ಸುಮ್ಮಾನಕಿರಲೆಂದು ನಿನಗೆ ॥ ೭ ॥
ಸಾರಣೆ ಚೆನ್ನಾಯ್ತು ಕುಸುಮೆ ಕುಂಕುಮದೊಂದು । ಸಾರಣೆ ಚೆನ್ನಾಯ್ತು ಕುಸುಮಿ ॥
ತೋರಣ ಚೆನ್ನಾಯ್ತು ಕುಸುಮು ನಿನ್ನಾಣೆಯೆಂ । ದಾ ರಾಯ ನುಡಿದನಾಕೆಯೊಳು ॥ ೮ ॥
ಚಳಯಗೊಟ್ಟುದು ಲೇಸು ಕುಸುಮಾಜಿ ಹೊಸರಂಗ । ವಲಿ ಲೇಸು ಕುಸುಮಾಂಗಿ ನಿನ್ನ ॥
ನಿಳಯದ ಸಿಂಗಾರ ಸೊಗಸಾಯ್ತು ಕುಸುಮಕೋ । ಮಲೆ ಕೇಳು ಜಿನನಾಣೆಯೆಂದಾ ॥ ೯ ॥
ಕುಸುಮು ಕುಸುಮಿ ಕುಸುಮಾಜಿ ಕುಸುಮೆಯೆಂಬ । ಕುಸುಮಾಂಗಿ ಕುಸುಮಾಲೆಯೆಂಬಾ ॥
ಕುಸುಮಿತಿ ಕುಸುಮಿನಿಯೆಂದು ನಲ್ಲಳ ಕುಶ । ಲಿಸಿ ಕೇಳ್ವ ರಾಯನೊವ್ವೊಮ್ಮೆ ॥ ೧೦ ॥
ಗೃಹವೆಲ್ಲ ನವರತ್ನಮಯ ಹೇಮಮಯವಾಗಿ । ಮಹಿಮೆವೆತ್ತಿದೆಕೊ ನಾನಿಷ್ಟು ॥
ಬಹುವಸ್ತುಗಳ ನಿನಗಿತ್ತುದಿಲ್ಲೆಲ್ಲಿ ಸಂ । ಗ್ರಹಿಸಿ ತರಿಸಿದೆ ಹೇಳೆಂದಾ ॥ ೧೧ ॥

ತವರೂರಗಿವರೂರ ಹಂಗ ನಾನರಿಯೆನೆ । ಮ್ಮವನೀಶನರಮನೆಯಲ್ಲಿ ॥
ನವನಿಧಿಯುಂಟೆನಗಿದು ಗಣ್ಯವಲ್ಲವೆಂ । ದವಳಾಡಿದಳು ಗಂಡನೊಡನೆ ॥ ೧೨ ॥
ನನ್ನ ಮೇಲಣ ಲೇಸಿನಿಂದೆನ್ನ ತವರೂರ । ಬಿನ್ನಣಿಸಿದ ರಾಯನೆಂದು ॥
ತನ್ನೆದೆಯೊಳು ಬಲ್ಲಳದಕುಬ್ಬುದರಸನೊಂ । ದುನ್ನತಿಯನೆ ಪೇಳ್ವಳಾಗ ॥ ೧೩ ॥

ಅವನೀಶರೆಲ್ಲರನಿವನವನೆಂದೆಂಬ । ಭುವನೇಶನೆನ್ನೊಲ್ಮೆಯಿಂದ ॥
ಇವರವರೆಂದೆನ್ನ ಪಡೆದರ ಪೇಳ್ದನೆಂ । ದವಳಾಗ ಮನದೊಳುಬ್ಬಿದಳು ॥ ೧೪ ॥

ಸೇವಕರನು ಕರೆವಂತೆ ರಾಜರ ಕರೆ । ವೀ ವಿಭುವೆನ್ನ ಪೆತ್ತವರಾ ॥
ಮಾವಾಜಿಯತ್ತೆಯರೆಂದನೆಂದಾಕೆ ಮ । ಹಾವಿಭವಾರ್ಥವೈದಿದಳು ॥ ೧೫ ॥

ಏಕಾಂತವಾದ ಕಾರಣ ನಲ್ಲಳೊಡನೆ ತಾ । ನಾಕೆಯ ತಂದೆತಾಯಿಗಳಾ ॥
ತೂಕದೊಳಂತು ಮನ್ನಿಸಿ ಪೇಳ್ದನಲ್ಲದೆ ॥ ಲೋಕಾಂತದೊಳಗಂತು ನುಡಿಯಾ ॥ ೧೬ ॥

ಮೊನೆದೋರಿ ಹೆಣ್ಣ ಭೋಗಿಸುವುದು ಸೊಗಸಲ್ಲ । ವಿನಯದೊಲುಮೆ ಸೊಗಸೆಂಬಾ ॥
ಅನುವರಿದಿಹನಾಗಿ ಕಾಲೋಚಿತಕೆ ತಕ್ಕ । ವಿನಯವ ನುಡಿದನಾ ಪ್ರೌಢಾ ॥ ೧೭ ॥

ಹೆಡ್ಡಹೆಂಗಳೊಳಂತು ದೊರೆ ಸೋತು ನುಡಿದರೆ । ಜಿಡ್ಡುಬ್ಬಿ ಮಂಡೆಗೇರುವರು ॥
ದೊಡ್ಡಜಾಣೆಯೊಳಾತ ನುಡಿದರೆ ಸತಿ ಸರಿ । ಯೊಡ್ಡದೆ ಕುಸಿದು ನುಡಿದಳು ॥ ೧೮ ॥

ಆದರಿಂದ ಜಾಣಜಾಣೆಯರಾಟವೆಂಬುದು । ಚದುರಂಗದಾಟದಂತಿಹುದು ॥
ಬದಗರ ಲೀಲೆಯುಹುದು ಟೊಳ್ಳಗವಡೆಯ । ಕೆದರ್ವ ಸೋಗಳೆಯಾಟದಂತೆ ॥ ೧೯ ॥

ಮನೆಯ ಸಿಂಗರವೇನು ದೇವರಿಂದೆಯ್ತಂದು । ದೆನಗೆನ್ನ ಮನೆಯ ಸಿಂಗರವು ॥
ಮನುಜೇಶ ಮಂಗಲಾಸನಕೆ ಚಿತ್ತೈಸೆಂದು । ಘನಕುಚಿ ನುಡಿದಳರ್ತಿಯೊಳು ॥ ೨೦ ॥

ಮಾಣಿಕವಿಸುನಿಯಡ್ಡಣಿಗೆ ಬಟ್ಟಲು ಹರಿ । ವಾಣ ಗಿಂಡಿಯ ರತ್ನಮಯದ ॥
ಠಾಣದೀವಿಗೆಗಳ ಬಳಸಿನಾಸನದಲ್ಲಿ । ಕ್ಷೋಣೀಶ ಕುಳಿತನೊಪ್ಪದೊಳು ॥ ೨೧ ॥

ಎಲ್ಲರ ಪೊರಮಡಿಸಿದಳು ಬಾಗಿಲ ಬಾಹ್ಯ । ದಲ್ಲಿಯೊರ್ವಳ ಘಂಟೆಗಿರಿಸಿ ॥
ಸಲ್ಲಲಿತಾಂಗಿ ಬಾಗಿಲನಿಕ್ಕಿಕೊಂಡಾಣ್ಮ । ನಲ್ಲಿಗೈದಿದಳೋಜೆಯಿಂದ ॥ ೨೨ ॥

ಏಕೆ ಬಾಗಿಲನಿಕ್ಕಿದಾ ಕುಸುಮಾಜಿಯೆಂ । ದೇಕಾಂತದೊಳು ಕೇಳ್ದನರಸಾ ॥
ಸಾಕು ದೇವರು ಮತ್ತೆ ನುಡಿವೆನಂತಿರಲಿಯೆಂ । ದಾಕೆ ಗುಟ್ಟಿನೊಳಿರಿಸಿದಳು ॥ ೨೩ ॥

ಅರಿದನು ಮುನ್ನೊಂದು ಗಿಳಿಗೆ ತಾನೊರೆದುದು । ಹೊರಹೊಮ್ಮಿತೆಂದಂಜಿ ಪರರಾ ॥
ಪೊರಮಡಿಸಿದಳೀಗ ನಾನೊಂದ ನುಡಿದರು । ಮರೆಸುವ ಬಗೆಯೆಂದು ನೆನೆದಾ ॥ ೨೪ ॥

ಚದುರೆಯರರಸಿಯಾ ಕುಸುಮಾಜಿಯೆಲ್ಲರ । ಸದನದ ಬಾಹ್ಯಕೆ ನೂಂಕಿ ॥
ಎದೆಹಾರು ತನಗಿಲ್ಲದೆಡೆಮಾಡುತಿದ್ದಳು । ಬ್ಬಿದ ಹರುಷದೊಳಾತ್ಮಪತಿಗೆ ॥ ೨೫ ॥

ಬಿನ್ನಣಕಾತಿಯರರಸಿ ಬೆಡಂಗಿಂದ । ತನ್ನ ಕೈಮುಟ್ಟಿ ವಲ್ಲಭಗೆ ॥
ಅನ್ನಪಾನವ ಶಾಕಪಾಕವನೆಡೆಮಾಡಿ । ಮನ್ನಿಸಿದಳು ನಿಮಿಷದೊಳು ॥ ೨೬ ॥

ಸ್ವರ್ಗದೊಳಗೆ ಬಿತ್ತಿ ಬೆಳೆದ ಶಾಲಿಯನಪ । ವರ್ಗಲೋಕದೊಳಟ್ಟು ತಂದು ॥
ಭೋಗ್ರರೆದೆಡೆಮಾಳ್ಪ ಪುಣ್ಯಲಕ್ಷ್ಮಿಯೊಯೆಂಬ । ಮಾರ್ಗದೊಳನ್ನವಿಕ್ಕಿದಳು ॥ ೨೭ ॥

ಭೋಗಭೂಮಿಯ ಕಲ್ಪಲತೆ ನೀಡುವಂತೆ ಮೋ । ಲೋಗರಲವಣಫಲಗಳಾ ॥
ಆಗಳಚ್ಚರಿಯ ಕಚ್ಚರಿಯ ಹಪ್ಪಳಗಳ । ಸೋಗೆಗಣ್ಣಬಲೆ ನೀಡಿದಳು ॥ ೨೮ ॥

ಎಳೆಮಿಂಚನೆರೆವಂತೆ ತಿಳಿದುಪ್ಪವೆರೆದಳು । ಬೆಳುಮುಗಿಲಂದದ ಮೊಸರಾ ॥
ಜಲಜದಂತೆಸೆವ ಬಟ್ಟಲುಗಳೊಳಿಡೆಮಾಡಿ । ದಳು ಬಗೆಯರಿದು ಲತಾಂಗಿ ॥ ೨೯ ॥

ಕ್ಷೀರಸಮುದ್ರದ ನೊರೆಯ ಪಿಂಡವ ತಂದು । ಸೇರಿಸುವಂತಗಲೊಳಗೆ ॥
ನಾರಿ ಖಜ್ಜಾಯವನೆಡೆಮಾಡಿದಳು ಕಣ್ಗೆ । ಕೋರೈಸುತಿರೆ ತಿಳಿವೆಳಗು ॥ ೩೦ ॥

ಕೊರಂತುಗೆಟ್ಟ ಮನವ ಕೂರ ಮಾಳ್ಪ ಕ । ರ್ಪೂರಕದಂಬಭಕ್ಷ್ಯಗಳಾ ॥
ಹಾರವರಿದು ಹವಣರಿದೆಡೆಮಾಡಿದ । ಳಾ ರಾಣಿ ರಮಣಗರ್ತಿಯೊಳು ॥ ೩೧ ॥

ಒಣಗಿದ ಮರಕೊಮ್ಮೆ ತೊಡೆದರಾ ವೃಕ್ಷವಾ । ಕ್ಷಣದೊಳಂಕುರಿಸುವುದೆಂಬ ।
ಕಣಿಕಾನ್ನವನೆಡೆಮಾಡಿದಳರಸಗೆ । ಗುಣವಂತೆಯರ ಕುಲದೇವಿ ॥ ೩೨ ॥

ಮುಪ್ಪಾದ ನರರೊಮ್ಮೆ ಕೊಂಡರಾ ಕ್ಷಣದೊಳು । ತುಪ್ಪಳುಮಿಾಸೆಯ ಮಾಡಿ ।
ದಪ್ಪವೇರಿಸುವ ಶಕ್ತಿಯ ಧರಿಸಿದ ಹೆರೆ । ದುಪ್ಪವನೆರೆದಳು ಪತಿಗೆ ॥ ೩೩ ॥

ಬಟ್ಟವಾಲನು ಚಿಲುಪಾಲನು ಕೆನೆವಾಲ । ನೆಟ್ಟವಾಲನು ತನಿವಾಲಾ ॥
ಬಟ್ಟಜವ್ವನೆಯೆಡೆಮಾಡಿದಳರಸಗೆ । ಬಟ್ಟಲು ಬಟ್ಟಲು ತುಂಬಿ ॥ ೩೪ ॥

ತನಿವಣ್ಣಳಿಂದಾದ ಸಾರರಸಾಯನ । ವನು ಪರಿಮಳ ಘಮಘಮಿಸೆ ॥
ವನಿತೆ ತಂದೆಡೆಮಾಡುತಿದ್ದಳು ರಾಯಗೆ । ವನದೇವಿಯೆಡೆಮಾಡುವಂತೆ ॥ ೩೫ ॥

ಶರ್ಕರೆಯನು ಪಿಡಿವಾಗಳಂಗೈಯ ಸಂ । ಪರ್ಕದಿ ಸಿಂಧೂರದಂತೆ ।
ತೋರ್ಕೆವೆತ್ತುದು ಕೈಯ ತೆಗೆದು ಶಂಕಿಸಿ ನೋಡಿ । ಮಾರ್ಕೊಂಡು ಮತ್ತೆ ನೀಡಿದಳು ॥ ೩೬ ॥

ಪರಮಾನ್ನವ ಪರಿಪರಿ ಪಕ್ವಫಲವನಾ । ದೊರೆಗಿಕ್ಕಿಯಾರತಿಯೆತ್ತಿ ॥
ದರಹಸಿತಾನನೆ ಪುಷ್ಪಾಂಜಲಿಯ ಮಾಡಿ । ಕರಗಳ ಮುಗಿದಳರ್ತಿಯೊಳು ॥ ೩೭ ॥

ತಿಲಕ ಚಿಂಮುರಿ ಯಜ್ಞಸೂತ್ರ ಕುಂಡಲ ದೋತ್ರ । ಗಳ ಮೈಯೊಳಾಂತು ಮಿಕ್ಕವನು ॥
ತೊಲಗಿಸಿ ಹಸ್ತಪ್ರಕ್ಷಾಲನ ಮೊದಲಾದ । ವಿಲಸಿತಕ್ರಿಯೆಯ ಮಾಡಿದನು ॥ ೩೮ ॥

ಸಿದ್ಧರ ಪೂಜಿಸಿ ಕಳುಹಿ ನಿರಂಜನ । ಸಿದ್ಧಗೊಲ್ದನ್ನಪಾನವನು ॥
ಸಿದ್ಧಾಂತದೊಳು ಪೇಳ್ದ ಕ್ರಮದೊಳರ್ಪಿಸಿ ಜಲ । ಶುದ್ಧಿಯನೀಂಟಿದನೊಡನೆ ॥ ೩೯ ॥

ಮೊರೆದುದಾಗಳೆ ಬಾಗಿಲೊಳು ಘಂಟೆ ಘೋರೆಂದು । ಹರಿವಾಣದೊಳು ಹಸ್ತವಿಟ್ಟಾ ॥
ಪರಮಾತ್ಮಗರ್ಪಿಸಿದನ್ನಪಾನವ ಮೈಗೆ । ಧರಣಿಪಾಲಕನಿತ್ತನೊಲಿದು ॥ ೪೦ ॥

ಭೇದವಿಜ್ಞಾನದಿಂದಾತ್ಮನ ತೆಗೆದು ಮ । ತ್ತಾ ದೇಹಮಧ್ಯದೊಳಿಟ್ಟು ॥
ಈ ದೇಹಕೀ ತುತ್ತ ಕೊಡಲೆ ಚಿನ್ಮಯನೆಯೆಂ । ದಾದರಿಸುತ ಕೊಡುತಿಹನು ॥ ೪೧ ॥

ಕರ್ಮಾಹಾರ ನಿನಗೆ ಭಾರವಲ್ಲದೆ । ನಿರ್ಮಲಕಬಲಾಹಾರಾ ॥
ಸ್ವರ್ಮೋಕ್ಷಪತಿ ನಿನಗೇನಮಾಡುವುದೆಂದು । ಕರ್ಮವರಿದು ಕೊಡುತಿಹನು ॥ ೪೨ ॥
ಮನಸು ಪಂಚೇಂದ್ರಿಯು ತನು ವಾಕ್ಯ ಪುದ್ಗಲ । ವನಘಾನ್ನ ಪಾನ ಪುದ್ಗಲವು ॥
ತನಗೆ ತಾ ಪುದ್ಗಲ ಕೂಡಲಗಲವಿಲ್ಲ । ನಿನಗೇನೆನುತ ಕೊಡುತಿಹನು ॥ ೪೩ ॥
ಖಂಡಿತವಿಲ್ಲದೆ ಮುನ್ನ ಮಾಡಿದ ಪುಣ್ಯ । ತಂಡತಂಡದೊಳಿತ್ತ ಸುಖವಾ ॥
ಉಂಡು ತೀರಿಸಿ ಬಿಡು ಹಂಸ ನೀನೆಂದನ್ನ । ಪಿಂಡವ ಕೊಡುತಿದ್ದನಾಗ ॥ ೪೪ ॥
ನಾಳೆ ಸುಜ್ಞಾನಸುಖವನುಣಬಹುದಿಂದು । ಕೂಳ ಸುಖವನು ನೋಡೆಂದು ॥
ಆಲೋಚಿಸಿ ಪೇಳುತಾತ್ಮದೇವಗೆ ನರ । ಪಾಲನನ್ನವನೀಯುತಿಹನು ॥ ೪೫ ॥
ಕುಸುಮಾಜಿ ತನ್ನ ನೆಳಲು ರಾಯನಗಲಿಗೆ । ಮುಸುಕದಂತೋಜೆಯೊಳ್ನಿಂದು ॥
ಬಿಸಿಯನಾರಿಪಳೊಮ್ಮೆ ಪನ್ನೀರ ಮೈಗೆ ಚಿಂ । ಮಿಸಿಯಾಲವಟ್ಟವಿಕ್ಕುವಳು ॥ ೪೬ ॥
ಕೈದೊಳೆದೊಡನೊಮ್ಮೆ ಕಲಸಿ ಕೊಡುವಳೊಮ್ಮೆ । ಬಾಯ್ದೆರೆಗೀವಳು ತುತ್ತಾ ॥
ಮೈದಡಹುವಳೆಡ ಗೈಯಿಂದ ವಸ್ತ್ರದೊ । ಳೊಯ್ದು ತೊಡೆವಳೊಮ್ಮೆ ಬೆವರಾ ॥ ೪೭ ॥
ಕೂಡೆ ಕೈದೊಳೆದೊಮ್ಮೆ ಭಾಜನವಿಡಿದೆಡೆ । ಮಾಡುವಳುಚಿತವಸ್ತುಗಳಾ ॥
ನೀಡಿದ ರಾಯನ ಕೈಗೆ ನೀರೆರೆದೆಡೆ । ಮಾಡುತಿದ್ದಳು ಸೂತ್ರದಂತೆ ॥ ೪೮ ॥
ಇನೆಯನಾರೋಗಿಸುತೆಡೆಯಲ್ಲಿ ಪಾನವ । ನನುಮಾನಿಸುತ ಮನದಲ್ಲಿ ॥
ನೆನೆವಷ್ಟರೊಳಗೆ ಗಿಂಡಿಯನೆತ್ತಿಕೊಡುವಳಾ । ಮನವ ಹೊಕ್ಕಿದ್ದಳೆಂಬಂತೆ ॥ ೪೯ ॥
ಬಳೆಮುರಿಸಕ್ಕರೆಯನು ಬಟ್ಟವಾಲೊಳು । ಕಲಸಿ ಹೊಂಬಟ್ಟಲನೆತ್ತಿ ॥
ಲಲನೆ ನಲ್ಲನ ಕೈಗೆ ನೀಡುವಳರಸ ಕಂ । ಗಳನರೆಮುಚ್ಚುತೀಂಟುವನು ॥ ೫೦ ॥
ಸಿಹಿ ಪಿರಿದಾದಲ್ಲಿ ಹುಳಿಗೊಡುವಳು ಹುಳಿ । ಬಹಳಿಸಲುಪ್ಪುದೋರುವಳು ॥
ಕಹಿಯು ಖಾರವನೊಗರನು ರುಚಿದೋರಿ ಸಂ । ಗ್ರಹಿಸಿ ನೀಡುವಳಾತ್ಮಪತಿಗೆ ॥ ೫೧ ॥
ತನ್ನ ಮನದೊಳೊಂದ ನೆನೆದು ಕೈನೀಡದ । ಮುನ್ನ ತಾನಾ ವಸ್ತುಗಳನು ॥
ಸನ್ನದ್ಧದೊಳು ನೀಡಿ ಕೊಡುತಿದ್ದಳದಕೆ ರಾ । ಜೋನ್ನತ ಮನಮೆಚ್ಚುತಿಹನು ॥ ೫೨ ॥
ಮನುಜೇಂದ್ರ ನೆನೆದುದಾ ಕಾಂತೆಯು ನೆನಹಕೆ । ನೆನೆದಿತ್ತುದಾತನ ಮೆಚ್ಚು ॥
ತನುವೆರಡಾತ್ಮವೊಂದೋಯಿವರಿಬ್ಬರಿ । ಗೆನಲೊಪ್ಪುತಿದ್ದುದಾ ಭಾವ ॥ ೫೩ ॥
ತುಷ್ಟಿಬಟ್ಟನ್ನವಗಲೊಳೊತ್ತರಿಸಿ ವಿ । ಶಿಷ್ಟಾನ್ನವನು ಬಡಿಸುವಳು ॥
ದೃಷ್ಟಿಸನ್ನೆಯೊಳೊಲ್ಲೆನೆನೆ ಕೈಯ ಮುಗಿವಳಿ । ನ್ನಿಷ್ಟ ಸೇವಿಪುದೆಂಬಳೊಡನೆ ॥ ೫೪ ॥
ಪರಿಪರಿಯನ್ನಪಾನವ ಹೊಸಹೊಸತಾಗಿ । ತರತರದೊಳು ನೀಡುತಿಹಳು ॥
ಶಿರಗೊಡಹುವನು ಸಾಕೆಂದು ಕೈಮುಗಿವಳಿ । ನ್ನೆರಡೆ ತುತ್ತಿರಲೆಂಬಳೊಡನೆ ॥ ೫೫ ॥

ಮಾಡಿದ ವಸ್ತುವ ತಪ್ಪದೆಲ್ಲವ ಸವಿ । ನೋಡಬೇಕರಸಯೆಂದೆನುತ ॥
ಬೇಡಿಕೊಂಡೆಡೆಮಾಡುವಳು ನಸುನಗುತ ಬಾ । ಯ್ಮೂಡಿಪ್ಪು ಸವಿದು ಬಿಡುವನು ॥ ೫೬ ॥
ಆನೆಯೆನುಣಿಸುವಂತಾ ಕಾಂತೆ ಬಲುಹಿಂದ । ತಾನುಣಿಸಿದಳಾತ್ಮಪತಿಯಾ ॥
ಆ ನೃಪ ತೃಪ್ತಿವಡೆದು ಹಸ್ತದೊಳೆದನ್ನ । ಪಾನಾಂತ್ಯಕ್ರಿಯೆಯ ಮಾಡಿದನು ॥ ೫೭ ॥
ಅಂಗದೊಳಾತ್ಮನ ಕಣ್ಮುಚ್ಚಿ ಕಂಡಂತ್ಯ । ಮಂಗಲಾರಾಧನೆಗೆಯ್ದು ॥
ಕಂಗಳ ತೆರೆದನು ಕೈಮುಗಿದಳು ಕಾಂತೆ । ಹಿಂಗಿತು ಬಾಗಿಲಘಂಟೆ ॥ ೫೮ ॥

ಎದ್ದನು ಜಿನಶರಣೆಂದು ಕೆಲದೊಳಿರಿ । ಸಿದ್ಧ ಪಚ್ಚಡವ ಮೇಲ್ಕೊಳುತ ॥
ಮುದ್ದುಮುಖದ ಕಾಂತೆ ಹೂವಿನುಪ್ಪರಿಗೆಗೆ । ತಿದ್ದಿ ತೋರಿದಳು ಹಾದಿಯನು ॥ ೫೯ ॥
ಆರೋಗಿಸಿದ ಮೇಲ್ನೆಲೆಯಿಂದ ಮೇಲಕೆ । ಸೇರಿದ ಸೋಪಾನವಿಡಿದು ॥
ಆರೋಹಿಸಿದನಾ ಹೂವಿನುಪ್ಪರಿಗೆಗೆ । ನಾರಿಯ ಕೈಲಾಗುವಿಡಿದು ॥ ೬೦ ॥
ಮಾಡದ ನಡುವಣ ಗೂಢಗೃಹದೊಳೊಪ್ಪ । ಗೂಡಿದ ಶಕುನಿಮಂಚದೊಳು ॥
ಪಾಡರಿದೆಡದ ಮಗ್ಗಿಲನೂರಿ ನೃಪತಿ ಮೈ । ನೀಡಿ ಪವಡಿಸಿದನೊಡನೆ ॥ ೬೧ ॥
ವೀಳೆಯವಿತ್ತು ಪನ್ನೀರ ಚಿಮ್ಮಿಸಿ ಕಂಗ । ಳಾಲಿಗೆ ಕಪ್ಪುರವೆಚ್ಚಿ ॥
ಆಲವಟ್ಟವನಿಕ್ಕಿ ಗಂಧವ ಲೇಪಿಸಿ । ಬಾಲೆ ಮನ್ನಿಸಿದಳು ಪತಿಯಾ ॥ ೬೨ ॥
ಪಾದಸೇವೆಗೆ ಕುಳಿತಳು ರಾಯ ಕಂಡು ಹೊ । ತ್ತಾದುದು ಹೋಗನ್ನರಸವಾ ॥
ಸ್ವಾದಿಸಿ ಮತ್ತೆ ಬಾರೆಂದು ಕಳುಹಲಾಗ । ಹೋದಳು ಪರಮಲೀಲೆಯೊಳು ॥ ೬೩ ॥
ನನ್ನಾತ್ಮ ಬೇರಂಗ ಬೇರೆಂದು ಕಣ್ಮುಚ್ಚಿ । ತನ್ನ ತಾನೊಳಗೆ ನಿಟ್ಟಿಸುತ ॥
ಮನ್ನೆಯರೊಡೆಯನಿರಲು ಕೂಡೆ ಕವಿದುದು । ಅನ್ನಸೊಕ್ಕಿನ ನಸುನಿದ್ರೆ ॥ ೬೪ ॥
ಮಲಗಿನ ಮೇಲಿಟ್ಟ ವಾಮಹಸ್ತದ ಮೇಲೆ । ತಲೆಯಿಟ್ಟು ಜಂಘೆಯ ಮೇಲೆ ॥
ಬಲಗೈಯನಿಟ್ಟು ಪಜ್ಜೆಗಳೆಡೆವಿಟ್ಟು ಕಂ । ಗಳ ಮುಚ್ಚಿ ನಿದ್ರೆಯೊಳಿದ್ದಾ ॥ ೬೫ ॥
ಕದಪು ಕೊರಳೊಳಿಪ್ಪು ಬೆಮರೊಗೆವುದು ತುಟಿ । ಹದಹದಕೆನಿಸಲುಗುವುದು ॥
ಕೆದರಿ ಮತ್ತೊಂದು ವಿಕಾರವಿಲ್ಲದೆ ರಾಯ । ಮೃದುತಲ್ಪದೊಳಗೊರಗಿದ್ದಾ ॥ ೬೬ ॥
ವೀಣೆಯ ತಂತಿಯ ಮಿಡಿದವೊಲುಸುರಾಟ । ಕಾಣಿಸುತಿಹುದೆದೆಯೊಳಗೆ ॥
ಜಾಣರ ದೇವನಿದ್ದನು ಮಲಗಿಸಿದ ಕುಂ । ದಾಣದ ಪುತ್ತಳಿಯಂತೆ ॥ ೬೭ ॥
ಗಲಬೆಮಾಡದೆ ಸತಿ ಪೋದಳಹುದು ಗಂಡ । ನೊಲಿದಿಪ್ಪು ಪವಡಿಸಲೆಂದು ॥
ಚೆಲುವನಂಗಕೆ ಗೃಹಗಂಧಕೆ ತುಂಬಿಗ । ಳುಲಿವುತಿದ್ದುವು ಪೇಳ್ವರಾರು ॥ ೬೮ ॥
ಮೊರೆವ ತುಂಬಿಗಳ ಸುಸ್ವರಗಾನ ತಲೆಗೇರಿ । ಪರವಶನಾದನೆಂಬಂತೆ ॥
ದೊರೆಯಿತ್ತ ತಿಳುನಿದ್ರೆಯೊಳಗಿದ್ದನತ್ತಲು । ತರುಣಿಯುತ್ಸವವನೇನೆಂಬೆ ॥ ೬೯ ॥

ಗಂಡನುಂಡಗಲ ತೊಳೆಯುದದರೊಳಗಿಕ್ಕಿ । ಕೊಂಡು ತಾನನ್ನಪಾನಗಳಾ ॥
ಉಂಡಳು ತೃಪ್ತಿವಡೆದಳು ಕೈದೊಳೆದಳ । ಖಂಡಿತಾನಂದವೈದಿದಳು ॥ ೭೦ ॥
ಬಾಗಿಲ ತೆಗೆದಳೊಳಗದ ನಾರಿಯರ್ಕೈದಿ । ತೂಗುತಿರಲು ಮಂಚದಲ್ಲಿ ॥
ಆಗಳಿಷ್ಟನ್ನಸೊಕ್ಕಿನ ನಿದ್ರೆಯನು ತೀರ್ಚಿ । ಬೇಗ ಕಣ್ದೆರೆದೆದ್ದಳವಳು ॥ ೭೧ ॥
ಉಪ್ಪರಿಗೆಯೊಳು ಗಂಡನನಿರಿಸಿದಳಲ್ಲಿ । ಬಪ್ಪುದೆ ನಿದ್ರೆ ಸಜ್ಜನೆಗೆ ॥
ತಪ್ಪುಗೈದಂತೆದೆ ಧಿಗಿಧಿಗಿಲೆನಲೊಡ । ನುಪ್ಪವಡಿಸಿದಳಾ ಜಾಣೆ ॥ ೭೨ ॥
ಬಂದರಿಬ್ಬರು ಪಾತ್ರದಬಲೆಯರರಸಗೊ । ಳ್ಪಿಂದ ನೀನೆಮ್ಮ ಕೇಳುವೆಯಾ ॥
ಇಂದಿನಿರುಳಿಗೆ ನೋಳ್ಪಂತೆ ಬಿನ್ನವಿಸಬೇ । ಕೆಂದು ಸೂಚಿಸಿದರಾಕೆಯೊಳು ॥ ೭೩ ॥
ಆಗಲಿ ಸ್ವಾಮಿಗಾನೊರೆವೆನು ನೀವನು । ವಾಗಿಹುದೆಂದು ಬೀಳ್ಕೊಟ್ಟು ॥
ಹೋಗಿಯೆಂದೊಳಗವೆಂಗಳೆಲ್ಲರ ನೂಂಕಿ । ಬಾಗಿಲನಿಕ್ಕಿದಳೊಡನೆ ॥ ೭೪ ॥

ಕನ್ನಡಿಯೊಳು ಹೊಳೆಹೊಳೆದು ಮೊಗವ ನೋಡಿ । ಚೆನ್ನಾಗಿ ತಿಲಕವ ತಿದ್ದಿ ॥
ಭಿನ್ನಕುಂತಳವ ಸಾಗಿಸಿಕೊಳುತೊಯ್ಯನೆ । ತನ್ನ ತಾ ನಕ್ಕಳುಬ್ಬಿನೊಳು ॥ ೭೫ ॥
ನಿರಿಯ ಪಲ್ಲಟಿಸಿ ನೇವಳದ ಗೊಂಡೆಹಗಳ । ಮೆರಹುಗಾಣಿಸಲಿಳಿವಿಟ್ಟು ॥
ತುರುಗಿದಾಭರಣಗಳೋರೆಕೋರೆಯ ತಿದ್ದಿ । ತರಿವಿಂಡಿಯನುವಾದಳಾಗ ॥ ೭೬ ॥
ಕಸ್ತೂರಿ ಪುಣುಗು ಜವಾದಿ ಮುಂತಾದ ಸು । ವಸ್ತುವ ತೊಡೆದು ಪೂದುರುಬಿ ॥
ವಿಸ್ತಾರದಿಂದ ಪಾಡಿಸಿಕೊಂಡಳಾಗ ಸ । ಮಸ್ತಭೃಂಗಗಳಿಂದ ತನ್ನಾ ॥ ೭೭ ॥
ಕೆಂಬಾಯವೀಳೆಯ ಬಿಳಿಯೆಲೆ ವಾಮುಕ । ರಾಂಬುಜದೊಳಗಳವಡಲು ॥
ತುಂಬುಜವ್ವನೆ ನಡೆದಳು ನಲ್ಲನೆಡೆಗೆದೆ । ತುಂಬಿ ತುಳುಕುವರ್ತಿಯಿಂದ ॥ ೭೮ ॥
ಅಂದುಗೆಗಳ ದನಿ ಕಟಿಸೂತ್ರಕಿಂಕಿಣಿ । ವೃಂದ ಝುಂಝುಣ ಝುಲಿರೆನಲು ॥
ಹಿಂದುವರಿವ ಹಂಸೆಗಳ ಝುಂಕಿಸುತ ನಡೆ । ತಂದಳು ರಾಯನಿದ್ದೆಡೆಗೆ ॥ ೭೯ ॥
ಸೋಪಾನವಿಡಿದು ಬರುತ ಗೃಹವಿನ್ನು ಸ । ಮೀಪವೆಂಬೆಡೆಯೊಳು ತನ್ನ ॥
ಚಾಪಲಾಭರಣದ ದನಿಯು ವಂಚಿಸಿ ಮೆಲ್ಲ । ನಾ ಪೆಣ್ಣು ಬಂದಳೋಜೆಯೊಳು ॥ ೮೦ ॥
ನೃಪಗೀಗ ನಿದ್ರೆಯೊ ಯೆಚ್ಚರಿಕೆಯೊಯೆಂದು । ಜಪಿಸುತ ನಿಲುಕಿ ನಿಟ್ಟಿಸುತ ॥
ಚಪಲಾಕ್ಷಿ ಕಾಲ್ದುಡುಕೆನ್ನದೆ ನಡೆತಂದ । ಳುಪಮಿಸಬಹುದೆ ಭಕ್ತಿಯನು ॥ ೮೧ ॥

ಇತ್ತಲೀ ಕಾಂತೆಯಿಂತೆಣಿಸುತ ಬರುತಿರ್ದ । ಳತ್ತಲಾ ರಾಯನೊಂದಿನಿಸು ॥
ಹೊತ್ತಿನ ಮೇಲೆ ತಾನೆಚ್ಚತ್ತು ಶುದ್ಧಾತ್ಮ । ವೃತ್ತಿಯೊಳಿದ್ದನೇನೆಂಬೆ ॥ ೮೨ ॥
ಹರಿವ ಕಾಮುರ್ಗಿಲೆಷ್ಟು ಹೊತ್ತು ಮುಚ್ಚಿಹುದು ಭಾ । ಸ್ಕರಗಂತೆ ಸುಖನಿದ್ರೆ ನೃಪಗೆ ॥
ಹರಿದುದೊಂದರೆಘಳಿಗೆಯ ಮೇಲೆ ಶಯನದೊ । ಳಿರುತಿದ್ದಸಾತ್ಮಯೋಗದೊಳು ॥ ೮೩ ॥

ನಿದ್ರೆಗೈವವನಂತೆ ಪವಡಿಸಿಕೊಂಡಾಗ । ಚಿದ್ರೂಪಿನೊಳಗಿಪ್ಪ ಮನವಾ ॥
ಮುದ್ರಿಸಿದಕ್ಷಿಗಳಿಂದ ಸುಜ್ಞಾನಸ । ಮುದ್ರದೊಳಿದ್ದನಾ ಧನ್ಯಾ ॥ ೮೪ ॥
ತಳತಳಿಸುತ ತನ್ನ ತನು ತುಂಬಿ ಶುದ್ಧಾತ್ಮ । ಹೊಳೆದು ಕಾಣಿಸುತಿದ್ದನಾಗ ॥
ಇಳಿವುತಿದ್ದುದು ಕರ್ಮ ಸುಜ್ಞಾನ ಸುಖಗಳು । ಜ್ವಲಿಸುತಿದ್ದುವು ರಾಯನಿರ್ದಾ ॥ ೮೫ ॥
ಕಾಣ್ಬನು ತಾನೆ ಕಾಣಿಸಿಕೊಂಬ ವಸ್ತು ತಾ । ನುಣ್ಬನು ತಾನಾತ್ಮ ಸುಖವಾ ।
ಉಣ್ಬಲ್ಲಿಗೆಸೆವಾತ್ಮ ಸುಖವು ತಾನಾಗಿರೆ । ಪೆಣ್ಬಂದಳಾ ಸಮಯದೊಳು ॥ ೮೬ ॥
ಅಂಬುಜಲೋಚನೆ ಬಹುದನರಿದು ಚಿ । ದಂಬರಪುರುಷಗೆ ನಮಿಸಿ ॥
ಇಂಬುಗೊಳಿಸಿದನು ಯೋಗವ ಹೊದೆದ ದಿ । ವ್ಯಾಂಬರ ಮುಸುಕೆ ಮೈ ಮುರಿದಾ ॥ ೮೭ ॥
ಆಗಳಿಸುತ ಕಣ್ಣ ತೀಡಿಕೊಳುತ ವೀತ । ರಾಗಾಯನಮಯೆಂದು ಶಶಿಯು ॥
ಮೇಗೆ ಕವಿದ ಬಿಳುಮುಗಿಲನೊತ್ತರಿಸುವಂ । ತಾಗ ನೂಂಕಿದ ತನ್ನ ಮುಸುಕಾ ॥ ೮೮ ॥

ಕಂಡನು ಬಾಗಿಲ ಮರೆಗೊಂಡ ಸತಿಯು ಪ್ರ । ಚಂಡೆ ಬಾರೆನುತಿದ್ದು ಕುಳಿತಾ ॥
ಕೆಂಡವನುಗುಳ್ವ ಕೆಂಪಿನ ತುಟಿ ನಸುನಗೆ । ಯಿಂಡೆಯಾಡುತ ಬಂದಳವಳು ॥ ೮೯ ॥
ಸಾರಿದಳಾ ಕುಸುಮಾಜಿ ವಲ್ಲಭಗೆ ಪ । ನ್ನೀರ ಮುಕ್ಕಳಿಸಲೆರೆದಳು ॥
ಕೂರುಗುರಿಂದ ಸೀಳ್ದೆಲೆಯ ಮಡಿದುಕೊಟ್ಟ । ಳಾ ರಾಯಗತಿವಿಭವದೊಳು ॥ ೯೦ ॥
ನಗುತ ನಗುತ ಮಾತನಾಡುತೆಲೆಯ ಘಳಿ । ಗೆಗಳ ಕೈಕೊಳುತಿದ್ದ ನೃಪತಿ ॥
ಮೊಗನೋಡಿ ತನ್ನೊಳು ನುಡಿವರಿಷ್ಟಳುಕುವ । ಬಗೆಯ ಕಂಡನು ತನ್ನ ಸತಿಯಾ ॥ ೯೧ ॥
ಕೂಟದ ಮೊದಲು ಮಧ್ಯಮೆಯು ಪ್ರಗಲ್ಭೆಯು । ನೋಟದಿ ನುಡಿಸುವುದುಚಿತ ।
ನೋಟದ ನುಡಿಗಂಜುವಳು ಮುಗ್ಧೆ ಮೊದಲೆಂಬ । ಬೇಟವ ನೆನೆದ ತನ್ನೊಳಗೆ ॥ ೯೨ ॥
ಇವಳೊಡನೊಂದೆರಳ್ಜೂಟಿನ ನುಡಿಯ ಕೇ । ಳುವೆನೆಂದು ನೆನೆದುಕೊಂಡೊಡನೆ ॥
ಪವಡಿಸಿ ಮುಸುಕಿಕ್ಕಿ ಕೈನೀಡಿ ಬೆಳ್ಳೆಲೆ । ಗವಳವ ಕೊಡುತಿಂತು ನುಡಿದಾ ॥ ೯೩ ॥

ಕುಸುಮಿ ತಾನೇಕೆ ಬಂದಳು ಕುಸುಮಾಜಿಯೆಂ । ದುಸುರಿದನಾಕೆಯ ಕೂಡೆ ॥
ನಸುನಗುತೇಕೆ ಬಂದಳೊ ದೇವರೇ ಬಲ್ಲ । ರಸಿಯಳಿಚ್ಛೆಯನೆಂದಳವಳು ॥ ೯೪ ॥
ಮೊಗವ ನೋಳ್ಪಾಗ ನಮ್ಮೊಡನವಳಿಂದೊಂದು । ಜಗಳಕೆ ಬಂದಳೆಂಬಂತೆ ॥
ಬಗೆದೋರುತಿದೆ ನೀನು ಕೇಳಿ ಹೇಳೆಂದಾಗ । ವಿಗಡದ ಮಾತನಾಡಿದಳು ॥ ೯೫ ॥
ಕೇಳ್ದನಾಕೆಯು ದೇವ ಜಗಳಕಲ್ಲೆಂದಳು । ನೀಳ್ದ ಗೂಢಾರ್ಥವೊಂದುಂಟು ॥
ಆಳ್ದನ ಕೂಡೆ ಯೋಚಿಸ ಬಂದೆನೆಂದೊಲ್ದು । ಪೇಳ್ದಳೆಂದಳು ಪತಿಯೊಡನೆ ॥ ೯೬ ॥
ಗೂಢಾರ್ಥವೇನು ಪೇಳಲಿ ಕೇಳು ಕೇಳ್ದನು । ಮೂಢರಿಗದ ಹೇಳಬೇಕು ॥
ಪ್ರೌಢರು ಸಾರ್ದಾಗ ಬಲ್ಲರೆಂದಪಳೆಂದು । ಪ್ರೌಢೆಯು ಮಾತನಾಡಿದಳು ॥ ೯೭ ॥

ಎಲೆಯ ಘಳಿಗೆಯನಿತರೊಳು ಸಾಕಾದುದು । ನಳಿನಾಕ್ಷಿ ಪತಿಯ ಪಾದಗಳಾ ॥
ನಲಿದೊತ್ತುತಿದ್ದಳು ತಳಿರು ತಾವರೆಯ ಮೇ । ಲೊಲೆದಾಡುವಂತಿದ್ದುದಾಗ ॥ ೯೮ ॥

ಪಾದವನೊತ್ತುವ ಕುಶಲ ಲೇಸೆಂದಾಗ । ಪಾದದಿಂದಪ್ಪಿದನವಳಾ ॥
ಆದುದೊಡೆಯು ಮೆಚ್ಚಿ ಕಾಲೊಳೊದೆದನೆಂಬ । ಗಾದೆಯಿಂದೆನಗೆಂದಳವಳು ॥ ೯೯ ॥

ನಗುತ ಭೂಪತಿಯೆದ್ದನಲ್ಲಿಂದ ಮುಂದಣಾ । ಜ್ಜಾಗವನವರೆ ಬಲ್ಲರದರ ॥
ಸೊಗಸನಂತಿಂತೆಂದು ನುಡಿದೆನಾದರೆ ಬಲು । ಹಗರಣವಹುದದಂತಿರಲಿ ॥ ೧೦೦ ॥

ಆವ ಜಾಣನವಳು ಸುಜಾಣೆ ಮತ್ತಿಂತಂತು । ಸವಿನುಡಿ ನೋಟ ಸೋಂಕಿಂದಾ ॥
ತವಕಿಸಿ ತಕ್ಕೈಸಿ ಚುಂಬಿಸಿ ನೆರೆದನು । ಭವವ ಬಾಯ್ಬಿಟ್ಟಾಡಬಹುದೆ ॥ ೧೦೧ ॥

ರಸಿಕದಂಪತಿಗಳು ಕೂಡಿದರೆನೆ ಸಾಕು । ನಸೆಮಸೆ ಲಲ್ಲೆ ಕೊಲ್ಲಿಯೊಳು ॥
ಬೆಸುಗೆವಡೆದರಂತುಟಿಂತುಟಾಡಿದರೆಂದು । ಹಸರವಿಕ್ಕುವುದಾವ ಜಾಣ್ಮೆ ॥ ೧೦೨ ॥

ಕಲೆವಂತರೊಲ್ದು ಕೂಡಿದರೆನೆ ಸಾಕು ಪೆ । ರ್ಮೊಲೆಯೆದೆ ಸೋಂಕಿದುವೆಂದು ॥
ಸೆಳೆನಡುತೊಡೆತೋಳುಮೊಗಗಳೊಂದಿದುವೆಂದು । ಬೆಳುಮಾತನಾಡಲದೇಕೆ ॥ ೧೦೩ ॥

ನಳನಳಿಕೆಯೊಳೊಡಗೂಡಿದರೆನೆ ಸಾಕು । ಕೊಳರ್ವಕ್ಕಿಗಳ ಕೊರಳಂತೆ ॥
ಗಳರವ ತಾಡನ ಸೀತ್ಕಾರ ಭೂಷಣ । ದುಲುಹು ಪೆರ್ಚಿಹುದೆನಲೇಕೆ ॥ ೧೦೪ ॥

ಸುಖಿಗಳು ನಲಿದು ಕ್ರೀಡಿಸಿದರೆಂದೆನೆ ಸಾಕು । ನಖಹತಿದಂತಹತಿಗಳಾ ॥
ಲಿಖಿಸಿದರೊಬ್ಬೊಬ್ಬರ ಮೈಯೊಳೆಂದು ದು । ರ್ಮುಖರಿಂಗರಿಕೆಮಾಡಲೇಕೆ ॥ ೧೦೫ ॥

ಧನ್ಯರು ರಮಿಸಿದರೆನಲದೆ ಸಾಕು ಮ । ತ್ತನ್ಯೋನ್ಯ ಸುಖವೆದೆದಟ್ಟೆ ॥
ದೈನ್ಯಗರೆದರು ಬೈದರು ಹೊಯ್ದರೆಂದು ಸಾ । ಜನ್ಯಪುರುಷರಾಡಬಹುದೆ ॥ ೧೦೬ ॥

ಮರೆಯೊಳು ರಮಿಸಿದರೆನೆ ಸಾಕು ಹೊದಪಿನ । ಮರೆಹೋಯ್ತು ಪುಳಕವಾಯ್ತೆಂದು ॥
ತುರುಬಳಿದುದು ದೇಹ ಕಂಪಿಸಿತೆಂದದ । ಹೊರಹೊಮ್ಮಿಸುವುದಾವ ಪ್ರೌಢಿ ॥ ೧೦೭ ॥

ರಮಣೀರಮಣರೊಂದುಗೂಡಿದರೆನೆ ಸಾ । ಕಮರ್ದಪ್ಪಿ ಚುಂಬಿಸಿ ನೆರೆಯೆ ॥
ಬೆಮರ್ವನಿ ತೊಟ್ಟಿಟ್ಟು ಸುಯ್ಯೆಲರುಬ್ಬಿತೆಂ । ದಮಮ ಕೋವಿದರಾಡಬಹುದೆ ॥ ೧೦೮ ॥

ಅಚ್ಚುಮೆಚ್ಚಿನೊಳು ಕೂಡಿದರೆನೆ ಸಾಕು ಕ । ಣ್ಮುಚ್ಚಿ ಮೈಮರೆವರಾ ಕ್ಷಣವೆ ॥
ಎಚ್ಚರುವರು ಕೂಡೆ ಮೂರ್ಛೆವಡೆವರೆಂದು । ರಚ್ಚೆಯ ಮಾಡಲದೇಕೆ ॥ ೧೦೯ ॥

ಜಾಣ್ಮೆಯೊಳೊಂದಿದರೆನೆ ಸಾಕು ಸುಖವೇರಿ । ಕಣ್ಮುಚ್ಚಿ ಪೀರ್ದು ಚೆಂದುಟಿಯಾ ॥
ನುಣ್ಮೆಯ್ಯನಮರ್ದಪ್ಪಿ ಕೂಡಲಿಂದ್ರಿಯ ಪೊರ । ಪೊಣ್ಮಿತೆಂಬುದದಾವ ಚದುರು ॥ ೧೧೦ ॥

ಸುರತಸುಖದೊಳು ತಣಿದರೆನೆ ಸಾಕು ಕ । ಣ್ತೆರುಗಿ ತೋಳ್ಸಡಲಿ ಮಾತರತು ॥
ಪರವಶರಾಗಿ ಪಾಸಿನೊಳೊರಗಿದರೆಂದು । ಪರಿಂಗರಿಕೆಮಾಡಲೇಕೆ ॥ ೧೧೧ ॥

ದಂಪತಿಗಳು ಸುರತಾಂತ್ಯದಿ ಕಣ್ದೆರೆ । ದಿಂಪುವಡೆದರೆನೆ ಸಾಕು ॥
ಕಂಪನ ಮೈಗಧರಕೆ ಬೆಳ್ಪು ಕಡೆಗಣ್ಗೆ । ಕೆಂಪಡರಿದುದೆನಲೇಕೆ ॥ ೧೧೨ ॥

ಕೊಸರುವನಹುದು ರತ್ನಾಕರಸಿದ್ಧಗಿ । ದಸವಮಾನವಹ ಕಲೆಯಲ್ಲ ॥
ಸುಸಿಲ ಪ್ರಕಟವಾಗೆ ಸೊಬಗಲ್ಲವೆಂದು ಸೂ । ಚಿಸಿ ಬಿಟ್ಟೆನೆಂದರಿದಿಹುದು ॥ ೧೧೩ ॥

ತರುಣಿಯರೊಡಗೂಡಿ ಕರ್ಮವಳಿದ ಶಕ್ತಿ । ಭರತೇಶಗುಂಟುವಂತದನು ॥
ವಿರಚಿಸೆ ದೋಷಹೊದ್ದದ ಯುಕ್ತಿ ರತ್ನಾ । ಕರಸಿದ್ಧಗುಂಟೊಲ್ಲದಾದ ॥ ೧೧೪ ॥

ಮರೆಸುವ ಕಟಿಸೋಂಕಿನಿಂದಾದ ಸುಖವದು । ಮರೆಯೊಳಿದ್ದರೆ ಸೊಗಸೈಸೆ ॥
ತೆರೆದರೆ ವಸ್ತ್ರ ತೆರೆದಕಟಿಯುಂತೆಂದು । ಮರೆಸಿದೆನೆಂದರಿದಿಹುದು ॥ ೧೧೫ ॥

ಶ್ವಾನತುರಗಪಶುಗಳ ಕೂಟ ತೋರುವಂ । ತಾನೆಗಳಾಟ ತೋರುವುದೆ ॥
ಹೀನಸ್ತ್ರೀಪುರುಷರ ರತಿಯ ಪೇಳ್ವಂತೆ ಮ । ಹಾನುಭಾವರ ಹೇಳಬಹುದೆ ॥ ೧೧೬ ॥

ಕೋಳಿಯ ಕೂಟ ಗುಬ್ಬಿಯ ಕೂಟದಂತೆ ಹಂ । ಸಾಳಿಯ ಕೂಟ ತೋರುವುದೆ ॥
ಥಾಳಕರೊಡಗೂಟ ಪ್ರಕಟವಲ್ಲದೆ ಗುಣ । ಶೀಲರ ಕೂಟ ಪ್ರಕಟವೆ ॥ ೧೧೭ ॥

ನಾಡುಗರೂರುಗರಾಟ ವಿಟರು ರತಿ । ಮಾಡಿದರ್ಥವ ಹೇಳುವಂತೆ ॥
ಆಡಬಹುದೆ ಮಝು ಭರತಚಕ್ರೇಶ್ವರ । ಕೂಡಿದ ಕುಶಲಕಲೆಗಳಾ ॥ ೧೧೮ ॥

ಬಿನುಗುವೆಂಗಳ ಕಳ್ಳವೆಂಗಳ ಗ್ರಾಮ್ಯವಾ । ನಿನಿಯರ ಕಲೆಯ ಪೇಳ್ವಂತೆ ॥
ಘನಪತಿಭಕ್ತೆಯ ಚದುರೆಯ ಕುಸುಮಾಜಿ । ಯನುಭವಾರ್ಥವ ಹೇಳಬಹುದೆ ॥ ೧೧೯ ॥

ಮತ್ತವನೆದೆಯೆಂಬುದದು ಕಾಮಶಾಸ್ತ್ರದ । ಹೊತ್ತಗೆಯಾ ಶಶಿಮುಖಿಯ ॥
ಚಿತ್ತವೆಂಬುದು ರತಿಕಲೆಯ ಪಲಗೆ ಭೋಗ । ದುತ್ತಮವೆಂತೊ ಅಂತಿರಲಿ ॥ ೧೨೦ ॥

ಒರ್ವಳನೊಡಗೂಡಿದಣಿವನಾ ನೃಪನೊಮ್ಮೆ । ಸರ್ವರ ನೆರೆದುದಣಿವನು ॥
ಪರ್ವಿಸುವನು ಸುರುಳಿಸುವನು ಕಾಮನ । ಸಾರ್ವಭೌಮನು ನಾಡನರನೇ ॥ ೧೨೧ ॥

ಕಡುಮನದಶ್ವದ ವಾಘೆಯ ಬಲಿದೊಮ್ಮೆ । ಸಡಿಲ ಬಿಟ್ಟಿರುವಂತೊಮ್ಮೆ ॥
ಅಡಕದೊಳೊಮ್ಮೆ ಹೆಚ್ಚಿನೊಳೊಮ್ಮೆ ಕಾಮನ । ನಡಿಸುತಿಹನು ಸತಿಯರೊಳು ॥ ೧೨೨ ॥

ಪಾಪವಿಲ್ಲದ ಸುಖವಾ ಸುಖವನು ಹೊರ । ಲೇಪವೆಂದನುಭವಿಸುವನು ॥
ಶ್ರೀಪೂರ್ಣನಿಜಸುಖವೊಂದೆ ತನಗೆ ವಜ್ರ । ಲೇಪವೆಂದೆದೆಯೊಳಾಂತಿಹನು ॥ ೧೨೩ ॥

ಪಿತ್ತವೇರಿದರೆ ಶರೀರಶೋಧನೆಗೈದು । ಬಿತ್ತಿಗರಿಳೆಯೊಳಿಹಂತೆ ॥
ಒತ್ತಿದ ಮದವ ಪೆಂಗಳೊಳಾಡಿ ಕಳೆದು ರಾ । ಜೋತ್ತಮನಿಹನಾತ್ಮನೊಳಗೆ ॥ ೧೨೪ ॥

ತಾಂ ವರಸತಿಯ ಸಂಭೋಗದೊಳಮಲಾತ್ಮ । ಸಂವರೆ ಪೂರ್ವಕವಾಗಿ ॥
ಪುಂವೇದನೀಯಕರ್ಮವನು ದೂರಿಸಿದನ । ದೇಂ ವೀತರಾಗನೊ ಭೋಗಿ ॥ ೧೨೫ ॥

ಬಸವಳಿದಳ್ಳಿವೊಯ್ದುದೆಯಾಂ ವ್ಯೆನುಗ್ಗು । ನುಸಿಯಾಗಿ ಜಡರು ಕೂಡುವರು ॥
ಕುಸುಮಾಜಿಭರತೇಶರಿಬ್ಬರ ಕೂಟವಾ । ಕುಸುಮಭೃಂಗದ ಕೂಟದಂತೆ ॥ ೧೨೬ ॥

ಆನಂದವಾರ್ಧಿಯೊಳೋಲಾಡಿದಂತೆ ಲೀ । ಲಾನದಿಯೊಳು ತೇಲಿದಂತೆ ॥
ಆ ನಲ್ಲರಾಟವಿದ್ದುದು ನವಿಲುಯ್ಯಲ । ತಾನೇರಿ ತೂಗಾಡಿದಂತೆ ॥ ೧೨೭ ॥

ಇಂದ್ರಿಯವೈದು ತೃಪ್ತಿಯನ್ನೈದಿದುವು ಮನು । ಜೇಂದ್ರಗೆ ಲಲನೆಗೊಂದಿನಿಸು ॥
ತಂದ್ರಿದೋರಿದುದು ಕಣ್ಮುಚ್ಚಿ ವ್ಯೆಮರೆದಾಗ । ಸಾಂದ್ರತಲ್ಪದೊಳೊರಗಿದರು ॥ ೧೨೮ ॥

ಇನಿದಾದ ರತಿಸುಖ ತಲೆಗೇರಿ ಹೊರಗಣ । ನೆನಹ ಮರೆದು ಬಾಹ್ಯದಟ್ಟಿ ॥
ತನುತನು ಸೋಂಕಿ ತಾವೊರಗಿದ್ದರಾಗ ಮೋ । ಹನ ತುಂಬಿ ಭಾರೈಸಿದಂತೆ ॥ ೧೨೯ ॥

ನಿದ್ರೆಯೊಳಿಹನು ಕನಸುದೋರಲೆದೆಯಲ್ಲಿ । ಚಿದ್ರೂಪ ಪೊಳೆವುದಾ ನೃಪಗೆ ॥
ನಿದ್ರೆಯೊಳಿಹಳು ಕನಸುದೋರಲಿನೆಯನ । ತದ್ರೂಪೆ ಹೊಳೆವುದಾ ಸತಿಗೆ ॥ ೧೩೦ ॥

ಮಂಜು ಹರಿವವೊಲು ಹರಿದುದಾ ಮೂರ್ಛೆ ನಿ । ರಂಜನಸಿದ್ಧಯೆಂದೆನುತಾ ॥
ಕಂಜಾಸ್ತ್ರಜಿತರೂಪ ಕಣ್ದೆರೆದೆದ್ದನು । ಕಂಜಾಕ್ಷಿಯೆದ್ದಳಾಕ್ಷಣವೇ ॥ ೧೩೧ ॥

ಪನ್ನೀರು ಪಾನ ಕರ್ಪೂರತಾಂಬೂಲ ಬಾ । ವನ್ನ ಬೀಸಣಿಗೆ ಮುಂತಾದ ॥
ಸನ್ನಾಹದೊಳು ಸತಿಪುರುಷರಿದ್ದರು ವ್ಯೆಗೆ । ಮುನ್ನಿನ ಕಾಂತಿ ನೂರ್ಮಡಿಸೆ ॥ ೧೩೨ ॥

ಚಿನ್ಮಯತತ್ವವ ಮುಟ್ಟಿ ವೀಣೆಯೊಳು ಕಿಂ । ಚಿನ್ಮಧ್ಯೆ ಸೊಗಸಿ ಹಾಡುತಿರೆ ॥
ಮನ್ಮಥರೂಪನಾಲಿಸುತಿದ್ದನಿಲ್ಲಿಗೆ । **ಸನ್ಮಾನಸಂಧಿ** ಸುಗಂಧಿ ॥ ೧೩೩ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೩೪ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀ ಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೩೫ ॥

ಬಯಸದೆ ನಿನ್ನ ನೋಡಿದರೆ ಮೂಲೋಕವಿ । ಸ್ಮಯಭೋಗಗಳ ತಂದು ಕೊಡುವಾ ॥
ನಿಯಮದುದಾರಶೀಲನೆ ನನ್ನೊಳಿರು ಸುಖ । ಮಯನೆ ಚಿದಂಬರಪುರುಷಾ ॥ ೧೩೬ ॥

ಸನ್ಮಾನಸಂಧಿ ಸಂಪೂರ್ಣಂ

*

## ವೀಣಾಸಂಧಿ.

ಭೋಗಸಾಗರ ಗುಣಸಾಗರ ಸುಜ್ಞಾನ । ಸಾಗರ ಕಾಂತಿಸಾಗರನೆ ॥
ಯೋಗಸಾಗರನೆ ಸನ್ಮತಿಯ ಕಾಣಿಸು ವೀತ । ರಾಗ ನಿರಂಜನಸಿದ್ಧಾ ॥ ೧ ॥

ಏನ ಬಣ್ಣಿಸುವೆನಾ ಕುಸುಮಾಜಿ ಪಾಡುವ । ಗಾನವನಾ ವೀಣೆಗಿವಳು ॥
ತಾನೊಬ್ಬ ಸಖಿಯೊಯೆಂಬಂತೆ ಶಾರೀರ ಸ । ಮಾನವಾಗಿರಲು ಪಾಡಿದಳು ॥ ೨ ॥
ಎಡಗೈಯೊಳಮರಿಸಿ ವೀಣೆಯನಾಂತು ಮೇ । ಗಡೆ ಮೆಟ್ಟನೊಳು ಬೆರಳಾಡೆ ॥
ಒಡನೆ ಕೀಳ್ಗಡೆ ತಂತಿಯೊಳು ಬಲಗೈವೆರ । ಳೊಡರಿಸೆ ಪಾಡಿದಳೊಲಿದು ॥ ೩ ॥
ತೊಡೆಯ ಮೇಲಿಟ್ಟು ನಲ್ಲಳನು ನುಂಗೊರಳ ತ । ನ್ನೆಡಗೈಯೊಳಾಂತು ತೆಳ್ವಸಿರಾ ॥
ತಡಹುವ ನಲ್ಲನ ಮುದ್ದುಲಾಲನೆಯ ಕ । ನ್ನಡಿಸೆ ತಾ ವೀಣೆಯಾಂತೊಲವು ॥ ೪ ॥
ಕೆಂಬಾಯ ನಸುದೆರೆದಾಯೆಂದು ರಾಗವ । ನಂಬುಜಾನನೆ ತುಡುಕಿದಳು ॥
ತುಂಬಿಗಳೊಡನೆ ಘುಂಮೆಂದೆಡಬಲಕೆ ತೆ । ರಂಬೊಳೆದುವು ಶ್ರುತಿಗೊಡುತ ॥ ೫ ॥
ವೀಣೆಯೊಳೊಮ್ಮೆ ತೋರುವಳು ರಾಗವ ತನ್ನ । ಗೋಣೊಳಗೊಮ್ಮೆ ತೋರುವಳು ॥
ವೀಣೆಯನೊಂದ ಬಿಟ್ಟೊಂದ ನುಡಿಸುವಳೀ । ಜಾಣೆಯೆಂಬಂತಿಹುದಾಗ ॥ ೬ ॥
ವೀಣೆಯ ನುಡಿಸುತ ಪಾಡಿದರವಳೀಗ । ವೀಣೆಗಳೆರಡನೊಂದಾಗಿ ॥
ಹೂಣಿ ನುಡಿಸುತಿದ್ದಳೆಂಬೊಲಿಹುದು ಮಝು । ರಾಣಿಯ ದನಿಯ ಚೆಲ್ವಿಕೆಯೆ ॥ ೭ ॥
ವೇಳೆಯರಿದು ಶ್ರುತಿಯರಿದು ಕಟ್ಟಣೆಯರಿ । ದಾಳಾಪದನುಭವವರಿದು ॥
ಕೇಳಿಸಿದಳು ಭರತಾಗಮ ಭರತಭೂ । ಪಾಲನ ಸತಿಗೆ ವಿಸ್ಮಯವೆ ॥ ೮ ॥
ಶ್ರೀರಾಗರಸವನಾಳಾಪಿಸಿ ಮಾಳವ । ಶ್ರೀರಾಗರಸವನೆತ್ತಿದಳು ॥
ಈ ರೀತಿಯಾಗೆ ಶ್ರೀರಾಗವಲ್ಲದರವು । ದಾರಿದ್ರ್ಯರಾಗವೆಂಬಂತೆ ॥ ೯ ॥
ಆಳಾಪಿಸುತ್ತರಸನ ಮೊಗ ನೋಳ್ಪಳಾ । ವೇಳೆಗೆ ನಗೆ ತೋರಿ ತನಗೆ ॥
ಮೇಲೆ ಕಣ್ಮುಚ್ಚಿ ನಗುತ ಪಾಡುವಳು ಲೀಲೆ । ದಾಳುತಿಹನು ರಾಯ ನೋಡಿ ॥ ೧೦ ॥
ಕೂಡೆ ಕಣ್ದೆರೆದು ನೋಡುತ ಪಾಡುವಳು ನಗೆ । ಗೂಡಿ ಪಾಡುವಳು ಮತ್ತೊಮ್ಮೆ ॥
ಕೀಡುತ ತಂತಿಯತ್ತೆರಗಿ ದೃಷ್ಟಿಯನಿಟ್ಟು । ಪಾಡುವಳಾ ಗಾಡಿಕಾತಿ ॥ ೧೧ ॥
ಒಳಗುಮ್ಮಿದಾನಂದರಸ ತನ್ನ ತನು ತುಂಬಿ । ತುಳುಕಿ ಹೊರಗೆ ಸೂಸುವಂತೆ ॥
ತೆಳುವಸಿರಿಂದ ಬಾಯ್ತೆರೆಯೊಳು ಸುಸ್ವರ । ಹೊಳೆದು ಮೋಹಿಸುತಿದ್ದುದಾಗ ॥ ೧೨ ॥
ಸುಳಿನಾಭಿಯೊಳು ಪುಟ್ಟಿ ಮೊಲ್ಲೆದೆಯೊಳು ಬೆಳೆ । ದೊಳುಗೊರಳೊಳು ಪ್ರಾಯವಡೆದು ॥
ಎಳೆಯಳ ಬ್ರಹ್ಮರಂಧ್ರವನೇರಿ ಬಾಯ್ದೆರೆ । ಗಿಳಿದು ಮೋಹಿಸಿದುದಾಳಾಪಾ ॥ ೧೩ ॥

ಏನ ಕಲ್ತಳೊ ಎಲ್ಲಿ ಕಂಡಳೊ ಮಝ್ಝು ಪುಂ । ಖಾನುಪುಂಖದೊಳು ಮೇಲ್ಮೇಲೆ ॥
ತಾನವ ಹೊಸಹೊಸತಾಗಿ ತಂದಳು ಜೇನ । ಸೋನೆಯ ಕರೆವಳೆಂಬಂತೆ ॥ ೧೪ ॥
ಕುಂಟಣಿಗೋಲೆಯು ಬರೆವ ಕಾವನ ಕೈಯ । ಕಂಠದೊಂದುಲುಹೊಯೆಂಬಂತೆ ॥
ಕಂಠವನಲುಗಿಸಿ ಹೊಸತಾನಗಳ ಕಳ । ಕಂಠ ನಿನಾದ ತೋರಿದಳು ॥ ೧೫ ॥
ಸೋಂಕಿ ಚೆಂದುಟಗಚ್ಚಿದಿನೆಯುಗೆ ಮುಗ್ಧೆ ತೊ । ಡಂಕು ಸಾಕೆಂದು ಕೈಯೊದರ್ವ ॥
ಕಂಕಣದುಲುಹೊಯೆಂಬಂತೆ ಕೊರಳು ಕುಣಿ । ದಂಕೆದೋರಿದಳು ತಾನಗಳಾ ॥ ೧೬ ॥
ಉಂಚದಿಂದೆತ್ತುವಳಡಕದಿಂದಡಗಿಸಿ । ಮಿಂಚಿನಂತೊಡನೇಳಿಸುವಳು ॥
ಅಂಚೆಯ ನಡೆದಾಡಿಸುವಂತೆ ರಾಗದ । ಸಂಚು ಗಾಣಿಸಿ ತೋರುತಿಹಳು ॥ ೧೭ ॥
ಬಂದ ತಾನವ ಬರಲೀಸದೆ ಹೊಸಹೊಸ । ತೊಂದೊಂದು ಪರಿಯ ತಾನಗಳಾ ॥
ತಂದು ತಂದೆದೆಗೊಳಿಸಿದಳು ಗಾನವ ಕರೆ । ತಂದು ತೋರಿಸುವಂತೆ ನೃಪಗೆ ॥ ೧೮ ॥
ತಾನತಾನಕೆ ರಾಯ ಹಿಗ್ಗುತಿಹನು ಗಂಡ । ನಾನಂದಕವಳುಬ್ಬುತಿಹಳು ॥
ಗಾನವೊಪ್ಪಿದುದಾಗ ಗಂಧಗಿರಿಯ ಪವ । ಮಾನ ಕಂಮನೆ ತೀಡಿದಂತೆ ॥ ೧೯ ॥
ತರುಣಿಯು ಶಾರೀರವವಳು ಲಾವಣ್ಯಾಂಗಿ । ಸುರತಸುಖಾಂತ್ಯದ ಗಾನಾ ॥
ಪರರಿಲ್ಲವೇಕಾಂತವೆಂದರಾ ಸವಿಯನು । ವಿರಚಿಸಬಹುದೆಯಿಂತೆಂದು ॥ ೨೦ ॥
ಕಂಮುಕಂಮನೆ ತಾನಗಳ ತಂದು ಕೊರಳೊಳ । ಗುಮ್ಮಿಸಿ ಹಾಡುವಳದಕೆ ॥
ಜುಂಮುಜುಂಮನೆ ಮೈಗೆ ಪುಳಕವೇರಲು ರಾಯ । ಸುಮ್ಮಾನ ಮಿಗೆ ಕೇಳುತಿಹನು ॥ ೨೧ ॥
ಸೀಯನೆ ರಾಗವ ಮಾಡಿ ವಿಚಿತ್ರಾಭಿ । ಪ್ರಾಯಪದಗಳ ಹಾಡಿದಳು ।
ಕಾಯಸಂಭೂತನಾರಾಧಿಸುವಧಿದೇವಿ । ಗಾಯಕಿಯಾದಳೆಂಬಂತೆ ॥ ೨೨ ॥
ಅಂಬುಧಿ ಸಾಸಿವೆಯೊಳಗಡಗಿತು ಮಣ್ಣೊ । ಳಂಬರ ಹೂಳಿ ಹೋಯ್ತೆಂದು ॥
ಕಂಬುಕಂಧರೆ ಪರಮಾತ್ಮಕಲೆಯನವ । ಲಂಬಿಸಿ ಹಾಡಿದಳೊಲಿದು ॥ ೨೩ ॥
ಒಳಗೆ ತನ್ನಾತ್ಮನ ಕಾಣ್ಬುದಚ್ಚರಿ ಹೊರ । ಗೆಳೆವೆಂಗಳೆದೆಯು ಸಂಚವನು ॥
ತಿಳಿವುದಚ್ಚರಿಯಲ್ಲದುಳಿದ ವಿದ್ಯೆಗಳೇನು । ಬಲುಹೆಂದು ಭಾವೆ ಪಾಡಿದಳು ॥ ೨೪ ॥
ಕುದುರೆಯಂತೊಲೆವ ಚಿತ್ತವ ನಿಲಿಸುವುದರಿ । ದೆದೆಯೊಳಾತ್ಮನ ಕಾಣ್ಬುದರಿದು ॥
ಮದವತಿಯುರನೊಲಿಸುವುದರಿದುಳಿದುವು । ಸದರವೆಂದರಸಿ ಪಾಡಿದಳು ॥ ೨೫ ॥
ಯೋಗದೊಳಾತ್ಮತತ್ವವೆ ಕಡೆ ದಶವಿಧ । ಭೋಗಕಂಗನೆ ಕಡೆಯೆಂದು ॥
ಯೋಗಶಾಸ್ತ್ರವ ಭೋಗಶಾಸ್ತ್ರವನೆರಡನು । ತೂಗಿ ತೋರ್ಪಡಿಸಿ ಪಾಡಿದಳು ॥ ೨೬ ॥
ರತಿಗಲಸಿಕೆಯೇತರಿಂದಹುದಭಿನವ । ರತಿಗೇತರಿಂದಿಚ್ಚೆಯಹುದು ॥
ಹತಸುಖವಾವುದು ಹಿತಸುಖವಾವುದೆಂ । ದತಿಶಯದೋರಿ ಪಾಡಿದಳು ॥ ೨೭ ॥

ಚುಂಬನಕೇನಿಚ್ಛೆ ತಕ್ಕೆಗಾವುದು ಸವಿ । ದಂಬುಲವೇನ ಮಾಡುವುದು ॥
ಕೆಂಬಲ್ಲಕಿಡಿಯೇನ ಸುಡುವುದು ಮನಕೆಲ್ಲಿ । ನಂಬುಗೆಯೆಂದು ಪಾಡಿದಳು ॥ ೨೮ ॥

ಲೇಪನಕೊಪ್ಪುವ ತಾನಗಳಾವುವಾ । ಲಾಪ ತಾನಾವಾಗ ಮೆರಹು ।
ದೀಪದ ಮಂಚದ ಫಲಗಳೇನೆಂದೊಲ್ದು । ಚಾಪಲನೇತ್ರೆ ಪಾಡಿದಳು ॥ ೨೯ ॥

ಬಿಸಿನಗೆಯಾವುದು ತಣ್ಣಗೆ ಯಾವುದು । ಹುಸಿನಗೆಮುಗುಳುನಗೆಗಳು ॥
ರಸನಗೆಯೆಳೆನಗೆಯೆಂಬವೆಂತಿಹುವೆಂದು । ನಸುನಗುತವಳು ಪಾಡಿದಳು ॥ ೩೦ ॥

ಬೆಳುನೋಟವಾವಾಗ ಬಿರುನೋಟವಾವಾಗ । ಸೆಳೆನೋಟಕೊಲ್ಲಿನೋಟಗಳು ॥
ಬಳಲುನೋಟಗಳೋರೆನೋಟವಾವಾಗವೆಂ । ದೊಳುನೋಟವೆರಸಿ ಪಾಡಿದಳು ॥ ೩೧ ॥

ಮರೆನುಡಿಯಾವಾಗ ಸೊಳ್ನುಡಿಯಾವಾಗ । ಮೊರೆಗೆಟ್ಟ ನುಡಿಗಳಾವಾಗ ॥
ಮರುಕದ ನುಡಿ ಮುದ್ದುನುಡಿಗಾವ ಹೊತ್ತೆಂದು । ಕಿರುನುಡಿಯಿಂದ ಪಾಡಿದಳು ॥ ೩೨ ॥

ತೊಡೆಯು ಹೊಯ್ಲಾವಾಗ ತೋಳ ಹೊಯ್ಲಾವಾಗ । ಕಡೆಗಂಗಳೆಸುಗೆ ಯಾವಾಗ ॥
ನುಡಿಯ ಕೇಡಾವಾಗ ನಗೆಯ ಹುಟ್ಟಾವಾಗ । ನುಡಿಯಬೇಕೆಂದು ಪಾಡಿದಳು ॥ ೩೩ ॥

ಕಲೆಯ ಕಾಣಿಸಿ ಹಾಡುತಿದ್ದುದು ಮಂಚದ । ಕೆಲದ ಪುತ್ತಳಿಗಳ ಕಂಡು ॥
ಎಲೆಲೆ ಪರರು ಕೇಳ್ದರೆಂದು ಶಂಕಿಸಿ ನಿಲ್ವ । ಳೊಲೆದಾಡಿ ಕೂಡೆ ಪಾಡುವಳು ॥ ೩೪ ॥

ಹೊಳೆಹೊಳೆದರಸನ ಮೊಗವ ನೋಳ್ಪಳು ಮೋರೆ । ಯೊಲೆದೊಮ್ಮೆ ನಗುತ ಪಾಡುವಳು ॥
ನಲಿದಾಡಿ ಕೇಳಿಸುತಿದ್ದಳು ಮೋಹನ । ಜಲಧಿಯೊಳೋಲಾಡುವಂತೆ ॥ ೩೫ ॥

ನೇಮಗಾಣದ ಕಲೆ ಗುದಿಗೆಯ ಹೊಯ್ಲಂತೆ । ನೇಮದ ಕಲೆ ಸುಖಿಗಳಿಗೆ ॥
ಹೂಮಾಲೆಯಿಂದ ಹೊಯ್ದಂತಹುದೆಂದತಿ । ಕೋಮಲವಾಗಿ ಪಾಡಿದಳು ॥ ೩೬ ॥

ಆದುದೌ ಕುಸುಮಿ ಚೆಲ್ವಾದುದೌ ಕುಸುಮಾಜಿ । ಭೇದಿಸಿ ಹಾಡಿದೌ ಕುಸುಮು ॥
ಓದುದು ಸೊಗಸಾದುದಿನ್ನೊಮ್ಮೆಯೆಂದು ವಿ । ನೋದಿಗಳರಸ ಕೇಳಿದನು ॥ ೩೭ ॥

ಆ ನುಡಿಗೇಳ್ದವಳುಬ್ಬಿ ಹಾಡುವಳದ । ಕಾ ನರನಾಥನುಬ್ಬುವನು ॥
ತಾನವಳಿಗೆ ಮೆಚ್ಚುತವಳು ತನಗೆ ಮೆಚ್ಚು । ತಾನಂದಗೋಷ್ಠಿ ಮಾಡಿದರು ॥ ೩೮ ॥

ಮೆಚ್ಚಿದಿನೆಯಳೊಂದು ಹುಚ್ಚ ನುಡಿದರೆದೆ । ನೊಚ್ಚಗಾಗಿಹುದು ನಲ್ಲಂಗೆ ॥
ಅಚ್ಚಗಾನವನಾಕೆ ಪಾಡುತಿರಲು ಕೇಳ್ದು । ಮೆಚ್ಚದಿಹನೆ ಚಕ್ರಧರನು ॥ ೩೯ ॥

ಗಲ್ಲವನಲುಗುವ ಮಂಡೆಯ ತಡಹುವ । ನಲ್ಲಳೆ ಆಯ್ತೆ ಲೇಸೆಂಬಾ ॥
ಸೊಲ್ಲುಸೊಲ್ಲಿಗೆ ಪುಟವೇರುತವಳು ತನ್ನ । ನಲ್ಲನ ಮುಂದೆ ಹಾಡಿದಳು ॥ ೪೦ ॥

ಹೊಸಹೊಸಬಗೆಯಾಗಿ ಹಾಡುವೋಪಳ ಗಾನ । ರಸಕೆ ತಾನುಬ್ಬಿ ರಾಜೇಂದ್ರಾ ॥
ಅಸಿಯಳ ವೀಣೆಯನೊಯ್ಯನೋಸರಿಸಿ ತ । ಕ್ಕೆಸಿ ಬಿಟ್ಟು ಕೂಡೆ ಹಾಡೆಂಬಾ ॥ ೪೧ ॥

ಹಾಡುವಳೊಡನವಳುಲ್ಲಾಸ ಮಿಗೆ ತನ್ನ । ಹಾಡಿದ *ಸಿಹಿಯನಿಮ್ಮಡಿಸಿ ॥
ಕೂಡೆಕೂಡಪ್ಪಿ ಲೇಸೆಂಬನವಳಿಗುಂಟು । ಮಾಡುತಿಹನು ಗಾನರಸವಾ ॥ ೪೨ ॥
ಬೆಳಗಿನೊಳೋಲಾಡುವಂತೆ ಸಂಗೀತದ । ಸುಳಿಯೊಳು ತೇಲಾಡುವಂತೆ ॥
ತೆಳುಗಾಳಿಯೇರಿ ವೈಹಾಳಿಯ ಮಾಡುವಂ । ತೆಳಿವೆಂಗಳರಸಿ ಹಾಡಿದಳು ॥ ೪೩ ॥
ಕಡೆಗಣ್ಣರಶ್ಮಿ ಕೆಂಬಲ್ಗಳರಶ್ಮಿ ಬಾ । ಯ್ಮಡುಕೆ ಚೆಂದುಟಿಗಳ ರಶ್ಮಿ ॥
ಸಿಡಿದರಸನ ಮೇಲೆ ಹಾರುತಿರಲು ಸೆಳೆ । ನಡುವಿನ ನೀರೆ ಹಾಡಿದಳು ॥ ೪೪ ॥
ಮಡದಿ ಹಾಡುವದೊಂದು ಗಮಕಕೆ ಗಾನದ । ಕಡು ಸವಿಗೆದೆಯೊಳು ಹಿಗ್ಗಿ ॥
ಎಡದ ತೋಳಿಂದ ಕೊರಳನಪ್ಪಿ ಚೆಂದುಟಿ । ವಿಡಿದು ಚುಂಬಿಸಿ ನಕ್ಕು ಬಿಡುವಾ ॥ ೪೫ ॥
ಹೊಗರೇರಿ ಹೊಮ್ಮೇರಿದೊಡನೆ ಹಾಡುವಳಾಕೆ । ಸೊಗಸೆದೆದಟ್ಟೆ ಕಣ್ಮುಚ್ಚಿ ॥
ನಗುತ ನಿರಂಜನಸಿದ್ಧಾಯುನಮುಯೆಂದು । ಸುಗುಣನಾನಂದಿಸುತಿಹನು ॥ ೪೬ ॥
ಕೇಲಿ ಮಿಡಿಯೆ ಮಂಚದೊತ್ತಿಗೆ ಬಂದು ಪಾಂ । ಚಾಳಿಕೆಗಳು ನಿಂದು ತವಗೆ ॥
ವೀಳೆಯಗೊಡುತಾಲವಟ್ಟವಿಕ್ಕಲು ಗಾನ । ಲೀಲೆ ಮೋಹಿಸುತಿದ್ದುದಾಗ ॥ ೪೭ ॥
ಪಾಡುವಾಗವಳಿಗೆಲೆಯ ಘಳಿಗೆಯ ತಳು । ಮಾಡಿತು ಪುತ್ತಳಿಯದನು ॥
ನೋಡುತ ತನ್ನ ಹಸ್ತದ ಘಳಿಗೆಯ ಪೆಣ್ಗೆ । ನೀಡಿದನುಚಿತವಿನೋದಾ ॥ ೪೮ ॥
ಒಲ್ಲೆನೆಂದೆಲೆಯ ಘಳಿಗೆಗಾಕೆ ಮಂಡೆಯ । ನಲ್ಲಾಡಿ ನಗುತ ಹಾಡಿದಳು ॥
ಬಲ್ಲರಬಲ್ಲಹನರಿದನು ತನ್ನ ಕೈ । ಯಲ್ಲಿ ಸೇವೆಯ ಕೊಳ್ಳಳೆಂದು ॥ ೪೯ ॥
ಚಿಂತೆಯಿಲ್ಲ ಹಿಡಿ ಕುಸುಮಿ ನಲ್ಲಳಿಗೊಲ್ದ । ಕಾಂತಗೊಟ್ಟರೆ ಕೊಳ್ಳಬಹುದು ॥
ಸಂತೋಷ ನನಗಿದೆಂದವಳ ಬಾಯ್ದೆರೆಗೆ ಭೂ । ಕಾಂತ ನೀಡಿದನು ಘಳಿಗೆಯಾ ॥ ೫೦ ॥
ಅಂತುವೊಲ್ಲಳು ಹಾಡುವುದ ಬಿಟ್ಟು ಬಾಯ್ಮುಚ್ಚಿ । ತಂತಿಯೊಳಗೆ ಕೇಳಿಸಿದಳು ॥
ಕಂತುರೂಪನು ಬಾಯ್ಗೆ ಬಾಯಿಟ್ಟು ಕೊಟ್ಟನ । ತ್ಯಂತಲೀಲೆಯೊಳು ತಂಬುಲವಾ ॥ ೫೧ ॥
ತಾವರೆತಾವರೆಗಳು ಗಾಳಿಯಿಂದ ಸಂ । ಭಾವಿಸಿ ಕೂಡುವಾಗೊಳಗೆ ॥
ತೀವಿದ ರಜವೀಚೆಗಾಚೆಗಹಂತಿತ್ತ । ನಾ ವಿಭು ಕುಟುಕುದಂಬುಲವಾ ॥ ೫೨ ॥
ಕಂಮನೆ ಕಪ್ಪೂರದಂಬುಲ ಬರಲಾಕೆ । ಜುಂಮನೆ ತನುರೋಮವೆದ್ದು ॥
ಸುಮ್ಮಾನದಿಂದ ಹಾಡಿದಳು ಮುನ್ನಿನ ಸವಿ । ಯಿಮ್ಮಡಿ ಮುಮ್ಮಡಿಯಾಗೆ ॥ ೫೩ ॥
ಬಲುಮೆಯ ನಲ್ಲನೊದೆದರೊಮ್ಮೆ ಸವಿಯೆಂಬ । ರೆಳೆವೆಂಗಳಿನೆಯನೆ ಮೆಚ್ಚಿ ॥
ನಲವಿಂದ ಮನ್ನಿಸುತಿರಲವಳೆದೆಯೊಂದು । ಗೆಲವನಂತಿಂತೆನಬಹುದೆ . ॥ ೫೪ ॥

* ಸವಿ.

ಸ್ವರ್ಗದ ಸುಖ ತನ್ನನೋಲೈಸಿದಂತಪ । ವರ್ಗ ಸವಿಸಾಪವಾದಂತೆ ॥
ನಿರ್ಗಹನದೊಳೊಲೆದಾಡಿ ವಲ್ಲಭನ ಸಂ । ಸರ್ಗದೊಳುಬ್ಬಿ ಹಾಡಿದಳು ॥ ೫೫ ॥

ಕಾಳಂಜಿವಿಡಿದು ಕೈಗುದಕವನೆರೆಯೆ ಪಾಂ । ಚಾಳಿಕೆ ಮೊದಲ ತಂಬುಲವಾ
ಸೂಳಾಡಿಯುಗುಳ್ವ ವೀಳೆಯುಗೊಂಡು ಗಾನದೊ । ಳೋಲಾಡುತಿದ್ದರೇನೆಂಬೆ ॥ ೫೬ ॥
ಭೋಗದ ಸಿರಿಯು ಹಾಡುವಳೊಮ್ಮೆ ಪರಮಾತ್ಮ । ಯೋಗದ ಸಿರಿಯು ಹಾಡುವಳು ॥
ಶ್ರೀಗುರುಹಂಸನಾಥಾಯೆಂದು ಕಣ್ಮುಚ್ಚಿ । ರಾಗಿಸುತಿರ್ಪನಾ ರಾಯಾ ॥ ೫೭ ॥
ಜೊನ್ನದ ಬೊಂಬೆಯೆಕೈಗೆ ಸಿಕ್ಕದ ಹೊಸ । ರನ್ನಗನ್ನಡಿಯೆ ಚಿನ್ಮಯನೆ ॥
ಚೆನ್ನಿಗ ಭರತರಾಜಗೆ ತೋರಿದ್ಯೆಯೆಂದು । ಬಿನ್ನಣಿಸಿದಳಾತ್ಮಕಲೆಯಾ ॥ ೫೮ ॥
ಕುಸುಮಾಜಿ ಚೆನ್ನಾಯ್ತು ಕುಸುಮಾಂಗಿ ಸೊಬಗಾಯ್ತು । ಕುಸುಮಕೋಮಲೆ ಹಸನಾಯ್ತು ॥
ಕುಸುಮಗಂಧಿನಿ ಲೇಸು ಲೇಸೆಂದು ಮೆಚ್ಚಿ ಮು । ದ್ದಿಸಿ ಕೇಳ್ದನಾ ರಾಯನವಳಾ ॥ ೫೯ ॥
ಸರಸಸಂಗೀತವೆ ತಡಮಾಡಬೇಡೆಮ್ಮ । ಭರತರಾಜೇಂದ್ರನ ಮೊಗದಾ ॥
ಮುರಿಮಿಸೆಯಂತೆ ಮೋಹಿಸುತ ಬಾ ಬಾರೆಂದು । ಕರೆವುತ ನಗುತ ಹಾಡಿದಳು ॥ ೬೦ ॥
ತುಂಬಿದ ತಾನಗಳಿರ ಬನ್ನಿ ರಾಯನ । ತುಂಬಿದ ಬವರಿಗಳಂತೆ ॥
ಕೆಂಬಲ್ಲ ಥಾಳದಂತರಸನ ಮೂಗಿನ । ಡಿಂಬೆಯುಂತೆಂದು ಪಾಡಿದಳು ॥ ೬೧ ॥
ಚಿಮ್ಮುರಿಯಂತೆ ತಿಲಕದಂತೆ ನೈಜಂಮು । ಜುಂಮುದಟ್ಟೆಸುತ ರಾಗಗಳಾ ॥
ನಮ್ಮರಸನ ಸಿರಿಮುಡಿಯಾಣೆ ಕೊನೆಯಾಣೆ । ಗುಮ್ಮಿರೆಂದೊಲೆದು ಹಾಡಿದಳು ॥ ೬೨ ॥
ಒಸೆದುಬ್ಬುವನು ಮಝು ಕುಸುಮಿಯ ರಾಗವೆ । ಕುಸುಮದ ಕಂಪೆಯೆಂದೆಂಬಾ ॥
ಕುಸುಮವ ಕೆದರಿದಂತಾಯ್ತೆಂಬ ನೊಸಲೊಳು । ನೊಸಲಿಟ್ಟು ಮುಂಡಾಡಿ ಬಿಡುವಾ ॥ ೬೩ ॥

ಬಾಯ್ದೋರಿ ಮತ್ತೊಮ್ಮೆ ತಂಬುಲವೀಯಲಾ । ರೈದನದಕೆ ದೇವ ನೀನು ॥
ಬಾಯ್ದೆರೆ ನಿನ್ನ ಬಾಯ್ಮುಟ್ಟ ತಂಬುಲವನಾ । ನೊಯ್ದುಕೊಂಡಪೆನೆಂದಳವಳು ॥ ೬೪ ॥
ನಸುನಗುತದಕೆ ಬಾಯ್ದೆರೆದು ನೀಡಿದ ರಾಯ । ಕುಸುಮಾಜಿ ಬಾಯ್ಗೆ ಬಾಯಿಟ್ಟು ॥
ರಸದಂಬುಲವ ಕೊಳುತವನ ಚೆಂದುಟಿಯನು । ನಸುಗಚ್ಚಿ ಪೀರ್ದಗಲಿದಳು ॥ ೬೫ ॥
ಸಮ್ಮಾನಕೆಂದು ಕರೆದರೆ ಮನೆಯೊಳಿದ್ದ । ಸೊಮ್ಮ ಕದ್ದೊಯ್ವರಂದದೊಳು ॥
ನಮ್ಮ ತಂಬುಲಕೆಂದು ಬಾಯಿಕ್ಕಿ ಮತ್ತೊಂದ । ಗಮ್ಮನೊಯ್ದಾ ಧೂರ್ತೆಯೆಂದಾ ॥ ೬೬ ॥
ಇಲ್ಲ ದೇವರು ನೀವು ಕೊಂಡಡಕೆಯ ಭಾಗ । ಮೆಲ್ಲಿತಲ್ಲತಿಕಠಿಣಗಳು ॥
*ಪುಲ್ಲಿಸಿಯೆಂದುವು ನಿಮ್ಮ ಚೆಂದುಟಿಯನೆಂ । ದುಲ್ಲಾಸದಿಂದ ನುಡಿದಳು ॥ ೬೭ ॥
ಮತ್ತುಬ್ಬಿ ಹಾಡುವಳಾನಂದರಸವನೆ । ಸುತ್ತ ಚಿಮ್ಮಿಸುವಳೆಂಬಂತೆ ॥
ಚಿತ್ತ ಕರಗಿ ಲೇಸು ಲೇಸೆಂದು ರಾಜೇಂದ್ರ । ಮುತ್ತುಕೊಟ್ಟೊಡನೆ ಹಾಡೆಂಬಾ ॥ ೬೮ ॥

---

* ಪಲ್ಲಿಸಿ ಬಂದುವು.

ಗಂಡನೆಷ್ಟೆಷ್ಟು ಮನ್ನಿಸಿದನಷ್ಟಷ್ಟು ಹೊ । ಯ್ಕೊಂಡಿನಂತುಬ್ಬಿ ಹಾಡುವಳು ॥
ಮಂಡೆಯೊಲಿದು ಜಿನಜಿನಯೆಂದು ಷಟ್ಖಂಡ । ಮಂಡಲೇಶ್ವರ ಕೇಳುತಿಹನು ॥ ೧೯ ॥

ನರುದಂಬುಲದರಸ ಮೊಲೆಗೆ ಚಿಮ್ಮಿದುದವ । ಳರಿಯದೆ ಲೀಲೆಯೊಳಿರಲು ॥
ಎರೆಯು ತನ್ನಯ ಹಸ್ತಮುಟ್ಟೆ ತೊಡೆದು ನೀರ । ಯೆರೆಯೆಂದು ಕೈಯೊಡ್ಡಿ ತೊಳೆದಾ ॥ ೨೦ ॥
ಬೆದರಿದಂತೆದೆಯನೋಸರಿಸಿಕೊಂಡಳು ಕುಲ । ಸುದತಿಯಲ್ಲವೆ ರಾಯ ಕಂಡು ॥
ಅದು ಸ್ವಲ್ಪ ರಸ ಚಿಮ್ಮಿತೀ ತಾಣವೆಂದು ತಾ । ನದ ತೋರುತುಗುರನೆಳೆದನು ॥ ೨೧ ॥
ನೋಡಬಂದವರು ನೋಯಿಸಿ ಹೋದರೆಂಬಂತೆ । ನೀಡಿ ತಾಣವ ತೋರುತಿದ್ದು ॥
ಕೂಡೊಂದು ಕಲೆಯನಂಕಿಸುವುದೇಕರಸಯೆಂ । ದಾಡಿದಳವಳು ಚಲ್ಲದೊಳು ॥ ೨೨ ॥
ಪನ್ನೀರ ಮೊಗಕೆ ಚಿಮ್ಮಿಸುವನು ಗಲ್ಲವ । ತನ್ನ ಕೈಮುಟ್ಟೆ ತೊಡೆವನು ॥
ಇನ್ನಾದರೆಲೆಯ ಘಳಿಗೆಯ ಕೊಡುವೆನೆಲೆ । ಚೆನ್ನೆ ಕೊಳ್ಳೆಂದು ಕೊಡುವನು ॥ ೨೩ ॥
ಮತ್ತುಮೊಲ್ಲಳು ರಾಯ ನನ್ನಾಣೆಯೆಂದನು । ಮೊತ್ತಿದ ಕಲೆಯೊಳು ಹಸ್ತ ॥
ನೆತ್ತರಾಯ್ತದನೊಲ್ಲೆನೆಂದಳೀಚೆಯ ಕೈಯೊ । ಳಿತ್ತನದನು ಕೊಳ್ಳಳೇಕೊ ॥ ೨೪ ॥
ಅರಸನರಿದನಾಗಲದಕೇನು ಕೈಯ ನೆ । ತ್ತರು ಸೋಂಕಿದೆಲೆ ಬೇಡವೆಂದು ॥
ಅರೆಗಚ್ಚಿಕೊಂಡು ಬಾಯ್ಗೂಡಿದನವಳು ಕ । ಣ್ಣರೆಮುಚ್ಚಿ ಸೆಳಕೊಂಡಳೊಡನೆ ॥ ೨೫ ॥
ನಕ್ಕು ನಲಿವುತೊಬ್ಬರೊಬ್ಬರು ಬಾಯ್ಗೆ ಬಾ । ಯಿಕ್ಕಿ ವೀಳೆಯುವ ಕೊಂಬಾಗ ॥
ಜಕ್ಕವಕ್ಕಿಗಳು ತಾವರೆಯ ಬೀಜವ ಗುಟು । ಕಿಕ್ಕಿಕೊಂಬಂತೆ ರಂಜಿಸಿತು ॥ ೨೬ ॥
ನಗೆನುಡಿನೋಟಸರಸಗಾನದೊಳು ಹೊತ್ತು । ದೆಗೆವಾಗಲೊಬ್ಬರೊಬ್ಬರಿಗೆ ॥
ಬಿಗುಹೇರುತಿದ್ದುದು ತವಕ ಸಂಭೋಗ ಕು । ಜ್ಜುಗಿಸುತಿದ್ದುದು ಮನದೊಳಗೆ ॥ ೨೭ ॥
ನೋಟವಪ್ಪಳಿಸುತ ನುಡಿ ತಡೆವುತ ಬೆರ । ಳಾಟ ಬೇಸರುತ ತಂತಿಯೊಳು ॥
ಕೂಟಕಿಚ್ಚೈಸಿ ನುಡಿಯದೆ ಪಾಡುವಳೆದೆ । ಯಾಟವ ಕಂಡನಾ ಪ್ರೌಢಿ ॥ ೨೮ ॥
ಗಾನ ಸಾಕತಿವೇಳೆಯಾದುದೋಪಳೆಯೆಂದ । ನಾ ನಾರಿ ಪುರುಜಿನೇಶ್ವರನಾ ॥
ಸಾನುರಾಗದಿ ಹಾಡಿ ಕೆಲದೊಳಗಿರಿಸಿದ । ಳಾನಂದದಿಂದ ವೀಣೆಯನು ॥ ೨೯ ॥

ಮಾತನಾಡಿಸಿಕೊಟ್ಟು ಗಂಡಪೆಂಡಿರಿಗೆ ಕಾ । ಮಾತುರವೇಳೆಯ ಕಂಡು ॥
ದೂತಿ ತೊಲಗುವಂತೆ ತೊಲಗಿತಾ ವೀಣೆ ಸಂ । ಪ್ರೀತಿಯಿನ್ನೇನೊ ಮುಂದವರಾ ॥ ೩೦ ॥
ವೀಣೆಯನಿರಿಸಿ ನಗುತ ಭಕ್ತಿರಸದಿಂದ । ಪ್ರಾಣೇಶನಡಿಗೆರಗಿದಳು ॥
ರಾಣಿಯ ತೆಗೆದಪ್ಪಿಕೊಂಡನವಳು ಮುನ್ನ । ವೀಣೆಯನಪ್ಪಿದಂದದೊಳು ॥ ೩೧ ॥
ಪಾಡುವಾಗವಳ ಕೈಯೊಳು ವೀಣೆಯಿರೆ ಶಂಕೆ । ಮಾಡುತೋಸರಿಸುತಪ್ಪಿದನು ॥
ಓಡಿತಾ ಮರೆಯೀಗ ತೋಳೆದೆಮೊಗ ಸೋಂಕಿ । ಜೋಡಿಸಿ ಬಿಗಿಯಪ್ಪಿಕೊಂಡಾ ॥ ೩೨ ॥

ಪಾಡಿದ ಕೊರಳಿದು ತಂತಿಯು ಮೇಲಿಡೆ । ಯಾಡಿದ ಬೆರಳಿದೆಂದವನು ॥
ಕೀಡುವನಿನಿಯಳಿಗುಚಿತೋಪಚಾರವ । ಮಾಡುವನಾ ಮೃದುಹೃದಯಾ ॥ ೮೩ ॥
ಕಡುಬಿರಿಸಿನ ವೀಣೆ ಸೋಂಕಿ ನೊಂದೆದೆಯಿದೆಂ । ದೊಡನೆದೆದಡಹಿ ತಕ್ಕೈಸುವಾ ॥
ಮಿಡುಕಿ ಬಳಲ್ದ ಚೆಂದುಟಿಯಿದೆಂದದನೊತ್ತಿ । ಪಿಡಿದು ಚುಂಬಿಸುವನಾ ರಸಿಕಾ ॥ ೮೪ ॥
ಮಾತುಮಾತಿಗೆ ಸೋಂಕುಸೋಂಕಿಗೆ ಮೈಯೆಲ್ಲ । ಬಾತು ಬಿಮ್ಮನುತಾಕೆ ತನ್ನ ॥
ಮಾತಿಂದ ಸೋಂಕಿದ ಕೂಡೆ ನಲ್ಲನ ತನ್ನ । ರೀತಿ ಮಾಡಿದಳು ಮಾಣುವಳೆ ॥ ೮೫ ॥
ನಿಲ್ಲು ನಿನ್ನಾಟ ಸಾಕೆಂಬಳು ನಾ ನೊಂದು । ದಿಲ್ಲ ಸುಮ್ಮನಿರು ಮಾತಿಂದ ॥
ಕೊಲ್ಲದಿರೆನ್ನನೆಂಬಳು ಕೊಳುವಳು ಮುದ್ದು । ಲಲ್ಲೆಯಿಂದಪ್ಪುವಳೊಡನೆ ॥ ೮೬ ॥
ಅರಸುತನದ ಸೊಕ್ಕೆ ನಿನಗೆನ್ನ ಕೆಂಬಾಯು । ಪರಿಮಳವನು ಸೂರೆಗೊಂಡೈ ॥
ತಿರಿಗಿ ಕೊಡೆಮ್ಮ ವಸ್ತುವನೆಂದು ತುಟಿಗಚ್ಚಿ । ಬುರಬುರನೊಡನೆ ಚುಂಬಿಪಳು ॥ ೮೭ ॥
ಮೈಯೆಲ್ಲ ಪುಳಕ ಮೈಯೆಲ್ಲ ಕಂಪನವಾಗಿ । ಅಯ್ಯಾ ಜೀಯೆಂಬುದ ಮಾಣ್ದು ॥
ಮೈಯೊಡ್ಡಿ ನೀನುತಾನೆಂಬುದಾದುದು ಹುಸಿ । ಹುಯ್ಯಲಾಗದೆ ಮಾಣದಿನ್ನು ॥ ೮೮ ॥
ಅಪ್ಪಿದರಪ್ಪುವಳುಗುರಿಂಟ್ಟರುಗುರಿಕ್ಕಿ । ಉಪ್ಪರಿಸುವಳೊದರುವಳು ॥
ನೆಪ್ಪುಗಾತಿಯು ನೇಮುಗಾರನು ಹೊಕ್ಕರು । ಮುಪ್ಪಿಡೆ ಸಾದನೆಗಂದು ॥ ೮೯ ॥
ಅಲ್ಲಿಂದ ಮುಂದಾದ ರತಿಯನಂತಿಂತೆಂದು । ಸೊಲ್ಲಿಸುವುದು ಜಾಣ್ಮೆಯಲ್ಲ ॥
ಚಲ್ಲಚಲ್ಲದೊಳೊಡಗೂಡದಣಿದರೆಂಬೆ । ನೆಲ್ಲವಡಕವಪ್ಪರೊಳಗೆ ॥ ೯೦ ॥
ಇರ್ವರ ಮೈಯ ನಡುವೆ ವಸ್ತ್ರವಿದ್ದಾಗ । ತೋರ್ವ ಕಲೆಯ ಹೇಳಬಹುದು ॥
ನೇರ್ವಟ್ಟ ವಸ್ತ್ರ ತೊಲಗಿದ ಮೇಲಾದುದ । ನುರ್ವಿಯೊಳೊಡೆದಾಡಬಹುದೆ ॥ ೯೧ ॥
ದುಗುಲವ ಕಡೆಗೊತ್ತಿ ದೇಹದೇಹವ ಸೋಂಕಿ । ಸೊಗಸಿದರೆಂದು ನುಡಿಯೆನು ।
ನೆಗೆದೆಳಮಾವ ಮಲ್ಲಿಗೆ ಹಬ್ಬಿತೆಂದೊಂದು । ಸುಗಮಾರ್ಥದೋರಿ ಬಿಡುವೆನು ॥ ೯೨ ॥
ಮರೆ ಜಾರಲೊಬ್ಬೊಬ್ಬರಂಗದ ಚೆಲ್ವ ಕಂ । ಡುರೆ ದೃಷ್ಟಿ ನಲಿದುವೆಂದೆನೆನು ॥
ಮರಿಮಿಂಚುಗಳೊಳೆದಾಡಿದುವು ದೇಹಕಾಂತಿಯು । ತೊರೆಯೊಳೆಂದಾಡಿ ಬಿಡುವೆನು ॥ ೯೩ ॥
ಅಂಗವಂಗವ ಸೋಂಕಿ ಮೃದುಮೃದುವಾಗಿ ಸು । ಖಾಂಗವಡೆದರೆಂದು ನುಡಿಯೆ ॥
ತಂಗಾಳಿ ಹೂದೋಟದೊಳಗೂಡಿತೆಂಬ ಬೆ । ಡಂಗ ನುಡಿದು ಸುಮ್ಮನಿಹೆನು ॥ ೯೪ ॥
ತೊಡೆ ನಡು ತೋಳಿದೆ ಮೊಗ ತುಟಿ ಬೆಚ್ಚು ಸಂ । ಗಡಿಸಿದರೆಂದು ನುಡಿಯೆನು ॥
ಕಡುಚೆಲ್ವಿನೆರಡುಪುತ್ಥಳಿಗೆ ಸುಖದ ಕೀಲು । ಜಡಿದರೆಂದುಸುರಿ ಬಿಡುವೆನು ॥ ೯೫ ॥
ಚಿನ್ನನವನು ಚೆನ್ನೆಯವಳವರೊಡಗೂಡಿ । ಚೆನ್ನಾದುದೆಂದು ನುಡಿಯೆನು ॥
ಚಿನ್ನಚಿನ್ನವ ಕಾಸಿ ಬೆಚ್ಚ ಕೆಲಸ ಕಡು । ಚೆನ್ನೆಂದು ತೋರಿ ಬಿಡುವೆನು ॥ ೯೬ ॥

ಅಣೆದುಬ್ಬಿ ತಗ್ಗಿ ತೊಡಕಿ ತೂಗಿ ಸರ್ವಾಂಗ ॥ ಕುಣಿದು ಕುಣಿದರೆಂದು ನುಡಿಯೆ ॥
ಪೆಣೆದು ಮೇಣದ ಬೊಂಬೆಯೆರಡು ಮೈಸೋಂಕಿ ಸಾ । ದಣೆಗೈದವಚ್ಚರಿಯೆಂಬೆ ॥ ೯೭ ॥

ಶಕುನಿಮಂಚದ ದನಿ ಕಂಕಣಕಂಠದು । ತ್ಸುಕನಾದ ಹಬ್ಬಿತೆಂದೆನೆನು ॥
ಶುಕಪಿಕ ಪಾರಿವಾಳದ ಹುಯ್ಯಲುಬ್ಬಿತು । ಸುಕರವಾಯ್ತೆಂದುಸುರುವೆನು ॥ ೯೮ ॥

ನಾಗಬಂಧದೊಳು ಲತಾಬಂಧದೊಳು ಸಮ । ಯೋಗವ ಮಾಡಿದರೆನೆನು ॥
ಭೋಗಿಗಳೊಡಗೂಡಿದರು ಕಾಮಶಾಸ್ತ್ರಾಭಿ । ಯೋಗದೊಳೆಂದುಸುರುವೆನು ॥ ೯೯ ॥

ಇದ್ದುದುಪ್ಪರಿಗೆಯೇರಿದುದು ಶಕುನಿಮಂಚ । ಯೆದ್ದ ಸಂಗೀತದ ತವಕ ॥
ಹೊದ್ದುವ ಸ್ತ್ರೀಪುರುಷರು ಜಾಣರಂತಿಂತು । ಟಿದ್ದುದೆಂದದನಾಡಬಹುದೆ ॥ ೧೦೦ ॥

ಹರೆಯದೊಳಗೆ ರೂಪಿನೊಳಗೆ ಸತ್ಕಲೆಯಲ್ಲಿ । ಸರಿಯಾದ ಸರಿಸೋಲದವರು ॥
ನೆರೆದುದ ನುಡಿವೆನೆಂದರೆ ಕೂಡೆ ಬಹುದೆ ಬಂ । ದರು ಜಾಣರೊಡೆದಾಡಬಹುದೆ ॥ ೧೦೧ ॥

ನೃಪನ ಹಸ್ತಗಳು ಸಿಂಗರವೊಲೆಗಳೊಳಾಡಿ । ಸುಖವಡೆದುವೆಂಬುದಿಲ್ಲ ॥
ಅಪರಂಜಿಗಲಶಗಳೊಳು ತಳಿರಿದ್ದುವೆಂ । ದುಪಮಾನ ತೋರಿ ಬಿಡುವೆನು ॥ ೧೦೨ ॥

ಚುಂಬನಸುಖದ ನಾಲವ ತಿದ್ದಿ ತೆಗೆವರು । ತಂಬುಲ ಮುಯಿಮಾಡುತಿಹರು ॥
ಇಂಬಿನೊಳೊಬ್ಬರೊಬ್ಬರ ಹಂಗ ಹೊರದಿದ್ದ । ರೆಂಬೆನೆಂದರೆ ದೋಷವೇನು ॥ ೧೦೩ ॥

ಕಲೆಗಳಾಭರಣವನೊಬ್ಬರೊಬ್ಬರ ಮೈಗೆ । ಚೆಲುವಾಗಿ ತೊಡಿಸಿ ನೋಡುವರು ॥
ನಳಿತೋಳದುಗುಲವ ಹೊದಿಸುವರುಡುಗೊರೆ । ಸಲುತಿದ್ದುವನ್ಯೋನ್ಯವಾಗಿ ॥ ೧೦೪ ॥

ಬೆಮರ್ದರು ಕೇಶಕಟ್ಟಳಿದು ಪುಳಕವೆದ್ದು । ಸಮಸುಖವಡೆದರೆಂದೆನೆನು ॥
ಅಮೃತದೊಳೋಕುಳಿಯಾಡಿದರಿರ್ವರು । ತ್ತಮರೆಂದು ಹಾಡಿ ಬಿಡುವೆನು ॥ ೧೦೫ ॥

ಮಲಮೂತ್ರವಿಲ್ಲದ ದಿವ್ಯಾಂಗ ನಾಯಕ । ಲಲಿತಾಂಗಿ ಪದ್ಮಿನಿಜಾತಿ ॥
ಒಲಿದು ಕೂಡುವ ಸುಖ ಸುರಲೋಕಸುಖದ ಹಂ । ಬಲ ಮರೆಯಿಸುತಿದ್ದುದಾಗ ॥ ೧೦೬ ॥

ಚಂದ್ರಕಾಂತದ ಶಿಲೆಯೊಳು ರಸವೊಸರ್ವಂತೆ । ಚಂದ್ರನ ಕಳೆಸೋಂಕಿದಾಗ ॥
ಚಂದ್ರಮುಖಿಯರ ಸೋಂಕಿನೊಳೊಸರ್ವುದು ರಾಯ । ಗಿಂದ್ರಿಯವದು ತಾನು ಕಂಪು ॥ ೧೦೭ ॥

ಬೆಮರು ಕಂಪುಸುರು ಕಂಪಂಗ ತಾನತಿಕಂಪು । ಗಮಿಸಿದಿಂದ್ರಿಯ ತಾನು ಕಂಪು ॥
ಸಮರಸಿಕರ ಕೂಟವಿದ್ದುದು ಕಂಪಿನ । ಕಮಲವನದೊಳು ಹೊಕ್ಕಂತೆ ॥ ೧೦೮ ॥

ಕಂಪಿಗೆಳಸಿ ತುಂಬಿ ತಮ್ಮ ನಡುವೆ ಹೊಯ್ದು । ಗಾಂಪುಗಾಣಿಸುತಿರೆ ಕಂಡು ॥
ಸಂಪಗೆಯೆಲರ ಕೆದರಿಕೊಂಡು ನೆರೆದರಾ । ದಂಪತಿಗಳು ಜಾಣ್ಮೆಯಿಂದ ॥ ೧೦೯ ॥

ಪಂಚೇಂದ್ರಿಯ ತೃಪ್ತಿವಡೆದುವಿಂದ್ರಿಯರಸ । ಸಂಚಳಿಸಿತು ಶಾಂತಿಯಾಯ್ತು ॥
ಮಿಂಚುಗಣ್ಣುಗಿದು ಮಾತುಡುಗಿ ತೋಳಲಿದಾಗ । ಮಂಚದ ಮೇಲೊರಗಿದರು ॥ ೧೧೦ ॥

ಹಂಸತೂಲದ ತಲ್ಪದೊಳು ಕನಸಿನೊಳಾಗ । ಹಂಸಗಾಮಿನಿಗಾಣ್ಮ ತೋರ್ಪ ॥
ಹಂಸನಾಥನಗಾಣ್ಬನಾ ನೃಪನೆದೆಯೊಳ । ದೇಂ ಸೊಬಗಾದುದೊ ಮೂರ್ಛೆ ॥ ೧೧೧ ॥

ಸುಖದ ಮಡುವಿನೊಳು ಬಿದ್ದಂತೆ ತಾವಿಷ್ಟು । ಸುಖಮೂರ್ಛೆದಟ್ಟಿ ವಿಶ್ರಮಿಸಿ ॥
ಸುಖವೆ ಕೈವಿಡಿದೆತ್ತಿದಂತೊಡನೆದ್ದರಾ । ಸುಖಿಗಳು ಜಿನಸಿದ್ಧಯೆನುತಾ ॥ ೧೧೨ ॥

ತನುವ ತೊಳೆದು ಮಡಿದುಗುಲವ ಮೇಲ್ಕೊಂಡು । ಘನಶೀತಳೋಪಚಾರಗಳಾ ॥
ಅನುಭವಿಸುತ ಸೂಳುವೀಳೆಯಗೊಳುತ ಮೋ । ಹನಶೀಲರಿದ್ದರೇನೆಂಬೆ ॥ ೧೧೩ ॥

ಹೊಸಕಾಂತಿ ತನುವಿನೊಳುಕ್ಕಿ ಸೂಸುತ ಮುಖ । ರಸ ತಳತಳಿಸಿ ತೊಟ್ಟಿಡುತ ॥
ಅಸುವಿನೊಳಾನಂದ ತುಂಬಿ ತುಳುಕುತ ರಾ । ಜಿಸುತಿದ್ದರಧಿಕಲೀಲೆಯೊಳು ॥ ೧೧೪ ॥

ಪಾಂಚಾಲಿಕಾತತಿ ಮಾಳ್ಪ ಸೇವೆಯ ಕೊಳು । ತಂಚೆಗಮನೆಯೂ ಭೂವರನೂ ॥
ಮಂಚದೊಳಿರುತಿರೆ ಘಳಿಯಾರದಲ್ಲಿ ಪ । ಳಂಚಿತು ಶಂಖನಿರ್ಘೋಷ ॥ ೧೧೫ ॥

ಸನ್ನೆಯಾದುದು ದೇವ ಹೋಸದಾರೋಗಣೆ । ಗಿನ್ನು ಗೃಹಕೆ ಪೋಪವೆಂದು ॥
ಬಿನ್ನವಿಸಿದಳಾಕೆಯಿಲ್ಲಿಗೆ ತರಿಸು ಹೋ । ಗನ್ನಪಾನಾರ್ಥವನೆಂದಾ ॥ ೧೧೬ ॥

ಹೋದಳಾ ಸತಿ ಸಖಿಯರುಗೂಡಿ ತಂದಳಂ । ದಾದನ್ನಪಾನವಸ್ತುಗಳಾ ॥
ನಾದುನಿಯೆಡೆಮಾಡಿದಳು ಗಂಡಪೆಂಡಿರು । ಸ್ವಾದಿಸಿದರು ಭೋಜನವನು ॥ ೧೧೭ ॥

ಬೇರೊಂದು ಕೋಣೆಯುಂಟುಪ್ಪರಿಗೆಯೊಳಲ್ಲಿ । ತೋರಪಟ್ಟೊಂದು ಪಂತಿಯೊಳು ॥
ನೀರನು ನೀರೆಯಾರೋಗಿಸಿದರು ತೃಪ್ತಿ । ದೋರೆ ಕೈದೊಳೆದರೋಜೆಯೊಳು ॥ ೧೧೮ ॥

ಮತ್ತೆ ಮಂಚಕೆ ಬಂದು ಪೆಣ್ಗಳ ಕೈಯಿಂದ । ಬಿತ್ತರದೂಳಿಗಗೊಳುತ ॥
ವೃತ್ತಕುಚೆಯ ಕೈಯವೀಳೆಯಗೊಳುತ ರಾ । ಜೋತ್ತಮನಿರ್ದನರ್ತಿಯೊಳು ॥ ೧೧೯ ॥

ವೇಳೆಯನರಿದಾಗ ಕುಸುಮಾಜಿ ನಗುತ ನ । ಮ್ಮಾಲಯಕಿಂದು ನರ್ತನದ ॥
ಬಾಲೆಯರೈತಂದು ಹೋದರರಸಯೆಂದು । ವೀಳೆಯಗೊಡುತ ನುಡಿದಳು ॥ ೧೨೦ ॥

ಬಂದುದೇನವರು ಹೋದಂದವೇನಬಲೆ ನಿ । ನ್ನೊಂದಾಗಿಯೇನ ನುಡಿದರು ॥
ಮುಂದಾದ ಹದನ ಹೇಳಳುಕಬೇಡೆಲಗೆ ನೀ । ನೆಂದುದ ಕೇಳ್ವೆನಿಂದೆಂದಾ ॥ ೧೨೧ ॥

ರಾತ್ರಿಗೆ ದೇವರು ನೃತ್ಯವ ನೋಡಿ ಪ । ವಿತ್ರವ ಮಾಡಬೇಕೆಂದು ॥
ಪಾತ್ರದ ಪೆಂಗಳೆನಗೆ ಪೇಳ್ದರೆಂದಟ್ಟು । ನೇತ್ರೆ ನುಡಿದಳು ನಲ್ಲನೊಳು ॥ ೧೨೨ ॥

ಆಗಲೆಂದೊಡಬಟ್ಟನೊಡನೆ ನಲ್ಲಳಿಗೆ ಬ । ಹಾಗ ತಾನಿಟ್ಟ ಭೂಷಣವ ॥
ರಾಗರಸದೊಳುರೆ ಕರೆದು ಚೌಕುಳಿ ಹೊರ । ತಾಗಿಯೆಲ್ಲವನೊಲ್ದು ಕೊಟ್ಟಾ ॥ ೧೨೩ ॥

ಆಕೆಯೊಲ್ಲಳು ದೇವರೈತಂದುದಿದು ಸ್ವರ್ಗ । ಲೋಕಸಂಪದವಲ್ತೆ ನನಗೆ ॥
ಏಕಿಷ್ಟು ಬಾಹ್ಯೋಪಚಾರ ನಿಮ್ಮೊಳಿಗ । ದಾಕೆಗೆಂಬಳು ಚಂದ್ರವದನೆ ॥ ೧೨೪ ॥

ಅಲ್ಲಿ ಸಭೆಯೊಳೀವೆನೆನಲೊಲ್ಲದಾದೆಯೋ । ನಿಲ್ಲಿಯೇಕಾಂತವಾಸದೊಳು ॥
ಒಲ್ಲೆನೆನ್ನದೆ ಕೊಂಡು ಸಲಿಸು ನನ್ನರ್ತಿಯ । ನಲ್ಲಳೆಯೆಂದು ಪ್ರಾರ್ಥಿಸುವಾ ॥ ೧೨೫ ॥

ಕಡವೆಯಿಲ್ಲೆನಗೀಗ ತೊಡಿಗೆಗೆಂಬಳು ಕೈಯ । ಹಿಡಿದು ನನ್ನಾಣೆ ನೀನಿನ್ನು ॥
ನುಡಿಯುದಿರೆಂದು ನುಡಿಯ ಕಟ್ಟಿ ಕೊಟ್ಟನು । ತೊಡಿಗೆಗಳನು ಹೊರೆಗಟ್ಟಿ ॥ ೧೨೬ ॥

ಈ ನರಲೋಕದೊಳಿವಕೆಣೆಯಿಲ್ಲೆಂಬ । ತಾನಿಟ್ಟ ಮಣಿದೊಡಿಗೆಗಳಾ ॥
ಮಾನಸವನು ಸೂರೆಗೊಂಡ ಕಾಂತಾಮಣಿ । ಗಾ ನೃಪಮಣಿ ಸೂರೆಗೊಟ್ಟಾ ॥ ೧೨೭ ॥

ನಾದುನಿಗುಡುಗೊರೆಯಿತ್ತನೂಳಿಗದ ತ । ಳೋದರಿಯರನು ಮನ್ನಿಸಿದಾ ॥
ಬಾದಳಗಂಡಿಯೊಳಗೆ ಕಂಡನಸ್ತಾದ್ರಿ । ಗಾದಿತ್ಯಬಿಂಬ ಸಾರ್ದುದನು ॥ ೧೨೮ ॥

ಶುಚಿಯಾಗಿ ಮತ್ತೆ ಮೇಲ್ನೆಲೆಗೈದಿ ಜಿನಸಿದ್ಧ । ರುಚಿತಾರ್ಘ್ಯಪಾದ್ಯವನಿತ್ತು ॥
ಅಚಳಿತಾಸನದೊಳು ಕುಳಿತು ಕಂಗಳ ಮುಚ್ಚಿ । ಪ್ರಚುರಾತ್ಮಯೋಗದೊಳಿದ್ದಾ ॥ ೧೨೯ ॥

ಮರೆದನಾಗಳೆಯಿಷ್ಟು ಹೊತ್ತು ನಲ್ಲಳ ಕೂಡೆ । ಮೆರೆದುದು ಹಳೆಮೆರಹಾಯ್ತು ॥
ಅರಿದನಾಗಳೆ ಕಂಡನಾಗಳೆ ಹಂಸನ । ಕುರುಹನಾ ರಾಜಯೋಗೀಂದ್ರಾ ॥ ೧೩೦ ॥

ಸಂದು ಭೋಗದೊಳಿದ್ದು ಯೋಗಕೆ ಸಲುವಾಗ । ಹಿಂದಣ ವಾಸನೆಯಿಲ್ಲ ॥
ಒಂದ ಬಿಟ್ಟೊಂದು ವಸ್ತ್ರವ ಹೊದೆವಂತಿಹು । ದೆಂದೆಂದು ಭಾವವಾ ನೃಪಗೆ ॥ ೧೩೧ ॥

ದೃಷ್ಟಿಗಳೆರಡನು ಮುಚ್ಚಿ ಭೂಪತಿ ಭಾವ । ದೃಷ್ಟಿಯಿಂದೊಳಗೆ ನೋಡಿದನು ॥
ಅಷ್ಟಗುಣವೆ ತನುವಾಗಿ ತನುವಿನೊಳ । ಗಿಷ್ಟಾತ್ಮ ಹೊಳೆದನಾ ಕ್ಷಣವೆ ॥ ೧೩೨ ॥

ತನುವೆ ಜಿನಾಲಯ ಮನವೆ ಸಿಂಹಾಸನ । ವನುಪಮಾತ್ಮನೆ ಜಿನನೆಂದು ॥
ತನಗಾಗಿ ತನ್ನಿಂದ ತನ್ನ ತಾ ನೋಡುತಿ । ದ್ದನು ಸರ್ವಚಿಂತೆಯ ನೀಗಿ ॥ ೧೩೩ ॥

ಜಾರುತಿದ್ದುದು ಕರ್ಮ ಹಾರುತಿದ್ದುದು ಕಾಂಕ್ಷೆ । ವಿಾರುತಿದ್ದುದು ಚಿತ್ಪ್ರಕಾಶ ॥
ತೋರುತ ಮರೆಸುತ ಕೂಡೆ ತೋರುತ ಸುಖ । ದೋರುತಿದ್ದನು ಹಂಸನಾಥಾ ॥ ೧೩೪ ॥

ಬುದ್ಧಿಯೊಳಾ ರಾಯ ಬೆಳುದಿಂಗಳೊಳಗೊಂದು । ಸಿದ್ಧಬಿಂಬವ ರಚಿಸಿದನು ॥
ಸಿದ್ಧೋಹಮೆಂದಲ್ಲಿ ಸುಖದೊಳಿದ್ದನು ಜಿನ । ಸಿದ್ಧರಿಹಂತೆ ಮುಕ್ತಿಯೊಳು ॥ ೧೩೫ ॥

ಮಾಣಿಕಚೆಂಡನಿಟ್ಟಂತರ್ಕ ಹೋದನು । ಹೂಣಿ ದೇಗುಲ ಮರೆಯಾಯ್ತು ॥
ಕಾಣಿಸುತಿದ್ದುವು ನಕ್ಷತ್ರವಿಲ್ಲಿಗೆ । **ವೀಣಾಸಂಧಿ** ಸುಗಂಧಿ ॥ ೧೩೬ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೩೭ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾವೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೩೮ ॥

ಗುರುವೆ ರತ್ನಾಕರಸಿದ್ಧನ ಮನದ ಸಿಂ । ಗರವೆ ಮತ್ತವನ ಸೌಂದರವೆ ॥
ಭರತೇಶನೆದೆಯೊಳಿದ್ದಂತೆನ್ನೊಳಿರು ಪಾಪ । ಹರನೆ ಚಿದಂಬರಪುರುಷಾ ॥ ೧೩೯ ॥

ವೀಣಾಸಂಧಿ ಸಂಪೂರ್ಣಂ

# ಪೂರ್ವನಾಟಕಸಂಧಿ.

ಆಡುವ ವಿಶ್ವದಾಟವನು ನಿನ್ನೊಳು ನಿಂದು । ಬೇಡಬೇಕೆನ್ನದೆ ನಿಚ್ಚ ॥
ನೋಡುವುದಾಸೀನಭಾವನೆ ಸುಮತಿಯು । ನೀಡು ನಿರಂಜನಸಿದ್ಧಾ ॥ ೧ ॥

ಎಲ್ಲವ ಮರೆದು ತನ್ನಾತ್ಮನನರಿದು ತ । ನ್ನಲ್ಲಿ *ತಾನಿಂತು ಯೋಗದೊಳು ॥
ತಲ್ಲೀನವಾಗಿ ನಾಲ್ಘಳಿಗೆಯಿದ್ದನು ರಾಯ । ಮೆಲ್ಲನಿರಿಸಿದನಂತವನು ॥ ೨ ॥
ಕಣ್ದೆರೆದನು ತನ್ನ ಕೆಲದೊಳು ನಿಂದಿರ್ದ । ಪೆಣ್ ದೇವ ಸಮಯವಾಯ್ತೆನಲು ॥
ಜಾಣ್ದೋರಿ ಸಿಂಗರಿಸಿದನೆದ್ದನೊಡನೆ ಶ । ರಣ್ದಿವ್ಯಜಿನಸಿದ್ಧಯೆನುತ ॥ ೩ ॥
ತಾವರೆಯೇರಿದ್ದ ಕಳಹಂಸ ಮತ್ತೊಂದು । ಹೂವಿನ ಬನಕೆಹೋಹಂತೆ ॥
ಹೊವಿನುಪ್ಪರಿಗೆಯಿಂದಿಳಿದು ನಾಟಕಶಾಲೆ । ಗಾ ವಿಭು ನಡೆತರುತಿರ್ದಾ ॥ ೪ ॥
†ಮಣಿದೊಡಿಗೆಯ ತೊಟ್ಟು ಮಾಡದಿಂದಿಳಿವ ಧಾ । ರಿಣಿಪತಿಯಂದ ರಂಜಿಸಿತು ॥
ಗಣಿಸಿ ನಾಟ್ಯವ ನೋಳ್ಪೊಡಾ ಚಂದ್ರ ನಕ್ಷತ್ರ । ಗಣಕೂಡಿ ಧರೆಗಿಳಿವಂತೆ ॥ ೫ ॥
ಚಂದ್ರನುದಯಿಸಿತಿಲ್ಲಾ ವೇಳೆಯೊಳು ತನ್ನ । ಚಂದ್ರಮುಖಿಯ ಹಸ್ತವಿಡಿದು ॥
ಚಂದ್ರಾಭ ನಡೆದನು ರೋಹಿಣಿಯೊಡಗೂಡಿ । ಚಂದ್ರ ನಡೆವ ಗಮಕದೊಳು ॥ ೬ ॥
ಮಾಡದಿಂದಿಳಿದು ಮೇಲ್ಮಾಳಿಗೆಯೊಳು ತಳು । ಮಾಡದಿಳಿದು ಪೂರ್ವಗೃಹಕೆ ॥
ನೋಡಿ ನಲ್ಲಳ ಮತ್ತೆ ನೀನಬಲೆಯರೊಡ । ಗೂಡಿ ಬಾರೆಂದು ನಿಲ್ಲಿಸಿದಾ ॥ ೭ ॥
ಹಾವುಗೆಹಡಪಚಾಮರಗಿಂಡಿ ಮೊದಲಾದ । ಸೇವಕಿಯರು ಕೂಡಲೊಡನೆ ॥
ಬಾವನ್ನಗಂಧಿಯ ಮನೆಯಿಂದ ಪೊರಮಟ್ಟು । ಕೋವಿದರರಸ ನಡೆದನು ॥ ೮ ॥
ನರಲೋಕಚಂದ್ರಮ ರಾಜಮನ್ಮಥ ಚದು । ರರದೇವ ಭೋಗದೇವೇಂದ್ರ ॥
ಚರಣಾಬ್ಜ ಜತನ ಜೀಯೆಂದು ಕಂಚುಕಿಯರು । ಸ್ವರದೋರೆ ನಡೆದನಾ ರಾಯಾ ॥ ೯ ॥
ಆಯ್ದಾಯ್ದು ತೊಟ್ಟ ಮಾಣಿಕಗಳು ತಂಪೊಳ । ಪೊಯ್ದ ದೀವಿಗೆಗಳಂತಿರಲು ॥
ಕೆಯ್ದೀವಿಗೆ ಮುಂದೆ ಸೇವಕಿರ್ದುದಾ ರಾಯ । ಮೆಯ್ದೀವಿಗೆಯೊಳೆ ನಡೆದನು ॥ ೧೦ ॥
ತೊಡೆದ ಕಂಪಿನ ಗಾಳಿ ಮೈಯ ಕಂಪಿನ ಗಾಳಿ । ಪೊಡವಿಯ ಕಂಮನೆ ಮಾಡೆ ॥
ನಡೆದು ನಾಟಕಶಾಲೆಯೊಳು ಹೊಕ್ಕು ಕುಳಿತನು । ಗ್ಗಡದ ಸಿಂಹಾಸನದಲ್ಲಿ ॥ ೧೧ ॥

ನಾಟಕಶಾಲೆಯಂತಿಂತಿರ್ದುದೆಂದು ಕ । ರ್ಣಾಟಸಿ ಪೇಳಲಾನರಿಯೆ ॥
ಕೋಟಿರತ್ನಗಳಿಂದ ಸುರರ ವಿಮಾನಕೆ । ಸಾಟಿಯೆಂದಾಡಿ ಬಿಡುವೆನು ॥ ೧೨ ॥

---

*ತಾ ನಿಂದು.

†ಗಣಿಸಿ ನಾಟ್ಯವನೋಳ್ಪೊಡಾ ಚಂದ್ರನಕ್ಷತ್ರ । ಗಣಗೂಡಿ ಧರೆಗೆ ಬಹಂತೆ ॥
ಮಣಿದೊಡಿಗೆಯ ತೊಟ್ಟು ಮಾಡದಿಂದಿಳಿವ ಧಾ । ರಿಣಿಪತಿಯಂದ ರಂಜಿಸಿತು.

ಮಿಸುನಿಗಂಬಗಳಿಂದ ಮಿಸುನಿಗೋಡೆಗಳಿಂದ । ವಸುಮಣಿಗಳ ತೊಲೆಯಿಂದ ॥
ಮಸುಳದಿರುಳುಪಗಲೆನ್ನದೆ ತಣ್ಪಿನ । ಬಿಸಿಲ ಕರೆವುದೇನನೆಂಬೆ ॥ ೧೩ ॥

ಸಿರಿಗಂಪು ಕುಂಕುಮ ಪನ್ನೀರು ಸಾದು ಕ । ಸ್ತ್ತುರಿಯ ಸಾರಣೆ ಚಳೆಯಗಳಾ ॥
ಪೊರಪಿಂದ ಸ್ವರ್ಗದ ಕಂಪ ತುಂಬಿದ ಹೊನ್ನ । ಕರಡಿಗೆಯಂತೊಪ್ಪುತಿಹುದು ॥ ೧೪ ॥

ಪುಷ್ಪಮಾಲೆಗಳಿಂದ ಪುಷ್ಪದ ಕುಚ್ಚಿಂದ । ಪುಷ್ಪೋಪಹಾರಗಳಿಂದ ॥
ಪುಷ್ಪಾಸ್ತ್ರನಾಡುವ ನಾಟಕಶಾಲೆಯ । ಪುಷ್ಪನಲುರುಹಿ ಕಳೆವುದು ॥ ೧೫ ॥

ಮೇಲುಕಟ್ಟಿನ ಝಲ್ಲಿಗಳು ನೆಲಕಟ್ಟಿನ । ನೀಲರತ್ನದೊಳು ಮಾರ್ಪೊಳೆಯೆ ॥
ಸಾಲುಬೆಳ್ನೊರೆಯೆದ್ದ ಮಡುವೆಂಬ ಶಂಕೆಯ । ನೇಳಿಸುತಿಹುದು ನೋಳ್ಪರಿಗೆ ॥ ೧೬ ॥

ಮುತ್ತಿನ ಕುಚ್ಚು ಮಾಣಿಕಗಳ ಮಾಲಿ ಮೇ । ಲೆತ್ತಿರ್ದು ಕೆಳಗೆ ಬಿಂಬಿಸಲು ॥
ಮುತ್ತುಮಾಣಿಕವನೀ ಮನೆಯೊಳೇತಕೆ ತಂದು । ಬಿತ್ತಿದರೆಂಬವೊಲಿಹುದು ॥ ೧೭ ॥

ಚಕಚಕಿಸುತ ರನ್ನಗನ್ನಡಿಯಲ್ಲಲ್ಲಿ । ಮುಕರಿಸೆ ಸಾಲುಸಾಲಾಗಿ ॥
ಅಕಳಂಕಚಂದ್ರಲೋಕವೊಯೆನೆ ನೃಪನ ನಾ । ಟಕಶಾಲೆ ಮೆರೆವುದೇನೆಂಬೆ ॥ ೧೮ ॥

ಪಟ್ಟೆಪರ್ವತದ ಮೇಲ್ಕಟ್ಟಿನ ಬೊಂಬೆಗ । ಳೊಟ್ಟು ಮಾರ್ಪೊಳೆಯೆ ಭೂಮಿಯೊಳು ॥
ಇಟ್ಟಣಿಸಿದ್ದುದು ಜನವೆಂದು ಹೊಸಬರು । ಮೆಟ್ಟದೆ ನಿಲ್ವರಂಚಿನೊಳು ॥ ೧೯ ॥

ಕಂಭಗಳಲ್ಲಿ ಲೋವೆಗಳಲ್ಲಿ ಲಲನಾ । ಸ್ತಂಭಿತಮಣಿಪ್ರತಿಮೆಗಳು ॥
ರಂಭೆಮೇನಕಿಯರು ನಿಂದರೊಯೆನೆ ಚಿತ್ತ । ಜೃಂಭಣೆಗಳ ಮಾಡುತಿಹುವು ॥ ೨೦ ॥

ನೋಡುವ ಮುನಿದಡ್ಡಮೋರೆದೆಗೆವ ಕಾಲ್ಗೆ । ಕೂಡೆರಗುವ ತೆಳವಂತೆ ॥
ಮಾಡಿದ ಪೆಣ್ಗಂಡುಗಳ ರೂಪು ರಂಜಿಸಿ । ಗೋಡೆಯೊಳಿದ್ದುವೇನೆಂಬೆ ॥ ೨೧ ॥

ಗಿಳಿಯನೋದಿಸುವಂತೆ ವೀಣೆಯ ನುಡಿಸುವಂ । ತೊಲೆದು ಪಾತ್ರವನಾಡುವಂತೆ ॥
ಹೊಳಹೊಳಚನೆ ಪೆಣ್ಣುರೂಪಿನ ಚಿಲ್ಪ ಪು । ತ್ತಳಿಗಳೆಸೆದುವು ಭಿತ್ತಿಯೊಳು ॥ ೨೨ ॥

ಸುರರ ಖೇಚರರ ಪೆಣ್ಗಂಡು ರೂಪಲ್ಲಲ್ಲಿ । ಬರೆದಿರ್ದುವಿವು ಬೊಂಬೆಯಲ್ಲ ॥
ಸುರರು ಖೇಚರರು ನಾಟ್ಯವ ನೋಡಿ ಸುಖತಟ್ಟೆ । ಪರವಶರಾದರೆಂಬಂತೆ ॥ ೨೩ ॥

ಚಕ್ರನಾಥನ ಬೆನ್ನ ಹೊಂಗೋಡೆಯೊಳು ಧರ್ಮ । ಚಕ್ರನಾಥನ ಪುರುಜಿನನ ॥
ವಿಕ್ರಾಂತರೂಪೆಸೆದುದು ನವರತ್ನ ಸ । ಮಾಕ್ರಾಂತವಾಗಿ ಚಿಲ್ಪಿನೊಳು ॥ ೨೪ ॥

ನೊಸಲ ಸರಿತದೊಳು ಛಾಯಾಪ್ರತಿಮೆ ಕೇ । ಲಿಸಿ ಹೊನ್ನ ತೊಲೆಯೊಳೊಪ್ಪಿಹುದು ॥
ಹೊಸವಳುಕಿನ ಸಿದ್ಧಬಿಂಬಗಳೆರಡು ಕಾ । ಣಿಸುತಿಹುವದರೆಡಬಲದಿ ॥ ೨೫ ॥

ಕೂರ್ಮೆಯಿಂದನುದಿನ ಭರತಚಕ್ರಿಯ ವಿಶ್ವ । ಕರ್ಮನೋಲೈಸುವನವನ ॥
ನಿರ್ಮಿತನೃಪನರಮನೆಯೆಲ್ಲವೆನಲಿನ್ನು । ಬೇಮಾರ್ತಿನೊಳು ಪೇಳ್ವುದೇನು ॥ ೨೬ ॥

ಧರೆಗೆ ವಿಸ್ಮಯವಾದ ನಾಟಕಶಾಲೆಯೊ । ಳರಸನೋಲಗವಾಗಲೊಡನೆ ॥
ಬರುತಿದ್ದರುಚಿತಕಲಾವಿದರೆಸೆವ ಸಿಂ । ಗರಗೂಡಿ ಘನ್ಮೈನುತಾಗ ॥ ೨೭ ॥

ರಾಜಕುಮಾರರು ರಸಿಕರು ಬುಧರಧಿ । ರಾಜರು ಕವಿಗಮಕಿಗಳೂ ॥
ತೇಜಿಷ್ಟರೈತಂದು ಭರತರಾಜನ ಕಂಡು । ತೇಜದೊಳೊಲ್ದು ಕುಳಿತರು ॥ ೨೮ ॥

ಗಣಿಕೆಯರೆಕ್ಕಡಿಗರು ನಾಟ್ಯಶಾಸ್ತ್ರಲ । ಕ್ಷಣಿಕರು ಭಾವರಂಜಕರು ॥
ಗುಣಿಗಳು ಮಂತ್ರಿಗಳರಸನ ಕಂಡು ತಿಂ । ತಿಣಿಯಾಗಿ ಕುಳಿತರೋಜೆಯೊಳು ॥ ೨೯ ॥

ಕುಟಿಲನಾಯಕ ಶಠನಾಯಕ ದಕ್ಷಿಣ । ಘಟಕಾನುಕೂಲನಾಯಕರು ॥
ವಿಟವಿದೂಷಕಪೀಠಮರ್ದನಾಗರರು ಸಂ । ಘಟಿಸಿರ್ದರರಸನೊತ್ತಿನೊಳು ॥ ೩೦ ॥

ವೃದ್ಧನುತ್ತಮನು ವಿವೇಕಿ ತತ್ಪತಿಕಾರ್ಯ । ಸಿದ್ಧನು ಬಂದು ಕೈಮುಗಿದು ॥
ಬುದ್ಧಿಸಾಗರನೆಂಬ ಮುಖ್ಯಪ್ರಧಾನ ವಿ । ಶುದ್ಧ ಕುಳಿತನು ಸಮ್ಮುಖದಿ ॥ ೩೧ ॥

ತೆರೆಸೇಲೆಮರೆಯೊಳಾ ತೆರೆದ ಗವಾಕ್ಷದೊ । ಳೊರೆದು ನೋಡುತ ಬಾಹ್ಯಜನವಾ ॥
ಅರಸಿಯರಿದ್ದರು ಭೂಪಾಲನೆಡಬಲ । ದೆರಡುಪಕ್ಕದೊಳು ಸಾಲಾಗಿ ॥ ೩೨ ॥

ಒಲಿಯುದಿರೊತ್ತದಿರೊಯ್ಯಾರದೊಳು ಕುಳ್ಳಿ । ರುಲಿಯುದಿರಲ್ಲಲ್ಲಿರೆಂದು ॥
ಸುಳಿದು ಕಟ್ಟಿಗೆಕಾರರೆಲ್ಲರ ತರವರಿ । ದೊಳುನುಡಿದೋರಿ ತಿದ್ದಿದರು ॥ ೩೩ ॥

ಪರಿಮಳದಿಂದುಚಿತಾಸನದಿಂದ ಕ । ಪ್ಪುರವೀಳೆಯದಿಂದ ಸಭೆಯಾ ॥
ತರತರವರಿದು ಮನ್ನಿಸಿದರು ಪರಿಚಾರ । ಕರು ರಾಯನನುಮತದಿಂದ ॥ ೩೪ ॥

ಇತ್ತರವಿಡಿದು ನೋಟಕಜನವಿದ್ದುದು । ಮತ್ತೆ ರಾಯನ ಸಮ್ಮುಖದೊಳು ॥
ವೊತ್ತದ ಮೇಳವಿದ್ದುದು ಜಾತಿಶೃಂಗಾರ । ವೆತ್ತು ಸುಮ್ಮಾನ ಹುಮ್ಮೈನುತ ॥ ೩೫ ॥

ತಾಳಧಾರಿಯು ತಾಳವಿಡಿದಾಗ ನೃತ್ಯದ । ತಾಳ ತೋರುವವೊಲು ನಿಂದು ॥
ಕೇಳಿಸಿದನು ಹೊಸಪರಿಯಾಗಿ ಮುನ್ನೆಂದು । ಕೇಳಿಸಿತಿಲ್ಲಿಂತುಟೆನಿಸಿ ॥ ೩೬ ॥

ಮಧ್ಯವಿಲಂಬದ್ರುತದ ನೆಲೆಯರಿದು ಸು । ಸಾಧ್ಯಶತ್ರೈಕತಾಳಗಳಾ ॥
ಅಧ್ಯಕ್ಷನರಿದು ಕೇಳಿಸಿ ನಿಂದನೂರ್ವರಾ । ರಾಧ್ಯನ ಮುಂದೆ ಲೀಲೆಯೊಳು ॥ ೩೭ ॥

ಒಲಿದ ಮಸ್ತಕ ಶ್ರುತಿಗಿಟ್ಟೆಡಗಿವಿ ತೊಡೆ । ಗಳವಟ್ಟ ಮದ್ದಳೆಯಿಂದ ॥
ಹಲವು ಕತ್ತರವ ಕಳಾಸವನರಿದು ಮ । ದ್ದಳೆಗ ಕೇಳಿಸಿ ನಿಂದನೊಡನೆ ॥ ೩೮ ॥

ನಲ್ಲಳ ನಡುವ ಪಿಡಿವವೊಲಾವುಜವಿಡಿ । ದುಲ್ಲಾಸದಂಕೆಝುಂಕೆಗಳಾ ॥
ಕೊಲ್ಲಣಿಯೊಳಗೆ ಕೇಳಿಸಿದನಾವುಜಕಾರ । ನೆಲ್ಲರ ಚಿತ್ತ ಜುಮ್ಮೆನಲು ॥ ೩೯ ॥

ಢಕ್ಕೆ ನಾಟ್ಯಾನಕ ಚಂಪೆ ಕಿಂಕಿಣಿ ಡೌಡೆ । ಕುಕ್ಕುರು ತುಡುಮು ರಿಂಚೆಯುವಾ ॥
ತಕ್ಕಿಟ ತೋಕಿಟ ತೋಂಗಿ ತೋಹಂಗಿ ತೋ । ಧಿಕ್ಕಿಟಯೆನೆ ಕೇಳಿಸಿದರು ॥ ೪೦ ॥

ವಾದ್ಯರಂಜನೆಯಾಗಲೊಡನೆ ಮಹಾಗಾನ । ವಿದ್ಯರಾಯೆಂದು ರಾಗಗಳಾ ॥
ವೇದ್ಯಗಾಣಿಸಿದರು ತಿತ್ತಿ ದಂಡಿಗೆ ಶ್ರುತಿ । ಹೃದ್ಯವಾಗಿರೆ ಹೊಸತೆನಿಸಿ ॥ ೪೧ ॥
ಮುಖವೀಣೆ ವೇಣುವುಪಾಂಗ ಚಿನ್ನಿನ ಶ್ರುತಿ । ಸಖತನವಾಗಲೋಜೆಯೊಳು ॥
ಮುಖರಿಗಾಣರು ರಾಗರಸದೋರಿದರು ಸ್ವರ್ಗ । ಸುಖವ ಕರೆದು ತೋರುವಂತೆ ॥ ೪೨ ॥
ಆಹಿರಿಯಲ್ಲಿ ತೋಡಿಯೊಳು ನಾಟಿಯೊಳು ಸ । ನ್ನಾಹಸಾಳಂಗರಾಗದೊಳು ॥
ಸೋಹಿ ಸೋಹಿಯು ತೋರಿ ರಾಗಿಸಿ ಸಭೆಗೆ ಸ। ಮ್ಮೋಹನರಸವ ಸೂಸಿದರು ॥ ೪೩ ॥
ಮಂದ್ರಮಧುರತರಭೇದವನರಿದು ನೃ । ಪೇಂದ್ರನ ಮನದಿಚ್ಛೆಯರಿದು ॥
ಚಂದ್ರಿಕೆ ಕಮ್ಮನಾದಂತೆ ಪಾಡಿದರು ದೇ । ವೇಂದ್ರನ ಕರೆವಂತೆ ಸಭೆಗೆ ॥ ೪೪ ॥
ಬ್ರಹ್ಮರಂಧ್ರಕೆ ಸ್ವರವೇರಲುಂಚದೊಳಿತ್ತಿ । ಬ್ರಹ್ಮಲೋಕವ ಮುಟ್ಟಿತೆನಿಸಿ ॥
ಬ್ರಹ್ಮಾನಂದರಸವ ಕರೆದರು ನಾದ । ಬ್ರಹ್ಮವೆಂಬುದು ಬಡಕಲೆಯೆ ॥ ೪೫ ॥
ಎಳೆಮಿಂಚಿನಂತುಂಚವೆತ್ತುವರುಳುಕಿನಂ । ತಿಳಿಯಿಸುವರು ಮತ್ತೆ ಕೊರಳಾ ॥
ಬಳೆಯೊಳು ಬಳೆಯಂತೆ ತಿರಿಗಿಸಿ ರಾಯನ । ತಲೆದೂಗಿಸಿದರು ಗಾಯಕರು ॥ ೪೬ ॥
ಆದಿಜಿನೇಶನ ಸಿದ್ಧರ ಮುನಿಗಳ । ಶ್ರೀದಿವ್ಯಹಂಸನಾಥನನು ॥
ನಾದಪೂಜೆಯೊಳು ಪೂಜಿಸಿ ಭರತೇಶಗಾ । ಮೋದದೋರಿದರು ಗಾಯಕರು ॥ ೪೭ ॥
ಬಳಿಕ ಗಾನದೊಳನುಗತವಾಗಿ ವಾದ್ಯಸಂ । ಕುಳವ ಮೇಳೈಸಿ ತಾವೆಲ್ಲ ॥
ಒಳಸರಿದೊಯ್ಯನೆ ತೆರೆಯ ಮರೆಯ ಪಾತ್ರ । ದೊಳು ದನಿಗೈದರೇನೆಂಬೆ ॥ ೪೮ ॥
ಆ ಘನಕುಚದ ತಾರಾಸತಿಯರು ಶೋಣ । ಮೇಘದ ಮರೆಗೆ ಸಾರ್ದಂತೆ ॥
ಮೇಘವಣ್ಣಿಕೆಯ ಜವನಿಕೆಯೊಳೆಸೆದರ । ಮೋಘಪಾತ್ರದ ತರುಣಿಯರು ॥ ೪೯ ॥

ನೃತ್ಯೋಪನಯನವ ತೆರೆಯ ಮರೆಯೊಳು ಸಾಂ । ಗತ್ಯಗಾಣಿಸಿ ನಸುನಿಲಿಸಿ ॥
ನೃತ್ಯವಿದ್ಯಾಧರನೆಂಬ ನಟ್ಟುವ ಬಂದ । ನತ್ಯಂತಸುಖಿಯ ಸಮ್ಮುಖಕೆ ॥ ೫೦ ॥
ಮುಂದಲೆಚುಂಗುಡಿಸುತ್ತಿದ ಹಚ್ಚಡ । ಹೊಂದೊಡವಾಂತ ಕೈಸೆಳವೆ ॥
ಬಂದು ಭೂವರಗೆ ಸಾಷ್ಟಾಂಗವೆರಗಿಯೆದ್ದು । ನಿಂದು ಬಿನ್ನವಿಸಿದನಿಂತು ॥ ೫೧
ವಿವಿಧವಿದ್ಯಾಂಗಪರೀಕ್ಷಕ ಹಂಸಾನು । ಭವಸಿದ್ಧ ಸ್ವರ್ಗಪ್ರಸಿದ್ಧಾ ॥
ಅವನೀಶರೊಡೆಯ ನನ್ನೊಡೆಯ ಬಿನ್ನಹವೊಲಿ । ದವಧರಿಸಾದಿಚಕ್ರೇಶಾ ॥ ೫೨ ॥
ಸ್ವರ್ಗದೊಳುಂಟೇನೊ ನಿನ್ನ ಮೆಚ್ಚಿಸುವ ಸು । ಮಾರ್ಗನಾಟಕವದಂತಿರಲಿ ॥
ಮಾರ್ಗವೆಂದೆರಡುಪಾತ್ರವ ತಿದ್ದಿದೆನು ಕಣ್ಣ । ಕೂರ್ಗೊನೆಯೊಳೆ ನೋಡು ಸಾಕು ॥ ೫೩ ॥
ನೇತ್ರಮೋಹಿನಿಚಿತ್ತಮೋಹಿನಿಯೆಂದೆಂಬ । ಪಾತ್ರದ ತರುಣಿಯರೆನ್ನ ॥
ಪುತ್ರಿಯರವಧರಿಸೆಂದು ಕೈಮುಗಿದಾಗ । ಪಾತ್ರದೆಡೆಗೆ ಸಾರ್ದನೊಡನೆ ॥ ೫೪ ॥

ಸಾಳಂಗರಾಗವನೆತ್ತಿ ಮದ್ದಳೆತಾಳ । ಮೇಳಶ್ರುತಿಗಳೊಂದುಗೂಡಿ ॥
ಲೋಲನಿರಂಜನಸಿದ್ಧನ ಹಾಡಿದ । ರೋಲಾಡೆ ಸುಖದೊಳಾಸ್ಥಾನಾ ॥ ೫೫ ॥

ಸಂಜೆಗೆಂಪೊಲಿವಂತೆ ತೆರೆ ತೊಲಗಿತು ಕಣ್ಗೆ । ಕಂಜಾಕ್ಷಿಯರು ಕಾಣಿಸಿದರು ॥
ರಂಜಿಪ ನಳಿತೋಳ್ಗಳೆತ್ತಿ ಸುವರ್ಣಪು । ಷ್ಪಾಂಜಲಿಮಾಡಿದರೊಡನೆ ॥ ೫೬ ॥

ನಡುವಿನೊಳಿಟ್ಟ ಹಸ್ತಗಳು ಪಸರಿಸಿದ । ತೊಡೆಸಾರ್ದ ಮಡಗಳಿಂದಾಗ ॥
ಮಿಡುಕದೆ ನಿಲುವಿನ ರೇಖೆದೋರಿದರು ಮು । ಪ್ಪೊಡವಿಯುಂದವ ತೋರುವಂತೆ ॥ ೫೭ ॥

ಪಚ್ಚೆಯ ಚಲ್ಲಣ ಪಂಚವರ್ಣದ ಕಾಸೆ । ಬೆಚ್ಚ ಮುತ್ತಿನ ಮೊಲೆಗಟ್ಟು ॥
ಆಚ್ಚಜವ್ವನೆಯರಿದ್ದರು ನೋಡುವರ ಮನ । *ಹುಚ್ಚೆದ್ದು ಧರೆಗೆ ಬೀಳ್ವಂತೆ ॥ ೫೮ ॥

ತಿಟ್ಟವಿಕ್ಕಲು ತಿದ್ದಲರಿದೆನಿಸುವ ಮೈಯ । ಕಟ್ಟಾಯವೇರುವ ಪ್ರಾಯ ॥
ಕಟ್ಟಾಣಿಹೆಂಗಳೆಸೆದರು ನಟ್ಟುವರೊಳು । ಹುಟ್ಟತಕ್ಕವರೆಯೆಂಬಂತೆ ॥ ೫೯ ॥

ತೊಟ್ಟ ಸಿಂಗಾರದ ಕೊಂಕುಬಿಂಕಣೆ ರಸ । ತೊಟ್ಟಿಡುವಂತೆ ಲಾವಣ್ಯ ॥
ಮುಟ್ಟೆ ಕಂದುವ ಮೈಯ ಪೆಂಗಳಿದ್ದರು ನಿಂದ । ತಿಟ್ಟಸೋಲಿಸೆ ರಾಜಸಭೆಯಾ ॥ ೬೦ ॥

ನೇತ್ರಮೋಹಿನಿ ಮೆಲ್ಲನೊಲೆದು ರಾಯನ ನೋಡಿ । ನೇತ್ರಸುಖವ ಸೂಚಿಸಿದಳು ॥
ಸೂತ್ರಿಸಿ ಚಿತ್ತಮೋಹಿನಿ ನೋಡಿ ಚಿತ್ತವ । ಸೂತ್ರದಂತಲುಗಾಡಿಸಿದಳು ॥ ೬೧ ॥

ಹಜ್ಜೆ ಸರಿದು ಮೆಲ್ಲನೊಲೆದರು ಕಾಲ ಹೊಂ । ಗೆಜ್ಜೆ ಝುಲಿರುಝುಲಿರೆನಲು ॥
ಸಜ್ಜುಕಮೊಲೆಯ ಪೆಣ್ಗಳು ಮುಂದೆ ನಡೆದರು । ಪಜ್ಜಳಿಸುತ ಮುಖಕಾಂತಿ ॥ ೬೨ ॥

ನೋಟದೊಳಗೆ ಕೊಂದರೊಮ್ಮೆ ನೋಟಕರನು । ನಾಟಿಸಿ ನಸುನಗೆಯಿಂದ ॥
ಲೂಟಮಾಡಿದರು ಮೈಯೊಲಿದಾಟದಿಂದೆದೆ । ಗೋಟೆಯ ಕೊಂಡರೇನೆಂಬೆ ॥ ೬೩ ॥

ಒಬ್ಬರೊಬ್ಬರು ಬಲಮುರಿಯೆಡಮುರಿಯಾಗಿ । ಸಬ್ಬವದೊಳು ಚಾರಿವರಿದು ॥
ಇಬ್ಬರು ಸುಳಿದಾಡಿ ನಿಂದಳೊಬ್ಬಳು ಹಿಂದೆ । ಮೊಬ್ಬಳಾಡಿದಳು ರಂಗದೊಳು ॥ ೬೪ ॥

ಹೊಂಗಿ ಹೊಳೆದು ನೇತ್ರಮೋಹಿನಿ ತಾಳಲ । ಯಂಗಳನರಿದು ನರ್ತಿಸುತ ॥
ರಂಗದೊಳಿದ್ದಳು ನೋಡುವ ಜನದಂತ । ರಂಗದೊಳಿದ್ದಳೇನೆಂಬೆ ॥ ೬೫ ॥

ತೋಳ ನೀಡಿದಳು ಮನ್ಮಥನೊರೆಯಿಂದುರ್ಚಿ । ಬಾಳ ನೀಡಿದನೊಯೆಂಬಂತೆ ॥
ಚಾಳಿಯದೊಳು ಹೊಳೆದಳು ರಾಜಸುತರೆದೆ । ಹೋಳಾಗುವಂತೆ ಹೊಮ್ಮಿರಿದು ॥ ೬೬ ॥

ಎತ್ತ ನೀಡಿತು ಹಸ್ತವತ್ತ ದೃಷ್ಟಿಗಳಲ್ಲಿ । ಚಿತ್ತವೆಲ್ಲವು ಭಾವರಸವು ॥
ತತ್ತತ ತಿತ್ತಿತಿ ಯಾರೆ ಯಾರೆಯೆನ । ಲತ್ತಿತ್ತಲೊಲೆದು ಹರಿದಳು ॥ ೬೭ ॥

ತಳವರ್ಜ್ಜೆ ತಟಪುಟನಿಡುವಾಗ ವಿಟರೆದೆ । ತಳಹೊಳಗೊಳುತಿಹುದೊಡನೆ ॥
ಒಲಿದು ಕಾಲ್ನೀಡೆ ಮುನಿದು ತಮ್ಮನೊದೆದ ನ । ಲ್ಲಳ ನೆನೆದರು ರಾಜಸುತರು ॥ ೬೮ ॥

---

* ಮೆಚ್ಚೆದ್ದು ಮೇಲೆ.

ನೂರೆಂಟುಕರಣ ನೂರೆಂಟುನಿಲವು ಹದಿ । ಮೂರುಶಿರೋಭೇದವರಿದು ॥
ಬೇರೆಬೇರರುವತ್ತನಾಲ್ಕುಭೇದದ ಹಸ್ತ । ದೋರಿ ನರ್ತಿಸಿದಳಾ *ನೀರೆ ॥ ೧೯ ॥

ಚಾರಿಮೂವತ್ತೆರಡನುಚರಿಸಿರಲಂಗ । ಹಾರ ಮೂವತ್ತೆರಡೆಸೆಯೆ ॥
ಸೇರಿ ಮೂವತ್ತಾರು ನೋಟ ರಂಜಿಸೆ ನಾಟ್ಯ । ಸಾರಗಾಣಿಸಿ ನಟಿಸಿದಳು ॥ ೨೦ ॥

ಭಾವವಿಭಾವಾನುಭಾವ ಮುಂತಾದ ಕ । ಲಾವಿರಚನೆ ರೇಖೆದೋರಿ ॥
ಭಾವಕರೆಲ್ಲರ ಚಿತ್ತ ರಂಜಿಸಲಾಡಿ । ಭಾವೆ ಹಿಂಗಡೆಗೆ ಸಾರಿದಳು ॥ ೨೧ ॥

ಚಿತ್ತಮೋಹಿನಿ ಕೂಡೆ ಬಂದು ನಿಂದಳು ಮಝು । ಚಿತ್ತವೆಲ್ಲವ ಚಿಗುರಿಸುತ ॥
ವೃತ್ತಕುಚದ ಬಲುಭಾರವ ಬಡನಡು । ಹೊತ್ತು ನಿಂದುದು ಚಿತ್ರವೆನಿಸಿ ॥ ೨೨ ॥

ತೊಡೆ ತೋರಕಟಿಗಳ ತಾಳ್ದುದಚ್ಚರಿ ದೊಡ್ಡ । ಮುಡಿಯು ನುಂಗೊರಳಾಂತುದರಿದು ॥
ನಡೆದೊಲೆದಿನ್ನು ನರ್ತಿಸಿದರೇನಹಳೊಯೆಂ । ದೊಡನೆಣಿಸಿದರು ನೋಟಕರು ॥ ೨೩ ॥

ಮರ್ದಲತಾಳಾನುಗತಿಯೊಳು ನಡೆದಳು । ಪೆರ್ದೆರೆಯಂತೆ ಮುಂದೊತ್ತಿ ॥
ಸಾರ್ದಳು ಹಿಂದಕೆ ಕಡಲ ಭರತವೊಳ । ಸಾರ್ದಿಳಿವಂತೆ ಜೋಕೆಯೊಳು ॥ ೨೪ ॥

ದಿಗಿದಿಗಿನೊಡನಿದಿರಾಗಿ ಬಹಳು ನಸು । ನಗುತ ರಾಯನನಪ್ಪುವಂತೆ ॥
ಭುಗಿಲನೆ ತಿರುಗುವಳರಸನೊಳ್ಮನಿದಡ್ಡ । ಮೊಗವಿಕ್ಕಿ ಹೋಹಳೆಂಬಂತೆ ॥ ೨೫ ॥

ಬಾಹಾಗ ಮೊಗಮೊಲೆನಡುಸಜ್ಜೆಗಳ ನೋಡಿ । ಮೋಹಿಸುವರು ರಾಜಸುತರು ॥
ಹೋಹಾಗ ಮಡಕಟಿಮುಡಿಬೆನ್ನ ನೋಡಿಯು । ತ್ಸಾಹಿಸುತಿಹರೇನನೆಂಬೆ ॥ ೨೬ ॥

ಸುಳಿದು ಸುತ್ತುವಳು ನಾಟ್ಯದೊಳು ಸಮ್ಮೋಹನ । ಜಲಧಿಯ ಸುಳಿಯೊಯೆಂಬಂತೆ ॥
ಬಲಕೆಡಕೊಲೆದು ಹರಿವಳೆಳೆವಿಸಿಲಲ್ಲಿ । ಯೆಳೆನಾಗ ಹರಿವಂತೆ ಮುರಿದು ॥ ೨೭ ॥

ನಟಿಸಿ ರಂಗದೊಳು ಮೇಲುಪ್ಪರಿಸುವಳಾಗ । ಪುಟವೇರಿ ಪೊಯ್ಕೆಂಡಿನಂತೆ ॥
ಕಟಿಕಚಕುಚದ ಭಾರವನೀಕೆ ಕೊಂಡೆದ್ದ । ಪಟುತನ ಲೇಸು ಮಝನಲು ॥ ೨೮ ॥

ಮುಗುಳ್ನಗೆಯಿಂದ ರಾಯನ ನೋಡಿ ಕೂಡೋರೆ । ಮೊಗದಿ ನೋಡುವಳು ನೋಟಕರಾ ॥
ಬೊಗರಿಯಂತೊಲೆದಾಡುವಳು ನಿಲುವಳು ಹೊನ್ನ । ಬೊಗರಿಮೊಲೆಯ ಮೋಹನಾಂಗಿ ॥ ೨೯ ॥

ಮೋರೆಯೊಲೆದು ನೋಡಿ ನೃಪಸುತರಿಗೆ ಹುಬ್ಬು । ಹಾರಿಸುವಳು ನಸುನಗುತ ॥
ಹಾರುವುದೊಡನವರೆದೆ ತನ್ನ ತೋಳೆತ್ತಿ । ನೀರೆ ಕೊಲ್ಲಣಿಸಿ ಸುತ್ತುವಳು ॥ ೩೦ ॥

ಮಾರನ ಮದದಾನೆ ಚಾರಿವರಿದು ನಾಟ್ಯ । ಧಾರಿಣಿಯೊಳಗಾಡಿದಂತೆ ॥
ಆರಭಟಿಯೊಳು ನೃತ್ಯವನಾಡಿ ಹಿಂದಕೆ । ಸಾರಿದಳಾ ಬೆಲೆವೆಣ್ಣು ॥ ೩೧ ॥

ಸಂಗೀತಕಾರರು ತಾಳಮೇಳವ ನಸು । ಸಂಗಿಸಿಕೊಂಡು ಜೋಕೆಯೊಳು ॥
ಭೃಂಗಾಳಿಯಂತೆ ತಂಗಾಳಿಯಂತೊಡನೆ ಭಾ । ಷಾಂಗಕೇಳಿಯ ಕೇಳಿಸಿದರು ॥ ೩೨ ॥

---

* ಗಣಿಕೆ.

ಚಚ್ಚುಪುಟದ ಚಾಚುಪುಟದ ಸಾಂಬ್ರಾಣಿಯ । ಕೆಚ್ಚುಕೀಲಣೆಗಳನರಿದು ॥
ಚಚ್ಚಹುಚ್ಚಾಗದೆ ಚಂದಚಂದದೊಳು ಪ । ಳಚ್ಚನೆ ಪಾಡಿದರೊಸೆದು ॥ ೮೩ ॥

ಆಹಿರಿರಾಗವನೆತ್ತಿ ಸಂಗೀತದ । ಲಾಹರಿ ತಲೆಗೇರಿ ನಲಿದು ॥
ಬಾಹಿರವಳಿದೊಳಗರಿದು ಹಾಡಿದರಾಗ । ಶ್ರೀಹಂಸನಾಥಲೀಲೆಯನು ॥ ೮೪ ॥

ಶ್ರೀಭರತೇಶನ ಮನವೆಂಬ ನಭದಲ್ಲಿ । ಶೋಭಿಸುವಮೃತಭಾಸ್ಕರನೆ ॥
ಶ್ರೀಭರ್ತೃ ಕರ್ತೃ ಚಿದಂಬರಪುರುಷ ಸು । ಲಾಭ ತೋರೆಂದು ಹಾಡಿದರು ॥ ೮೫ ॥

ಕುಂದದ ಚಂದ್ರ ಕಾಯದ ಸೂರ್ಯ ಕಾಯುವ । ನೊಂದಿಯೊಂದದ ಹಂಸನಾಥಾ ॥
ಚಂದದೋರೆಂಬಾಗ ಪಾತ್ರಕಾಂತೆಯರಿಬ್ಬ । ರೊಂದಾಗಿ ಬಂದರಾ ಕ್ಷಣವೆ ॥ ೮೬ ॥

ಆಳಾಪಗೇಳುತ ನಿಂದರಿಬ್ಬರು ನಾಟ್ಯ । ಶಾಲೆ ಮೋಹನದಲ್ಲಿ ಮುಳುಗೆ ॥
ಸೀಳಿ ಹರಿದರೆಡಬಲಕೆ ಬೆರಸಿ ಪಾರಿ । ವಾಳದ ಪಕ್ಕಿಗಳಂತೆ ॥ ೮೭ ॥

ಇದಿರಾಗುವರು ಬೆನ್ನುಬೆನ್ನುಗಾಣಿಸಿ ತೇಲ್ವ । ರದ ಬಿಟ್ಟು ಸಸಿನೆ ಹರಿವರು ॥
ಇದೆ ಅದೆ ಇಲ್ಲಿಲ್ಲಿ ಇತ್ತಿತ್ತಲೆನೆ ಹೊಳೆ । ದದೆ ಮುಚ್ಚು ಬಯಲಾದರೊಡನೆ ॥ ೮೮ ॥

ಆಯೆಂದು ಕೂಡೆ ರಾಗವನೆತ್ತಿ ಸಭೆಯೊಳು । ಗಾಯಕ ಕೇಳಿಸುತಿದ್ದಾ ॥
ಮಾಯಕಾತಿಯರಂತೆ ಮತ್ತೆ ಬಂದರು ಮುನ್ನ । ಮಾಯವಾದೆಳೆವೆಂಗಳೊಡನೆ ॥ ೮೯ ॥

ಕೊರವಂಜಿ ಕಟ್ಟಣೆಯನು ಕೇಳಿಸಿದರು ಸ್ವೈ । ರಗಾಗಿ ಸಭೆ ನಿಲುವಂತೆ ॥
ಮರೆಗೆ ಹೋಹರು ಕೂಡೆ ಮತ್ತೊಂದು ಚೆಂಡಿನ । ತೆರನಾಂತು ಬಂದು ನರ್ತಿಪರು ॥ ೯೦ ॥

ಬಾಳುಬಟ್ಟಲ ಪಿಡಿದೊಮ್ಮೊಮ್ಮೆ ಪೊನ್ನಪೂ । ಗೋಲುಪೊಂಬರಿಗೆಯಾಂತೊಮ್ಮೆ
ಕಾಲಿಟ್ಟು ಹೊಳೆವುತಿದ್ದರು ಮನಸಿಜನ ಮಾ । ಸಾಳುಗಳಂತೆ ದಿಟ್ಟೆಯರು ॥ ೯೧ ॥

ಥಾಳವ ತೂಗುವರೊಲೆದು ಲಾಗಿಸುವರಾ । ಥಾಳಕಿಯರು ಥಾಳದಂತೆ ॥
ಸೂಳುಸೂಳೊಳು ಹೊಕ್ಕು ಹೊಳೆದು ಮೋಹಿಸಿದರಾ । ಸೂಳೆಯರಾಸ್ಥಾನದೊಳಗೆ ॥ ೯೨ ॥

ಕೋಲಚಾರಿಯ ಕೊಳ ವನ ಚಿಂದು ಮೊದಲಾದ । ಲೀಲೆಯನೆಲ್ಲವ ತೋರಿ ॥
ಆಲಿದೆರೆದು ನೋಳ್ಪ ಸಭೆಗೆ ಮೋಹನದಿಂದ್ರ । ಜಾಲವ ಬೀಸಿದರವರು ॥ ೯೩ ॥

ಗಿಂಡಿಯ ನೀರ ಮುಕ್ಕುಳಿಸಿಯುಗುಳುತೋಜೆ । ಗೊಂಡು ವೀಳೆಯವ ಕೈಕೊಳುತ ॥
ಮಂಡಲಿಕರ ಮುಂದೆಯೊಡೆಯ ನೋಳ್ಪನು ತನ್ನ । ಮಂಡೆಯೊಲೆದು ಪಾತ್ರಗಳನು ॥ ೯೪ ॥

ನಟನಟಿಯೆಂಬ ಬೆಳ್ಳಿಲೆಯ ಘಳಿಗೆಯನು । ಕಟಕಟಯೆನೆ ಕಚ್ಚಿಕೊಳುತ ॥
ನಟನವ ನೋಡಿ ನಗುತ ನೋಡುವನು ರಾಯ । ವಿಟದಕ್ಷಿಣಾದಿನಾಯಕರಾ ॥ ೯೫ ॥

ರಾಯನೊಲ್ಮೆಯನರಿದಾಡುವ ಪಾತ್ರಗ । ಳಾಯತವರಿದು ಕೋವಿದರು ॥
ದಾಯದಾಯಕೆ ನುಡಿವರು ಮನಸಿಜ ನೇಮ । ಗಾಯವರಿದು ತಿವಿವಂತೆ ॥ ೯೬ ॥

ಕಂಡು ಕೇಳಿಸುತಿದ್ದವರು ಸ್ವಾಮಿ ಸೊಬಗಾಯ್ತು । ತಾಂಡವದಂಗವಿದಹುದು ॥
ಕೊಂಡಾಡತಕ್ಕ ಪಾತ್ರಗಳಿವರೆಂದೆದೆ । ಗೊಂಡು ಬಿನ್ನವಿಸುವರೊಡನೆ ॥ ೯೭ ॥

ರೂಪು ಚೆನ್ನಿವರ ಸಿಂಗರ ಚೆನ್ನು ಮೇಳ ಚೆ । ನ್ನೀ ಪೆಣ್ಗಳೊಲೆದಾಡಿಕೊಂಬ ॥
ಕೋಪುಚಿಂದುಗಳು ಮುಂತಾದುವು ಚೆನ್ನು ನೀ । ನೇ ಪರಿಕಿಸಬೇಕು ರಾಯಾ ॥ ೯೮ ॥

ಸುಗುಣವಿದ್ಯವ ಕಲ್ತು ಸುಮುಖಿಗೆ ತೋರಲು । ಹಗಲು ಕನ್ನಡಿಯ ನೋಳ್ಪಂತೆ ॥
ದುಗುಡಮೋರೆಗರಿಗೆ ತೋರಲು ರಾತ್ರಿಯೊ । ಳಗೆ ಮುಕುರವ ನೋಡಿದಂತೆ ॥ ೯೯ ॥

ನಾಗರ ಕೇಳ್ವಿಟ ಕೇಳನುಕೂಲ ಕೇ । ಳಾಗಲುಸುರು ದಕ್ಷಿಣಾಂಕಾ ॥
ಈ ಗಣಿಕೆಯರಾಟವಿಂತಂತುಟೆಂದೆದೆ । ದಾಗಿ ನುಡಿವರು ತಮ್ಮೊಳಗೆ ॥ ೧೦೦ ॥

ಭರತಚಕ್ರೇಶ್ವರ ಸೊಬಗನಾತನು ನೋಳ್ಪ । ಸರಸವಿದ್ಯೆಗಳೆಲ್ಲ ಸೊಗಸು ॥
ತರಣಿಮಂಡಲ ಬೆಳಗಹುದದರೊಳಗಿದ್ದ । ಕಿರಣಗಳೊಳಗೆ ಕಪ್ಪುಂಟೆ ॥ ೧೦೧ ॥

ಪೂರ್ಣಚಕ್ರೇಶನ ಕಂಡು ಹೆಚ್ಚಿದುದಿಂದು । ಪೂರ್ಣಯೌವನೆಯರ ನೃತ್ಯಾ ॥
ಪೂರ್ಣಚಂದ್ರನ ಕಂಡು ಜೊನ್ನವಕ್ಕಿಗಳಿಚ್ಚೆ । ಪೂರ್ಣದೊಳೊಲೆದಾಡುವಂತೆ ॥ ೧೦೨ ॥

ಎಂದೊಬ್ಬರೊಬ್ಬರು ನುಡಿದಾಡಿ ರಾಯಗಾ । ನಂದದೋರಿಸಿ ಕಾಲವರಿದು ॥
ಮುಂದಿನ್ನು ಪಾತ್ರವುಂಟವರ ನಿಲ್ಲಿಪ ವೇಳೆ । ಯೆಂದು ಬಿನ್ನವಿಸಿದರೊಡನೆ ॥ ೧೦೩ ॥

ಅಕ್ಷಿಯೊಳಗೆ ಪೇಳ್ದನಾ ರಾಯನದನಾಗ । ದಕ್ಷಿಣನಾಯಕನರಿದು ॥
ಪ್ರೇಕ್ಷಣದಂತ್ಯಮಂಗಲವನೆಸಗಿಸೆಂದು । ಶಿಕ್ಷೆದೋರಿದನು ನಟ್ಟುವಗೆ ॥ ೧೦೪ ॥

ಎದೆದಟ್ಟುವಂತೇಣನೇತ್ರೆಯರೊಡನೆ ಚಾ । ಪದನಕೊಂಡರು ಜೋಕೆವಿಡಿದು ॥
ಆದಿರ್ದ ಜಕ್ಕಡಿಯ ಕೊಂಡರು ಜಿನಸ್ತುತಿಗೈದ । ರದೆ ಪುರೆಯೆನೆ ನಿಲಿಸಿದರು ॥ ೧೦೫ ॥

ಅಂಗ ಬೆಮರಿತಿಟ್ಟ ತಿಲಕ ಕಲಕಿತಚ್ಚ । ರಂಗು ಥಾಳಿಸಿತು ಮೊಗದೊಳು ॥
ಸೆಂಗಡಿಸಿದುದೊಂದು ಹೊಸಗಂಪು ಮೈಗೆಳೆ । ವೆಂಗಳಿಗಾ ಸಮಯದೊಳು ॥ ೧೦೬ ॥

ವಿಳಾಸೆಯ ತಿದ್ದುತ ನಗುತ ಕಂಗಳ ಕಾಂತಿ । ಸೂಸುತ ನೃಪತಿ ನೋಡಿದನು ॥
ಆ ಸನ್ನೆಯರಿದು ದಕ್ಷಿಣನಾಯಕನು ಕೈಯ । ಬೀಸಿ ಕರೆದನು ನಟ್ಟುವನಾ ॥ ೧೦೭ ॥

ಮುಂದೆ ಮಕ್ಕಳು ಹಿಂದೆ ಮೇಳದವರು ಭುಜ । ಸಂದಿಸಿ ಕೆಲದಲ್ಲಿ ತಾನು ॥
ಬಂದು ಭೂಪನ ಮುಂದೆ ನೃತ್ಯವಿದ್ಯಾಧರ । ನಿಂದನು ದೇವ ಜೀಯೆನುತ ॥ ೧೦೮ ॥

ಸ್ವಾಮಿಯ ಚಿತ್ತಕೆ ಬಂದುದೆ ಪಾತ್ರಸಿ । ಖಾಮಣಿಗಳಲ್ಲೈ ನೀರೆಯರು ॥
ಹಾ ಮಝು ಚೆನ್ನಾಗಿ ಬರಿಸಿದೈಯೆಂದನಂ । ದಾಮೋದ ಮಿಗೆ ದಕ್ಷಿಣಾಂಕಾ ॥ ೧೦೯ ॥

ಚಿತ್ತಮೋಹಿನಿನೇತ್ರಮೋಹಿನಿಯೆಂದು ನೀ । ನಿತ್ತ ಪೆಸರು ಸಲ್ಲುದಿವರ್ಗೆ ॥
ಚಿತ್ತನೇತ್ರವ ಸೂರೆಗೊಂಡರ್ಮೈ ರಸಿಕರ । ತೊತ್ತಳದುಳಿದರ್ಮೈಯೆಂದಾ ॥ ೧೧೦ ॥

ದಕ್ಷಿಣನಾಯಕ ಕೇಳು ರಾಯನ ಪಾತ್ರ । ಲಕ್ಷಣಾಂಗಿಯರ ಮುಂದೆವ್ಮ ।
ಪ್ರೇಕ್ಷಣವೆಂಬುದು ಹಂಸೆಯಿದರ ಬಕ । ಪಕ್ಷಿಯು ನಡೆಯೆಂದನವನು ॥ ೧೧೧ ॥

ಆ ದೊರೆ ನಕ್ಕನಂತೆನದಿರ್ಕೈ ನೃತ್ಯವಿ । ದ್ಯಾಧರ ನಿನ್ನ ಪುತ್ರಿಯರ ॥
ಸಾಧನೆ ಚೆನ್ನು ನೀನೊಲ್ದು ಬರಿಸಿದಂದ । ಮಾಧುರ್ಯವಾದುದ್ಯೆಯೆಂದಾ ॥ ೧೧೨ ॥

ಬದುಕಿದೆ ಸ್ವಾಮಿ ನೀನಹುದೆಂದ ಮೇಲೆನ । ಗಿದರಿಂದಧಿಕಭಾಗ್ಯವಿಲ್ಲ ॥
ಚದುರರದೇವ ಜೀಯೆನುತ ಸಾಷ್ಟಾಂಗಪೂ । ರ್ವದೊಳೆರಗಿದನೆದ್ದು ನಿಂದಾ ॥ ೧೧೩ ॥

ಉರೆ ಮೆಚ್ಚಿ ಸಭೆಯೆಲ್ಲ ನೃತ್ಯವ ಹೊಗಳಿತು । ನೆರೆ ಚಾಗಿಗಳದೇವನಾಗ ॥
ಹೊರಿಗಟ್ಟೆ ನಟ್ಟುವಗಾ ಮೇಳದವರಿಗು । ಹೊರುವಷ್ಟು ಕೊಟ್ಟ ಮನ್ನಣೆಯಾ ॥ ೧೧೪ ॥

ನೇತ್ರಮೋಹಿನಿಚಿತ್ತಮೋಹಿನಿಯರಿಗಾ ಪ । ವಿತ್ರರತ್ನಾಭರಣಗಳಾ ॥
ಧಾತ್ರೀಶನಿತ್ತನು ಕಾಸೆಯು ಸೆರಗೊಡ್ಡಿ । ಪಾತ್ರಕಾಂತೆಯುರಾಂತ*ರೊಸೆದು ॥ ೧೧೫ ॥

ಕಾಸೆಯೊಳಾಂತ ರತ್ನಾಭರಣವನಾಗ । ವಾಸದವರ ಕೈಗೆ ನೀಡಿ ॥
ಆ ಸುದತಿಯುರು ನಿಂದರು ಮತ್ತು ಮನದೊಳೊಂ । ದಾಶೆಯಿನ್ನುಂಟೇನನೆಂಬೆ ॥ ೧೧೬ ॥

ತೆರೆದೆರೆದರಸನ ಕಂಡಾಗಳವರಿಗಂ । ಕುರಿಸಿತು ನೃಪನ ಮೇಲಾಶೆ ॥
ಪರಿವಿಡಿಯಿಂದದು ಬೆಳೆದುದವರ ಮನ । ಪರಿಪೂರ್ಣವಾಗಿ ಹಬ್ಬಿದುದು ॥ ೧೧೭ ॥

ಗಾಡಿಕಾರನನೊಮ್ಮೆ ಕಂಡೆದೆ ಜುಮ್ಮೆಂದ । ಪಾಡುಗಂಡಾ ಚದುರೆಯರು ॥
ಕೂಡೆಕೂಡೀಕ್ಷಿಸಲಾಟ ಮರೆವುದೆಂದು । ನೋಡದಾಡಿದರೋರೆಮೊಗದಿ ॥ ೧೧೮ ॥

ಅಡಿಗಡಿಗರಸನ ನೋಡಿದರೆದೆಸೋತು । ಗಡಬಡವಹುದಾಟವೆಂದು ॥
ಎಡಬಲಕೊಲೆದು ನೋಡುತ ರಾಯನತ್ತ ಕ । ಣ್ಣಿಡದಾಡಿ ಜಯಿಸಿದರಾಗ ॥ ೧೧೯ ॥

ಆಟದ ಚಿಂತೆಯೊಳಡಗಿರ್ದುದೆದೆಯಾಶೆ । ಯಾಟ ನಿಲ್ವುದು ಹೆಚ್ಚಿತೊಡನೆ ॥
ಕೂಟಕೆ ನೆನೆದರು ದೊರಕದೆಂದರಿದೆದೆ । ಗೋಟಲೆಗೊಳುತಿದ್ದರೊಳಗೆ ॥ ೧೨೦ ॥

ಕಾತರ ನೃಪತಿಯು ಹಿಡಿಯೆನುತಿಹುದದು । ಭೂತಾಟವೆಂಬರಿವಿಹುದು ॥
ಸೋತೆನೆಂದುಸುರೆನುತಿಹುದಿಚ್ಛೆ ಸಭೆಯೆಂಬ । ಭೀತಿಯಿಹುದು ಲಜ್ಜೆಯಿಹುದು ॥ ೧೨೧ ॥

ಕರೆ ಸೂಳೆಗುಳ್ಳದು ಚೆಲುವನ ಕರೆವುದೆಂ । ದೊರೆವುತಿಹುದು ಜಾತಿಶೀಲಾ ॥
ಪರದಾರ ಬೆಲೆವೆಣ್ಣು ತೊತ್ತಿರ ಸೋಂಕದ । ಪುರುಷನೆಂಬಾರೈಕೆಯಿಹುದು ॥ ೧೨೨ ॥

ಅಂಜಿಕೆಯಿಹುದಗ್ಗದರಸೆಂಬ ಮನದಲ್ಲಿ । ನಂಜೇರುತಿಹುದುಗ್ರತವಕಾ ॥
ಅಂಜಿಕೆಯುರು ಸೋತು ನೋಡುತಿದ್ದರು ಸಾಲ । ಭಂಜಿಕೆಗಳವೊಲು ನಿಂದು ॥ ೧೨೩ ॥

ಧರೆಯು ಮೇಲಣ ಹುಲ್ಲೆ ಚಂದ್ರಮಂಡಳದೊಳಿ । ರ್ದರಳೆಯು ಕಾಮಿಸಿದಂತೆ ॥
ಭರತರಾಜನೊಳೇಕೆ ನವಗಿಚ್ಛೆಯಾಯ್ತೆಂದು । ಕೊರಗುತಿಹರು ಮನದೊಳಗೆ ॥ ೧೨೪ ॥

* ರೊಡನೆ.

ಕಾಮುದಿಂದಧಿಕದ ಕಣ್ಣೊಳಲಿಲ್ಲದು । ಕ್ಷೇಮಕೀರ್ತಿಯು ಕೆಡಿಸುವುದು ॥
ಆ ಮಹಾನೃಪನೆತ್ತ ತಾವೆತ್ತ ಮನದಲ್ಲಿ । ಕಾಮಿಸುತಿಹುದೆತ್ತ ರತಿಗೆ ॥ ೧೨೫ ॥

ನರನಾಥನರಿದನಾ ಗಣಿಕೆಯರೆದೆಗೆ ಕಾ । ತರವೇರಿತೆಂದು ತನ್ನೊಳಗೆ ॥
ನೆರೆಯದವರಿಗಿಂದು ನೆರೆದಂತೆ ಸುಖದೋರಿ । ಪರಿಹರಿಸುವೆನೆಂದು ನೆನೆದಾ ॥ ೧೨೬ ॥

ಅವರಿಬ್ಬರಂಗಚಿಹ್ನಗಳಿಂದ ಕಂಡನು । ಣ್ಮಿವ ಕಾಮವೇರಿ ನಿಂದೆದೆಯಾ ॥
ಇವಳಿಗೀ ತಾಣ ಮತ್ತಿವಳಿಗೀ ತಾಣ ವೆಂ । ದವರ ಮೈಯೊಳಗೆ ಕಂಡಿರ್ದಾ ॥ ೧೨೭ ॥

ಕಳುಹಿಸಿಕೊಳ್ಳಿರೆಂದನು ದಕ್ಷಿಣಾಂಕನಾ । ಗಳೆ ನಟ್ಟುವನು ನಲ್ಮೆಯಿಂದ ॥
ಕಲಿಸಿದನೊಡೆಯನಂಘ್ರಿಯು ಮುಟ್ಟಿ ನಮಿಸಿ ಬೀ । ಳ್ಕೊಳಿರೆಂದು ತನ್ನ ಮಕ್ಕಳಿಗೆ ॥ ೧೨೮ ॥

ಎರಗುವ ನೆವದಿಂದ ನೃಪನ ಪಾದವ ಮುಟ್ಟಿ । ಕಿರಿದು ಸುಖವ ಕಾಣ್ಬೆವೆಂದು ॥
ತರಿಮಿಂಡಿಯರು ನಡೆತಂದರು ತವಕ ಕು । ಕ್ಕುರಿಸುತ ನೃಪನ ಸನ್ನಿಧಿಗೆ ॥ ೧೨೯ ॥

ಕಣ್ಣುತಿರುಗುತ ಮೈ ಕಂಪಿಸುತಾ ಬೆಲೆ । ವೆಣ್ಣುಗಳ್ಬಂದು ಪಾದಗಳಾ ॥
ಬಣ್ಣಿಸಿ ಪಿಡಿವಾಗ ಬೆಚ್ಚಗಿದ್ದುವು ಹಸ್ತ । ತಣ್ಣಗಿದ್ದುವು ಚರಣಗಳು ॥ ೧೩೦ ॥

ಅಂಗಜಾಗಮಸಿದ್ಧನೊಬ್ಬಳ ಕೆನ್ನೆಯು । ನಂಗನೆಯೊಬ್ಬಳ ಮೊಲೆಯಾ ॥
ಉಂಗುಷ್ಟವೆರಡರಿಂದೊತ್ತಿದನವರು ಮಾ । ರ್ಧಾಂಗಕೆ ಸಂದರಾ ಕ್ಷಣವೆ ॥ ೧೩೧ ॥

ರಸಿಕದಕ್ಷಿಣನಾಗ ಅವರಿಗೊಂದೊಲ್ಲಿಯು । ಮುಸುಕನಿಡಿಸುತಿದ್ದು ನಿಂದು ॥
ಹೊಸಮದ್ದಳೆಗ ಕೇಳಿಸಿನ್ನೊಮ್ಮೆ ಲೇಸೆಂದು ॥ ರಸಭಂಗವನು ಮರೆಸಿದನು ॥ ೧೩೨ ॥

ತತ್ತತ್ತೈ ತಿತ್ತಿತಿಯೆಂದು ಮದ್ದಳೆಕಾರ । ನತ್ತ ಗಲಭೆಮಾಡುತಿದ್ದಾ ॥
ಇತ್ತಲಾ ಗಣಿಕೆಯರರಸನೊಳ್ನೆರೆವಂತೆ । ಚಿತ್ತಮಗ್ನದೊಳಿದ್ದರಾಗ ॥ ೧೩೩ ॥

ಸಾರ್ವಭೌಮನ ರೂಪು ತಮ್ಮೆದೆಯೊಳಗಾಗ । ತೋರ್ವುದು ಪ್ರತ್ಯಕ್ಷವಾಗಿ ॥
ಪುರ್ವುಗಳಿಂದ ಜರ್ವವರು ಕಾಮಾತುರ । ವಾರ್ವಂತೆ ಬಿಗಿಯುಪ್ಪುತಿಹರು ॥ ೧೩೪ ॥

ಒಲ್ಲಿಯು ಮರೆಯೊಳತ್ತಿತ್ತ ಮೈಯೊಲೆವರು । ಲಲ್ಲೆಗರೆವರು ಮೊರೆವರು ॥
ದಲ್ಲಾಳಿತನದಲ್ಲಿ ತಾವು ಮುನ್ನೊಡಗೂಡು । ವೆಲ್ಲರಿಚ್ಛೆಯು ತೋರುತಿಹರು ॥ ೧೩೫ ॥

ಅವರಾಡಿದುದ ಹೇಳಬಾರದಂತಿರಲಿ ತಾ । ವವನೀಶನೊಡಗೂಡಿದಂತೆ ॥
ನವಭಾವರತಿಯಲ್ಲಿ ತಣಿದರಿಂದ್ರಿಯರಸ । ದ್ರವಿಸಿತು ಮರೆಯ ಮಾತೇನು ॥ ೧೩೬ ॥

ಬಾಹಿರಜಾಣರ ಮರುಳುಮಾಡುವ ನೇತ್ರ । ಮೋಹಿನಿಚಿತ್ತಮೋಹಿನಿಯಾ ॥
ಜೋಹದ ಬೊಂಬೆಯಂತಾಡಿಸಿದನು ಮಝು । ಮೋಹನಕಾರನಾ ಚಕ್ರಿ ॥ ೧೩೭ ॥

ಸಂಗಸುಖಕೆ ಸೋತ ರಾಜವಿಟರನು ತ । ಮ್ಮಂಗಾಲಿಗೆರಗಿಸುವವರಾ ॥
ಉಂಗುಷ್ಟದಿಂದೊತ್ತಿ ಮೋಹಿಸಿ ಬಿಟ್ಟನು । ಶೃಂಗಾರಹಾರನಾ ರಾಯಾ ॥ ೧೩೮ ॥

ವ್ಯಸನದೊಳವರು ದಣಿದರಾಗ ನೃಪತಿ ಕಾ । ಮಿಸಿ ನಾನು ಮುಟ್ಟೈತಿಲ್ಲವರಾ ॥
ಹಸಿಯ ಚರ್ಮಗಳ ಚಮ್ಮಾವುಗೆಗಳ ಮೆಟ್ಟಿ । ದೆಸಕವೆಂದೆಣಿಸಿದನೊಳಗೆ ॥ ೧೩೯ ॥

ನಲ್ಲನೊಳ್ನೆರೆದು ತಣಿದ ಪೆಣ್ಗಳೇಳ್ವಂತೆ । ಮೆಲ್ಲನೆದ್ದರು ಮೂರ್ಛೆ ತಿಳಿದು ॥
ನಿಲ್ಲು ಹೋ ಮದ್ದಳೆ ಸಾಕೆಂದು ನಿಲಿಸಿದ । ನುಲ್ಲಾಸ ಮಿಗೆ ದಕ್ಷಿಣಾಂಕಾ ॥ ೧೪೦ ॥

ಏಳುತ ರಾಯನ ಮೊಗವನೀಕ್ಷಿಸಿ ನಾಣ್ಚಿ । ಮೇಳದ ಮರೆಗೆ ಸಾರಿದರು ॥
ಸೂಳೆಯರಲ್ಲವೆ ಕೂಡೆ ಲಜ್ಜೆಯ ನೂಂಕಿ । ಮೇಳಸಹಿತ ಹೋದರೊಸೆದು ॥ ೧೪೧ ॥

ಕೆಲಬರಾ ತಂತ್ರವನರಿದರರಿದರೇನು । ಸಲೆ ಹೊರಹೊಮ್ಮಿಸಿತಿಲ್ಲ ॥
ಬಲುಚಕ್ರವರ್ತಿ ಚದುರರಾಯನಾಸ್ಥಾನ । ತೊಲಗುತಿದ್ದುದು ಮೌನವಿಡಿದು ॥ ೧೪೨ ॥

ಬುದ್ಧಿಸಾಗರನೊಬ್ಬನಿರಲೆಂದು ಮಿಕ್ಕಸ । ವೃದ್ಧಸಭಾಜನಗಳಿಗೆ ॥
ಪದ್ಧತಿವಿಡಿದುಡುಗೊರೆಯಿತ್ತು ಬೀಳ್ಕೊಟ್ಟ । ನುದ್ಧಾರಶೀಲನಾ ಲೋಲಾ ॥ ೧೪೩ ॥

ಒಲಿದುಡುಗೊರೆಯಿತ್ತು ದಕ್ಷಿಣ ಮೊದಲಾದ । ಕೆಳೆಯರೆಲ್ಲರ ಕಳುಹಿದನು ॥
ಘಳಿಯಾರದೊಳಗಾಗ ಜಯಘಂಟೆ ಠೊಂಣನೆ । ಮೊಳಗಿತು ಜಾವದ ಸನ್ನೆ ॥ ೧೪೪ ॥

ಪರಿಚಾರಿಣಿಯರು ತೊಡೆದು ನಾಟ್ಯಗೃಹವ ಸಿಂ । ಗರಿಸಿದರೊಡನೆ ಚೆಲ್ವಾಗಿ ॥
ಬರಹೇಳು ನೃಪನರಮನೆಯ ಪಾತ್ರಗಳನೆಂ । ದೊರೆದೊಲಿದಿರ್ದುದು ನಾಟ್ಯಶಾಲೆ ॥ ೧೪೫ ॥

ನೀಟಾದ ತೆರೆಯೊಳು ಸತಿಯರಿದಿರು ಮಂತ್ರಿ । ನಾಟ ಗದ್ದುಗೆಯೊಳು ನೃಪತಿ ॥
ನಾಟಕಸತಿಯರ್ಕೈತರುತಿದ್ದರಿದು **ಪೂರ್ವ । ನಾಟಕಸಂಧಿ** ಸುಗಂಧಿ ॥ ೧೪೬ ॥

ಈಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೪೭ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೪೮ ॥

ಭಾವಭೇದಿಸಿ ನೋಡಿದಾ ಕ್ಷಣ ಬಾಹ್ಯಚಿಂ । ತಾವಲಂಬನ ಮರೆಯಿಸುವ ॥
ಶ್ರೀವೀತರಾಗ ನನ್ನೆದೆಯೊಳಿರಮೃತಸ್ವ । ಭಾವ ಚಿದಂಬರಪುರುಷಾ ॥ ೧೪೯ ॥

ಪೂರ್ವನಾಟಕಸಂಧಿ ಸಂಪೂರ್ಣಂ

## ಉತ್ತರನಾಟಕಸಂಧಿ.

ಸಂಸಾರನಾಟ್ಯವ ನೋಡುತ ಬೋಧಾವ । ತಂಸನಾಟ್ಯದೊಳು ನರ್ತಿಸುವ ॥
ಸಂಸುಖಿ ನನಗೆ ಸನ್ಮತಿದೋರು ದುಃಖವಿ । ಧ್ವಂಸಿ ನಿರಂಜನಸಿದ್ಧಾ ॥ ೧ ॥

ಪೂರ್ವನಾಟಕವಾದುದುತ್ತರನಾಟ್ಯದ । ಪೂರ್ವಿಕಾಂಗವ ನೋಳ್ಪೆನೆಂದು ॥
ಪೂರ್ವಚಕ್ರೇಶ್ವರನಿರೆ ಬರುತಿದ್ದರ । ಪೂರ್ವನಾಟ್ಯದ ಸುದತಿಯರು ॥ ೨ ॥

ಅವಯವಕಳವಟ್ಟ ಶೃಂಗಾರ ಮಿಗೆ ನಾಟ್ಯ । ಭವನವ ಹೊಕ್ಕ ನೀರೆಯರು ॥
ಅವನಿಪತಿಯ ಕಣ್ಗೆ ಕಾಣಿಸಿಕೊಳ್ಳದೆ । ಜವನಿಕೆಯೊಳಹೊಗುತಿಹರು ॥ ೩ ॥

ಕಂಕಣಧ್ವನಿ ಕಣಕಣಯೆನೆ ಕಟಿಸೂತ್ರ । ಕಿಂಕಿಣಿ ಕಿಣಿಮಿಣಿಯೆನಲು ॥
ಪಂಕಜಾಕ್ಷಿಯರ್ಪೊದುತಿದ್ದರಂದುಗೆಗಳ । ಝೀಂಕಾರ ಝಣಝಣರೆನಲು ॥ ೪ ॥

ಮೆಲ್ಲಮೆಲ್ಲನೆ ತಾವು ತಮ್ಮೊಳು ಕಿರುದನಿ । ಯಲ್ಲಿ ಮಾತಾಡುತ ನಗುತ ।
ಉಲ್ಲಾಸ ಮಿಗೆ ಬರುತಿದ್ದರು ಹೊಂಗೆಜ್ಜೆ । ಝುಲ್ಲುಝುಲ್ಲೆನಲು ಜಾಣೆಯರು ॥ ೫ ॥

ಮೀಸಲುಗಂಪಿನ ಘಾಳಿ ಕಮ್ಮನೆ ನಾಟ್ಯ । ವಾಸವೆಲ್ಲವ ತುಂಬುತಿರಲು ॥
ಆ ಸೊಬಗೆಯರೆಲ್ಲರೊಳಪೊಕ್ಕರಂಗವಿ । ಲಾಸವಿಡಾಯ ಕೋರೈಸೆ ॥ ೬ ॥

ಕಾಂಡಪಟದ ಮರೆಯೊಳು ನಿಂದು ಕೆಲದೊಂದು । ಕಂಡಿಯೊಳೊಲೆದು ನೋಡಿದರು ॥
ಗಂಡನಿದ್ದನು ನೋಡಲೊಡನೆ ರೋಮಾಂಚದ । ಪಿಂಡನೇಳಿಸುತ ಚೆಲ್ವಿನೊಳು ॥ ೭ ॥

ಗದ್ದುಗೆಯೊಳಗೊಂದು ಹೊನ್ನಪುತ್ತಳಿಯನು । ತಿದ್ದಿ ಸಿಂಗರಿಸಲಂತದಕೆ ॥
ಇದ್ದಂತೆ ಪ್ರಾಣ ಬಂದೀಕ್ಷಿಸುವುದೊಯೆನ । ಲಿದ್ದನಾ ಚೆಲುವರದೇವಾ ॥ ೮ ॥

ತೋರದ ದೇಹ ಕುಂಡಲವೆದೆ ನರೆಗಡ್ಡ । ಸೇರಿದ ಚಂದಿ ಕುಲ್ಲಾಯಿ ॥
ನೇರಿದ ಮಟ್ಟೆ ಕಬಾಯಿ ಕಂಕಣ ರತ್ನ । ಹಾರದೊಳಿದ್ದನಾ ಮಂತ್ರಿ ॥ ೯ ॥

ಗದ್ದುಗೆಯೊಳು ಸ್ವಾಮಿಯಿದ್ದಪನಕ್ಕಾ ಮುಂ । ದಿದ್ದನು ಮಂತ್ರಿ ಮತ್ತಾರು ॥
ಹೊದ್ದರಿಲ್ಲೂಳಿಗವೆಂಗಳಿದ್ದಪರೆಂದು । ಹೊದ್ದಿ ನುಡಿದರು ತಮ್ಮೊಳಗೆ ॥ ೧೦ ॥

ಸಚಿವ ಜಾಣನು ಸ್ವಾಮಿ ಜಾಣನಂತಿರ್ವರ್ಗೆ । ರುಚಿದೋರುವಂತೆ ನಾವಿಂದು ॥
ರಚನೆಗಾಣಿಸಬೇಕು ನೃತ್ಯದೊಳೆಂದು ತಾ । ವುಚಿತದೇಕಾಂತವಾಡಿದರು ॥ ೧೧ ॥

ತೋರುವ ಚಂದ್ರಬಿಂಬದೊಳಡಗಿದ ಹದಿ । ನಾರು ಕಲೆಗಳೊಯೆಂಬಂತೆ ॥
ಮಾರೊಡ್ಡಿ ಮುತ್ತಿನ ಜವನಿಕೆಯೊಳು ಹದಿ । ನಾರು ಪಾತ್ರಗಳಿದ್ದುವಾಗ ॥ ೧೨ ॥

ತೆರೆಯ ಮುಂಗಡೆಯೊಳು ನಿಂದು ಮದ್ದಳೆಗನು । ಭರತಚಕ್ರಿಗೆ ಕೈಯ ಮುಗಿದು ॥
ಅರಿಕಟ ತದಿಕಟ ರಿಕ್ಕರಿಕ್ಕಟ ದಿಮಿ । ದಿರುದಿಮಿಕೆಂದು ಕೇಳಿಸಿದಾ ॥ ೧೩ ॥

*ಕಾಲವನರಿದು ಕಟ್ಟಣೆಯನು ತಿಳಿದಾಗ । ತಾಳವ ಕೈಯೊಳಗಾಂತು ॥
ತಾಳಧಾರಿಯು ಮೇಲಿಕೆಳಗೆ ಜಾರದೆ ಲಯ । ತಾಳಗತಿಯು ಕೇಳಿಸಿದನು ॥ ೧೪ ॥

ಠೀವಿಠೀವಿಳಿ ಜೆಜೆಜೆಂಜೆ ಝುಂಝುಂಮಿರುಕು । ಚಾವುಚಾವುಲು ಜುಂಜುಮ್ಮೆಂದು ॥
ಆವುಜಕಾರ ಕೇಳಿಸಿದನು ಪಾತ್ರದ । ಭಾವಕಿಯರ ಪಜ್ಜೆ ನಲಿಯೆ ॥ ೧೫ ॥

ರಿಂಚಿಯು ಚಿನುಚಂಪೆ ಕಕ್ಕರು ತುಡುಮು ಪಾ । ವುಂಚಿ ಕಿಂಕಿಣಿಗಳನೆತ್ತಿ ॥
ಜೆಂಜೆಕು ತಕದಿಕ ತೋದಿಗಿ ದಿಮಿಕೆಂದು । ರಂಜನೆ ಮಿಗೆ ಕೇಳಿಸಿದರು ॥ ೧೬ ॥

ಅಂಗೈಯನೆತ್ತಿ ಸನ್ನೆಯೊಳಾಗ ವಾದ್ಯರ । ವಂಗಳ ನಿಲಿಸಿ ಜೋಕೆಯೊಳು ॥
ರಂಗಶೇಖರನೆಂಬ ನಯಕಾರ ಬಂದನಂ । ದಂಗಜರೂಪನಿದಿರಿಗೆ ॥ ೧೭ ॥

ಭಯಕಾರನೆಂಬನಾ ನಾಟ್ಯಾಂಗಕವಿ ಮತ್ತೆ । ನಯಕಾರನೆಂಬನಾ ನೃಪನ ॥
ಪ್ರಿಯೆಯರ ನಾಟ್ಯದೋರುವ ನವದ್ವಿಜನು ವಾ । ಙ್ಮಯನು ಛಾಂದಸವೇಷಧಾರಿ ॥ ೧೮ ॥

ಗಡ್ಡ ಕುಂಡಲ ದೋತ್ರ ನಡುಸುತ್ತಿದಂಬರ । ದೊಡ್ಡ ಮುಂಡಾಸು ಚಂದನದ ॥
ಅಡ್ಡಬೊಟ್ಟಪರಂಜಿಸೆಳವೆವಿಡಿದು ಬಂದು । ಅಡ್ಡಬಿದ್ದನು ರಾಯನಡಿಗೆ ॥ ೧೯ ॥

ಸಕಲಕಲಾಧರ ಸಾರ್ವಭೌಮೋತ್ತಮ । ಸುಕವಿಜನಾಂಭೋಜಭಾನು ॥
ಮಕರಾಂಕನಿರ್ಜಿತರೂಪ ಷಟ್ಖಂಡನಾ । ಯಕನೆ ಬಿನ್ನಹವೆಂದನೊಲಿದು ॥ ೨೦ ॥

ಒಂದನು ನಾನರಿದವನಲ್ಲ ಸುರಲೋಕ । ದಿಂದ ನಿನ್ನನೆ ನೋಡಲೆಂದು ॥
ಬಂದರೊ ಸುರಸುದತಿಯರೆನೆ ಸತಿಯರು । ನಿಂದಿದ್ದರವಧರಿಸೆಂದಾ ॥ ೨೧ ॥

ಹದಿನಾರುಮಂದಿ ಮನುಗಳ ಸಂಪದವೆಲ್ಲ । ಪುದಿದೊಂದುಗೂಡಿ ನಿಂದಂತೆ ॥
ಹದಿನಾರುಪಾತ್ರವಿದ್ದಪುವವಧರಿಸೆಲೆ । ಹದಿನಾರನೆಯ ಮನುಮುಖ್ಯಾ ॥ ೨೨ ॥

ನೀನಿಂದ್ರ ನಿನ್ನ ಮಂತ್ರಿಯು ಸುರಗುರು ಪಾತ್ರ । ದಾ ನಾರಿಯರು ದಿವಿಜೆಯರು ॥
ಈ ನಾಟ್ಯವಿಂದು ಮೋಹಿಸುವುದಂತದ ನೋಳ್ಪೆ । ನಾನೆಂದು ಪೋದ ಕೈಮುಗಿದು ॥ ೨೩ ॥

ರೇಖೆಗಾಣಿಸಿ ಜವನಿಕೆಯಿದಿರೊಳು ರಂಗ । ಶೇಖರ ನಿಂದು ಸೂಚಿಸಲು ॥
ಶಾಖೋಪಶಾಖೆಯೊಳಾಳಾಪಚಂದ್ರಮು । ಯೂಖದೋರಿದರು ನೀರೆಯರು ॥ ೨೪ ॥

ಶಿಖರಿಣಿಸಿಂಜಿನಿಯೆಂದೆಂಬರಿರ್ವರು । ಮುಖರಿಗಾಯಕಿಯರು ನಿಂದು ॥
ಸಖತನ ತಪ್ಪದಾಳಾಪಿಸಿದರು ತಿತ್ತಿ । ಮುಖವೀಣೆಗಳ ಶ್ರುತಿಗೂಡಿ ॥ ೨೫ ॥

ಸರಲಸರಲವಾಗಿ ಸಪುರಸಪುರವಾಗಿ । ತರಲತರಲವಾಗಿ ತೋರಿ ॥
ವಿರಲವಿರಲವಾಗಿ ಠಾಯಿಗಾಣಿಸಿದರು । ಕೊರಳ ಬೆರಳ ಸರಿತದೊಳು ॥ ೨೬ ॥

---

*ಕಾಲು ನೆಲನ ತಾಳವಾರಿಸಿ ಕೈಯೊಳು । ತಾಳವಿಡಿದು ತಾಳಧಾರಿ ॥
ಮೇಲಿಕೆಳಗೆ ತಾಳಗತಿ ಸಂಚು ಜಾರದೆ । ಕೇಳಿಸಿದನು ಸೊಬಗಾಗಿ ॥

ಮಂಜುಲನೇತ್ರವಟ್ಟೆಯು ಸೀಳಿದಂತಪ । ರಂಜಿಸಿರಿಗೆದೆಗೆದಂತೆ ॥
ಕಂಜದ ಕಂಪನುಂಡೇಳ್ವ ತುಂಬಿಯು ಗಾನ । ರಂಜನೆಯೆನೆ ರಾಗಿಸಿದರು ॥ ॥ ೨೭ ॥
ಅಳಿವಂತೆ ರಾಗವ ತುಳಿವಂತೆ ಜಾಡ್ಯವ । ಹಿಳಿವಂತೆ ಮೋಹನರಸವಾ ॥
ತೊಳೆವಂತೆ ಮನವ ಸಂಜೀವನಾಮೃತವನು । ತಳಿವಂತೆ ರಾಗದೋರಿದರು ॥ ೨೮ ॥
ಹಬ್ಬಿಸುವಂತೆ ರಾಗವ ಸ್ವರ್ಗಲೋಕಕೆ । ಯೆಬ್ಬಿಸುವಂತೆ ರೋಮಗಳಾ ॥
ಕಬ್ಬಿನ ಬಿಲ್ಲು ಜೇವೊಡೆದಂತೆ ಪಾಡಿದ । ರೊಬ್ಬೊಬ್ಬರಿಂಪುನುಂಪಿನೊಳು ॥ ೨೯ ॥
ಉಂಚದೊಳಡಕದೊಳೊಡನುಂಚದೊಳು ಸಂಚು । ವಂಚನೆಯೊಳು ಸರಸದೊಳು ॥
ಮಿಂಚುಮಿಂಚುಗಳು ಪಳಂಚಿದಂತಮೃತವ । ಹಂಚುವಂತೊಲೆದು ಹಾಡಿದರು ॥ ೩೦ ॥
ಚುಂಚುಚಂಚಲವಾಗಿ ಚುಮ್ಮುಚುಮ್ಮನೆ ತಾಗಿ । ಹಿಂಚುಮುಂಚಿನ ಸವಿ ತೂಗಿ ॥
ಕಂಚುಮಿಂಚಾಗಿ ರಾಗಿಸಿದರು ಮೈಗೆ ರೋ । ಮಾಂಚನ ಜುಮ್ಮನೇಳ್ವಂತೆ ॥ ೩೧ ॥
ಮುಗುಳ್ವದನಾಗಿ ಮೋಹನವಾಗಿ ಕಂಮಕಂ । ಮಗೆ ಕಂಪು ಸರಿ ಬೆಸನಾಗಿ ॥
ತೆಗೆದ ಕಂಗಳ ಸುರರಾಲಿಸಿದರೆ ದೃಷ್ಟಿ । ಮುಗುಳ್ವಂತೆ ರಾಗದೋರಿದರು ॥ ೩೨ ॥
ನಗೆದೋರಿ ಬಗೆದೋರಿ ನಟಣೆ ನೇವಣೆದೋರಿ । ಹೊಗರು ಬಜಾವಣೆದೋರಿ ॥
ಒಗೆದುಂಚದಿಂದಿಷ್ಟು ಸ್ವರ್ಗದಿಂದಿಂದ್ರನ । ತೆಗೆವಂತೆ ಸೊಗಸಿ ಹಾಡಿದರು ॥ ೩೩ ॥
ಬಂಗಾಳ ತೋಡಿ ವಸಂತವರಾಳಿ ಸಾ । ಳಂಗ ಮುಂತಾದ ರಾಗಗಳಾ ॥
ಚೆಂಗುಪುಪಾಂಗ ದಂಡಿಗೆ ವೇಣು ವೀಣೆಯು । ಸಂಗತವೆಸೆಯೆ ಹಾಡಿದರು ॥ ೩೪ ॥
ಇಂಚರವತ್ತಿತ್ತ ಜಾರದೆ ರಾಗದ । ಮಿಂಚು ಮಾಸದೆ ಸೊಬಗೆಯರು ॥
ಪಂಚಗುರುಗಳ ಪಾಡಿದರು ಪಾತಕ ಹರಿ । ಹಂಚಾಗಿ ಹರಿದುಹೋಹಂತೆ ॥ ೩೫ ॥
ಜಂಜಡವಳಿದ ಸುವಸ್ತು ನಮೋಸ್ತು ಕ । ರ್ಮಾಂಜನಹರ ಜಯವೆಂದು ॥
ಸಿಂಜಿನಿಶಿಖರಿಣಿಯರು ನುತಿಸಿದರು ಸಿ । ರಂಜನಸಿದ್ಧನ ಪಾಡಿ ॥ ೩೬ ॥

ಲಯವಾದ್ಯಗಾನಸಂಗತವಾಗಿ ನೃತ್ಯೋಪ । ನಯನ ರಂಜನೆಯುಗಾಣಿಸುವಾ ॥
ಭಯಕಾರನನುಮತದಿಂದ ಪಾತ್ರದ ಮೃಗ । ನಯನೆಯರನುವಾದರೊಳಗೆ ॥ ೩೭ ॥
ಹದಿನಾರು ಪಾತ್ರಗಳೊಂದೆ ಸಾಲಾಗಿಯೊ । ಡ್ಡಿದ ಕಾಂಡಪಟದ ಮರೆಯೊಳು ॥
ಇದೆಯಿದೆಯೀಗಾಗ ನೃಪನ ನೋಡುವೆವೆಂಬ । ಹೃದಯಲೀಲೆಯೊಳಿದ್ದರಾಗ ॥ ೩೮ ॥
ಎತ್ತಿದ ತೆರೆಯನು ಕೊರಳುತನಕ ಮೆಲ್ಲ । ನೊತ್ತಿ ತಗ್ಗಿಸಿ ಕಾಣಿಸಿದರು ॥
ಮತ್ತಕಾಶಿನಿಯರ ಮೊಗಗಳಿದ್ದುವು ಕಾಂತಿ । ವೆತ್ತ ಕನ್ನಡಿಯ ಸಾಲಂತೆ ॥ ೩೯ ॥
ಇಂಗಡಲಿಂದೇಳ್ವ ಚಂದ್ರರ ಸಾಲೊ ಪ । ದ್ಮಂಗಳ ಸಾಲೊಯೆಂಬಂತೆ ॥
ಹೆಂಗಳ ಮೊಗಗಳೆಸೆದುವೆಳೆಮುತ್ತುಟಿ । ಡಂಗಾದ ತೆರೆಯ ಮೇಲಾಗ ॥ ೪೦ ॥

ಬಳಿಕ ತೆರೆಯ ನಡುಪರಿಯಂತ ಕುಸಿಯಿಸಿ । ಜಲಜಗಂಧಿಯರು ತೋರಿದರು ॥
ನಳನಳಿಸುವ ತೋಳುಗಳು ಮೊಲೆಗಟ್ಟಿನ । ಮೊಲೆಗಳ ಸಾಲು ಮೋಹಿಸಿತು ॥ ೪೧ ॥
ತುಟ್ಟಿ ಸಮ್ಮೋಹಸಮುದ್ರಕೆ ಹೊಂಬೆಟ್ಟ । ದೊಟ್ಟ ಸೇತುವೆಗಟ್ಟಿದಂತೆ ॥
ಬಟ್ಟಮೊಲೆಗಳೊಡ್ಡು ಮೋಹಿಸಿದುವು ಮೊಲೆ । ಕಟ್ಟಿನ ಮರೆಯೊಳೇನೆಂಬೆ ॥ ೪೨ ॥
ನಡುಮುಟ್ಟ ತೆರೆಯಿದ್ದುದಾಗ ತೋಳ್ಗಳನೆತ್ತಿ । ಕಡೆಗಣ್ಣೊಳರಸನ ನೋಡಿ ॥
ಬೆಡಗಿಂದ ಪುಷ್ಪಾಂಜಲಿ ಮಾಡಿದರು ಕಾಮ । ನೊಡನಲರ್ಗಣೆಗಳ ಸೂಸೆ ॥ ೪೩ ॥
ಸ್ತ್ರೀಯರ ಕೈಯ ಪುಷ್ಪಗಳೊಡ್ಡಿದಿದಿರ ಜಂ । ತ್ರಾಯದ ಸೂತ್ರವ ತಾಗೆ ॥
ಛಾಯಾಪ್ರತಿಮೆಗೆ ನೃಪಗಾದಿಜಿನಬಿಂಬ । ಕೊಯ್ಯಾರದಲರ್ಮಳೆಯಾಯ್ತು ॥ ೪೪ ॥
ತೊಟ್ಟನಂಬರದಿಂದ ರತ್ನಪುಷ್ಪದ ಮೂರು । ಪೊಟ್ಟಣ ಹರಿದು ಹೋಹಂತೆ ॥
ಮುಟ್ಟಿಪೂಮಳೆಯಾಯ್ತು ವಿಶ್ವಕರ್ಮನ ಸೂತ್ರ । ತಿಟ್ಟದೊಂದೊಡ್ಡವಣೆಯೊಳು ॥ ೪೫ ॥
ಕೊಡೆ ತೆರೆಯನೆತ್ತಿದರು ರೂಪು ಮರೆಯಾಯ್ತು । ಪಾಡಿದರುಂಚದೊಳೆತ್ತಿ ॥
ನೀಡಗಲದ ಜವನಿಕೆ ತೊಲಗಿತು ಮತ್ತೆ । ಷೋಡಶಪಾತ್ರದೋರಿದುವು ॥ ೪೬ ॥
ಮಡಮಡಯಿದಿರಾಗಿ ತೊಡೆಕಾಸೆ ಪಸರಿಸೆ । ನಡುವಿನೊಳಿಟ್ಟು ಹಸ್ತಗಳಾ ॥
ಕಡುಕೊಂಕಿದಂಗವಾಗಿಯು ಕಣ್ಗೆ ಸವಿಯ ಸಾ । ಲಿಡೆ ನಿಲುಕಡೆಯ ತೋರಿದರು ॥ ೪೭ ॥
ಪಂಚರತ್ನದ ಕಾಸೆ ನವರತ್ನಭೂಷಣ । ಮಿಂಚುಮುತ್ತಿನ ಮೊಲೆಗಟ್ಟು ॥
ಹೊಂಚಿ ರತ್ನದೊಳು ನಿರ್ಮಿಸಿದ ಪುತ್ತಳಿಗಳ । ಸಂಚಯದಂತಿದ್ದರಾಗ ॥ ೪೮ ॥
ಪುಲ್ಲಿಪಟ್ಟೆಯೊಳು ಸಂಧ್ಯಾರಾಗದೊಳು ಕಾಗಿ । ನಲ್ಲಿದುರುಂಗಿಪಟ್ಟೆಯೊಳು ॥
ಚಲ್ಲಣ ಕಾಲಕುಪ್ಪಸ ಕಾಸೆ ಮೊಲೆಗಟ್ಟು । ಚಲ್ಲಕಾತಿಯರಿಗೊಪ್ಪಿದುವು ॥ ೪೯ ॥
ಎಣ್ಣೆಗಪ್ಪಿನ ಮೈಗೆ ಕರಿದಿನ ಮೈಗೆ ಹೊಂ । ಬಣ್ಣದ ಮೈಗೊಪ್ಪುವಂತೆ ॥
ಸಣ್ಣ ಬಣ್ಣದ ಕಾಸೆ ಮೊಲೆಗಟ್ಟುಗಳು ಹಲ । ವಣ್ಣದೊಳೆಸೆದುವೇನೆಂಬೆ ॥ ೫೦ ॥
ಹಳದಿಬಿಳಿದುಕೆಂಪುಕರಿದುಪಚ್ಚೆಯ ಪಟ್ಟೆ । ಯೊಳಗವರವರಂಗವರಿದು ॥
ಮೊಲೆಗಟ್ಟು ಕಾಸೆ ಚಲ್ಲಣ ಕಾಲಕುಪ್ಪಸ । ವಳವಟ್ಟುವತಿಮೆರಹಾಗಿ ॥ ೫೧ ॥
ಮುತ್ತಿನ ಬೊಟ್ಟು ಮುತ್ತಿನ ಸರ ತುರುಬಿನ । ಮುತ್ತಿನ ಬಲೆ ಮುತ್ತಿನೋಲೆ ॥
ತತ್ತ ಮೂಗುತಿಯಿಂದ ಮೊಗಗಳಿದ್ದುವು ತಾರೆ । ಮುತ್ತಿದ ಬಹುಚಂದ್ರರಂತೆ ॥ ೫೨ ॥
ಮಿಂಚುಮೆರಹುದೋರಿ ಮೊಲೆಗಟ್ಟು ಕೀಲಿಸಿ । ಪಂಚರತ್ನದೊಳೊಪ್ಪುವಾಗ ॥
ಪಂಚರತ್ನಗಳ ಕುಂಭಗಳ ಸಾಲಂತೆ ಪ । ಳಂಚಿದುವವರ ಮೊಲೆಗಳು ॥ ೫೩ ॥
ನೀಲಮೌಕ್ತಿಕ ಪುಷ್ಯರಾಗ ಮಾಣಿಕ ಪಚ್ಚೆ । ಕೀಲಿಸಿ ಕಾಸೆಕಾಸೆಯೊಳು ॥
ಲೋಲನೇತ್ರೆಯರಿಗೊಪ್ಪಿದುವಿಂದ್ರಚಾಪಮ । ಹಾಲತೆ ಹಬ್ಬಿದಂದದೊಳು ॥ ೫೪ ॥

ಜವ್ವನಜವ್ವನಕೊಪ್ಪುವಲಂಕಾರ । *ಜವ್ವರಿಸುವ ಹಾವಭಾವ ॥
ಕವ್ವರಿಸುವ ಕಾಂತಿರಸದಿಂದ ನೃಪನ ಕ । ಣ್ಣವ್ವಳಿಸುವವೊಲೆಸೆದರು ॥ ೫೫ ॥

ಬೆಂಗಡೆಯೊಳು ನಿಂದು ಥಾಳಿಪ ನಿಡುಚವು । ರಂಗಳಿಂದೆಡಬಲದೊಳಗೆ ॥
ಹೊಂಗೊರಳಿನ ಗಾನವೆಸೆಯೆ ಮೊರೆದರು ತ್ರಿ । ಭಂಗಿಯೊಳ್ನಿಂದು ಸಾಲಾಗಿ ॥ ೫೬ ॥

ಬೇರೆಬೇರೊಂದೊಂದು ಪರಿಯ ಸಿಂಗರದಿಂದ । ನೀರೆಯರೆಸೆದರಾ ನೃಪಗೆ ॥
ಆರುಖಂಡಗಳೇಕೆಯೀ ಪಾತ್ರದ ಹದಿ । ನಾರುಖಂಡವೆ ಸಾಲ್ವುದೆನಿಸಿ ॥ ೫೭ ॥

ನಡುವಿನೊಳಿಟ್ಟ ಹಸ್ತವ ತೆಗೆದೊಯ್ಯನಿ । ಟ್ಟೆಡೆವೊಲೆಗಳೊಳಿರಿಸಿದರು ॥
ನಡೆನೋಡಿದನು ರಾಯ ಕಳಸಕೆ ತಳಿರ ಸಂ । ಗಡಿಸಿದರೆಂದು ನೆನೆವುತ ॥ ೫೮ ॥

ಮೊಲೆಯ ಮೇಲಣ ಕೈಯ ತೆಗೆದು ನೀಡಿದರೆಡ । ಬಲಕೆ ಚಿಮ್ಮಿಸಿದರು ಬೆರಳಾ ॥
ಕೆಲಬಲದೊಳಗಿದ್ದ ಪ್ರತಿಮೆಗಳಿಗೆ ಜೀವ । ಕಳೆಯ ಚಿಮ್ಮಿಸಿದರೆಂಬಂತೆ ॥ ೫೯ ॥

ಕಾಲು ಕದಲಿ ಮೆಲ್ಲನೊಲೆದು ನಡೆದರು ತಂ । ಗಾಳಿಗೊಲೆವ ಲತೆಯಂತೆ ॥
ಸಾಲುಗೊಂಡುದ ಬಿಟ್ಟು ಬಟ್ಟಿತಾದರು ಕಮ್ಮ । ಗೋಲನ ಚಕ್ರದಂದದೊಳು ॥ ೬೦ ॥

ಸುಳಿಯುಳಿದೊಂದು ಸಾಲಾದರು ಮತ್ತೆ ಭೂ । ತಳಪತಿಗಿದಿರಾಗಿ ಕೂಡೆ ॥
ಘಳಿಲನೆ ಹದಿನೈದು ಪಾತ್ರ ಪೋದುವು ಹಿಂದ । ಕುಳಿದುದು ಮುಂದೊಂದು ಪಾತ್ರ ॥ ೬೧ ॥

ಮಂಗಲವತಿಯೆಂಬ ಪಾತ್ರದಂಗನೆ ನಾಟ್ಯ । ರಂಗದೊಳೊಲೆದಾಡಿ ನೃಪನ ॥
ಕಂಗಳಿಗಿಚ್ಛೆಯಹಂತೆ ನಟಿಸುತಿರ್ದ । ಳಂಗವರಿದು ಭಾವವರಿದು ॥ ೬೨ ॥

ನಿಲ್ವಳು ಗಾನವ ಕೇಳುತ ಧ್ಯಾನಕೆ । ನಿಲ್ವ ಯೋಗಿಯ ನೆನೆಯಿಸುತ ॥
ಸಲ್ವಳು ಚಳಚಳನೆಡಬಲಕಂಗಜ । ನೊಲ್ವ ಖಡ್ಗವ ಜಡಿವಂತೆ ॥ ೬೩ ॥

ಮಾರನ ಭಾಗ್ಯವೊಂಮಾರೆಂದು ತೋರ್ಪಂತೆ । ನಾರಿ ಭುಜಗಳ ನೀಡುವಳು ॥
ಸಾರಿ ಸುತ್ತುವಳರಸನ ಕಂಡ ಕಣ್ಣೊಳ । ಲೀ ರೀತಿಯೆಂದು ತೋರ್ಪಂತೆ ॥ ೬೪ ॥

ಉಪ್ಪರಿಸುವಳೂರ್ಧ್ವಲೋಕಕೆ ಹೋಹಂತೆ । ಬಪ್ಪಳು ದಿವಿಜೆ ಬಹಂತೆ ॥
ದೊಪ್ಪುದೊಪ್ಪನೆ ಪಜ್ಜೆಯಿಡುವಳು ದುಗುಡವ । ಸೊಪ್ಪುಸೊಪ್ಪನೆ ತುಳಿವಂತೆ ॥ ೬೫ ॥

ಕಿರುನಗೆವೆರಸಿ ರಾಯನ ನೋಡುವಳು ಕಣ್ಣ । ಬರನೆಲ್ಲ ಬರತು ಹೋಹಂತೆ ॥
ಹೊರಚಾರಿವೊಳಚಾರಿಯೊಳು ಬಂದಳಾಸರ । ಪೊರಮಡಿಪೊಲು ಮನೆಯಿಂದ ॥ ೬೬ ॥

ಗದಗದಿಸುವ ಮೊಲೆ ಗಡಗಡಿಸುವ ತೊಡೆ । ಕೆದರ್ವ ಥಾಳದ ಕಡೆಗಣ್ಣು ॥
ಮದನಾನುರಾಗವ ಸೂಸುವ ಮೊಗದಿಂದ । ಮದವತಿ ನೃತ್ಯವಾಡಿದಳು ॥ ೬೭ ॥

*ಚವ್ವಲಿಸುವ

ಮೊಗದಲ್ಲಿ ಹಾವ ಮನಸಿನಲ್ಲಿ ಭಾವ ಪು । ರ್ಬುಗಳಲ್ಲಿ ವಿಭ್ರಮ ಮತ್ತೆ ॥
ಬಗಸೆಗಣ್ಗಳೊಳು ವಿಲಾಸವೆಸೆಯೆ ರಸ । ಮೊಗುವಂತೆ ಪಾತ್ರವಾಡಿದಳು ॥ ೧೮ ॥

ತೋಳವೊದಲು ಮಗಮುಗಿಸಿ ಹೊರಗೆ ಬೀರೆ । ವೀಳೆಯಗೆಂಪು ಪೆಂಪೆಸೆಯೆ ॥
ಬಾಲೆ ತನ್ನರಸನ ಕಂಡು ಮೋಹನದೊಂದು । ತೂಳವೆದ್ದಂತೆ ಹೊಳೆದಳು ॥ ೧೯ ॥

ಘುಳುಘುಳಿಸುವ ತಾಳಡೌಡೆಯಾವುಜಕೆ ಮ । ದ್ದಳೆಚಿನುಚಂಪೆಯ ಧ್ವನಿಗೆ ॥
ಮೊಳಗಿನ ಧ್ವನಿಗೆ ಕುಣಿವ ಸೋಗೆನವಿಲಂತೆ । ನಲಿದು ನರ್ತಿಸಿದಳಾ ನೀರೆ ॥ ೨೦ ॥

ಕಿನ್ನರಿ ದಂಡಿಗೆ ತಿತ್ತಿ ಕೊಳಲು ಭಿನ್ನ । ಭಿನ್ನರುಚಿಯ ಗಾನರಸಕೆ ॥
ಚೆನ್ನಚೆನ್ನನೆ ನಾಗಸರಕೆ ನರ್ತಿಪ ನಾಗ । ಕನ್ನೆಯಂತಾಡಿದಳವಳು ॥ ೨೧ ॥

ಜಂಗಮಲತೆಯಂತೆ ಜಾತಿರೀತಿಯೊಳು ನಾ । ಟ್ಯಾಂಗದ ನಟಣೆಗಾಣಿಸುತ ॥
ಮುಂಗಡೆಯೊಳಗಿದ್ದು ಹಿಂಗಡೆಗೊಲಿದಾಗ । ಮಂಗಲವತಿ ಹೋದಳತ್ತ ॥ ೨೨ ॥

ಬಂದಳು ಕೂಡೆ ಪದ್ಮಿನಿಯೆಂಬವಳಾಡಿ । ಹಿಂದಕೆ ಸಾರ್ದಳು ಮತ್ತೆ ॥
ಚಂದನವತಿ ಬಂದು ಆಡಿ ಹೋದಳು ಕುರು । ವಿಂದಾನಿ ನಟಿಸಿ ಸಾಗಿದಳು ॥ ೨೩ ॥

ಮಕರಾಣಿಚೂಡಾಣಿಹಂಸಿನಿಮಿಂಚಿನಿ । ಮುಕುರಾಣಿರೂಪಾಣಿಯೆಂಬ ॥
ಪಿಕನಿನದೆಯರೊಬ್ಬರೊಬ್ಬರೊಲ್ದಾಡಿ ಹಿಂ । ದಕೆ ಸಾರಿದರು ನಲ್ಮೆಯಿಂದ ॥ ೨೪ ॥

ಚಂದ್ರಾಣಿಪುಷ್ಪಾಣಿಸುಪ್ಪಾಣಿಕಟ್ಟಾಣಿ । ಮಂದ್ರಾಣಿಮಧುರಾಣಿಯೆಂಬ ॥
ಚಂದ್ರನ ಷೋಡಶಕಲೆಗಳಂದದ ಪೆಣ್ಗ । ಳಿಂದ್ರಾಭನಿದಿರೊಳಾಡಿದರು ॥ ೨೫ ॥

ಒರ್ವೊರ್ವರಾಗಿ ಬಂದೊರ್ವೊರ್ವ್ವ ತಾವೆಲ್ಲ । ರುರ್ವಿಂದ ನಟಿಸಿದರಹುದು ॥
ಒರ್ವಳು ಕೊಂಡುದನೊರ್ವಳು ಬೆರಸದ । ಪೂರ್ವನಾಟಕವ ತೋರಿದರು ॥ ೨೬ ॥

ಚೊಕ್ಕವೆಂಗಳು ಮತ್ತೆ ತಾವೆಲ್ಲ ತಮ್ಮೊಳು । ಲೆಕ್ಕಿಸಿಕೊಂಡೆಂಟುಮಂದಿ ॥
ದಿಕ್ಕನ್ನಿಕಾನಾಟ್ಯಕೆಂದು ರಂಗವ ಬಂದು । ಹೊಕ್ಕರೇನೆಂಬೆನಾ ಸೊಬಗಾ ॥ ೨೭ ॥

ಇಂದ್ರ ಮುಂತಾದ ದಿಕ್ಪಾಲರ ಭಾಗ್ಯ ರಾ । ಜೇಂದ್ರನ ಸಾರ್ದುದೊಯೆನಿಸಿ ॥
ಇಂದ್ರಾಗ್ನಿ ಮೊದಲಾಗಿಯೆಂಟುದಿಕ್ಕಿನೊಳು ಮ್ಯ । ಗೇಂದ್ರಮಧ್ಯೆಯರಿದ್ದರಾಗ ॥ ೨೮ ॥

ಎಂಟುಪಾತ್ರವುಯೆಂಟುದಿಕ್ಕಿನೊಳಗೆ ನಿಂದು । ನಾಂಟಲೊಬ್ಬೊಬ್ಬರ ನೋಡಿ ॥
ಮಂಟಪದೊಳು ಸುತ್ತಿ ಸುಳಿದರೊಲ್ಮೆಯ ನಡೆ । ಗೋಂಟೆಯೊಯೆಂಬ ರೀತಿಯೊಳು ॥ ೨೯ ॥

ಸುತ್ತ ನಲಿದು ನಾಟ್ಯಶಾಲೆಯೊಳೆಲ್ಲರು । ಮೊತ್ತವಾಗಿರೆ ಕಂಡು ತಮ್ಮ ॥
ಮೊತ್ತದಿಂದೊಬ್ಬರಿಬ್ಬರು ಮುಂದೆ ನಡೆದೊಂದು । ಬಿತ್ತರವೆನೆ ನಟಿಸಿದರು ॥ ೩೦ ॥

ನಡೆವರು ಭರತೇಶ ಮುಂದೆ ದಿಗ್ವಿಜಯಕೆ । ನಡೆವುದ ಸೂಚಿಸುವಂತೆ ॥
ಪೊಡವಿಯು ಸಾಧಿಸಿ ಪುರವ ಹೊಗುವುದ ಕ । ನ್ನಡಿಸಿ ಸಾರುವರು ಮತ್ತವರು ॥ ೮೧ ॥

ಹೋಗುವರೊಂದೊಂದು ದಿಕ್ಕಿಗೆ ತಿರುಗುವ । ರಾಗಳೆ ನೃಪಗಿನ್ನು ಮುಂದೆ ॥
ಮಾಗಧೇಂದ್ರನ ಮೇಲೆ ವರತನುವಿನ ಮೇಲೆ । ಹೋಗಿ ಬಹುದ ಸೂಚಿಪಂತೆ ॥ ೮೨ ॥

ಲಂಘಿಸುವರು ಮುಂದೆ ನೃಪನ ವಾಹನರತ್ನ । ಲಂಘಿಸುವುದ ಸೂಚಿಪಂತೆ ॥
ಜಂಘೆಯ ಗೆಜ್ಜೆ ಝುಲಿರುಝುಲಿರೆನೆ ನಾಟ್ಯ । ದಂಗವಣೆಯೊಳು ಸುಳಿವರು ॥ ೮೩ ॥

ನಾಟಿ ಚಕ್ರೇಶ್ವರ ಮುಂದಿನ್ನು ವಜ್ರಕ । ವಾಟವ ತಿವಿವ ಠೀವಿಯೊಳು ॥
ನಾಟಕದೊಳಗೆ ವೈಯೊಲೆದೊತ್ತಿ ಚರಣಸ । ಘಾಟಿಕೆದೋರ್ಪರೋಜೆಯೊಳು ॥ ೮೪ ॥

ಹಮ್ಮಿಂದ ಮ್ಲೇಚ್ಛರಾಜರು ಮುಂದೆ ಕರೆವೊಂದು । ಹೊಮ್ಮಳೆಯನು ಸೂಚಿಪಂತೆ ॥
ಒಮ್ಮೆ ಸೂತ್ರವನೊತ್ತಿ ನೃಪತಿಗೆ ಪನ್ನೀರ । ಚಿಮ್ಮಿಸುವರು ಮೇಲಣಿಂದ ॥ ೮೫ ॥

ವಿಭುವಿಗೆ ಗಂಗಾಸಿಂಧುಕೂಟದೊಳು ಮುಂ । ದಭಿನುತಸ್ನಾನಮಪ್ಪುದನು ॥
ಅಭಿನಯಿಸುವವೊಲು ನಗೆಯ ಬೆಳ್ದಿಂಗಳಿಂ । ದಭಿಷೇಕಮಾಳ್ಪರು ನೃಪಗೆ ॥ ೮೬ ॥

ಕಂತುರೂಪಗೆ ವಿಜಯಾರ್ಧದೇವನು ಹಿಮ । ವಂತದೇವನು ತೊಡಿಗೆಗಳಾ ॥
ಮುಂತಿಡುವುದ ತೋರುವರು ತಮ್ಮ ಕೆಂಬಲ್ಲ । ಕಾಂತಿ ಕಂಗಳ ಕಾಂತಿಯಿಂದ ॥ ೮೭ ॥

ಮುಂದೆ ರಾಯಗೆ ವಿಜಯಾರ್ಧದ ಸ್ತ್ರೀರತ್ನ । ಬಂದು ಸೇರುವುದ ತೋರ್ಪಂತೆ ॥
ಮುಂದೆ ನರ್ತಿಸಿ ನಿಂದ ನೀರೆಯೊತ್ತಿಗೆ ಮೊತ್ತ । ದಿಂದ ಮತ್ತೊರ್ವಳೈದಿದಳು ॥ ೮೮ ॥

ತೊಡರಿದಂದುಗೆ ಹೊನ್ನಸಂಕಲೆ ಮೊಲೆ ಕುಂಭ । ನಿಡಿದೋಳು ಸುಂಡಿಲಂತೆಸೆಯೆ ॥
ಜಡಿದೆಂಟುಪಾತ್ರಗಳೆಂಟುದಿಕ್ಕಿಗೆ ಪಜ್ಜೆ । ಯಿಡುವರು ದಿಗ್ಗಜದಂತೆ ॥ ೮೯ ॥

ಸೊಗಸಿ ರಾಯನ ನೋಡುತಾಡುತ ಮೊಗವಡ್ಡ । ದೆಗೆದು ತಮ್ಮೊಳು ತಾವು ನೋಡಿ ॥
ನಗುತ ಸುತ್ತೊಲೆವರೀ ಸಿರಿಯುಂಟೆ ನಿಮಗೆಂದು । ನಗುವಂತೆ ದಿಗ್ವನಿತೆಯರಾ ॥ ೯೦ ॥

ಒರ್ವಳಾಡುವಳೊಮ್ಮೆಯಿರ್ವರಾಡುವರೊಮ್ಮೆ । ಕೊರ್ವಿ ಮೂವರುನಾಲ್ವರಾಡಿ ॥
ಪೂರ್ವಪೂರ್ವಕೆ ಮತ್ತೆ ಹೊಸಹೊಸಪರಿಯಾಗಿ । ಸರ್ವರು ನಟಿಸುವರೊಮ್ಮೆ ॥ ೯೧ ॥

ಬಿನ್ನಾಣದಿಂದಷ್ಟದಿಗ್ವನಿತೆಯರು ದಿ । ಕ್ಕನ್ನಿಕಾನಾಟ್ಯವ ನಟಿಸೆ ॥
ಮುನ್ನಿನೆಡೆಗೆ ಹೋಗುವಂತೆ ಹೋದರು ತಾವು । ಮುನ್ನಿನಂದದೊಳು ಹಿಂಗಡೆಗೆ ॥ ೯೨ ॥

ದಳದುಳನಾಗಳೆ ಕೂಡೆಂಟು ಮಂದಿ ಕೋ । ಮಲೆಯರು ರಾಯನ ಮುಂದೆ ॥
ಜಲಕನ್ನಿಕಾನಾಟ್ಯಕೆಂದು ನಿಂದರು ಮುಝು । ಚೆಲುವನದೇನ ಬಣ್ಣಿಪೆನು ॥ ೯೩ ॥

ಅರ್ಧಚಂದ್ರಾಕಾರದುಪಸಮುದ್ರಂಬೊಲು । ಸ್ಪರ್ಧನಿ ನಿಂದುದೊಯೆನಿಸಿ ॥
ಅರ್ಧಚಂದ್ರಾಕೃತಿಯಾಗಿಯೆಣ್ಬರು ಪಟ್ಟ । ವರ್ಧನನಿದಿರೊಳೊಪ್ಪಿದರು ॥ ೯೪ ॥

ಆಕಾರ ಪೆರೆಯಾದ ಮೇಲೆ ನೀರಿಂಪಾಗ । ದೇಕೆ ತಾನುಪ್ಪಾದುದೆಂದು ॥
ಆ ಕಡಲನು ತೊಲಗಿಸಿ ಪೆರೆಯೊಲು ನಿಂದ । ನಾಕಗಂಗೆಯೊಲಿರ್ದರಾಗ ॥ ೯೫ ॥

ಲಾವಣ್ಯ ಜಲ ತೋಳು ತೆರೆ ನಾಭಿ ಸುಳಿ ಚಂಚ । ಲಾವಲೋಕನಯೆಳೆಮೀನು ॥
ಆ ವನಿತೆಯರಿದ್ದರಿವರು ಭಾವಿಸೆ ಜಲ । ದೇವಿಯರೆನೆ ತಕ್ಕರೆನಿಸಿ ॥ ೯೬ ॥

ಆರೆವೆರೆಯಾಕಾರ ತಪ್ಪದೆ ನಡೆದರು । ನರಪತಿಗಿದಿರಾಗಿ ನಲಿದು ॥
ತಿರುಗಿದರಾಗಲೆ ಡೊಂಕನಳಿದು ಗಂಗೆ । ಹರಿವಂತೆ ನೇರದೊಳಿತ್ತು ॥ ೯೭ ॥

ರಂಗದೊಳೆಲ್ಲರು ವೊತ್ತವಾಗಿರೆ ನಿಂದು । ಹೆಂಗಳು ಮತ್ತೆಂಟುದೆಸೆಗೆ ॥
ದಾಂಗುಡಿಯಿಟ್ಟು ಸಾಲ್ವಿಡಿದಾಗ ಶೃಂಗಾರ । ಗಂಗೆ ಪರಿವವೊಲಾಡಿದರು ॥ ೯೮ ॥

ತೆರೆಯುನಟ್ಟುವ ತೆರೆಯಂತೊಬ್ಬರೊಬ್ಬರ । ಬೆರಸಿ ಬೆನ್ನಟ್ಟಿ ಹರಿವರು ॥
ಮುರಿದೆಂಟುಮುಂದಿಯು ಸುಳಿಯಂತೆ ಭುಗುಭುಗ । ನಿರದೆ ಸುತ್ತುವರೇನನೆಂಬೆ ॥ ೯೯ ॥

*ಡೊಂಕಾಗಿ ಹರಿವರೊಮ್ಮೊಮ್ಮೆಯು ನೇರದೊ । ಳಾಂಕೆಗೊಂಡೊಮ್ಮೆ ಹರಿವರು ॥
ಭೋಂಕನುಚ್ಚಳಿಸುವ †ಸುಳಿಹೊಳೆಯೊಯೆಂದು । ಬಿಂಕವ ತೋರ್ಪರಾಟದೊಳು ॥ ೧೦೦ ॥

ಮಿರುಮಿರನಾದ ಮೈಹೊಳಹಿಂದ ತೆರೆಗಟ್ಟಿ । ನಿರಿದೇಳ್ವ ಹೊಂಗಾಸೆಯಿಂದ ॥
ಕುರುಕುರಮೆಟ್ಟಿ ರಂಗದೊಳು ತಂಪಿನ ಬಯು । ಲ್ಬೊರೆ ಹೊಳೆವಂತೆ ಹೊಳೆವರು ॥ ೧೦೧ ॥

ಲುಳಿತಕಿಂಕಿಣಿನಾದ ಕಂಕಣಧ್ವನಿ ಕೈಯ । ಬಳೆಗಳುಲುಹು ಕಳಬಳಿಸೆ ॥
ಗಳಗಳ ಗುಳುಗುಳ ನಲಿವುತ ಹರಿವ ತ । ಣ್ಬೊಳೆಯಂತೆ ಹರಿದರೇನೆಂಬೆ ॥ ೧೦೨ ॥

ನೆಲನನೆಯದ ಗಂಗೆ ಕಣ್ಣುಮೀನಿನ ಗಂಗೆ । ಹಲವು ಬಣ್ಣದ ರಸಗಂಗೆ ॥
ಮೊಲೆಮುಡಿವೆತ್ತ ಗಂಗೆಗಳೆಲ್ಲಿ ಬಂದುವೆಂ । ದೊಲೆದೊಲೆದರಸ ನೋಡಿದನು ॥ ೧೦೩ ॥

ಅರಸನ ಲಾವಣ್ಯಜಲಧಿಯೊಳಾ ಸತಿ । ಯರ ದಿಟ್ಟಿಮೀಂಗಳಾಡುವುವು ॥
ತರುಣಿಯರಂಗಕಾಂತಿಯ ಹೊಳೆಗಳೊಳು ಭೂ । ವರನ ಕಣ್ಮಚ್ಚವಾಡುವುವು ॥ ೧೦೪ ॥

ಭರತೇಶನಿದಿರಾಗಿ ನಡೆವರು ಶೃಂಗಾರ । ಶರಧಿ ಮೇಲ್ಗವಿದುದೆಂದೆನಿಸಿ ॥
ದೊರೆಯ ಗಂಭೀರವ ಕಂಡಬ್ಧಿ ನಾಣ್ಚಿ ಹಿಂ । ತಿರುಗುವಂತಿತ್ತ ಜಾರುವರು ॥ ೧೦೫ ॥

ತಾವರೆಯಂದದ ಹಸ್ತಪಾದಗಳಿಂದ । ತಾವರೆಮೊಗಮೊಲೆಯಿಂದ ॥
ತಾವರೆಗೊಳನೆದ್ದು ನರ್ತಿಸುವಂದದೊ । ಳಾ ವಧುಗಳು ನಟಿಸಿದರು ॥ ೧೦೬ ॥

ನೆಯ್ದಿಲಂದದ ಕಂಪು ನೆಯ್ದಿಲುವಣ್ಣ ಕ । ಣ್ನೆಯ್ದಿಲುಗಣ್ಣ ಪೆಣ್ಣುಗಳು ॥
ನೆಯ್ದಿಲುಗೊಳನೆದ್ದು ಕುಣಿವಂತೆ ಕೆಲಬರು । ಮೆಯ್ದೋರಿ ನೃತ್ಯವಾಡಿದರು ॥ ೧೦೭ ॥

---

* ಕೊಂಕುಕೊಂಕಾಗಿ ಹರಿದರೊಮ್ಮೆ    † ರಳೆವರು ಹೊಳೆಯೊಂದು

15*

ತಕದಿಕ ಕಿಣತೋಂಗ ತದಿಕಟ ದಿಮಿದಿಮಿ । ದಿಕುದಿಕು ದಿಮಿಕೆಂಬ ಧ್ವನಿಗೆ ॥
ಚಕಚಕನತ್ತಿತ್ತ ಹಸ್ತಪಾದಗಳ ಸೂ । ಚಕದೋರಿದರು ಸೊಬಗಾಗಿ ॥ ೧೦೮ ॥

ಕಾಂಚನರತ್ನದಾಭರಣದ ಕಿರಣ ಪ । ಳಂಚೆ ನಿಜಾಂಗಕಾಂತಿಯೊಳು ॥
ಮಿಂಚಿನ ಲತೆಯಂತೆ ಮಿಣಿಮಿಣಿಸುತಕಂಚು । ಮಿಂಚಾಗಿ ಹೊಳೆವರತ್ತಿತ್ತ ॥ ೧೦೯ ॥

ಮೊಗರಸದಿಂದ ಕಣ್ಬೆಳಗಿನ ಹೊಳೆಯಿಂದ । ನಗೆಯದೊಂದಮೃತಧಾರೆಯೊಳು ॥
ಮೊಗೆಮೊಗೆದಭಿಷೇಕಮಾಡಿದರೊಲ್ದು ರಾ । ಯಗೆ ಜಲದೇವಿಯರಂತೆ ॥ ೧೧೦ ॥

ಬಳಿಕಿಷ್ಟು ಮೈ ಬೆಮರಿದುದಾಗ ನೋಳ್ಪಾಗ । ಜಲದಿಂದ ಪೊರಮಟ್ಟು ಬಂದ ॥
ಜಲಕನ್ನೆಯರೆ ತಪ್ಪರಿವರೆಂಬ ತೆರದೊಳು । ಜಲಜಗಂಧಿನಿಯರೊಪ್ಪಿದರು ॥ ೧೧೧ ॥

ನಯನುಂಪು ಮಿಗೆ ಜಲಕನ್ನಿಕಾನಾಟ್ಯಾತಿ । ಶಯವನಾ ಷಟ್ಖಂಡಪತಿಯು ॥
ನಯನದಿದಿರೊಳಾಡುತಿದ್ದು ಸತಿಯರಾಗ । ಬಯಲಾದರಮರಿಯರಂತೆ ॥ ೧೧೨ ॥

ತಾಳಮೇಳವನನುಗೊಳಿಸಿ ಸಂಗೀತದ । ಬಾಲೆಯರಾಯೆಂದು ಕೂಡೆ ॥
ಆಳಾಪದೆಗೆದರು ಕಾಂಬೋದಿರಾಗವ । ನಾಲಿಸಿ ನೃಪ ತಲೆದೂಗೆ ॥ ೧೧೩ ॥

ಪಾತ್ರವಾಡಿದ ಸತಿಯರಿಗೆ ತಂಪಹಂತೆ । ಧಾತ್ರೀಶಗಿಂಪಾಗುವಂತೆ ॥
ಸೂತ್ರವ ತೆಗವಂತೆ ರಾಗವನೆತ್ತಿ ಪ । ವಿತ್ರಾತ್ಮಕಲೆಯ ಪಾಡಿದರು ॥ ೧೧೪ ॥

ಬೆಳಗಿನ ಬೊಂಬೆ ಬೆಳ್ದಿಂಗಳ ಬೊಂಬೆ ತಿಂ । ಗಳ ಬೊಂಬೆ ಜೊನ್ನದ ಬೊಂಬೆ ।
ತಿಳಿವಿನ ಬೊಂಬೆ ಬೋಧದ ಬೊಂಬೆಯೆಂದಾತ್ಮ । ಕಲೆಯ ಕನ್ನಡಿಸಿ ಹಾಡಿದರು ॥ ೧೧೫ ॥

ಸುರರ ಸೋಲಿಸುವ ಸೊಬಗಿನೆಮ್ಮ ಭರತಭೂ । ವರನ ಚಿತ್ತವನು ಸೋಲಿಸಿದ ॥
ಗುರುಹಂಸನಾಥ ಮಹಾದೇವ ನಮ್ಮನು । ದ್ಧರಿಸೆಂದು ಸೊಗಸಿ ಹಾಡಿದರು ॥ ೧೧೬ ॥

ತೋರುತ ಮರಸುತ ಚಕ್ರಿಯ ಮನದಲ್ಲಿ । ಕೂರುಗೊಂಡಿಹ ಹಂಸನಾಥಾ ॥
ತೋರು ಸನ್ಮತಿಯನೆಂಬಾಗ ಬಂದರು ಹದಿ । ನಾರು ಪಾತ್ರಗಳೊಂದುಗೂಡಿ ॥ ೧೧೭ ॥

ಹಂಸಕಲಾಂಭೋಜಹಂಸನೆನಿಪ ನೃಪ । ಹಂಸನ ಸಮ್ಮುಖದಲ್ಲಿ ॥
ಹಂಸಮಂಡಳಿಯೆಂಬ ನಾಟ್ಯವ ತೊಡಗಿದ । ರೇಂ ಸೊಬಗಿಹುದೊಯಿನ್ನಲ್ಲಿ ॥ ೧೧೮ ॥

ಈರೆಂಟುಪಾತ್ರಗಳೀರೆಂಟುದಿಕ್ಕಿನೊ । ಳೋರಣವಿಡಿದಾಗ ನಿಂತು ॥
ಆ ರಂಗವೆಂಬ ಪದ್ಮದ ಹದಿನಾರೆಸ । ಳೋರಗೆಯಾಗಿ ಮೆರೆದರು ॥ ೧೧೯ ॥

ಉಳಿಯಲಿನ್ನಾ ಮಾತು ನಾಟ್ಯಮಂಟಪವೆಂಬ । ಕೊಳದೊಳೆಸೆವ ಹದಿನಾರು ॥
ಜಲಜಗಳೊಯೆನೆ ಬಳಸಿ ನಿಂದಿದ್ದರಾ । ಜಲಜಮುಖಿಯರು ಗಾಡಿಯೊಳು ॥ ೧೨೦ ॥

ಮಣಿಮಂಟಪವೆ ಕೊಳ ಸತಿಯರೆ ಕಮಲಗ । ಳೆಣಿಸೆ ರಾಯನೆ ರಾಜಹಂಸಾ ॥
ಪ್ರಣುತಸಂಧ್ಯಾವಂದನೆಗೆ ಕುಳಿತೊಬ್ಬಬ್ರಾ । ಹ್ಮಣನೆನಲಿದ್ದನಾ ಮಂತ್ರಿ ॥ ೧೨೧ ॥

ಷೋಡಶವನಿತೆಯರೆಡಚಾರಿಬಲಚಾರಿ । ಗೂಡಿ ತಿರುಗಿದರೊವ್ಮೊವ್ಮೆ ॥
ಮೂಡಪಡುವಲೊವ್ಮೆ ತೆಂಕಬಡಗಲೊವ್ಮೆ । ನೀಡಿ ಸಾಲಾದರು ಮತ್ತೆ ॥ ೧೨೨ ॥

ಪೆಣ್ಣಂಚೆಗಳು ಕೊಳದೊಳು ಸುಳಿವಂತೆಳೆ । ವೆಣ್ಣುಗಳಾ ನೆಲದೊಳಗೆ ॥
ಪಣ್ಣೆಪಣ್ಣೆಯೊಳು ಸುಳಿದು ಭರತೇಶಗೆ । ಕಣ್ಣಹಬ್ಬವ ಕಾಣಿಸಿದರು ॥ ೧೨೩ ॥

ಹಂಸೆಗೆ ನಡೆಯ ಕಲಿಸುವುದಾ ಸತಿಯರ । ಸಂಸಿದ್ಧ ಕುಲಬಿರಿದೆನಲು ॥
ಹಂಸಮಂಡಳಿಯೆಂಬ ನಾಟ್ಯವ ರಂಜಿಪು । ದೇಂ ಸೋಜಿಗವೆ ಸದರವದು ॥ ೧೨೪ ॥

ಸಂದಿಸಿ ಹಂಸೆಗಳ್ನಡೆವಾಗ ಚಿಲಿಪಿಲಿ । ಯೆಂದುಲಿವುತ ನಡೆವಂತೆ ॥
ಅಂದುಗೆ ಘಲಿಘಲಿಝುಲಿಝುಲಿಯೆಂದೆನೆ । ಚಂದದಿ ಪಜ್ಜೆವಿಡಿವರು ॥ ೧೨೫ ॥

ಪಕ್ಕಿ ಪಕ್ಕಿಯ ಬಳಿವಿಡಿದು ಹೋಹಂತೆ ಸಾ । ಲಿಕ್ಕಿ ನಡೆವರೊವ್ಮೆ ಕೂಡೆ ॥
ದಿಕ್ಕುದಿಕ್ಕಿಗೆ ಹರಿವಂತಗಲುವರಹೊ । ಚಿಕ್ಕನೊಂದಾಗುವರೊಡನೆ ॥ ೧೨೬ ॥

ಪಕ್ಕದಾಟವ ತೋರುವರು ಭುಜದೊಳು ಪಜ್ಜೆ । ಯಿಕ್ಕಿ ಕಾಲ್ನಡೆಯ ತೋರುವರು ॥
ಕೊಕ್ಕಿನಾಟವ ಮುಕುಳಿತಹಸ್ತವನು ಕೊಕ್ಕಿ । ಗಿಕ್ಕಿ ತೋರ್ಪರು ಕುಶಲದೊಳು ॥ ೧೨೭ ॥

ನಳಿನದ ಮೇಲಿದ್ದ ಗಂಡುಪಕ್ಕಿಯ ನೀರೊ । ಳೊಲೆದಾಡುವಂಚೆವೆಣ್ಣುಗಳು ॥
ಎಳಸಿ ನಿಟ್ಟಿಸುವಂತೆ ಗದ್ದುಗೆಯೇರಿದ್ದ । ಚೆಲುವನ ನೋಳ್ಪರೋಜೆಯೊಳು ॥ ೧೨೮ ॥

ಪೆಣ್ಬಕ್ಕಿಯೊಂದೊಂದ ಮರೆಸಿ ಗಂಡನ ಮೇಲೆ । ಕಣ್ಬೇಟವಾಳ್ಪ ಭಾವದೊಳು ॥
ನಾಣ್ಬೆರೆಯದೆ ಮಂತ್ರಿಗೊಬ್ಬಳ ಮರೆಮಾಡಿ । ಜಾಣ್ಬಗೆಗೊಂಡು ತೋರುವರು ॥ ೧೨೯ ॥

ಗಂಡಂಚೆವೆಣ್ಣೊಂದನೊಲಿದು ನೋಡಿದರದ । ಕಂಡೊಂದು ಮುನಿದು ಹೋಹಂತೆ ॥
ಹಿಂಡನಗಲಿ ಹೋಹಳೊರ್ವಳದನು ರಾಯ । ಕಂಡೆದೆಯೊಳು ನಗುತಿಹನು ॥ ೧೩೦ ॥

ಕಿರಿದುದೂರವ ಹೋಗಿ ಮುಂದೆ ಕಾಲೇಳದೆ । ಮರೆದು ಕೋಪವ ಪಕ್ಕಿ ಮಗುಳ್ದ ॥
ತೆರನ ತೋರ್ಪಂತೆ ಹೋದಾಕೆ ತಿರುಗಿ ತೋರ್ಪ । ಳುರೆ ರಮಣನ ರಸಿಕತೆಯಾ ॥ ೧೩೧ ॥

ಅಲರೊಳು ಹಂಸೆ ಕುಳ್ಳಿರುವಂತೆಯಾ ಕೊಳ । ದೊಳು ಕುಳ್ಳಿರುವರದನೊವ್ಮೆ ॥
ತೊಲಗಿಸಿ ಬಯಲೊಳು ಕುಳಿತಿಪ್ಪರೇನೆಂಬೆ । ನಲಘುನಿತಂಬಬಿಂಬೆಯರು ॥ ೧೩೨ ॥

ಚಲಿಸದೆ ಪವನಾಭ್ಯಾಸದ ಬಲದಿಂದ । ನೆಲನ ಮುಟ್ಟದೆ ಗಗನದೊಳು ॥
ಲಲನೆಯರೊಪ್ಪಚ್ಚಿ ಕುಳಿತು ಭೂಮಿಗೆ ಮೆಲ್ಲ । ನಿಳಿವರು ಕೂಡೆ ಜೋಕೆಯೊಳು ॥ ೧೩೩ ॥

ಕೊಳದಿಂದ ಕೊಳಗಳಿಗಂಚೆ ಹಾರುವವೊಲು । ಘಳಿಲನೆ ಮೇಲಕೆ ನೆಗೆದು ॥
ಅಲುಗಿಸಿ ತೋಳ ಕಾಲ್ನೀಡಿ ನಾಲ್ಮಾರ ಬಾ । ನೊಳಗೆ ಬಹರು ಪಕ್ಕಿಯಂತೆ ॥ ೧೩೪ ॥

ಭೂಕಾಂತ ತಲೆದೂಗೆ ಮಂತ್ರಿ ವಿಸ್ಮಯಮಾಡ । ಲಾಕೆಗಳಳಿವಂಚೆಯಂತೆ ॥
ಆಕಾಶದೊಳಗೆ ನಾಲ್ಕೆಂಟುಮಾರ್ಗೈತಂದು । ಜೋಕೆಯಿಂದಿಳಿವರು ಧರೆಗೆ ॥ ೧೩೫ ॥

ಮತ್ತೆ ಮೇಲಕೆ ನೆಗೆವರು ಖಗ ಖಗವ ಬೆಂ । ಬತ್ತಿ ಹೋಹಂತೆ ಹೋಗುವರು ॥
ಹತ್ತೆಂಟುಮಾರನಂಬರದೊಳು ಕಂಡು ರಾ । ಜೋತ್ತಮನಿದಿರೊಳಿಳಿವರು ॥ ೧೩೬ ॥

ಪರಿದು ಬಾನದೊಳು ಬಹಾಗ ರಾಯನ ನೋಡ । ಬರುತಿಹ ಸುರಸುದತಿಯರೊ ॥
ಗರುಡಕನ್ನೆಯರೊ ಗಂಧರ್ವಕನ್ನೆಯರೊ ಖೇ । ಚರಿಯರೊಯೆನೆ ತೋರುತಿಹರು ॥ ೧೩೭ ॥

ಮೊಗವೊಲೆಯುಡಿಯಾಗಿ ಕಾಲ್ನೀಡಿ ಕಾಸೆ ತೋ । ಳುಗಳಲುಗುತ ಮೇಲೆ ಬಪ್ಪ ॥
ಮುಗುಧೆಯರೆಸೆದರು ಗಗನಗಂಗೆಯೊಳು ಮ । ಲ್ಲಗೆಯೀಸಿ ಬಪ್ಪರೆಂಬಂತೆ ॥ ೧೩೮ ॥

ಲಲನೆಯರೆಲ್ಲರ ನೋಡಿ ಭೂಪಾಲ ತ । ನ್ನೊಳಗೊಂದ ನೆನೆದು ನುಡಿಯದೆ ॥
ಮಲೆತೆಮುಗಿದಿರಹ ಮೊಲೆಗಳಿಂದಹೊ ತಲೆ । ಕೆಳಗಾದುವೆಂದಿಷ್ಟು ನಕ್ಕ ॥ ೧೩೯ ॥

ಗಗನದೊಳಗೆ ಬಂದು ನೃಪನ ಬೆಂಗೋಡೆಯೊ । ಳಗಣಾದಿಜಿನಬಿಂಬಕಿದಿರ ॥
ಗಗನಪುರುಷಸಿದ್ಧಬಿಂಬಗಳಿಗೆ ಕೈಯ ॥ ಮುಗಿದಿಳಿದರು ಗಮಕದೊಳು ॥ ೧೪೦ ॥

ಕೆಲಬರು ಕೈಮುಗಿದಿಳಿದರು ಕೆಲಬರಂ । ದಲುಗಿಸಿ ಸೂತ್ರವಾ ನೃಪನ ॥
ತಲೆಗಾದಿಜಿನಬಿಂಬಕಿದಿರ ಪ್ರತಿಮೆಗೆ ಹೂ । ಮಳೆಗರೆದಿಳಿದರೋಜೆಯೊಳು ॥ ೧೪೧ ॥

ಅಣಿವ ಭೂಷಣಕಾಂತಿ ಕಾಸೆಯ ಕಾಂತಿ ಚ । ಲ್ಲಣದ ಗೆಜ್ಜೆಯ ಗಲಭೆಯೊಳು ॥
ಠಣಠಣನಿಳಿದರು ಧರೆಗೆ ತಾರಾಂಗನಾ । ಗಣವಿಳಿವಂತೆ ಗಾಡಿಯೊಳು ॥ ೧೪೨ ॥

ಎಂದೆಂದು ರಾಯನೊತ್ತಿನೊಳಿಳಿವರು ಮಂತ್ರಿ । ಯಿಂದೊತ್ತಿನೊಳಗಿದ್ದನಾಗಿ ॥
ಹಿಂದಿಷ್ಟು ದೂರದೊಳಿಳಿದು ಸಮ್ಮುಖದಲ್ಲಿ । ನಿಂದರಾ ಕುಲವನಿತೆಯರು ॥ ೧೪೩ ॥

ಹರುಷವೆದೆಯೊಳುಣ್ಕೆ ನಾಟ್ಯ ಸಾಕೆಂದು ಭೂ । ವರನು ಕೈಸನ್ನೆದೋರಿದನು ॥
ಪುರುನಾಥಗೀತದೊಳೆಲ್ಲರು ನಮಿಸಿ ಹೋ । ಪುರೆಯೆನೆ ನಿಲಿಸಿದರೊಡನೆ ॥ ೧೪೪ ॥

ಹೊಂಜಾಳಿಗೆಯನಿತ್ತ ರಂಗಶೇಖರಗಾಗ । ಪಿಂಜಿ ಮನ್ನಿಸಿದ ಮೇಳವನು ॥
ಸಿಂಜಿನಿಶಿಖರಿಣಿಯರಿಗೆ ಮತ್ತೊಲಿದಪ । ರಂಜಿಯಾಭರಣವನಿತ್ತಾ ॥ ೧೪೫ ॥

ಬಳಿಕ ಮೊಗವ ನೋಡಿ ಬಳಲಿದೈ ಮಂತ್ರಿಯೆಂ । ದೊಳುನುಡಿಯಿಂದ ನುಡಿದನು ॥
ಬಳಲಿಕೆ ಬಯಲಾಯ್ತು ಸ್ವಾಮಿ ನಿನ್ನೋಲಗ । ದೊಳಗೆಂದು ನುಡಿದನಾ ಮಂತ್ರಿ ॥ ೧೪೬ ॥

ಪುಣ್ಯನಾಟಕವಿದು ಸ್ವಾಮಿ ವಿವೇಕಶ । ರಣ್ಯನಾಟಕವಿದು ದೇವಾ ॥
ಗಣ್ಯನಾಟಕವಿದು ಚಕ್ರಿ ವಿಚಿತ್ರಲಾ । ವಣ್ಯನಾಟಕವಿದು ರಾಯಾ ॥ ೧೪೭ ॥

ಭೋಗದಂಗವ ತೋರುತಿದೆ ನಾಟ್ಯ ಹೊರಗಾತ್ಮ । ಯೋಗವನೊಳಗೆ ತೋರುತಿದೆ ॥
ರಾಗದಂಗವ ತೋರುತಿವೆ ರಾಗಗಳು ವೀತ । ರಾಗತ್ವವಿದಕೊ ಭಾವದೊಳು ॥ ೧೪೮ ॥

ಲೋಕದವರಿಗೆ ತಾಂಡವವಿದೆ ಹಂಸಾವ । ಲೋಕದವರಿಗೆ ತತ್ವವಿದೆ ॥
ನಾಕಲೋಕದ ಸುಖದನುಭವವಿದೆ ಸಿದ್ಧ । ಲೋಕದ ನೆಪ್ಪು ತೋರುತಿದೆ ॥ ೧೪೯ ॥

ಜಿನಜಿನಯೇನ ಕಲಿತೆಯೆಲ್ಲಿ ಕಂಡೆ ನಿ । ನ್ನನುಭವವಿದು ಚಿತ್ರ ಸ್ವಾಮಿ ॥
ಮನುಜೇಂದ್ರಪದದಲ್ಲಿ ದಿವಿಜೇಂದ್ರಪದವಿದೆ । ಮುನಿಯಂತೆ ಮೋಕ್ಷಮಾರ್ಗವಿದೆ ॥ ೧೫೦ ॥

ನೀನೆಂತು ಜಾಣನಹುದು ನಿನ್ನ ಪಾತ್ರದ । ಮೀನಾಕ್ಷಿಯರು ಮಝು ಮಮ್ಮಾ ॥
ಈ ನುಂಪುನೇವಣೆರೂಪುರೇಖೆಯ ಲಾಗ । ನೇನ ಸಾಧಿಸಿದರೊ ನೃಪತಿ ॥ ೧೫೧ ॥

ಮಿಂಚಿನ ಕೂಡೆ ಸಾಧಿಸಿದರೊ ತಂಗಾಳಿ । ಯಂಚಿನೊಳಾಡಿ ಕಲಿತರೊ ॥
ಪಂಚಬಾಣನೊಳತಿಸರಿಮಿಗಿಲೆಂದು ಪ । ಳಂಚಿದಭ್ಯಾಸದಿಂದಾಯ್ತೊ ॥ ೧೫೨ ॥

ನೆಲದ ಮೇಲಾಡಿದ ನೃತ್ಯವನೊಮ್ಮೆ ಭೂ । ತಳದ ಸಿಂಗರವೇನ ಬಲ್ಲೆ ॥
ಗಲಗಲನಾಕಾಶದೊಳು ಹಂಸೆವೊಲು ಬಹ । ಚೆಲುವ ಬಣ್ಣಿಸಲೆನಗರಿದು ॥ ೧೫೩ ॥

ಏನದು ಚಿತ್ರವೆ ನೀನಾತ್ಮನೆಂದೆಂಬ । ಬಾನದೊಳಾಡುವೆ ನಿನ್ನ ॥
ಮಾನಿನಿಯರು ಗಗನದೊಳೈದುವುದು ಸಹ । ಜಾನುಚರಿತವೆಂದನೊಡನೆ ॥ ೧೫೪ ॥

ಮಿಕ್ಕಿನ ನೃಪರ ಪೆಂಡಿರಿಗಿಂತು ಬರೆ ಚೋದ್ಯ । ವಕ್ಕಕ್ಕ ಜಗದ ಭೂಮಿಪರಾ ॥
ಮಿಕ್ಕ ರಾಯನ ಸತಿಯರಿಗೆ ಮೆಚ್ಚಿನ ನಾಟ್ಯ । ತಕ್ಕುದು ಚೋದ್ಯವಲ್ಲೆಂದಾ ॥ ೧೫೫ ॥

ಗಿಳಿ ಬಿಳಿದಾದರೆ ಚೋದ್ಯವೆಂಬರು ಹಂಸೆ । ಬಿಳಿದಾಗೆ ಚೋದ್ಯವೆ ಜಗಕೆ ॥
ಉಳಿದ ರಾಜರಿಗಿವು ಬರೆ ಚೋದ್ಯವಹುದು ನಿ । ನ್ನೊಳಗಿವು ಚೋದ್ಯವಲ್ಲೆಂದಾ ॥ ೧೫೬ ॥

ದಿಕ್ಕನ್ನಿಕಾನಾಟ್ಯಜಲಕನ್ನಿಕಾನಾಟ್ಯ । ತಕ್ಕೊಂದು ಹಂಸಮಂಡಳಿಯ ॥
ದಿಕ್ಕನೆ ತೋರಲಿಂತಾದುದು ಮುಂದೆ ಕಾ । ಲಿಕ್ಕುವ ನಾಟ್ಯವಿನ್ನೆಂತೊ ॥ ೧೫೭ ॥

ಅಮರಕಾಂತಾನೃತ್ಯ ನಾಗಕನ್ಯಾನೃತ್ಯ । ಸಿಮಿರ್ದ ತಾರಾಂಗನಾನೃತ್ಯಾ ॥
ದ್ಯುಮಣಿತಾಂಡವ ಚಂದ್ರತಾಂಡವಗಳ ನಿನ್ನ । ರಮಣಿಯರೆಸಗಲಿನ್ನೆಂತೊ ॥ ೧೫೮ ॥

ಪುಷ್ಪಲತಾನೃತ್ಯಕಲ್ಪಲತಾನೃತ್ಯ । ಬಾಷ್ಪವಿದ್ಯುಲ್ಲತಾನೃತ್ಯ ॥
ಪುಷ್ಪಕನೃತ್ಯವ ತೋರ್ಪರಾಗ ಮುದದಿಂದ । ಬಾಷ್ಪಾಂಬುಗಳು ಬಾರದಿಹುವೆ ॥ ೧೫೯ ॥

ದಶಪದ್ಮಲಾಸ್ಯವಿಂಶತಿಪದ್ಮಲಾಸ್ಯಷೋ । ಡಶಪದ್ಮಲಾಸ್ಯ ಮುಂತಾದ ॥
ಕುಶಲವ ತೋರ್ಪರಂದವಿನ್ನದೆಂತುಟೊ ಭೋಗ । ಕುಶಲ ನೀನೆ ಬಲ್ಲೆಯೆಂದಾ ॥ ೧೬೦ ॥

ಏನಿದು ದೊಡ್ಡಿತ್ತೆ ಬುದ್ಧಿಸಾಗರ ಮಝು । ನೀನಿದನೆತ್ತಿ ಕೀರ್ತಿಸುವೈ ॥
ಸ್ವಾನುಭವದ ಸುಖದಿಂದಧಿಕವೆ ಪಾತ್ರ । ಗಾನ ಮುಂತಾದ ಸುಖಗಳು ॥ ೧೬೧ ॥

ಮುಕ್ತಿಯೆ ಸುಖವದರಂತರದಲ್ಲಿ ವಿ । ರಕ್ತಿಯೆ ಸುಖವದರಲ್ಲಿ ॥
ವ್ಯಕ್ತಾತ್ಮಭಾವನೆ ಸುಖ ಮತ್ತೆ ವಿಷಯ ಸಂ । ಯುಕ್ತಿಯೇತರ ಸುಖವೆಂದಾ ॥ ೧೬೨ ॥

ಓಸರಿಸದೆ ಪುಣ್ಯ ತಂದಿತ್ತ ಸುಖವನು । ದಾಸೀನದಿಂದುಂಡು ಬಿಡುವ ॥
ಭಾಸುರಾತ್ಮಾನುಭವದೊಳಿರುತಿಹೆನೆಂದು । ಭೂಸುದತೀಶ ನುಡಿದನು ॥ ೧೬೩ ॥

ನೀನಿದನರಿಯೆಯ ಚೆನ್ನಾಗಿ ಬಲ್ಲೆ ಲೋ । ಕಾನುರಂಜನೆಗೆ ನೀ ಪೊಗಳ್ದೈ ॥
ಹೋ ನಿಲ್ಲು ಸಾಕಿನ್ನು ಹಿಡಿಯುಡುಗೊರೆಯನೆಂ । ದಾ ನೃಪ ಕೈಯ ನೀಡಿದನು ॥ ೧೬೪ ॥

ಆನಲೊಲ್ಲದೆ ಸ್ವಾಮಿ ಮಾತೊಯ್ವೆನೆಂದು ಪ್ರ । ಧಾನಿಯೆದ್ದನು ನಿರಾಶೆಯೊಳು
ತಾನೆ ಸಮ್ಮನಿಸಿ ತನ್ನಾಣೆಯೆಂದಿತ್ತನ । ನೂನವಸ್ತ್ರಾಭರಣಗಳಾ ॥ ೧೬೫ ॥

ಆರಿಗೂ ತೋರದಂತಃಪುರನಾಟ್ಯವ । ನೀ ರಾಯ ತೋರಿದನೆನಗೆ ॥
ಕಾರುಣ್ಯವೆನ್ನ ಮೇಲುಂಟೆಂದು ನಲಿದನು । ದಾರಸ್ವತಂತ್ರಿಯಾ ಮಂತ್ರಿ ॥ ೧೬೬ ॥

ತೊಟ್ಟ ಕಬಾಯಿ ಹಚ್ಚಡವ ಮೇಳದ ಜನ । ಕಿಟ್ಟನು ತೆಗೆದು ನೇವಳವಾ ॥
ಕೊಟ್ಟನು ನಯಕಾರಗುಡಿಯ ದೋತ್ರದೊಳಳ । ವಟ್ಟನಿನ್ನೇನ ಮಾಡುವನೊ ॥ ೧೬೭ ॥

ಸಡಲಿಸಿ ಸಿಂಜಿನಿಶಿಖರಿಣಿಯರಿಗೆಂದು । ಕಡಗವನುರುಳಿಸಿ ಬಿಟ್ಟಾ ॥
ಗುಡುಗುಡು ಘುಮುಘುಮುಗಣಿಗಣಿಯೆನುತವ । ರೆಡೆಗೆಹೋದುವು ಗಾಲಿಯಂತೆ ॥ ೧೬೮ ॥

ಪದಕವ ನೃಪಗೆ ನಿವಾಳಿಸಿ ಸೇವೆಯ । ಸುದತಿಯರುಗಳ ಮೇಲಿಟ್ಟಾ ॥
ಅದೆ ಕಂಠಮಾಲೆಯ ಹರಿದು ಕೈತುಂಬಿ ತಾ । ಳಿದನಿನ್ನದೇನ ಮಾಡುವನೊ ॥ ೧೬೯ ॥

ಹದಿನಾರುಪಾತ್ರಕೆ ಹದಿನಾರುಮಣಿಯ ಸೂ । ಸಿದನು ನಿವಾಳಿಯೆಂದಾಗ ॥
ಕೆದರಿದನುಳಿದ ಮಣಿಯ ರಾಯನೊತ್ತಿನ । ಗ್ಗದ ತೆರೆಯರಸಿಯರ್ಗೆಂದು ॥ ೧೭೦ ॥

ಪಿತ್ತವೇರಿತೊ ಮಂತ್ರಿವುಟ್ಟತೊಟ್ಟುದ ನೀಗಿ । ಸುತ್ತ ನೋಡುತ ನಿಂದನೆನಿಸಿ ॥
ಎತ್ತಿದ ಜಿನಬಿಂಬ ಸಿದ್ಧಬಿಂಬಕೆ ಹೊಸ । ಮುತ್ತ ಚೆಲ್ಲಿದನು ಭಾವದೊಳು ॥ ೧೭೧ ॥

ಅರಸು ಪಾಲಿಸಿದಾ ವಸ್ತ್ರಾಭರಣದೊಳು ಸಿಂ । ಗರವಾಗಿ ಜಿನಬಿಂಬಗಳಿಗೆ ॥
ಶಿರಬಾಗಿ ನೃಪಗೆ ಕೈಮುಗಿದು ಹೋದನು ಮಂತ್ರಿ । ಪುರೆಯಿಟ್ಟು ಸಭೆಯೆಲ್ಲ ಪೊಗಳೆ ॥ ೧೭೨ ॥

ನಯಕಾರ ಹೋದನು ಮೇಳಸಹಿತ ಮತ್ತೆ । ಪ್ರಿಯಗಾನಸತಿಯರ್ಹೈದಿದರು ॥
ನಿಯಮಿಸಿ ರಾತ್ರಿ ಪನ್ನೆರಡುಘಳಿಗೆ ಸಂದು । ಜಯಘಂಟೆ ಠೊಣ್ಣೆಂದುದಾಗ ॥ ೧೭೩ ॥

ಅತ್ತಲನ್ಯರು ಹೋದರಿತ್ತ ತನ್ನವರಿದ್ದ । ರುತ್ತುಂಗನೃಪತಿ ಮನ್ನಣೆಯಾ ॥
ಇತ್ತು ಪಾತ್ರಗಳ ಮನ್ನಿಪೆನೆಂದು ನೆನೆದನಿ । **ದುತ್ತರನಾಟಕಸಂಧಿ** ॥ ೧೭೪ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೭೫ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾವೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೭೬ ॥

ತಳಮೇಲುಪೊರಗೊಳಗೆನ್ನದೆ ಸರ್ವತ್ರ । ತಳತಳಿಸುವ ಚಿನ್ಮಯಾಂಗಾ ॥
ಬೆಳಗೇರುತೆನ್ನಂತರಂಗದೊಳಿರು ಸುಖ । ಸುಲಭ ಚಿದಂಬರಪುರುಷಾ ॥ ೧೭೭ ॥

ಉತ್ತರನಾಟಕಸಂಧಿ ಸಂಪೂರ್ಣಂ

## ತಾಂಡವವಿನಯಸಂಧಿ.

ಒಳವರಿದಾತ್ಮದೃಷ್ಟಿಯೊಳು ನೋಡಿದರೆ ಮೈ । ಯೊಳಗೊಂದುಪ್ರಭೆಯೆ ಮೈಯಾಗಿ ॥
ಹೊಳಿವ ಚಿನ್ಮಯನೆ ಸನ್ಮತಿದೋರು ತ್ರಿಭುವನ । ತಿಲಕ ನಿರಂಜನಸಿದ್ಧಾ ॥ ೧ ॥

ತೂರಿದಂತನ್ಯರು ಹೋಗಲೊಡನೆ ಮರೆ । ಗೇರಿದ್ದ ನೀಟದ ತೆರೆಯ ॥
ಹಾರನೂಂಕಿದರು ರಾಣಿಯರೆಲ್ಲ ಪ್ರತ್ಯಕ್ಷ । ದೋರಿದರರಸಗೇನೆಂಬೆ ॥ ೨ ॥
ಕಾಂಡಪಟವ ನೂಂಕಿ ಹದಿನಾರುಪಾತ್ರವ । ಕಂಡ ಮೋಹನವನು ಮರೆಸಿ ॥
ಪೆಂಡಿರು ಮೋಹನದೋರಿದರಿದಿರೆಡೆ ! ಗೊಂಡ ತೆರೆಯ ನೂಂಕಲೊಡನೆ ॥ ೩ ॥
ಬಗೆಬಗೆಯರಿದು ಸಿಂಗರಿಸಿದ ಸಿಂಗಾರ । ಮಗಮಗಿಸುವ ಕಂಪುನುಂಪು ॥
ನಗೆಮೊಗದರಸಿಯರೆಲ್ಲರು ಕುಳಿತಿದ್ದ । ರೊಗು ಮಿಗೆ ತಿಂತಿಣಿಯಾಗಿ ॥ ೪ ॥
ನೃಪನೆಡಬಲಕೆ ಹಿಂಗಡೆಗೆ ಮುರಿದು ನೋಡಿ । ಚಪಲಾಕ್ಷಿಯರಿಗಿಷ್ಟು ಹೊತ್ತು ॥
ಉಪಸರ್ಗವಾಗಿದ್ದುದಲ್ಲ ತೆರೆಯೊಳೆಂದು । ಉಪಚಾರವಾಕ್ಯದೋರಿದನು ॥ ೫ ॥
ಸ್ವರ್ಗವಾಗಿದ್ದುದಹುದು ನಮಗಿಲ್ಲುಪ । ಸರ್ಗವೆಂಬುದು ಕನಸಿನೊಳು ॥
ಆರ್ಗೆ ಸುಖವ ಕೊಡದರಸ ನಿನ್ನೊಂದು ಸಂ । ಸರ್ಗದೋಲಗವೆಂದರವರು ॥ ೬ ॥
ವಿಪುಲವ್ಯಾಕರಣದಿ ಸ್ವರ್ಗದೊತ್ತಿಗೆ ನಾಮ । ಉಪಸರ್ಗವೆಂದಹುದಾಗಿ ॥
ಉಪಸರ್ಗವೆನಬೇಡ ಉಪಸ್ವರ್ಗವೆನಬೇಕು । ಲಿಪಿಗೊತ್ತು ತಪ್ಪಿತು ಕೆಳಗೆ ॥ ೭ ॥
ಆಡಿ ಪಾತ್ರಾಂಗನೆಯರಿಗರ್ತಿ ಸಂದುದು । ನೋಡಿ ಸಂತಸವಾದುದೆಮಗೆ ॥
ನೋಡಿದು ಸ್ವರ್ಗದೊತ್ತಲ್ಲವೆಯೆಂದು ಮಾ । ತಾಡಿ ಮೆಚ್ಚಿಸಿದರು ಪತಿಯಾ ॥ ೮ ॥
ಬಳಲಿದರಾ ಪಾತ್ರಸತಿಯರ ಕರೆದು ಭೂ । ತಳನಾಥ ಮನ್ನಿಸೆಂದೊಸೆದು ॥
ಕಳಕಂಠವಾಣಿಯರುಸುರಿದರದಕೆ ನಿ । ರ್ಮಳಚಿತ್ತ ತಾನೊಡಂಬಟ್ಟಾ ॥ ೯ ॥
ಬನ್ನಿರೌ ಪಾತ್ರಕಾಂತೆಯರಿರಯೆಂದಾಗ । ತನ್ನ ಬಾಯಾರೆ ತಾ ಕರೆದಾ ॥
ಸನ್ನಿಧಿಗಾನಂದ ಮಿಗೆ ಬಂದು ನಿಂದರು । ಚೆನ್ನೆಯರರಸನ ಮುಂದೆ ॥ ೧೦ ॥
ಕಿರುಬೆಮರ್ವನಿಯು ಮೈ ನಸುಕಲಕಿದ ಬೊಟ್ಟು । ಮಿರುಮಿರುಗುವ ಮುಖಕಾಂತಿ ॥
ಪೊರಪೊಣ್ಮಿದೊಂದು ನೂತನತನುಗಂಧದ । ಮೆರಹಿಂದ ಮೆರದಿರ್ದರಾಗ ॥ ೧೧ ॥
ಕಿಡಿಗೆದರುವ ಬಾಯಿ ಮಿಂಚೇಳ್ವ ಕಣ್ಣಸು । ಮಿಡಿವಳ್ಳೆ ನಸುಹೆಚ್ಚಿದುಸುರು ॥
ಬಿಡುಪಟ್ಟನೊಸಲ ನುಣ್ಗುರುಳ ಸಾಲಿಂದೊಂದು । ಬೆಡಗಾಗಿ ನಿಂದಿರ್ದರಾಗ ॥ ೧೨ ॥
ಓಸರಿಸುತ ಮೈಯ ನೃಪನ ಮೊಗವ ನಗೆ । ಸೂಸಿ ನೋಡುತ ನಟಣೆಯೊಳು ॥
ಕಾಸೆಯ ಸೆರಗಿಂದ ಬೆಮರ ತೊಡೆವುತೊಂದು । ದೇಸಿಯೊಳ್ನಿಂದಿದ್ದರಾಗ ॥ ೧೩ ॥

ಹೊಳೆಹೊಳೆದರಸನ ಸತಿಯರ ಮೊಗದಿಂದ । ತಳಪಾದದೆಡೆಮುಟ್ಟಿ ನೋಡಿ ॥
ಎಳೆನಗೆ ಮಿನುಗೆ ನುಡಿದನೊಲ್ಪು ಗಂಡುಗೋ । ಗಿಲೆಯು ಬಾಯ್ದೆರೆಯ ಜಕ್ಕುಲಿಸಿ ॥ ೧೪ ॥

ಭಾಪು ಪ್ರಚಂಡೆಯರಿರ ನೋಡಲಿಂದು ಮ । ಹಾಪಟುವೆನೆ ನಟಿಸಿದಿರಿ ॥
ಶ್ರೀಪುರುಪರಮೇಶನಾಣೆ ಚೆನ್ನಾಯ್ತು ಮ । ಹಾಪರಿಣಾಮವಾಯ್ತೆನಗೆ ॥ ೧೫ ॥

ಬುದ್ಧಿಸಾಗರನಿದ್ದನೆಂಬುದನರಿದಿಂದು । ವೃದ್ಧಿಮಾಡಿದಿರಿ ನಾಟಕವಾ ॥
ಉದ್ಧತವಾದುದು ಜಾಡ್ಯವೆಲ್ಲವು ಮುಗ್ಧ । ಬುದ್ಧಿಕಾತಿಯರಿರಯೆಂದಾ ॥ ೧೬ ॥

ಬುದ್ಧಿಸಾಗರನ ಕಂಡೆಮಗೇನು ಪ್ರಸ್ತ ನಿ । ಬದ್ಧಿಸಿ ನಾವು ನಮ್ಮೊಳಗೆ ॥
ಬುದ್ಧಿಸಾಗರನೊಡೆಯನ ಮುಂದೆ *ತಾಂಡವ । ಪದ್ಧತಿಯೆಂದು ತೋರಿದೆವು ॥ ೧೭ ॥

ಇಲ್ಲವೆ ಹಂಸಮಂಡಳಿಯು ತೋರ್ಪಾಗವ । ನಲ್ಲಿಗೊರ್ವಳ ಮರೆಯೊಡ್ಡಿ ॥
ಮೆಲ್ಲನೆ ನೀವೆಲ್ಲ ನೋಡಿತಿಲ್ಲವೆ ಹುಸಿ । ಸೊಲ್ಲೇಕೆ ನಿವಗೆನ್ನೊಳೆಂದಾ ॥ ೧೮ ॥

ಇದಕೇನು ಬೇಟವ ಪರರು ಕಾಣದವೊಲಾ । ಮುದುಕಗೊಬ್ಬಳ ಮರೆಮಾಡಿ ॥
ಚದುರಿಂದ ನಟಿಸಿದೆವಹುದಲ್ಲಿ ಕೊರತೆಯಾ । ವುದು ನವಗೆಂದು ನುಡಿದರು ॥ ೧೯ ॥

ಅವನಿದ್ದನೆಂಬ ಯೋಚನೆ ಕಿರಿದಾದರು । ನಿವಗಾದುದಿಲ್ಲವೆಯೆಂದಾ ॥
ನೆವನೆಪ್ಪನೇವಣಬನ್ನಣೆಬೇಡ ಸಾ । ಜವ ಹೇಳಿರೆಂದನಾ ನೃಪತಿ ॥ ೨೦ ॥

ಉಂಟುಂಟು ಯೋಚನೆ ದೇವರೊತ್ತಿನೊಳಾತ । ನಾಂಟರೆ ಕುಲಸತಿಯರಿಗೆ ॥
ದಾಂಟೆ ನರ್ತಿಸುವ ನಾಟಕದಲ್ಲಿ ಯೋಚನೆ । ವುಂಟಾಗದಿಹುದೆಯೋಜೆಯದು ॥ ೨೧ ॥

ನಾಟಕವೆಂಬುದು ಗಂಭೀರಕಲೆಯಲ್ಲ । ಪಾಟಿಸಿಯಿದನನ್ಯಜನದ ॥
ನೋಟಕೆ ತೋರ್ಪಾಗ ಯೋಚನೆಯಿರದೆ ಸ । ಘಾಟದ ಕುಲವಧುಗಳಿಗೆ ॥ ೨೨ ॥

ಒಂಟಿಯೊಳೆಂದೆಂದು ದೇವರೀಕ್ಷಿಸಲು ನಿ । ಷ್ಕಂಟಕದೊಳು ನಟಿಸುವೆವು ॥
ಮಂಟಪದೊಳಗಿಂದು ಮಂತ್ರಿಯಿರಲು ಚಿಂತೆ । ಗಂಟಕ್ಕಿತಹುದೆಮಗರಸಾ ॥ ೨೩ ॥

ಪುರುಷಗಾದರು ಮರೆಯಂಗವ ತೋರದೋ । ಸರಿಸಿ ನರ್ತಿಸಬೇಕು ವನಿತೆ ॥
ಪರರ ಮುಂದಾವು ನರ್ತಿಸುವಾಗ ವ್ಯೆಯನೋ । ಸರಿಸಿಕೊಂಬೆಣಿಕೆ ತೋರಿರದೆ ॥ ೨೪ ॥

ಅದರ ಮೇಲರಸ ನೀನತಿಜಾಣ ನಿನ್ನ ಮೋ । ಹದ ಮಂತ್ರಿ ತಾನು ವಿವೇಕಿ ॥
ಅದನರಿದೆಚ್ಚತ್ತು ನಟಿಸಿದೆವಹುದು ತ । ಪ್ಪದು ಕಂಡ ತೆರನೆಂದರೊಡನೆ ॥ ೨೫ ॥

ಲೇಸನಾಡಿದಿರಿ ಲೇಸನೆ ನುಡಿದಿರಿ ನಿಮ್ಮ । ಲಾಸಿಕೆಗಾನು ಮೆಚ್ಚಿದೆನು ।
ಬೇಸರವಿಲ್ಲದೆ ಬೇಡಿ ನಿಮ್ಮಿಚ್ಛೆಯ । ಮಾಸದೆ ಕೊಡುವೆ ನಾನೆಂದಾ ॥ ೨೬ ॥

ನವಗೊಂದು ವಸ್ತು ಬೇಕೆಂಬಾಶೆಯಿಲ್ಲ ಮು । ನ್ನವೆ ಸರ್ವಭಾಗ್ಯ ನಮ್ಮೊಳಿವೆ ॥
ಲವಲವಿಕೆಯೊಳನುದಿನವಿಂತು ನಲಿವನು । ಭವವೆ ಸಾಕೆಂದು ನುಡಿದರು ॥ ೨೭ ॥

---

*ಕಲಿತಸ್ತು । ವಿದ್ಯೆದೋರಿದೆವೆಂದರವರು

ಇವಳ ಕೇಳವಳ ಕೇಳೀಕೆಗೇನಾಕೆಗೇ । ನವಗತಕಾಂಕ್ಷೆಯುಂಟೆನುತ ॥
ತವೆ ಹದಿನಾರುಪಾತ್ರವ ನೋಡುವಾಗಿಬ್ಬ । ರವರೊಳಗಿಲ್ಲ ವಿಚಿತ್ರಾ ॥ ೨೮ ॥
ಹದಿನಾಲ್ವರಿದ್ದರು ಮತ್ತಿಬ್ಬರಿಲ್ಲವೆಂ । ದೆದೆಹಾರುಗೊಂಡೆಲ್ಲರಾಗ ॥
ಬೆದರಿದಂತತ್ತಿತ್ತ ನೋಳ್ಪಾಗ ಹಿಂದೆ ಕಂ । ಭದ ಮರೆಯೊಳಗಿದ್ದರವರು ॥ ೨೯ ॥
ರೂಪಾಣಿಪದ್ಮಿನಿಯೆಂದೆಂಬರಿರ್ವರು । ಭೂಪಾಲನೊಡನಿಷ್ಟು ಮುನಿದು ॥
ಕೋಪದಿಂದೊತ್ತಿಗೆ ಬಾರದೆ ದೂರದೊ । ಳಾ ಪೆಂಗಳಿದ್ದರೇನೆಂಬೆ ॥ ೩೦ ॥
ಆಡುವಾಗರಸನೊಮ್ಮೊಮ್ಮೆ ಮೊಗವನಡ್ಡ । ಮಾಡಿದನೆಂದು ನೋವಿನೊಳು ॥
ಆಡಿ ನೃತ್ಯವ ಮುನಿದೊತ್ತಿಗೆ ಬಾರದೆ । ಜೋಡಿಸಿ ಬೇರಾದರವರು ॥ ೩೧ ॥
ತಮ್ಮ ನೃತ್ಯವ ನೋಡುತರಸ ವೀಳೆಯಕೊಮ್ಮೆ । ಹೆಮ್ಮಕ್ಕಳತ್ತೊಲೆದೊಮ್ಮೆ ॥
ಒಮ್ಮಿಮ್ಮೆ ಮಂತ್ರಿಯತ್ತೊಲೆದು ನೋಡಿದರದ । ಕುಮ್ಮಳವಟ್ಟಗಲಿದರು ॥ ೩೨ ॥
ನೋಡುತ ತಾವೊಬ್ಬರೊಬ್ಬರು ನಗದೆ ಮಾ । ತಾಡದೆ ಕಂಭವ ನೆಮ್ಮಿ ॥
ಜೋಡುಪುತ್ತಳಿಯಂತೆ ನಿಂದಿದ್ದ ಚಿಂತೆಯ । ಗಾಢವ ಕಂಡನಾ ರಾಯಾ ॥ ೩೩ ॥
ವನಿತೆಯರಿಂದಾದ ನೋವೊ ನಮ್ಮಿಂದೇನು । ಜನಿಸಿತೊ ನೋವು ಮತ್ತಿವರು ॥
ಮುನಿದು ತೊಲಗಿದಂದವೇನಿದ ತಿಳಿವೆನೆಂ । ದನುಮಾನಿಸುತ ನೃಪ ನುಡಿದಾ ॥ ೩೪ ॥
ಕರೆ ಕರೆ ತಾವಿಬ್ಬರೇಕತ್ತ ನಿಂದರೆಂ । ದರಸ ಸೇವಕಿಯರ ಕಳುಹೆ ॥
ಬರಲಟ್ಟಿದನು ಸ್ವಾಮಿ ನಿಮ್ಮನೆಂದವರೈದಿ । ಕರೆದರಾ ಪಾತ್ರಕಾಂತೆಯರಾ ॥ ೩೫ ॥
ಹೋಗಿರೌ ನಿಮ್ಮ ಸ್ವಾಮಿಯ ದೃಷ್ಟಿಗಳಿಗೆಮ್ಮ । ಲಾಗು ನರ್ತನ ಬಂದುದಿಲ್ಲ ॥
ಆಗುಗೆಟ್ಟವರನು ಕರೆಯಲೇಕೆಂದು ಭೂ । ಭಾಗೇಂದ್ರ ಕೇಳೆ ನುಡಿದರು ॥ ೩೬ ॥
ಎಡ್ಡವಲ್ಲಲ್ಲ ನಮ್ಮಾಟ ನಿಮ್ಮೊಡೆಯಗಿಂ । ದಡ್ಡಮೋರೆಯೆ ಪಿಂದಾಗಿ ॥
ಹೆಡ್ಡವೆಂಗಳ ನೃತ್ಯವೇನೆಂದು ಮಂತ್ರಿಯ । ಗಡ್ಡವೊಂದನೆ ನೋಡುತಿದ್ದಾ ॥ ೩೭ ॥
ಜಡಪಾತ್ರವೆಂದು ನಮ್ಮತ್ತ ನೋಡದೆ ತನ್ನ । ಹಡಪವೆಂಗಳ ನೋಡುತಿದ್ದಾ ॥
ಕಡೆಗೀಗ ಬಣ್ಣಗಾರಿಕೆಗೆ ಕರೆಸಲಾತ । ನೆಡೆಗೆ ನಾವೆಂತೆಯ್ದಬಹುದು ॥ ೩೮ ॥
ಊಳಿಗವೆಂಗಳ ಕೂಡೆ ನಮ್ಮಳಲನು । ಹೇಳಿ ಮಾಡುವುದೇನು ನಾವು ॥
ಬಾಲೆಯರಿರ ಹೋಗಿ ಬಾರೆವೆಂದವನೀಶ । ಕೇಳುವಂತೊಲೆದು ನುಡಿದರು ॥ ೩೯ ॥
ನಮ್ಮಿಂದ ನೋವಾದುದವರಿಗೆಂದಾಗ ನೃ । ಪೋನ್ನತ ನೆನೆದನೆದೆಯೊಳು ॥
ಇನ್ನಿವರನು ತಿಳುಪುವ ಬಗೆಯಾವುದೆಂ । ದುನ್ನಿಸಿ ನುಡಿದನು ಮತ್ತೆ ॥ ೪೦ ॥
ರೂಪಾಣಿ ಬಾರೆಲೆ ಪದ್ಮಿನಿ ಬಾರೌ ಸ । ಮೀಪಕೆ ನಿಮ್ಮ ಮನಸಿನ ॥
ತಾಪವ ಕೆಡಿಸುವೆನೆಂದು ಗದ್ದುಗೆಯೊಳಿ । ದ್ದಾ ಪೂರ್ವಚಕ್ರಿ ಕರೆದನು ॥ ೪೧ ॥

ದೇವ ನೀನೆಮ್ಮನೇತಕೆ ಕರೆವುದು ನಾವು । ಭಾವಕೆ ಬಪ್ಪ ಪಾತ್ರಗಳೆ ॥
ಆವ ವೋರೆಯೊಳು ನಿನ್ನೊತ್ತಿಗೆ ಬಹೆವೆಂದು । ನೋವನೆ ತೋರಿ ನುಡಿದರು ॥ ೪೨ ॥

ಕಣ್ಣಿಚ್ಚೆಯಾದಲ್ಲಿ ಮನಕಿಚ್ಚೆಯಹುದೈಸೆ । ಕಣ್ಣಿಚ್ಚೆಯಲ್ಲದ ನಮ್ಮಾ ॥
ಬಣ್ಣಗಾರಿಕೆಗೀಗ ಕರೆವುದೇತಕೆಯೆಂದು । ಹೆಣ್ಣುಗಳ್ನೊಂದು ನುಡಿದರು ॥ ೪೩ ॥

ಕೇಳಿರೌ ನಿಮ್ಮ ನೃತ್ಯವ ನೋಡುವಾಗ ನಾ । ನಾಲಸ್ಯವಡೆದವನಲ್ಲ ॥
ವೀಳೆಯಗೊಳಲೊಮ್ಮೆ ಮೊಗದಿರುಹಿದರಿಂತು । ತಾಳಬಹುದೆ ನೋವ ನೀವು ॥ ೪೪ ॥

ಸಮ್ಮುಖದೊಳಗಿದ್ದ ಮಂತ್ರಿಯು ನೋಡದೆ । ನಿಮ್ಮನೆ ನಾ ನೋಡುತಿರಲು ॥
ಹೆಮ್ಮಕ್ಕಳನೆ ನೋಡುತಿದ್ದನಧಿಕಕಾಮಿ । ಮುಮ್ಮಾಯೆನ್ನನೆ ಮಂತ್ರಿ ನನ್ನಾ ॥ ೪೫ ॥

ಎಲ್ಲರ ಮುಂದೆ ಕಾಣಿಸಬೇಕೆ ನನಗೆ ನಿ । ಮ್ಮಲ್ಲಿ ಲೇಸುಂಟೆಂಬ ಕಲೆಯಾ ॥
ಕಲ್ಲೆದೆಯವರಂತೆ ಮುನಿದು ಕಾಡುವುದಿದು । ಬಲ್ಲತನವೆ ನಿಮಗೆಂದಾ ॥ ೪೬ ॥

ನುಡಿಯಿಂದ ನಮ್ಮ ಚಾಳಿಸಬೇಡ ರಾಯ ನಿ । ನ್ನೊಡನಾಡಿದವರೈಸೆ ನಾವು ॥
ಬಿಡು ಬಿಡು ರಚನೆಯ ನಮ್ಮ ಪಾತ್ರವ ಮೊದ । ಲೆಡಹಿಬಿಟ್ಟೀಗ ಬಣ್ಣಿಪೆಯ ॥ ೪೭ ॥

ಉತ್ತರನಾಟಕಕೊಪ್ಪುವ ಗಂಭೀರ । ವೃತ್ತನಾಟ್ಯವನಾಡಿದೆವು ॥
ಮತ್ತೇನು ರಚ್ಚೆಯ ಪೂರ್ವನಾಟಕದೊಂದು । ವೃತ್ತಾಂತವನೆ ಕಂಡೆಯಲ್ಲ ॥ ೪೮ ॥

ಕೊರವಂಜಿ ಕಟ್ಟಣೆಯೆಂಬ ತಿರುಕವೇಷ । ದೆರಕವ ತೊಟ್ಟೆವೆ ನಾವು ॥
ಹೊರಗಣ್ಣೊಳೆಮ್ಮ ನೃತ್ಯವನು ನೀ ನೋಳ್ಪಾಗ । ಹೊರಿಸೊಂದು ಕೊರತೆಯ ನವಗೆ ॥ ೪೯ ॥

ಪರಶುಪರೆಯಕೊಂಬೆವೆಂದು ಮಾಸಾಳಂತೆ । ಹರಿಗೆಕತ್ತಿಗಳ ಕೈವಿಡಿದು ॥
ತರುಣಿವೇಷವ ಬಿಟ್ಟು ಪುರುಷವೇಷವ ತೊಟ್ಟು । ಪರಿಹಾಸನೃತ್ಯವಾಡಿದೆವೆ ॥ ೫೦ ॥

ಬೆಳ್ಳಕ್ಕಿಗುರುಲೊಡ್ಡಿ ತನ್ನ ಕೈಯಿಂದ ತ । ನ್ನಳ್ಳಿಯ ಬಾಯ ಹೊಯ್ಕೊಂಡು ॥
ಘೊಳ್ಳನೆಲ್ಲರ ನಗಿಸುವ ಕೊರಮರ ವೇಷ । ದಲ್ಲಿ ನರ್ತಿಸಿದೆವೆ ನಾವು ॥ ೫೧ ॥

ಭಂಗಿಯ ತಿಂದಂತೆ ತೂಕಡಿಸುತ ಮತ್ತೆ । ಕಂಗಳ ಮುಚ್ಚಿ ತೆರೆವುತ ॥
ಬಿಂಗಿಯಂತಾಡುವ ಕಂಥೆಯ ಜೋಗಿಣಿ । ಯಂಗದಾಟವೆ ನಮ್ಮ ನೃತ್ಯಾ ॥ ೫೨ ॥

ಬಿನುಗುವೇಷದ ಗಂಡುವೇಷದ ಕಾರ್ಪಣ್ಯ । ಜನದ ವೇಷದ ನೃತ್ಯದಂತೆ ॥
ಅನುಗೆಡಲೆಮ್ಮ ನೃತ್ಯವ ಕಂಡೆಯಲ್ಲ ನಿ । ನ್ನನುಭವ ಸಾಕು ಸಾಕೆಮಗೆ ॥ ೫೩ ॥

ಆಗಳೆ ಕಡೆಸಾರ್ದುದ ನಿಲ್ಲೆವಹುದು ಬುದ್ಧಿ । ಸಾಗರನಿದ್ದನದಾಗಿ ॥
ಹೋಗಲಿ ಗಂಭೀರದೊಳಗೆಂದು ನಟಿಸಿದೆ । ವೀಗ ಸಾಕರಸ ನಿನ್ನಾಟಾ ॥ ೫೪ ॥

ಬೇಡವೌ ನೀವೆನ್ನ ಮೇಲಿಷ್ಟು ಕೋಪವ । ಮಾಡುವುದಕೆ ನಾನು ನಿವಗೆ ॥
ಮಾಡಿದ ದೋಷವಿಲ್ಲಕಟ ಬರಿದೆ ನಮ್ಮ । ಕಾಡುವುದುಚಿತವೆಯೆಂದಾ ॥ ೫೫ ॥

ಎಲ್ಲಿ ಕಲಿತೆಯೆದೆಯೊಳಗೆ ಕಠಿಣ ನುಡಿ । ಯಲ್ಲಿ ಮೃದುವ ತೋರ್ಪ ಗದಕಾ ॥
ಕಲ್ಲ ಕರಗಿಸುವ ನುಡಿಯಿಂದ ನೀನದ । ಬಲ್ಲೆವು ಸಾಕು ಸುಮ್ಮನಿರು ॥ ೫೬ ॥
ಆಡುವಾಗೆಮ್ಮನುದಾಸೀನ ಮಾಡೀಗ । ಬೇಡವೌ ಬನ್ನಿರೌ ನೀವು ॥
ಕಾಡುವುದು ಚಿತವೆಯೆಂದು ತಾನೊಡನೆಮ್ಮ । ಕಾಡುತಿದ್ದಪನೆಂದರವರು ॥ ೫೭ ॥
ನೊಂದಿರಹುದು ನೋಯಿಸಿದೆನಹುದಹುದಿನ್ನು । ನೊಂದ ನೋವನು ತೊಲಗಿಪೆನು ॥
ಮುಂದೊತ್ತಿ ಬನ್ನಿ ನೀವೇನ ಬೇಡಿದರೀವೆ । ನೆಂದು ಕರೆದನವನೀಶಾ ॥ ೫೮ ॥
ಅಯ್ಯಯ್ಯೊ ನಮ್ಮನಾರೆಂದು ಕಂಡಿದ್ದೆಯೊ । ಕೆಯ್ಯಾಸೆಯವರೆ ನಾವರಸಾ ॥
ಮೆಯ್ಯಾಸೆ ನವಗಿಲ್ಲ ಮಹಿಮನ ವಂದನೆ । ಕೆಯ್ಯೊಳಾಂತಿಹೆವು ನೀನರಿಯ ॥ ೫೯ ॥
ನೀನೀವುದೇನು ನಾವೀಸಿಕೊಂಬುದದೇನು । ಚೀನಿವಸ್ತ್ರಾಭರಣಗಳಾ ॥
ಏನು ದೊಡ್ಡಿತು ಕಲ್ಲು ಲೋಹ ವಂಚಟಿಯಭಿ । ಮಾನ ತಪ್ಪಿದ ಮೇಲೆ ನವಗೆ ॥ ೬೦ ॥
ಗುಣವೆ ಭೂಷಣವಭಿಮಾನವೆ ವಸ್ತ್ರವೆಂ । ದೆಣಿಸಿ ಕೈವಿಡಿದಿಹೆವೆಮಗೆ ॥
ಬಣಗುದೊಡಿಗೆಯಾಸೆದೋರಬೇಡೆಂದು ಪೊ । ಕ್ಕಣಿಸಿ ದೂರದೊಳಿದ್ದರವರು ॥ ೬೧ ॥

ಚಂದನವತಿ ಹೋಗು ಮಂಗಲವತಿ ಹೋಗು । ನೊಂದ ಪೆಂಗಳ ಕರೆತನ್ನಿ ॥
ಇಂದಿನ ನೋವ ಮರೆಯಲಿನ್ನು ಮುಂದೆ ನೀ । ವೆಂದಂತೆ ನಡಿಸುವೆನೆಂದಾ ॥ ೬೨ ॥
ಅಹುದೆಯಹುದೆ ದೇವ ತಪ್ಪದೆ ತಪ್ಪದಿ । ನ್ನಹುದು ಲೇಸೆನುತ ಬಂದವರು ॥
ಮಹಿಪನೆಂಬುದಕೊಮ್ಮೆ ಸೈರಿಸಿ ಬನ್ನಿರಾ । ಗ್ರಹ ಬೇಡವೆಂದು ಕರೆದರು ॥ ೬೩ ॥
ಅಕ್ಕ ನೀವೇಕೆ ಬಂದಿರಿ ನವಗುರೆ ನಿಮ್ಮ । ದಿಕ್ಕಿಂದ ನೋವಾದುದಿಲ್ಲ ॥
ಲೆಕ್ಕಕೆ ತಾರದ ನೃಪನೊತ್ತಿಗೆಮ್ಮ ನೀ । ವಕ್ಕಟ ಕರೆವುದು ಗುಣವೆ ॥ ೬೪ ॥
ತಂಗಿಯರಿರ ಬನ್ನಿ ದೊರೆಯೊಮ್ಮೆ ದೈನ್ಯರ । ಸಂಗಳ ತೋರಿ ಕರೆದರೆ ॥
ಹಿಂಗಿಸಬೇಕು ಕೋಪವನೆಂದು ರಾಜನ್ಯ । ತ್ಯಾಂಗನಾಗುಣವ ಪೇಳಿದರು ॥ ೬೫ ॥
ಆಗುಣ ನಿವಗಹುದಕ್ಕ ನವಗೆ ಕೋಪ । ಹೋಗದು ಹೋಗಿ ನೀವೆಮ್ಮ ॥
ಮೇಗೆ ನೋಯದಿರಿ ಹಿರಿಯರೆಂದು ಕೈಮುಗಿ । ದಾಗಳೆ ಕಳುಹಿದರವರಾ ॥ ೬೬ ॥

ಸುಪ್ಪಾಣಿ ಪುಷ್ಪಾಣಿ ಕಟ್ಟಾಣಿ ಹೋಗಿ ನೀ । ವೊಪ್ಪದಿ ಕರೆತನ್ನಿರವರಾ ॥
ಸುಪ್ಪತ್ತಿಗೆಯ ಸೋಂಕಿದವೊಲು ಮುಂದೆ ಲೇ । ಸಪ್ಪಂತೆ ನಡಿಸುವೆನೆಂದಾ ॥ ೬೭ ॥
ಅವರು ಮೂವರು ಬಂದು ಕರೆದರು ಕರೆದರೇ । ನವರಿಗೂ ವಿನಯವ ನುಡಿದು ॥
ಅವನೀಶನತ್ತಲೆ ಕಳುಹಿದರವರ ಗೌ । ರವದೊಂದು ಮುನಿಸನೇನೆಂಬೆ ॥ ೬೮ ॥
ಚೂಡಾಣಿಮುಕರಾಣಿಮುಕುರಾಣಿಮಿಂಚಿನಿ । ನಾಡೆ ಹಂಸಿನಿಮಧುರಾಣಿ ।
ಪಾಡಿಂದ ಕುರುವಿಂದಾಣಿಯರೊತ್ತಿಗೈದಿ ಮಾ । ತಾಡಿಸಿ ಮಗುಳ್ದರು ಮತ್ತೆ ॥ ೬೯ ॥

ಮತ್ತೆಚಂದ್ರಾಣಿಮಂದ್ರಾಣಿಯರೈತಂದು । ಬಿತ್ತಿಗರೊಡೆಯನನಿನ್ನು ॥
ಒತ್ತಲಾಗದು ಸಾಕು ಬನ್ನಿಪೆಂಗಳಿರೆಂದು । ಮೆತ್ತನೆ ನುಡಿದು ಕರೆದರು ॥ ೭೦ ॥
ಅದಕೂ ಬಾರರು ಕೂಡೆ ರಾಣಿಯರೆಲ್ಲರು । ಕೆದರಿ ಕೆಕ್ಕಳಿಸಿ ತಮ್ಮೊಳಗೆ ॥
ಮದಮುಖವಿಷ್ಟೇಕೆ ಪಾತ್ರಕಾಂತೆಯರಿಗೆಂ । ದಿದಿರೊಳಾಗಳೆ ಕೋಪಿಸಿದರು ॥ ೭೧ ॥
ಸ್ವಾಮಿ ವಿನಯದೋರಿ ಕರೆವುದೆತ್ತಕಟ ತಾ । ವೀ ಮುನಿಸನೆ ಮುಂದೆ ಮಾಡಿ ॥
ಕ್ಷೇಮಗೆಡಿಸಿ ಕಾಡುತಿಹುದೆತ್ತ ಸಲುವುದೆ । ಕೋಮಲೆಯರಿಗೆಂದರವರು ॥ ೭೨ ॥
ತಮ್ಮೊಳು ತವಗೆ ವಿನಯ ಸ್ವಾಮಿಯಿದಿರೊಳು । ಹೆಮ್ಮೆಯೀ ನಾಟ್ಯಕಾಂತೆಯರ ॥
ಸೊಮ್ಮೆ ಬೇರೊಂದಂಗವಿದ ಕಂಡು ನಾವೆಂತು । ಸುಮ್ಮನಿರ್ದಪೆವೆಂದರವರು ॥ ೭೩ ॥

ಅಷ್ಟರೊಳಂಜಿ ರೂಪಾಣಿಯೆಲ್ಲರ ಕೂಡೆ । ಕಷ್ಟವೇಕೆಂದು ತಾ ತಿಳಿದು ॥
ಇಷ್ಟರ ನುಡಿಗೇಳಬೇಕೆಂದು ಬಂದಳ । ಭೀಷ್ಮಾರ್ಥದರಸನ ಬಳಿಗೆ ॥ ೭೪ ॥
ಚಂದ್ರಾಣಿಮಂದ್ರಾಣಿಯರು ಕರೆತಂದು ರಾ । ಜೇಂದ್ರಗೆ ನಮಿಸೆಂದರವಳಾ ॥
ತಂದ್ರದೋರಿದೆ ಸ್ವಾಮಿಯೆನ್ನದು ತಪ್ಪೆಂದು । ಚಂದ್ರವದನೆಯೆರಗಿದಳು ॥ ೭೫ ॥
ಪಾದಕೆರಗಿದ ನಲ್ಲಳ ಪಿಡಿದೆತ್ತಿ ಲೀ । ಲೋದಯನಮರ್ದಪ್ಪಿಕೊಂಡು ॥
ಕಾದಲೆ ನಿನ್ನ ನೋಯಿಸಿದೆನಹುದು ಮರೆ । ಯಾ ದೊಡ್ಡ ನೋವ ನೀನೆಂದಾ ॥ ೭೬ ॥
ತೊಟ್ಟನೆ ರಾಜೇಂದ್ರನಪ್ಪಲವಳು ಮೊಲೆ । ಗಟ್ಟೊಡೆವಂತೆ ಹಿಗ್ಗಿದಳು ॥
ಬಿಟ್ಟೋಡಿತಾಗಳೆ ಸಟೆಯ ಮುನಿಸು ಪುಟ । ವಿಟ್ಟಂತೆ ನಿಂದಳೊತ್ತಿನೊಳು ॥ ೭೭ ॥

ರೂಪಾಣಿ ಬಂದಳು ಪದ್ಮಿನಿ ನಿಂದಳಿ । ನ್ನಾ ಪೆಣ್ಣ ತಿಳುಪುವೆನೆಂದು ॥
ಭೂಪನಾಲೋಚಿಸುತಿದ್ದನಷ್ಟರೊಳು ಸ । ಮೀಪದ ಪೆಣ್ಗಳಾಡಿದರು ॥ ೭೮ ॥
ಏಕೆ ನಿಂದಳು ಮತ್ತೆ ಪದ್ಮಿನಿ ಬಾರದೆ । ಹಾ ಕಷ್ಟಗುಣವ ಕಲಿತಳು ॥
ಸಾಕಿನ್ನು ಬಾರಗೆ ಹೆಣ್ಣೆಯೆಂದರಸಿಯ । ರಾಕೆಗೆ ಸನ್ನೆದೋರಿದರು ॥ ೭೯ ॥
ಪೊಲ್ಲದ ಗುಣದವಳಾಗಿತ್ತಲಿಹೆನು ನೀ । ವಲ್ಲಿರಿ ಸಾಕು ನಿಮ್ಮಾಟಾ ॥
ಎಲ್ಲರೊಂದಾಗಿಕೊಂಡೊಬ್ಬಳ ಜಡಿವಿರಿ । ನಲ್ಲಗೆ ಹಿತವಾಗಿಯಕಟ ॥ ೮೦ ॥
ಅರಸನುದಾಸೀನಗೈದರೇನೊತ್ತಿನ । ತರುಣಿಯರೆನ್ನವರೆಂದು ॥
ಹಿರಿದು ನಂಬಿದ್ದೆನು ನೀವು ನಿಮ್ಮರಸನ । ಪರಿಯಾದಿರಕ್ಕ ಚೆನ್ನಾಯ್ತು ॥ ೮೧ ॥
ಎಳೆಯೆಂಬ ರಾಯಗೆ ತುಳಿಯೆಂಬ ಮಂತ್ರಿಯೆಂ । ದಿಳೆಯೊಳಾಡುವ ಗಾದೆಯಿಂದು ॥
ಫಲಿಸಿದುದಕ್ಕ ಚೆನ್ನಾಯ್ತು ಚೆನ್ನಾಯ್ತೆಂದು । ಒಲೆದೊಲೆದಾಡಿ ನುಡಿದಳು ॥ ೮೨ ॥
ಕಡಲನೊತ್ತದೆ ಕಡಲುದಕವ ತುಂಬುವ । ಕೊಡನನೊತ್ತುವರಂತೆ ನೀವು ॥
ಕಡುದೊಡ್ಡನೃಪನನೊತ್ತದೆ ನನ್ನನೊತ್ತುವ । ಬೆಡಗು ಲೇಸೆಂದಳಾ ಜಾಣೆ ॥ ೮೩ ॥

ತಾಯಿ ಕೇಳದಕಲ್ಲ ಸುಖಿಗಳ್ಗೆ ಮುನಿಸು ತೋ । ರಾಯವಾದರೆ ಸೊಗಸಲ್ಲ ॥
ನಾಯಕಗತಿಚಿಂತೆ ತೋರಬೇಡೆಂದು ಸ । ಹಾಯವಾದೆವು ನಾವು ನಿನಗೆ ॥ ೮೪ ॥

ಬಡಮುನಿಸಾದರೆ ಹದನಾಗಿ ಕಾಸಿ ಪಾ । ಲ್ಗುಡಿವಂತೆ ಮೆರೆವುದಾ ಮುನಿಸು ॥
ಕಡುಹೆಚ್ಚಿದರೆ ಹೊತ್ತುವಂತೆ ಕಾಸಿದ ಹಾಲ । ಕುಡಿವಂದವಲ್ಲವೆ ತಂಗಿ ॥ ೮೫ ॥

ಅತಿಮಥನಿಸಿದರೆ ಶ್ರೀಗಂಧದೊಳು ಕಿಚ್ಚು । ಪ್ರತಿಫಲಿಸುವುದಲ್ತೆ ನೀರೆ ॥
ಪತಿಯೊಡನತಿವಾದ ಬೇಡವೆಂದೆವು ಹೇಳು । ಹಿತವೊಯಿದಹಿತವೊ ನಿನಗೆ ॥ ೮೬ ॥

ಅಹುದಕ್ಕ ನೀವು ಹಿತವೆಯರೆನಗೆ ನಿಮ್ಮ । ಮಹಿಪನೊಬ್ಬನೆ ಹಿತವಲ್ಲ ॥
ವಹಿಸಿಬಿಟ್ಟೆವ್ಮ ಹೋರಿಸುತ ತಾನೋಡುತು । ತ್ಸಹದೊಳಿದ್ದಪನೆಂದಳೊಡನೆ ॥ ೮೭ ॥

ಇವಳಿಗೆನ್ನೊಡನಿನ್ನು ಪ್ರಣಯಕಲಹವ ಮಾ । ಡುವ ರುಚಿಯುಂಟೆಂದು ನೆನೆದು ॥
ಯುವತಿಯರಿರ ನೀವು ನಿಲ್ಲಿ ನಾವವಳ ಶಾಂ । ತವ ಮಾಳ್ಪೆವೆಂದನಾ ರಾಯಾ ॥ ೮೮ ॥

ಅವಳಿಗರಸನೊಳು ನುಡಿದಾಡುವಿಚ್ಛೆ ನ । ವ್ಮವನೀಶಗದ ಕೇಳುವಿಚ್ಛೆ ॥
ನವಗೇನು ನೋಳ್ಪೆವೆಂದರಸಿಯರೆಲ್ಲರು । ಕಿವಿಯೊಳಾಡಿದರು ತಮ್ಮೊಳಗೆ ॥ ೮೯ ॥

ನಾಟಕಸತಿಯರಲ್ಲವೆ ನೀನು ತಾನೆಂದು । ಚಾಟಾಗಿ ನುಡಿದರೆ ನೃಪಗೆ ॥
ತೀಟವೇಳುತಿದೆ ಸುಮ್ಮನೆ ನೋಡುತಿಹವಿವ । ರಾಟವನೆಂದೆಣಿಸಿದರು ॥ ೯೦ ॥

ತುಟಿಮಿಡುಕದೆ ನೋಡುತಿದ್ದರಂಗನೆಯರು । ನಿಟಿಲದಿದಿರೊಳು ನಿಂದಿರ್ದಾ ॥
ನಟನಕಾಮಿನಿಯ ಮನೋಧರ್ಮವನು ರಾಜ । ವಿಟಶಿರೋಮಣಿ ನಿಧಾನಿಸಿದಾ ॥ ೯೧ ॥

ಬಾಲೆವಿದಗ್ಧೆಮುಗ್ಧೆಯರೊಳಗಲ್ಲಿವ । ಳಾಲೀಡಮಧ್ಯಮೆಯಿವಳ ॥
ಲೀಲೆ ಪಟುತ್ವವಾಗಿಹುದಹುದಿವಳೆದೆ । ಯಾಳವಿಷ್ಟೆಂದು ತಿಳಿದನು ॥ ೯೨ ॥

ಜಾತಿಪದ್ಮಿನಿ ಮತ್ತೆ ಪದ್ಮಿನಿಯೆಂದಂಬು । ಜಾತಾಕ್ಷಿಗಾದುದು ಪೆಸರು ॥
ಕಾತರವಿಷ್ಟು ಕಾಮದ ಶಕ್ತಿಯಿಷ್ಟಿವ । ಳಾತುರವಿಷ್ಟೆಂದು ತಿಳಿದಾ ॥ ೯೩ ॥

ಸೋಲವೆನ್ನೊಳಗುಂಟು ಮೊಗನೋಡಿ ನುಡಿಯದೆ । ತೇಲುನೋಟದೊಳು ನುಡಿವಳು ॥
ಕಾಲಿಗೆರಗಿಸುವೆನಿವಳನೀಗೆಂದೊಳ । ಗಾಲೋಚಿಸಿ ಕೂಡೆ ನುಡಿದಾ ॥ ೯೪ ॥

ಎಲಗೆ ಪದ್ಮಿನಿ ನೀವಿಬ್ಬರೊಳಗೊಬ್ಬಳು । ಮೊಳಗಾದ ಮೇಲೆ ನೀನಿನ್ನು ॥
ಛಲವ ಮಾಳ್ಪುದು ಸಲ್ಲ ಬೇಡ ಕಾಣಗೆ ಪಂಥ । ನಿಲಲರಿಯದು ನಿನಗೆಂದಾ ॥ ೯೫ ॥

ಅಳ್ಳಿದೆಯವಳು ರೂಪಾಣಿಯೊಬ್ಬಳು ಲಜ್ಜೆ । ಯಿಲ್ಲದೆ ನಿನಗೆರಗಿದಳು ॥
ಡಿಳ್ಳುಹೋಹಳೆ ಭಾವು ಪದ್ಮಿನಿ ನೀ ನೋಡ । ಲಿಲ್ಲವೆಯೆಂದಳಾ ಧೀರೆ ॥ ೯೬ ॥

ಲೇಸಿಗೆ ಕಾಲಿಗೆರಗಬಹುದರಸವು । ದಾಸೀನಕಾರೆರಗುವರು ॥
ಕಾಸೆಯಲ್ಲವೆ ನಾನು ಕಟ್ಟಿದುದೀ ರಾಣಿ । ವಾಸ ನೋಡಲಿ ನೀನು ನೋಡು ॥ ೯೭ ॥

ಅಷ್ಟುಂಟೆ ನಿನಗೆ ಮನೋಧೈರ್ಯವುಂಟುಂಟು । ದೃಷ್ಟಿಸಿ ನೋಡಿ ಮಾತಾಡು ॥
ಭ್ರಷ್ಟರಂತಡ್ಡಮೋರೆಯೊಳೇಕೆ ನುಡಿವೆವು । ತ್ಕೃಷ್ಟಧೀರೆಯೆಂದನೊಡನೆ ॥ ೯೮ ॥
ನೋಡಿದರೇನು ಮೊಗವನೆಂದು ದುಗುಡವ । ಕೂಡಿಕೊಂಡೊಲಿದು ನೋಡಿದಳು ॥
ಓಡಿತು ದುಗುಡ ಮೂಡಿತು ನಗೆ ನಗುತಾಕೆ । ಕೂಡೆ ಬಾಗಿದಳು ಮಸ್ತಕವಾ ॥ ೯೯ ॥
ತಲೆವಾಗಿ ನಿಂದಳ ಕಂಡು ನೀನಲ್ಲಿದ್ದು । ತಲೆಯೆರಗಿದರೊಪ್ಪೆ ನಾನು ॥
ನಲಿದು ಬಂದೆನ್ನ ಕಾಲ್ಗೆರಗಬೇಕೆಂದು ನ । ಲ್ಲಳ ಕೂಡೆ ಹದಿರನಾಡಿದನು ॥ ೧೦೦ ॥
ಅರಿಲ್ಲಿ ನಿನಗೆರಗಿದರೆಂದು ತಲೆಯೆತ್ತಿ । ಧೀರೆ ನೋಡಿದಳು ನೋಡಿದೊಡೆ ॥
ಸೇರಿತು ನಗೆ ಕೂಡೆ ತಲೆವಾಗಿದಳು ನೋಡು । ನಾರಿ ಮತ್ತೆರಗಿದಳೆಂದಾ ॥ ೧೦೧ ॥
ದುಗುಡವನೆತ್ತಿಕೊಂಬಳು ಚೆಲ್ವರರಸನ । ಮೊಗವ ಕಂಡರೆ ಜಾರುತಿಹುದು ॥
ನಗೆಯುನೊತ್ತರಿಸುವಳದು ನಲವಿಂದಾಗ । ನೆಗೆವುತಿಹುದು ತನ್ನ ತಾನೆ ॥ ೧೦೨ ॥
ನಿಲ್ಲೆಂದು ಧೈರ್ಯವ ಬಲಿದು ಹಿಡಿವಳದು । ನಿಲ್ಲದೆ ಜರಿದೋಡುತಿಹುದು ॥
ಒಲ್ಲೆ ಹೋಗೆಂದು ಕಾತರವ ನೂಂಕುವಳದು । ಕೊಲ್ಲುತಿಹುದು ಮೈಗೆ ಹಬ್ಬಿ ॥ ೧೦೩ ॥
ಓರೆಮೊಗವ ಮಾಡಿಕೊಂಡಿಷ್ಟು ಹೊತ್ತಾಕೆ । ಹೋರಿದ ಬಲ್ಮೆಯುಂತಿರಲಿ ॥
ಹೋರುವರಾರು ಸಾರುವರಲ್ಲದವನ ಶೃಂ । ಗಾರವ ಕಂಡು ನೀರೆಯರು ॥ ೧೦೪ ॥
ಇನ್ನು ಪಂಥವೆ ಪದ್ಮಿ ನಿನಗೆಂದನೀತನ । ನಿನ್ನೆಂತು ಜಯಿಸುವೆನೆಂದು ॥
ಚೆನ್ನೆ ಯೋಚಿಸಿ ಬಗೆಗಾಣದೆ ತಲೆಯೆತ್ತಿ । ಚೆನ್ನಾಗಿ ನಗುತ ನುಡಿದಳು ॥ ೧೦೫ ॥
ಎಲೆ ಮಾಯಕಾರ ನಿನ್ನಾಸ್ಯವ ಕಂಡರೆ । ದಳವೇರುತಿದೆ ನಗೆ ನನಗೆ ॥
ತಲೆ ಕುಸಿದರೆ ನಮಿಸಿದಳೆಂಬೆಯಿದನಿನ್ನು । ಗೆಲುವಂದವೆಂತೆಂದಳವಳು ॥ ೧೦೬ ॥
ಅಂಕಿಸಿ ನೋಡದಿನ್ನೋರೆಮೋರೆಯೊಳಿಪ್ಪೆ । ಮಾಂಕೊಂಡು ಜಯಿಸೆಂದಳವಳು ॥
ಕೊಂಕುಮೋರೆಯ ಪೆಣ್ಣೊಳಾನು ನುಡಿವನಲ್ಲ । ಕುಂಕುಮವರ್ಣೆ ಕೇಳೆಂದಾ॥ ೧೦೭ ॥
ನೋಡಿ ಸಮ್ಮುಖವಾಗಿ ನುಡಿಯದೆ ಮೊಗವಡ್ಡ । ಮಾಡಿ ನುಡಿವೆನೆಂಬೆ ನೀನು ॥
ಆ ಡೊಂಕು ನಮ್ಮಾಟವಲ್ಲ ಸರ್ಪನ ಕಂಡ । ಕೋಡಗದಾಟ ಹೋಗೆಂದಾ ॥ ೧೦೮ ॥
ನಿಂದಳು ತಲೆವಾಗಿ ಮೌನದೊಳಾಕೆ ಮ । ತ್ತೊಂದು ತಂತ್ರವನು ಚಿಂತಿಸುತ ॥
ನಿಂದೆಯಾದರೆ ಪದ್ಮಿ ನನ್ನಾಣೆ ನಡೆದು ಬಾ । ರೆಂದನಾ ರಸಿಕರದೇವ ॥ ೧೦೯ ॥
ಆಣೆಯ ಮೀರದೆ ಹತ್ತುಹಜ್ಜೆಯ ನಡೆ । ದೇಣಲೋಚನೆ ನಿಂದಳಲ್ಲಿ ॥
ಚೂಣೆವರಿವ ಕಡೆಗಣ್ಣಿಂದ ನೋಡುತ । ಪ್ರಾಣೇಶನೊಡನೆ ನುಡಿದಳು ॥ ೧೧೦ ॥
ಜಾಣಿಂದ ಜಯಿಸಲಾರದೆ ನೋಡು ತಾನು ತ । ನ್ನಾಣೆಯಿಟ್ಟೆನ್ನ ಕರೆವನು ॥
ಮಾಣಿನ್ನು ಕರೆಯದಿರೆಂದಲ್ಲಿ ನಿಂದಳು । ವಾಣಿಕಬೊಂಬೆಯುಂದದೊಳು ॥ ೧೧೧ ॥

ಅಲ್ಲಿ ನಿಂದಿದ್ದೆಯಾದರೆ ಪದ್ಮಿ ಗದ್ದುಗೆ । ಯಲ್ಲಿ ಮೆರೆವನಾಣೆಯೆಂದಾ ॥
ವಲ್ಲಭನಿದಿರಿಗೆಯ್ದದೆ ಬಲಕೊಲೆದಾಕೆ । ಮೆಲ್ಲನೆಂಟಡಿಯ ನಡೆದಳು ॥ ೧೧೨ ॥

ಮಡದಿ ನೀನತ್ತ ಸಾಗಿದೆಯಾದರೀಗ ನಿ । ನ್ನೊಡನೆ ನುಡಿವನಾಣೆಯೆಂದಾ ॥
ಎಡದ ದಿಕ್ಕಿಗೆ ಸಾಗಿ ನಿಂದಳು ನೃಪನತ್ತ । ನಡೆಯದೆ ಮೌನದೊಳಾಕೆ ॥ ೧೧೩ ॥

ಇದಿರಾಗಿ ಬಾರದೆಯೆಡಬಲಕೊಲೆದಾಕೆ । ಸದನದೊಳಡಿಯಿಡೆ ಕಂಡು ॥
ಮೊದಲಾಡಿದಾಟ ಚೆಲ್ವಹುದೀಗ ನಟಿಸಿದ । ಮೃದುನಾಟ್ಯವದಕೂ ಚೆಲ್ವೆಂದಾ ॥ ೧೧೪ ॥

ತಾಳಮದ್ದಳೆಯಿಲ್ಲ ಕಟಿಸೂತ್ರಕಂಕಣ । ಕಾಲಂದುಗೆಗಳ ನಾದದೊಳು ॥
ಚಾಲುಚಾಲನೆ ನಡೆದಾಡಿ ನರ್ತಿಸಿದ ನಿ । ನ್ನೀ ಲಾಸ್ಯ ಸೊಬಗಾದುದೆಂದಾ ॥ ೧೧೫ ॥

ನಗುವಳು ತಲೆವಾಗುವಳು ನೋಡುವಳು ಮೋರೆ । ದೆಗೆವಳು ಮನದೊಳುಬ್ಬುವಳು ॥
ದುಗುಡಕೋಳಾಹಳ ದುರ್ಗಕೋಳಾಹಳ । ಪಗೆಕೋಳಾಹಳನ ಮುಂದವಳು ॥ ೧೧೬ ॥

ಪರಿಪಕ್ವಮಾನಸೆಯಾದಳೆಂಬುದನರಿ । ದರಸಿಯರೊಬ್ಬೊಬ್ಬರೆದ್ದು ॥
ಪರಿತಂದು ಪದ್ಮಿನಿ ನೀನಿನ್ನು ಗರ್ವವ । ಪರಿಹರಿಸೆಂದು ನುಡಿದರು ॥ ೧೧೭ ॥

ಓಸರಿಸಿತು ನಿನ್ನ ಧೈರ್ಯ ಸ್ವಾಮಿಯ ವಾಕ್ಯ । ಬೇಸರವಾದುದಿಲ್ಲರಿಯ ॥
ಲೇಸ ಬಾಯಾಲಬಹುದೆ ನೃಪನೆಡೆಗಿನ್ನು । ಬಾ ಸುಮ್ಮನೆಂದು ಕರೆದರು ॥ ೧೧೮ ॥

ತಾಂಡವಸತಿಯರ ಸಂಧಾನದೊಳು ಬಂದು । ಕಂಡಳು ರೂಪಾಣಿ ನೃಪನಾ ॥
ಚಂಡೆ ನೀನೆಮ್ಮಯ ಮಾತ ಕೇಳೆಂದೊಡ । ಗೊಂಡು ಬಂದರು ವಿನಯದೊಳು ॥ ೧೧೯ ॥

ರಾಣಿಯರುಗಳ ಸಂಧಾನದೊಳಗೆ ಬಂದು । ಕ್ಷೋಣೀಶನಡಿಗೆರಗಿದಳು ॥
ಕಾಣಲೊಡನೆ ರಾಯ ಮುಸುಕಿಕ್ಕಿಕೊಂಡನು । ಪ್ರಾಣಕಾಂತೆಯರು ಚಪ್ಪಳಿಸೆ ॥ ೧೨೦ ॥

ಚಾರುಚಂದ್ರನ ಮೇಲೆ ಕವಿದೊಂದು ಧವಲಾ । ಕಾರದ ಮುಗಿಲೊಯೆಂಬಂತೆ ॥
ಆ ರಾಯನಂಗವ ಮುಸುಕಿ ಕಣ್ಗೆಸೆದುದು । ಕ್ಷೀರೋದಕವೆಂಬ ಪಟ್ಟೆ ॥ ೧೨೧ ॥

ಕುಳಿತಿರ್ದ ರಾಣಿಯರೆಲ್ಲರು ತಳಹೊಳ । ಗೊಳುತಿರ್ದರಾ ಕ್ಷಣದಲ್ಲಿ ॥
ಬಳಿಕೊಬ್ಬರೊಬ್ಬರ ನೋಡುತ ರಾಯನ । ಬಳಸಿ ನಿಂದರು ಚಿಂತೆಗೊಳುತ ॥ ೧೨೨ ॥

ಅವನತೆಯಾದಳ ನೋಡದೆ ಮುಸುಕನಿ । ಕ್ಕುವುದೇತಕೆಂದು ಕೇಳಿದರು ॥
ಅವಳ ಕಾಣಿಸಿಕೊಳ್ಳಲೊಲ್ಲೆ ನಾನೆಂದನಾ । ಭುವನೇಶ ಮುಸುಕಿನೊಳಿರ್ದು ॥ ೧೨೩ ॥

ಆಣೆಯ ಮೀರಿದಳವಳ ಕಾಣಿಸಿಕೊಂಡ । ರೂಣೆಯುವಹುದೆನಗೆಂದಾ ॥
ಆಣೆಗೆ ತಡೆದುದಿಲ್ಲವಳು ನಡೆದಳೆಂದು । ಕಾಣಿಸಿ ಬಿನ್ನವಿಸಿದರು ॥ ೧೨೪ ॥

ಎತ್ತ ನಡೆದಳವಳೆಡಬಲಕೊಲೆದಳೆ । ನ್ನತ್ತ ಬಂದಂತಾಯ್ತೆ ನಿಮ್ಮ ॥
ತತ್ತುಗಾರಿಕೆಯ ಬಲ್ಲೆನು ಸುಮ್ಮನಿರಿಯೆಂದು । ಒತ್ತಿ ನುಡಿದನು ರಾಣಿಯರಾ ॥ ೧೨೫ ॥

ಮೊದಲೆ ಹೇಳಿವೆ ಅತಿವಾದ ಬೇಡೆಂದು ನೀ । ನದ ಮೀರಿ ನೆಗಳಲಿಂತಾಯ್ತು ॥
ಚದುರೆ ಪದ್ಮಿನಿ ನೀನೆ ಬಲ್ಲೆಯಿದಕೆ ತ । ಕ್ಕುದನೆಂದರರಸಿಯರಾಗ ॥ ೧೨೬ ॥
ಮಾತನಾಡಳು ದೈನ್ಯಬಡಳು ಕಾಲ್ಗೆರಗಿಯು । ಭೂತಳಪತಿ ಮುನಿದುದಕೆ ॥
ಸೋತ ಪಂಥದೊಳು ಪದ್ಮಿನಿ ಪಗಡೆಯಾಡಿ । ಸೋತವಳಂತಿರ್ದಳಾಗ ॥ ೧೨೭ ॥
ಭಾವಜ್ಞೆಯರು ಕೆಲರರಿದರವಳ ಮನೋ । ಭಾವವನರಸನೊಳಗನು ॥
ಆವ ಕಾರ್ಯವಿದಂಜದಿರು ತಿದ್ದಿ ಕೊಡುವೆವೆಂ । ದಾ ವಿಧುಮುಖಿಗೆ ನುಡಿದರು ॥ ೧೨೮ ॥
ಭೂಧವ ತೆಗೆ ನಿನ್ನ ಮುಸುಕನಿವಳೊಳಪ । ರಾಧವ ತೆರಿಸಿಕೊಡುವೆವು ॥
ಈ ಧೂರ್ತೆಗಾಗಿ ಮುಸುಕನಿಕ್ಕಬೇಕೆಯೆಂ । ದಾ ದೊರೆಯೊಡನೆ ನುಡಿದರು ॥ ೧೨೯ ॥
ತಪ್ಪೇನ ಕೊಡಿಸುವಿರೆಂದನವಳ ನಿನ । ಗೊಪ್ಪಿಸುವೆವು ನಿನ್ನ ಮನಕೆ ॥
ಬಪ್ಪಂತೆ ಮಾಡಿಕೊಳ್ಳೆಂದರಾ ನುಡಿಗೆ ನಾ । ನೊಪ್ಪೆನೋಜೆಯೊಳಾಡಿರೆಂದಾ ॥ ೧೩೦ ॥
ಪುರುಷಗೆ ತಪ್ಪುಮಾಡಿದ ಕಾಂತೆ ತಾನು ತ । ನ್ನರಸಿತನದ ಹಮ್ಮು ಬಿಟ್ಟು ॥
ಪರಿವಾರಸತಿಯಂತೆ ಕಾಳಂಜಿವಿಡಿದಾಗ । ಪರಿಹಾರವೆಂದು ತಿದ್ದಿದರು ॥ ೧೩೧ ॥
ವನಿತೆ ಕಾಳಂಜಿಯ ಪಿಡಿದು ದೇವರ ಸೆಜ್ಜೆ । ವನೆಗಿಂದು ಬಹಳದು ನಮ್ಮ ॥
ಅನುಮತವಿನ್ನು ಮುಸುಕ ತೆಗೆಯೆಂದಂಘ್ರಿ । ವನಜಕೆಲ್ಲರು ನಮಿಸಿದರು ॥ ೧೩೨ ॥
ನೀವು ಪೇಳ್ದುದ ನಾವು ಕೇಳಬೇಕಾದರೆ । ನಾವು ಪೇಳ್ದುದ ಕೇಳಿರೆಂದಾ ॥
ಆವುದು ಕೇಳ್ವೆವೆಂದರು ನಿಮ್ಮ ಪಾತ್ರದ । ಭಾವಕಿಯರು ಹೇಳಲೆಂದಾ ॥ ೧೩೩. ॥
ಅವರು ಪೇಳ್ದಂತೆ ಕೇಳುವೆವೆಂದರೊಡನೆ ಮಾ । ನವಪತಿ ಮುಸುಕ ನೂಂಕಿದನು ॥
ಕವಿದ ಮುಗಿಲ ನೂಂಕಿ ಸಂಪೂರ್ಣಚಂದ್ರ ತೋ । ರುವವೊಲು ಕಣ್ಗೆ ತೋರಿದನು ॥೧೩೪॥
ಹಾ ಜನನಾಥನ ಮೊಗಕಿಂದು ಸಟೆಯು ಸಂ । ವ್ಯಾಜದಿಂ ಮುಸುಕ್ಕೈದಿತೆಂದು ॥
ಆ ಜಾಣೆಯರು ಮುತ್ತಿನಕ್ಷತೆದಳಿದು ನೀ । ರಾಜನೋತ್ಸವವ ಮಾಡಿದರು ॥ ೧೩೫ ॥
ಜವನಿಕೆದೆರೆದಾಡಿದೀ ಪೆಂಗಳೊಳಗೇನು । ಸವಿಯಿದ್ದುದರಸ ನೀನೀಗ ॥
ಧವಳಪಟ್ಟೆಯ ನೂಂಕಿ ಮೊಗದೋರೆ ಮೋಹನ । ಚವಚವಿಸಿದುದೆಂದರವರು ॥ ೧೩೬ ॥
ಕೊಂಡಾಟ ಸಾಕಿನ್ನು ನಿಲ್ಲಿಯೆಂದನು ಕೂಡೆ । ತಾಂಡವಸತಿಯರ ಕರೆದು ॥
ಪಿಂಡಿತದುಡುಗೊರೆದೆಗೆದಿನ್ನು ಹಿಡಿಯಿರೌ । ಚಂಡಕಾತಿಯರಿರಾಯೆಂದಾ ॥ ೧೩೭ ॥
ಹಿಡಿಯಲೊಲ್ಲದೆವೊಬ್ಬರೊಬ್ಬರ ಮೊಗವನಾ । ಬೆಡಗುಕಾತಿಯರು ನೋಡಿದರು ॥
ಉಡುಗೊರೆಯನು ನೆಲಕೀಡಾಡಿ ರಾಜೇಂದ್ರ । ನೊಡನಾಗ ಮುಸುಕಿಕ್ಕಿಕೊಂಡಾ ॥ ೧೩೮ ॥
ನುಡಿದಂತೆ ಕೇಳ್ವೆವೆಂದೆನ್ನೊಳು ನುಡಿದು ಕೊ । ಹಿಡಿಯೆಂದರ್ಕೊಲ್ಲಿರೆ ನಿಮ್ಮ ॥
ನುಡಿ ನಿಮಗಿರಲೆಮ್ಮ ನುಡಿ ನಮಗಿರಲೆಂದು । ನುಡಿದು * ಮೌನದೊಳಿರ್ದನಾಗ ॥ ೧೩೯ ॥

---

* ಮೋನದೊಳಿದ್ದನೊಳಗೆ ॥

ಬೇಡವೆಂದೆವೆ ನಾವು ನಮ್ಮ ಮೊಗವನಿಷ್ಟು । ನೋಡಿದೆವಿದಕೆ ಮುನಿವರೆ ॥
ನೀಡುಡುಗೊರೆಯ ಕೈಕೊಂಬೆವೆಂದೆಲ್ಲರು । ಬೇಡಿಕೊಂಡರು ಕಾಲುವಿಡಿದು ॥ ೧೪೦ ॥

ಅಂತಃಪುರದವರೆಲ್ಲರು ನಾನು ಕೊ । ಟ್ಟಂತುಡುಗೊರೆ ಕೊಂಬುದುಂಟೆ ॥
ಕಾಂತೆಯರಿರ ನೀವು ಮಾತಾಡಿಯಿಲ್ಲದ । ರಂತಿರಿಯೆಂದನಾ ಸುರಸಾ ॥ ೧೪೧ ॥

ದೇವ ನೀನಿತ್ತುದ ಕೊಂಬೆವು ಕೊಂಬೆವೆಂ । ದಾ ವನಿತೆಯರು ಕಾಲ್ವಿಡಿದು ॥
ಆವರಣವ ತೆಗೆತೆಗೆಯೆಂದು ನುಡಿದರಿ । ನ್ನಾ ವಿಲಾಸವನೇನನೆಂಬೆ ॥ ೧೪೨ ॥

ಅಹುದೆಯಾದರೆ ಇಷ್ಟು ಸೈರಿಸಿರೆಂದು ಸಂ । ಗ್ರಹಿಸಿದ ಮುಸುಕಿನೊಳಿದ್ದು ॥
ಅಹಹ ಮತ್ತೊಂದು ವಿಸ್ಮಯವ ತೊಡಗಿದನಾ । ಸಹಸಿಗಳರಸನೇನೆಂಬೆ ॥ ೧೪೩ ॥

ಹಲಬರಿಗೊಂದುರೂಪಿನೊಳಿದ್ದು ಮನ್ನಣೆ । ಗಳ ತಿದ್ದಿ ತಳುವಹುದೆಂದು ॥
ಹಲವುರೂಪಾಗುವೆನೆಂದು ನೆನೆದನದು । ಸಲುವುದಾತನು ವಿಕ್ರಿಯಾಂಗಾ ॥ ೧೪೪ ॥

ಮುಗಿದ ಕಣ್ಣೆಂದಾಗ ಹಂಸನಾಥನ ನೋಡಿ । ಪ್ರಗುಣಚಿನ್ಮಂತ್ರವ ಜಪಿಸಿ ॥
ತೆಗೆದನು ಮುಸುಕನಾಗಳೆ ಭರತೇಶರು । ನೆಗೆದಿದ್ದರಾ ಮನೆತುಂಬಿ ॥ ೧೪೫ ॥

ಮೇಲಿಟ್ಟ ಮುಸುಕು ತೊಲಗಲಾಗಿ ಭರತಭೂ । ಪಾಲನೆ ಹಲವುರೂಪಾಗಿ ॥
ಬಾಲೆಬಾಲೆಯರಿಗೆ ತಪ್ಪದೊಪ್ಪಿದನಿಂದ್ರ । ಜಾಲವನಾಡಿದಂತಾಯ್ತು ॥ ೧೪೬ ॥

ಗದ್ದುಗೆಯೊಳು ಕುಳಿತಿದ್ದನು ಕೆಳಗೆ ನಿಂ । ದಿದ್ದ ಲತಾಂಗಿಯರೊಡನೆ ॥
ಎದ್ದು ನಿಂದಿದ್ದನೊಬ್ಬೊಬ್ಬಳಿಗೊಬ್ಬೊಬ್ಬ । ಮುದ್ದಿನ ಭರತೇಶನಾಗಿ ॥ ೧೪೭ ॥

ಭರತೇಶನಿಲ್ಲದೇಕಾಕಿಯಾಗಿಹ ಸತಿ । ಯರ ಕಾಣದರಸಿಯರೆಲ್ಲ ॥
ಶಿರದೂಗಿದರು ಜಿನಸಿದ್ಧಯೆಂದರು ತಮ್ಮ । ಪುರುಷನೇಳಿಗೆಗೆ ಹಿಗ್ಗಿದರು ॥ ೧೪೮ ॥

ಗದ್ದುಗೆಯೊಳು ತೋರುವುದು ಮೂಲಶರೀರ । ವಿದ್ದುವು ಶಾಖಾಶರೀರ ॥
ಹೊದ್ದಿದ ಹಲವುತನುವಿನೊಳಗಿದ್ದಾತ್ಮ । ನಿದ್ದನೊಬ್ಬನೆ ಪೂರ್ಣವಾಗಿ ॥ ೧೪೯ ॥

ಆ ತನುಹಲವು ಮತ್ತಾತ್ಮನೊಂದಾಗಿರ । ಲಾತನು ಕಣ್ಗೆ ತೋರಿದನು ॥
ಸ್ಯಾತೆಂಬ ನುಡಿಗೆ ವಿಮುಖವಾದ ಬ್ರಹ್ಮಾ । ದ್ವೈತನಾಟ್ಯವನಾಡಿದಂತೆ ॥ ೧೫೦ ॥

ಮೂಲವ ಮುಟ್ಟೆ ಶಾಖೆಯ ಮುಟ್ಟೆ ಸ್ಪರ್ಶನ । ಶೀಲವರಿವ ವೃಕ್ಷದಂತೆ ॥
ಮೂಲದೇಹದೊಳು ಶಾಖಾದೇಹದೊಳು ಸುಖ । ಲೀಲೆಗಾಣ್ಬನು ವಿಕ್ರಿಯಾಂಗಾ ॥ ೧೫೧ ॥

ತೆಗೆತೆಗೆದುತ್ತಮಾಭರಣವಸ್ತ್ರವ ತನ್ನ । ಮೃಗನೇತ್ರೆಯರಿಗೊಲಿದಿತ್ತು ॥
ಬಿಗಿಬಿಗಿದಪ್ಪಿಕೊಂಡರ್ತಿಮಾಡಿದನೇನ । ಹೊಗಳುವೆನವನ ಲೀಲೆಯನು ॥ ೧೫೨ ॥

ಅಲ್ಲಲ್ಲಿ ನಿಂದವಳಿಗಲ್ಲಲ್ಲಿಯುಡುಗೊರೆ । ಯಲ್ಲಲ್ಲಿ ತಕ್ಕಿಸಿಕೊಳುತ ॥
ಎಲ್ಲಿ ನೋಡಿದರು ತಾನಾಗಿದ್ದನಾ ರಾಯ । ಚೆಲ್ಲಿದಂತೇನ ಬಣ್ಣಿಪೆನು ॥ ೧೫೩ ॥

ಉತ್ತಮವಸ್ತ್ರವ ಕೊಡುವನಾಲಿಂಗಿಸಿ । ಮುತ್ತ ಕೊಡುವನು ಪೆಂಗಳಿಗೆ ॥
ಮತ್ತೊಬ್ಬರಿಲ್ಲಾಗ ತಾನು ತನ್ನರಸಿಯ । ರುತ್ತುಂಗಲೀಲೆಮಾಡಿದರು ॥ ೧೫೪ ॥

ತಿಲಕವ ತಿದ್ದುವ ನೊಸಲೊಳು ನೊಸಲಿಟ್ಟು । ಕಲಕಿ ಬಿಡುವನವನೊಮ್ಮೆ ॥
ಎಲಗೆ ನಿಲ್ಲಿನ್ನು ಚೆನ್ನಾಗಿ ಬೊಟ್ಟಿಡುವೆನೆಂ । ದೊಲಿದಿಡುವನು ಚೊಕ್ಕಬೊಟ್ಟಾ ॥ ೧೫೫ ॥

ನೆಲೆಮೊಲೆಗಳ ಬಿಗಿದಪ್ಪುತೊಯ್ಯನೆ ಕೆಲ । ದೊಳಗುಗುರಿಕ್ಕಿ ಬಿಡುವನು ॥
ಕೆಲಬರ ಚುಂಬಿಸುವನು ಕೆಲಬರಿಗೆ ತಂ । ಬುಲಗೊಟ್ಟು ಬಿಡುವನಾ ರಸಿಕಾ ॥ ೧೫೬ ॥

ಒರ್ವ ಪುರುಷನೊರ್ವ ಸತಿಯ ಮನ್ನಿಸುವಂತೆ । ಸರ್ವಕಾಂತೆಯರ ಮನ್ನಿಸಿದಾ ॥
ಸರ್ವಜ್ಞ ಬಲ್ಲನಾ ಭರತರಾಜನ ಗಂಡ । ಗರ್ವದ ಸಿರಿಯನೇನೆಂಬೆ ॥ ೧೫೭ ॥

ಪ್ರಣಯಸುಖದೊಳಬಲೆಯರ ಮನ್ನಿಸಿದ ಮ । ನ್ನಣೆಯಿಂದ ಹಿರಿದು ಮನ್ನಿಸಿದಾ ॥
ಕ್ಷಣಕ್ಷಣಕವರಿಗೇರಿತು ಕಾಮವದರ ಲ । ಕ್ಷಣವ ಕಂಡನು ರಾಜವೋಹಿ ॥ ೧೫೮ ॥

ಸಾಕಿನ್ನು ಸೆಜ್ಜೆವನೆಗೆ ಹೋಹವೆಂದವ । ಲೋಕಿಸಿದನು ಸುದತಿಯರಾ ॥
ಏಕೆ ಸುಮ್ಮನೆ ನಿಂದೆ ಪದ್ಮಿನಿ ಡವಕೆಯ । ಭೂಕಾಂತಗಾನೆಂದರವರು ॥ ೧೫೯ ॥

ಆಗಲೆಂದವಳು ಕಾಳಂಜಿಗೆ ಕೈನೀಡು । ವಾಗ ಭೂಭುಜ ಕೈಯ ಹಿಡಿದಾ ॥
ಆಗಳೆ ಬಂದಿತು ನಿನ್ನರ್ತಿಯೆಂದು ಲೇ । ಸಾಗಿ ತಾನವುರ್ದಪ್ಪಿಕೊಂಡಾ ॥ ೧೬೦ ॥

ತಬ್ಬಿದ ವೇಳೆಯೊಳವಳುಬ್ಬಿದಳು ಮುಂದು । ಹೆಬ್ಬಾಗಿಲಿಟ್ಟಣಿಪಂತೆ ॥
ಕಬ್ಬುವಿಲ್ಲನರೂಪ ಮುತ್ತ ಕೊಟ್ಟನು ನಿಡು । ಹುಬ್ಬಿನ ಪೆಣ್ಣ ಮನ್ನಿಸಿದಾ ॥ ೧೬೧ ॥

ಕೆಲದೊಳು ಮತ್ತಾಕೆ ನಿಂದಳು ಡವಕೆಯ । ತಳೆದರೆ ಕೊರತೆಯೇನೆಂದು ॥
ಲಲನೆಯರೆಲ್ಲರು ಕಾಳಂಜಿವಿಡಿದಾಡಿ । ಚೆಲುವನ ಮುಂದಿರಿಸಿದರು ॥ ೧೬೨ ॥

ಬಿನದಕೊಂದಪರಾಧವೆಂದೆವಲ್ಲದೆ ರಾಯ । ನಿನಗೆ ಕಾಳಂಜಿವಿಡಿವುದು ॥
ವನಿತೆಯ ಪೂರ್ವಜನ್ಮದ ಪುಣ್ಯವೆಂದರು । ಬಿನದಕಾತಿಯರು ಭಕ್ತಿಯಲಿ ॥ ೧೬೩ ॥

ಅನಿತರೊಳಗೆ ಸಮರಾತ್ರಿಯ ಘಂಟೆ ಠೊಂ । ಣನೆ ಕೇಳಲಾಯ್ತು ಹೋಯೆಂದು ॥
ಮುನಿಸ ತಿಳುಹುವೆನೆಂದತಿವೇಳೆಯಾಯ್ತೆಂದು । ಜನಪನಾಡಿದನು ಪೆಂಗಳೊಳು ॥ ೧೬೪ ॥

ಹಿಂದಾದಿಜಿನಬಿಂಬ ಮುಂದೆ ಛಾಯಾಬಿಂಬ । ಕಂದವನತಶಿರನಾಗಿ ॥
ಹೊಂದೊಡರುಲಿ ಝಣಝಣರೆನೆ ಗದ್ದುಗೆ । ಯಿಂದೆದ್ದನಾ ಸಾರ್ವಭೌಮಾ ॥ ೧೬೫ ॥

ಗಂಡರಗಂಡ ತಾಂಡವವ ಕಂಡೊಲ್ದೆಳೆ । ವೆಂಡಿರ ಮನ್ನಿಸಿಯುವರಾ ॥
ಹಿಂಡೊಡಗೂಡಿಕೊಂಡೆದ್ದನೆಂಬಲ್ಲಿಗೆ । **ತಾಂಡವವಿನಯದ ಸಂಧಿ** ॥ ೧೬೬ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೬೭ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೬೮ ॥

ಕತ್ತಲೆಯನು ಕೆಡೆಮೆಟ್ಟಿ ಪ್ರಕಾಶದ । ಮೊತ್ತದೊಳೋಲಗಗೊಟ್ಟು ॥
ಎತ್ತಲು ತೊಲಗದೆನ್ನೆದೆಯೊಳಗಿರು ಮಹೋ । ದಾತ್ತ ಚಿದಂಬರಪುರುಷಾ ॥ ೧೬೯ ॥

ತಾಂಡವವಿನಯಸಂಧಿ ಸಂಪೂರ್ಣಂ

## ಶಯ್ಯಾಗೃಹಸಂಧಿ.

ಎಣಿಕೆಗೆ ಬಾರದನಂತಸದ್ಗುಣದ ತಿಂ । ತಿಣಿಯೊಳೊಪ್ಪುವ ಮಹಾದೇವಾ ।
ಹಣಹೊನ್ನಚೌಕದಟ್ಟೆದವೊಲು ನುಡಿಯ ಪ್ರೇ । ರಣಿಸು ನಿರಂಜನಸಿದ್ಧಾ ॥ ೧ ॥
ಕೊಳದೊಳಾಡಿದ ಹಂಸ ಪೆಣ್ಗೂಡಿ ಮತ್ತೊಂದು । ತಿಳಿಗೊಳದೆಡೆಗೆ ಹೋಹಂತೆ ॥
ಎಳೆವೆಂಗಳೊಡಗೂಡಿ ನಾಟಕಗೃಹದಿಂದ । ತಳರ್ದನಾ ವಿಭು ಸೆಜ್ಜೆವನೆಗೆ ॥ ೨ ॥
ನಿಷ್ಕುಟಿಲಾಂಗನು ವರ್ಧನಾವತಿಯೆಂಬ । ನಿಷ್ಕನಾಟಕಶಾಲೆಯಿಂದ ॥
ಪುಷ್ಕರಾವತಿಯೆಂಬ ಸೆಜ್ಜೆವನೆಗೆ ಪಾದ । ಪುಷ್ಕರವಿಟ್ಟನೊಲ್ಮೆಯೊಳು ॥ ೩ ॥
ತೋರಿದ ಹಲವುರೂಪಳಿಯದೆ ಹಲಬರು । ನೀರೆಯರುಗಳ ಕೈವಿಡಿದು ॥
ನೀರರದೇವ ನಡೆದನು ಕಾವನ ನಾಡ । ಸೂರೆಯ ಕೊಂಡೈದುವಂತೆ ॥ ೪ ॥
ನಾಟಕಶಾಲೆಯ ದಾಂಟದನಹುದು ಸ । ಘಾಟಿಕೆ ಮೆರೆಯೆ ಪೆಂಗಳೊಳು ॥
ನೋಟನುಡಿಯೊಳೈದುತಿಹ ಲೀಲೆ ತಾನೊಂದು । ನಾಟಕವಾದುದೇನೆಂಬೆ ॥ ೫ ॥
ಕೆಂಪುಕರಿದುಸಾಮವಣ್ಣ ತೆಳ್ಳಿತುತೋರ । ನುಂಪಿನ ಮೈಯ ಪೆಣ್ಣುಗಳ ॥
ಗುಂಪಿನೊಳಗೆ ಬಂದ ತಾನೊಬ್ಬ ಹಲವುರೂ । ಪಂ ಪಡೆದವರ ಕೈವಿಡಿದು ॥ ೬ ॥
ಬೆಡಗಿಂದ ಕೆಲಬರ ಕೈಲಾಗುವಿಡಿದಡಿ । ಯಿಡುತಿರ್ದ ಮತ್ತೆ ಕೆಲಬರ ॥
ನಡುವನೆಡದ ಕೈಯೊಳಪ್ಪಿ ಮಾತಾಡುತ । ನಡೆವುತಿರ್ದನು ಮೋಡಿಕಾರಾ ॥ ೭ ॥
ಕುಟಿಲಕುಂತಲೆಯರ ಕೆಲಬರ ಬೆರಳಿನ । ಚಿಟುಕ ತೆಗೆವುತ ನಡೆದನು ॥
ನಟನಳಿಯೆನೆ ಕೆಲಬರು ತನ್ನ ಬೆರಳ್ಗಳ । ಚಿಟುಕ ತೆಗೆಯಲೊಲ್ದು ನಡೆದಾ ॥ ೮ ॥
ಕೆಲಬರು ತನಗೊಲಿದೆಲೆಯ ಘಳಿಗೆಯ ಸಂ । ಗೊಳಿಸೆ ಕೈಕೊಳುತ ನಡೆದನು ॥
ಕೆಲಬರಿಗೆಲೆಯ ಘಳಿಗೆಯ ತನ್ನಾಣೆಯೆಂ । ದೊಲಿದು ಕೊಡುತ ಹೋಗುತಿಹನು ॥ ೯ ॥
ಮಡಿಮಡಿದೆಲೆಯ ಘಳಿಗೆಯ ನಲ್ಲನ ಕೈಗೆ । ಕೊಡುತ ನಡೆದರು ಕೆಲಬರು ॥
ಕೊಡದೆ ಕೆಲಬರು ಮತ್ತವನ ಬಾಯ್ದೆರೆಗೂಡು । ತಡಿಯಿಟ್ಟರಧಿಕಲೀಲೆಯೊಳು ॥ ೧೦ ॥
ಬಾಯ್ದೆರೆದೆಲೆಯ ಘಳಿಗೆಯ ಕೆಲಬರೂಡಿ । ಕೆಯ್ದೆಗೆವರು ಕೆಲರವನ ।
ಬಾಯ್ದೆರೆಗರ್ಧಘಳಿಗೆಯ ಕೊಟ್ಟರ್ಧವ । ನೊಯ್ದುಕೊಂಬರು ತಮ್ಮ ಬಾಯ್ಗೆ ॥ ೧೧ ॥
ಕಡುಲೋಭಿಗಳಿರಾ ಘಳಿಗೆಯೊಂದ ಕೊಡುತಿರ್ದು । ಕೊಡದರ್ಧವನು ಕೊಂಡಿರೆಂದಾ ॥
ಬಡಮನಸಿನ ಹೆಂಗಳರಸ ನಿನ್ನಂತಾವು । ಕಡುಚಾಗಿಗಳೆಯೆಂಬರವರು ॥ ೧೨ ॥
ನಲ್ಲ ಕೇಳದಕಲ್ಲ ನಿನ್ನ ಬಾಯ್ದೆರೆಸೋಂಕಿ । ನಲ್ಲಿ ಬಂದೆಲೆಯ ಭಾಗವದು ॥
ಬೆಲ್ಲಸಕ್ಕರೆಯ *ಸೋಲಿಸುತದೆ ಸವಿಯಿದ । ಕೆಲ್ಲಿ ಬಂದುದೊಯೆಂಬರವರು ॥ ೧೩ ॥

---

* ನಾಣ್ಚಿಸುತದೆ.

ನಮ್ಮ ಕೈಯಿಂದ ನಾವೆಷ್ಟೆಲೆಕೊಂಡರು । ಜುಮ್ಮುದಟ್ಟುವುದಿಲ್ಲ ನಮಗೆ ॥
ಘಮ್ಮನೆ ನಿನ್ನ ಬಾಯ್ದೆರೆಸೋಂಕಿ ಬರೆ ಜುಮ್ಮು । ಜುಮ್ಮೆನುತಿದೆಯೆಂಬರೊಸೆದು ॥ ೧೪ ॥

ನೂರುಘಳಿಗೆಯು ಕೊಡುವೆವಾವು ನೀನೆಮ । ಗಾರುಘಳಿಗೆ ಕೊಡು ಸಾಕು ॥
ಮಾರಾಟ ನಿನಗಿದು ಲಾಭವಲ್ಲವೆಯೆಂದು । ನೀರೆಯರಿಂಪನಾಡುವರು ॥ ೧೫ ॥

ಲಲನೆಯನೊಬ್ಬಳನೊಬ್ಬ ಕೈವಿಡಿದಂತೆ । ಹಲವುಪೆಂಗಳೊಳೈದುತಿರ್ದಾ ॥
ಛಲವೆಂತು ಬಹುದಿನ್ನು ಸವತಿಮತ್ಸರವೆಂತು । ನೆಲಸುವುದವನ ಪೆಂಡಿರಿಗೆ ॥ ೧೬ ॥

ಹುರುಡು ಹುಟ್ಟದವೊಲು ಸಕಲಕಾಂತೆಯರೊಳು । ಪರಿಣಮಿಸಿರುತಿಹನಾಗಿ ॥
ಪುರುಷರೊಳುತ್ತಮನೀತನೆಂದಾತಗೆ । ಪುರುಷೋತ್ತಮನೆಂಬ ನಾಮಾ ॥ ೧೭ ॥

ಮೂಲಶರೀರ ಪದ್ಮಿನಿಯ ಕೈಲಾಗಿ । ನಾಲಂಬವಿಡಿದು ನಡೆದುದು ॥
ಸಾಲು ಶಾಖಾದೇಹಗಳು ಮಿಕ್ಕ ಸತಿಯರೊ । ಳಾಲಿಂಗನದಿ ನಡೆದುವು ॥ ೧೮ ॥

ತೊಟ್ಟಿಯಾಗಿರೆ ಮಾಡಿ ಮಲಗುವ ಮನೆ ಹಲ । ವಿಟ್ಟಣಿಸಿರಲು ಬೇರೊಂದು ॥
ಪಟ್ಟಣದಂತಿಹುದದರ ಮದಿಲ ದಾಂಟಿ । ಪಟ್ಟವರ್ಧನನೊಳಹೊಕ್ಕಾ ॥ ೧೯ ॥

ನಿಡುಗೆರೆಯಾಗಿ ನಾಲ್ದೆಸೆಗೆ ಸಾಲಾಗಿ ಚೆ । ಲ್ವಡರಿದ ಸೆಜ್ಜೆವನೆಗಳು ॥
ಇಡಿಕಿರಿದಿದ್ದುವಾ ಮನೆಗಳೆಲ್ಲರ ನಟ್ಟ । ನಡುವಣ ಮನೆ ಗೃಹರಾಜಾ ॥ ೨೦ ॥

ಮನೆಮನೆತಪ್ಪದೆ ಕನಕತೋರಣಗಳು । ಕನಕಗೋಪುರ ರತ್ನಕಲಶಾ ॥
ಕನಕದ ಸೋಪಾನದಿಂದ ರಾಯನ ಸೆಜ್ಜೆ । ವನೆಗಳ ಕೇರಿ ರಂಜಿಸಿತು ॥ ೨೧ ॥

ಮುತ್ತಿನ ಜಗಲಿ ಹೊನ್ನುಯ್ಯಾಲೆ ಕೀಲಣೆ । ಗೆತ್ತಿದ ಮದನಕೈಯಿಂದ ॥
ಕತ್ತುರಿಸಾದುಕುಂಕುಮದ ಸಾರಣೆಯಿಂದ । ವೊತ್ತದ ಮನೆಗಳೆಸೆದುವು ॥ ೨೨ ॥

ಆಲಯಗಳ ಮುಂದೆ ಮಿರುಮಿರುಗುವ ಪಟ್ಟ । ಶಾಲೆಯು ಮದನಕೈಗಳೊಳು ॥
ಜೋಲುವ *ದೀಪಸಾಲುಗಳೊಳು ಕೇರಿ ದೀ । ಪಾಳಿಯ ಹಬ್ಬದಂತಿಹುದು ॥ ೨೩ ॥

ಹೊನ್ನಾನೆಗಲ್ಲಿಂದ ಹೊಳೆವಳಿಗೆಯ ಸಾಲು । ಗನ್ನಡಿಯಿಂದ ಗೋಡೆಗಳ ॥
ಕಿನ್ನರಕಿಂಪುರುಷರ ಚಿತ್ರದಿಂದ ಸಂ । ಪನ್ನಗೃಹಗಳು ಮೆರೆದುವು ॥ ೨೪ ॥

ಕಾಂಚನಮಂಚ ಮಾಣಿಕಮಂಚ ಶ್ರೀಗಂಧ । ಮಂಚ ಪೊಂಮುಡಿಬೆಳ್ಳಿಮಂಚ ॥
ಪಂಚರತ್ನದ ಮಂಚ ನವರತ್ನಮಂಚಗ । ಳಂಚಿತವಾದುವಲ್ಲಲ್ಲಿ ॥ ೨೫ ॥

ಚಪ್ಪರಮಂಚ ಗುಜ್ಜರಿಗಾಲಮಂಚ ಮೇ । ಲುಪ್ಪರಮಂಚ ಹೂಮಂಚ ॥
ನಿಪ್ಪಟ್ಟೆಶಕುನಿತೂಗುವ ಮಂಚ ಸೆಳೆಮಂಚ । ವೊಪ್ಪವಾಂತೆಸೆದುವಲ್ಲಲ್ಲಿ ॥ ೨೬ ॥

ಅಂಚೆದುಪ್ಪುಳುವಾಸು ಕೌಳುಡೆ ಮಲಗು ಪೊ । ಣ್ಮಂಚಿಯ ಮೇಲ್ಗಟ್ಟು ಗಿಂಡಿ ॥
ಮಿಂಚುವಡಿಗವೀಣೆ ಸಂಗಲಿಸಿದುವು ಲಾ । ವಂಚದ ಬೀಸಣಿಗೆಗಳು ॥ ೨೭ ॥

* ದೀಪದ ಸಾಲಿಂದ.

ಪರಿಪಕ್ವಫಲಪಾನವೀಳೆಯದೆಲೆದಟ್ಟಿ । ಪರಿಮಳವಸ್ತುಗಳಾಗ ॥
ವರಮಂಚದೊತ್ತಿನೊಳೆಸೆದುವಾ ಸುಖಿಗಳ । ಬರವ ಹಾರುತ ಮೀಸಲಾಗಿ ॥ ೨೮ ॥
ಶಯನದ ಗೃಹವೆಲ್ಲ ನವರತ್ನಮಯಹೇಮ । ಮಯಗಳು ಮತ್ತವನೊಲ್ದು ॥
ಮಯನು ನಿರ್ಮಿಸಿದನೆಂದಾಡಿ ಬಿಡುವೆನು ವಿ । ಸ್ಮಯಬಟ್ಟು ಪೊಗಳಲಾನರಿಯೆ ॥ ೨೯ ॥
ಮುದುಕಿಮುದುಕರೊಮ್ಮೆ ಹೊಕ್ಕರಾ ಮನೆಗಳು । ಬೆದೆಬೆದೆಗೊಳಿಸಿ ಕಾಡುವುವು ॥
ಮದವೆದ್ದ ಜವ್ವನದರಸಗರಸಿಯರಿ । ಗೆದೆಸೊಕ್ಕು ಮಾಳ್ಪುದಚ್ಚರಿಯೆ ॥ ೩೦ ॥
ಕೊಡಗೂಸುಗಳು ಬಂದು ಹೊಕ್ಕರಾ ಮನೆಗಳು । ತಡೆಯದೆ ಪ್ರಾಯವೇರಿಪುವು ॥
ನುಡಿಯದವರ ನುಡಿಸುಪುವಲ್ಪಕಾಮಿಯ । ಕಡುಕಾಮಿ ಮಾಳ್ಪುವೇನೆಂಬೆ ॥ ೩೧ ॥
ಪಾರಿವಾಳದ ಪಕ್ಕಿ ಮದನಕೈಯೊಳು ತನ್ನ । ನಾರಿಗಿದಿರು ನಡೆದಾಡಿ ॥
ಗೂರುಳು ಗುಕುಗುಕು ಗುಟುಗುಟು ಗುರುಗುರು । ಚಾರಿಟಿಯೆಂದುವಲ್ಲಲ್ಲಿ ॥ ೩೨ ॥
ಭಾವ ಬಂದನು ತನ್ನ ಭಾವಕಿಯೆಡೆಗೀಗ । ಭಾವಜಕೇಳಿಗೆ ಬಂದಾ ॥
ಭಾವಿಸೆ ಬಡಪರಿಯವನಲ್ಲವೆಂದು ಶು । ಕಾವಳಿ ನುಡಿದುವಲ್ಲಲ್ಲಿ ॥ ೩೩ ॥
ಅಕ್ಕ ಬಂದಳು ಭಾವಗಧರಸುಧೆಯನುಣ । ಲಿಕ್ಕಬಂದಳು ತನ್ನಪತಿಯು ॥
ತಕ್ಕೆಯ ಸುಖದೊಳೋಲಾಡಲೈದಿದಳೆಂದು । ನಕ್ಕವು ಗಿಳಿಗಳಲ್ಲಲ್ಲಿ ॥ ೩೪ ॥

ಶಾಖಾದೇಹದೊಳೊಬ್ಬಳೊಬ್ಬಳ ಹಸ್ತ । ಶಾಖೆಯೊಳೊಂದೊಂದು ಮನೆಯಾ ॥
ಶ್ರೀಖಂಡಗಂಧ ಹೊಕ್ಕನು ಕೇರಿ ತುಂಬಿರ್ದ । ವಾಖಂಡಲಪುರದಂತೆ ॥ ೩೫ ॥
ರಾಜಿಸೆ ನಾಲ್ದೆಸೆಯೊಳು ಕೇರಿ ನಡುವೆ ವಿ । ಭ್ರಾಜಿಪಗೃಹರಾಜನೆಂಬಾ ॥
ರಾಜಗೃಹವ ಮೂಲತನುಗೂಡಿ ಹೊಕ್ಕನಾ । ರಾಜನಾ ಪದ್ಮಿನಿಸಹಿತ ॥ ೩೬ ॥
ಆವರಿಸಿದ ಕೋಟೆಯೊಳಗಣುರ್ವಿಗೆ ಪುಷ್ಕ । ರಾವತಿಯೆಂದೆಂಬ ನಾಮಾ ॥
ಆವಿಷ್ಟಮಧ್ಯಗೃಹವೆ ಗೃಹರಾಜನಾ । ಭೂವರ ಹೊಕ್ಕನಾ ಗೃಹವಾ ॥ ೩೭ ॥
ಬಾಗಿಲೊಳಿನೆಯಳ ಕೈಲಾಗ ಬಿಟ್ಟೊಳ । ಗಾಗಿ ಮಂಚದ ಮೇಲೆ ಕುಳಿತಾ ॥
ಆ ಗೃಹದೊಳಗೊಂದುಮರೆಗೆ ಸಾರ್ದಬಲೆ ನಾ । ಟ್ಯಾಗಮವೇಷವಳಿದಳು ॥ ೩೮ ॥
ಮೊಲೆಗಟ್ಟು ಕಾಸೆ ಚಲ್ಲಣ ತುರುಬಿನ ಮಣಿ । ಬಲೆ ಮೊದಲಾದುವ ತೆಗೆದು ॥
ಬೆಳುವಟ್ಟೆಯುಟ್ಟು ಚಮತ್ಕಾರದೊಳು ಬಂದ । ಳೆಲೆಲೆ ಮೋಹನವದೊಂದೆನಿಸಿ ॥ ೩೯ ॥
ಸಿಂಹವಾಹಿನಿಯೆಂಬ ಮಂಚದ ಮೇಲಿದ್ದ । ಸಿಂಹವಿಕ್ರಮನ ಕೆಲದೊಳು ॥
ಸಿಂಹಾಯತಮಧ್ಯೆ ಕುಳಿತಳು ಜಾಡ್ಯವ । ಸಂಹರಿಸುವ ಶಕ್ತಿ ಮೆರೆಯೆ ॥ ೪೦ ॥
ಕಾಲ್ಗತೊಳೆವುತಂಗದಟ್ಟವನಿಕ್ಕುತ । ವೀಳೆಯಗೊಡುತ ಮತ್ತವರ್ಗೆ ॥
ಕಾಲೋಚಿತದ ಸೇವೆಯ ಮಾಡುತಿದ್ದುವು । ಸಾಲಭಂಜಿಕೆಗಳೇನೆಂಬೆ ॥ ೪೧ ॥

ಹಳೆಯನುಲೇಪವ ತಿಮಿರಿ ತೆಗೆದು ಪರಿ । ಮಳಗಳ ಹೊಸತಾಗಿ ತೊಡೆದು ॥
ಅಲರ ಮುಡಿಸುತ ನೂತನವಸ್ತ್ರಗೊಡುತ ಪು । ತ್ತಳಿಗಳಿದ್ದುವು ಬಳಸಿನೊಳು ॥ ೪೨ ॥
ಹಲವುಪುತ್ತಳಿಗಳು ಸೇವೆಯ ಮಾಳ್ಪಾಗ । ನಿಲಿಸಿದಳೊಂದು ಪುತ್ತಳಿಯಾ ॥
ಎಲೆಯ ಘಳಿಗೆಯ ತನ್ನರಸಗೆ ತಾನರ್ತಿ । ಯೊಳು ಕೊಡುತಿರ್ದಳಾ ಜಾಣೆ ॥ ೪೩ ॥

ಕಡುಪಂಥಗಾತಿ ನೀನೆಲಗೆ ವೀಳೆಯದೆಲೆ । ಗೊಡದಿರಂಜುವೆವು ನಾವೆಂದಾ ॥
ನಡೆಯಿತೆ ನಿನ್ನ ಮುಂದೆನ್ನಯ ಪಂಥ ಕೊ । ಪಿಡಿ ಸುಮ್ಮನೆನುತೀಯುತಿಹಳು ॥ ೪೪ ॥
ಬರಿನುಡಿಗಳನೆ ಕಲಿತೆ ಮೃದುವಚನವ । ಮರೆತೆಯಲಾ ಪದ್ಮಿಯೆಂದ್ದಾ ॥
ಬಿರಿಸೇನು ನೀವುತಾವೆಂದು ಛಾಂದಸಿಕೆಯ । ಮೆರೆಯ ಬೇಕೆಯೆಂದಳವಳು ॥ ೪೫ ॥
ಆಗಲಾಗಲಿ ದೇವರೆಲೆಯ ಘಳಿಗೆಯ ಲೇ । ಸಾಗಿ ಚಿತ್ತೈಸಿ ಹಸಾದಾ ॥
ಭಾಗದೆಲೆಯೊಳಿನಗರ್ಧವ ಪಾಲಿಸಿ । ಯೀಗಲಾದುದೆಯೆಂದಳವಳು ॥ ೪೬
ಅಕ್ಕಟಕ್ಕಟ ನೋಡಯಿವಳಿಗೆನ್ನೊಡನೆಕ್ಕ । ಸಕ್ಕದುದಾಸೀನದಾಟಾ ॥
ಲೆಕ್ಕಕೆ ತಾರೆ ನಾನಾರಂತೆ ನಿನ್ನ ನೋ । ಟಕ್ಕೆ ತೋರಿದೆನೊ ಹಾಯೆಂದಾ ॥ ೪೭ ॥
ದೇವ ನೀನೆನ್ನ ನೋಟಕೆ ನನ್ನ ಮನಕೆ ಸಂ । ಜೀವನವಾಗಿ ತೋರಿದಪೆ ॥
ಹಾ ವೈಶಿಕದಾಟ ಸಾಕೆಂದು ಮುನಿದು ಕ । ಲಾವಿದ ಮೊಗವಡ್ಡ ತೆಗೆದಾ ॥ ೪೮ ॥
ಹರಣವ ಸೂರೆಗೊಂಡರಸ ನೀನರೆ ಮೊಗ । ದಿರುಹಿದರಾನು ಬಿಡುವೆನೆ ॥
ತಿರುಗಿತ್ತಲೆಂದು ತನ್ನತ್ತ ತೆಗೆದಳು ನುಂ । ಗೊರಳನೆಡದ ತೋಳೊಳಪ್ಪಿ ॥ ೪೯ ॥
ತೆಗೆದಂತೆ ಮೊಗವ ಸಮ್ಮುಖಕೆ ಕೊಟ್ಟನು ಕಣ್ಣ । ಮುಗಿದು ಮೌನದೊಳಿರ್ದನಾಗ ॥
ಮುಗಿದ ಕಣ್ಣಾಗಿಯು ಮೊಗದ ಕಾಂತಿಯ ನೋಡಿ । ನಗುತ ನಗುತ ಚುಂಬಿಸುವಳು ॥ ೫೦ ॥
ನೊಸಲೊಳು ನೊಸಲ ತಾಟಿಸುತ ಮುಂಡಾಡಿ ಚುಂ । ಬಿಸುವಳು ಕೊರಳನಪ್ಪುವಳು ॥
ಸಸಿನೆ ಕಣ್ದೆರೆದೊಲ್ದು ನೋಡೆನ್ನಪ್ರಾಣದ । ಬೆಸುಗೆಕಾರಾಯೆಂಬಳೊಡನೆ ॥ ೫೧ ॥
ನೀಡುವಳೆಲೆಯ ಘಳಿಗೆಯ ಬಾಯ್ದೆರೆಗೆ ಪ । ಲ್ಗಾಡಿಕೊಂಬನು ಕೊಳ್ಳದದನು ॥
ಕಾಡದಿರಿನೆಯ ನೀನೆನ್ನನೆನುತಲಾಗ । ಬೇಡಿಕೊಂಬಳು ಲಲ್ಲೆಗರೆದು ॥ ೫೨ ॥
ಉಗುರಿಕ್ಕುವಳು ನೇಮನೇಮಕವನ ಮೈಯ । ದುಗುಲವ ನೂಂಕಿ ತನ್ನೆದೆಯ ॥
ದುಗುಲವ ತೆಗೆದಮರ್ದಪ್ಪಿಕೊಂಬಳು ರೋಮ । ನೆಗೆದು ಮೈಯೊಳು ತುಂಬುವಂತೆ ॥ ೫೩ ॥
ಚೀರುಚೀರೆಂದು ಚೆಂದುಟಿಗರ್ಚಿ ಸುಧೆಯನು । ಹೀರುವಳಿನಿಸು ಗುದ್ದುವಳು ॥
ಮಾರನ ಮದವನಂಡಲೆವ ಚೆಲ್ವಿನ ಹೊಂತ । ಕಾರಿ ನೋಡೆಂದು ಮುದ್ದಿಪಳು ॥ ೫೪ ॥
ಪದ್ಮಿಯ ಪ್ರಾಣದೊಡೆಯನೆ ಕಣ್ದೆರೆ ಬೇಗ । ಪದ್ಮಿಯ ಸಿರಿಯೆ ಮಾತಾಡು ॥
ಪದ್ಮನಿಗರ್ತಿದೋರೆಂದು ಮುದ್ದಿಸಿ ಮುಖ । ಪದ್ಮವ ತಡವಿ ನೋಡುವಳು ॥ ೫೫ ॥

ಗಿಳಿಯಂತೆ ನುಡಿವಳು ಲತೆಯಂತೆ ತಬ್ಬುವ । ಳಿಳಿದು ಹರಿವ ಹೊಳೆಯಂತೆ ॥
ಗಳರವತೋರುವಳಪ್ಪಿ ತೂಗಾಡಿ ಕಂ । ಗಳ ತೆರೆಯೆಂದು ಕಾಡುವಳು ॥ ೫೬ ॥

ಆ ನೀರೆ ಮಾಡುವ ಕಲೆಗೆ ಮೈಮಿಸುಕದೆ । ತಾನೊಂದು ಪುತ್ಥಳಿಯಂತೆ ॥
ಜ್ಞಾನಾತ್ಮನೊಳಗಿದ್ದನಾ ರಾಯನೆನಲಾತ್ಮ । ಧ್ಯಾನದ ಶಕ್ತಿ ಸದರವೆ ॥ ೫೭ ॥

ಏನ ಸಾಧಿಸಿದನೊ ಭರತರಾಜೇಂದ್ರ ಹಂ । ಸಾನುಭವವ ಮುಝು ಮುಮ್ಮಾ ॥
ಮೀನಾಕ್ಷಿ ಕೆಲದೊಳಗಿದ್ದು ನೆನೆದರಾತ್ಮ । ಧ್ಯಾನ ತೋರುವುದರಿದಲ್ತೆ ॥ ೫೮ ॥

ತವಕದೊಳವಳು ಸೈರಿಸಲಾರದವನ ಪಾ । ದವ ಕಟ್ಟಿಕೊಂಡು ನೀನೆನ್ನ ॥
ಸವಿಯೊಳೋಲಾಡಿಸು ಕಣ್ದೆರೆಯೆಂದು ದೈ । ನ್ಯವ ತೋರಿ ನುಡಿದಳರ್ತಿಯೊಳು ॥ ೫೯ ॥

ಅದಕೂ ಕಣ್ದೆರೆಯನವಳು ಕಂಡಳಾತ್ಮಯೋ । ಗದ ಶಕ್ತಿವಿಡಿದಿರ್ದನೆಂದು ॥
ಇದಕೆ ತಂತ್ರವ ಬಲ್ಲೆ ನಾನೆಂದು ನೃಪನ ಚಿ । ತ್ತದ ನೆಲೆಯರಿದು ನುಡಿದಳು ॥ ೬೦ ॥

ಅರಸ ಕಣ್ದೆರೆ ತೆರೆಯದಿರೆ ಚಿದಂಬರ । ಪುರುಷನ ಮೇಲಾಣೆಯೆನಲು ॥
ದರಹಾಸದಿಂದ ಕಣ್ದೆರೆದು ನೋಡಿದನು ಸ । ದ್ಗುರುವಿನಾಣೆಯ ಮೀರಬಹುದೆ ॥ ೬೧ ॥

ಕಣ್ದೆರೆದಾ ಕ್ಷಣ ಬರಿಸೆಳೆದಾ ತೊಂಡೆ । ವಣ್ದುಟಿಯಬಲೆಯನಪ್ಪಿ ॥
ನಾಣ್ದಾಣ ಜುಮ್ಮೆನೆ ಚುಂಬಿಸಿ ಲಲನೆಗೆ । ಗೇಣ್ದೋರಿದನು ಸ್ವರ್ಗಸುಖವಾ ॥ ೬೨ ॥

ಹೊದಪೆರಡಳಿದೊಂದುಹೊದಪಿನೊಳಿಬ್ಬರು । ಹುದುಗಿದರುಚಿತಕೇಳಿಯೊಳು ॥
ಅದರ ಮುಂದಾದನುಭವವ ಕನ್ನಡಿಸಿ ಪೇ । ಳ್ವುದು ಜಾಣ್ಮೆಯಲ್ಲದಂತಿರಲಿ ॥ ೬೩ ॥

ಜಾಣನವನು ಜಾಣೆಯವಳವರಿರ್ವರು । ಹೂಣಿ ಕೂಡಿದರೆನೆ ಸಾಕು ॥
ಏಣಕಾಂತೆಯೊಳೀಣ ನೆರೆವಂತೆ ಪಟುತರ । ಗಾಣಲೊಂದಿದರೆನಲೇಕೆ ॥ ೬೪ ॥

ಉತ್ತಮನಾಯಕನುತ್ತಮಸತಿಯು ಸಂ । ಪತ್ತಿನೊಳೊಡಗೂಡುವಾಗ ॥
ಎತ್ತಿ ಕಾತರದಿಂದ ನೆಲೆಯನಲುಗಿ ತಮ್ಮ । ಚಿತ್ತಪಕ್ಷವ ಮಾಡದಿಹರೆ ॥ ೬೫ ॥

ಕಟ್ಟೊಲುಮೆಯ ನಲ್ಲರೊಡಗೂಡುವಾಗಳ । ವಟ್ಟು ನುಣ್ಪೊಡೆನಳಿತೋಳು ॥
ಇಟ್ಟೆಡೆನೊಲೆತುಟನೊಗಗಳನ್ಯೋನ್ಯ ಸಂ । ಘಟ್ಟವಾಗದೆ ಸುಮ್ಮನಿಹುವೆ ॥ ೬೬ ॥

ಚೆಲುವಪೆಣ್ಗಂಡೊಂದವಾಗ ವಸ್ತ್ರದ ಮರೆ । ತೊಲಗಲೊಬ್ಬೊಬ್ಬರ ಮೈಯ ॥
ಚೆಲುವ ಚೆನ್ನಾಗಿ ನೋಡರೆ ನೋಡಲೊಡನೆ ಕಂ । ಗಳು ಮನ ನಲಿದಾಡದಿಹುವೆ ॥ ೬೭ ॥

ಸುಲಭದಂಪತಿಗಳು ನೆರೆವಾಗ ಭೂಷಣ । ದುಲುಹು ಮಂಚದ ದನಿಗೂಡಿ ॥
ಒಳುನುಡಿ ಸೀತ್ಕಾರರವಗಳು ಕಿವಿಯ ಜ । ಕ್ಕುಲಿಸಿ ಸುಖವ ಸೂಸದಿಹುವೆ ॥ ೬೮ ॥

ಬಿಸಜಗಂಧದ ಸುಖಿಗಳು ನೆರೆವಾಗ ಲೇ । ಪಿಸಿದ ಕಂಪಂಗದ ಕಂಪು ॥
ಉಸುರ ಕಂಪಾ ಮನೆ ಕಂಪು ಘ್ರಾಣೇಂದ್ರಿಯ । ಕಸಮತೃಪ್ತಿಯ ಮಾಡದಿಹುವೆ ॥ ೬೯ ॥

ಕುಂದುಹೆಚ್ಚಿಲ್ಲದ ಸಮಸುಖಿಗಳು ನಲ । ವಿಂದ ತಾವೊಡಗೂಡುವಾಗ ॥
ಚೆಂದುಟಿಯಿಂಪ ಚಪ್ಪರಿದುಂಡು ಜಿಹ್ವೆಯಾ । ನಂದಿಸದಿಹುದೆ ಲೋಕದೊಳು ॥ ೭೦ ॥
ಮೃದುದೇಹಿಗಳು ಕೂಡುವಾಗ ಬಲ್ಮೊಲೆಸೋಂಕು । ಯೆದೆಸೋಂಕು ಪೊರೆವಾರಸೋಂಕು ॥
ವದನವದನಗಳ ಸೋಂಕಿಂದ ಸರ್ವಾಂಗ । ಮುದದೊಳಂಕುರಿಸದೇನಿಹುದೆ ॥ ೭೧ ॥
ಎದ್ದ ಕಾತರದ ಭೋಗಿಗಳು ಭೋಗಿಸುವಾಗ । ಉದ್ದಂಡದಪ್ಪುಗೆಯಿಂದ ॥
ಮುದ್ದಿಂದ ನಗೆಯಿಂದ ಮುನಿಸಿಂದ ಮೆತ್ತನೆ । ಗುದ್ದಿಂದ ನಲಿದಾಡದಿಹರೆ ॥ ॥ ೭೨ ॥
ಚಾಟಿನ ಪೆಣ್ಗಂಡು ರಮಿಸುವಾಗೊಬ್ಬೊಬ್ಬ । ರಾಟಕೊಬ್ಬೊಬ್ಬರು ಮೆಚ್ಚಿ ॥
ಕೋಟಿಪರಿಯೊಳು ತಕ್ಕಿಸುತ ಮನ್ನಿಸುತ ಕೊಂ । ಡಾಟ ಕೈಮಿಗೆ ಕೂಡದಿಹರೆ ॥ ೭೩ ॥
ಮಟ್ಟವಲ್ಲದ ಮಸೆಯುಳ್ಳ ಮೋಹಿಗಳಿಂಪು । ದಟ್ಟಿ ಸಂಭೋಗಿಸುವಾಗ ॥
ಬೊಟ್ಟು ಕಲಕಿ ತುರುಬಳಿದು ತೆಳ್ಳುಸುರುಬ್ಬಿ । ಪುಟ್ಟದಿಹುದೆ ಮೈಗೆ ಬೆಮರು ॥ ೭೪ ॥
ತೆರನರಿದಪ್ಪಿ ಲೇಸರಿದು ಮಾತಾಡಿಯಿಂ । ಬರಿದು ಚುಂಬಿಸಿ ಕೂಡುವಾಗ ॥
ಭರಿತಪಂಚೇಂದ್ರಿಯ ತೃಪ್ತಿವಡೆದು ಶುಕ್ಲ । ಪೂರಪೊಣ್ಮದಿಹುದೆ ಪೊಣ್ಮುವುದು ॥ ೭೫ ॥
ಕಡುಪಿನಿಂದ್ರಿಯಗಳು ತಣಿಯೆ ಕಣ್ಣವಿದು ಮಾ । ತುಡುಗಿ ಮೈಬೆಸುಗೆ ಬೇರಾಗಿ ॥
ಮಿಡುಕದೆ ಮೂರ್ಛೆಗೆ ಸಂದು ಪಾಸಿನೊಳು ಮೈ । ಯಿಡರೆ ಲೋಕದೊಳು ಭೋಗಿಗಳು ॥ ೭೬ ॥
ಭರತರಾಜೇಂದ್ರನಾ ಪದ್ಮಿನಿಯೊಡಗೂಡಿ । ಪರಿತೃಪ್ತಿವಡೆದನಾತನೊಳು ॥
ನೆರೆದಾಕೆದಣಿದಳು ಮೂರ್ಛೆಗೆ ಸಂದರು । ತರಹರದಿಂದೆದ್ದರೊಡನೆ ॥ ೭೭ ॥
ಅಂಗವ ತೊಳೆದು ಮತ್ತೊಂದು ತಣ್ಪಸೆವದೇ । ವಾಂಗವಸ್ತ್ರವನು ಮೇಲ್ಕೊಂಡು ॥
ಕಂಗವಿದುರೆ ಪಾಸಿನೊಳು ಪವಡಿಸಿದನಾ । ಲಿಂಗಿಸಿಕೊಂಡು ನಲ್ಲಳನು ॥ ೭೮ ॥
ರಂಗದಿಂದಿಳಿದ ಪಾತ್ರದ ಕೂಟ ಕಾಮುಸು । ಖಾಂಗದ ಕಟ್ಟಕಡೆಯದು ॥
ಅಂಗವರಿದು ಕೂಡೆದಣಿದು ಸುಖಿಗಳಾಗ । ಮುಂಗಲನಿದ್ರೆದಾಳಿದರು ॥ ೭೯ ॥
ಸೂಸುತ ಪನ್ನೀರ ತೂಗುತ ಮಂಚವ । ಬೀಸುತ ಬೀಸಣಿಗೆಗಳಾ ॥
ಆ ಸುಖಿಗಳ ಪಾದದಟ್ಟ ಪುತ್ತಳಿಗಳೋ । ಲೈಸುತಿದ್ದುವು ಸೂತ್ರದಿಂದ ॥ ೮೦ ॥
ಪದ್ಮಿನಿಯೊಡನಿಲ್ಲಿ ಕೂಡಿದಂದದಿ ಮಿಕ್ಕ । ಪದ್ಮವದನೆಯರೆಲ್ಲರೊಳು ॥
ಸದ್ಮಸದ್ಮಕೆ ತಪ್ಪದೈದಿ ಕೂಡಿದ್ದನು । ಛದ್ಮವಿಲ್ಲದೆ ರಾಜಮೋಹಿ ॥ ೮೧ ॥
ಮುಗ್ಧೆಯರಿದು ಬಾಲೆಯರಿದು ಮಧ್ಯಮೆಯ ವಿ । ದಗ್ಧೆಯನರಿದವರವರ ॥
ಪಾಗ್ಧೀರ ತವಕವಂದು ಕೂಡಿ ಸುಖದೊಂದು । ದುಗ್ಧಸಮುದ್ರದೋರಿದನು ॥ ೮೨ ॥
ಬಾಲೆಯ ಮುದ್ದಿಸಿ ಮುಗ್ಧೆಗಿನಿಸು ಸರ । ಸಾಳಾಪದೋರಿ ಮಧ್ಯಮೆಯಾ ॥
~~ಸೊಳಾಡಿ ಕೂಡಿ ಪ್ರಗಲ್ಭೆಗೆ ತವಕವ । ನೀಳಿಸಿ ಕೆಳೆದನಾ ರಸಿಕಾ~~ ॥ ೮೩ ॥

ಮೃದುರತಿಯಿಂದ ಪದ್ಮಿನಿಯ ಭೋಗಿಸಿ ಕಠಿ । ಣದ ರತಿದೋರಿ ಶಂಖಿನಿಗೆ ॥
ಕದುಬಿ ಚಿತ್ತಿನಿಯ ನೆರೆದು ಮಂದರತಿಯಿಂದ । ಹದಗೊಳಿಸಿದನು ಹಸ್ತಿನಿಯಾ ॥ ೮೪ ॥
ತೋರವೈಯುವಳ ತಕ್ಕೆಯೊಳೊಕ್ಕಲಿಕ್ಕಿ ಸು । ಸಾರದೊಳಸಿಯುಳನಪ್ಪಿ ॥
ತೋರವಲ್ಲಸಿದಲ್ಲದವಳನಾ ಚದುರ ಸೊ । ನ್ನಾರದೊಳಪ್ಪಿ ನೆರೆದನು ॥ ೮೫ ॥
ಬಲುವೊಲೆಗಳ ಬಿಗಿಯಪ್ಪಿ ಕಲಶವೊಲೆ । ಗಳ ಮಧ್ಯದೊಳು ಮೊಗವಿಟ್ಟು ॥
ನೆಲೆವೊಲೆಗಳ ಪಿಡಿದಾಡಿ ಮುಗುಳುವೊಲೆ । ಗಳನು ಮೈದಡವಿ ಕೂಡಿದನು ॥ ೮೬ ॥
ಲಾಟದಂಗನೆಯ ಕಾಶ್ಮೀರದಂಗನೆಯ ಕ । ರ್ಣಾಟದಂಗನೆಯಿಚ್ಛೆಯರಿದು ॥
ಭೋಟುಮಹಾಭೋಟುದೇಶದಂಗನೆಯೆದೆ । ಯಾಟವನರಿದು ಕೂಡಿದನು ॥ ೮೭ ॥
ತೌಳವತರುಣಿಯ ಮಲೆಯಾಳಸತಿಯ ಬಂ । ಗಾಳಕಾಂತೆಯರಿಚ್ಛೆಯರಿದು ॥
ಗೌಳನಾರಿಯರ ಸಿಂಗಳದೇಶವಧುಗಳ । ಲೀಲೆಯರಿದು ರಮಿಸಿದನು ॥ ೮೮ ॥
ಅಂಗದೇಶದ ಪೆಂಗಳಂಗವನರಿದು ಕ । ಳಿಂಗಕಾಂತೆಯ ಕಳೆಯರಿದು ॥
ವಂಗದೇಶದ ನೀರೆಯರ ನೆಲೆಯರಿದು ಬೆ । ಡಂಗರದೇವ ಕೂಡಿದನು ॥ ೮೯ ॥
ನುಡಿಜಾಣೆಯೊಳು ನುಡಿದಾಡಿ ಮಾತರಿಯದ । ಳೊಡನೆ ತಾನುರೆ ಮೌನಿಯಾಗಿ ॥
ಪೊಡರ್ವ ಕಾತರೆಗೆ ಕಾತರನಾಗಿ ಸಮಭಾವ । ವಿಡಿದು ಭೋಗಿಸಿದನಾ ಕುಶಲಾ ॥ ೯೦ ॥
ಕಲೆಗೆ ಕೈಯೊದಗಿ ಕೂಡುವಳಿಗೆ ಮೆಚ್ಚುವ । ಕಲಿಸುವನರಿಯದವಳಿಗೆ ॥
ಹಲಬರು ನಾದುನಿಯರಿಗೊಬ್ಬ ಕವಿಯೋದ । ಕಲಿಸುವಂದದೊಳಿದ್ದನಾಗ ॥ ೯೧ ॥
ಹೊರಬೀಸದಂತೆ ಹೊಳೆಯದಂತೆ ಸಮ್ಮುಖ । ದುರಿವನುಭವಕೆ ಕಾಂತೆಯರಾ ॥
ಇರಿಸಿ ಸುಖಿಸಿದನು ಹಲವು ತೇಜಿಯ ಜಾತಿ । ಯರಿದು ತಿದ್ದುವ ಸಾಣಿಯಂತೆ ॥ ೯೨ ॥
ಪರವಶರಾಗುತೆಚ್ಚರುತ ಕೆಲಬರು ಸೌಂ । ದರಿಯರಿದ್ದರು ಮತ್ತೆ ಕೆಲರು ॥
ಸರಸವಾಡಿದವೊಲು ಬೆರಸಿದರವರವ । ರಿರವನರಿದು ತಾನು ನೆರೆದಾ ॥ ೯೩ ॥
ನೋಟನುಡಿಗಳಿಂದ ನಖದಂತಹತಿಯಿಂದ । ತೀಟವೇಳಿಸಿ ಲಲನೆಯರಾ ॥
ಕೂಟದೊಳಗೆ ಕುಣಿದಾಡಿಸಿ ನವರತಿ । ನಾಟಕದೋರಿದನವನು ॥ ೯೪ ॥
ರತಿಯಾದಿಯಲ್ಲಿ ಮಧ್ಯದೊಳಂತ್ಯದೊಳಗಾದ । ಸ್ಥಿತಿಯ ಕನ್ನಡಿಸಿ ಪೇಳ್ವಾಗ
ಅತಿತೆರಪಹುದದು ಗಂಭೀರವಲ್ಲ ಸೂ । ಚಿತಮಾತ್ರವಿರಲಿಷ್ಟೆ ಸಾಕು ॥ ೯೫ ॥
ಎಲ್ಲವ ಪೇಳ್ವುದು ಮತವಲ್ಲವೊಚ್ಚತ । ಯಿಲ್ಲವಾದರೆ ಸೊಗಸಲ್ಲ ॥
ಇಲ್ಲವುಂಟೆಂಬಂತೆ ರತಿಯ ಸೂಚಿಸಿ ಬಿಟ್ಟ । ನಲ್ಲವೆಯೆಂದರಿದಿಹುದು ॥ ೯೬ ॥
ಎಂಭತ್ತುನಾಲ್ಕುಬಂಧದೊಳವರವರೊಂದು । ಶುಂಭಿತಪ್ರೀತಿಯನರಿದು ॥
ತೊಂಭತ್ತಾರುಸಾವಿರಸತಿಯರನೊಲ್ದು । ಸಂಭೋಗಿಸಿ ತಣಿಪಿದನು ॥ ೯೭ ॥

ಒರ್ವಳನೊಮ್ಮೆ ನೆರೆವನು ಕಾಮಿಸಲು ಮ । ತ್ತೊರ್ವಳನಿಮ್ಮೆ ನೆರೆವನು ॥
ಸರ್ವರ ತಣಿಪಿದನೊರ್ವ ಕಾಮಿನಿಯೊಡ । ನೊರ್ವ ಪುರುಷ ಕೂಡಿದಂತೆ ॥ ೯೮ ॥
ರತಿಯಲ್ಲಿ ತಾನು ತಣಿದು ಮನೆಮನೆಯಲ್ಲಿ । ಸತಿಯರ ತಕ್ಕೈಸಿಕೊಂಡು ॥
ಪ್ರತಿಮೆ ಮಾಡುವ ಸೇವೆಗೊಳುತ ಪವಡಿಸಿ ಭೂ । ಪತಿ ಸುಖನಿದ್ರೆಯೊಳಿರ್ದಾ ॥ ೯೯ ॥
ಕೂಡುವ ಮಂಚ ನಿದ್ರೆಯ ಮಾಳ್ಪ ಸಿರಿಮಂಚ । ಜೋಡಿಸಿಹುವು ಮನೆಮನೆಗೆ ॥
ಕೂಡಿ ತಾನೊಂದರೊಳಿರದೊಂದರೊಳು ನಿದ್ರೆ । ಮಾಡುತಿರ್ದನು ಪೆಣ್ಗಳೊಡನೆ ॥ ೧೦೦ ॥
ಸುರತಸುಖಾಂತ್ಯದ ನಿದ್ರೆಯೆಂಬುದು ಜಾಡ್ಯ । ಹರಣ ವಿವೇಕಕಾರಣವು ॥
ಹರುಷಕಾರಣ ಕಾಂತಿಕಾರಣವದರೊಳು । ದೊರೆಯಿರ್ದನಬಲೆಯರ್ವೆರಸಿ ॥ ೧೦೧ ॥
ಎಡದ ತೋಳಿನ ಮೇಲೆ ತಲೆಯಿಟ್ಟು ವನಿತೆಯು । ರೆಡದ ತೋಳಿಂದಪ್ಪಿ ತನ್ನ ॥
ತೊಡರ್ದಿರಲಾ ಸತಿಯರ ಮೇಲೆ ಬಲದ ತೋ । ಳ್ತೊಡೆಯಿಟ್ಟು ತಾನೊರಗಿರ್ದಾ ॥ ೧೦೨ ॥
ಮುಚ್ಚಿದ ದೃಷ್ಟಿ ಮುದ್ರಿಸಿದ ಚೆಂದುಟಿಗಳೊ । ಪ್ಪಚ್ಚಿ ವಿಸುಕುವ ತೆಳ್ಳುಸುರು ॥
ನೊಚ್ಚನೆ ರತಿಸುಖ ತಲೆಗೇರಿ ಪರವಶ । ಬಚ್ಚಿಸಿದಂತಿರ್ದರಾಗ ॥ ೧೦೩ ॥
ನಾಲ್ದೆಸೆಯೊಳು ರತ್ನದೀಪವಿಹುವು ಸುತ್ತ । ನೇಲ್ದ ಮುತ್ತಿನ ತೆರೆಯಿಹುದು ॥
ಸಾಲ್ದು ಹಲವುಮಂಚಪಾಸಿನೊಳೊರಗಿರ್ದ । ನೊಲ್ದ ಪೆಂಗಳ ಕೂಡಿ ನೃಪತಿ ॥ ೧೦೪ ॥
ಜಿನಜಿನಯೇನೆಂಬೆ ನೃಪನೆದೆಯೊಳಗಾಗ । ಕನಸಿನೊಳಾತ್ಮ ತೋರುವನು ॥
ವನಜಗಂಧಿನಿಯರಿಗರಸನೆ ತೋರುವ । ನೆನಲದೇಂ ಪುಣ್ಯಜೀವಿಗಳೊ ॥ ೧೦೫ ॥
ಕನಸು ತೋರುವುದೊಮ್ಮೆ ಕನಸು ಮರೆವುದೊಮ್ಮೆ । ಯಿನಿಸೊಮ್ಮೆ ತುಟಿ ವಿಸುಕುವುದು ॥
ಕನವರವಿಲ್ಲೊಂದುಗುರುಕಿಲ್ಲ ಮೇಲೊಂದು । ತೊನೆದಾಟವಿಲ್ಲದೊಪ್ಪಿದರು ॥ ೧೦೬ ॥
ತೆಳುನಿದ್ದೆಯಲ್ಲದೆ ಬಲುನಿದ್ದೆಯವರ್ಗಿಲ್ಲ । ಕಲಹಂಸತೂಲತಲ್ಪದೊಳು ॥
ಮಲಗಿ ಕಣ್ಗೆಸೆದರು ಪೆಣ್ಗೂಡಿ ಕಳಹಂಸ । ಬಿಳಿಯ ತಾವರೆಯೊಳಿಪ್ಪಂತೆ ॥ ೧೦೭ ॥

*ಕಿರಿದುಹೊತ್ತಿನೊಳಾತಗೆಚ್ಚರಾದುದು ಮರೆ । ದೊರಗಿರ್ದ ಸತಿಯರೆಲ್ಲರೊಳು ॥
ಒರಗಿರ್ದನಿಲ್ಲಿ ಪದ್ಮಿನಿಯೊತ್ತಿನೊಳು ಕ । ಣ್ದೆರೆದಿದ್ದನಾ ಭಾವಿತಾತ್ಮ ॥ ೧೦೮ ॥
ಕಣ್ಮುಚ್ಚಿ ಪವಡಿಸಿದಂತೆ ಧ್ಯಾನದೊಳೆಲ್ಲ । ಪೆಣ್ಮಣಿಯೊತ್ತಿನೊಳಿರ್ದಾ ॥
ಪೊಣ್ಮೆ ಕುಳಿತು ಧ್ಯಾನಕಿಲ್ಲಿ ತೊಡಗಿದೊಂದು । ಜಾಣ್ಮೆಯನೇನೆಂಬೆನವನ ॥ ೧೦೯ ॥
ಮಂಚವಲುಗದೆ ಮಾತಾಡದೆ ಸತಿಯು ಮೈ । ಯಂಚಿಗೆ ತಲೆಗಿಂಬನೊಡ್ಡಿ ॥
ಚಂಚಲಾಕ್ಷಿಯ ನಿದ್ರೆ ಕದಲದಂತೆದ್ದನ । ದೇಂ ಚದುರನೊ ಸಾರ್ವಭೌಮಾ ॥ ೧೧೦ ॥

---

*ಅಲ್ಲಲ್ಲಿ ಪೆಣ್ಗಳೊಂದಾಗಿ ಶಾಖಾದೇಹ । ವೆಲ್ಲ ನಿದ್ರೆಯೊಳಿರ್ದುವತ್ತ ॥
ಇಲ್ಲಿಯೆಚ್ಚರಿಕೆಯಾದುದು ಮೂಲದೇಹಕೆ । ಮೆಲ್ಲನೆ ಕಿರಿದುಹೊತ್ತಿನೊಳು ॥

ಜಲವ ಮುಕ್ಕುಳಿಸಿ ವೀಳೆಯ ಗೊಂಡು ಮತ್ತೆ ತಂ । ಬುಲವನುಗುಳಿ ಶುದ್ಧನಾಗಿ ॥
ಕುಳಿತನು ಕಮಲಾಸನದಲ್ಲಿ ಕೂಡೆ ಕಂ । ಗಳ ಮುಚ್ಚಿ ಕಂಡನಾತ್ಮನನು ॥ ೧೧೧ ॥
ಉಲುಹುಗಲಭೆಯೆಂಬುದಿಲ್ಲಾಗ ಬೆಳಗ್ಗೈದು । ಘಳಿಗೆಯೆಂದೆಂಬ ವೇಳೆಯದು ॥
ತಲೆಯಿಂದ ಕೆಂಬಜ್ಜೆಮುಟ್ಟ ವೈಯೊಳಗಾತ್ಮ । ಕಳೆದುಂಬಿ ಹೊಳೆದುದಾ ನೃಪಗೆ ॥ ೧೧೨ ॥
ಬ್ರಹ್ಮಿಯೆಂದೆಂಬ ಮುಹೂರ್ತಸನ್ನಿಧಿಯದು । ಬ್ರಹ್ಮಯೋಗಕೆ ತಕ್ಕಕಾಲಾ ॥
ಬ್ರಹ್ಮಮಾರ್ಗಕೆ ನಡಿಸಿದನು ವಾಯುವ ಪರ । ಬ್ರಹ್ಮವ ಕಂಡ ತನ್ನೊಳಗೆ ॥ ೧೧೩ ॥
ತರುಣಿಯರೊಡನಾಡಿ ಸುಖನಿದ್ರೆಮಾಡಿಯಾ । ವರಿಸಿದ ಜಡವನೀಡಾಡಿ ॥
ಕರಣಪಟುತ್ವವಾಗಿದ್ದುದಾ ನೃಪಗಾಗ । ಪರಮಾತ್ಮ ಹೊಳೆದನದೆಯೊಳು ॥ ೧೧೪ ॥
ಹಂಸತೂಲದ ತಲ್ಪದೊಳು ಕುಳಿತಾ ಮಣಿ । ಹಂಸಕಚರಣನಾ ಕ್ಷಣವೆ ॥
ಹಂಸ ನೀರುಳಿದು ಪಾಲ್ವಿಡಿವಂತೆ ವೈವಿಟ್ಟು । ಹಂಸನಾಥನ ಕಂಡನೊಳಗೆ ॥ ೧೧೫ ॥
ನುಡಿಯಬಾರದ ಶಬ್ದ ನೋಡಬಾರದ ವರ್ಣ । ಪಿಡಿಯಬಾರದ ಶೂನ್ಯರೂಪಾ ॥
ನುಡಿದನು ನೋಡಿದ ಹಿಡಿದನಾ ಚಕ್ರೇಶ । ಬಡವನೆ ಭಾವತಾಪಸನು ॥ ೧೧೬ ॥
ತನುವನೆ ತೊಳೆದು ತನುವನೊಣಗಿಸಿ ಹೊರ । ಗನೆ ಮೆಚ್ಚಿದಧಮನೆಯವನು ॥
ಮನವನೆ ತೊಳೆದು ಮನವನೊಣಗಿಸಿ ವೊಳ । ಗನೆ ಮೆಚ್ಚಿದುತ್ತಮನಲ್ತೆ ॥ ೧೧೭ ॥
ಏನ ಮಾಡುವುದು ಹೆಂಗಳ ಸಂಗ ಹಂಸಸಂ । ಧಾನಿಯು ಮರುಳುಮಾಡುವುದೆ ॥
ಮಾನಿನಿ ಕೆಲದೊಳಿದ್ದಳು ರಾಯನಿದ್ದನು । ತಾನೆ ತಾನಾಗಿ ತನ್ನೊಳಗೆ ॥ ೧೧೮ ॥
ಪ್ರಭೆಯೊಳು ಮುಳುಗಾಡಿ ಸುಖದೊಳೋಕುಳಿಯಾಡಿ । ಅಭಿಮಾನಗೆಡಿಸಿ ಕರ್ಮಗಳಾ ॥
ಪ್ರಭುಕರ್ತೃಭೋಕ್ತೃವೆಂದೆಂಬ ವಿಕಲ್ಪದು । ರ್ಲಭವಾಗಿ ಹಂಸನೊಳಿರ್ದಾ ॥ ೧೧೯ ॥
ಭೂರಿಚಿಂತೆಯ ಬಿಟ್ಟು ತನ್ನ ತಾ ನೋಳ್ಪಾಗ । ಸೋರುತಿರ್ದುದು ಕರ್ಮರಜಸು ॥
ಸೇರುತಿರ್ದುದು ಕೂಡೆ ಸುಜ್ಞಾನ ಸುಖಿಗಳಾ । ತ್ಮಾರಾಮನಿರ್ದನಾತ್ಮನೊಳು ॥ ೧೨೦ ॥

ಧ್ಯಾನದೊಳಾ ರಾಯನಿದ್ದನಂತಿರಲಿ ಮ । ತ್ತೇನೆಂಬೆನಾ ಸಮಯದೊಳು ॥
ಭಾನು ಮೂಡುವ ವೇಳೆಯರಿದು ಬಂದರು ಮಝ । ಗಾನಕಾಂತೆಯರು ಮೇಳದೊಳು ॥ ೧೨೧ ॥
ಪುಷ್ಕರಾವತಿಯೊಳು ಮನೆಮನೆತಪ್ಪದೆ । ಕಿಷ್ಕಿಂಧಬಾಗಿಲೊಳ್ನಿಂದು ॥
ಪುಷ್ಕರವದನೆಯರಾಯೆಂದು ನಲಿದು ಪ್ರಾ । ತಃಕಾಲರಾಗದೋರಿದರು ॥ ೧೨೨ ॥
ವೇಳಾವಳಿಭೂಪಾಳಿಗುಜ್ಜರಿಗಳ । ನಾಳಾಪಿಸಿದರಲ್ಲಲ್ಲಿ ॥
ಏಳಿಸಿದರು ಮಲಗಿದ ಪೆಣ್ಗಳೆಲ್ಲರ । ನೇಳಿಸಿದರು ಪುಳಕಗಳಾ ॥ ೧೨೩ ॥
ಅರುಹನ ನೆನಹಿಂದ ಪಾಪ ತೊಲಗುವಂತೆ । ಧರೆಯಂಧಕಾರ ಜಾರುತಿದೆ ॥
ಗುರುಭಕ್ತಿತೋರುವಂತರುಣೋದಯ ತೋರಿ । ತರಸಯೆಂದೆತ್ತಿ ಹಾಡಿದರು ॥ ೧೨೪ ॥

ತಾರೆ ಮಸುಳುತಿವೆ ತಣ್ಣತಣ್ಣನೆ ಮಂದ । ಮಾರುತ ಬಂದು ತೀಡುತಿದೆ ॥
ನಾರಿಯು ನಳಿತೋಳ ತಕ್ಕೆಯಿಂದೇಳೆಲೆ । ವೈರಿಭೂಭುಜತಮೋಭಾನು ॥ ೧೨೫ ॥
ಅರುಣೋದಯವಾಗಿ ಕಿರಣೋದಯವಾಯ್ತು । ತರಣಿ ತೋರದ ಮುನ್ನ ನಿನ್ನ ॥
ಸುರುಚಿರಾಂಗವ ತೋರಿ ಜಗವನುದ್ಧರಿಸೆಲೆ । ಪುರುನಾಥನಗ್ರಕುಮಾರಾ ॥ ೧೨೬ ॥
ಚಿಂತೆ ಹೊದ್ದದ ದೀರ್ಘರಾಜ್ಯವನಾಳ್ವ ನಿ । ಶ್ಚಿಂತವೈಭವನೆ ನೀನೇಳು ॥
ಚಿಂತಿಸಿದುದ ಸರ್ವಜನಕೀವ ನೃಪವೇಷ । ಚಿಂತಾಮಣಿಯೆ ಮೈದೋರು ॥ ೧೨೭ ॥
ಹಗೆಯಿಲ್ಲದಿಳೆಯನಾಳುತ ಬಹುಸತಿಯರ । ಮಿಗೆ ಹುರುಡಳಿದಾಳ್ದ ನೀರಾ ॥
ಹಗಲಿರುಳೆದೆಬೆಂದು ರಾಜ್ಯವನಾಳ್ವರ । ನಗುತೇಳು ರಾಜಮನೋಜಾ ॥ ೧೨೮ ॥
ಭೋಗಕೆ ಮರುಳಾಗಿ ಧರ್ಮವ ಮರೆದಧೋ । ಭೋಗಕೆ ಬೀಳ್ವರ ನಗುತ ॥
ಭೋಗದೊಳಿದ್ದು ಯೋಗಿಗಳಂತೆ ಸುಖಿಯಹ । ಭೋಗಿಗಳರಸ ನೀನೇಳು ॥ ೧೨೯ ॥
ವೃತ್ತಕುಚೆಯರೆದೆಯೊಳಗಸರಿವ ಪುರು । ಷೋತ್ತಮ ಕಣ್ದೆರೆ ಸ್ವಾಮಿ ॥
ಚಿತ್ತತ್ವದನುಭವರಾಜ್ಯವನಾಳ್ವ ರಾ । ಜೋತ್ತಮ ಮೈಮುರಿದೇಳು ॥ ೧೩೦ ॥
ಶುದ್ಧೋಪಯೋಗಸಂಪನ್ನ ನಿರಂಜನ । ಸಿದ್ಧನಾರಾಧನಶೀಲಾ ॥
ಶುದ್ಧ ನಿಶ್ಚಯಮಾರ್ಗಿಯೇಳು ರತ್ನಾಕರ । ಸಿದ್ಧನ ಮೆಚ್ಚಿನ ನೃಪತಿ ॥ ೧೩೧ ॥
ಪವಡಿಸಿಹುದು ನಿನ್ನ ತನು ಪಾಸಿನೊಳಗೆ ಚಿ । ತ್ತವೆ ಹಂಸಕಲೆಯ ಕೂಡಿಹುದು ॥
ಕವಿಯಲಮ್ಮದು ನಿದ್ರೆ ನಿನಗುಪಚಾರಕು । ಪ್ಪವಡಿಸು ಸುಜ್ಞಾನಸುಲಭಾ ॥ ೧೩೨ ॥
ರವಿಯು ಹೊರಗೆ ಕಂಡು ತನ್ನ ಮೈಯೊಳಗಾತ್ಮ । ರವಿಯು ಕಾಣದ ಕುರುಡರಿಗೆ ॥
ಪ್ರವರಾತ್ಮದೃಷ್ಟಿಯ ಕೊಡುವ ಪ್ರತ್ಯಕ್ಷ ದೈ । ವವೆ ಬಿಜಯಂ ಮಾಡು ಸ್ವಾಮಿ ॥ ೧೩೩ ॥
ಮಿಹಿರನುದಯವಾಗಿ ಭಾದ್ರಪದಾಂಕಿತ । ಬಹುಳಚತುರ್ದಶಿಯಿಂದು ॥
ಗೃಹರಾಜದಿಂದೆದ್ದು ಮೆಲ್ಲಡಿಯಿಡು ಜಿನ । ಗೃಹಕೆಲೆ ರಾಜಯೋಗೀಂದ್ರಾ ॥ ೧೩೪ ॥
ಎಂದು ಪಾಡುವ ಸುಪ್ರಭಾತಗೀತವ ಕೇಳ್ವ । ಮಂದಿರಮಂದಿರಗಳಿಗೆ ॥
ಸಂದ ಹಲವುರೂಪ ಬಯಲು ಮಾಡಿದನು ಮೈ । ಯೊಂದರೊಳಗೆ ನಿಂದನಾಗ ॥ ೧೩೫ ॥
ಮಂಚಮಂಚದೊಳು ಪೆಣ್ಗಳ ಕಣ್ಗೆ ತೋರಿದ । ಮಿಂಚಿನಂತಿರೆ ಬಯಲಾದಾ ॥
ಅಂಚೆಗಮನೆಯರಚ್ಚರಿವಟ್ಟು ನಿತ್ಯಕೃ । ತ್ಯಾಂಚಿತದೊಳಗಿದ್ದರೆಲ್ಲ ॥ ೧೩೬ ॥
ಭಾವಾಕ್ಷಿಯಿಂದ ಶ್ರೀಗುರುಹಂಸನಾಥನ । ಭಾವವ ನೋಡಿ ಬೀಳ್ಕೊಂಡು ॥
ಶ್ರೀವೀತರಾಗಯೆಂದೊಡನೆ ಕಣ್ದೆರೆದನಾ । ಭಾವಿತಾತ್ಮರ ಶಿರೋರತ್ನ ॥ ೧೩೭ ॥
ಉಪ್ಪವಡಿಸಿ ಖರತರಖಡ್ಗಮುಕುರವ । ತುಪ್ಪವ ನೋಳ್ಪರು ಕೆಲರು ॥
ಒಪ್ಪುವ ಹಂಸನಾಥನ ನೋಡಿ ಭರತೇಶ । ನುಪ್ಪವಡಿಸಿದನೊಳ್ಳಿತದು ॥ ೧೩೮ ॥

ಸುಪ್ರಭಾತವ ಕೇಳುತೊಡನೆದ್ದು ಪದ್ಮಿನಿ । ಸುಪ್ರಭಾವದೊಳಿರೆ ನೋಡಿ ॥
ಸುಪ್ರಿಯೆ ಮತ್ತೆ ಬಾ ನೀನೆಂದು ಜಿನಗೃಹ । ಕಾ ಪ್ರಭುವೆದ್ದನಾ ಕ್ಷಣವೆ ॥ ೧೩೯ ॥
ಆ ಗೃಹವನು ಪೊರಮಟ್ಟನು ಮೂಡಿದ । ಪ್ರಾಗದ್ರಿಯರ್ಕನ ಕಂಡಾ ॥
ಆ ಗುಣನಿಧಿಯೆದ್ದು ನಡೆದನೆಂಬೆಡೆಗೆ ಶ । **ಯ್ಯಾಗೃಹಸಂಧಿ** ಸುಗಂಧಿ ॥ ೧೪೦ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೪೧ ॥
ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾವೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೪೨ ॥
ಹಸಿವು ತೃಷೆಯು ನಿದ್ರೆ ಮೊದಲಾದ ದುಃಖವ । ಹಸೆಗೆಡಿಸುವ ಶಕ್ತಿಯುಳ್ಳ ॥
ಅಸಮವೈಭವನೆ ನನ್ನೆದೆಯೊಳಗಿರು ಮೋಕ್ಷ । ರಸಿಕ ಚಿದಂಬರಪುರುಷಾ ॥ ೧೪೩ ॥

ಶಯ್ಯಾಗೃಹಸಂಧಿ ಸಂಪೂರ್ಣಂ

## ಪರ್ವಾಭಿಷೇಕಸಂಧಿ.

ಕಣ್ಮುಚ್ಚಿ ನೋಡಿದರಾತ್ಮಸುಖವ ಕರೆ । ಗುಣ್ಮಿಸುವಾನಂದರೂಪಾ ॥
ಕಣ್ಮಲೆದುತ್ತಮಮತಿದೋರು ಸುಕೃತಾತ್ಮ । ರಾಣ್ಮ ನಿರಂಜನಸಿದ್ಧಾ ॥ ೧ ॥

ನುಡಿಯುಲಳವೆ ಚಕ್ರನಾಥನ ಜಾಣ್ಮೆಯು । ಕಡುಶುಚಿದೇಹಿ ತಾನಹುದು ॥
ಮಡದಿಯರೊಡನಿದ್ದನೆಂದು ಪೂಜೆಗೆ ಮುನ್ನ । ನಡೆದನು ಮಜ್ಜನಗೃಹಕೆ ॥ ೨ ॥

ಭೋಗಮಜ್ಜನಯೋಗಮಜ್ಜನವೆಂದೆರ । ಡಾಗಿಹುವವನಿಗೆ ಜಳಕಾ ॥
ಭೋಗಾರ್ಥ ಮಿಾವುದು ಭೋಗಮಜ್ಜನ ಪೂಜೆ । ಗಾಗಿರೆ ಯೋಗಮಜ್ಜನವು ॥ ೩ ॥

ಭೋಗಮಜ್ಜನಕೆ ಮರ್ದನ ಬೇಕು ಪಿರಿದು ನೀ । ರಾಗಬೇಕದು ತಳುವಹುದು ॥
ಯೋಗಮಜ್ಜನಕಲ್ಪಜಲ ಸಾಕು ನೃಪಗದು । ಬೇಗದೊಳಹುದದರಿಂದ ॥ ೪ ॥

ಒಂದುದಿವಸ ಭೋಗಮಜ್ಜನ ಮರುದಿನ । ದಂದು ಯೋಗಾರ್ಥಮಜ್ಜನವು ॥
ಸಂದಿಸಿ ಬಹುದದರಿಂದ ದಿನಂಪ್ರತಿ । ಕುಂದದಾ ಭೋಗಿಗೆ ಜಳಕಾ ॥ ೫ ॥

ಮಂಗಲಾಂಗನು ಬೇಗ ಯೋಗಮಜ್ಜನಮಾಡಿ । ಶೃಂಗಾರಶಾಲೆಯ ಹೊಕ್ಕು ॥
ಶೃಂಗಾರಮಾದನಾಗಳೆ ಮೆಲ್ಲನಡಿಯಿಟ್ಟ । ನಂಗಜವಿಜಯನಾಲಯಕೆ ॥ ೬ ॥

ಮೋಹನಶೃಂಗಾರಮೋಕ್ಷಶೃಂಗಾರವೆಂ । ದಾ ಹೇಮವರ್ಣಗುಂಟೆರಡು ॥
ಮೋಹನಶೃಂಗಾರ ಸತಿಯರ ಮೆಚ್ಚು ನಿ । ರ್ಮೋಹಾಂಗ ಮೋಕ್ಷಶೃಂಗಾರಾ ॥ ೭ ॥

ಮೋಕ್ಷಕಾರಣ ಜಿನಪೂಜೆಗೆ ನಡೆವಾಗ । ಮೋಕ್ಷಶೃಂಗಾರವನಾಂತು ॥
ಆ ಕ್ಷಿತಿಪತಿ ಗಮಿಸಿದನು ಕಾಲೋಚಿತ । ಲಕ್ಷಣತಪ್ಪದೇನೆಂಬೆ ॥ ೮ ॥

ಹಿಕ್ಕಿ ವಸ್ತ್ರದೊಳುದ್ದಿ ತಣ್ಣಸ ಕೆಡೆ ಧೂಪ । ವಿಕ್ಕಿದ ದೀರ್ಘಕೇಶವನು ॥
ತೆಕ್ಕೆಯೊಳ್ಮುರಿದಡ್ಡ ಸುತ್ತಿದ್ದನಾಗ ಚುಂ । ಗಿಕ್ಕಿ ಚಿಮ್ಮುರಿತುರುಬಿಡದೆ ॥ ೯ ॥

ಉರುಕೇಶವೆಂಬ ರಾಹುವಿನ ಮೈಮುಸುಕಿದ । ಹೆರೆಯೊ ಕಾಳಿಂದಿಯ ನೊರೆಯೊ ॥
ಪರಮನಾಲಯಕೆ ಬಹರಸನ ಚೀನಾಂ । ಬರವಿದ್ದುದಡ್ಡಸುತ್ತಿನೊಳು ॥ ೧೦ ॥

ಕಿರಿದಾಗಿ ತಿಲಕವಿಲ್ಲಾಗ ನೊಸಲುತುಂಬಿ । ಮೆರೆವುತಿದ್ದುದು ಧರ್ಮಚಕ್ರಾ ॥
ಉರೆ ಕರ್ಮಕಾಂಡವ ತರಿವ ಚಕ್ರವೊ ಬಟ್ಟ । ವೆರೆಯೊಯೆಂಬಂತೆ ಚೆಲ್ವಿನೊಳು ॥ ೧೧ ॥

ದಟ್ಟಿ ಕೋಮಲವಲ್ಲ ನೃಪಗಾಗ ಮಿಾಡಿಮುಟ್ಟ । ಪಟ್ಟೆಯ ದೋತ್ರ ರಂಜಿಸಿತು ॥
ಬಿಟ್ಟ ಸೆರಗಿನೊಲ್ಲಿಯಿಲ್ಲ ಪೆಗಲೊಳಿಳಿ । ವಿಟ್ಟಿದ್ದುದುರೆ ಬಹಿರ್ವಾಸ ॥ ೧೨ ॥

ಎದೆಯಲ್ಲಿ ಕೊರಳಲ್ಲಿ ಶ್ರೀಗಂಧರೇಖೆಯು । ಚದುರಿಸಿ ತಿದ್ದಿತಿಲ್ಲಾಗ ॥
ಎದೆಗೆ ಜಾರಿಸಿ ಕೊರಳೆಡೆಗೆ ಸಾರಿಸಿ ತೋಳ್ಗೆ । ಹದಗೊಳಿಸಿರ್ದನಲ್ಲಲ್ಲಿ ॥ ೧೩ ॥

ಪಲ್ಲ ಕೆಂಪಳಿವಂತೆ ಸುಲಿದಿದ್ದನವು ಮೊಗ್ಗೆ । ಮಲ್ಲಿಗೆಯಂತಿದ್ದುವಾಗ ॥
ಸಲ್ಲಗಳೆದನು ವೀಳೆಯವ ಸಂಯಮಿತನ । ಪಲ್ಲವಿಸುತ ಪಜ್ಜೆಯಿಟ್ಟಾ ॥ ೧೪ ॥
ಕುಂಡಲಹಾರಹೀರಾವಳಿಪದಕ ಸಾ । ಲ್ಗೊಂಡ ಮುತ್ತಿನ ಸರ ಕಡಗಾ ॥
ಪೆಂಡೆಯು ಕಟಿಸೂತ್ರ ನೆರೆದಿದ್ದುವಾಗ ಭೂ । ಮಂಡಲೇಶ್ವರನ ದೇಹದೊಳು ॥ ೧೫ ॥
ಕೆತ್ತಿದುಂಗುರ ಬಳೆ ತಾತಿಯು ಮಣಿ ಸಣ್ಣ । ಮುತ್ತಿನ ಯಜ್ಞೋಪವೀತ ॥
ಎತ್ತಿದ ಭುಜಕೀರ್ತಿ ಹೊನ್ನೊಡ್ಡಿಯಾಣ ಸು । ಚಿತ್ತಗೊಪ್ಪಿದುವು ಶೋಭೆಯೊಳು ॥ ೧೬ ॥
ಕನಕವರ್ಣನು ದೀರ್ಘದೇಹಿ ನಾನಾರತ್ನ । ಜನಿತಭೂಷಣವ ತೊಟ್ಟಾಗ ॥
ಕನಕಗಿರಿಗೆ ನವರತ್ನಕೀಲಣೆಯಾಯ್ತೊ । ಯೆನೆ ಬರುತಿರ್ದನೋಜೆಯೊಳು ॥ ೧೭ ॥
ನೆರವಿ ಮೆಟ್ಟಿದ ನೆಲನೆಂದದ ಮೆಟ್ಟದೆ । ನಿರುತಶುಚಿರ್ಭೂತನಾಗಿ ॥
ಅರಳೆಕೀಲಿಸಿದ ಬೆಳ್ಳಿಯ ಪಾವುಗೆಯ ಮೆಟ್ಟಿ । ಬರುತಿರ್ದನಧಿಕಶಾಂತದೊಳು ॥ ೧೮ ॥
ಹೊಗಳಬಾರದು ತನ್ನ ಕಂಡೊಬ್ಬರಾಗ ಕೈ । ಮುಗಿಯಬಾರದು ಛತ್ರವಿಲ್ಲ ॥
ಸುಗತನಿವಾಸಕೆ ನಡೆದನು ಹೆಮ್ಮೆಯ । ತೆಗೆದಿಟ್ಟು ಭಯಭಕ್ತಿವೆರಸಿ ॥ ೧೯ ॥
ಪಜ್ಜೆಪಜ್ಜೆಗೆ ಬಂದು ತನ್ನ ಸಾರುವ ತನ್ನ । ಕಜ್ಜಳಾಕ್ಷಿಯರನೀಕ್ಷಿಸುತ ॥
ನೆಜ್ಜವಿಲ್ಲದ ಚಿತ್ತದಿಂದೆಯ್ದುತಿರ್ದನು । ಗುಜ್ಜುಮೆಟ್ಟಿಂದ ಮುಂಗಡೆಗೆ ॥ ೨೦ ॥

ಇಂದೆಮ್ಮ ಪತಿಗೆ ಸಂಯಮ ನಾವು ಸಂಯಮ । ದಿಂದೆಯ್ದಬೇಕೆಂದು ತಾವು ॥
ಮಿಂದು ಪುರುಷನಂತೆ ಮೋಕ್ಷಶೃಂಗಾರ ತ । ಳ್ತೊಂದಿ ಬಂದರು ರಮಣಿಯರು ॥ ೨೧ ॥
ಸುಲಿಪಲ್ಲು ಬಣ್ಣಬೆಳಕ ಬಿಟ್ಟು ಬಿಗಿದುಟ್ಟ । ಬೆಳುವಟ್ಟೆ ದುಗುಲದ ರವಕೆ ॥
ಮಲಯಜದಡ್ಡಬೊಟ್ಟೊಚ್ಚರಮುತ್ತಿಂದ । ಕುಲವಧುಗಳು ಬಂದರಾಗ ॥ ೨೨ ॥
ಓಲೆ ಮೂಗುತಿ ಬಳೆ ಕಂಕಣ ಹೊನ್ನಯಿ । ದಾಳಿ ನೇವಳವಿಷ್ಟು ಧರಿಸಿ ॥
ಮೇಲೊಂದು ತೊಡಿಗೆಯ ತೊಡದೆ ಬಂದರು ಪತಿ । ಶೀಲೆಯರಾ ನೃಪನೆಡೆಗೆ ॥ ೨೩ ॥
ಅಡ್ಡಮುಡಿಯ ಸೋರುಮುಡಿಯ ಸೊನ್ನಾರದ । ದೊಡ್ಡಮುಡಿಯ ತೆಕ್ಕೆದುರುಬ ॥
ಒಡ್ಡಿದೋರದೆ ಬಿಟ್ಟು ಬೇಸರುಮುಡಿಗಟ್ಟಿ । ಖಡ್ಡಳಿದೆಯ್ತಂದರೊಸೆದು ॥ ೨೪ ॥
ಕಲಿಗಂಟು ಕೆಲರಿಗೆ ಜಡೆ ಕೆಲರಿಗೆ ಮತ್ತೆ । ಕೆಲರಲ್ಲಿ ತುರುಬನಿಕ್ಕಿದರು ॥
ಅಲರು ಚವಲಿ ಬೈತಲೆವಣಿ ಮುತ್ತಿನ । ಬಲೆಯಿಲ್ಲ ಬಂದರೊಪ್ಪದೊಳು ॥ ೨೫ ॥
ಪೃಥಿವೀಪತಿಯು ಸತಿಯರು ನೋಟದಿಂದ ಮ । ನ್ಮಥತಾಪ ತವಗೇಳದಂತೆ ॥
ಪೃಥುಮೋಹಶೃಂಗಾರವಳಿದು ಬಂದರು ಪುಣ್ಯ । ತಿಥಿಯೊಳದೇಂ ವಿಚಕ್ಷಣರೊ ॥ ೨೬ ॥
ಹೊರೆಗಟ್ಟ ಫಲವಸ್ತು ಬಹುದೆಂದು ಬಲ್ಲರು । ಬರಿಗೆಯ್ಯೊಳೆಯ್ದದೆ ತಾವು ॥
ಕೆರುಫಲಪುಷ್ಪವನೊಂದೊಂದ ಪಿಡಿದು ಬಂ । ದೆರೆಯನೊಳೊಗ್ಗಾದರೆಲ್ಲ ॥ ೨೭ ॥

ಜಿನ ಜಿನಯೇನೆಂಬೆ ಭರತರಾಜನು ರಾಜ । ವನಿತೆಯರನ್ಯೋನ್ಯ ನೋಡಿ ॥
ವಿನಯವನಾಡಿ ವಿಕಾರವಿಲ್ಲದೆ ಬಂದ । ರೆನಲದೇಂ ಸತ್ಯಮಾರ್ಗಿಗಳೊ ॥ ೨೮ ॥

ಬಳಸಿನೊಳರಸಿಯರ್ಕೈತರೆ ಮಿಂಚುವಮಾ । ದಲವ ಹಸ್ತದೊಳಾಂತು ನೃಪತಿ ॥
ಮಲಹರಿಲಲಿತೆಯೊಳಧ್ಯಾತ್ಮಗಾನಮಂ । ಗಲವ ಕೇಳುತ ನಡೆತಂದಾ ॥ ೨೯ ॥
ಪರಿಪರಿಯರ್ಚನಾದ್ರವ್ಯವ ಧರಿಸಿದ । ಪರಿವಾರಸತಿಯರ ಹಿಂದೆ ॥
ಎರಡುಪಕ್ಕದೆ ಗಾನವೆಸೆಯೆ ಬಂದನು ಶಂಖ । ಮೊರೆಯೆ ಭುಂಭುಂ ಎಂದು ಮುಂದೆ॥ ೩೦ ॥
ಅರಮನೆಯೊತ್ತಿನ ಸಿರಿವನದೊಳಗಿಹ । ಪುರುಜಿನಾಲಯಕಡಿಯಿಟ್ಟು ॥
ಪರಿವೃತಕೋಟೆಯೊತ್ತಿನೊಳು ಪಾವುಗೆಗಳ । ಪರಿಹರಿಸಿದನೊಳಹೊಕ್ಕಾ ॥ ೩೧ ॥
ಮಾನಸ್ತಂಭವ ಬಲಕಿಕ್ಕಿ ಶುಚಿವೆತ್ತ । ಮಾನಿನಿಯರು ಸಹವಾಗಿ ॥
ಬಾನಮುಟ್ಟುವ ಮೂರುಹೊನ್ನ ಕೋಂಟೆಯ ದಾಂಟಿ । ಜೈನೇಂದ್ರವಾಸವ ಕಂಡಾ ॥ ೩೨ ॥

ತನ್ನರಮನೆ ರತ್ನಮಯ ಹೇಮಮಯ ಗಡ । ತನ್ನ ದೇವನ ನಿವಾಸವನು ॥
ರನ್ನದೊಳಗೆ ಚಿನ್ನದೊಳಗೆ ಮಾಡಿಸಿದನೆಂ । ದಿನ್ನು ನುಡಿಯಲೇಕೆ ಸಾಕು ॥ ೩೩ ॥
ರಾಜಗೃಹವ ರಚಿಸಿದ ಗಡ ಸುರಶಿಲ್ಪಿ । ಶ್ರೀಜಿನಗೃಹವ ನಿರ್ಮಿಸನೆ ॥
ಆ ಜಿನಗೃಹವ ಬಣ್ಣಿಸಲರಿಯೆನು ಕಲ್ಪ । ಭೂಜದಂತಿಹುದೆಂಬೆನೊಮ್ಮೆ ॥ ೩೪ ॥
ಮಂದರಾಚಲದಂತೆ ಸಮವಸರಣದಂತೆ । ಸಂದ ಸರ್ವಾರ್ಥಸಿದ್ಧಿ ಪೊಲು ॥
ಕುಂದಣದಿಂದ ನಾನಾರತ್ನದಿಂದುಬ್ಬಿ । ದೊಂದು ಬೆಟ್ಟವೊಯೆನಬಹುದು ॥ ೩೫ ॥
ತೆಂಕಬಡಗಮೂಡಪಡುವ ಮೆರೆವ ಗಗ । ನಾಂಕಿತ ಮಾಡಗಳಿಂದ ॥
ಬಿಂಕವೆತ್ತಿದು ಪಂಚಮಂದರದಂತೆ ಪಂ । ಚಾಂಕದಣುತ್ತರೆಯಂತೆ ॥ ೩೬ ॥
ಆ ಚಿತ್ರವಚನವಂತಿರಲಿ ಮತ್ತೊಂದು ಸು । ಯೋಚನೆ ತೋರಿತಾಡುವೆನು ॥
ಶ್ರೀಚೈತ್ಯವಾಸ ಜಿನನ ಪಂಚಕಲ್ಯಾಣ । ಸೂಚನೆಯಂತೊಪ್ಪುತಿಹುದು ॥ ೩೭ ॥
ನೀಟದುಪ್ಪರಿಗೆಗಳೆಡೆಯೊಳೊಪ್ಪುವ ದೇವ । ಕೂಟಕೋಟೆಗಳ ಸಾಲಿಂದ ॥
ಕೋಟೆಯ ಪಂಚರತ್ನದ ತೆನೆಯಿಂದ ಕ । ರ್ಣಾಟಕೊಪ್ಪಿತು ಜಿನವಾಸಾ ॥ ೩೮ ॥
ಮುತ್ತಿನ ಕಲಶ ಮಾಣಿಕದ ಕಲಶಗಳು । ಸುತ್ತ ಪ್ರಕಾಶಬಿಂಬಿಸುತ ॥
ಇತ್ತಲೇತಕೆ ಚಂದ್ರಸೂರ್ಯರ ಕಿರಣಗ । ಳತ್ತಲಿರಲಿಯೆನುತಿಹುವು ॥ ೩೯ ॥
ಆಕಾಶದಮರರ ಕರೆವಂತೆ ಹಲವು ಪ । ತಾಕೆ ಕೈವೀಸುತೊಪ್ಪಿದುವು ॥
ವ್ಯಾಕುಲದೊಡ್ಡ ಝುಂಕಿಸುವಂತೆ ಮಣಿಘಂಟಾ । ನೀಕ ಡಂಢಣರೆನುತಿಹುವು ॥ ೪೦ ॥
ನಗುವಂತೆ ನೋಳ್ಪಂತೆ ನುಡಿವಂತೆ ಪುತ್ತಳಿ । ಬಗೆಗೊಳಿಸಿದ್ದುವಲ್ಲಲ್ಲಿ ॥
ಧಗಧಗಿಸುತ ಜಿನಸಿದ್ಧಮೂರ್ತಿಗಳು ದಿ । ಟ್ಟಗೆ ಶಾಂತಿಗರೆವುತೊಪ್ಪಿದುವು ॥ ೪೧ ॥

ಪ್ರಗತಸಮವಸರಣದೊಳಾದಿನಾಥ ನಾ । ಲ್ಕೊಗದೋರಿ ನಿಂದ ರೀತಿಯೊಳು ॥
ದಿಗವಲೋಕನಚತುರ್ಮುಖದೊಳೊಪ್ಪಿದ್ದುದಾ । ಮೃಗರಾಜಪೀಠನಾ ನಿಲಯಾ ॥ ೪೨ ॥

ಸಕಲಸಂಪದದ ಬೀಡೆನಿಸುವ ಬಸದಿಯು । ತ್ರಿಕರಣಶುದ್ಧಿಪೂರ್ವಕದಿ ॥
ಮುಕುಳಿತಹಸ್ತಾಬ್ಜ ಮೂರು ಸೂಳ್ವಲಗೊಂಡ । ನಕಳಂಕಚರಿತೆಯರ್ವೆರಸಿ ॥ ೪೩ ॥
ಚರಣವ ತೊಳೆದೊಳಹೊಕ್ಕು ಕಟ್ಟೆದಿರೊಳು । ಪುರುಜಿನಬಿಂಬವ ಕಂಡಾ ॥
ದರುಶನಾಂಜಲಿಯೆಂದು ಹೇಮಪುಷ್ಪವ ಸೂಸಿ । ಕರಗೂಡಿ ನಿಂದು ಕೀರ್ತಿಸಿದಾ ॥ ೪೪ ॥
ಕೈವಲ್ಯಬೋಧಮಹಾರಾಜ್ಯದೊಡೆಯನ । ದೇವಾಧಿದೇವನ ಜಿನನ ॥
ಪಾವನಬಿಂಬವೆ ಜಯಜಯ ಚೆಲ್ವಾದಿ । ದೇವನ ಬಿಂಬವೆಯೆಂದಾ ॥ ೪೫ ॥
ಶ್ರೀಮುಕ್ತಿಯೊಡಯನ ಸಿದ್ಧಾಂತವಾಕ್ಯನ । ಕಾಮಿತಸಿದ್ಧಿದಾಯಕನ ॥
ಶ್ರೀಮಯಪ್ರತಿಮೆಯೆ ಜಯಜಯ ನನ್ನ । ಸ್ವಾಮಿಯ ಪ್ರತಿಮೆಯೆಯೆಂದಾ ॥ ೪೬ ॥
ರಾಜಾರ್ಕಕೋಟಿಪ್ರಕಾಶನ ತ್ರಿಭುವನ । ರಾಜರೊಡೆಯನ ಚಿನ್ಮಯನ ॥
ರಾಜಿತಪ್ರತಿರೂಪೆ ಜಯಜಯ ಭರತನ । ಪ್ಪಾಜಿಯ ಪ್ರತಿರೂಪೆಯೆಂದಾ ॥ ೪೭ ॥
ಎಂದು ಕೀರ್ತಿಸಿ ಮತ್ತೆ ಕೈಲಾಸಗಿರಿಗೊಲ । ವಿಂದ ಚಿತ್ತವ ನೀಡಿ ವ್ಯೆಯಾ ॥
ಮಂದಿರದೊಳು ನೀಡಿ ಮೂರುಸೂಳೆರಗಿದ । ಸಂದುದಾದೀಶಗಾ ಭಕ್ತಿ ॥ ೪೮ ॥
ದರ್ಭಾಸನದಲ್ಲಿ ಕುಳಿತನು ಕೂಡೆ ಸಂ । ದರ್ಭಿಸಿ ಸಕಲಕ್ರಿಯೆಗಳಾ ॥
ನಿರ್ಭವಕರನವ ಜೈನದೇವತೆಗೆ ಶು । ಚಿರ್ಭೂತನಿತ್ತನರ್ಘ್ಯವನು ॥ ೪೯ ॥
ಸ್ತೋತ್ರವ ಮಾಡಿದ ಜಪವ ಮಾಡಿದ ಕೂಡೆ । ನೇತ್ರವ ಮುಗುಳ್ದಾತ್ಮನೊಳಗೆ ॥
ಚಿತ್ರಿಸಿದಂತಾದಿಜಿನನ ಕಂಡಾ ಜಾತಿ । ಕ್ಷತ್ರಿಯಯೋಗೀಂದ್ರನಿದಿರ್ ॥ ೫೦ ॥

ರಾಣಿಯರೆಲ್ಲರು ಸ್ತುತಿಸುತಿದ್ದರು ಬಹು । ವೀಣೆಯ ಮಿಡಿದರೆಂಬಂತೆ ॥
ಮಾಣಿಕಬಸದಿ ಮಾತಾಡುತಿರ್ದುದು ಕೂಡೆ । ವೀಣೆಗೆ ಪ್ರತಿವೀಣೆಯಂತೆ ॥ ೫೧ ॥
ಪಿರಿದುವಿಶಾಲದ ಬಸದಿಯೊಳೆಲ್ಲರು । ಸರಸರಿಕೆಯೊಳೊಲ್ದು ಕುಳಿತು ॥
ಸ್ವರದೋರಿ ಸ್ತುತಿಮಾಡುತಿದ್ದರು ತುಂಬಿಯು । ನೆರವಿ ಗಲಭೆಮಾಡಿದಂತೆ ॥ ೫೨ ॥
ಪ್ರಾಕೃತದಲ್ಲಿ ಸಂಸ್ಕೃತದಲ್ಲಿ ಕರ್ಣಾಟ । ವಾಕಿನೊಳೊಲ್ದಾದಿಜಿನನ ॥
ಆಕಾರವಸ್ತುಗುಣಸ್ತುತಿಗೈದರು । ಮಾಕಂದದರಗಿಳಿಯಂತೆ ॥ ೫೩ ॥
ಪೈಶಾಚಿಕದಲ್ಲಿ ಮಾಗಧಿಯೊಳಗೊಮ್ಮೆ । ಶೈಶವಶೂರಸೇನದೊಳು ॥
ವೈಶಾಖಮಾಸದ ಕೋಗಿಲಂತರುಹನ । ವೈಶಾಲ್ಯ ಮಿಗೆ ನುತಿಸಿದರು ॥ ೫೪ ॥
ದೇವದೇವೋತ್ತಮ ದೇದೀಪ್ಯಮಾನ ದೇ । ಹಾವಲಂಬನ ದೇವರತ್ನಾ ॥
ಮಾವಾಜಿ ಜಯಜಯಯೆಂದರಾ ಚೇನಾಧಿ । ದೇವನ ಸೊಸೆಯರರ್ತಿಯೊಳು ॥ ೫೫ ॥

ಸಾವುಹುಟ್ಟಿಗೆ ಸಿಕ್ಕಿ ಸಂಕಟಬಡುವೆವ್ಮ । ನೋವನೆಲ್ಲವನು ನುಗ್ಗೊತ್ತಿ ॥
ಕಾವುದೆವ್ಮನು ಸ್ವಾಮಿಯೆಂದರಾ ತ್ರಿಭುವನ । ದೇವನ ಮಗನ ರಾಣಿಯರು ॥ ೫೬ ॥

ನಿನ್ನ ಕುಮಾರನಂತೆಮಗೆ ಶುಧ್ಧಾತ್ಮಯೋ । ಗೋನ್ನತಿ ಬಾರದು ಸ್ವಾಮಿ ॥
ನಿನ್ನ ನಂಬಿಹೆವೆಂದು ಸಮ್ಯಕ್ತ್ವಶೀಲ ಸಂ । ಪನ್ನೆಯರತಿನುತಿಸಿದರು ॥ ೫೭ ॥

ಬೇಸರುವೆವು ಭೇದವಿಲ್ಲದ ಭಕ್ತಿಯ । ಭ್ಯಾಸಕೆ ನಮ್ಮ ಧ್ಯಾನದೊಳು ॥
ಆ ಸಿರಿದೋರದು ಕರುಣಿಸಿನ್ನೆಮಗೆ ಕೈ । ಲಾಸದೊಡೆಯಯೆಂದರವರು ॥ ೫೮ ॥

ಕಷ್ಟವೀ ಸ್ತ್ರೀವೇಷ ಮುಕ್ತಿಯಿಲ್ಲದರೇನು । ಶಿಷ್ಟಾತ್ಮಯೋಗದೋರಿದರೆ ॥
ನಷ್ಟವಾಳ್ಪೆವು ಪೆಣ್ಣುಜನ್ಮವನೆಂದು ಸ । ದೃಷ್ಟಿಯ ಸತಿಯರಾಡಿದರು ॥ ೫೯ ॥

ಅನಿತರೊಳಗೆ ರಾಯ ಕಣ್ದೆರೆದೆದ್ದನಂ । ಗನೆಯರು ನಡೆದರು ಕೂಡೆ ॥
ಮುನಿವಾಸಕಡಿಯಿಟ್ಟು ಮುನಿಗಳಿಗೆಲ್ಲ ವಂ । ದನೆಗೆಯ್ದನಬಲೆಯರ್ವೆರಸಿ ॥ ೬೦ ॥

ದಿನವ್ರತದಿಗ್ವ್ರತಮಿತಪರಿಗ್ರಹವ ಮ । ತ್ತನಶನವ್ರತವ ಕೈಕೊಂಡು ॥
ವನಜಮುಖಿಯರು ಕೈಕೊಂಡರು ವ್ರತಗಳ । ಜಿನಮುನಿಗಳ ಸಮಕ್ಷದೊಳು ॥ ೬೧ ॥

ನಿರಘಧರ್ಮಾಂಗದ ನುಡಿನೋಟನಗೆಯುಂಟು । ಸುರತವಿಂದಿಗೆ ಬೇಡವೆಂದು ॥
ವರಬ್ರಹ್ಮಚರ್ಯವ ಕೈಕೊಂಡು ಕಂಕಣ । ಧರನಾದನರಸಿಯರ್ವೆರಸಿ ॥ ೬೨ ॥

ನೋಡ ಚಿತ್ತೈಸಿ ಪೂಜೆಯನೆಂದು ಮುನಿಗಳ । ಬೇಡಿಕೊಂಡನು ಕೂಡೆ ಮುಗುಳ್ದಾ ॥
ಆಡಲಳವೆ ತನ್ನ ಕೈಮುಟ್ಟಿದಭಿಷೇಕ । ಮಾಡತೊಡಗಿದನಾ ಚಕ್ರಿ ॥ ೬೩ ॥

ನಾಲ್ಮೊಗವಾದ ದೇಹಾರದ ಪೂಜೆಗೆ । ನಾಲ್ಮೈಯ ತಾನು ಕೈಕೊಂಡು ॥
ನಲ್ಮೆಯಿಂದಲಿ ನಾಲ್ಕುದಿಕ್ಕಿನೊಳ್ನಿಂದನಾ । ಬಲ್ಮೆಕಾರನು ಭಕ್ತಿಯಿಂದ ॥ ೬೪ ॥

ಪೆರ್ಚುವೆತ್ತಪರಂಜಿಗಳಶವನಷ್ಟವಿ । ಧಾರ್ಚನೆಯಿಂದ ಸತ್ಕರಿಸಿ ॥
ಬಾರ್ಚಿ ಕೈವಿಡಿದನು ಮಾಂದಳಿರಿಗೆ ಪಣ್ಣ । ಸಾರ್ಚಿದಂತೊಪ್ಪಿತಾ ಭಾವಾ ॥ ೬೫ ॥

ದೀರ್ಘಬಾಹುವನೆತ್ತಿ ದೇಹಾರಕಭಿಷೇಕ । ನೀರ್ಘನಾಗಮವ ಮಾಡಿದನು ॥
ಗರ್ಘರಿಕೆಯ ಶಂಖಭೇರಿಕಹಳೆಗಳ । ನಿರ್ಘೋಷ ಹೆಚ್ಚಿತು ಹೊರಗೆ ॥ ೬೬ ॥

ಯೋಗಿಗಳಜ್ಜಿಗಳರಸಿಯರಾ ನಾಲ್ಕು । ಬಾಗಿಲೊಳ್ನಿಂದು ಕೈಮುಗಿದು ॥
ಸಾಗರವುಲಿವಂತೆ ಜಯಜಯವೆನೆ ರಾಜ । ಯೋಗಿ ತೊಡಗಿದನುತ್ಸವವಾ ॥ ೬೭ ॥

ಜಿನಬಿಂಬವೈನೂರುಮಾರುದ್ದವದು ಸುಖಾ । ಸನದೊಳಗಡಕವಾಗಿಹುದು ॥
ಜನಪನು ಸತಿಯರೈನೂರುಮಾರುದ್ದವಾ । ಘನತೆಯದೆಂತೊ ಪೂಜೆಯೊಳು ॥ ೬೮ ॥

ಪಿರಿದುದ್ದವಾಗಿ ಬೇತಾಳರೂಪಲ್ಲವಾ । ಪಿರಿದುದ್ದಕೊಪ್ಪುವ ತೋರಾ ॥
ಕರಚರಣಾಂಗದ ಶೋಭೆಗಳಳವಟ್ಟು । ಪುರುಷಪ್ರಮಾಣದಂತಿಹುದು ॥ ೬೯ ॥

ಆ ದೀರ್ಘವಸತಿಯೊಳಾ ದೀರ್ಘದೇಹಾರ । ಕಾ ದೀರ್ಘದೇಹಿ ಮಜ್ಜನವಾ ॥
ಆದರದಿಂದ ತೊಡಗಿದನಾ ಘನತೆಯ । ನಾದಿಜಿನೇಂದ್ರನೆ ಬಲ್ಲಾ ॥ ೭೦ ॥

ಪ್ರಚ್ಛಾದವೊಡೆದು ಮುಗಿಲ್ಗಳು ಕನಕಾದ್ರಿ । ಗಚ್ಛಾಂಬುಗಳ ಕರೆವಂತೆ ॥
ಸ್ವಚ್ಛಜಲಾಭಿಷೇಕವ ಮಾಡಿದನು ಜಿನ । ಗಿಚ್ಛೆವಟ್ಟಖಿಳಕುಂಭದೊಳು ॥ ೭೧ ॥

ಗಗನಗಂಗೆಯ ನೀರ ಪಚ್ಚೆಯ ಕೊಡದಿಂದ । ಮೊಗೆಮೊಗೆದೆರೆವಂತೆ ಜಿನಗೆ ॥
ಗಗನವ ತುಡುಕುವ ನಿಡುದೆಂಗಿನೆಳೆನೀರ । ತೆಗೆತೆಗೆದಭಿಷೇಕಗೈದಾ ॥ ೭೨ ॥

ಇಂಗಡಲೊಳು ತೇಲ್ವ ನೊರೆಯೆಲ್ಲ ತೆರೆಗಟ್ಟಿ । ಅಂಗೈಗೆ ಸಾರ್ದು ಜಾರ್ವಂತೆ ॥
ತೆಂಗಿನ ಕಾಯ ತುರೆಗಳನಾ ಭೂಪ ದೇ । ವಂಗಭಿಷೇಕವ ಗೈದಾ ॥ ೭೩ ॥

ತಾಳೆಯ ಹೂವಿನೆಸಳೊಯೆನೆ ಸುಲಿದಿಂಪು । ವಾಳೆಯ ಹಣ್ಣನಾ ರಾಯಾ ॥
ಲಾಲಿತಪ್ರತಿಮೆಯ ಭುಜಮುಟ್ಟ ಮೆದೆಗಟ್ಟಿ । ಢಾಳಿಪಂತಭಿಷೇಕಗೈದಾ ॥ ೭೪ ॥

ಸ್ಫುಟದಿ ಹಿಡಿಯ ಹಿಡಿತಕೆ ಸಿಕ್ಕದಿಹ ಹಸ್ತ । ಪುಟದೊಳತ್ತಿತ್ತ ಝುಲ್ಲಿಸುವಾ ॥
ಪುಟದ ಶರ್ಕರೆಯೊಳು ಪ್ರತಿಮೆಗೆ ನೃಪತಿ ಸಂ । ಘಟಿಸಿದನಭಿಷೇಕವಿಧಿಯಾ ॥ ೭೫ ॥

ಅಸಮಾಸ್ತ್ರ ನಾಣ್ಚಿ ಜಿನನ ಮುಂದೆ ಸಿಹಿವಿಲ್ಲ । ಹಿಸುಕಿ ಬೀಸಾಡಿ ಸಾರ್ವಂತೆ ॥
ರಸದಾಳಿಗಬ್ಬಿನ ರಸದೊಳಾ ನೃಪತಿ ಮಿಾ । ಯಿಸುವಂದ ಮೆರೆದುದಾ ಜಿನನಾ ॥ ೭೬ ॥

ಕಂಬಿಕಂಬಿಯೊಳು ಬಂದಿಳುಹಿದ್ದ ಕೋಟಿಕಾ । ಕಂಬಿಯ ರಸವನೆರೆದನು ॥
ಬಿಂಬಕೆ ಹೊಳೆವ ದುರಂಗಿಯ ಪೈರಣೆ । ಯಿಂಬುಗೊಂಡಂತಿದ್ದುದಾಗ ॥ ೭೭ ॥

ಮೆಚ್ಚಾದುದಿಲ್ಲವಾ ನುಡಿಯದಂತಿರಲಿ ಮೈ । ವೆಚ್ಚಿ ಕಾಕಂಬಿಯ ನೆರೆಯೆ ॥
ಅಚ್ಚಪರಂಜಿಯ ಪ್ರತಿಮೆಯಾಗಳೆ ಹೊಸ । ಪಚ್ಚೆಯ ಪ್ರತಿಮೆಯಂತಾಯ್ತು ॥ ೭೮ ॥

ಬಿಸಿಬಿಟ್ಟು ತಂಪುಕಂಪೆಸೆವಪರಂಜಿಯ । ರಸವನೆರೆವನೊಯೆಂಬಂತೆ ॥
ಹಸನಾದ ತಿಳಿದುಪ್ಪದಿಂದಭಿಷೇಕವ । ನೆಸಗಿದನಾ ರಾಜಸಿಂಹಾ ॥ ೭೯ ॥

ತಿಳಿದುಪ್ಪವೆರೆದಾಗ ಚಿನ್ನದ ರಸದೊಂದು । ಹೊಳೆ ಹರಿವಂತೆ ಶೋಭಿಸಿತು ॥
ಬಲುಹೆರೆದುಪ್ಪ ಬಹಾಗ ಪಾಲ್ಗಡಲ ನು । ಣ್ಮಳಲಿಳಿವಂತೆ ರಂಜಿಸಿತು ॥ ೮೦ ॥

ದುಗ್ಧಸಮುದ್ರ ಮೇಲ್ಗವಿದುದೊಯೆಂಬಂತೆ । ಪ್ರಾಗ್ದ್ವಾರೆಗೆಕ್ಕೆಕ್ಕೆಯಾಗಿ ॥
ದಿಗ್ಧವಳಿತದ ಸುಗಂಧದ ಪಾವನ । ದುಗ್ಧದಿಂದಭಿಷೇಕಗೈದಾ ॥ ೮೧ ॥

ಕಡುದೊಡ್ಡ ಕುಂಭವ ನಿಡುದೋಳ್ಗಳಿಂದೆತ್ತಿ । ಬಿಡಲಾಗಿ ಪಾಲ ಧಾರೆಗಳು ॥
ಬುಡುಬುಡು ಭೋರ್ಭೋರ್ಗರು ಝುಲ್ಲುಝುಲ್ಲೆನುತ ದಿಂ । ಕಿಡುತಿಳಿದುದು ತೊರೆಯಾಗಿ ॥ ೮೨ ॥

ದಿಟ್ಟಿಗೆ ಬೆಳ್ಪು ಕೋರೈಸುತ ತೆಂಗಿನ । ಬಟ್ಟೆಳೆಗಾಯಂತೆ ಮೆರೆವಾ ॥
ಘಟ್ಟಿಮೊಸರೊಳಭಿಷೇಕವ ತನ್ನ ಕೈ । ಮುಟ್ಟಿ ಮಾಡಿದನಕ್ಕರಿಂದ ॥ ೮೩ ॥

ಕ್ಷೀರವಾರ್ಧಿಗೆ ಹೆಪ್ಪನಿಕ್ಕಿತಂದನೊ ದಧಿ । ವಾರಿಧಿಯನೆ ತಂದನೇನೊ ॥
ಹಾ ರಮ್ಯವಾಯ್ತೆನೆ ಮೊಸರಭಿಷೇಕವ । ಮೇರೆಯ ಮೀರಿ ಕರೆದನು ॥ ೮೪ ॥

ಸ್ವಾಮಿಯ ಮಂಡೆಯಿಂದಿಳಿವುದು ಬಿಡುವಿಲ್ಲ । ಭೂಮಿಗಿಳಿವುದಲ್ಪವಲ್ಲ ॥
ವ್ಯೋಮದೊಳುಂಟೇನೊ ಅಮೃತಸಮುದ್ರವೆಂ । ದಾ ಮುನಿಗಳು ನೋಡಲಿರೆದಾ ॥ ೮೫ ॥

ಕರೆದನು ಕಡೆಯಿಲ್ಲದಮೃತದ ಮಳೆಯನಾ । ತೊರೆಯುಕ್ಕಿ ಬಹಾಗ ಬಸದಿ ॥
ನೆರೆ ವಜ್ರಪಂಚಾಂಗವಾಗಿ ನಿಂದುದು ನೆಲ । ಕೊರೆದು ಹೋಗದೆ ಅಲ್ಲದಿರಲು ॥ ೮೬ ॥

ಕಾಯ ತೊರೆಯನೊಮ್ಮೆ ಭುಜಮುಟ್ಟೆ ಮೆದೆಗೈವ । ನೊಯ್ಯಾರದೊಳು ತೆಗೆಸುವನು ॥
ಆಯುತಶರ್ಕರೆಗಳನೊಟ್ಟೆ ಪರಿಚಾರ । ಸ್ತ್ರೀಯರಿಂದೊಯಿಸುವನೊಡನೆ ॥ ೮೭ ॥

ಪಣ್ಣ ತೆಗೆವರು ಪಾಲ್ಗೊಸರ ತೆಗೆವರು ಹೊಂ । ಬಣ್ಣದ ಘೃತವ ತೆಗೆವರು ॥
ಕಣ್ಣೆವೆಹಳಚುವಷ್ಟರೊಳವನೂಳಿಗ । ವೆಣ್ಣುಗಳೊಳ್ಪುಮಾಡುವರು ॥ ೮೮ ॥

ನೀಡಿ ಕೊಡುವರು ರಾಯನ ಪೂಜೆಗೆ ತಾವು । ಕೂಡೆ ನಿಂಬಾಲಯುಗಳನು ॥
ಝಾಡಿಸಿ ತೆಗೆವರೂಳಿಗಹೆಂಗಳವನೊಂದು । ಗಾಡಿಯನೇನ ಹೇಳುವೆನು ॥ ೮೯ ॥

ಪೂಜಾವಸ್ತುವ ನೀಡುವರಲ್ಲಿ ನೀ । ರಾಜನೋತ್ಸವವ ಮಾಡುವರು ॥
ಮೂಜಡಿಡುವರು ನಿವಾಳಿಯ ಚಳಚಳ । ನಾ ಜಾಣನರಸಿಯರಾಗ ॥ ೯೦ ॥

ಅಡಕದ ಕೊಡಗಳನಡಿಗಡಿಗಬಲೆಯ । ರೆಡೆಯಾಡಿ ಬೇಗ ನೀಡಿದರು ॥
ಗುಡವಾಣದಂದದ ಕೆಲವು ಪೊಂಗೊಡಗಳ । ತಡಮಾಡಿ ಕೊಡುತಿರ್ದರಾಗ ॥ ೯೧ ॥

ಒಬ್ಬರೊಂದೊಂದು ಕುಂಭವನೆತ್ತಲಾರದೆ । ತಬ್ಬಿ ಹಲಬರೊಂದು ಕೊಡನಾ ॥
ಹಬ್ಬಿಗೊಂಡಿಹುದನು ನೋಡಿದನಬಲೆಯ । ಗರ್ಬ್ಬಸವಾಯ್ತೆಂದು ನೆನೆದಾ ॥ ೯೨ ॥

ತಾನೆ ಹಲವುರೂಪ ಕೈಕೊಂಡನೊಡನಂಬು । ಜಾನನೆಯರ ನಿಲಿಸಿದನು ॥
ಪೀನಕುಂಭಗಳ ಚಮತ್ಕಾರದಿಂದೆತ್ತಿ । ಸ್ನಾನದೋರಿದನಾದಿಜಿನಗೆ ॥ ೯೩ ॥

ನೋಡುತ ನಿಂದಿರಿ ಸಾಕು ಸ್ವಾಮಿಯ ಸ್ತುತಿ । ಮಾಡಿರೆಂದೊಳುನುಡಿನುಡಿದು ॥
ಪಾಡರಿದಭಿಷೇಕಮಾಡುತಿದ್ದನು ಘೌಳಿ । ಯಾಡಿದಂತಾ ವಿಕ್ರಿಯಾಂಗಾ ॥ ೯೪ ॥

ಬೇಡಿದಷ್ಟಿದ್ದುದು ನೃಪನ ರೂಪಮೃತದ । ಮೂಡೆಯಂತೆಸೆವ ಕುಂಭಗಳಾ ॥
ನೀಡಿಕೊಂಡೆರೆವಾಗ ಭಕ್ತಿ ಲೀಲಾನಾಟ್ಯ । ವಾಡುವಂತಿರ್ದನೇನೆಂಬೆ ॥ ೯೫ ॥

ಕುಂದಣಬೆಳ್ಳಿಮಾಣಿಕಪಳುಕಿನೊಳಾದ । ಬಿಂದಿಗೆಗಳ ತೆಗೆವಾಗ ॥
ಸಂದಿಸಿ ಹಲವುಬಣ್ಣದ ಚೆಂಡನಿಟ್ಟಾಡು । ವಂದದೊಳೆಸೆದನಾ ಚಕ್ರಿ ॥ ೯೬ ॥

ಕುಂಭವನೆತ್ತುವ ಬೇಗ ಜೋಕೆಯೊಳು ಸ್ವ । ಯಂಭುವಿಗೆರೆವೊಂದುಕೀವಿ ॥
ಗಂಭೀರ ತಪ್ಪದ ಸುಳಿದಾಟದಿಂದಾಗ । ಜಂಭಾರಿಯನು ನಗುತಿರ್ದ ॥ ೯೭ ॥

ಚೆಂಡಾಡಿದಂತೆ ಕುಂಭವನೆತ್ತಿ ಗಜಗಳ । ಸುಂಡಿಲ ನಗುವ ಚೆಲ್ವಿಕೆಯಾ ॥
ದುಂಡುದೋಳೆತ್ತಿ ಸ್ವಾಮಿಯು ಮೇಲೆ ಸುರಿವನ । ಖಂಡಿತದಮೃತಧಾರೆಗಳಾ ॥ ೯೮ ॥

ಊಟಕೆ ಕೀಲಾರ ನೃಪಗೇಹದೊಳು ಮೂರು । ಕೋಟಿಗೋವುಗಳು ಕರೆವುವು ॥
ಕೋಟಿಕುಂಭವನೆತ್ತಿ ಪಾಲ್ಮೊಸರಭಿಷೇಕ । ದಾಟವ ತೋರ್ಪುದಚ್ಚರಿಯೆ ॥ ೯೯ ॥

ಬಿಟ್ಟ ಪಾಲ್ಮೊಸರಿಳೆಗಿಳಿವಂತೆ ಮಯನಿಟ್ಟ । ತಿಟ್ಟದಿ ಬಯಲಾದುದೈಸೆ ॥
ತಿಟ್ಟವಿಲ್ಲದರುಕ್ಕಿ ಕೋಟಿಕೋಟಿಗೆ ಮಡು । ಗಟ್ಟದಿಹುದೆ ಪಾಲುಮೊಸರು ॥ ೧೦೦ ॥

ಒಪ್ಪಿ ಪಾಂಡುಕನೆಂಬ ನಿಧಿ ರಸಗಳ ಕೊಡು । ತಿಪ್ಪುದು ಧಾನ್ಯಗೊಡುವುದು ॥
ತುಪ್ಪದ ತೊರೆಯ ತಿದ್ದನೆ ಪ್ರತಿಮೆಗೆ ಬೆಟ್ಟ । ಗುಪ್ಪೆಗಾಣಿಸನೆ ಶರ್ಕರೆಯಾ ॥ ೧೦೧ ॥

ಒಟ್ಟು ಶರ್ಕರೆ ಪಣ್ಣ ಕ್ಷಣಕ್ಷಣದೊಳು ತೆಗೆ । ದಿಟ್ಟರೆ ಮಾಯವಾಯ್ತೈಸೆ ॥
ಬೆಟ್ಟ ಮುಳುಗಿ ಹೋಹುದಾ ಚಕ್ರವರ್ತಿ ಕೈ । ಬಿಟ್ಟಭಿಷೇಕಸಾರದೊಳು ॥ ೧೦೨ ॥

ವರಕಾಮವೃಷ್ಟಿಯೆನಿಪ ಗೃಹಪತಿರತ್ನ । ಪರಿಪರಿಗೃಹವಸ್ತುಗಳನು ॥
ನೆರಪುವುದವನೊಂದುವಿಭವವ ಮಾಳ್ಪನೆಂ । ದರೆ ತಡಬಡವುಂಟೆ ಬಲುಹೆ ॥ ೧೦೩ ॥

ಹಾಲ ಸಮುದ್ರವೊಂದನೆ ತಂದು ಜಿನಗಂದು । ಶೈಲದೊಳಮರರೆರೆದರು ॥
ಹಾಲಿಕ್ಷುರಸಘೃತದಧಿಯ ನಾಲ್ಕಬ್ಧಿಯ । ಮೇಲಿನಿಂದಿಳುಹಿದನಿವನು ॥ ೧೦೪ ॥

ಆರ್ತಿಯೊಳ್ಳೋಜೆಯೊಳಾಚಾರದಲ್ಲಿ ಮಂ । ತ್ರಾರ್ಥದೊಳುಚ್ಚರಣೆಯೊಳು ॥
ತೀರ್ಥಾಂಬು ಮೊದಲಾಗಿ ದಧಿ ಕಡೆಯಾಗಿ ಸ । ದರ್ಥಾಭಿಷೇಕಮಾಡಿದನು ॥ ೧೦೫ ॥

ಲಾಜಾಂಗಚೂರ್ಣವ ಕುಂಕುಮಚೂರ್ಣವ । ಗಾಜುಗೋಜಾಗಿ ಸೂಸಿದನು ॥
ಶ್ರೀಜಿನನಿದ್ದನಮೃತಸತಿಯಿಟ್ಟ ನೀ । ರೇಜಧೂಳಿಯೊಳದ್ದಿದಂತೆ ॥ ೧೦೬ ॥

ದೋಷನಾಶನ ಪ್ರತಿಮೆಗೆ ಪಂಚವಿಧದ ಪೀ । ಯೂಷಧಾರೆಯ ಮಾಡಿ ಕೊಡೆ ॥
ಭೂಷಣಾಂಗನು ಘಮಘಮಿಸುವ ದಿವ್ಯಸ । ರ್ವೌಷಧಿರಸವನೆರೆದನು ॥ ೧೦೭ ॥

ಬಾವನ್ನಗಂಧವ ಕೋಟಿಕುಂಭದೊಳೆತ್ತಿ । ದೇವನ ಪ್ರತಿಮೆಗೆರೆದನು ॥
ಸಾವಿರಕೋಟಿಕೊಪ್ಪರಿಗೆಯ ಪನ್ನೀರ । ತೀವಿ ಬಿಟ್ಟನು ತೊರೆಯಾಗಿ ॥ ೧೦೮ ॥

ಪೂರ್ಣಕುಂಭವನೆತ್ತಿ ಲೋಕದ ಸಂತಾಪ । ನಿರ್ನಾಶವಾಗುವಂದದೊಳು ॥
ವರ್ಣಶುದ್ಧದೊಳೋದಿ ಶಾಂತಿಮಂತ್ರವನು ಸು । ವರ್ಣಾಂಗನಭಿಷೇಕಗೈದಾ ॥ ೧೦೯ ॥

ಹಲವು ವರ್ಣದ ಪುಷ್ಪತುಂಬಿದ ನೂರೆಂಟು । ಗಳಗೆಯನೆತ್ತಿ ಸೂಸಿದನು ॥
ಪಳಪಳನಿಳಿವ ಹೂಮಳೆಯ ಕಂಡೆಲ್ಲರಂ । ದುಲಿದರು ಜಯಜಯಯೆಂದು ॥ ೧೧೦ ॥

ರಜತಪುಷ್ಪವ ಹೇಮಪುಷ್ಪವ ಸುರಿದನು । ಭುಜಮುಟ್ಟ ತುಂಬಿ ನಿಲ್ವಂತೆ ॥
ನಿಜನವರತ್ನವೃಷ್ಟಿಯ ಮಾಡಿದನು ಗಜ । ಬಜಿಸಲೆಲ್ಲರು ಜಯಮೆಂದು ॥ ೧೧೧ ॥

ಬಳಿಕ ಪ್ರತಿಮೆಗಷ್ಟವಿಧದರ್ಚನೆಯ ಮಾಡಿ । ಅಲರ್ದ ನೂರೆಂಟು ತಾವರೆಯಾ ॥
ಸಲೆ ಮಂತ್ರಪುಷ್ಪವನಿಕ್ಕಿ ಕೈಮುಗಿದನಾ । ಗಳೆ ವಾದ್ಯತತಿ ಸುಮ್ಮನಾಯ್ತು ॥ ೧೧೨ ॥

ಅತಿವೃದ್ಧನೊಬ್ಬಪೂಜೇಂದ್ರನಾ ಕ್ಷಣ ಜಿನ । ಪತಿಯ ಶಾಸನದೇವತೆಗಳಾ ॥
ಪ್ರತಿಮಂತ್ರವಿಧಿಯಿಂದ ಪೂಜಿಸಿದನು ನರ । ಪತಿ ನೋಡುತಿರ್ದನು ನಿಂದು ॥ ೧೧೩ ॥

ರೂಪೆಲ್ಲವಳಿದೊಂದುರೂಪಾಗಿ ಬಂದನು । ತಾಪಸಗೋಷ್ಠಿ ಗಾ ನೃಪತಿ ॥
ಶ್ರೀಪಾದಪೂಜೆಯ ಮಾಡಿ ನಮೋಸ್ತೆಂದ । ನಾ ಪದ್ಮಮುಖಿಯರು ಸಹಿತ ॥ ೧೧೪ ॥

ಪರಮಾತ್ಮಸಿದ್ಧಿರಸ್ತೆಂದನಾಚಾರ್ಯ ಮಿ । ಕ್ಕರು ಧರ್ಮವೃದ್ಧಿರಸ್ತೆನಲು ॥
ಹರಕೆಯನಾಂತು ಕೂಡೊಲಿದು ನೋಡಿದನಲ್ಲಿ । ನೆರೆದಿರ್ದ ಜನವನಾ ರಾಯಾ ॥ ೧೧೫ ॥

ಅರಮನೆಯೊತ್ತಿನ ಬಸದಿ ಮತ್ತನ್ಯರು । ಬರಬಾರದೇಕಾಂತಪೂಜೆ ॥
ಪರಿಸೆ ಬಹಳವಿಲ್ಲ ಕಿರಿದು ಕೂಡಿದುದು ಪ । ನ್ನೆರಡುಲಕ್ಷದೊಳಿದ್ದುದಾಗ ॥ ೧೧೬ ॥

ಲೆಕ್ಕಿಸೆ ಪೆಂಡಿರು ನಾಲ್ಕುಸಾವಿರ ಕುಂದಿ । ಲಕ್ಕವವರೊಳೊಬ್ಬಸತಿಗೆ ॥
ತಕ್ಕ ಸೇವೆಯ ಪೆಂಗಳೀರೈವರೆನೆ ಹತ್ತು । ಲಕ್ಕವಿಹುದು ಸ್ವಲ್ಪ ಕುಂದಿ ॥ ೧೧೭ ॥

ಅರಸನೂಳಿಗವೆಂಗಳಾಲಾಪಸತಿಯರು । ಗುರುಗಳಜ್ಜಿಗಳು ವಾದಕರು ॥
ಪರಿಚಾರವಧುವೃದ್ಧವ್ರತಿಕರೆನಲು ಲಕ್ಕ । ವರೆಯೊಳಿಹುದು ನಸು ಕಡಮೆ ॥ ೧೧೮ ॥

ದೇವಾದ್ರಿಜಿನಬಿಂಬವಾಗಲೆರಡುವರೆ । ದೀವಿಯ ಪರಿಸೆ ಕೂಡಿದರೆ ॥
ದೇವಪೂಜೆಯ ಮಾಡಿ ಮೆಚ್ಚಿಪ ದಕ್ಷನಾ । ಭೂವರಗೀ ಪೂಜೆ ಪಿರಿದೆ ॥ ೧೧೯ ॥

ಎಪ್ಪತ್ತೆರಡುಬಸದಿಯೊಳಗೈನೂರುಮಾ । ರುಪ್ಪರದರ್ಹಬಿಂಬಗಳಾ ॥
ಅಪ್ಪುಗಾಣಿಸಿ ರಜತಾದ್ರಿಯೊಳಗೆ ಪೂಜೆ । ಯೊಪ್ಪದೋರುವಗಿದು ಘನವೆ ॥ ೧೨೦ ॥

ಆದೀಶ ಮುಂದಿನ್ನು ಸಿದ್ಧಲೋಕಕೆ ಪಥ । ವಾದಾಗ ಹದಿನಾಲ್ಕುದಿವಸ ॥
ಭೇದವಿಲ್ಲದೆ ಪೂಜೆಮಾಳ್ಪಾಗ ನೋಡಬೇ । ಕಾದಿಚಕ್ರಿಯ ಕೈಯ ಪರಿಯಾ ॥ ೧೨೧ ॥

ಸುರಲೋಕನರಲೋಕಫಣಿಲೋಕದವರೆಲ್ಲ । ಶಿರದೂಗೆ ರಜತಾದ್ರಿಯಲ್ಲಿ ॥
ಭರತೇಶ ಮಾಡುವ ಪೂಜೆಯ ನೋಡಬೇ । ಕೆರಡುಕಂಗಳು ಸಾಲವಾಗ ॥ ೧೨೨ ॥

ಪರ್ವದಿನದೊಳು ಸಂಕಲ್ಪಾಭಿಷೇಕವೆಂ । ದುರ್ವೀಶ ತೊಡಗಿದನಿದನು ॥
ಸರ್ವರಿಗೊಲ್ದು ಗಂಧಾಂಬುವ ಕೊಡಿಸಿ ಸು । ಪರ್ವಲೋಕವ ತೋರಿ ಕೊಟ್ಟಾ ॥ ೧೨೩ ॥

ನಡುವಗಲಿನ ಸನ್ನೆಯಾದುದು ವಾದಕ । ರೆಡಬಲಕೊಲೆದು ಸಾಗಿದರು ॥
ಬಿಡುಗೆಗೊಂಡರು ವೃದ್ಧವ್ರತಿಕರು ಭರತೇಶ । ನಡಿಗಳಿಗೆರಗಿ ಭಕ್ತಿಯೊಳು ॥ ೧೨೪ ॥

ಧರಣೀಶನಿಂದು ನಾರಿಯರುಗೂಡಿಲ್ಲಿ ಜಾ । ಗರವಿಹನೆಂದು ಯೋಗಿಗಳು ॥
ಪುರದ ಮಧ್ಯದ ಜಿನವಾಸಕೆದ್ದರು ಸುಖ । ವಿರು ಭವ್ಯಯೆಂದೊಲ್ದು ಹರಸಿ ॥ ೧೨೫ ॥

ಸಾಗಿದರಜ್ಜಿಕೆಯರು ಸತಿಯರು ಹೊರ । ತಾಗಿ ಮತ್ತುಳಿದರೆಲ್ಲರನು ॥
ಹೋಗಿ ನೀವೆಲ್ಲ ಹೊತ್ತಾಯ್ತೇಕಭುಕ್ತಕೆಂ । ದಾ ಗುಣನಿಧಿ ಕಳುಹಿದನು ॥ ೧೨೬ ॥

ಲೋಕಾಂತ ಹೋದುದೇಕಾಂತವಾದುದು ಧರ್ಮ । ವಾಕೆಂದ ವ್ರತಸತಿಯರೊಳು ॥
ಭೂಕಾಂತನಿದ್ದನೆಂಬಲ್ಲಿಗೆ **ಪರ್ವಾಭಿ** । **ಷೇಕದಸಂಧಿ** ಸಾಗಂಧಿ ॥ ೧೨೭ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೨೮ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೨೯ ॥

ವ್ಯಾಪಾರಶೂನ್ಯ ಮಹಾಮಾನ್ಯ ಸುಜ್ಞಾನ । ದೀಪ ಲೋಕೈಕಪ್ರತಾಪಾ ॥
ಲೇಪಿಸಿದಂತಿರು ನನ್ನೆದೆಯೊಳಗೆ ನಿ । ರ್ಲೇಪ ಚಿದಂಬರಪುರುಷಾ ॥ ೧೩೦ ॥

ಪರ್ವಾಭಿಷೇಕಸಂಧಿ ಸಂಪೂರ್ಣಂ

# ತತ್ವೋಪದೇಶಸಂಧಿ.

ಎತ್ತ ನೋಡಿದೊಡತ್ತ ಮೊತ್ತದ ಪ್ರಭೆಯಾಗಿ । ಚಿತ್ತದೊಳೆಸೆವ ಚಿದಾತ್ಮಾ ॥
ಬಿತ್ತರಿಸೆನಗೆ ಸನ್ಮತಿಯನು ಮೋಕ್ಷದ । ಬಿತ್ತ ನಿರಂಜನಸಿದ್ಧಾ ॥ ೧ ॥

ಅಭಿಷೇಕವಾದ ಮೇಲಾ ಚತುರ್ಮುಖವಾಸ । ದಭವಗೆ ಕೈಗಳ ಮುಗಿದು ॥
ಅಭಿಮತಸಿದ್ಧಿಯಧ್ಯಯನಮಂಟಪಕೆ ಮ । ತ್ತಭಿಗಮಿಸಿದನಾ ಚಕ್ರಿ ॥ ೨ ॥

ಮಧ್ಯದ ಪೌಳಿಯೊಳೆಸೆವುದಾ ನೃಪಗೆ ತ । ಕ್ಕಧ್ಯಯನದ ದೀರ್ಘಶಾಲೆ ॥
ಆಧ್ಯಾತ್ಮಸೂರ್ಯನೈತಂದನಲ್ಲಿಗೆ ಸಿಂಹ । ಮಧ್ಯೆಯರ್ಮೈದೆ ಬೆಂಬಳಿಯಾ ॥ ೩ ॥

ಝಲ್ಲಿಯಂತೆಸೆವ ದರ್ಭೆಯ ಹೂವ ಮೊಳದುದ್ದ । ದಲ್ಲಿ ಹರಹಿ ಮೇಲೆ ಬಿಳಿಯ ॥
ಪುಲ್ಲಿಪಟ್ಟೆಯ ಹಾಸಿ ಮಂಟಪತುಂಬಿರ್ದು । ದೆಲ್ಲರ್ಗೆ ಸಂಯಮಾಸನವು ॥ ೪ ॥

ನಟ್ಟನಡುವೆ ಹೊನ್ನ ಕಾಲುಮಣೆಯ ಮೇಲೆ । ದಟ್ಟೈಸಿ ದರ್ಭೆಯ ಹೂವಾ ॥
ಪಟ್ಟೆಯ ಹಾಸಿ ದರ್ಭೆಯ ಕುಸುಮದೊಳಳ । ವಟ್ಟಿರ್ದುದೊರಗುವ ಮೂಡೆ ॥ ೫ ॥

ಲಾಗುವೇಗದಿ ಬಂದು ಮಣೆಯ ಮೇಲಾ ರಾಜ । ಯೋಗಿ ಕುಳಿತನು ಶಾಂತದೊಳು ॥
ಯೋಗಿ ಸಾಧಿಸಿದ ವಿದ್ಯಾವಳಿಯೆನೆ ಪೆಣ್ಗ । ಳಾ ಗೃಹತುಂಬಿ ಕುಳಿತರು ॥ ೬ ॥

ಸೂಸುವ ಪರಿಮಳ ತಳಿವ ಪನ್ನೀರಿಲ್ಲ । ಬೀಸುವ ಚಮರವಿಲ್ಲಾಗ ॥
ಬೀಸಣಿಗೆಯ ಗಾಳಿ ವೀಳೆಯವಿಲ್ಲುಪ । ವಾಸಿಗಳಿರ್ದರೊಪ್ಪದೊಳು ॥ ೭ ॥

ಕಾಮತಂತ್ರದ ನುಡಿಯಿಲ್ಲ ಭೋಗದೊಳಂದು । ನಾಮಮಾತ್ರದ ನೆನಹಿಲ್ಲ ॥
ಕ್ಷೇಮಭಾವನೆಯೊಳು ಮನದಣಿದಾ ಮೋಕ್ಷ । ಗಾಮಿಗಳಿರ್ದರರ್ತಿಯೊಳು ॥ ೮ ॥

ನುಡಿದರೆ ಧರ್ಮದ ಮಾತು ನೋಡಿದರೆ ಸೊ । ಕ್ಕಡಗಿರ್ದ ಶಾಂತಿಯ ನೋಟ ॥
ಎಡೆಗೊಮ್ಮೆ ನಕ್ಕರೆ ಧರ್ಮಸೋಂಕಿನ ನಗೆ । *ಯೊಡಗೂಟದಿಂದಿದ್ದರಾಗ ॥ ೯ ॥

ಸ್ತ್ರೀಪುರುಷರು ಮೈಯ ಮುಟ್ಟರನ್ಯೋನ್ಯದುಃ । ಖಾಪನೋದಾರ್ಥ ಮುಟ್ಟಿದರೆ ॥
ತಾಪಸನೊರ್ವನ ಮೈಯ ಮರ್ದನಮಾಳ್ಪ । ತಾಪಸರಂತಿರ್ದರಾಗ ॥ ೧೦ ॥

ಜಿನ ಜಿನ‡ಯೇನೆಂಬೆ ತಮ್ಮಯ ಸುಖವೆತ್ತ । ಮುನಿಗಳಂತುಪವಾಸವೆತ್ತ ॥
ಅನುಭವಿಸುವ ಗಂಡಪೆಂಡಿರೊಂದಾಗಿರ್ದು । ಮನಮಿಸುಕದ ನಡೆಯೆತ್ತ ॥ ೧೧ ॥

ಧಾರಿಣಿಯೊಳಗೆ ಸ್ತ್ರೀಪುರುಷರಗಲಿ ಬ್ರಹ್ಮ । ಚಾರಿತನವ ತೋರಬಹುದು ॥
ಸೇರಿದ್ದು ಮನವ ತಡೆವುದುರೆ ಖಡ್ಗದ । ಧಾರೆಯ ನಡೆ ತಾನಿದಲ್ತೆ ॥ ೧೨ ॥

---

* ಯೊಡಗೂಡಿ ಕುಳಿತಿರ್ದರಾಗ.    ‡ ತಮ್ಮಯಾ ಸುಖವೆತ್ತ ತಾವೆತ್ತ.

ಮೊದಲು ವ್ರತವ ಕೊಂಡು ಮತ್ತೆ ನಲ್ಲನ ಕಂಡು । ಮುದದೋರೆ ಲೋಕಜನಗಳ ॥
ಬಿದರಿಕೆಗಾಗಿ ಸೈರಿಸಿದರೆ ದೊರೆಗಳ । ಕುದುರೆಯು ಬ್ರಹ್ಮಚರ್ಯವದು ॥ ೧೩ ॥

ತುಂಬಿದೆಲ್ಲರ ಮುಂದೆ ವ್ರತವೆಂದುಕೊಂಡು ವು । ತ್ತುಂಬುಜಮುಖಿಯರ ಕಂಡು ॥
ಕುಂಬಳಕಾಯಂತೆ ಮನದೊಳು ಕೊಳೆವುತ । ಡಂಬಕರಿಹರದು ವ್ರತವೆ ॥ ೧೪ ॥

ಹಿಡಿದರೆ ವ್ರತವ ಹಿಡಿಯಬೇಕು ಸರ್ಪನ । ಹಿಡಿವಂತೆ ಕಡುದೃಢವಾಗಿ ॥
ಹಿಡಿದ ಮೇಲಳಿಮನಸಾದರೆ ವ್ರತ ತಾನೆ । ಕಡಿವುದು ಫಣಿಯಂತೆ ತನ್ನಾ ॥ ೧೫ ॥

ತೊಟ್ಟಾಗ ತೊಟ್ಟಿರಬೇಕದರೊಳು ಭೇದ । ಹುಟ್ಟದಂತೇಕವಾದಂತೆ ॥
ಬಿಟ್ಟಾಗ ಬಿಡಬೇಕು ಬಿಟ್ಟೊಡವೆಯ ಘಾಳಿ । ತಟ್ಟದಂತಂತರಂಗವನು ॥ ೧೬ ॥

ಬಿಟ್ಟ ಮೇಲೊಮ್ಮೆ *ಬಂದಪ್ಪಿಕೊಂಡರು ಜುಂಮು । ದಟ್ಟದಿರದು ಬ್ರಹ್ಮಚರ್ಯ ॥
ಕಟ್ಟದಿರೊಳಗೆ ಹೆಂಗಳ ಕಂಡು ಕುದಿದರೆ । ಬಿಟ್ಟಯು ಬ್ರಹ್ಮಚರ್ಯವದು ॥ ೧೭ ॥

ನುಡಿದರೇನೊಮ್ಮೆ ನೋಡಿದರೇನು ನಕ್ಕರೇ । ನೊಡನೊಮ್ಮೆ ಮುಟ್ಟಿದರೇನು ॥
ಮಿಡುಕಲೀಸದೆ ಮನವನು ತಡೆದಭಿಲಾಷೆ । ಯಡಗಿದ ಭಾವಶುದ್ಧರಿಗೆ ॥ ೧೮ ॥

ನೀರ ಸೋಂಕಿದರೆ ಬಾಳೆಲೆಗಳು ನನೆವಂತೆ । ವಾರಿಜದೆಲೆ ನನೆದಪುದೆ ॥
ಊರುಗರೆದೆ ಹೆಣ್ಣ ಸೋಂಕಿಂದ ನನೆವುದು । ಧೀರರ ಚಿತ್ತರಂಜಿಪುದೆ ॥ ೧೯ ॥

ಆ ರಾಜಸ್ತ್ರೀಪುರುಷರುಗಳೆಲ್ಲರು ವ್ರತ । ಶೂರರು ಚಿತ್ತನಿರ್ಜಿತರು ॥
ಘೋರವ್ರತವ ಕೊಂಡು ಮನಸಡಿಲದೆ ಧರ್ಮ । ವೀರರಿದ್ದರು ಜಿನ ಮೆಚ್ಚೆ ॥ ೨೦ ॥

ತುಡುಗುಣಿ ಬಿಟ್ಟಿದೆಮಿಡುಕುವನಲ್ಲದೆ । ಕಡುತೃಪ್ತ ಬಿಟ್ಟಳಿಪುವನೇ ॥
ಕಡಮೆಯೆ ಅವರಿಗೆ ಸುಖದೊಂದುದಿನ ಬಿಟ್ಟ । ರೆಡಹಿಯು ಕಾಣರಾ ಸುಖವಾ ॥ ೨೧ ॥

ಧರ್ಮಕಥಾರಸದೊಳಗುಪವಾಸದ । ಪೆರ್ಮೆಗೆ ಕೊರಗದೊಪ್ಪಿದರು ॥
ಘರ್ಮದ ಬಿಸಿಲಿಗೆ ಕೊರಗದೆ ತಾವರೆ । ನಿರ್ಮಲಜಲದೊಳಿಪ್ಪಂತೆ ॥ ೨೨ ॥

ಮಂಡಿತದರ್ಭಾನಸದಲ್ಲಿ ಚಕ್ರೇಶ । ಮಂಡಿಸಿ ಸತಿಯರು ತನ್ನ ॥
ಪೆಂಡಿರೆಂದೆಣಿಸದೆಯಿವರಿಂದು ತಪಸಿವೆ । ಣ್ಣಂಡವೆಂದೆಣಿಸಿ ನೋಡುವನು ॥ ೨೩ ॥

ಪುಂಡರೀಕಾಕ್ಷಿಯರಾಗ ಭೂಪನ ತಮ್ಮ । ಗಂಡನೆಂದೆಣಿಸದಿಂದೊಬ್ಬ ॥
ಮಂಡಲಾಚಾರ್ಯತಪೋಧನನೆಂದೆದೆ । ಗೊಂಡು ನೋಡುವರು ನುಡಿವರು ॥ ೨೪ ॥

ಜ್ಞಾನಭಾಸ್ಕರ ಧರ್ಮಕಥೆಗೆ ನೆಗೆದು ನೋಡಿ । ಯೇನಿರೌ ವ್ರತಸತಿಯರಿರಾ ॥
ಹಾ ನಮ್ಮ ಸಂಸರ್ಗದಿಂದುಪವಾಸದ । ಗ್ಲಾನಿಯಾದುದೆ ನಿಮಗೆಂದಾ ॥ ೨೫ ॥

---

* ಹೆಣ್ಣಪ್ಪಿದರೆದೆ

ಉಪವಾಸದಿಂದೊಂದುಗ್ಲಾನಿಯಿಲ್ಲೆಮಗೆ ನಿ । ನ್ನುಪದೇಶವೊಂದ ಕೇಳ್ವಾಗ ॥
ಉಪರಿಮಸ್ವರ್ಗಿಗಳುಣ್ಣದೆ ಸುಖಿಸುವಂ । ತುಪಮಿಸುತದೆಯೆಂದರವರು ॥ ೨೬ ॥

ಉದರಪೋಷಣಕಾಗಿ ಬಹುಜನ್ಮ ಸಂದುದು । ವಿದಿತಾತ್ಮಪೋಷಣಕಾಗಿ ॥
ಸದಮಲಚರಿತ ನಿನ್ನೊಂದು ಸಂಸರ್ಗದಿಂ । ದಿದು ದೊರೆಕೊಂಡುದಿಂದೆಮಗೆ ॥ ೨೭ ॥

ಒಳಗನರಿಯದಿಪ್ಪುದಿನ ಹೊರಗನೆ ಮೆಚ್ಚಿ । ತೊಳಲಿದೆವಖಿಲಯೋನಿಯೊಳು ॥
ಎಲೆ ರಾಜಯೋಗಿ ನಿನ್ನಯ ಸಂಗದಿಂದಿಂದು । ಫಲಿಸಿದುದೆಮಗೆ ಸನ್ಮಾರ್ಗ ॥ ೨೮ ॥

ಮಕ್ಕಳ ಪಡೆಯಬೇಕುಡತೊಡಬೇಕೆಂಬ । ಕಕ್ಕುಲಿತೆಯೆವುಳ್ಳುದೆಮಗೆ ॥
ಕಕ್ಕುಲಿತೆಯ ಬಿಡಿಸಿದೆ ನಿತ್ಯಸುಖದೊಂದು । ದಿಕ್ಕ ತೋರಿದೆ ಮೋಕ್ಷರಸಿಕಾ ॥ ೨೯ ॥

ಅನಶನವೇನು ಪ್ರಯಾಸವಂತಿರಲಿ ಪಾ । ವನ *ಧರ್ಮಸಾರವನಿನ್ನು ॥
ಅನುವಡಿಸೆಲೆ ಪರ್ವದಿವಸದಾಚಾರ್ಯಯೆಂ । ದನಿಮಿಷಾಕ್ಷಿಯರು ನುಡಿದರು ॥ ೩೦ ॥

ವಿನಯಾವತಿಯೆಂಬ ವಿದ್ಯಾಮಣಿಯೆಂಬ । ವನಿತೆಯರನು ಮುಂದೆಮಾಡಿ ॥
ಘನಭಕ್ತಿಯಿಂದೆಲ್ಲ ಕೇಳುತಿರ್ದರು ರಾಯ । ನನುಮಾನವಿಡಿದಿಂತು ನುಡಿದಾ ॥ ೩೧ ॥

ವಿದ್ಯಾಮಣಿ ಕೇಳು ವೀತರಾಗನ ಮತ । ದಾದ್ಯಂತವನು ಕಿರಿದಿನೊಳು ॥
ಹೃದ್ಯವಾಗಿರೆ ಪೇಳ್ವೆನೆಂದು ತೊಡಗಿದನಾ । ಸದ್ಯೋಜಾತತಾಪಸನು ॥ ೩೨ ॥

ಕಡೆಯಿಲ್ಲದಾಕಾಶಯಿಪ್ಪುದದರ ನಟ್ಟ । ನಡುವೆ ಘಾಳಿಗಳು ಮೂರಿಹುವು ॥
†ಕಡುದೀರ್ಘಗಳು ದಟ್ಟಕಿರಿದೆ ಮತ್ತವಕಿಪ್ಪು । ಕಡಮೆಯೊಳೊಂದುಯೋಜನವು ॥ ೩೩ ॥

ಮೂರುಸವಡಿಯ ಹಸುಬೆಯ ಚೀಲದವೊಲು । ಮೂರುಘಾಳಿಗಳಿಹುವಲ್ಲಿ ॥
ಮೂರುಭುವನವಡಗಿಹುವವರೊಳು ಮೇಲೆ । ತೋರುತಿರ್ಪುದು ಸುರಲೋಕ ॥ ೩೪ ॥

ಆ ಸುರಲೋಕದ ತುದಿಯೊಳು ಮುಕ್ತಿನಿ । ವಾಸವೊಪ್ಪಿಹುದದರಲ್ಲಿ ॥
ಘಾಸಿಯಾಗದ ಗಾಡಿಯಳಿಯದ ಸುಖದ ಮ । ಹಾಸಿದ್ಧರಿಹರನವರತ ॥ ೩೫ ॥

ನಾವಿರ್ಪುದಿದು ಮಧ್ಯಲೋಕ ಕೆಳಗಣದು । ಶ್ರಾವಕಿ ಕೇಳಧೋಲೋಕಾ ॥
ಜೀವಗಳಿಪ್ಪರೊಳಗೆ ತುಂಬಿ ಸುಖದುಃಖ । ಸೇವನೆಯೊಳಗಿಹುವೆಂದಾ ॥ ೩೬ ॥

ಸುರರು ಮುಂತಾಗಿತ್ತ ಕೆಳಗಿರ್ದರೆಲ್ಲರು । ಮರಣಜನನಕೊಳಗಹರು ॥
ಮರಣಜನನ ಮೊದಲಾದ ದುಃಖಗಳು ಸಿ । ದ್ಧರಿಗಿಲ್ಲ ಕೇಳೆಲೆ ವ್ರತಿಕೆ ॥ ೩೭ ॥

---

*ವಾದ ಧರ್ಮವನಿನ್ನು

†ಕಡುದೀರ್ಘಕಳವಟ್ಟುದಷ್ಟಕಿಷ್ಪಿಷ್ಟುತಾ ।

†ಅಡಿಗರುವತ್ತುಸಹಸ್ರಯೋಜನನಸು । ಕಡಮೆಗಾವುದ ದಟ್ಟತುದಿಗೆ ॥

ನರರೊಮ್ಮೆ ಸುರರಹರಮರರು ನರರಹ । ರಿರದೊಮ್ಮೆ ನಾರಕರಹರು ॥
ಕರಿಪಶುಫಣಿಮರನಾಗಿ ಯೋನಿಗಳಲ್ಲಿ । ತಿರುಗುತಿಹರು ಕರ್ಮವಶದಿ ॥ ೩೮ ॥

ದಾರಿದ್ರನೆನಿಸುತ ಧನಿಕನೆನಿಸುತೊಮ್ಮೆ । ಸ್ತ್ರೀರೂಪುಪುರುಷರೂಪೆನಿಸಿ ॥
ಬಾರದ ಭವಬಡುತಿಹುವು ಜೀವಗಳು ಸಂ । ಸಾರದೊಳೇನೆಂಬೆನಬಲೆ ॥ ೩೯ ॥

ಸಿದ್ಧರಂತೆಲ್ಲರು ಸುಖವಿಹುದಕೆ ತಕ್ಕ । ಬುದ್ಧಿಯಾವುದು ನಮಗದನು ॥
ಬುದ್ಧಿಗಲಿಸು ಸ್ವಾಮಿಯೆಂದು ವಿದ್ಯಾಮಣಿ । ಶುದ್ಧಚಿತ್ತದೊಳು ಕೇಳಿದಳು ॥ ೪೦ ॥

ಕರ್ಮವ ಕೆಡಿಸಿದರೆಲ್ಲರು ಸಿದ್ಧರಂ । ತೊರ್ಮೊದಲೊಳಗಿಹರೆಂದಾ ॥
ಕರ್ಮವ ಕೆಡಿಸುವುಪಾಯ ತಾನಾವುದಾ । ಮರ್ಮವನುಸುರೆಂದಳಾಕೆ ॥ ೪೧ ॥

ಜಿನಸಿದ್ಧಭಕ್ತಿಯಿಂದಾ ಕರ್ಮ ಕೆಡುವುದಾ । ಜಿನಸಿದ್ಧಭಕ್ತಿ ನೋಳ್ಪಾಗ ॥
ವಿನುತಭೇದಾಭೇದಭಕ್ತಿಯೆಂದಿರ್ತೆರ । ನನುಕರಿಸಿಹುದು ಕೇಳವನು ॥ ೪೨ ॥

ಇದಿರಿಟ್ಟು ಜಿನಸಿದ್ಧರುಗಳ ಪೂಜಿಪುದು ನೋ । ಳ್ಪುದು ಪೊಗಳ್ವುದು ಭೇದಭಕ್ತಿ ॥
ಪದೆದು ತನ್ನಾತ್ಮರೂಪಿನೊಳಿಟ್ಟು ನೋಡಿದ । ರದು ಭೇದವಿಲ್ಲದ ಭಕ್ತಿ ॥ ೪೩ ॥

ಪ್ರಾರಂಭದೊಳು ಭೇದಭಕ್ತಿಯ ಮಾಡಿ ಮು । ಕ್ತಾರು ನಿರ್ಭೇದಭಕ್ತಿಯೊಳು ॥
ಆರಾಧಿಸಿದರವರಾ ಕರ್ಮ ಕೆಡುವುದು । ಭೂರಿವಚನಗಳೇನೆಂಬೆ ॥ ೪೪ ॥

ಭೇದಭಕ್ತಿಯ ನೆಲೆ ತಿಳಿವುದೆಮಗೆ ಮತ್ತ । ಭೇದಭಕ್ತಿಯ ಬಗೆ ಹೊಗದು ॥
ಆ ದಿವ್ಯಭಕ್ತಿಯ ತಿಳುಹಬೇಕೆಂದು ತ । ಳೋದರಿ ಬಿನ್ನವಿಸಿದಳು ॥ ೪೫ ॥

ಜಿನವಾಸದೊಳಗಿದಿರಿಟ್ಟು ಜಿನೇಂದ್ರನ । ಮನವೊಲಿದರ್ಚಿಸಿದಂತೆ ॥
ತನುವಾಸದೊಳಗಾತ್ಮರೂಪ ನೋಡಿದರೆಲೆ । ವನಿತೆ ನಿರ್ಭೇದಭಕ್ತಿಯದು ॥ ೪೬ ॥

ಧರಿಸಿದ ದೇಹಪ್ರಮಾಣನಾತ್ಮನು ಮೈಯ । ಬೆರಸಿಯು ಬೆರಸದೊಪ್ಪಿಹನು ॥
ಪುರುಷಾಕಾರನು ಚಿನ್ಮಯನೆಂದೊಳ । ವರಿದು ನೋಡಲು ತೋರ್ಪನಬಲೆ ॥ ೪೭ ॥

ಧೂಳರಾಶಿಯೊಳೊಂದು ಸ್ಫಟಿಕದ ಪ್ರತಿಮೆಯ । ಹೂಳಿದಂತೀ ದೇಹದೊಳಗೆ ॥
ಹೂಳಿರ್ದನೆನ್ನಾತ್ಮನೆಂದು ನೋಡಿದರಲ್ಲಿ । ಥಾಳಿಸುತಾತ್ಮ ತೋರುವನು ॥ ೪೮ ॥

ಸ್ಫಟಿಕದ ಪ್ರತಿಮೆಯು ಚರ್ಮದೃಷ್ಟಿಗೆ ಹಸ್ತ । ಪುಟಕೆ ಸಂದಿಸುವುದಂತಲ್ಲ ॥
ದಿಟದೊಳಾತ್ಮನ ರೂಪು ಬಯಲ ರೂಪಿನದೊಂದು । ಸ್ಫಟಿಕದ ಪ್ರತಿಮೆಯೆಂದೆಣಿಸು ॥ ೪೯ ॥

ಆಸೆಯೆಲ್ಲವ ಬಿಟ್ಟು ಕಣ್ಮುಚ್ಚಿಯೇಕಾಂತ । ವಾಸದೊಳಗೆ ನೋಡಿದರೆ ॥
ಮಾಸದೆ ಬೆಳಗೆ ಮೈಯಾಗಿ ಸುಜ್ಞಾನವ । ಸೂಸುತ ತೋರುವನಾತ್ಮಾ ॥ ೫೦ ॥

ನೋಡಿದರೊಂದೆ ದಿನಕೆ ತೋರನಾತ್ಮನು । ಕೂಡೆ ಕೂಡಾಸರದದನು ॥
ನೋಡುತಧ್ಯಾತ್ಮವ ಮಾಡುತಭ್ಯಾಸವ । ಮಾಡೆ ತೋರ್ಪನು ಕ್ರಮದಿಂದ ॥ ೫೧ ॥

ಕರ್ಮವೆಲ್ಲವು ಜಾರುವುದು ಮುಕ್ತಿಯಹುದದು । ಧರ್ಮದೊಳುತ್ಕೃಷ್ಟವಿದನು
ದುರ್ಮುಖರೊಪ್ಪರು ಸುಮುಖರೊಪ್ಪುವರು ಸು । ಶರ್ಮಕಾಂಕ್ಷಿಣಿ ಲಾಲಿಸೆಂದಾ ॥ ೫೨ ॥

ಪುರುಷರಿಗಹುದೊಯಿಾ ಧ್ಯಾನವೆಂಬುದು ಸತಿ । ಯರಿಗು ಬಹುದೊ ಸ್ವಾಮಿಯಿದರ ॥
ಪರಿಯ ನಿರೂಪಿಸೆಂದೊಡನೆ ಕೈಮುಗಿದು ಸೌಂ । ದರಿ ಕೇಳಿದಳು ಭಕ್ತಿಯಿಂದ ॥ ೫೩ ॥

ಕೇಳಾದರಾ ಧ್ಯಾನ ಧರ್ಮವೆಂದುಂಟು ವಿ । ಶಾಲದ ಶುಕ್ಲವೆಂದುಂಟು ॥
ಹೇಳುವಾಗೆರಡು ನೋಳ್ಪಾಗೊಂದು ಮತ್ತವ । ಕಾಲಂಬವೇನಾತ್ಮನೊಂದೆ ॥ ೫೪ ॥

ಬೆಳಗಲ್ಪವಾದರೆ ಧರ್ಮವಾ ಬೆಳಗು ವೆ । ಗ್ಗಳಿಸಿದರದು ಶುಕ್ಲಯೋಗಾ ॥
ಮಳೆಗಾಲದೊಳು ತೋರ್ಪ ಬಿಸಿಲಂತೆ ಬೇಸಗೆ । ಯೊಳು ತೋರ್ಪ ಬಿಸಿಲಂತೆ ರಮಣಿ ॥ ೫೫ ॥

ಆ ಭವದೊಳು ಮುಕ್ತಿಗೈದುವರಿಗೆ ಶುಕ್ಲ । ಶೋಭಿಸುವುದು ಮತ್ತೆ ಕ್ರಮದಿ ॥
ಕ್ಷೋಭೆಯುಳಿದು ಮುಕ್ತಿಗೈದುವರಿಗೆ ಧರ್ಮ । ಪ್ರಾಭವಿಸಿಹುದು ಕೇಳಬಲೆ ॥ ೫೬ ॥

ಹೆಂಗಳಿಗೀ ಜನ್ಮದೊಳು ಮುಕ್ತಿಯಿಲ್ಲಾಗಿ । ಸಂಗಡಿಸದು ಶುಕ್ಲಯೋಗಾ ॥
*ಹಿಂಗದೆ ಧರ್ಮಯೋಗವ ಮಾಡಬಹುದು ನಂ । ಬಂಗನೆಯೆಂದನಾ ನೃಪತಿ ॥ ೫೭ ॥

ಸಮವಸರಣದೊಳಜ್ಜಿಗಳು ಕೆಲಬರು ಸಂ । ಯಮದ ಶ್ರಾವಕಿಯರು ಕೆಲರು ।
ವಿಮಲಾತ್ಮಧ್ಯಾನವ ಮಾಡುವರಾದೀಶ । ನಮೃತೋಪದೇಶದಿಂದಬಲೆ ॥ ೫೮ ॥

ಸ್ತ್ರೀಜನ್ಮ ಕೆಡುವುದಾತ್ಮಧ್ಯಾನದಿಂದ ನಿ । ರ್ವ್ಯಾಜದಿಂದಮರತ್ವವಹುದು ॥
ಪೂಜಿತಮುಕ್ತಿಯಹುದು ಕ್ರಮದಿಂದಿದು । ಶ್ರೀಜಿನವಾಕ್ಯ ನಂಬೆಂದಾ ॥ ೫೯ ॥

ಆ ವಾಕ್ಯಕವಳೊಡಂಬಟ್ಟು ನಿಂದಳು ವಿನ । ಯಾವತಿ ಕೂಡೆ ಕೈಮುಗಿದು ॥
ದೇವರ್ಕಳೇತರಿಂದಹರು ಮನುಜರಾವ । ಭಾವದಿಂದಹರೆಂದಳೊಡನೆ ॥ ೬೦ ॥

ಸುಕೃತದಿಂದಮರರಹರು ಪಶುನಾರಕ । ವಿಕೃತಿಯಹುದು ಪಾಪದಿಂದ ॥
ಸುಕೃತಪಾಪಗಳೊಡಗೂಡಲು ಮಾನವ । ಪ್ರಕೃತಿಯಹುದು ಜೀವಗೆಂದಾ ॥ ೬೧ ॥

ಆ ಪುಣ್ಯವೇತರಿಂದಹುದು ಜೀವಗೆ ಮತ್ತೆ । ಪಾಪ ತಾನೇತರಿಂದಹುದು ॥
ಈ ಪರಿಯನು ತೆರೆದರಸ ನೀನೆಮಗೆ ನಿ । ರೂಪಿಸಬೇಕೆಂದಳೊಡನೆ ॥ ೬೨ ॥

ದಾನಪೂಜೆಗಳಿಂದ ವ್ರತಜಪಶಾಸ್ತ್ರಚಿಂ । ತಾನಂದದೊಳು ಪುಣ್ಯವಹುದು ॥
ಮಾನಮಾಯಾಲೋಭಕೋಪಭೋಗಾಸಕ್ತಿ । ತಾನೆ ಪಾಪವ ಮಾಡುತಿಹುದು ॥ ೬೩ ॥

ಕುಲಜಾತಿಯೋಗ್ಯದ ನಡೆ ಜೀವದಯೆ ತೀರ್ಥ । ಸ್ಥಳಯಾತ್ರೆಯೊಳು ಪುಣ್ಯವಹುದು ॥
ಕೊಲೆ ಹುಸಿ ಕಳವು †ಪಾದರದಲ್ಲಿ ಬಹುಕಾಂಕ್ಷೆ । ಯೊಳು ಬಲುಪಾಪ ಕಟ್ಟುವುದು ॥ ೬೪ ॥

---

* ಹೆಂಗಳೆ † ಪರದಾರ

ದುರಿತಪುಣ್ಯಗಳ ಸೋಂಕಿಂದಾತ್ಮ ನಾನಾ । ಪರಿಯಾಗಿ ಭವಬಡುತಿಹನು ॥
ದುರಿತಪುಣ್ಯವ ಸರಿಗಂಡು ತನ್ನೊಳು ನಿಂದ । ರಿರದೆ ಮುಕ್ತಿಗೆ ಲಂಘಿಸುವನು ॥ ೬೫ ॥

ಸ್ವರ್ಗಸುಖವ ಮಾಳ್ಪ ಪುಣ್ಯಕೆ ಬಾಧಿಪ । ದುರ್ಗತಿಗೊಯ್ವ ಪಾಪವನು ॥
ತಾರ್ಗೊಂಡು ಸರಿಗಾಣ್ಬ ಪರಿಯೆಂತು ದೇವ ನೀ । ಸರ್ಗದೋರೆಂದಳಾ ಚದುರೆ ॥ ೬೬ ॥

ಅನಿಮಿಷಸುಖ ನಿತ್ಯವಲ್ಲ ನರಕದ ವೇ । ದನೆ ನಿತ್ಯವಲ್ಲವವೆರಡೂ ॥
ಕನಸ ಕಾಂಬಂತೆ ಕನಸ ಮರೆವಂತೆ ಜೀ । ವನ ಭ್ರಾಂತಿಯಲ್ತೆ ಹೆಚ್ಚೇನು ॥ ೬೭ ॥

ಮರನೇರಿ ನಕ್ಕಾಡಿ ಕೆಳಯಿಕೆ ಬೀಳ್ವಂತೆ । ಸುರರು ಭೂತಳಕೆ ಬೀಳುವರು ॥
ಧರೆಯೊಳು ಬಿದ್ದಳುತಿದ್ದು ಮೇಲಕೆ ಬಹ । ಪರಿಯೊಳು ಬಹರು ನಾರಕರು ॥ ೬೮ ॥

ಜನನಮರಣನರಕದೊಳು ಸ್ವರ್ಗದೊಳುಂಟು । ತನುಭಾರವೆರಡರೊಳುಂಟು ॥
ಅನಿಮಿಷತನು ನಾಲ್ಕುದಿನ ರಮ್ಯ ನಾರಕ । ತನು ಕಷ್ಟವೆಂಬಿಷ್ಟೆ ಭೇದಾ ॥ ೬೯ ॥

ಇಂಧನಗಳ ಹೊರೆಯೊಂದು ಮತ್ತೊಂದು ಶ್ರೀ । ಗಂಧಕಾಷ್ಠಗಳ ಹೊರೆಯನು ॥
ತಾಂ ಧರಿಸಲು ಭಾರವಲ್ತೆ ನಾರಕರ ಸು । ಧಾಂದಸರಂಗವಂತೆಣಿಸು ॥ ೭೦ ॥

ಜ್ಞಾನವೆ ತನುವಾಗಿ ತನುಭಾರವಳಿದು ಸ್ವಾ । ಧೀನದೊಳಿರಲದೆ ಮುಕ್ತಿ ॥
ಹೀನದುತ್ತಮದ ಮೈ ಸೆರೆಗೊಯ್ವುವಾಗಿ ಸ । ಮಾನವಲ್ಲವೆ ಪುಣ್ಯಪಾಪಾ ॥ ೭೧ ॥

ಕೆಸರ ಲೇಪಿಸಿದರು ಗಂಧವ ತಂದು ಲೇ । ಪಿಸಿದರು ಕನ್ನಡಿ ಕುರುಡು ॥
ಅಸಿಯಳೆ ಪಾಪಪುಣ್ಯವು ಲೇಪವಾತ್ಮನ । ಮುಸುಳಿಸಿ ಕೊಂಡಿಹುವಲ್ತೆ ॥ ೭೨ ॥

ಪಾಪಪುಣ್ಯವನಾತ್ಮಯೋಗದಿ ತೊಳೆಯೆ ಚಿ । ದ್ರೂಪನೊಪ್ಪಿಹನು ಮುಕ್ತಿಯೊಳು ॥
ಆ ಪಂಕಗಂಧವ ತೊಳೆಯೆ ಕನ್ನಡಿ ಪ್ರಭೆ । ವ್ಯಾಪಿಸಿ ತೋರುವಂದದೊಳು ॥ ೭೩ ॥

ಒಮ್ಮೆ ಪಾಪದ ಚರಿತವ ಬಿಟ್ಟು ಪುಣ್ಯದ । ಸೊಮ್ಮಿನೊಳ್ನಿಲಬೇಕು ನಿಂದು ॥
ತಮ್ಮಾತ್ಮರತಿಯ ಸಾಧಿಸಬೇಕು ಮತ್ತದ । ನೆಮ್ಮಿ ಪುಣ್ಯವ ಬಿಡಬೇಕು ॥ ೭೪ ॥

ಸೀರೆಯ ಮೈಲಿಗೆ ಜಾರ್ವಂತೆ ರಜಕನು । ಖಾರದ ಮಸಿಯೊಳಗದ್ದಿ ॥
ನೀರೊಳಾ ಮಸಿಯನು ತೊಳೆಯದಿದ್ದರೆ ವಸ್ತ್ರ । ಧಾರಿಣಿಯೊಳು ಪೂಜ್ಯವಹುದೆ ॥ ೭೫ ॥

ಪಾಪವಾಸನೆಯನು ಪುಣ್ಯವಾಸನೆಯಿಂದ । ಲೋಪಿಸಿ ತನ್ನೊಳು ನಿಂದು ॥
ಆ ಪುಣ್ಯವನು ತೊಳೆಯದಿರಾತ್ಮ ತ್ರಿಭುವನ । ದೀಪನಾಗನು ವ್ರತವಂತೆ ॥ ೭೬ ॥

ಮೊದಲಿಪ್ಪ ಪುಣ್ಯ ಲೇಸಹುದು ಶುದ್ಧಾತ್ಮ ಯೋ । ಗದೊಳು ನಿಂದವಗೆ ಲೇಸಲ್ಲ ॥
ಆದರಿಂದ ಪುಣ್ಯಪಾಪವ ಸರಿಗಾಣೆಂದೆ । ಯಿದು ಜಿನವಾಕ್ಯ ನಂಬಬಲೆ ॥ ೭೭ ॥

ವಿನಯಾವತಿಯುದಕೊಡಬಟ್ಟು ನಿಂದಳೊ । ಯ್ಯನೆ ಚಂದ್ರಿಕಾದೇವಿಯೆಂಬ ॥
ಅನುಮಾನಕಾತಿ ರಾಣಿಯುರನುಮತದಿಂದ । ಜನನಾಥನೊಡನೆ ನುಡಿದಳು ॥ ೭೮ ॥

ದೇವರೆಮಗೆ ಪುಣ್ಯಪಾಪವ ಸರಿಗಾಣ್ಬ । ಭಾವವ ತೋರಿ ಸೊಲ್ಲಿಪಿರಿ ॥
ನೀವೀಗ ಪುಣ್ಯಕೃತ್ಯವ ಮಾಳ್ಪುದೇಕೆಂದು । ಭಾವೆ ಕೇಳಿದಳು ಭಕ್ತಿಯೊಳು ॥ ೭೯ ॥

ಜಿನಪೂಜೆ ಮುನಿಭುಕ್ತಿ ಶಾಸ್ತ್ರಚಿಂತನೆ ಸಾಧು । ಜನರಕ್ಷೆ ದುರ್ಜನಶಿಕ್ಷೆ ॥
ಅನಶನ ಮೊದಲಾದುವಿವು ಪುಣ್ಯಕರ್ಮವ । ರ್ತನೆಯುಲ್ತೆಯೆಂದಳಾ ಕುಶಲೆ ॥ ೮೦ ॥

ಭೇದಿಸಿ ಬೆಸಗೊಂಡೆಯೌ ವ್ರತಧಾರಿಣಿ । ಆದುದು ನಿನ್ನನುಮಾನಾ ॥
ಆದರಿಸದನಿನ್ನು ತಿಳಿಪುವೆನೆಲೆ ಚಂದ್ರಿ । ಕಾದೇವಿಯೆಂದನಾ ಸುರಸಾ ॥ ೮೧ ॥

ಆಹುದು ನಮಗೆ ಪುಣ್ಯವರ್ತನೆಯುಂಟಾನು । ಗೃಹದೊಳಿದ್ದಪೆನದರಿಂದ ॥
ಗೃಹಿಗಳೋಜೆಯು ಮಾರಬಾರದು ಷಟ್ಕರ್ಮ । ನಿಹಿತನಾಗಿರುತಿಹೆನೆಂದಾ ॥ ೮೨ ॥

ದೀಕ್ಷೆವಡೆದ ಮೇಲೆ ಪುಣ್ಯಕರ್ಮವನು ನಿ । ರೀಕ್ಷಿಸದುರೆ ಬಿಡಬೇಕು ॥
ಈ ಕ್ಷಿತಿಯೊಡೆತನವಿದ್ದಾಗ ಬಿಡುವುದು । ಲಕ್ಷಣವಲ್ಲ ಕೇಳೆಂದಾ ॥ ೮೩ ॥

ಸ್ವಾನಾತ್ಮಯೋಗವ ಕಂಡು ಬಿಟ್ಟರೆ ಲೋಕ । ತಾನು ಬಿಡುವುದು ಪುಣ್ಯವನು ॥
ಕೀನಾಶನಿಂದ ನೊಂದಪರೆಂದುಯೀಗ ಪು । ಣ್ಯಾನುವೃತ್ತಿಯು ತೋರ್ಪನೆಂದಾ ॥ ೮೪ ॥

ಪರಹಿತಕಾಗಿ ಬಳಲುವೆನೆಂಬಾಗ ನಿ । ರ್ಜರೆಯುಂಟೆ ಬಂಧವೇನಲ್ತೆ ॥
ನಿರವಿಸಬೇಕದ ಚೆನ್ನಾಗಿ ನವಗೆಂದು । ಕರವ ಮುಗಿದು ಕೇಳ್ದಳಾಕೆ ॥ ೮೫ ॥

ಮಾನಸವನು ಹಂಸನೊಳಗಿಟ್ಟು ಹೊರಗಾದಾ । ಸೀನನೊಳುಳಿದ ಕರ್ಮಗಳಾ ॥
ಜ್ಞಾನಿ ಮಾಡುವನು ಮಾಡಿಯು ಬಂಧವಿಲ್ಲದು । ಧ್ಯಾನದ ಶಕ್ತಿ ಕೇಳೆಂದಾ ॥ ೮೬ ॥

ಆಸೆವಟ್ಟರವೇಳ್ದೊಡಿಪ್ಪಂತೆ ಸವತಿಯು । ದಾಸೀನದೊಳು ಪೇಳ್ದೊಡಿಹಳೆ ॥
ಲೇಸೆಂದು ಮಾಡುವರಿಗೆ ಕರ್ಮವಿಹುದಿಕ್ಕೆ । ಮಾಸಿ ಮಾಳ್ಪರಿಗೆ ಜಾರುವುದು ॥ ೮೭ ॥

ಬಸಿವೆಣ್ಣೆಗೊಡದ ಧೂಳಂತೆ ಶುದ್ಧಾತ್ಮನ । ದೆಸೆಗಾಣದವರ್ಗಾದ ಬಂಧಾ ॥
ಹೊಸಮಡಕೆಯ ಮೇಲೆ ಕವಿದ ಧೂಳಂತಾತ್ಮ । ರಸಿಕರ್ಗೆ ಬಂಧ ಬಂದಪುದೆ ॥ ೮೮ ॥

ಭೋಗಿಸಿದರು ಬಂಧವಿಲ್ಲಾತ್ಮವಿಜ್ಞಾನಿ । ರಾಗವನುಳುಹಿದನಾಗಿ ॥
ಸಾಗರಧರ್ಮದೊಳಿರ್ದ ನಗಾರನಂ । ತಾ ಗುಣಿಯಿರುತಿಹನೆಂದಾ ॥ ೮೯ ॥

ಎಂದರೆ ದೇವರಿಗುಪವಾಸ ಮೊದಲಾದ । ದಂದುಗವೇಕೆ ಭೋಗಿಸುತ ॥
ಎಂದಿನಂದದೊಳಿರಬಾರದೆಯೆಂದಾಕೆ । ಮಂದಹಾಸದೊಳು ನುಡಿದಳು ॥ ೯೦ ॥

ಅಲ್ಲವೌ ಮರೆದೆಯಾ ಭೋಗದೊಳಾಸಕ್ತಿ । ಸಲ್ಲದೆಂದಾನು ಪೇಳ್ದುದನು ॥
ತಲ್ಲೀನವಾಗಬಾರದು ಭೋಗಕೆಂದೆಡೆ । ಯುಲ್ಲಿಷ್ಟು ತೊರೆವೆ ನಾನೆಂದಾ ॥ ೯೧ ॥

ದೇವರಿಗಾ ನಡೆ ಸಲ್ವುದಂತಿರಲಾತ್ಮ । ಭಾವನೆ ಬಾರದು ನಮಗೆ ॥
ಆವುದು ಗತಿ ನಮಗಿನ್ನೆಂದು ಚಂದ್ರಿಕಾ । ದೇವಿ ಕೇಳಿದಳು ಭಕ್ತಿಯೊಳು ॥ ೯೨ ॥

ಎಲ್ಲರ್ಗೆ ಬಾರದೆಂದೆನಬೇಡ ಕೆಲರೆದೆ । ಯಲ್ಲಿ ಹೊಳೆವುದಾತ್ಮಯೋಗಾ ॥
ಬಲ್ಲವರಾತ್ಮಯೋಗವ ಮಾಡಿರರಿಯದ । ರೆಲ್ಲರವರ ಮೆಚ್ಚಿರೆಂದಾ ॥ ೯೩ ॥

ಪರಮಾತ್ಮಯೋಗವೆ ಮುಕ್ತಿಗೆ ಬೀಜವೆಂ । ದೆರಡಿಲ್ಲದೆದೆಯೊಳು ನಂಬಿ ॥
ಚರಿಸಿರೌ ಪುಣ್ಯಕೃತ್ಯದೊಳದು ಮುಕ್ತಿಯು । ಸರಣಿದೋರ್ಪುದು ನಾಳೆಯೆಂದಾ ॥ ೯೪ ॥

ಆ ತಳೋದರಿ ನಿಂದಳೊಡಬಟ್ಟು ಕೂಡೊಬ್ಬ । ಜ್ಯೋತಿರ್ಮಾಲೆಯೆಂದೆಂಬ ॥
ಶಾತೋದರಿ ಬೆಸಗೊಂಡಳು ತತ್ವದ । ರೀತಿಯರಿದು ರಾಜಋುಷಿಯಾ ॥ ೯೫ ॥

ಮುಕ್ತಿಯೆಂಬುದು ಮೂರುರತ್ನದಿಂದಹುದೆಂಬ । ಯುಕ್ತಿಯುಂಟಾಗಮದಲ್ಲಿ ॥
ವ್ಯಕ್ತಾತ್ಮನೊಂದು ರೂಪನೆ ದೇವರೀಗ ನಿ । ರುಕ್ತಿಸಲೇಕೆಂದಳಾಕೆ ॥ ೯೬ ॥

ಮರ್ಮವರಿದು ಬೆಸಗೊಂಡೆಯೌ ಲೇಸು ಜ್ಯೋ । ತಿರ್ಮಾಲೆ ನಿನ್ನ ವಿವೇಕಾ ॥
ಬೇರ್ಮಾಡದಿರು ರತ್ನಮೂರೆಂದರಾತ್ಮನ । ಧರ್ಮ ಕಾಣಗೆ ಲಾಲಿಸೆಂದಾ ॥ ೯೭ ॥

ದರುಶನ ಬೋಧವಾತ್ಮನ ರೂಪು ಮನದಲ್ಲಿ । ಚರಿಸಲಂತದೆ ಸುಚರಿತ್ರಾ ॥
ಎರವಲ್ಲ ರತ್ನ ಮೂರಾತ್ಮನೊಳಡಕವೀ । ಪರಿಯು ನೀನರಿ ಮತಿವಂತೆ ॥ ೯೮ ॥

ಆಪ್ತತಾಪಸಶಾಸ್ತ್ರಗಳ ನಂಬಿ ತಿಳಿದು ವ್ರ । ತಾಪ್ತಿಯೊಳಿರೆ ವ್ಯವಹಾರಾ ॥
ಗುಪ್ತದೊಳಾತ್ಮನ ನಂಬಿ ತಿಳಿದು ಚಿತ್ತ । ಗುಪ್ತಿಯೊಳಿರೆ ನಿಶ್ಚಯಾರ್ಥಾ ॥ ೯೯ ॥

ವ್ಯವಹಾರವಿಡಿದು ಸಾಧನೆಮಾಡಿ ನಿಶ್ಚಯ । ಭವನದೊಳಗೆ ನಿಲಬೇಕು ॥
ಭವದುಃಖ ಬಯಲಹುದಾತ್ಮಗೆ ಮುಕ್ತಿ ಸಂ । ಭವವಹುದಾಗ ಕೇಳೆಂದಾ ॥ ೧೦೦ ॥

ದೇವನ ನಂಬುಗೆ ವ್ಯವಹಾರ ಹಂಸದೃ । ಢಾವಾಪ್ತಿ ನಿಶ್ಚಯವೆನಲು ॥
ದೇವನಿಂದಧಿಕವೆ ಹಂಸನೆಂದರಸಿ ಕ । ಲಾವಿದಗ್ರಣಿಯ ಕೇಳಿದಳು ॥ ೧೦೧ ॥

ನುಡಿಯಬಾರದು ಹಂಸಯೋಗದ ಶಕ್ತಿಯು । ನುಡಿಯದಿದ್ದರೆ ಮುಕ್ತಿಯಿಲ್ಲ ॥
ಕೆಡಬಾರದಿವರೊಂದು ಪರ್ಯಾಯದೊಳು ದೃಢ । ವಿಡಿಸುವೆನೆಂದೆಣಿಸಿದನು ॥ ೧೦೨ ॥

ಏನು ಜಾಣನೊ ಜಿನ ಜಿನ ಚಕ್ರವರ್ತಿ ಹಂ । ಸಾನುಭವವೆ ಸಾಲ್ವುದೆಂದು ॥
ತಾನನುಭವಿಸುತಿದ್ದುದನೊಂದು ತಂತ್ರದಿಂ । ದಾ ನಾರಿಗೊರೆದನೇನೆಂಬೆ ॥ ೧೦೩ ॥

ಈಗ ನುಡಿಯಬಾರದಬಲೆ ಶುದ್ಧಾತ್ಮನ । ಯೋಗವೆಂಬುದು ದೊಡ್ಡಿತಲ್ಲ ॥
ಶ್ರೀಗುರುಪಂಚಕವಿಹುದದ ಮುಂದೆ ಚೆ । ನ್ನಾಗಿ ನೀನೆ ಕಾಣ್ಬೆಯೆಂದಾ ॥ ೧೦೪ ॥

ದೇವನಧಿಕನಹುದಾತ್ಮನ ಬೇರಿಟ್ಟು । ಭಾವಿಪುದುತ್ಕೃಷ್ಟವಲ್ಲ ॥
ದೇವನೆನ್ನೊಳಗಿದ್ದನೆಂದು ಹಂಸನೊಳಿಟ್ಟು । ಭಾವಿಪುದುತ್ಕೃಷ್ಟವಬಲೆ ॥ ೧೦೫ ॥

ಹೊರಗಿಟ್ಟು ಕಂಡರೆ ಪುಣ್ಯವಹುದು ಪುಣ್ಯ । ನೆರೆ ಸ್ವರ್ಗಸುಖವ ಮಾಡುವುದು ॥
ತರುಬಿ ತನ್ನೊಳಗೆ ದೇವನ ನೋಡಲುರೆ ಕರ್ಮ । ಪರಿಪಟ್ಟು ಕೈವಲ್ಯವಹುದು ॥ ೧೦೬ ॥

ಕಂಚಿನೊಳಗೆ ಶಿಲೆಯೊಳಗೆ ದೇವನ ನೋಡೆ । ಮಿಂಚುಗಾರಿಕೆಯ ಭಕ್ತಿಯದು ॥
ಚಂಚುರಾತ್ಮನೊಳಿಟ್ಟು ನೋಡಿದರದು ನಿಗ । ಮಾಂಚಿತನಿರ್ಭೇದಭಕ್ತಿ ॥ ೧೦೭ ॥

ವ್ಯವಹಾರವೆಂಬುದು ಭೇದಭಕ್ತಿಯ ಸೋಂಕು । ಪ್ರವರನಿಶ್ಚಯವೆಂಬ ಮಾರ್ಗ ॥
ಪ್ರವಿಮಲನಿರ್ಭೇದಭಕ್ತಿಯ ಸೋಂಕು ನೀ । ನವರ ಭೇದವನರಿಯೆಂದಾ ॥ ೧೦೮ ॥

ನಿರ್ಭೇದಭಕ್ತಿಯೆಂಬುದು ದೊಡ್ಡಿತದು ಕರ್ಮ । ಸ್ವರ್ಭಾನುವಿಗೆ ಮಹಾಗರುಡಾ ॥
ದುರ್ಭಾವವಳಿದು ಸದ್ಭಾವದೊಳದನೆ ಸಂ । ದರ್ಭಿಸೆಂದೆವು ಮೋಕ್ಷಸುಖಕೆ ॥ ೧೦೯ ॥

ಆದರೊಳ್ಳಿತು ದೇವ ನಿವಗಹುದಾ ಭಕ್ತಿ । ಯೀದೇಹ ಸ್ತ್ರೀವೇಷ ನಮಗೆ ॥
ಆ ದೇವ ಪುರುಷಾಕಾರನೆಂದಿಲ್ಲಿ ನಿ । ವೇದಿಪುದೆಂತೆಂದಳಾಕೆ ॥ ೧೧೦ ॥

ಭಾವಿಸುವಾಗ ಹೆಣ್ಣೆನಬೇಡ ಗಂಡೆಂದು । ಭಾವಿಸಿದಂತೆ ತೋರುವನು ॥
ಭಾವವೆಂತಿರ್ದುದಂತಾತ್ಮ ತೋರುವನು ಯ । ದ್ಭಾವ ತದ್ಭವತಿಯೆಂದರಿಯ ॥ ೧೧೧ ॥

ಪದಪಿಂದ ರೂಪರೂಪಾತೀತವೆಂದಿಂತು । ಮೊದಲು ನಾಲ್ತೆರದೊಳುಜ್ಜುಗಿಸಿ ॥
ಕದಲದೆ ತನ್ನಾತ್ಮನೊಳ್ನಿಲಬೇಕಾಗ । ಸದರವಾಗಿಹುದು ಕೇಳವನು ॥ ೧೧೨ ॥

ಮೂಲಮಂತ್ರಾಕ್ಷರಗಳನು ಮೂವತ್ತೈದ । ಭಾಳದೊಳ್ಳೈದುಸಾಲಾಗಿ ॥
ಮೇಲುಮುತ್ತಿನ ಪಂಚಸರದಂತೆ ಕಾಣ್ಬುದು । ಬಾಲೆ ಪದಸ್ಥಧ್ಯಾನವದು ॥ ೧೧೩ ॥

ಪಾಂಡುರಶಶಿಕಾಂತಪ್ರತಿಮೆ ಪಳುಕಿನೊಂದು । ಭಾಂಡದೊಳಿದ್ದಂತೆ ತನ್ನ ॥
ಚಂಡದೇಹದೊಳಿದ್ದ ಹಂಸನ ಕಂಡರೆ । ಪಿಂಡಸ್ಥವೆಂಬ ಧ್ಯಾನವದು ॥ ೧೧೪ ॥

ಆ ಪೂರ್ಣಚಂದ್ರಾರ್ಕಕೋಟಿಪ್ರಕಾಶಸ್ವ । ರೂಪದೊಳೊಪ್ಪುವನೆಂದು ॥
ಶ್ರೀಪುರುದೇವನ ಧ್ಯಾನಿಸಲಾ ಧ್ಯಾನ । ರೂಪಸ್ಥವೆಲೆ ಶೀಲವಂತೆ ॥ ೧೧೫ ॥

ಲೇಪವಳಿದ ನಿರುಪಮರು ನಿಷ್ಕಲರು ಚಿ । ದ್ರೂಪರು ಸುಖಮಯರೆಂದು ॥
ಸ್ಥಾಪಿಸಿ ಸಿದ್ಧರ ರೂಪ ಧ್ಯಾನಿಸಲದು । ರೂಪಾತೀತವೆನಿಪುದು ॥ ೧೧೬ ॥

ಈ ನಾಲ್ಕು ತೆರದೊಳಭ್ಯಾಸವ ಮಾಡಿ ಮ । ತ್ತಾ ನಾಲ್ಕರೊಳು ಮೂರನುಳಿದು ॥
ಜ್ಞಾನಿಗಳೆಲ್ಲರು ಪಿಂಡಸ್ಥವೆಂಬೊಂದು । ಧ್ಯಾನದೊಳಗೆ ನಿಲ್ವರಬಲೆ ॥ ೧೧೭ ॥

ಪಿಂಡಸ್ಥವೊಂದರೊಳುಳಿದ ಧ್ಯಾನಗಳೆಲ್ಲ । ಪಿಂಡಿತವಾಗಿರುತಿಹುವು ॥
ಖಂಡಿಸಿ ಪೋಪುವು ಕರ್ಮಗಳಾತ್ಮಗ । ಖಂಡಿತಸುಖವಹುದೆಂದಾ ॥ ೧೧೮ ॥

ಜಪದೀಕ್ಷೆವ್ರತಶಾಸ್ತ್ರಚಿಂತನೆ ಮೊದಲಾದ । ತಪವೆಲ್ಲವಿದಕೆ ಸಹಾಯಾ ॥
ಅಪವರ್ಗಪದಕಿದು ಜಿನನಾಥಗೊಪ್ಪುವ । ಸುಪವಿತ್ರನಿರ್ಭೇದಭಕ್ತಿ ॥ ೧೧೯ ॥

ಎಂದಿಗೂ ಮುಕ್ತರಾಗದೆ ಭವದೊಳು ಹುಟ್ಟಿ । ಪೊಂದುವ ನಿರ್ಭವ್ಯರುಂಟು ॥
ನಿಂದಿಸುವರು ಹಂಸಯೋಗವನರಿದದ । ನೊಂದನೆ ಭವ್ಯರೊಪ್ಪುವರು ॥ ೧೨೦ ॥

ಪಠಿಸುವರಖಿಳಶಾಸ್ತ್ರವನುಪವಾಸವಿ । ಜಠರವನೊಣಗಿಸುತಿಹರು ॥
ಕಠಿಣ ಹೃದಯರು ನಿರ್ಭವ್ಯರು ಧ್ಯಾನವ । ಸಟೆಗಾಣುತಿಹರು ಪಾಪಿಗಳು ॥ ೧೨೧ ॥

ಬಾರದು ತಮಗಾತ್ಮಯೋಗವು ಯೋಗ ಬಂ । ದಾರಾಧಿಪರನು ಜರೆವರು ॥
*ನಾರಿಗಿಲ್ಲೆಂದು ಗೃಹಸ್ಥರಿಗಿಲ್ಲೆಂದು । ಹೋರುವರಾ ಮೂರ್ಖರಬಲೆ ॥ ೧೨೨ ॥

ಸತಿಗೆ ಗೃಹಿಗೆ ಶುಕ್ಲಯೋಗವಿಲ್ಲೆಂದರೆ । ನುತಧರ್ಮವಿಲ್ಲೆಂಬರವರು ॥
ಚತುರ್ವಿಧವ್ಯವಹಾರಧರ್ಮಕೊಪ್ಪುವರು ನಿ । ಶ್ಚಿತವಾತ್ಮಧರ್ಮಕೊಲಿಯರು ॥ ೧೨೩ ॥

ಬಹುಶಾಸ್ತ್ರಬೇಕು ನಿರ್ವಾಣ ಬೇಕಾಧ್ಯಾನ । ವಿಹರಣೆಗೆಂದು ಕಾಡುವರು ॥
ಬಹುಶಾಸ್ತ್ರಿಯಾಗಿ ನಿರ್ವಾಣಿಯಾಗಿಯು ಧ್ಯಾನ । ರಹಿತರಾಗಿಹರು ತಾವಬಲೆ ॥ ೧೨೪ ॥

ಬಂದರೆ ಧ್ಯಾನಿಸಬೇಕು ಬಾರದಿರೊಲ । ವಿಂದ ಧ್ಯಾನವ ನಂಬಬೇಕು ॥
ನಿಂದಿಸುತಿಹುದು ನಿರ್ಭವ್ಯರ ಗುಣವದು । ಕುಂದಿದರುಂಟೆ ಸಮ್ಯಕ್ತ್ವ ॥ ೧೨೫ ॥

ಆದರಿಂದ ನೀವಿದ ನಂಬಿ ನಿಮಗೆ ಧ್ಯಾನ । ವುದಯಿಸದಿದ್ದರೇನಾಯ್ತು ॥
ಮುದದಿಂದ ಭೇದಭಕ್ತಿಯ ಮಾಡುತಿರಿ ಮುಕ್ತಿ । ಪದ ಮುಂದೆ ದೊರಕೊಂಬುದೆಂದಾ ॥ ೧೨೬ ॥

ದೇವತಾವಂದನೆ ಮುನಿಭುಕ್ತಿ ಜಿನಪೂಜೆ । ಜೀವರಕ್ಷೆಗಳ ಮಾಡುವುದು ॥
ಜೀವಸಿದ್ಧಿಗೆ ಹಂಸಕಲೆಯ ನಂಬಿಹುದು ಮೋ । ಕ್ಷಾವಾಪ್ತಿ ನಿಮಗಹುದಬಲೆ ॥ ೧೨೭ ॥

ಅಶುಭತ್ವವೆನಿಪ ಸೂತಕಕಾಲದೊಳು ಧ್ಯಾನ । ಕುಶಲತೆ ವಂದನೆ ಸಲ್ಲ ॥ .
ಅಶುಚಿತ್ವದನುಪ್ರೇಕ್ಷೆವಿಡಿದು ಮೌನದೊಳಾತ್ಮ । ವಶದ ಚಿಂತೆಯೊಳಿರಬೇಕು ॥ ೧೨೮ ॥

ಇಂತು ನೀವೆಲ್ಲರಾಚರಿಸಿದಿರಾದರೆ । ಶಾಂತೆಯರೆನಿಪ ರೂಪಳಿದು ॥
ಮುಂತೆ ಸ್ವರ್ಗವನೈದಿ ‡ಮುಕ್ತರಾಗುವಿರಿ ಸಿ । ದ್ಧಾಂತವೆಂದಿದ ನಂಬಿರೆಂದಾ ॥ ೧೨೯ ॥

ಶಾಂತತತ್ವವ ರಾಯನೊರೆಯೆ ಜ್ಯೋತಿರ್ಮಾಲೆ । ಮುಂತಾದ ನಾರಿಯರೆಲ್ಲ ॥
ಸಂತೋಷದೊಳು ಮುಳುಗಿದರು ಕೈವಲ್ಯವಾ । ದಂತೆ ನಲಿದರೇನನೆಂಬೆ ॥ ೧೩೦ ॥

ಆವ ಜನ್ಮದೊಳು ಪಡೆಯದ ಸಮ್ಯಕ್ತ್ವವ । ದೇವ ನಿನ್ನಿಂದ ಪಡೆದೆವು ॥
ಆವ ದೊಡ್ಡಿತು ಮುಕ್ತಿ ನಮಗೆಂದು ನಲಿದು ರಾ । ಜೀವಮುಖಿಯರು ನುಡಿದರು ॥ ೧೩೧ ॥

---

*ಸಾರವ ನಿಸ್ಸಾರಮಾಡಿ ನಾನಾಗತಿ । ದೊರುತಿಹರು ಧರೆಯೊಳಗೆ

‡ಸುಖಿಗಳಾಗುವಿರಿ

ಕೃತಕೃತ್ಯರಾದೆವು ಸ್ವಾಮಿ ನಿನ್ನೊಂದುಸಂ । ಗತಿಯಿಂದ ನಾವೆಲ್ಲರೆಂದು ॥
ಪತಿಭಕ್ತೆಯುರು ಕೂಡೆ ಸಾಷ್ಟಾಂಗವೆರಗಿ ಭೂ । ಪತಿಯೇಳಿರೆನಲೆದ್ದರೊಡನೆ ॥ ೧೩೨ ॥

ಅಸ್ತಾದ್ರಿಗರ್ಕನೈದಿದನನಿತರೊಳು ದೇ । ವಸ್ತೋತ್ರಕಾಲವಾಯ್ತೆಂದು ॥
ವಿಸ್ತೀರ್ಣಗೃಹದಿಂದ ಜಿನವಾಸಕೆದ್ದರು । ಹಸ್ತಿಗಮನೆಯರರ್ತಿಯೊಳು ॥ ೧೩೩ ॥

ಆ ಶೀಲವತಿಯರತ್ತೈದಿದರಿತ್ತ ಪ್ರ । ಕಾಶದಧ್ಯಯನಶಾಲೆಯೊಳು ॥
ದೇಶಾಧಿಪತಿಯಿದ್ದನಿಲ್ಲಿಗೆ **ತತ್ವೋಪ । ದೇಶದ ಸಂಧಿ** ಸುಗಂಧಿ ॥ ೧೩೪ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೩೫ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೩೬ ॥

ತಣಿವುಗೆಟ್ಟಾಶಾಪಾಶದ ಚಿತ್ತವ । ತಣಿಪುವಾನಂದಮಯಾತ್ಮಾ ॥
ಕ್ಷಣಮಾತ್ರ ತೊಲಗದೆನ್ನೆದೆಯೊಳಗಿರು ಗುಣ । ಮಣಿಯೆ ಚಿದಂಬರಪುರುಷಾ ॥ ೧೩೭ ॥

ತತ್ವೋಪದೇಶಸಂಧಿ ಸಂಪೂರ್ಣಂ

# ಪವನಯೋಗಸಂಧಿ.

ಶೃಂಗಾರಸುಲಭ ಸುಜ್ಞಾನ ಕಲಾಧರ । ಭಂಗವಿಲ್ಲದ ಭಾಗ್ಯದೊಡೆಯಾ ॥
ಮಂಗಲಮತಿದೋರು ಸಂಗದೊಳಿದ್ದು ನಿ । ಸ್ಸಂಗ ನಿರಂಜನಸಿದ್ಧಾ ॥ ೧ ॥

ಕಾಮಿನಿಯುರು ಜಿನಗೃಹಕ್ಕೈದಲೊಡನಿತ್ತ । ಭೂವಿಭಾಶನಾ ಗೃಹದೊಳಗೆ ॥
ನೇಮದರ್ಘ್ಯವನಿತ್ತು ಧ್ಯಾನಕೆ ತೊಡಗಿದ । ನಾ ಮಹಿಮೆಯನೇನನೆಂಬೆ ॥ ೨ ॥

ಒಂದೊಂದುದಿವಸ ಕಾಯೋತ್ಸರ್ಗದೊಳು ನಿಲ್ವ । ನೊಂದೊಂದುದಿವಸ ಕುಳ್ಳಿರುವಾ ॥
ಅಂದಂದಿಗಿಚ್ಛೆ ಬಂದಂತೆ ಯೋಗವ ಮಾಳ್ಪ । ನಿಂದೊಮ್ಮೆ ಕುಳಿತನಾ ನೃಪತಿ ॥ ೩ ॥

ವಜ್ರವೀರಾಸನ ಕುಕ್ಕುಟಾಸನವಿವು । ವಜ್ರದೇಹಿಗೆ ತೋರವಲ್ಲ ॥
ವಜ್ರಿಸನ್ನಿಭನು ಪದ್ಮಾಸನದೊಳಗಾಗ । ವಜ್ರದಂತಲುಗದೆ ಕುಳಿತಾ ॥ ೪ ॥

ಧ್ಯಾನಸಾಧನದ ಪ್ರಾಣಾಪಾನಪೂರ್ವಿಯ । ಜೈನಮುನಿಗಳೋದುವಾಗ ॥
ತಾನಿಷ್ಟು ಕೇಳಿದ್ದನಾಗಿ ತನ್ನೊಳು ಪವ । ಮಾನಸಂಚಾರವ ಬಗೆದಾ ॥ ೫ ॥

ವಾಯುಗಳೀರೈದು ನಿಂದ ನೆಲೆಯ ತನ್ನ । ಕಾಯದೊಳರಿದೊಂದನೊಂದಾ ॥
ದಾಯವರಿದು ತೆಗೆದೊಂದೊಂದರೊಳು ಕೂಡಿ । ಗಯ್ಯಾಳಿತನವ ನಿಲ್ಲಿಸಿದಾ ॥ ೬ ॥

ಮೂಲಾಧಾರದಿಂದೊಡ್ಯಾಣಬಂಧವ । ಜಾಲಂಧ್ರಬಂಧವನೆಸಗಿ ॥
ನೂಲನೇರಿಸುವಂತೆ ಬ್ರಹ್ಮರಂಧ್ರಕೆ ಮತ್ತೆ । ಗಾಳಿಯನೆತ್ತಿ ನಿಲ್ಲಿಸಿದಾ ॥ ೭ ॥

ಕುಂಡಲಿಯನು ವಾಯು*ವಿಂದಿರಿವರೆ ಪುಷ್ಪ । ಕಾಂಡನ ಶಕ್ತಿ ತಗ್ಗಿದುದು ॥
ಗುಂಡಿಗೆಯೊಳು ಘಾಳಿ ನಿಂದರೆ ಸಿಂದುದು । ಕಂಡ ಕಡೆಗೆ ಹೋಹ ಚಿತ್ತಾ ॥ ೮ ॥

ಕಳ್ಳಗುಪ್ಪೆಗೆ ಗಾಳಿಯೇರಿ ನಿಂದಿರೆ ನಿದ್ರೆ । ನಿಲ್ಲದೆ ಜರಿದೋಡಿತಾಗ ॥
ಎಳ್ಳಷ್ಟು ಜಡನಿರದೋಡಿತು ನಡುನೊಸ । ಲಲ್ಲಿ ಗಾಳಿಯ ನಿಲಿಸಿದರೆ ॥ ೯ ॥

ನೆತ್ತಿಗನಿಲನೇರಿದಾಗ ಮೈಯೊಳಗಣ । ಕತ್ತಲೆ ಕೆಟ್ಟು ಪ್ರಕಾಶಾ ॥
ಅತ್ತಿತ್ತ ತೋರುತಿದ್ದುದು ಪವನಾಭ್ಯಾಸ । ದುತ್ತುಂಗಗುಣವನೇನೆಂಬೆ ॥ ೧೦ ॥

ಹಿರಿದಾದ ಹಸಿವು ತೃಷೆಗಳಲ್ಪವಹುವು ಮೈ । ಸರಿಸಿ ಹೋಹುವು ರೋಗವೆಲ್ಲ ॥
ಗರಳವನುಂಡು ದಕ್ಕಿಸಬಹುದನಿಲನ । ಪರಿಚಯ ಸದರವೆ ಜಗಕೆ ॥ ೧೧ ॥

ಪವನಸಂಚಾರವ ತಡೆದರೆಮುಗಿದಕ್ಷಿ । ವಿವರದೊಳಾ ರಾಜಯೋಗಿ ॥
ಧವಲಬಿಂದುವ ಕಂಡ ನಾಸಿಕಾಗ್ರದೊಳು ಸಂ । ಭವಿಸಿದುದಾಗ ವಿಶೋಧಾ ॥ ೧೨ ॥

---

* ನಿಂದೇರಿಸಲು

ಬಳಿಕ ಚೆನ್ನಾಗಿ ಕಂಗಳ ಮುಗಿದಾ ಭವ್ಯ । ಕುಲರತ್ನ ತನ್ನ ಮೈಯೊಳಗೆ ॥
ದಳಗಳ ಪಸರಿಸಿ ಸಾಲಾಗಿ ನಿಂದಾರು । ಜಲಜವ ಕಂಡನೇನೆಂಬೆ ॥ ೧೩ ॥

ಪಣೆಕೊರಳೆದೆ ನಾಭಿಲಿಂಗಮೂಲಾಧಾರ । ದೆಣಿಕೆಯೊಳಾರುತಾವರೆಯಾ ॥
ಅಣೆದಿರದೆರಡೆಂಟು ಪನ್ನೆರಳ್ಪತ್ತಾರು । ಪೆಣೆದು ನಾಲ್ಕೆಸಳಾಗಿ ಕಂಡಾ ॥ ೧೪ ॥

ಆರುಪದ್ಮಗಳೆಸಳ್ಳೈವತ್ತರೊಳು ಕ್ರಮ । ದೋರಲಕ್ಷರಗಳೈವತ್ತು ॥
ಬೇರೆಬೇರಲ್ಲಲ್ಲಿ ಸ್ಥಾಪಿಸಿ ನೃಪತಿ ಕ । ಣ್ಣಾರಿ ಧ್ಯಾನಿಸಿದನೇನೆಂಬೆ ॥ ೧೫ ॥

ಹಕ್ಷವೆರಡು ಸ್ವರ ಹದಿನಾರು ಕಾದಿಯಿಂ । ಠಾಕ್ಷರದೆಡೆಗೆ ಪನ್ನೆರಡು ॥
ಪಾಕ್ಷರದೆಡೆಗೆ ಲಾಕ್ಷರ ಮುಟ್ಟ ಸಾಕ್ಷರ । ಕಾಕ್ಷರಗಳ ನಿಲಿಸಿದನು ॥ ೧೬ ॥

ಕರ್ಣಿಕೆಗಳೊಳರ್ಹಂಕಾರ ಓಂಕಾರ । ನಿರ್ಣೀತವೆನೆ ನೆಲೆಗೊಳಿಸಿ ॥
ಪೂರ್ಣ *ಪದಸ್ಥವ ಧ್ಯಾನಿಸಿದನು ಹೇಮ । ವರ್ಣನಾ ಕಮಲಷಟ್ಕದೊಳು ॥ ೧೭ ॥

ಭುಜಪಾದಮಸ್ತಕ ಮೊದಲಾಗಿ ಮೈಯೆಂಬ । ಭುಜಪತ್ರಯಂತ್ರದೊಳ್ತುಂಬಿ ॥
ಅಜಿತಮಂತ್ರಗಳ†ನು ಬರೆದು ಭರತನೃಪ । ಭಜಿಸಿದನಾತ್ಮದೃಷ್ಟಿಯೊಳು ॥ ೧೮ ॥

ವನಜದಳಗಳಲ್ಲಿ ನಿಂದಮೃತದ ಬಟ್ಟ । ವನಿಗಳೊ ಬಟ್ಟ ಮುತ್ತುಗಳೊ ॥
ತನಿವೆಳಗಿನ ಬೀಜರಾಜಿಯೊಯೆಂಬಂತೆ । ಜನಪಗಕ್ಷರ ತೋರುತಿಹುವು ॥ ೧೯ ॥

ಅಕ್ಷರಾವಳಿಯ ಧ್ಯಾನವ ನಿಲಿಸಿದನು ನಿ । ರೀಕ್ಷಿಸಿದನು ಪುರುಜಿನನಾ ॥
ಸಾಕ್ಷಾದ್ದೇವ ತೋರಿದನು ಸಮವಸರ । ಣಾಕ್ಷಿತಿಸನ್ನಿಧಿಯಾಗಿ ॥ ೨೦ ॥

ಪರಮೌದಾರಿಕ ದಿವ್ಯದೇಹಪ್ರಭೆ । ಸುರರ ಸಂದಣಿ ದಿವ್ಯನಿನದಾ ॥
ಬೆರಸಿ ಕೈಲಾಸದೊಳೆಸೆವಾದಿಜಿನನ ಭೂ । ವರ ಕಂಡನಾತ್ಮದೃಷ್ಟಿಯೊಳು ॥ ೨೧ ॥

ಭಾವಪೂಜೆಯ ಮಾಡಿ ಜಿನನ ಬೀಳ್ಕೊಂಡು ಸಿ । ದ್ಧಾವನಿಗಿಟ್ಟನು ನೆನಹಾ ॥
ಆ ವಾಯು ಸೋಂಕದೆ ನಿಂದ ಸಿದ್ಧರ ಶುದ್ಧ । ಭಾವವನೊಲ್ದು ಭಾವಿಸಿದಾ ॥ ೨೨ ॥

ಬಚ್ಚಬರಿಯ ಜ್ಞಾನದರ್ಶನ ಮೈಯಾಗಿ । ಅಚ್ಚುಗವೆಂಬುದ ನೀಗಿ ॥
ನಿಚ್ಚಲು ಸುಖದೊಳೋಲಾಡುವ ಸಿದ್ಧರ । ಮೆಚ್ಚಿ ಧ್ಯಾನಿಸಿದನಾ ನೃಪತಿ ॥ ೨೩ ॥

ಆ ಸಿದ್ಧಗಣವ ಬೀಳ್ಕೊಂಡನು ಧ್ಯಾನದ । ಭ್ಯಾಸವೆಲ್ಲವ ನಿಲಿಸಿದನು ॥
ಭಾಸುರನಿರ್ಭೇದಭಕ್ತಿಗೆ ಮನವಿಟ್ಟ । ನಾ ಸುಕೃತಾತ್ಮನೇನೆಂಬೆ ॥ ೨೪ ॥

ಸುಯ್ಯೆಲರಿಂದ್ರಿಯಮನಗಳನಡಗಿಸಿ । ಮೆಯ್ಯೆಂಬ ಜಿನಗೃಹದೊಳಗೆ ॥
ಒಯ್ಯನೆ ಕಂಡನಾಗಳೆ ಪರಮಾತ್ಮನ । ಕೆಯ್ಯ ಕನ್ನಡಿಯ ಕಾಂಬಂತೆ ॥ ೨೫ ॥

---

* ವಸ್ತುವನವ † ನೆಲ್ಲವ ಬರೆದಾ ನೃಪ

ರೂಪೆಲ್ಲ ಬೆಳಗು ರೂಪೆಲ್ಲ ಸುಜ್ಞಾನವಾ । ರೂಪೆಲ್ಲ ದರ್ಶನಶಕ್ತಿ ॥
ರೂಪೆಲ್ಲ ಸುಖವಾದ ತ್ರಿಭುವನಶೃಂಗಾರ । ರೂಪನ ಕಂಡನಾ ಸೊಬಗಾ ॥ ೨೬ ॥

ಒಳಗಿದ್ದು ಹೊರಗನರಿದು ನೋಡದವರ ಕ । ಣ್ಗೊಳಗಾಗದಧಿಕದೈವವನು ॥
ಅಳತೆಗೆ ತೂಕಕೆ ಲೆಕ್ಕಕೆ ಬಾರದ । ಗ್ಗಳದ ವಸ್ತುವ ಕಂಡನಾಗ ॥ ೨೭ ॥

ಕೊಡದೊಳಗಾಕಾಶವಿಪ್ಪಂತೆ ಮೈಯೊಳ । ಗಡಗಿರ್ದ ಬಯಲ ರೂಪನನು ॥
ನಡುನೆತ್ತಿಯಿಂದಡಿಮುಟ್ಟೆ ಕಂಡನು ಕಟ್ಟೆ । ಕಡೆಯು ಕಾಂಬಂತೆ ತತ್ವಗಳಾ ॥ ೨೮ ॥

ಅರಿದು ಧ್ಯಾನಿಸುವಾತನೊಬ್ಬನ ಧ್ಯಾನಕೆ । ಗುರಿಯಹ ವಸ್ತುವೊಂದೆಂಬ ॥
ಹರಿಹಂಚಿನಾಟವ ಮರೆದು ತನ್ನೊಳಗೆ ತಾ । ನೆರಕವಾಗಿದ್ದನಾ ರಾಯಾ ॥ ೨೯ ॥

ತನು ಮಿಸುಕದು ಮನ ಮಿಸುಕದು ಮತ್ತೊಂದು । ನೆನಹಿಲ್ಲ ತನ್ನ ತಾ ನೆಮ್ಮಿ ॥
ತನುವ ಸೋಂಕಿಯು ಸೋಂಕದಿರ್ದನು ಸಿದ್ಧರ । ತನು ವಾತ ಸೋಂಕದಿರ್ಪಂತೆ ॥ ೩೦ ॥

ಪರಿಪೂರ್ಣಚಂದ್ರಮಂಡಲದೊಳಡಗಿದಂತೆ । ಯಿರುತಿಹನಾತ್ಮಕಾಂತಿಯೊಳು ॥
ಪರಿದು ಕಾರ್ಮುಗಿಲು ಚಂದ್ರಗೆ ಕವಿದಂತೆ ಮೋ । ಹರಿಸುವುದೊಡನಂಧಕಾರ ॥ ೩೧ ॥

ಇನಿಸು ಬೇಗದೊಳಂಧಕಾರ ಹರಿವುದು ಹಂ । ಸನ ಪ್ರಭೆ ಕೂಡೆ ತೋರುವುದು ॥
ಅನಿತರೊಳದು ಮಾಸುವುದು ಕೂಡೆ ಹೊಳೆವುದು । ಕನಸಿನಂತರೆನಿದ್ರೆಯಂತೆ ॥ ೩೨ ॥

ಪ್ರಭೆ ತೋರಿದಾಗ ಬ್ರಹ್ಮಾನಂದವಪ್ಪುದಾ । ಪ್ರಭೆ ಮಾಸಲೊಡನೆ ನೋವಹುದು ॥
ಅಭಯಮುಕ್ತಿಯ ಸುಖ ಸಂಸಾರದುಃಖವೆಂ । ಬುಭಯವ ಪರಿಕಿಸುತಿಹನು ॥ ೩೩ ॥

ಸುತ್ತಲು ಪ್ರಭೆಯಾಗಿ ಸುತ್ತಲು ಸುಖವಾಗಿ । ಸುತ್ತಲು ಸುಜ್ಞಾನವಾಗಿ ॥
ಚಿತ್ತದೊಳಾತ್ಮ ತೋರುವನೊಂದು ಜ್ಯೋತಿಯ । ಪುತ್ತಳಿಯಂತ ಮೈತುಂಬಿ ॥ ೩೪ ॥

ಬಯಲ ನೋಳ್ಪಂತೆ ಭಾವದಿ ನೋಡುವನು ಕೂಡೆ । ಬಯಲನಪ್ಪುವವೊಲಪ್ಪುವನು ॥
ಬಯಲೊಳು ಚಿತ್ರವ ಬರೆವಂತೆ ಬರೆದು ಚಿ । ನ್ಮಯಗವಯವಶೋಭೆವಾಳ್ಪಾ ॥ ೩೫ ॥

ಬಯಲೊಳು ಮುಳುಗುವಂತೊಳಗೆ ಮುಳುಗುವನು । ಬಯಲೊಳು ನಿಲುವಂತೆ ನಿಲುವಾ ॥
ಬಯಲ ಪಾಲ್ಗೊರೆಯ ಪೀರ್ವಂತೆ ಪೀರ್ದೊಂದರ । ಬಯಕೆಯಿಲ್ಲದೆ ತಣಿವಹನು ॥ ೩೬ ॥

ಪರಮಪ್ರಕಾಶವುಂಟುಷ್ಣವಿಲ್ಲಾತ್ಮಗೆ । ಜರಿವುತಿಹುದು ಕರ್ಮವಾಗ
ಉರಿಯಿಲ್ಲದಗ್ನಿ ಕರ್ಮವ ಸುಡುತಿದಕೊ ಅ । ಚ್ಚರಿಯೆನುತೊಳಗೆ ನೋಡುವನು ॥ ೩೭ ॥

ಹೊಳೆಹೊಳೆದಡಗುವುದಾ ಹೊಳವಿನ ನೆಲೆ । ಯೊಳವರಿಯದು ಜ್ಞಾನದಿಂದ ॥
ಒಳಗ ಭೇದಿಸುತಿರೆ ತಳತಳಿಸುತಲಾತ್ಮ । ನೆಲೆಗಾಣ್ಬ ಚಿಜ್ಜ್ಯೋತಿಯಾಗಿ ॥ ೩೮ ॥

ಅಂಬರದೊಳು ಬಹುವರ್ಣದ ಮುಗಿಲ ತೊ । ಡಂಬೆಗಳೆಡೆಯಾಡುವಂತೆ ॥
ಬೆಂಬೀಳ್ವ ಕರ್ಮ ಕದಲುತಿರ್ದುದಾಗ ಚಿ । ದಂಬರಪುರುಷರೂಪಿನೊಳು ॥ ೩೯ ॥

ಹೊಗೆಯಂತೆ ಮಸಿಯು ಕದಡಿ ಮಿಾಯಲೆರೆವಂತೆ । ಜಗುಳುತಿಹುದು ಪಾಪರಜಸು ॥
ಮೊಗೆದು ರಕ್ತವನೆರೆದಂತರಸಿನದಂತೆ । ದಿಗಿಲನಿಳಿವುದಾಗ ಪುಣ್ಯಾ ॥ ೪೦ ॥

ನೀರು ಬೆಟ್ಟವ ಕೊರೆವಂತೆ ರಾಯನ ಧ್ಯಾನ । ವಾರಿ ಭೇದಿಸಿ ಕರ್ಮಗಿರಿಯಾ ॥
ಸೋರಿಸುತಿರ್ದುದು ಜಿನ ಜಿನ ಹಂಸತ । ತ್ವಾರಾಧನೆಗೆಣೆಯುಂಟೆ ॥ ೪೧ ॥

ಸೂಜಿಯಂದದಿ ಮಳೆ ಸುರಿಯೆ ಹಸಿಯು ಮಣ್ಣ । ಭಾಜನ ಕರಗಿಹೋಹಂತೆ ॥
ತೈಜಸಕಾರ್ಮಣತನು ಸೋರುತಿದ್ದುದಾ । ರಾಜನ ಧ್ಯಾನಧಾರೆಯೊಳು ॥ ೪೨ ॥

ಇಳಿವುತಿಹುದು ಕರ್ಮ ಗರುಡನ ಕಂಡಾಗ । ಕುಳಿಕನ ವಿಷವಿಳಿವಂತೆ ॥
ಬೆಳೆವುತಿಹುದು ಸುಖಸುಜ್ಞಾನಕಾಂತಿ ತ । ನ್ನೊಳಗಾತ್ಮರೂಪ ನೋಳ್ಪಾಗ ॥ ೪೩ ॥

ಬಿಗಿದ ಮೂಡೆಯ ಕಟ್ಟು ಸಡಿಲವಾದರೆ ಧಾನ್ಯ । ವೊಗುವಂತೆ ಬಂಧದೊಡ್ಡಳಿದು ॥
ಮಿಗೆ ಕರ್ಮಧೂಳಿ ಸೋರುವುದದು ಧ್ಯಾನಿಗೊ । ಬ್ಬಗೆ ಗವ್ಯ ಪರರ್ಗೆ ಕಾಣಿಸದು ॥ ೪೪ ॥

ಹೆಡಗೈಯ ಬಿಗಿದು ಕಟ್ಟಿದ ಕಳ್ಳಗಾ ಕಟ್ಟು । ಸಡಲಿದಷ್ಟಕೆ ಸುಖವಹುದು ॥
ಇಡಿದಿರ್ದ ಕರ್ಮಗಳೆಷ್ಟೆಷ್ಟ ಸಡಲಿದ । ರೊಡನೊಡನಹುದಷ್ಟು ಲೀಲೆ ॥ ೪೫ ॥

ಎಷ್ಟೆಷ್ಟು ನೋಡಿದರಷ್ಟಷ್ಟು ಕರ್ಮಾಳಿ । ನಷ್ಟವಪ್ಪುದು ಕ್ಷಣಕ್ಷಣಕೆ ॥
ಅಷ್ಟಷ್ಟಕಾಗಾಗ ಪರಮಾತ್ಮಗುಣಗಳು । ತ್ಕೃಷ್ಟವಪ್ಪುವು ಧ್ಯಾನಸುಖಿಗೆ ॥ ೪೬ ॥

ಕಿರಿಕಿರಿದಾಗಿ ಖಂಡಿಸಿ ಕರ್ಮ ಕಡೆ ಮನೆ । ತೆರಪಹುದಾತ್ಮಗಾತ್ಮನೊಳು ॥
ಕಿರುಚೀಣದಿಂದೊಬ್ಬ ಮೆಲ್ಲಮೆಲ್ಲನೆ ಕಲ್ಲ । ತರಿದಲ್ಲಿ ಮನೆಮಾಡುವಂತೆ ॥ ೪೭ ॥

ಒಮ್ಮೊಮ್ಮೆ ಚಿದ್ರೂಪಕಾಂತಿವೆರಸಿ ಕಾಣ್ಬ । ನೊಮ್ಮೊಮ್ಮೆ ಮಾಸಿ ಕಾಣುವನು ॥
ಗುಮ್ಮುತಿಹುವು ಕಂಡ ಕಡೆಗೆ ಕರ್ಮಗಳೊಳ । ಗುಮ್ಮುತಿಹುವು ಸುಗುಣಗಳು ॥ ೪೮ ॥

ಮೊಳೆವುದೊಮ್ಮೊಮ್ಮೆ ಚಿತ್ತದೊಳು ವಿಕಲ್ಪ ಕೂ । ಡಳಿವುದೆಂತೆನೆ ಘಾಳಿಯಿಂದ ॥
ಜಲದಲ್ಲಿ ತೆರೆಯೇಳುವಂತೆ ಮತ್ತಾ ಘಾಳಿ । ನಿಲೆ ಜಲ ತೆಪ್ಪಗಿಹಂತೆ ॥ ೪೯ ॥

ಏನು ವಿಕಲ್ಪವಿಲ್ಲದರದು ಧ್ಯಾನ ಚಿಂ । ತಾನೀಕ ಧ್ಯಾನವಲ್ಲಾಗಿ ॥
ಧ್ಯಾನಕೆ ಕಾಲವಂತರ್ಮುಹೂರ್ತವೆಯೆಂದು । ಜೈನಶಾಸನ ಸಾರುತಿಹುದು ॥ ೫೦ ॥

ನಾನು ಶರೀರ ಕರ್ಮಗಳಿಂದು ಬೇರೆ ಬೇ । ರಾ ನೃಪ ನೆನೆವನೊಮ್ಮೊಮ್ಮೆ ॥
ನಾನೆಂಬುದನು ಮರೆದೊಮ್ಮೆ ನಿಲ್ವನು *ಪರ । ಮಾನಂದವೊಳು ಸಿದ್ಧರಂತೆ ॥ ೫೧ ॥

ಧ್ಯಾನದೊಳಾತ್ಮನ ನೋಡುತಿಹನು ಕರ್ಮ । ಹಾನಿಯುಹುದ ಕಾಣುತಿಹನು ॥
ಏನಿದೊಂದದ್ಭುತವಿದ್ಯೆಯಲ್ಲಾಯೆಂದು । ತಾನೆ ತನ್ನೊಳು ಮೆಚ್ಚುತಿಹನು ॥ ೫೨ ॥

---

* ಪರ । ಮಾನದೊಳಿಹ

ಪರಮಗುರುವೆ ಪರಮಾರಾಧ್ಯ ಜಯಜಯ । ಗರುಹಂಸನಾಥಯೆಂದೊಳಗೆ ॥
ಸ್ಮರಿಸುವನದನೊವ್ಮೆ ಮರೆದು ಸ್ವೈರಗಾಗಿ । ಭರತೇಶ ನಿಲ್ವನೇನೆಂಬೆ ॥ ೫೩ ॥

ಶ್ರೀನಿರಂಜನಸಿದ್ಧ ಸಿದ್ಧಾಂತಸಾರ ನಿ । ತ್ಯಾನಂದ ಜಯಜಯಯೆಂದು ॥
ತಾನಲ್ಲದನ್ಯರರಿಯದಂತೆ ನುತಿಸಿ ಮ । ತ್ತಾ ನೆನಹಳಿದಿರ್ಪನೊವ್ಮೆ ॥ ೫೪ ॥

ಬೆಳಗಿನೊಳೊಂದುಪುರುಷರೂಪ ತಿದ್ದಿನು । ಣ್ಬೆಳಗಿನೊಳದನೊಪ್ಪವಿಟ್ಟು ॥
ಬೆಳಗಿನೊಳಗೆ ಹೊಳೆದಂತೆದೆಯೊಳಗಾಗ । ಬೆಳಗುತಿದ್ದನು ಪರಮಾತ್ಮ ॥ ೫೫ ॥

ಕಂಡು ಕೇಳ್ದರಿಯದೊಂದಚ್ಚಬೆಳ್ದಿಂಗಳ । ಪಿಂಡದೊಳಗೆ ಚೆಲುವಾಗಿ ॥
ಕಂಡರಿಸಿದುದೊಂದು ಪುತ್ತಳಿಯೆನೆ ರಾಯ । ಕಂಡನು ತನ್ನೊಳು ತನ್ನಾ ॥ ೫೬ ॥

ಚಂದ್ರಸೂರ್ಯರ ಗೋಷ್ಠಿಯೊಳು ಕುಳಿತಂತೆ ಜಿ । ನೇಂದ್ರಸಂಪದ ಸಾರಿದಂತೆ ॥
ರುಂದ್ರಸಿದ್ಧರೊಳೈಕ್ಯವಾದಂತೆ ರಾಜಯೋ । ಗೀಂದ್ರನಿದ್ದನು ಧ್ಯಾನದಲ್ಲಿ ॥ ೫೭ ॥

ಇಂದ್ರಿಯವೈದರ ಸೋಂಕಿಲ್ಲವಾಗ ಸು । ರೇಂದ್ರಸುಖವ ಸೊಪ್ಪುಗಂಡು ॥
ತಂದ್ರವಳಿದು ಝುಮ್ಮಝುಮ್ಮನೆ ರಾಯಗ । ತೀಂದ್ರಿಯಸುಖದೋರುತಿಹುದು ॥ ೫೮ ॥

ತಂಪುದೋರಿಹುದಾಗ ಸರ್ವಾಂಗದೊಳು ಸುಖ । ಪೊಂಪುಳಿಯಾಗಿರುತಿಹುದು ॥
ಅಂ ಪೆರನೆಂಬ ವಿಕಲ್ಪವಿಲ್ಲ ಧ್ಯಾನ । ದಿಂಪನದೇನ ಬಣ್ಣಿಪೆನು ॥ ೫೯ ॥

ಅಡಿಗಡಿಗಾನಂದವೆಂಬ ಸಾಗರವನೊ । ಕ್ಕಡಿತೆಯ ಮಾಡಿ ಸೇವಿಪನು ॥
ಒಡನೊಡನೀಂಟಿದಷ್ಟಕೆ ಹೆಚ್ಚಿ ಕಡಲು ಬ । ಲ್ಗಡಲಾಗುತಿಹುದೇನನೆಂಬೆ ॥ ೬೦ ॥

ತೆರೆಗಳಿಲ್ಲದ ಕಡಲಾನಂದವೆಂಬುದು । ನೊರೆನೀರುಹೊರತಾದ ಕಡಲು ॥
ಧರೆಯ ಸಮುದ್ರದಂತಲ್ಲ ಶುದ್ಧಾತ್ಮನೊ । ಳೆರವಿಲ್ಲದಿಹುದು *ವಿಚಿತ್ರಾ ॥ ೬೧ ॥

ಮೀನುಮೊಸಳೆಪಾವು ಸೋಂಕದ ಕಡಲು ಭೂ । ಸ್ಥಾನವ ಮುಟ್ಟದ ಕಡಲು ॥
ಧ್ಯಾನಿಗಲ್ಲದೆ ತೋರದಾನಂದವಾರ್ಧಿಯೊ । ಳಾ ನೃಪನೋಲಾಡುತಿರ್ದಾ ॥ ೬೨ ॥

ವಿಷಯಾರ್ಥದೊಳು ಮುನ್ನ ಸುಖಿಸಿದ ಸುಖಗಳ । ತುಸಮಾತ್ರ ಮಾಡಿತೋರುವುದು ॥
ವೃಷಭಾಂಕ ಬಲ್ಲನಾ ಸುಖಜಲಧಿಯೊಳು ಪಾ । ರುಷಭಾನುವೋಲಾಡುತಿರ್ದಾ ॥ ೬೩ ॥

ಭೋಗಿಸಬಹುದಾತ್ಮಸುಖವನಿಂತಿಹುದೆಂದು । ಲೋಗರಿಗರುಹಲಶಕ್ಯಾ ॥
ಹೋಗಬಹುದು ಗಗನದೊಳು ಚಾರಣರು ಕ । ಣ್ಣಾಗಿಸಬಹುದೆ ಹಜ್ಜೆಗಳಾ ॥ ೬೪ ॥

ತನ್ನಲ್ಲಿ ತನಗಾಗಿ ತನ್ನ ನಿಲಿಸಿ ತಾನು । ತನ್ನಿಂದ ತನ್ನನೆ ನೋಡಿ ॥
ತನ್ನೊಳುಮಿಕ್ಕಿದ ನಿಜಸುಖವ ಸುಖಿಸುತ ನಿ । ಷ್ಪನ್ನನಿದ್ದನು ವಿಭವದೊಳು ॥ ೬೫ ॥

---

*ಚಿತ್ರವದು

ಬೊಲ್ಲನಿಲ್ಲದೆ ವೈಹಾಳಿಮಾಳ್ಪನು ಮಿಣಿ । ಯಿಲ್ಲದುಯ್ಯಾಲಾಡುತಿಹನು ॥
ನಲ್ಲಳಿಲ್ಲದೆ ರತಿಸುಖವ ಸುಖಿಸುವನ । ದೆಲ್ಲಿ ಕಲಿತನೊ ರಾಜೇಂದ್ರ ॥ ೧೬ ॥

ಬಾಯಿ ಹಂಗಿಲ್ಲದೆ ಚಿದ್ಗುಣಾನ್ನವನುಂಬ । ಕಾಯವಿಲ್ಲದೆ ರೂಪುದೋರ್ಪ ॥
ಶ್ರೀಯಿಲ್ಲದತಿಸಿರಿವಂತನಾಗಿಹನೇನು । ಮಾಯಕಾರನೊ ಸಾರ್ವಭೌಮ ॥ ೧೭ ॥

ಹೊರಗೆ ನೋಳ್ಪರ ಕಣ್ಗೆ ರಾಜನಂತಿಹನೊಳ । ಗುರೆ ರಾಜಯೋಗಿಯಂತಿಹನು ॥
ಕರೆವ ನಿಜಾನಂದರಸವ ಸುಖಿಸಿ ಜಿನ । ನರಿಕೆಯ ಭೋಗಿಯಾಗಿಹನು ॥ ೧೮ ॥

ಆಭರಣಗಳುಂಟು ತಲೆಸುತ್ತು ದೋತ್ರವುಂ । ಟಾ ಭೂಪಗೊಳಗುಂಟು ಧ್ಯಾನಾ ॥
ಸಾಭರಣಾಂಕಿತಸಿದ್ಧರಿಂತಿಹರೆಂಬ । ಶೋಭೆಯ ಸೂಚಿಸುತಿರ್ದ ॥ ೧೯ ॥

ತೊಡಿಗೆಯೆಲ್ಲವ ತೆಗೆದೊಂದೊಂದುದಿನ ಯೋಗ । ವಿಡಿವನು ದೋತ್ರಮಾತ್ರದೊಳು ॥
ತೊಡಿಗೆಯ ತೊಟ್ಟೊಮ್ಮೆ ಧ್ಯಾನಿಪನವು ಹೊರ । ಗಿಡಿಕಿರಿದಿಹುವಿಲ್ಲದೊಳಗೆ ॥ ೨೦ ॥

ತನುವ ಸಗ್ರಂಥದೊಳಿರಿಸಿ ನಿರ್ವಾಣವ । ವಿನುತಾತ್ಮನೊಡಗೂಡಿ ನೋಡಿ ॥
ಜನಿಸಿದ ಸುಖದಿಂದ ಪರಿಪೂರ್ಣನಾಗಿ ಬಿ । ಮ್ಮನೆ ಬಿಗುಹೇರಿರ್ದನಾಗ ॥ ೨೧ ॥

ಒಳಗುಮ್ಮಿದಾನಂದ ಹೊರಸೂಸುವಂತೆ ಕಂ । ಗಳಲೊಗುತಿಹುದು ಮುದಾಶ್ರು ॥
ಪುಳಕವೆದ್ದಿಹುದು ಸರ್ವಾಂಗದೊಳಗೆ ಹಂಸ । ಕಳೆಯೊಳಿದ್ದನು ಕಳಾರತ್ನಾ ॥ ೨೨ ॥

ಪರಮಾತ್ಮಸುಖವನುಂಡರಸನುಬ್ಬಿದನದ । ರಿರವನಂತಿಂತೆನಲರಿಯೆ ॥
ಕೊರಳೊಳೊಪ್ಪುವ ಹತ್ತು ಕಟ್ಟಿನ ಮೌಕ್ತಿಕ । ಸರಹರಿದೊಕ್ಕುವತ್ತಿತ್ತ ॥ ೨೩ ॥

ಭಿನ್ನಭಕ್ತಿಯೊಳು ಸಾಧನಮಾಡಿ ಬಿಟ್ಟು ನಿ । ರ್ಭಿನ್ನಭಕ್ತಿಯೊಳಳವಟ್ಟು ॥
ಮುನ್ನಿನ ಸುಖವನೆಲ್ಲವ ಮರೆದಾ ರಾಯ । ರನ್ನನಿರ್ದನು ಚಿದಂಗದೊಳು ॥ ೨೪ ॥

ಬಟ್ಟವೊಲೆಯ ಹೆಣ್ಣು ಬಂದಾಗ ತೋಳ್ತುಂಬಿ । ತೊಟ್ಟುಕೊಂಡರು ಚೋದ್ಯವಲ್ಲ ॥
ಪಟ್ಟವರ್ಧನಯೋಗಿಯಿರ್ದನಾತ್ಮನೊಳು ಕ । ಣ್ಣಿಟ್ಟು ಬಾಹ್ಯಾಂಗವ ಮರೆದು ॥ ೨೫ ॥

ಸೋನೆಯ ಮಳೆ ಸುರಿವಾಗ ಮಾಳಿಗೆಯಲ್ಲಿ । ಮಾನವರಿಪ್ಪ ರೀತಿಯೊಳು ॥
ಏನೆಂದು ಹೊರಗನರಿಯದೊಳಗಾತ್ಮವಿ । ಜ್ಞಾನಲೋಕದೊಳಿರ್ದನಾಗ ॥ ೨೬ ॥

ಸ್ವರ್ಲೋಕವೇನು ಜ್ಯೋತಿರ್ಲೋಕವೇನು ಬ । ಹಿರ್ಲೋಕ ನರನಾಗಲೋಕ ॥
ನಿರ್ಲೋಕ ದುರ್ಲೋಕವೆಂದವ ಹೊದ್ದದಂ । ತರ್ಲೋಕದೊಳಗಿರ್ದನಾಗ ॥ ೨೭ ॥

ಭೇದವಿಜ್ಞಾನವೆಂಬುಳಿಯಿಂದ ದೇಹವ । ಭೇದಿಸಿ ಕ್ರಮದಿಂದ ತೋಡಿ ॥
ಆ ದೇಹಗೃಹದೊಳಾತ್ಮನನಿಟ್ಟು ಭಜಿಸುತ । ಮೇದಿನೀಪತಿಯಿರ್ದನಿತ್ತ ॥ ೨೮ ॥

ಅತ್ತ ಚತುರ್ಮುಖವಸತಿಗೈದಿದ ಪಂಗ । ಳುತ್ತಮಸ್ತುತಿಯಿಂದ ಜಿನನಾ ॥
ಬಿತ್ತರಿಸುವ ಶುಭಸೂಚನೆಯೊಳು ಸೂರ್ಯ । ನುತ್ತರಕ್ಷಿತಿಗೆ ಲಂಘಿಸಿದಾ ॥ ೨೯ ॥

ಮೃಗಧರಮುಖಿಯರ ಜಿನಭಕ್ತಿರಾಗದಂ । ತೊಗೆದುದು ಸಂಧ್ಯಾರಾಗಾ ॥
ಗಗನ ಹೂವಾದಂತೆ ತಾರೆಗಳಲ್ಲಿಗ । ಲ್ಲಿಗೆ ತೋರಿದುವು ಮಿನುಮಿನುಗಿ ॥ ೮೦ ॥
ಸಮವಸರಣದೊಳು ದಿವ್ಯನಿನಾದ ಸಂ । ಭ್ರಮಿಸುವ ಕಾಲವಿದೆಂದು ॥
ಕಮಲಮುಖಿಯರು ನೆನೆದು ಪುರುಜಿನಪಾದ । ಕಮಲಯುಗವ ನುತಿಸಿದರು ॥ ೮೧ ॥
ಬಣ್ಣಸರವ ಪಸರವನಿಕ್ಕಿದಂತೆಲ್ಲ । ಬಣ್ಣವಣ್ಣಿಗೆಯಲ್ಲಿ ಕುಳಿತು ॥
ಸಣ್ಣದನಿಯೆಸೆಯೆ ಬಸದಿತುಂಬಿರೆ ಕೂರ್ತು । ಬಣ್ಣಿಸಿದರು ಪುರುಜಿನನಾ ॥ ೮೨ ॥
ಪಾಸಿದ ದಣಿಬದೊಳೆಲ್ಲರು ಪಲ್ಯಂ । ಕಾಸನದೊಳಗೊಲ್ದು ಕುಳಿತು ॥
ಮಾಸದ ಮನದಿಂದ ಮುಗಿದ ಹಸ್ತಗಳಿಂದ । ಭಾಸುರಸ್ತುತಿಯ ಮಾಡಿದರು ॥ ೮೩ ॥
ಶಾಂತಭಾವದೊಳು ನಿರಾಲಸ್ಯದೊಳು ಮಹಾ । ಸಂತೋಷದೊಳು ತವತವಗೆ ॥
ಅಂತಕವಿಜಯನ ಕೀರ್ತಿಸಿದರು ಪುಣ್ಯ । ಕಾಂತೆಯರೇನ ಬಣ್ಣಿಪೆನು ॥ ೮೪ ॥

॥ ವಂದನಾಷ್ಟಕಂ ॥

ಜನ್ಮಜರಾಮೃತ್ಯುನಿರ್ಧೂತ ಜಯಜಯ । ಸನ್ಮುನಿಸರಸಿಜಭಾನು ॥
ಮನ್ಮಥಪಿತ ಜಯ ಮನ್ಮಥಜಿತ ಜಯ । ಚಿನ್ಮಯಪ್ರಥಮಜಿನೇಶಾ ॥ ೮೫ ॥
ವಾಗ್ವನಿತಾಧೀಶ ಜಯಜಯ ದಶವಿಧ । ದಿಗ್ವರಾರ್ಚಿತಪಾದಪದ್ಮಾ ॥
ಪ್ರಾಗ್ವಿರಿಂಚಿಯೆ ಜಯ ಪರಮಸುಜ್ಞಾನ ಸು । ದೃಷ್ಟಿಪುಪಾದಿಜಿನೇಶಾ ॥ ೮೬ ॥
ಸತ್ಯಪತಾಕ ಸದಾನಂದ ಸಂಗರಾ । ಹಿತ್ಯ ಸದ್ಬೋಧಸಾಹಿತ್ಯಾ ॥
ನಿತ್ಯ ನಿರಾಲಂಬ ಜಯ ತ್ರಿಭುವನಜನ । ಸ್ತುತ್ಯ *ತ್ರಿಲೋಕೈಕದೀಪಾ ॥ ೮೭ ॥
ಡಿಂಡೀರಪಿಂಡಪಾಂಡುರನಿಭಕೀರ್ತಿಕ । ರಂಡಾಯಮಾನತ್ರಿಭುವನಾ ॥
ಚಂಡಾಂಶುಪುಂಡರೀಕಾರಾತಿಕೋಟಿ ರು । ಚ್ಯಾಂಡನರೂಪ ನಿಷ್ಪಾಪಾ ॥ ೮೮ ॥
ತುಂಡುಭಮಂಡಲೋದ್ದಂಡಜಿಹ್ವಾಸ್ತುತಿ । ಡಿಂಡಿಮಮಂಡಿತಾಸ್ಥಾನಾ ॥
ಡಂಡಮಿಕೃತಸುರಪಟಹಕಂಕೇಲಿ ಭಾ । ಮಂಡಲ ವಿಭವಸನಾಥಾ ॥ ೮೯ ॥
ತುಂಗತರಂಗಗಂಗಾಂಗಸಂಗಸ್ಫೈತ್ಯ । ಭಂಗುರೀಕೃತವಾಕ್ಯಸಂಗಾ ॥
ಅಂಗಾಂಗ ಬಾಹ್ಯಕೃತೇಂಗಿತ ಶಾಸ್ತ್ರಾಢ್ಯ । ಸಾಂಗಿಕಸ್ತುತಿವೈಭವಾಢ್ಯಾ ॥ ೯೦ ॥
ನಿರ್ಲೇಪ ನಿರ್ಜರೇಶ್ವರಶಿರೋರತ್ನರೋಚಿ । ಚಿರ್ಲಾಲತಾಂಘ್ರಿಪಯೋಜಾ ॥
ಆರ್ಲೇಸುವಾಳ್ಪರ ನುತಿಸರು ಸ್ವಾಮಿ ವ । ಪುರ್ಲೇಪವಮೃತದಾತಾರಾ ॥ ೯೧ ॥

* ತ್ರಿಲೋಕಾಧಿನಾಥ

ವೃಷಭಲಾಂಛನ ವೃಷಭಾಂಕ ವೃಷಭಕೇತು । ವೃಷಭನಾಮಾಖ್ಯಯುಕ್ತೇಶಾ ॥
ವೃಷಭತೀರ್ಥಂಕರ ವೃಷಭಜಿನೇಶ್ವರ । ವೃಷಭನಾಯಕ ವೃಷಭೇಶಾ ॥ ೯೨ ॥

॥ ವಂದನಾಷ್ಟಕಂ ಸಮಾಪ್ತಂ ॥

ಎಂದಿವು ಮೊದಲಾಗಿ ಬಹುವಿಧಮೊಳು ಜಿನ । ವಂದನೈವ್ರತತಿಯೊಳು ॥
ಇಂದುಮುಖಿಯರಿದ್ದರರುಹನಾಲಯದೊಳಿ । ನ್ನೊಂದು ವಿಸ್ಮಯವನೇನೆಂಬೆ ॥ ೯೩ ॥

ಹೆಂಗಳೆಲ್ಲರು ಬಸದಿಗೆ ಪೋಗೆ ನೃಪತಿಯೇ । ಕಾಂಗಿ ತಾನಾಗಿ ಗೇಹದೊಳು ।
ಕಂಗಳ ಮುಚ್ಚಿ ಧ್ಯಾನದೊಳಿರೆ ಹೊರಗೆ ಭೂ । ತಂಗಳು ಬಳಸಿದರ್ವಾಗ ॥ ೯೪ ॥
ವನದೇವಿಪುರದೇವಿಜಲದೇವಿಜ್ಯೈನಶಾ । ಸನದೇವಿಯರು ನೆರೆದೆಲ್ಲ ॥
ಮನುವಂಶತಿಲಕನ ಯೋಗವ ನೋಡಿ ಮೂ । ಗಿನ ಮೇಲೆ ಬೆರಳಿಟ್ಟರಾಗ ॥ ೯೫ ॥
ತಲೆಯಿಂದ ಪಜ್ಜೆಮುಟ್ಟರಸನ ನೋಳ್ಪರು । ಚಲಿಸದ ಧ್ಯಾನವ ಕಂಡು ॥
ತಲೆದೂಗುವುವು ಕೈಮುಗಿವುವು ಪೂಜಿಸ । ಪೊಲಿದು ವ್ಯಂತರದೇವತೆಗಳು ॥ ೯೬ ॥
ಚಾಮರವಿಕ್ಕುವುವಾಲವಟ್ಟವನಿಕ್ಕಿ । ಪೂಮಳೆಗರೆವುವು ಮೇಲೆ ॥
ಪ್ರೇಮದಿಂದಾರತಿಯೆತ್ತುವುವ ತ್ಮಾ । ರಾಮಗುತ್ತಮದೇವತೆಗಳು ॥ ೯೭ ॥
ಮೆಲ್ಲಮೆಲ್ಲನೆ ಸ್ತುತಿವನಾಳ್ದುವು ರಾಣಿಯ । ರೆಲ್ಲರು ಬಪ್ಪಬಟ್ಟೆಯನು ॥
ಮೆಲ್ಲಗಾರೈವುವು ನೃಪನ ಮೈಮುಟ್ಟದ । ಲ್ಲಲ್ಲಿ ನಿಂದೋಲೈಸುತಿಹುವು ॥ ೯೮ ॥
ಲೀನಮಾನಸನಾಗಿ ಧ್ಯಾನದೊಳಿಪ್ಪಾಗ । ಭೂನಾಥನರಿಯನಾ ಧ್ಯಾನ ॥
ಲೀನವಾದಾಗಿಷ್ಟ ಬಲ್ಲನಂತದನಂದಾ । ಹೀನನೈದಾತ್ಮನೊಳಿರ್ದಾ ॥ ೯೯ ॥
ಭ್ರಾಂತಿಯ ಬಿಟ್ಟಾತ್ಮರೂಪ ನೋಳ್ಪವರಿಗೋ । ರಂತೆರಗುವುದು ಮೂಲೋಕಾ ॥
ವ್ಯಂತರಗಳು ಸೇವೆಮಾಳ್ಪವೇನರಿದೆಂದು । ಶಾಂತಾತ್ಮನಿರ್ದನಾತ್ಮನೊಳು ॥ ೧೦೦ ॥
ಏಕಾಗ್ರಮನನಾಗಿಯೆಲ್ಲರ ನೀಗಿ ತಾ । ನೇಕಾಕಿಯಾಗಿಹನೆನಲು ॥
ಏಕೆ ಬಿಡುವುದು ಪೂರ್ವದ ಪುಣ್ಯ ವ್ಯಂತರಾ । ನೀಕವಿದ್ದುದು ಬಳಸಿನೊಳು ॥ ೧೦೧ ॥
ಸವರತ್ನಗೃಹವೆಂಬ ದೇಗುಲದಲ್ಲಿ ಮಾ । ನವಪತಿ ದೇವನಂತಿರ್ದಾ ॥
ವಿವಿಧದೇವತೆಗಳೋಲೈಸುತಿರ್ದುವು ಮರ್ಝು । ಪ್ರಮಾತ್ಮಯೋಗದ ಸಿರಿಯೆ ॥ ೧೦೨ ॥

ಬಂದನು ಹೊರಗೆ ಬಗೆಯದೊಳಗಾತ್ಮನೊ । ಳೊಂದಿದ್ದನಾ ರಾಯನತ್ತ ॥
ಬಂದುಜಾವವ ಕಳೆದರು ಬಸದಿಯೊಳೋಜೆ । ಯಿಂದೆದ್ದರಬಲೆಯರಿತ್ತ ॥ ೧೦೩ ॥
ವೃದ್ಧಪೂಜೇಂದ್ರ ಪೂಜಿಸಿದ ಪೂಜೆಯ ನೋಡಿ । ಸಿದ್ಧಸೇಸೆಯ ಕೈಕೊಂಡು ॥
ಬದ್ಧಾಂಜಲಿಯಿಂದ ಜಿನನ ಬೀಳ್ಕೊಂಡು ಲೋ । ಕೋದ್ಧಾರನೆಡೆಗೆ ನಡೆದರು ॥ ೧೦೪ ॥

ಅಂದುಗೆ ಮೊದಲಾದ ಭೂಷಣದುಲುಹಿಲ್ಲ । ವೃಂದಸೇವಕಿಯರಿಲ್ಲಾಗ ॥
ಬಂದರು ತಪಸಿವೆಂಗಳು ರಾಜಋಷಿಯಿದ್ದ । ಮಂದಿರಕೊಯ್ಯಾರದಿಂದ ॥ ೧೦೫ ॥
ಮೊಗಸಿದವುಬ್ಬು ದೀವಿಗೆಗನ್ಯರಿಲ್ಲ ದೀ । ವಿಗೆಯು ತಾವಾಂತರೆ ಕೊರತೆ ॥
ದುಗುಲದೊಳ್ಕಟ್ಟಿರ್ದ ರತ್ನಮುದ್ರಿಕೆಯು ದೀ । ವಿಗೆಯಾಂತು ನಡೆದರೇನೆಂಬೆ ॥ ೧೦೬ ॥
ಹೋಗಲಾ ಮಾತುಪಚಾರ ಮುತ್ತಿನ ಪದ್ಮ । ರಾಗದ ಕಲಶ ಹೊಂಗೋಟೆ ॥
ಮೇಗಣ ರನ್ನದೆನೆಯಕಾಂತಿಯುಳಿವಿಸಿ । ಲಾಗಿದ್ದುದೈದಿದರವರು ॥ ೧೦೭ ॥
ಸತಿಯರ ಬರವ ದೂರದೊಳು ಕಂಡೊಡನೆ ದೇ । ವತೆಗಳು ಬಯಲಾದುವೊಡನೆ ॥
ಕ್ಷಿತಿಪನಿದ್ದನು ಸುರಪೂಜೆವಡೆದು ಮರ್ತ್ಯ । ಸತಿಯರ ಪೂಜೆಗಿಂಬಾಗಿ ॥ ೧೦೮ ॥
ದೂರದೊಳಗೆ ನಿಂದು ನೋಡಿದರರಸನಾ । ಕಾರವನಾ ಲಲನೆಯರು ॥
ಮೇರು ಪುರುಷನಾಗಿ ಮಿಸುಕದೆ ಕುಳಿತಂತೆ । ಧೀರನಿರ್ದನು ನಿಜಾತ್ಮನೊಳು ॥ ೧೦೯ ॥
ಹೊನ್ನ ಕಾಲ್ಮಣೆಯ ಕೆಲದೊಳು ಸಾಲಾಗಿದ್ದ । ಚಿನ್ನದ ಠವಣೆಕೋಲಿಂದ ॥
ರನ್ನದ ಜಿನಸಿದ್ಧಪ್ರತಿಮೆಗಳಿಂದ ನಿ । ಷ್ಪನ್ನಯೋಗೀಂದ್ರನೊಪ್ಪಿದನು ॥ ೧೧೦ ॥
ಭೃಂಗಾರಕಲಶದರ್ಪಣಚಾಮರಾಳಿ ರ । ತ್ನಾಂಗತೋರಣ ಮೊದಲಾದ ॥
ಮಂಗಲವಸ್ತು ತುಂಬಿದ ಗೃಹದೊಳು ಜಗ । ನ್ಮಂಗಳನಿರ್ದನಾತ್ಮನೊಳು ॥ ೧೧೧ ॥
ತೊಲೆಯಲ್ಲಿ ಕೀಲಿಸಿ ನೆಲಮುಟ್ಟಕಿಳಿದ ನಿ । ರ್ಮಲರತ್ನದೀಪಮಾಲೆಗಳು ॥
ಬಲದೊಳಗೆಡದೊಳಗೆರಡುಸಾಲಾಗಿರೆ । ಚೆಲುವನಿದ್ದಿರವ ನೋಡಿದರು ॥ ೧೧೨ ॥
ಮುಕ್ಕೊಡೆಯುಂತೊಡ್ಡಿ ಮೇಲೆ ಮಾಣಿಕಜ್ಯೋತಿ । ಚೊಕ್ಕದಿ ಮೂರುಸಾಲಾಗಿ ॥
ಇಕ್ಕುವುದೊಂದುಕಿರೀಟ ಚಕ್ರೇಶಗಿಂ । ದಕ್ಕ ಮೂರಾಯ್ತೆಂದರವರು ॥ ೧೧೩ ॥
ಮೇಲೆಡಬಲದಲ್ಲಿ ರತ್ನದೀಪಗಳಿರ್ದು । ವಾಲಯವದು ರತ್ನಮಯವು ॥
ಮೇಲು ರತ್ನವ ತೊಟ್ಟು ನೃಪನಿರ್ದನಾ ಯೋಗ । ಶಾಲೆಯಿರ್ದುದು ಸ್ವರ್ಗದಂತೆ ॥ ೧೧೪ ॥

ಬೆಳಗಿನ ಲೋಕವ ಹೊಗುವಂತೆ ಮಂಟಪ । ದೊಳಹೊಕ್ಕರಾ ವನಿತೆಯರು ॥
ಬಲಗೊಂಡು ರತ್ನಯೋಗಿಯ ಮೂರುಸೊಳ್ಕತ್ತಿ । ಕುಳಿತರೆಲ್ಲರು ಗೃಹತುಂಬಿ ॥ ೧೧೫ ॥
ಪ್ರಾರಬ್ಧಧ್ಯಾನಿಯೊತ್ತಿನೊಳು ಗಲಭೆ ಸಲ್ಲ । ದೀ ರಾಯ ನಿಷ್ಪನ್ನಧ್ಯಾನಿ ॥
ನೇರದೊಳಧ್ಯಾತ್ಮಗೋಷ್ಠಿಯ ಮಾಳ್ಪೆವೆಂ । ದಾ ರಮಣಿಯರೆಳಸಿದರು ॥ ೧೧೬ ॥
ರತ್ನದ ಪಡಲಿಕೆಯೊಳಗಿದ್ದ ಪರಮಾತ್ಮ । ರತ್ನವರ್ಣನೆಯ ಶಾಸ್ತ್ರವನು ॥
ರತ್ನದ ಬೆಳಗಿನೊಳೋದಿದರಬಲಾ । ರತ್ನಗಳಾನಂದದಿಂದ ॥ ೧೧೭ ॥
ಉಂಡುಟ್ಟ ಕಥೆಯಲ್ಲ ಜಾರಚೋರರ ಲಂಡ । ಪುಂಡರ ನುಡಿಯೆಂತು ಸಲ್ಲ ॥
ಭಂಡಾಟವವರ್ಗಿಲ್ಲ ಹಂಸತತ್ವದ ನೆಲೆ । ಗಂಡೋದಿದರು ಜಿನ ಬಲ್ಲಾ ॥ ೧೧೮ ॥

ಆದೀಶನಾಸ್ಥಾನದೊಳಗೆ ಮುನ್ನಾತ್ಮಪ್ರ । ವಾದವನರಿದು ಚಕ್ರೇಶಾ ॥
ಮೇದಿನಿಯರಿವಂತು ಮೃದುಮಾಡಿಕೊಡಲದ । ನೋದುತಿರ್ದರು ತವತವಗೆ ॥ ೧೧೯ ॥

ಕುಂಡಕುಂದಾಚಾರ್ಯ ಕಲಿಯುಗದೊಳು ಪೇಳ್ದ । ಮಂಡಿತಪ್ರಾಭೃತದಂತೆ ॥
ಮಂಡಲಾಧಿಪ ಕೃತಯುಗದೊಳುಸುರಿದಾತ್ಮ । ಕಾಂಡವನೋದಿದರೊಸೆದು ॥ ೧೨೦ ॥

ಅಮೃತಚಂದ್ರಮುಸೂರಿ ಕಲಿಕಾಲದೊಳು ಪೇಳ್ದ । ಸಮಯಸಾರಾಂಕ ನಾಟಕದ ॥
ಗಮಕಕೆ ಮೊದಲಾದ ಪರಮಚಿತ್ಕಲೆಯ ಭೂ । ರಮಣ ಪೇಳ್ವುದನೋದುತಿಹರು ॥ ೧೨೧ ॥

ಯೋಗೀಂದ್ರಸ್ವಾಮಿ ಪ್ರಭಾಕರಭಟ್ಟಗಿಂ । ಬಾಗಿ ಪೇಳಿದ ಕಥೆಯಂತೆ ॥
ಭೂಗೊಡೆಯನು ಮೃದುವಾಗಿ ಮೂರ್ಖರಿಗೆ ಪೇ । ಳ್ದಾಗಮರಸವನೋದಿದರು ॥ ೧೨೨ ॥

ಶ್ರೀಪದ್ಮನಂದಿಯೋಗಿಯ ನುಡಿಯಂತೆ ಸ್ವ । ರೂಪಸಂಬೋಧನೆಯಂತೆ ॥
ಶ್ರೀಪೂಜ್ಯಪಾದಸಮಾಧಿಶತಕದಂತೆ । ರೂಪಿತಾರ್ಥಗಳನೋದಿದರು ॥ ೧೨೩ ॥

ಜ್ಞಾನಾರ್ಣವ ಯೋಗರತ್ನಾಕರ ಸುಕ । ಲಾನಿಧಿ ರತ್ನಪರೀಕ್ಷೆ ॥
ಮಾನಿತಾರಾಧನಸಾರಸಿದ್ಧಾಂತ ಸು । ಮ್ಮಾನದಿಂದೋದಿದರಾಗ ॥ ೧೨೪ ॥

ಇಷ್ಟೋಪದೇಶದಂತಧ್ಯಾತ್ಮನಾಟಕ । ದಷ್ಟಸಹಸ್ರೀಯೆಂಬಂತೆ ॥
ತುಷ್ಟಿತೋರಿದುದೊಂದು ಕುಂಡಕುಂದಾಚಾರ್ಯ । ಸೃಷ್ಟಿಸಿದನುಪ್ರೇಕ್ಷೆಯಂತೆ ॥ ೧೨೫ ॥

ಕಿರಿದಿನೊಳಗೆ ನೋಡೆ ನಿಯಮಸಾರಂಬೊಲು । ತೆರಪಿಗೆ ಪ್ರಾಭೃತದಂತೆ ॥
ತುರಗಿ ಭೂಪತಿ ಹೇಳಿದಧ್ಯಾತ್ಮಸಾರದ । ತೆರದೊಳಧ್ಯಯನವಮಾಡಿದರು ॥ ೧೨೬ ॥

ನೆಲೆಗಾಣದೋದ ಹಲವನೋದಿ ಕಂಡತ್ತ । ತೊಳಲಬೇಡೆಂದು ರಾಜೇಂದ್ರಾ ॥
ಕಲಿಸಿಕೊಟ್ಟಧ್ಯಾತ್ಮಸಾರವನೋದಿದ । ರಲಸದೇಕಾಗ್ರಚಿತ್ತದೊಳು ॥ ೧೨೭ ॥

ಲೆಕ್ಕವಿಲ್ಲದ ಮತಗಳನೋದಿ ಹಂಸನ । ದಿಕ್ಕನರಿಯದವರೋದು ॥
ಲೆಕ್ಕಕೆ ಹೆತ್ತೆ ಲಕ್ಷಣಗೇಡಿಯೆಂಬಂತೆ । ನಕ್ಕಾಟಕೆಡೆಯಹುದಲ್ತೆ ॥ ೧೨೮ ॥

ಧ್ಯಾನಾನುಕೂಲದಧ್ಯಾತ್ಮವನೋದದೆ । ನಾನಾರ್ಥಭಾಷ್ಯಶಾಸ್ತ್ರಗಳಾ ॥
ಹೀನಾತ್ಮರೊರಲುತಿಪ್ಪರು ಹಗಲಿರುಳು ಕ । ಣ್ಬೇನೆಯ ಕರಡಿಯಂದದೊಳು ॥ ೧೨೯ ॥

ಸಕಲಶಾಸ್ತ್ರದ ತಿರುಳಧ್ಯಾತ್ಮಚಿಂತನೆ । ಯಕಲಂಕದುತ್ಕೃಷ್ಟತಪಸು ॥
ಮುಕುತಿಗೆ ಬೀಜವೆಂದರಸ ಸೂಚಿಸಿಕೊಟ್ಟ । ಯುಕುತಿಯೊಳೊಲಿದೋದುತಿಹರು ॥ ೧೩೦ ॥

ಪುಸ್ತಕವನು ನೋಡುತಿರಲೇತಕಾತ್ಮನಾ । ಪುಸ್ತಕದೋಲೆಯೊಳಿಹನೆ ॥
ಪುಸ್ತಕ ಪೇಳ್ವುದು ನಿನ್ನ ಮೆಯ್ಯೊಳಗಾತ್ಮ । ವಸ್ತುವ ನೋಡು ನೀನೆಂದೂ ॥ ೧೩೧ ॥

ಬಾಹ್ಯಶಾಸ್ತ್ರವ ಮೆಚ್ಚಿ ಬಾಹ್ಯದೊಳೆಚ್ಚತ್ತು । ಬಾಹ್ಯರಾಗಿರ್ದೆವೆಮ್ಮೊಳಗೆ ॥
ಗ್ರಾಹ್ಯದಧ್ಯಾತ್ಮ ಸಿಕ್ಕಿದುದೆಂದು ಮುಷ್ಟಿಸಂ । ವಾಹ್ಯಮುಖ್ಯರು ಮೆಚ್ಚಿದರು ॥ ೧೩೨ ॥

ಹೊತ್ತಗೆವಿಡಿದೋದುತಿರ್ದರು ಕೆಲಬರು । ಮತ್ತಲ್ಲಿ ಕೆಲರು ವೀಣೆಗಳಾ ॥
ಎತ್ತಿ ಸುಸ್ವರದಲ್ಲಿ ಪಾಡುತಿರ್ದರು ಮೆತ್ತ । ಮೆತ್ತನೆ ಪ್ರಾಭೃತಾರ್ಥವನೂ ॥ ೧೩೩ ॥
ಆಕ್ರಮಿಸಿದುದಾಗ ಸಮರಾತ್ರಿ ದೇಸಿ ರಾ । ಮಕ್ರಿ ಭೈರವಿ ಕುರುಂಜಿಗೆಯಾ ॥
ಸುಕ್ರಮರಾಗದೋರಿಂದವೆಲ್ಲರಲಸಿಕೆ । ವಿಕ್ರಮವಾಗಿ ಹೋಹಂತೆ ॥ ೧೩೪ ॥
ಜಾಳುವೆಣ್ಣುಗಳುಪವಾಸವ ಮಾಡಿದ । ರೇಳಲಾರರು ನರಳುವರು ॥
ಏಳಬಾರುಂಡವಗೆ ಬಾರದವರು ಮಾ । ಳ್ಪಾಳಾಪವೊಂದು ಪಟುತ್ವಾ ॥ ೧೩೫ ॥
ಒಂಟಿವಂಡಿಗೆಯೊಳು ಹಲವುದಂಡಿಗೆಯೊಳು । ನಂಟುಗಾಣಿಸಿ ಶ್ರುತಿಮುಟ್ಟಿ ॥
ಮಂಟಪ ಗುಮುಗುಮುಗುಮ್ಮೆನೆ ಕೊಂಳಿಪೆ । ಗಂಟಾಗಿ ಶಾಯಿಮೋರಿದರು ॥ ೧೩೬ ॥
ಬೆಂಡಿನಂಬವ ಲಘುಕಿನ್ನರಿಯೊಳು ಸ್ವರ । ಮಂಡಲದೊಳು ಶ್ರುತಿಗೂಡಿ ॥
ಗಂಡುಗೋಗಿಲೆಯಂತೆ ಪೆಣ್ಬಂಬಿಯಂತಾಗ । ಹಿಂಡಿದರಾತ್ಮಸಾರವನು ॥ ೧೩೭ ॥
ರಾಯನಾನಂದಿಸುವಂತುಪವಾಸವ । ಸ್ತ್ರೀಯರ್ಗೆ ತಂಪಾಗುವಂತೆ ॥
ಕಾಯ ಬೇರಾತ್ಮ ಬೇರೆಂಬ ಕಲೆಯನ ನಿ । ರಾಯಾಸದಿಂದ ಹಾಡಿದರು ॥ ೧೩೮ ॥
ಹಾಲಂತೆ ಸಂಗೀತ ಶರ್ಕರೆಯಂತೆ ನಿ । ರಾಲಪ್ರಕಾಶದಧ್ಯಾತ್ಮ ॥
ಹಾಲುಸಕ್ಕರೆಗೂಡಲಾರ ಸೋಲಿಸದು ವೀ । ಣಾಲಾಪೆಯರು ಪಾಡುತಿಹರು ॥ ೧೩೯ ॥

ಸಾಹಿತ್ಯಸಂಗೀತದಲ್ಲಿ ಕೆಲಬರಿಂತು । ಶ್ರೀಹಂಸನಾಥನ ನುತಿಸಿ ॥
ಆ ಹೆಂಗಳೊಳು ಮತ್ತೆ ಕೆಲಬರು ಜಪದೊಳು । ತ್ಸಾಹಿಸುತಿರ್ದರೇನೆಂಬೆ ॥ ೧೪೦ ॥
ಇದಿರೊಳೊಪ್ಪುವ ಜಿನಸಿದ್ಧಬಿಂಬವ ನೋಡು । ತೆವೆಮುಟ್ಟಿ ಬಲಗೆಯ್ಯನೆತ್ತಿ ॥
ತುದಿವೆರಳೊಳು ಜಪಸರವ ನೂಂಕುತ ಪಂಚ । ಪದವ ಜಪಿಸಿದರೊಪ್ಪದೊಳು ॥ ೧೪೧ ॥
ಥಾಳವಡೆದ ನವರತ್ನದೊಳೆಸೆವಕ್ಷ । ಮಾಲೆಯ ತಿರುಹುತೋಜೆಯೊಳು ॥
ಆಲಿಗಳರೆಮುಗಿವುತ ತುಟಿ ಮಿಸುಕುತ । ಸಾಲಾಗಿ ಜಪವ ಮಾಡಿದರು ॥ ೧೪೨ ॥
ಪಂಚಮಂತ್ರವ ಜಪಿಸುತ ಕೆಲರಿರಲು ಪ್ರ । ಪಂಚವಳಿದು ಕೆಲರಿರಲು ॥
ಚಂಚಲಚಿತ್ತವ ತಡೆದು ಧ್ಯಾನದ ಹಿಂಚು । ಮುಂಚರಿದುಜ್ಜುಗಿಸಿದರು ॥ ೧೪೩ ॥
ಮಿಸುಕದೆ ಕುಳಿತು ಕಣ್ಮುಚ್ಚಿ ಭಾವದಿ ತಮ್ಮ । ನೊಸಲೊಳು ಕಾಣ್ಬರಕ್ಷರವಾ ॥
ಕುಸಿದೊಮ್ಮೆ ತಮ್ಮ ಮೈಯೊಳಗೆ ತಮ್ಮಾತ್ಮನ । ನಸುಬೆಳಗಾಗಿ ಕಾಣುವರು ॥ ೧೪೪ ॥
ನೀರಜಸೋಂಕದೊಪ್ಪುವ ಪುರುಜಿನನ ತೇ । ಜೋರೂಪ ಕಾಣ್ಬರತಿಯೊಳು ॥
ಮಾರುತಸೋಂಕದ ಸಿದ್ಧಗಣವ ಮನ । ವಾರೆ ಧ್ಯಾನಿಸಿ ಕಾಣ್ಬರಾಗ ॥ ೧೪೫ ॥
ತೋರುವುದೊಡನಳಿವುದು ಧ್ಯಾನವದು ಮಿಂಚು । ತೋರುವಂತೊಡನಳಿವಂತೆ ॥
ಸೂರೆಯೆ ಭರತರಾಜೇಂದ್ರನಂತಸ್ತ್ರೀಗೆ । ಕೂರುಗೊಂಡುರೆ ನಿಲುವಾಗ ॥ ೧೪೬ ॥

ಪುರುಷರು ಮಾಳ್ಪರು ಧ್ಯಾನ ನಾರಿಯರು ಮಾ । ಳ್ಪರು ಯೋಗಭಾವನೆಯುವರ ‖
ಪರಿಯೆಂತುಟೆನೆ ಚಿಂತೆಯಳಿದು ನಿಂದರೆ ಧ್ಯಾನ । ಸ್ಮರಣೆ ಭಾವನೆ ಹಲವೇನು ‖ ೧೪೭ ‖

ಓದಿ ಶಬ್ದಬ್ರಹ್ಮದಿಂದ ಕೆಲರು ಗೀತ । ನಾದಬ್ರಹ್ಮದಿ ಕೆಲಬರು ‖
ಭೇದಭಾವನೆಯ ಯೋಗಬ್ರಹ್ಮದೊಳು ಕೆಲ । ರಾ ದಿವ್ಯರಾತ್ರಿಯೊಳಿಹರು ‖ ೧೪೮ ‖

ಬಳಸಿ ನಾರಿಯರು ಬ್ರಹ್ಮತ್ರಯಪೂಜೆಯೊ । ಳಲಸದೆ ಜಾಗರವಿರಲು ‖
ನೆಲದಾಣ್ಮ ನಡುವೆ ತನ್ನಾತ್ಮನೊಳಡಗಿ ನಿ । ಶ್ಚಲಪರಬ್ರಹ್ಮದೊಳಿರ್ದಾ ‖ ೧೪೯ ‖

ಶುದ್ಧಾತ್ಮನೊಳು ನಿಲೆ ಶುದ್ಧೋಪಯೋಗವಿ । ಶುದ್ಧಿಗೆ ಹಲವ ಚಿಂತಿಪುದು ‖
ವೃದ್ಧಿಪುಣ್ಯದ ಶುಭಯೋಗವಂತೆರಡು ಸ । ಮೃದ್ಧಿಯಾಗಿದ್ದುವವರೊಳು ‖ ೧೫೦ ‖

ಪ್ರೋಷದುಪವಾಸದೇಣಿಕೆಯಿಲ್ಲಧಿಕಸಂ । ತೋಷದೊಳೋಲಾಡುತವರು ‖
ಭೀಷಣಕರ್ಮವ ಕೆಡಿಸುತ ಸಿದ್ಧಾಂತ । ಘೋಷದೊಳಿರ್ದರೊಪ್ಪದೊಳು ‖ ೧೫೧ ‖

ಸಾಗಿತು ಸದರದೊಳಗೆ ರಾತ್ರಿ ನೆರೆ ಬೆಳ । ಗಾಗಲಿನ್ನುಂಟೈದುಘಳಿಗೆ ‖
ಯೋಗದೊಳವನೀಶನಿದ್ದನಿಲ್ಲಿಗೆ **ಪರ್ವ** । **ಯೋಗದ ಸಂಧಿ** ಸುಗಂಧಿ ‖ ೧೫೨ ‖

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ‖
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ‖ ೧೫೩ ‖

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾ ಮೋದವೈದುವರವರು ‖
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳೂ ‖ ೧೫೪ ‖

ಹೊಂಬಣ್ಣಮೈಯ ಚಕ್ರೇಶನ ಮನದೊಳು । ಬಿಂಬಿಸಿದಂತೆ ನನ್ನೊಳಗೆ ‖
ಇಂಬುಗೊಂಡಿರು ನನ್ನ ಗುರುವೆ ನಿನ್ನನು ಬೇಡಿ । ಕೊಂಬೆ ಚಿದಂಬರಪುರುಷಾ ‖ ೧೫೫ ‖

ಪರ್ವಯೋಗಸಂಧಿ ಸಂಪೂರ್ಣಂ

# ಪಾ ರ ಣಾ ಸಂ ಧಿ.

ಗಾತ್ರದೊಳಿರುತಿರ್ದ ಗಾತ್ರಾತೀತ ವಿ । ಚಿತ್ರಸಂಸಾರವಿನಾಶಾ ॥
ಪಾತ್ರವಾಡಿದವೊಲು ನುಡಿಸು ಕಾವ್ಯವ ಭಾನು । ನೇತ್ರ ನಿರಂಜನಸಿದ್ಧಾ ॥ ೧ ॥

ಎಂತಿರ್ದುದಾ ಭರತೇಶನ ಯೋಗವಿಂ । ತಂತಿರ್ದುದೆಂದಾಡಲರಿಯೆ ॥
ಶಾಂತಿಯಾಗಿರ್ದುದು ಕಾಂತಿಯಾಗಿರ್ದುದೇ । ಕಾಂತವಾಗಿರ್ದುದಾತ್ಮನೊಳು ॥ ೨ ॥

ಕೋಗಿಲೆದನಿಯಂತೆ ವೀಣಾರವದಂತೆ । ರಾಗದೋರುವುದೊಮ್ಮೆ ನಾದಾ ॥
ಸಾಗರಘೋಷ ತೋರುವುದು ಕರ್ಣದೊಳದು । ಲಾಗುಯೋಗ ಬ್ರಹ್ಮಶಕ್ತಿ ॥ ೩ ॥

ನಿಂದೆಳೆಮುತ್ತಿನಂತೊಪ್ಪುವ ನಿರ್ಮಲ । ಬಿಂದುವ ಕಾಣ್ಬನೊಮ್ಮೊಮ್ಮೆ ॥
ನಿಂದಲ್ಲಿ ನಿಲ್ಲದುಳ್ಕಿನವೊಲು ಚಲಿಸುವಾ । ನಂದಕಲೆಯ ಕಾಣ್ಬನೊಮ್ಮೆ ॥ ೪ ॥

ರತ್ನಮಾಲೆಗಳಂತೆ ಸರ್ವಾಂಗದೊಳಗೆ ಪ್ರ । ಯತ್ನಿತಾಕ್ಷರಗಳ ಕಾಣ್ಬಾ ॥
ರತ್ನಮೂರೊಡಲಾದ ಹಂಸನ ಕಂಡು ಸ । ಪತ್ನಕರ್ಮವ ಸುಡುತಿಹನು ॥ ೫ ॥

ಒಳಗೆ ತನ್ನಾತ್ಮನ ಬೆಳಗಿನೊಳಿರ್ದನು । ನಿಳಯ ತಾನದು ಮಣಿವೆಳಗು ॥
ಬೆಳಗಿಗೆ ಬೆಳಗಿದಿರ್ವಪ್ಪಂತೆ ತೋರಿತು । ಬೆಳಗಿನ ಚಿಹ್ನವಪ್ಪುರೊಳು ॥ ೬ ॥

ತಂಗಾಳಿ ತೀಡಿತು ತಾರಗೆ ಮಸುಳ್ದುವು । ಹಿಂಗಿತು ಜಗದಂಧಕಾರಾ ॥
ಮುಂಗಾರ ಮೊಳಗಿನಂದದಿ ಮೊಳಗಿದುವು ವಾ । ದ್ಯಂಗಳು ಜಿನಗೃಹದೊಳಗೆ ॥ ೭ ॥

ನೋಡುವೆನಾತ್ಮಯೋಗಿಯನು ಪಾರಣೆಯನು । ಮಾಡಿಪೆನೆಂದು ರಥವನು ॥
ಓಡಿಸಿಕೊಂಡು ಬಂದನೊಯೆನೆ ರವಿ ಬಂದು । ಮೂಡಣಗಿರಿಯನೇರಿದನು ॥ ೮ ॥

ಎಳೆವಿಸಿಲಡರ್ದೇರಿ ಜಿನನಿಲಯದ ರತ್ನ । ಕಳಶದೊಳ್ಮಾತಾಡೆ ಕಂಡು ॥
ಬೆಳಗಾಯ್ತು ದೇವ ಕಣ್ದೆರೆಯೆಂದು ವನಿತೆಯು । ರೆಳಸಿ ಬಿನ್ನವಿಸಿದರಾಗ ॥ ೯ ॥

ಶಾಂತಿಭಕ್ತಿಯನಂತರಂಗದೊಳೆಸಗಿ ನಿ । ಶ್ಚಿಂತಾತ್ಮ ಗುರುವ ಬೀಳ್ಕೊಂಡು ॥
ಶಾಂತದೃಷ್ಟಿಯೊಳು ಕಣ್ದೆರೆದನು ಲೋಕದ । ಸಂತೋಷ ಕಣ್ದೆರೆವಂತೆ ॥ ೧೦ ॥

ಪಾದಕೆರಗಿದರಬಲೆಯರವರನೊಲಿ । ದಾದರಿಸುತ ಘಮ್ಮನೆದ್ದಾ ॥
ಆ ದೇವಿಯರುಗೂಡಿ ವದನಮಜ್ಜನಗೈದು । ಹೋದನಾಗಳೆ ಜಿನಾಲಯಕೆ ॥ ೧೧ ॥

ಕ್ಷತ್ರಿಯಕರ್ಮದ ದೇವತಾರ್ಘ್ಯವನಿತ್ತು । ಸ್ತೋತ್ರಜಪವನೊಲ್ದು ಮಾಡಿ ॥
ಸುತ್ರಾಮನಂತೆ ಪೂಜಿಸಿದನು ಜಿನನ ಚಾ । ರಿತ್ರಶುದ್ಧಾಂಗಿಯರ್ವೆರಸಿ ॥ ೧೨ ॥

ಸಲಿಲಗಂಧಾಕ್ಷತಪುಷ್ಪನೈವೇದ್ಯಪ್ರ । ಜ್ವಳದೀಪಧೂಪಸತ್ಫಲವಾ ॥
ಕಲಿಲಾರಿಗರ್ಚಿಸಿದನು ಭಕ್ತಿ ಮಿಗೆ-ಹೊರ । ಗುಲಿವ ಮಂಗಲವಾದ್ಯವೆಸೆಯೆ ॥ ೧೩ ॥

ಸುರುಚಿರಾರ್ಘ್ಯವನೆತ್ತಿ ಶಾಂತಿಧಾರೆಯ ಮಾಡಿ । ಬಿರಿಮುಗುಳ್ಮಳೆಯ ಮೇಲ್ಗರೆದು ॥
ಬೆರಕೆವರಲ ರತ್ನವೃಷ್ಟಿಯ ಮಾಡಿದ । ನಿರದೆಲ್ಲ ಜಯಜಯವೆನಲು ॥ ೧೪ ॥

ಸೌಂದರಿಯರುಗೂಡಿ ಸಿದ್ಧಸೇಸೆಯನಾಂತ । ನಿಂದುದಾಗಳೆ ವಾದ್ಯನಿನದಾ ॥
ಸಂದುದು ನಿನ್ನಿನ ವ್ರತವೆಂದು ದೇವನ । ಮುಂದಿರಿಸಿದನು ಕಂಕಣವಾ ॥ ೧೫ ॥

ಚೆನ್ನೆಯೊರ್ವಳ ಕೈಯೊಳೆಲ್ಲರ್ಗೆ ಸಲವಾಗಿ । ನಿನ್ನೆ ಕಟ್ಟಿರ್ದ ಕಂಕಣವಾ ॥
ಮನ್ನಿಸಿ ಸಡಲಿಸಿದನು ಮತ್ತೆ ನೋಡಿದ । ತನ್ನ ರಾಣಿಯರನೆಲ್ಲರನು ॥ ೧೬ ॥

ಹಲಬರ ಮೊಗ ತಳತಳಿಸುತೊಪ್ಪಿದುವಲ್ಲಿ । ಕೆಲಬರ ವದನ ಬಾಡಿದುವು ॥
ಎಲೆಲೆಯಿವರು ಪ್ರಥಮೋಪವಾಸದ ಪೆಂಗ । ಳಲಸಿದರೆಂದಿಷ್ಟು ನೊಂದಾ ॥ ೧೭ ॥

ಮೊದಲುಪವಾಸದಭ್ಯಾಸವುಳ್ಳವರು ಕಂ । ದಿದುದಿಲ್ಲ ಮತ್ತಿವರಿಂದು ॥
ಸದರವೆಂದುಪವಾಸವ್ರತವ ಕೈಕೊಂಡು ಕಂ । ದಿದರೆಂದು ನುಡಿಯದೆ ನೆನೆದಾ ॥ ೧೮ ॥

ಮತ್ತೆ ಬಾಯ್ದೆರೆದೆಲೆ ವನಿತೆಯರಿರ ಹೋಗಿ । ಹೊತ್ತಾಯ್ತು ಪಾರಣೆಗೆಂದಾ ॥
ಅತ್ತೆಗೆರಗಿ ಮುನ್ನ ಪಾರಣೆಗೈವನು । ವೃತ್ತಿಗುಜ್ಜುಗಿಸಿದರವರು ॥ ೧೯ ॥

ತರುಣಿಯರಿರ ಕೇಳಿರಿಂದು ನೀವಮ್ಮಾಜಿ । ಯರ ಮನೆಗಡಿ*ಯಿಡುವಾಗ ॥
ಪಿರಿದುಹೊತ್ತಾಗದೆ ಹೊಸವ್ರತಿಕೆಯರೊಡ । ವೆರಸಿ ಪಾರಣೆಮಾಡಿರೆಂದಾ ॥ ೨೦ ॥

ಮೊತ್ತಮೊದಲೊಳೊಬ್ಬರುಪವಾಸವನು ಮಾಡಿ । ತುತ್ತಿಡುವಾಗ ಬಲ್ಲವರು ॥
ಒತ್ತಿನೊಳಿರ್ದು ಪಾರಣೆ ಗೆಯ್ಸಬೇಕು ಸು । ವೃತ್ತರ ಚರಿತವಿದೆಂದಾ ॥ ೨೧ ॥

ಆಗಲಂತುಟೆ ಮಾಳ್ಪೆವೀ ಹೊಸಹೆಂಗಳೊಂ । ದಾಗಿ ಪಾರಣೆಮಾಳ್ಪೆವದಕೆ ॥
ಬೇಗದೊಳೈದಿ ನಮ್ಮತ್ತೆಯಮ್ಮನಡಿಗಳ್ಗೆ । ಬಾಗಿ ಬಂದಪೆವೆಂದರವರು ॥ ೨೨ ॥

ಏತಕೀ ಯೋಚನೆ ಹೊಸವ್ರತದುಪವಾಸ । ದಾತಂಕವಾರ್ಗೆ ಭಾಪೆಂದು ॥
ಮಾತುಳಾನಿಯ ಕಂಡು ಬಹವೇಳಿರೆಂದು ಮ । ತ್ತಾ ತರುಣಿಯರು ನುಡಿದರು ॥ ೨೩ ॥

ಧೈರ್ಯವಂತೆಯರು ನೀವಹುದು ಮೇಲ್ತಾಗಿನ । ಕಾರ್ಯಕಾಣಿಸದಿನ್ನು ನಿಮಗೆ ॥
ಸೂರ್ಯನ ಬಿಸಿಲುಬ್ಬಿ ಪಿತ್ತ ಕೆರಳದೆ ಚಾ । ತುರ್ಯದನ್ನವ ಕೊಳ್ಳಿರೆಂದಾ ॥ ೨೪ ॥

ಸರ್ವದಿವಸ ಕಾಣ್ಬುದಿಲ್ಲವತ್ತ್ಯಮ್ಮನ । ಪರ್ವದಿ ಕಾಣದೆಂತಿಹೆವು ॥
ಸರ್ವದಿವಸ ಹೋಗಿ ಕಾಣಿರಿಂದಿಗೆ ಬೇಡ । ಸರ್ವಜ್ಞಮತದೋಜೆಯೆಂದಾ ॥ ೨೫ ॥

ಎಂದಿನಂತಾವೈದದಿದ್ದರತ್ತ್ಯಮ್ಮಾಜಿ । ಗಿಂದು ನೋವಾಗದೆ ದೇವಾ ॥
ಎಂದ ಮಾತನು ಕೇಳದಿರಲು ನಿಮ್ಮತ್ತೆಯು । ಕಂದ ನೋಯನೆ ಹೋಗಿರೆಂದಾ ॥ ೨೬ ॥

ನಗುತ ಮತ್ತವರು ಯಶಸ್ವತಿದೇವಿಯ । ರಿಗೆ ದೂರವಾದೆವಿಂದೆನಲು ॥
ಮಗನ ಮಾತನು ಕೇಳ್ದರಾ ಯಶಸ್ವತಿದೇವಿ । ಮಿಗೆ ಮೆಚ್ಚುವಳು ಹೋಗಿರೆಂದಾ ॥ ೨೭ ॥

---

* ಯಿಡಬೇಡ

ಹೊಸವ್ರತಿಕೆಯರೊಡಗೂಡಿ ಕೆಲಬರು ಭೋ । ಜಿಸ ಪೋಗಿ ಕೆಲರವ್ವೆನೆಡೆಗೆ ॥
ಒಸೆದೆಯ್ದಿರೆವ್ವ ಮನೆಯೊಳವ್ವನಿಂದು ಭೋ । ಜಿಸುವಂತು ಮಾಳ್ಪೆ ನಾನೆಂದಾ ॥ ೨೮ ॥

ಅದಕೆಲ್ಲರೊಡಬಟ್ಟು ಕೆಲಬರು ಪಾರಣೆ । ಗೊದವಿ ಪಯಣವ ಮಾಡಿದರು ॥
ಅದನರಿದವರ ತನ್ನೊತ್ತಿಗೆ ಕರೆದು ಭೂ । ಸುದತೀಶ ಬುದ್ಧಿವೇಳಿದನು ॥ ೨೯ ॥

ಕೇಳಿರೌ ಮೊದಲುಪವಾಸವೆಂಬುದು ಮಹಾ । ಜ್ವಾಲೆದೋರುವುದು ಸುಡುವುದು ॥
ತಾಳಿದ ಮೇಲದು ಸದರವಹುದು ಕರ್ಮ । ಧೂಳಿಯೆಲ್ಲವು ಭಸ್ಮವಹುದು ॥ ೩೦ ॥

ಒಂದೊಂದುದಿನದುಪವಾಸವೆಂಬರೆ ಇದು । ಕೊಂದು ಕೂಗುವುದು ಕರ್ಮಗಳಾ ॥
ಮುಂದೆ ಕೈವಲ್ಯವಹುದು ಸಾವುಹುಟ್ಟಿನ । ದಂದುಗವಳಿದಿರಬಹುದು ॥ ೩೧ ॥

ಮುಕ್ತಿಗೆ ನಿರ್ಭೇದಭಕ್ತಿ ಬೇಕದಕೆ ವಿ । ರಕ್ತಿ ಬೇಕಾ ವಿರಕ್ತತೆಗೆ ॥
ಶಕ್ತಿಗೆ ತಕ್ಕ ತಪಸು ಬೇಕು ತಪಸಿಗೆ । ಯುಕ್ತಿ ಬೇಕೆಲೆ ಸತಿಯರಿರಾ ॥ ೩೨ ॥

ಉರಿತಟ್ಟಿದಂತಿಹುದುಪವಾಸವಿದ್ದ ನ್ಯೆ । ತರಹರದಿಂದುಣಬೇಕು ॥
ಎರಡೆಂಟು ತುತ್ತುಕೊಂಬಷ್ಟರೊಳಗೆ ಮಂಡೆ । ತಿರುಗುವುದಾಗಳೆಚ್ಚರಿಕೆ ॥ ೩೩ ॥

ಅನ್ನವಿಳಿಯದು ಪಾನದ ಮೇಲೆ ರುಚಿಯಹು । ದನ್ನವ ಕಿರಿಕಿರಿದಾಗಿ ॥
ಭಿನ್ನರುಚಿಯೊಳುಂಡು ಮತ್ತೆ ನೀರ್ಗೊಳಬೇಕು । ಮುನ್ನಲೆ ನೀರ್ಗೊಳ ಸಲ್ಲ ॥ ೩೪ ॥

ಹೊಸಮಡಕೆಗೆ ನೀರು ಮುಟ್ಟೆ ಚುಯ್ಯೆಂಬಂತೆ । ಹೊಸತುತ್ತನಿಡುವಾಗ ಮಂಡೆ ।
ಮಸಗಿ ಚುಯ್ಯೆಂಬುದು ನೋಡಿದತ್ತತ್ತ ಕಾ । ಣಿಸುತಿಹುದರಸಿನವರ್ಣಾ ॥ ೩೫ ॥

ಪ್ರಥಮದೊಳುಪವಾಸ ನೋಯಿಸುವುದು ಮತ್ತೆ । ಪೃಥುಳಸುಖವ ತೋರ್ಪುದಾಗ ॥
ಶಿಥಿಲವಹುದು ಕರ್ಮ ಶಿವವಹುದೆಂದರಿ । ಮಥನ ಬೋಧಿಸಿದನೋಜೆಯೊಳು ॥ ೩೬ ॥

ತತ್ತರಬಡದೆ ಕಂಗೆಡದೆ ಭುಕ್ತಿಯ ಕಿರಿ । ತುತ್ತುತುತ್ತಾಗಿ ಕೈಕೊಂಡು ॥
ತುತ್ತಿಗೆ ತಕ್ಕ ಪಾನವ ಕೊಂಡು ಸುಖಿಸಿರೆಂ । ದತ್ತ ಬೀಳ್ಕೊಟ್ಟನು ಕೆಲರಾ ॥ ೩೭ ॥

ಹೋಗುವವರು ಕರೆದಿದ್ದವರ್ಗೇಕಾಂತ । ವಾಗಿ ನುಡಿದರದಕಿವರು ॥
ಆಗಲಾಗಲಿ ಹೋಗಿರಾರುಸೂಳೆನಲದ । ನಾಗಳೆ ತಿಳಿದನಾ ರಾಯಾ ॥ ೩೮ ॥

ವಿಾರದತ್ತೆಯರಿಗಿಂದೆವ್ವ ಪತಿಗೆ ನೀವು । ಮೂರುಸೂಳೆರಗಿಯೆಂದೆನಲು ॥
ಆರುಸೂಳೆರಗುವೆನೆಂದರಿಂತಿವರೆಂದು । ನೀರನರಿದು ಸುಮ್ಮನಿರ್ದಾ ॥ ೩೯ ॥

ಉಳಿದ ಪೆಂಗಳನೆರಡೊಡ್ಡುಮಾಡಿದನೆನ್ನ । ಬಳಿಯೊಳು ಕೆಲರಿರಿಯೆಂದಾ ॥
ಕೆಲಬರವ್ಮಾಜಿಯ ಮನೆಗೈದಯೆಂದು ಕಾ । ಶಲನಿಧಿ ಪಯಣಮಾಡಿದನು ॥ ೪೦ ॥

ಮುನಿಭುಕ್ತಿಯಾದ ಮೇಲಾನು ಬಂದವ್ಮಾಜಿ । ಯನು ಬಿಜಯಂಗೈಸಿ ತಹೆನು ॥
ಅನಿತು ಕಾಲಂಬರ ನೀವಲ್ಲಿ ಹೋಗಿರಿ । ಯೆನುತ ಕಳುಹಿದನು ಕೆಲರಾ ॥ ೪೧ ॥

ಮಿಕ್ಕ ನಾರಿಯರ ಕರೆದು ನೀವು ನಮ್ಮ ಗೃ । ಹಕ್ಕೆ ಹೋಗಿರಿ ಮುನಿಗಳನು ॥
ಚಿಕ್ಕನೆ ನಿಲಿಸಿ ತಂದಪೆನು ನಾನೆಂದು ಮ । ತ್ತಕ್ಕರು ಮಿಗೆ ಕಳುಹಿದನು ॥ ೪೨ ॥

ಜಿನಬಿಂಬಕೆರಗಿ ಮುನೀಂದ್ರರ ತರಲೆಂದು । ಜನನಾಥ ನಡೆದನೋಜೆಯೊಳು ॥
ಅನುರಾಗದಿಂದ ಹೆಣ್ಣುಗಳು ತಮ್ಮತ್ತೆಯು । ಮನೆಗೈದುವಾಗಳೇನೆಂಬೆ ॥ ೪೩ ॥

ಈ ಸೊಸೆವೆಂಗಳಿತ್ತಡಿಯಿಡುತಿರಲುಪ । ವಾಸವನಾ ದೇವಿ ತನ್ನ ॥
ವಾಸದೊಳಿಹ ಜಿನವಾಸದೊಳೆಸಗಿ ಸು । ಖಾಸನದೊಳಗಿರ್ದಳತ್ತ ॥ ೪೪ ॥

ಅಜ್ಜಿಕೆಗಳುಗೂಡಿಯಿರುಳ ಕಳೆದು ಮುಖ । ಮಜ್ಜನಗೈದೊಲವಿಂದ ॥
ಸಜ್ಜಿನಾರ್ಚನೆಗೈದು ಬಂದು ಮಂಟಪದಲ್ಲಿ । ಸಜ್ಜನಸ್ತುತೆಯಿರ್ದಳಾಗ ॥ ೪೫ ॥

ಪಾರಣೆಯಿಂದು ನಮ್ಮಮ್ಮಾಜಿಗೆಂದು ಕು । ಮಾರರು ದಿಕ್ಕುದಿಕ್ಕಿಂದ ॥
ಸಾರವಸ್ತುಗಳುಲುಪೆಯ ಕಳುಹಿದರವ । ನಾರೈವುತಿರ್ದಳಾ ಜನನಿ ॥ ೪೬ ॥

ಸೌಂದರಾಂಗದ ನೂರುಮಂದಿ ಸುತರೊಳಾರು । ಮಂದಿ ದೀಕ್ಷೆಯ ಕೊಂಡರುಳಿದ ॥
ನಂದನರಿದ್ದರು ರಾಜ್ಯದೊಳವರೂರ್ಗ । ಳಿಂದ ಬಂದುವು ಸುವಸ್ತುಗಳು ॥ ೪೭ ॥

ಬೆಳುವಟ್ಟೆ ಗಂಧ ಕರ್ಪೂರ ಪನ್ನೀರು ಬೆ । ಳ್ಳಿಲೆ ಮೊದಲಾದುವ ಸುತರು ॥
ಕಳುಹಿದರಮ್ಮನ ಪಾರಣೆಗುಚಿತಮಂ । ಗಲವಸ್ತುಗಳ ತವತವಗೆ ॥ ೪೮ ॥

ಪಟ್ಟದರಸು ಭರತೇಶ್ವರ ಮುಂದಣ । ಪಟ್ಟಕೆ ಭುಜಬಲಿರಾಜ ॥
ತುಟ್ಟಿಪೌದನಪುರದೊಳಗಿರುತಿಹನಾತ । ನಟ್ಟಿದನುಚಿತದುಲುಪೆಯಾ ॥ ೪೯ ॥

ತಂಗಿ ಸುನಂದಾದೇವಿಯ ಮಗನಾತ । ನಂಗಜನಾ ಕೃತಯುಗಕೆ ॥
ಇಂಗಿತವಸ್ತುವ ಹಿರಿಯಮ್ಮನುಪವಾಸ । ದಂಗವರಿದು ಕಳುಹಿದನು ॥ ೫೦ ॥

ಮಣಿಖಚಿತದ ತೂಗುಮಂಚ ಮೌಕ್ತಿಕದ ಬೀ । ಸಣಿಗೆ ಮಾಣಿಕದ ನೀರ್ಗಿಂಡಿ ॥
ಎಣೆಯಿಲ್ಲದುತ್ತಮವಸ್ತ್ರಕರ್ಪೂರವ । ತಣಿವಷ್ಟು ಕಳುಹಿದ್ದನಾಗ ॥ ೫೧ ॥

ರಾಜಿಸುವುಲುಪೆಯನೊಪ್ಪಿಸಿ ಭುಜಬಲಿ । ರಾಜನ ಮನೆಯ ಹೆಗ್ಗಡತಿ ॥
ಆ ಜಗನ್ಮಾತೆಗೆರಗಿದಳಾಕೆಯೊಳು ತ । ನೂಜನ ಸ್ಥಿತಿಯ ಕೇಳಿದಳು ॥ ೫೨ ॥

ಏನು ಲೀಲೆಯೊಳು ಚಿಕ್ಕಣ್ಣನಿಹನು ತನ್ನ । *ಮೀನಲೋಚನೆಯರೆಂತಿಹರು ॥
ತಾನು ದೊಡ್ಡಣ್ಣನಂತುಪವಾಸಗೈವನೊ । ಮಾನಿನಿ ಹೇಳೆಂದಳಾಗ ॥ ೫೩ ॥

ಹಿರಿಯ ಸ್ವಾಮಿಯವೊಲು ಬಹಳವಿಲ್ಲೆಮ್ಮ ಭೂ । ವರನೇಕಭುಕ್ತಮುಂತಾದ ॥
ಚರಿತದೊಳಿಹನು ತನ್ನಂತೆ ಪೆಂಡಿರು ಮೃದು । ಚರಿತದೊಳಿಹರೆಂದಳವಳು ॥ ೫೪ ॥

---

* ಮಿನಾಸಾಕ್ಷಿಯರೆಂತು ಟಹರು

ತಾಯಿ ಸುನಂದಾದೇವಿಯ ವರ್ತನ । ದಾಯುವೆಂತಿಹುದು ಹೆಗ್ಗಡತಿ ॥
ಕಾಯದಂಡನೆ ವ್ರತಜಪದೊಳಗವರು ನಿ । ರ್ಮ್ಮಾಯ್ಯಾರವಿಡಿದಿಹರಮ್ಮಾ ॥ ೫೫ ॥
ಪಿರಿದು ಲೇಸಾಯ್ತೆಂದಳೊಡನೆ ಸೇವಕಿಯರ । ಕರೆದೀಕೆಗಜ್ಜಿಕೆಗಳಿಗೆ ॥
ಚರಿಗೆಯಾದಾ ಕ್ಷಣದೊಳಗುಣಬಡಿಸಿರೆಂ । ದೊರೆದಳಾ ಕಾರುಣ್ಯಶೀಲೆ ॥ ೫೬ ॥

ಕಂಡಳು ದೂರದೊಳಗೆ ಬಹ ಸೊಸೆಯರ । ತಂಡವನಾ ಸಮಯದೊಳು ॥
ಕಂಡರಾ ಸೊಸೆಯರತ್ತೆಯ ರೂಪ ಕಂಡಾಗ । ಳುಂಡಂತೆ ತಣಿದರೇನೆಂಬೆ ॥ ೫೭ ॥
ಅತ್ತೆಯ ಕಾಣುತ ನಗುತ ನಗುತ ನಲಿ । ದೊತ್ತಿಗೆ ಸೊಸೆಯರೈದಿದರು ॥
ಒತ್ತಿಗೆ ಬಹ ಸೊಸೆಯರ ಕಂಡು ಮನಹಿಗ್ಗಿ । ತತ್ತೆಯಿರ್ದಳು ನಸು ನಗುತ ॥ ೫೮ ॥
ಮುಟ್ಟಲೊತ್ತಿಗೆ ಬಂದು ಜಿನಪಾದಪುಷ್ಪದ । ಬಟ್ಟಲ ನೀಡಿದರೊಸೆದು ॥
ಬೊಟ್ಟನಿಂದಾ ದೇವಿ ತೆಗೆದುಕೊಂಡಳು ಮುಡಿ । ಗಿಟ್ಟುಕೊಂಡಳು ಸುಭಕ್ತಿಯೊಳು ॥ ೫೯ ॥
ನಾವು ಕಂಡಭಿಷೇಕಪೂಜೆಗತ್ಯಮ್ಮಾಜಿ । ನೀವೊಡಂಬಡಿಯೆಂದರೊಡನೆ ॥
ಆ ವಚನಕೆ ನಗುತಿಚ್ಛಾಮಿಯೆಂದಳಾ । ದೇವಿ ತನ್ನಯ ಸೊಸೆಯರೊಳು ॥ ೬೦ ॥
ಒಸೆದು ತಮ್ಮತ್ತೆಯ ಪಜ್ಜೆಗಳೊಳು ಪೆರೆ । ನೊಸಲನಿಟ್ಟೆರಗಿದರೆಲ್ಲ ॥
ಸುಸುಖಸುಶೀಲ ತಪ್ಪದೆ ಬಾಳಿರೆಂದಾಗ । ಸೊಸೆಯರ ಹರಸಿದಳೊಲಿದು ॥ ೬೧ ॥
ಯುವತಿಯರರೆಬರು ಕಾರ್ಯಾರ್ಥವಾಗಿ ನಿ । ಮ್ಮವನತಿಗಿಂದೆಯ್ದಿತಿಲ್ಲ ॥
ಅವರು ಮಾಡುವ ಪರ್ವಭಕ್ತಿಯಿದಿಂದೆಲ್ಲ । ತವತವಗೊಡನೆರಗಿದರು ॥ ೬೨ ॥
ಕುಳಿತರೆಲ್ಲರು ಸುತ್ತಿಮುತ್ತಿಕೊಂಡತ್ತೆಯ । ಬಳಸಿನೊಳಾ ಮನೆತುಂಬಿ ॥
ಹಳಹಳಚನೆ ನುಡಿದಾಡಿದರೊಪ್ಪುಚ್ಚಿ । ವಿಳಸಿತಧರ್ಮಚಿಂತನೆಯಾ ॥ ೬೩ ॥

ಸೊಸೆಯರೊಳಗ ನೋಳ್ಪೆನೆಂದು ಯಶಸ್ವತಿ । ನಸು ನಗೆಯಿಂದ ಬಾಯ್ದೆರೆದು ॥
ಹೊಸಹರೆಯದೊಳೇಕೆ ನೀವಿಂತು ತನುವ ದಂ । ಡಿಸುವಿರೌ ಹಾಯೆಂದಳೊಡನೆ ॥ ೬೪ ॥
ನಿವಗೆ ಕೆಲಸವಿಲ್ಲ ನಿಮ್ಮಾಣ್ಮಗಾದರೆ । ಸುವಿವೇಕಯೆಳ್ಳನಿತಿಲ್ಲ ॥
ಅವನಿಯನಾಳುತ ಮುನಿಯಂತೆ ನಡೆವುದಿ । ದವಿವೇಕಿಗಳ ನಡೆಯಲ್ತೆ ॥ ೬೫ ॥
ತನಗೆ ಭೋಗದೊಳಿಚ್ಛೆಯಿಲ್ಲದಿರಿರಲಿ ಮಾ । ನಿನಿಯರ ಹಸಿಯಿಸಿ ತಾನು ॥
ಇನಿತು ಪ್ರಯಾಸವ ಮಾಡುವುದುಚಿತವೆ । ಜಿನ ಜಿನಯೆಂದಳಾ ದೇವಿ ॥ ೬೬ ॥
ನವಗೇನು ಪ್ರಯಾಸ ಅತ್ತ್ಯಮ್ಮವೊಂದೊಂದು । ದಿವಸ ನಿರ್ಭುಕ್ತಿ ತಿಂಗಳಿಗೆ ॥
ನವಪ್ರಾಯಶಕ್ತಿಯೊಳಾತ್ಮಾರ್ಥವಾಗಿ ಮಾ । ಡುವುದೊಳ್ಪಿತಲ್ತೆ ಸುವ್ರತವಾ ॥ ೬೭ ॥
ಸುವಿವೇಕಿಯಲ್ಲೆಂದು ನೀವಾಡಬಹುದಾತ್ಮ । ಭವನಾದಕಾರಣ ನೃಪನಾ ॥
ದಿವಿಜರು ಪೊಗಳದಿರ್ಪವರಾರು ನಿಮ್ಮಯ । ಕುವರ ಮಹಾಪ್ರೌಢನೆಂದು ॥ ೬೮ ॥

ಅದರಿಂದ ನಮಗೆ ಪ್ರಯಾಸವಿಲ್ಲತ್ತ್ಯಮ್ಮ । ಮದಮುಖನಲ್ಲ ನಿಮ್ಮಣುಗಾ ॥
ಇದು ಮಹಾಸುಖ ನವಗೆಂದರಂತದ ಕೇಳ್ದ । ಮುದವೆತ್ತಳಾ ಪುಣ್ಯಜನನಿ ॥ ೧೯ ॥

ಒಳ್ಳಿತಾದುದು ಹೆಣ್ಣುಗಳಿರ ನಿಮ್ಮರಸನ । ಗೆಲ್ಲಕೆ ನೀವು ಬೀಗುವಿರಿ ॥
ಸಲ್ಲೀಲೆಯೊಳು ವ್ರತದೊಳು ಸುಖವಿರಿಯೆಂದ । ಳೆಲ್ಲರಿಗದು ತಾನು ಹರಕೆ ॥ ೨೦ ॥

ನಮ್ಮ ಮನೆಯೊಳು ಪಾರಣೆಮಾಡಿರೆಂಬೆನೆ । ಸಮ್ಮಾನ ನಿವಗದು ಬಹಳ ॥
ಗಮ್ಮನೆ ಜೋಲಿಮಾಡದೆ ಹೋಗಿ ನೀವಿನ್ನು । ನಿಮ್ಮ ಮಂದಿರಕೆಂದಳೊಡನೆ ॥ ೨೧ ॥

ಇಂದು ಭೂಪತಿ ನಿಮ್ಮ ಪಂತಿಯೊಳಗೆ ತನ್ನ । ಮಂದಿರದಲ್ಲಿ ಪಾರಣೆಯಾ ॥
ಚಂದದಿ ಮಾಳ್ಪೆನೆಂದನು ತಾನು ಬಹನಿಲ್ಲಿ । ಗೆಂದು ಬಿನ್ನವಿಸಿದರಾಗ ॥ ೨೨ ॥

ಆರ್ಯರಿಗನ್ನವನಿತ್ತು ತಾನೈತಹ । ಪರ್ಯಂತ ನಿಲ್ಲಿರಿಯೆಂದು ॥
ಮರ್ಯಾದೆಗೊಟ್ಟೆಮ್ಮ ಕಳುಹಿದನೆಂದು ತಾ । ತ್ಪರ್ಯವ ತೋರಿ ನುಡಿದರು ॥ ೨೩ ॥

ಎಂದರೆ ಮಗನುಪವಾಸದೊಳಿಲ್ಲಿಗೆ । ಬಂದಪನೆಂದಿನ್ನು ನಡೆದು ॥
ನೊಂದಪನೆಂದು ತಾಯಲ್ಲವೆ ಸುತಮೋಹ । ದಿಂದ ತಾನೆದ್ದಳಾ ಕ್ಷಣವೆ ॥ ೨೪ ॥

ಭರತಣ್ಣನೆಮ್ಮ ಮನೆಯೊಳುಣ್ಬನಾದರೆ । ಬರಬೇಕು ತನ್ನಿಕ್ಕೆಗೆನ್ನಾ ॥
ಕರೆಯಲೇತಕೆ ಬನ್ನಿರೆಂದಾಗ ಸೊಸೆಯರ । ಕರೆದುಕೊಂಡೆದ್ದಳಾ ಮಾತೆ ॥ ೨೫ ॥

ಆಪ್ತಳೊಬ್ಬಳ ಕರೆದಜ್ಜಿಯರಿಗೆ ನೋಡಿ । ತೃಪ್ತಿಗೈಸೆಂದು ಬೀಳ್ಕೊಟ್ಟು ॥
ಪ್ರಾಪ್ತವಂಶದ ಸೊಸೆಯರುಗೂಡಿ ಮಗನ ಸು । ಖಾಪ್ತಮಂದಿರಕೆ ನಡೆದಳು ॥ ೨೬ ॥

ಅಡಿಗಡಿಗೊಬ್ಬೊಬ್ಬಸೊಸೆಯರ ಕೈಲಾಗು । ವಿಡಿವುತ ಹಲವುಸೊಸೆಯರ ॥
ನಡುವೆ ಮೆಲ್ಲನೆ ನಡೆತಂದಳಾ ಷಟ್ಖಂಡ । ದೊಡೆಯನ ತಾಯಿ ಜೋಕೆಯೊಳು ॥ ೨೭ ॥

ಜನನಿಯೆಯ್ತರುತಿರ್ದಳೆತ್ತಲಾ ನೃಪನತ್ತ । ಮುನಿಭುಕ್ತಿಗೈಸಿ ಬೀಳ್ಕೊಟ್ಟು ॥
ವನಿತೆಯರೊಡಗೂಡಿ ಬರುತಿದ್ದನಮ್ಮನ । ಮನೆಗಾಗ ಕಂಡನಿದಿರೊಳು ॥ ೨೮ ॥

ಜಿನ ಜಿನ ನೋಡು ನೋಡಮ್ಮಾಜಿ ತಾವಿಂದು । ನನಗಿದಿರ್ಗೈತಹ ಪರಿಯಾ ॥
ಮನೆಮುಟ್ಟ ಬಂದೆನು ಬಿಜಯಂಗೈಸಿ ತ । ಪ್ಪೆನು ಮೋಸವಾಯ್ತು ಹೋಯೆಂದಾ ॥ ೨೯ ॥

ನಾಂ ತಡೆಯದೆ ಬಪ್ಪೆ ನೀಂ ಹೋಗಿರಿಯೆಂದು । ನಿಂತು ಕಳುಹೆ ಹೋದರವರು ॥
ಕಾಂತೆಯರೊ ಕಡು ಭ್ರಾಂತೆಯರೊಯೆಂದು । ಕಂತುಸನ್ನಿಭ ನೊಂದು ನುಡಿದಾ ॥ ೩೦ ॥

ಬಿನ್ನವಿಸಿದೆವವರ್ತಮ್ಮ ಪುತ್ರಗೆ ಬಿಸಿ । ಲಿನ್ನಹುದೆಂದೆದ್ದರೊಡನೆ ॥
ಮುನ್ನೀರು ಚಂದ್ರನತ್ತೇಳ್ವಾಗ ತಡೆವ ಸಂ । ಪನ್ನರಾರೆಂದುಸುರಿದರು ॥ ೩೧ ॥

ನೊಂದುಕೊಳ್ಳದಿರಣ್ಣ ನನ್ನ ಮನಸಿಗಿಚ್ಛೆ । ಬಂದಾಗ ಬಂದೆ ನಾನಿದಕೆ ॥
ಕುಂದೇನು ನಿನ್ನ ನಾರಿಯರು ಬಂದಾಗ ನೀ । ಬಂದುದಲ್ಲವೆಯೆಂದಳಾಕೆ ॥ ೩೨ ॥

ಸಾರಲೈತಂದು ನಿವಾಳಿಯಿಟ್ಟನು ಪದ । ವಾರಿಜಕೆರಗುವೆನೆಂದು ॥
ಭೂರಮಣ ತಲೆವಾಗಲೆಡೆಯೊಳೆತ್ತಿ । ಸಾರಾಂಗಿ ತಕ್ಕೈಸಿದಳು ॥ ೮೩ ॥

ಇಂದ್ರೋ ಭವ ಪುನರಿಂದ್ರಪೂಜ್ಯೋ ಭವ । ಸಾಂದ್ರಸುಖೀ ಭವಯೆಂದು ॥
ಮಂದ್ರವಾಕ್ಯದೊಳು ಮಗನ ಹರಸಿದಳಾ ಜಿ । ತೇಂದ್ರಿಯಚರಿತೆಯ ಜನನಿ ॥ ೮೪ ॥

ಕೂಡಿದಿರ್ಬಂದ ಸೊಸೆಯರೆಲ್ಲರೆರಗಲು । ನೋಡುತೊಲಿದು ಹರಸಿದಳು ॥
ನೀಡಿದ ಮಗನ ಕೈಲಾಗುವಿಡಿದು ಮಾತ । ನಾಡುತ ನಡೆದಳಾ ಮಾತೆ ॥ ೮೫ ॥

ಕೇಳ್ದಿಯಾ ದೊಡ್ಡಣ್ಣ ಚಿಕ್ಕಣ್ಣ ಜಾಣ್ಮೆಯ । ತಾಳ್ದು ಮಾಡುವುದೊಂದು ತಪಸಾ ॥
ಕೇಳ್ದದಿಲ್ಲಮ್ಮಾಜಿ ಬುದ್ಧಿಗಲಿಸಿ ನೀವು । ಕೇಳ್ದಭಿಪ್ರಾಯವನೆಂದಾ ॥ ೮೬ ॥

ವಸ್ತುಗಟ್ಟಳೆಯೇಕಭುಕ್ತಿವೊಮ್ಮೆಗೆ ರಸ । ವಸ್ತುಗಳನು ತೊರೆವ ಗಡಾ ॥
ದುಸ್ತರದುಪವಾಸವಿಲ್ಲ ಗಡಾತನ । ಪ್ರಸ್ತ ಲೇಸಲ್ಲವೆ ಮಗನೆ ॥ ೮೭ ॥

ಅಹುದಮ್ಮ ನಿಮ್ಮ ನಿರೂಪದ ಬಗೆ ಕಾಣ । ಬಹುದು ನೀವಾತನಂತೆನ್ನಾ ॥
ವಿಹರಿಸೆಂದರಿಪುವ ಪರಿಯಿದು ನಾನೀಗ । ಬಹಳವಾಗೇನ ಮಾಡಿದೆನು ॥ ೮೮ ॥

ಪರ್ವನಾಲ್ಕರೊಳಾವುದಾನೊಂದುಪರ್ವವ । ಪೂರ್ವಗೊಂಡುಪವಾಸವಿಹೆನು ॥
ಸರ್ವಥಾ ಯಮವಲ್ಲ ನಿಯಮ ಮತ್ತದರೊಂದು । ಬೀರ್ವು ತಿಂಗಳಿಗೊಂದು ದಿವಸಾ ॥ ೮೯ ॥

ಯಮವೆಂಬುದದು ಜನ್ಮಮುಟ್ಟಲಾಚರಿಪ ಸಂ । ಯಮವದರಿಂದದು ಬಿರಿಸು ॥
ಮಮತೆದೋರಿದೊಡೆ ಮಾಡುವ ಮತ್ತೆ ಬಿಡುವ ಸಂ । ಯಮವಲ್ತೆ ನಿಯಮವೇನರಿದು ॥ ೯೦ ॥

ಇದಕೆ ನಿವಗೆಯಿಷ್ಟು ಯೋಚನೆ ನಮಗಿದು । ಸದರವಮ್ಮಾಜಿ ನನ್ನಾಣೆ ॥
ಮದನನೊಲ್ದೇಕಭುಕ್ತದೊಳಿಹ ಗಡ ರಾಜ್ಯ । ಪದಕಿಷ್ಟು ಬೇಡವೆಯೆಂದಾ ॥ ೯೧ ॥

ನಿನಗದು ಸದರವಾದರೆ ನೀನು ಧರಿಸುಯೆ । ನ್ನನುಜರಾತ್ಮಜೆಯರ ನೀನು ॥
ಅನಶನಗೈಸಿ ನೋಯಿಸಲೇತಕೆಂದಿಷ್ಟು । ಬಿನದವ ನುಡಿದಳಾ ಜನನಿ ॥ ೯೨ ॥

ಮಿನುಗಿ ನಕ್ಕನು ರಾಯನದಕೆ ಕೇಳಮ್ಮ ನಿ । ನ್ನನುಜರ ಸುತೆಯರು ನಿನ್ನಾ ॥
ತನುಜನಿಂದಧಿಕವೆ ನೋಡೊಂದುಸೊಕ್ಕನೆಂ । ದನು ವಿನೋದಾರ್ಥ ಕೋವಿದನು ॥ ೯೩ ॥

ಅಕ್ಕನ ಮಗ ಹಸಿವಾಗ ತಮ್ಮಂದಿರ । ಮಕ್ಕಳು ಹಸಿದಿರಬೇಡ ॥
ಅಕ್ಕನಿಂದಧಿಕವೆ ತಮ್ಮಂದಿರೆಂದಿಷ್ಟು । ನಕ್ಕನೊಡನೆ ಲೇಸ ನುಡಿದಾ ॥ ೯೪ ॥

ಸುಮ್ಮನೆ ನಾನುಪವಾಸಗೆಯ್ವೆನು ನಿಮ್ಮ । ತಮ್ಮಗಿಮ್ಮದಿರ ಪುತ್ರಿಯರಾ ॥
ಒಮ್ಮೆ ನಾನೊಂದುವ್ರತವ ತಾಳಿರೆನ್ನೆನು । ತಮ್ಮ ತಾವೆಸಗುವರಮ್ಮಾ ॥ ೯೫ ॥

ತಿಂಗಳಿಗೊಂದುಪವಾಸವ ಮಾಳ್ಪರೀ । ಹೆಂಗಳಿಗೇನಾದುದಮ್ಮಾ ॥
ಅಂಗಭೋಗಕೆ ಬಹುಃಕಾಲ ಸಲ್ವಾಗ ಧ । ರ್ಮಾಂಗವೊಮ್ಮೊಮ್ಮಿರಬೇಡ ॥ ೯೬ ॥

ತನುಭೋಗದೊಳಗತಿಮಗ್ನರಾದರೆ ಪಾಪ । ಜನಿಸುವುದದರಿಂದ ನರಕಾ ॥
ಜಿನವ್ರತಕಾಗಿಷ್ಟು ಬಳಲಬೇಕಮ್ಮಾಜಿ । ಘನಮುಕ್ತಿಯಹುದವರ್ಗೆಂದಾ ॥ ೯೭ ॥

ನರಜನ್ಮವಡೆದಾಗ ತಾಳ್ವಷ್ಟು ವ್ರತದೊಳಾ । ಚರಿಸಬೇಕೆಲ್ಲರು ತಾಯೆ ॥
ಮರುಳಾಗಬಾರದು ಭೋಗಕಮ್ಮಾಜಿ ಬ । ಲ್ಲರ ನಡೆಯಿಂತಲ್ತೆ ಜನನಿ ॥ ೯೮ ॥

ಎನಲದಂತಿರಲಿನ್ನು ಮುನಿಭುಕ್ತಿವ್ರತವ ತಾ । ಳ್ದನುವ ಪೇಳೆಂದು ಕೇಳಿದಳು ॥
ಜನನಿ ಕೇಳದು ತಾನು ಯಮವಲ್ಲ ನಿಯಮವೆಂ । ದನುನಯದಿಂದ ನುಡಿದನು ॥ ೯೯ ॥

ದಂಡುಧಾಳಿಗಳಲ್ಲಿ ಚಿಂತೆ ಸೂತಕದಲ್ಲಿ । ಪಿಂಡಿತೋತ್ಸಾಹದೊಳಿಲ್ಲ ॥
ಉಂಡುಟ್ಟು ಮನೆಯೊಳಿಹಾಗಳುಂಟೆಂದು ಕೈ । ಕೊಂಡೆನು ವ್ರತವ ನಾನೆಂದಾ ॥ ೧೦೦ ॥

ನಿರ್ಭೇದಭಕ್ತಿಯೊಂದನು ಬಿಡಲಿಲ್ಲ ಬ । ಹಿರ್ಭಾಗದಾಚರಣೆಗಳಾ ॥
ಆರ್ಭಟೆಯೆನಗೊಮ್ಮೆಯಿಹವೊಮ್ಮೆಯಿಲ್ಲವೆಂ । ದರ್ಭಕ ನುಡಿದನಂಬಿಕೆಗೆ ॥ ೧೦೧ ॥

ಧರೆಯ ದಂದುಗವಿದ್ದು ನಡೆವ ವ್ರತವ ನೋಡಿ । ಧರಿಸಬೇಕಲ್ಲದೆ ತಾಯೆ ॥
ಹಿರಿದುವ್ರತವ ಹೊತ್ತು ನಡುವೆ ಚಿಂತಿಪುದದ । ಮರುಳಣ್ಣಂದಿರ ನಡೆಯೆಂದಾ ॥ ೧೦೨ ॥

ದೇವಾಧಿದೇವನ ರಾಣಿಯಶಸ್ವತಿ । ದೇವಿಯು ಬಸುರ ಬಂದವನು ॥
ಶ್ರೀವೀರಭರತನು ಹೆಡ್ಡನಲ್ಲಮ್ಮಾಜಿ । ನೀವು ಚಿಂತಿಸಲಾಗದೆಂದಾ ॥ ೧೦೩ ॥

ಮೇರೆಯಿಲ್ಲದ ರಾಜ್ಯ ಮಗನೆ ನಿನಗೆ ವ್ರತ । ಭಾರವಗ್ಗಳವೆಂಬ ಚಿಂತೆ ॥
ಭಾರೈಸಿ ನವಗಿದ್ದುದೆಂದು ಹೋಯ್ತೆಂದು ಕು । ಮಾರನ ಕೂಡೆ ನುಡಿದಳು ॥ ೧೦೪ ॥

ಕರೆದು ದೊಡ್ಡಣ್ಣಗೆ ಹೇಳಬೇಕೆಂದೊಮ್ಮೆ । ಸ್ಮರಿಸುವೆನೊಡನೆನ್ನ ಮಗನ ॥
ಚರಿತಕೆ ಸುರರು ಮೆಚ್ಚುವರೆಂತು ಪೊಲ್ಲವೆಂ । ದೊರೆವೆನೆಂದೊಡನೆ ನಾಣ್ಚುವೆನು ॥ ೧೦೫ ॥

ಚಿಕ್ಕಹರೆಯದೊಳು ಲೆಕ್ಕವಿಲ್ಲದ ಪೆಣ್ಣ । ತಕ್ಕೆಯೊಳಿರುತವರಲ್ಲಿ ॥
ಸಿಕ್ಕಿ ಮೈಮರೆಯದೆಚ್ಚತ್ತು ನೀನಿಹ ಚರಿ । ತಕ್ಕೆ ಮೆಚ್ಚುವುದೆನ್ನ ಮನಸು ॥ ೧೦೬ ॥

ದಂದುಗ ಬಹಳವಿದರೊಳೆನ್ನ ಮಗನಿಗಿಂ । ತೆಂದೊಮ್ಮೆ ಚಿಂತೆ ಮಾಡುವೆನು ॥
ಒಂದುಭಾರವ ಹೊದ್ದದವರಂತೆ ನೀನಿಹ । ಚಂದವ ಕಂಡು ಹೆಚ್ಚುವೆನು ॥ ೧೦೭ ॥

ಭರತಣ್ಣ ನಿನ್ನಾಣೆ ನಿನ್ನ ರಾಜ್ಯವನು ನಿ । ನ್ನರಸಿಯರನು ನಿನ್ನ ವ್ರತವಾ ॥
ಪರಿಕಿಸಲೊಮ್ಮೊಮ್ಮೆ ಚಿಂತೆ ತೋರ್ಪುದು ಪರಿ । ಹರಿಸಿದುದಿಂದೆನ್ನ ಕಂದಾ ॥ ೧೦೮ ॥

ಒಳ್ಳಿತಮ್ಮಾಜಿ ನೀವಂತು ಚಿಂತಿಸಲಾಗಿ । ಯೆಳ್ಳಷ್ಟು ಭಯವಿಲ್ಲ ನನಗೆ ॥
ಅಲ್ಲದಿದ್ದರೆಯೆನಗೀ ಸಿರಿಯುಂಟೆಯಿ । ದೆಲ್ಲವು ನಿಮ್ಮ ಪ್ರಸಾದ ॥ ೧೦೯ ॥

ಇಂತು ನುಡಿವುತ ಬಂದರು ಬಾಗಿಲೆಡೆಯೊಳೋ । ರಂತೆ ತಾಯಡಿಗಳ ತೊಳೆದಾ ॥
ಕಾಂತೆಯರೊಡನೆ ಕಾಲ್ದೊಳೆಯೆ ತಾಯೊಡನೆ ಗೃ । ಹಾಂತರಾಳವ ಪೊಕ್ಕನಾಗ ॥ ೧೧೦ ॥

ಮಂಗಲಾಸನಕೆ ಸವಿತ್ರಿಯನುರೆ ಬಿಜ । ಯಂಗೈಸಿ ಮತ್ತೆ ರಾಜೇಂದ್ರಾ ॥
ಸಾಂಗಿಕದಿಂದ ಪೂಜಿಸಲನುವಾದ ತ । ನ್ನಂಗನೆಯರ ಕೂಡಿಕೊಂಡು ॥ ೧೧೧ ॥

ಮುನಿಗಳ ಪೂಜಿಸಬಹುದಣ್ಣಾ ನವಗೆ ಪೂ । ಜನೆ ಸಲ್ಲದೆಂದಳಾ ದೇವಿ ॥
ಮುನಿಗಳ ತಾಯಲ್ತೆ ನೀನು ವೃಷಭಸೇನ । ಮುನಿಯ ಜನನಿ ಕುಳ್ಳಿರೆಂದಾ ॥ ೧೧೨ ॥

ವೀರಮುನಿಗನಂತವಿಜಯಂಗಚ್ಯುತಗೆ ಸು । ವೀರಗನಂತವೀರ್ಯನಿಗೆ ॥
ಮಾರನ ಗೆಲ್ದರುವರು ಮುನಿಗಳ ಜನ್ಮ । ಧಾರಿಣಿ ತೆಪ್ಪಗಿರೆಂದಾ ॥ ೧೧೩ ॥

ಯಕ್ಷಯಕ್ಷಿಣಿಯರ ಪೂಜಿಪರವರು ಜಿ । ತಾಕ್ಷರಲ್ಲಿಂದ್ರಿಯರತರು ॥
ಸಾಕ್ಷಾದ್ಬ್ರಹ್ಮಚಾರಿಣಿ ನಿನ್ನ ಪೂಜೆ ಸ । ಲ್ಲಕ್ಷಣವಮ್ಮಾಜಿಯೆಂದಾ ॥ ೧೧೪ ॥

ಲೌಕಿಕಜನಗಳೊಪ್ಪರು ಚಕ್ರದಣ್ಣ ನಿ । ಸ್ತೂಕ ನುಡಿವರು ದೊಡ್ಡಣ್ಣಾ ॥
ಏಕೆನಗೀ ಪೂಜೆ ಭರತಣ್ಣ ಜಗದ ದು । ರ್ವಾಕಿಗಳುಕಬೇಕು ಮಗನೆ ॥ ೧೧೫

ಭೂತಳವೆನ್ನ ಪೂಜಿಪುದೆನ್ನ ತಾಯ ನಾ । ನೋತು ಪೂಜಿಸಲೇನು ಕೊರತೆ ॥
ಪೇತುಗಳೇನ ಮಾಳ್ಪರು ಸುಮ್ಮನಿರಿಯೆಂದು । ಮಾತೆಯ ಮಾತ ಕಟ್ಟಿದನು ॥ ೧೧೬ ॥

ತನ್ನಿರೌ ಪೂಜೆಗೆ ವಸ್ತುವನೆನ್ನದ । ಮುನ್ನ ತನ್ನರಸಿಯರೆಲ್ಲ ॥
ತನ್ನಂತೆ ನಲಿದು ವಸ್ತುವ ನೀಡಿ ಕೊಡಲು ಸಂ । ಪನ್ನ ಪೂಜಿಸಿದನಂಬಿಕೆಯಾ ॥ ೧೧೭ ॥

ವಾರಿಧಾರೆಯನೊಮ್ಮೆ ಮಾಡಿದನೊಮ್ಮೆ ಪ । ನ್ನೀರ ಧಾರೆಯನಿತ್ತನೊಡನೆ ॥
ಗೋರೋಚನಗಂಧದಿಂದೊಮ್ಮೆ ಚಂದನ । ಸಾರದಿಂದೊಮ್ಮೆ ಪೂಜಿಸಿದಾ ॥ ೧೧೮ ॥

ಕಳಿವೆಯಕ್ಷತೆಗಳರ್ಚನೆ ತಾಯಿಗೊಮ್ಮೆ ಮ । ತ್ತೆಳೆಮುತ್ತಿನಕ್ಷತೆಯೊಮ್ಮೆ ॥
ತಳಿರುತಾವರೆಮೊಲ್ಲೆ ಮೊದಲಾದ ಪೂವೊಮ್ಮೆ । ಬೆಳುವೆಳ್ಳಿ ಮಿಸುನಿಪೂವೊಮ್ಮೆ ॥ ೧೧೯ ॥

ನಿಪ್ಪೊಸತೆನಿಪ ನೈವೇದ್ಯದಿಂದೊಮ್ಮೆ ಲೇ । ಸಪ್ಪ ಭಕ್ಷ್ಯಾಳಿಯಿಂದೊಮ್ಮೆ ॥
ಕರ್ಪೂರದಾರತಿಯಿಂದೊಮ್ಮೆ ಮಾಣಿಕ । ದುಪ್ಪದಾರತಿಗಳಿಂದೊಮ್ಮೆ ॥ ೧೨೦ ॥

ಇಂಬಿನ ಗುಗ್ಗುಳ ಧೂಪದಿಂದೊಮ್ಮೆ ಕ । ದಂಬದ ಧೂಪದಿಂದೊಮ್ಮೆ ॥
ಜಂಬೀರಕದಳಿಖರ್ಜೂರದ್ರಾಕ್ಷೆಗಳೊಮ್ಮೆ । ಪೊಂಬಳ್ಳಿಗಳ ಫಲವೊಮ್ಮೆ ॥ ೧೨೧ ॥

ಘನತರಾರ್ಘ್ಯಗಳಿಂದ ಶಾಂತಿಧಾರೆಗಳಿಂದ । ಜನಪನಂಬಿಕೆಯನರ್ಚಿಸಿದಾ ॥
ಜಿನನ ಭಾವಿಸುತ ದೇವತೆಯಂತೆ ಕುಳಿತು ಸು । ಮ್ಮನೆ ನೋಡುತಿರ್ದಳಾ ದೇವಿ ॥ ೧೨೨ ॥

ಚಮರವ ಢಾಳಿಪರಾಲವಟ್ಟವ ಬೀಸಿ । ಸುಮನೋವೃಷ್ಟಿ ಮಾಡುವರು ॥
ನಿಮಿರ್ದು ಕನ್ನಡಿಯ ಪಿಡಿವರು ಸೊಸೆಯರು ಸಂ । ಭ್ರಮಗೊಂಡು ತಾವೆಡೆಗೆಡೆಗೆ ॥ ೧೨೩ ॥

ಸಂದಣಿಗೊಂಡು ಸೊಸೆಯರೆಲ್ಲ ನವರತ್ನ । ವೃಂದದಾರತಿಗಳನೆತ್ತಿ ॥
ತಂದು ನಿವಾಳಿಯನಿಟ್ಟೆರಗಿದರಾಗ । ಸಂದುದು ನೃಪನ ಕಣ್ಣಾರ್ತಿ ॥ ೧೨೪ ॥

ಕಡೆಯೊಳು ನೃಪನೆರಗಿದನು ತನ್ನಮ್ಮಾಜಿ । ಯೆಡದ ಭಾಗವ ಸಾರ್ದು ಕುಳಿತಾ ॥
ನಿಡುಗುಪ್ಪೆಯಾದ ಪೂಜಾದ್ರವ್ಯ ಬಯಲಾದು । ದೆಡೆಮಾಡಲನುವಾದರೊಡನೆ ॥ ೧೨೫ ॥

ಕರೆದು ಯಶಸ್ವತಿದೇವಿ ಸೊಸೆಯರ ಕು । ಳ್ಳಿರಿಸಿಕೊಂಡಳು ಮನೆತುಂಬಿ ॥
ಹಿರಿಯ ಹಬ್ಬವನೇನ ಪೇಳ್ವೆನೆಲ್ಲರು ನಲ್ಮೆ । ವೆರಸಿ ಪಾರಣೆಯ ಮಾಡಿದರು ॥ ೧೨೬ ॥

ಭರತೇಶ ತಾಯ ಪಂತಿಯೊಳು ಸೌಂದರಿಯರು । ವೆರಸಿ ಪಾರಣೆಯ ಮಾಳ್ಪಾಗ ॥
ಸುರಪನ ಭೋಗ ತಾನಾವ ಪಾಸಟಿಯೆಂಬ । ಪರಿಯೊಳಿರ್ದುದು ಜಿನ ಬಲ್ಲಾ ॥ ೧೨೭ ॥

ಆ ರಾಯನರಮನೆಯೊಳಗಣಾರೋಗಣೆ । ಯೀರೀತಿಯಾಯ್ತೆನಲರಿಯೆ ॥
ಕ್ಷೀರಸಮುದ್ರದೊಳೋಕುಳಿಯಾದಂತೆ । ಪಾರಣೆಯಾಯ್ತೆಂದು ಬಿಡುವೆ ॥ ೧೨೮ ॥

ಆರೋಗಣೆಯ ಸಂಧಿಯೊಳು ಪೇಳಿದ ಕ್ರಮಾ । ಚಾರದೊಳನ್ನವ ಕೊಂಡು ॥
ಓರಂತೆ ತಣಿದು ಕೈದೊಳೆದರೆಲ್ಲರು ಘಂಟೆ । ಘೋರೆಂಬ ಧ್ವನಿ ಸುಮ್ಮನಾಯ್ತು ॥ ೧೨೯ ॥

ಪಾರಣಾಶ್ರಮವೆಂದು ನೃಪತಿ ಮಾತೆಯ ತನ್ನ । ತೋರಗೈಲಾಗಿನಿಂ ನಡಿಸಿ ॥
ಸಾರತಲ್ಪದೊಳಿಷ್ಟು ಪವಡಿಸಬೇಕೆಂದ । ನಾ ರಾಜಮಾತೆಯೊಪ್ಪಿದಳು ॥ ೧೩೦ ॥

ತೂಗುಮಂಚದೊಳೊರಗಿದ ತಾಯ ಭರತೇಶ । ತೂಗಿದನಂದು ತೊಟ್ಟಿಲೊಳು ॥
ರಾಗದೊಳಿಟ್ಟಾಕೆ ತೂಗಿದ ಸಾಲವ । ತೂಗಿ ತಿದ್ದುವನೊಯೆಂಬಂತೆ ॥ ೧೩೧ ॥

ಎಲೆಯ ಘಳಿಗೆಯ ಕೆಂಬಾಯ್ದೆರೆಗೂಡುವ । ತಳಿವನು ಮೈಗೆ ಪನ್ನೀರಾ ॥
ಚಿಲುಪಾಲನೂಡಿ ನೀರೆರೆದಾಕೆ ಸಲಹಿದ । ಬಲುಋಣವನು ತಿದ್ದುವಂತೆ ॥ ೧೩೨ ॥

ಪಚ್ಚೆಗಪ್ಪುರವನೆಚ್ಚುವನು ಗಂಧವ ಮೈಗೆ । ಬಚ್ಚಿಸುವನು ಚಕ್ರಪಾಥಾ ॥
ಮೆಚ್ಚಿ ಬೀಸಣಿಗೆಯ ಬೀಸುವರಡಿಗಳ । ನೊಚ್ಚನೊತ್ತುವರು ರಾಣಿಯರು ॥ ೧೩೩ ॥

ಚಲಿಸಿದ ನರೆಗುರುಳುಗಳನೋಸರಿಸುವ । ನೆಳಸಿ ಗಲ್ಲವ ತಡಹುವನು ॥
ಬಳಲಿದಿರಮ್ಮಾಜಿ ಮುಪ್ಪಿನೊಳುಪವಾಸ । ಸಲುವುದೆ ನಿಮಗೆಂದು ನೋವಾ ॥ ೧೩೪ ॥

ಜಿನಸಿದ್ಧಭಾವನೆವಿಡಿದಿಷ್ಟು ಪವಡಿಸಿ । ತನಯ ವಿಶ್ರಮಿಸುತಿಲ್ಲೆಂದು ॥
ನೆನೆದುಕೊಂಡಳು ಕೂಡೆ ಜಿನ ಶರಣೆಂದೆದ್ದು । ಜನಪನ ಜನನಿ ಕುಳಿತಳು ॥ ೧೩೫ ॥

ಅಣ್ಣ ನನಗೆ ನನ್ನ ಮನೆಗೆಯ್ದಿದಲ್ಲದೆ । ಕಣ್ಣಿಗೆ ನಿದ್ರೆ ಮುದ್ರಿಸದು ॥
ತಣ್ಣನೆ ನೀನಿಲ್ಲಿರೆಂದೆದ್ದಳೊಡನೆ ಹೊಂ । ಬಣ್ಣಮೈಯಣುಗ ಕೈಗೊಡಲು ॥ ೧೩೬ ॥

ಅಮ್ಮನೂಳಿಗದ ಹೆಂಗಳಿಗುಡುಗೊರೆಯಿತ್ತ । ನಮ್ಮಗೇನನುಯಿತ್ತುದಿಲ್ಲ ॥
ಅಮ್ಮನೊಡತಿಯೈಸಿರಿಗೆ ನಾನಾರೆಂದು । ಹಮ್ಮಳಿದೊಡನಡಿಯಿಟ್ಟಾ ॥ ೧೩೭ ॥

ಹೆತ್ತ ಜನನಿಗೆ ಬೇಕಾದ ವಸ್ತುವನಾಕೆ । ತೊತ್ತಿರ ಕಳುಹಿದಾ ಕ್ಷಣವೆ ॥
ಮತ್ತೆನ್ನದೀವಂತೆ ಕಟ್ಟು ಮಾಡಿಹನಿನ್ನು । ಮತ್ತೇನ ಕೊಡಬೇಕು ನಡೆದಾ ॥ ೧೩೮ ॥

ಅಂಬಿಕೆ ಮನೆಗೈದಿ ಬರಿದೆ ತೆರಳಬಾರ । ದೆಂಬುಪಚಾರಮಂಗಲಕೆ ॥
ತುಂಬಿ ನೂರಾರು ಪೆಟ್ಟಿಗೆ ದುಗುಲವ ಮುಂದೆ । ಕಂಬಿಗಟ್ಟಿಸಿ ಕಳುಹಿದನು ॥ ೧೩೯ ॥

ಪರಿಮಳವಸ್ತುವ ಕನಕರತ್ನಗಳುಪ । ಕರಣವನಮ್ಮನ ಮುಂದೆ ॥
ನೆರಹಿ ತೋರದೆ ಕಳುಹಿದನು ಮುಂದಂಬಿಕೆ । ಯರಮನೆಗುಚಿತವಿನೋದಾ ॥ ೧೪೦ ॥

ಮಗನ ಕೈಲಾಗುವಿಡಿದು ದೇವಿ ಮೆಲ್ಲಮೆ । ಲ್ಲಗೆ ನಡೆದಲ್ಪದೂರದೊಳು ॥
ಮೊಗ ನೋಡಿ ಸೊಸೆಯರ ಬೀಳ್ಕೊಟ್ಟಳಲ್ಲಿಂದ । ಮಗನೊಳು ನುಡಿವುತ್ತೈದಿದಳು ॥ ೧೪೧ ॥

ಬಂದುದಷ್ಟರೊಳಿದಿರಾಗಿ ಪಲ್ಲಕ್ಕಿ ಜೀ । ಯೆಂದೆನಲೇರಿದಳೊಸೆದು ॥
ವಂದಿಸಿದಣುಗನ ಹರಸಿ ನಿಲಿಸಿ ತನ್ನ । ಮಂದಿರದತ್ತ ಸಾಗಿದಳು ॥ ೧೪೨ ॥

ರಾಯರ ದೇವನ ತಾಯಿ ಹೊಕ್ಕಳು ತನ್ನ । ಶ್ರೀಯುತರಾಜಮಂದಿರವಾ ॥
ತಾಯ ಬೀಳ್ಕೊಂಡು ತನ್ನರಮನೆಯನು ಮಹಾ । ರಾಯ ಹೊಕ್ಕನು ಲೀಲೆಯಿಂದ ॥ ೧೪೩ ॥

ನಾಳೆ ದಿಗ್ವಿಜಯದ ವಾರ್ತೆ ಮೊಳೆವುದಿಂದಿ । ಗಾಲೋಚನೆಯೆಂಬುದಿಲ್ಲ ॥
ಲೋಲನೇತ್ರೆಯರೊಳು ತನ್ನ ಮನಕೆ ಬಂದ । ಲೀಲೆಯೊಳಿರ್ದನಂತಿರಲಿ ॥ ೧೪೪ ॥

ಸಾರಭವ್ಯನು ಸಾರಭವ್ಯಕಾಂತೆಯರು ಮ । ತ್ತಾ ರಾಜರತ್ನನ ಜನನಿ ॥
ಪಾರಣೆಗೈದು ಸುಖದೊಳಿರ್ದರಿಂತಿದು । **ಪಾರಣಾಸಂಧಿ** ಸುಗಂಧಿ ॥ ೧೪೫ ॥

ಸಿರಿವೆತ್ತ ಕೋಸಲದೇಶದಯೋಧ್ಯಾ । ಪುರದೊಳು ಭರತರಾಜೇಂದ್ರಾ ॥
ಸುರಭೋಗದೊಳಗಿರ್ದನಿದು **ಭೋಗವಿಜಯ**ವೆಂ । ಬುರುತರ **ಪ್ರಥಮಕಲ್ಯಾಣ** ॥ ೧೪೬ ॥

ಈ ಜಿನಕಥೆಯನು ಕೇಳಿದವರ ಪಾಪ । ಬೀಜನಿರ್ನಾಶನವಹುದು ॥
ತೇಜವಹುದು ಪುಣ್ಯವಹುದು ಮುಂದೊಲಿದಪ । ರಾಜಿತೇಶ್ವರನ ಕಾಣುವರು ॥ ೧೪೭ ॥

ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ । ರಾಮೋದವೈದುವರವರು ॥
ನೇಮದಿ ಸುರರಾಗಿ ನಾಳೆ ಶ್ರೀಮಂದರ । ಸ್ವಾಮಿಯ ಕಾಣ್ಬರರ್ತಿಯೊಳು ॥ ೧೪೮ ॥

ಭರತರಾಜೇಂದ್ರನ ಮೆಚ್ಚಿನ ಗುರುವೆ ಭ । ವ್ಯರಿಗಾತ್ಮಸುಖಕಲ್ಪತರುವೆ ॥
ಕಿರಣದ ಕರುವೆ ಪ್ರಸನ್ನವಾಗೆನ್ನ ಸ । ದ್ಗುರುವೆ ಚಿದಂಬರಪುರುಷಾ ॥ ೧೪೯ ॥

ಪಾರಣಾಸಂಧಿ ಸಂಪೂರ್ಣಂ

**॥ ಪ್ರಥಮಕಲ್ಯಾಣಂ ಸಮಾಪ್ತಂ ॥**

# ಶುದ್ಧಾಶುದ್ಧ ಪತ್ರಿಕೆ.

| ಪುಟ | ಪದ್ಯಸಂಖ್ಯೆ | ಅಶುದ್ಧ | ಶುದ್ಧ |
|---|---|---|---|
| ೨ | ೧೫ | ವಾಕ್ಯಕೆ | ಕಾವ್ಯಕೆ |
| ೩ | ೩೩ | ನುರು | ನರು |
| ೫ | ೫೧ | ಜುಂಮುಧಟ್ಟಿಸು | ಜುಂಮುದಟ್ಟಿಸು |
| ೭ | ೭೭ | ಧನ್ವಾಸಿ | ಧನ್ಯಾಸಿ |
| ೭ | ೭೭ | ಲೇಪವನ್ನೈದುವಂತೆ | ಲೇಪನವೈದುವಂತೆ |
| ೭ | ೮೨ | ಏರವಿಳಿಯಲಹುದಹದು | ಏರವಿಳಿಯಲಹುದಹುದು |
| ೯ | ೧೧೦ | ವ್ಯೈಯೊಳಿರ್ದುದ | ವ್ಯೈಯೊಳಿರ್ದಾ |
| ೧೦ | ೧೨೬ | ಕೇಳ್ವಾವೋಡ | ಕೇಳ್ದರಾವೋದ |
| ೧೧ | ೮ | ಸಂಘ | ಸಂಗ |
| ೧೩ | ೩೯ | ನಿರ್ಮಲನಾಗಿ | ನಿರ್ಮಲರಾಗಿ |
| ೩೨ | ೨೬ (ಪೂರ್ವಾರ್ಧ) | ಕರಕರೆ | ಕರೆಕರೆ |
| ೫೬ | ೧೦೪ | ಮೇರುಧೈರ್ಯ | ಧೈರ್ಯಮೇರು |
| ೬೨ | ೭೩ | ಯಾಳಪ | ಯಾಳಾಪ |